ಬೇಡರ ವೃತ್ತಿ ಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ

(ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ)

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ
ಅಮೃತ ಟಿ
ಕಡಬಗೆರೆ, ಹರಪನಹಳ್ಳಿ ತಾಲೂಕು
ದಾವಣಗೆರೆ ಜಿಲ್ಲೆ - ೫೮೩ ೧೩೧

ಮಾರ್ಗದರ್ಶಕರು
ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೩

ಬೇಡರ ವೃತ್ತಿ ಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ

(ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ)

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿನಿ

ಅಮೃತ ಟಿ

ಕಡಬಗೆರೆ, ಹರಪನಹಳ್ಳಿ ತಾಲೂಕು

ದಾವಣಗೆರೆ ಜಿಲ್ಲೆ – ೫೮೩ ೧೨೫

ಮಾರ್ಗದರ್ಶಕರು

ಡಾ ಕೆ ಎಂ ಮೇತ್ರಿ

ಪಾಧ್ಯಾಪಕರು ಹಾಗೂ ಮುಖ್ಯಸ್ಥರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

ಮಾರ್ಗದರ್ಶಕರ ದೃಢೀಕರಣ ಪತ್ರ

ಅಮೃತ ಟಿ ವಿದ್ಯಾರ್ಥಿನಿಯು **"ಬೇಡರ ವೃತ್ತಿ ಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಿ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 7X13
ಸ್ಥಳ : ವಿದ್ಯಾರಣ್ಯ

(ಡಾ ಕೆ ಎಂ ಮೇತ್ರಿ)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ಬೇಡರ ವೃತ್ತಿ ಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ ಕೆ ಎಂ ಮೇತ್ರಿ** ಅವರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Amrutha. T

ದಿನಾಂಕ : 7-10-13
ಸ್ಥಳ : ವಿದ್ಯಾರಣ್ಯ

(ಅಮೃತ ಟಿ)
ಸಂಶೋಧನಾ ವಿದ್ಯಾರ್ಥಿನಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕೃತಜ್ಞತೆಗಳು

"ಬೇಡರ ವೃತ್ತಿ ಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಹರ್ಷವೆನಿಸುತ್ತಿದೆ. ನಾನು ಕಟ್ಟಿಕೊಂಡಿದ್ದ ಸಂಶೋಧನೆಯ ಕನಸು ನನಸಾದದ್ದು ಪ್ರಸ್ತುತ ಮಹಾಪ್ರಬಂಧದ ಮೂಲಕ. ಈ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನ್ನ ಅಧ್ಯಯನಕ್ಕೆ ನೆರವಾದವರಿಗೆ ಸ್ಮರಿಸುವುದು ನನ್ನ ಆದ್ಯ ಕರ್ತವ್ಯ ಹಾಗೂ ಸಂತೋಷದ ಸಂಗತಿ.

ಪ್ರಾರಂಭದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಂತಹ ಹಿಂದಿನ ಕುಲಪತಿಗಳಾದ ಪ್ರೊ. ಎ. ಮುರಿಗೆಪ್ಪ ಅವರಿಗೆ, ಈಗಿನ ಕುಲಪತಿಗಳಾದಂತಹ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರಿಗೆ ಹಾಗೂ ಹಿಂದಿನ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ, ಈಗಿನ ಕುಲಸಚಿವರಾದಂತಹ ಡಾ. ವಿಜಯ್ ಪೂಣಚ್ಚ ತಂಬಡ ಅವರಿಗೂ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಶೋಕಕುಮಾರ ರಂಜೇರೆ ಅವರಿಗೆ ಮೊದಲಿಗೆ ಕೃತಜ್ಞತೆಗಳನ್ನು ಹೇಳುತ್ತೇನೆ.

ನನ್ನ ಅಧ್ಯಯನದ ಬಗ್ಗೆ ವಿಚಾರಿಸಿ ಸಂಶೋಧನೆಗೆ ಸೂಕ್ತ ವಿಷಯವನ್ನು ನೀಡಿ ಅದಕ್ಕೆ ಪೂರಕವಾಗುವಂತೆ ಚರ್ಚಿಸುತ್ತಾ ಅಕ್ಷರ ಅಕ್ಷರವನ್ನೂ ಬಿಡದೆ ಪರಿಶೀಲಿಸಿ ಬರವಣಿಗೆಯ ಓರೆ ಕೋರೆಗಳನ್ನು ತಾಳ್ಮೆಯಿಂದ ತಿದ್ದಿ ತೀಡಿ ಆತ್ಮೀಯತೆಯಿಂದ ಸಹಕರಿಸಿದ ವಿದ್ಯಾಗುರುಗಳು ಹಾಗೂ ಮಾರ್ಗದರ್ಶಕರೂ ಆದ ಡಾ. ಮೇತ್ರಿ ಕೆ ಎಂ ಅವರಿಗೂ ಕೃತಜ್ಞತೆಗಳು.

ಶಿಸ್ತು ಹಾಗೂ ಶ್ರಮ ಸಂಸ್ಕೃತಿಯ ಪ್ರತೀಕವಾಗಿರುವ ಹಾಗೂ ಅದನ್ನು ವಿದ್ಯಾರ್ಥಿಗಳಿಗೂ ಕಲಿಸುವ ವಿಭಾಗದ ಪ್ರಾಧ್ಯಾಪಕರಾದ ಡಾ. ಕೇಶವನ್ ಪ್ರಸಾದ್, ಸಹ ಪ್ರಾಧ್ಯಾಪಕರುಗಳಾದ ಡಾ. ಚಲುವರಾಜು, ಡಾ. ಗಂಗಾಧರ ದೈವಜ್ಞ, ಡಾ. ಎ ಎಸ್ ಪ್ರಭಾಕರ ಅವರಿಗೂ ನನ್ನ ಕೃತಜ್ಞತೆಗಳು.

ನನ್ನ ಓದಿಗೆ ಮೂಲ ಕಾರಣರಾಗಿ ಉನ್ನತ ವಿದ್ಯಾಭ್ಯಾಸದ ಕನಸೊಂದನ್ನು ಹೊತ್ತು ಇಹಲೋಕವನ್ನು ತ್ಯಜಿಸಿದ ನನ್ನ ಅಜ್ಜ ದಿ. ಚನ್ನವೀರಪ್ಪ ಸಣ್ಣವೀರನಗೌಡ ಮತ್ತು ಅಜ್ಜಿ ದಿ. ಗೋಣಮ್ಮ ತಳವಾರ್ ಹಾಗೂ ನನ್ನ ಅಧ್ಯಯನದ ಎಲ್ಲ ಸಾಧ್ಯತೆಗಳನ್ನು ಪ್ರೋತ್ಸಾಹಿಸುತ್ತಾ ನನ್ನ ಶೈಕ್ಷಣಿಕ ಅಭಿವೃದ್ಧಿಗೆ ಬೆಂಬಲಿಗರಾಗಿರುವ ಪೂಜ್ಯನೀಯ ತಂದೆ ಹನುಮಂತಪ್ಪ ತಳವಾರ್ ತಾಯಿ ಶ್ರೀಮತಿ ಅಂಜಿನಮ್ಮ ತಳವಾರ್ ಅವರಿಗೂ ನಾನು ಚಿರಋಣಿಯಾಗಿರುವೆ.

ಯಾವಾಗಲೂ ನನಗೆ ಒಳ್ಳೆಯದನ್ನೇ ಬಯಸುವ ನನ್ನೆರಡು ಕಣ್ಣುಗಳಂತಿರುವ ತಮ್ಮಂದಿರಾದ ಕಾರ್ತಿಕ ತಳವಾರ್ ಮತ್ತು ಕೊಟ್ರೇಶ್ ತಳವಾರ್ (ಪೋಲಿಸ್ ಇಲಾಖೆ) ಹಾಗೂ ಸದಾ ನನ್ನ ಏಳ್ಗೆಯನ್ನು ಬಯಸುತ್ತ ನನ್ನ ವಿದ್ಯಾಭ್ಯಾಸಕ್ಕೆ ಪ್ರತ್ಯೇಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಆತ್ಮೀಯರಾದ ಶೇಕ್ ಮಸ್ತಾನ್ (ಪೋಲಿಸ್ ಇಲಾಖೆ) ಅವರಿಗೂ ಅಭಾರಿಯಾಗಿರುವೆ.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಮತ್ತು ಬುಡಕಟ್ಟು ಅಧ್ಯಯನ ವಿಭಾಗದ ಸಿಬ್ಬಂದಿ ವರ್ಗದವರೆಲ್ಲರಿಗು, ಮತ್ತೊಮ್ಮೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅಧ್ಯಯನಕ್ಕೆ ನೆರವಾದ ವಿದ್ವಾಂಸರಿಗೂ ಹಾಗೂ ಆತ್ಮಿಯತೆಯಿಂದ ಮಹಾಪ್ರಬಂಧವನ್ನು ಅಂದವಾಗಿ ಅಕ್ಷರ ರೂಪದಲ್ಲಿ ಸಂಯೋಜಿಸಿದ ಶ್ರೀನಿವಾಸ ಕೆ. ಭಾವನಾ ಗ್ರಾಫಿಕ್ಸ್, ಕಮಲಾಪುರ ಇವರಿಗೂ ಕೃತಜ್ಞತೆಗಳನ್ನು ಹೇಳುತ್ತೇನೆ.

ಅಮೃತ ಟಿ.

ಪರಿಶಿಷ್ಟಗಳು

ಕೋಷ್ಟಕಗಳು

ವೃತ್ತಚಿತ್ರಗಳು

ಲಂಬಚಿತ್ರ

ನಕ್ಷೆಗಳು

ಛಾಯಾಚಿತ್ರಗಳು

ಛಾಯಾ ಚಿತ್ರಗಳು

ಪರಿವಿಡಿ

ಅಧ್ಯಾಯ – ೧

ಪ್ರಸ್ತಾವನೆ

೧. ಪ್ರವೇಶ

೧.೧. ಬುಡಕಟ್ಟುಗಳು

೧.೨. ಅಧ್ಯಯನದ ಉದ್ದೇಶಗಳು

೧.೩. ಪ್ರಮೇಯಗಳು

೧.೪. ವ್ಯಾಪ್ತಿ

೧.೫. ಅಧ್ಯಯನದ ಮಹತ್ವ

೧.೬. ಅಧ್ಯಯನ ವಿಧಾನ

೧.೭. ಅಧ್ಯಯನದ ಅಧ್ಯಾಯಗಳ ವಿನ್ಯಾಸ

೧.೮. ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು

ಅಧ್ಯಾಯ ಒಂದು

ಪ್ರಸ್ತಾವನೆ

೧. ಪ್ರವೇಶ

ಜಗತ್ತಿನಾದ್ಯಂತ ಇಂದು ಆಧುನೀಕರಣ ಮತ್ತು ಜಾಗತೀಕರಣದ ಗಾಳಿ ಬೀಸುತ್ತಿದೆ. ಜಾಗತೀಕರಣವೆಂಬುದು ಮೂಲಕಸುಬುಗಳ ಮೇಲೆ ಅವಲಂಬಿತವಾದ ಬಹುತೇಕ ಎಲ್ಲಾ ಬುಡಕಟ್ಟುಗಳನ್ನು ಅತಂತ್ರಗೊಳಿಸುವ ಕಾರ್ಯದಲ್ಲಿ ಮಗ್ನವಾಗಿರುವುದನ್ನು ಕಾಣುತ್ತಿದ್ದೇವೆ. ಹೀಗೆ ಅತಂತ್ರವಾದ ಬುಡಕಟ್ಟುಗಳನ್ನು ಇನ್ನಷ್ಟು ತಳಕ್ಕೆ ತಳ್ಳಲಾಗುತ್ತಿದೆ. ಇದಕ್ಕೆ ಬೇಡ ಸಮುದಾಯ ಹೊರತಾಗಿಲ್ಲ. ಮೂಲತಃ ಬೇಟೆಯನ್ನೇ ಅವಲಂಬಿಸಿದ್ದ ಬೇಡ ಸಮುದಾಯ ಇಂದು ಬೇಟೆಯನ್ನೇ ಮರೆತುಹೋಗಿರುವುದನ್ನು ಕಾಣುತ್ತಿದ್ದೇವೆ. ಇಂದಿನ ಯುವಕರಿಗೆ ಬೇಟೆಯೆಂಬುದು ತಮ್ಮ ಹಿರಿಯರು ಮಾಡುತ್ತಿದ್ದ ಕೇವಲ ಒಂದು ವೃತ್ತಿಯಾಗಿತ್ತು. ಬೇಟೆಯನ್ನೇ ನಂಬಿ ಬದುಕನ್ನು ಸಾಗಿಸುತ್ತಿದ್ದ ಬೇಡರಲ್ಲಿ ಬೇಟೆಯ ವೃತ್ತಿಗೆ ಸಂಬಂಧಿಸಿದ ಆಚರಣೆಗಳು ಇಂದು ಕಣ್ಮರೆಯಾಗುತ್ತಿವೆ. ಅಕಸ್ಮಾತ್ ಉಳಿದರೂ ಆ ಆಚರಣೆಗಳ ಮೂಲ ಉದ್ದೇಶ ಮರೆಯಾಗಿವೆ. ಕೇವಲ ಸವಕಳಿ ಆಚರಣೆಗಳಾಗಿ ಉಳಿದಿವೆ. ಅಂದರೆ ಇಂದು ಎಲ್ಲ ಬುಡಕಟ್ಟುಗಳು ತಮ್ಮ ಲಕ್ಷಣಗಳನ್ನು ನಿಧಾನವಾಗಿ ಕಳೆದು ಕೊಳ್ಳುತ್ತಿರುವುದನ್ನು ಗಮನಿಸಬಹುದು. ಸಮಾಜವೆಂಬುದು ನದಿಯಿದ್ದಂತೆ, ಅದು ನಿರಂತರವಾಗಿ ಚಲಿಸುತ್ತಲೇ ಇರುತ್ತದೆ. ದೀರ್ಘವಾದ ಚಲನೆಯಲ್ಲಿ ಒಮ್ಮೊಮ್ಮೆ ಪಥ(ದಾರಿ, ಮಾರ್ಗ, ಹಾದಿ)ವನ್ನು ಬದಲಿಸುವ ಸಾಧ್ಯತೆಯೂ ಉಂಟು. ಇಂತಹ ಸಾಮಾಜಿಕ ಸಂರಚನೆಗಳು ಬುಡಕಟ್ಟುಗಳ ಮೇಲೆ ಪ್ರಭಾವವನ್ನು ಬೀರುತ್ತವೆಂಬುದು ಸತ್ಯ.

ಬೇಡ ಸಮುದಾಯವು ಬದಲಾವಣೆಯ ದಿಕ್ಕಿನಲ್ಲಿ ಸಾಗುತ್ತಿದೆ. ಹಿಂದಿನ ಕಾಲದ ಬೇಟೆಯ ಸಂಸ್ಕೃತಿ, ದೈವಾರಾಧನೆ, ಆಹಾರ ಪದ್ಧತಿ, ಉಡುಗೆ ತೊಡುಗೆ, ಜೀವನಾವರ್ತಕ ಆಚರಣೆಗಳು ಬದಲಾವಣೆಯತ್ತ ಸಾಗುತ್ತಿವೆ. ತಳ ಸಮುದಾಯಗಳು ಹೀಗೆ ಮೇಲ್ಮುಖವಾಗಿ ಸಾಗುವ ಕ್ರಮವನ್ನು ಸಮಾಜಶಾಸ್ತ್ರಜ್ಞ ಎಂ ಎನ್ ಶ್ರೀನಿವಾಸ್ ಅವರು ಸಂಸ್ಕೃತೀಕರಣವೆಂದು ಕರೆದಿರುವರು. ಬುಡಕಟ್ಟು ಲಕ್ಷಣಗಳನ್ನು ಕಳೆದುಕೊಳ್ಳುತ್ತಾ ಸಾಗುತ್ತಿರುವ ಬಹುತೇಕ ಪಂಗಡಗಳು ಇನ್ನು ತಾವು ಧೈರ್ಯವಾಗಿ ಬುಡಕಟ್ಟುಗಳು ಎಂದು ಹೇಳಿಕೊಳ್ಳಲು ನಾಚುವಂತಹ ಸ್ಥಿತಿಗೆ ತಲುಪಿರುವುದನ್ನು ಕಾಣಬಹುದು. ಕಳೆದ ಜನಗಣತಿಯ ಅಂಕಿಅಂಶಗಳ ಪ್ರಕಾರ ಕರ್ನಾಟಕದ ಬುಡಕಟ್ಟುಗಳಲ್ಲಿಯೇ ಅತಿ ಹೆಚ್ಚು ಜನಸಂಖ್ಯೆಯನ್ನು ಬೇಡ ಸಮುದಾಯ ಹೊಂದಿದೆ. ಬುಡಕಟ್ಟುಗಳೆಂದರೆ ಕೇವಲ ಕಾಡುಗಳಲ್ಲಿ ನೆಲೆಸಿದವರು ಎನ್ನುವ ಅಭಿಪ್ರಾಯ ಒಂದು ಕಾಲದಲ್ಲಿತ್ತು. ಆದರೆ ಈ ಆಲೋಚನಾ ಕ್ರಮ ಇಂದು ಬದಲಾವಣೆಗೊಂಡಿದೆ. ಕಾಡು ಮಾತ್ರವಲ್ಲದೆ ನಾಡಾಡಿಗಳಾಗಿ ಬುಡಕಟ್ಟುಗಳು ಜೀವಿಸುತ್ತಿರುವುದು ಕಂಡುಬರುತ್ತಿದೆ. ಬೇಡ ಸಮುದಾಯದಲ್ಲಿ ವಿಭಿನ್ನ ಒಳಪಂಗಡಗಳಿದ್ದು ಸಂಕೀರ್ಣವಾದ ಸಂಸ್ಕೃತಿಯನ್ನು ಹೊಂದಿದೆ. ಈ ಪಂಗಡಗಳಲ್ಲಾದ ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ಗಮನಿಸಿ ತಲೆಮಾರಿನಿಂದ ತಲೆಮಾರಿಗೆ ಅದು ಹೇಗೆ ಭಿನ್ನವಾಗಿ ಮಾರ್ಪಟ್ಟಿದೆ ಎಂಬುದನ್ನು ಶೋಧಿಸುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧.೧. ಬುಡಕಟ್ಟುಗಳು

ಬೆಟ್ಟ, ಗುಡ್ಡ, ಕಣಿವೆ, ಅರಣ್ಯ ಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಗುಂಪುಗಳಾಗಿ ನೆಲೆಸಿರುವ ತಮ್ಮದೇ ವಿಶಿಷ್ಟ ಭಾಷೆಯನ್ನು ಹೊಂದಿರುವ, ಅರಣ್ಯ ಮೂಲದ ಉತ್ಪನ್ನಗಳನ್ನೇ ಜೀವನಾಧಾರಕ್ಕೆ ಬಳಕೆ ಮಾಡಿಕೊಳ್ಳುವ, ಪ್ರತ್ಯೇಕ ನೆಲೆಗಳಲ್ಲಿ ಒಟ್ಟಾಗಿ ವಾಸಿಸುವ ಸಮುದಾಯಗಳೇ ಬುಡಕಟ್ಟುಗಳು. ಇವರನ್ನು ವನವಾಸಿ, ಗಿರಿಜನ, ಅರಣ್ಯವಾಸಿ ಮುಂತಾದ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಇವರ ಸಾಮಾಜಿಕ ಬದುಕು ರಕ್ತಸಂಬಂಧದ ಮೇಲೆ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ಎಲ್ಲವನ್ನೂ ತಿಳಿದಿರುತ್ತಾನೆ. ಸರ್ವಚೇತನಾವಾದಿಗಳಾದ ಇವರು ತಮ್ಮ ರೂಢಿ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಸಂವಿಧಾನದ ೩೪೨ನೇ ಅನುಚ್ಛೇದದಲ್ಲಿ ಪರಿಶಿಷ್ಟ ಪಂಗಡಗಳ ಕುರಿತು ವಿವರಣೆ ನೀಡಲಾಗಿದೆ. ಇದರ ಪ್ರಕಾರ ಬುಡಕಟ್ಟು ಸಮುದಾಯಗಳು ಅಥವಾ ಗುಂಪುಗಳನ್ನು ರಾಷ್ಟ್ರಪತಿಗಳು ಪರಿಶಿಷ್ಟ ಪಂಗಡಗಳ ಅನುಚ್ಛೇದದಲ್ಲಿ ಸೇರಿಸಲು ಅವಕಾಶವಿದೆ. ಜಗತ್ತಿನಾದ್ಯಂತ ಇಂತಹ ಸಹಸ್ರಾರು ಬುಡಕಟ್ಟುಗಳನ್ನು ಕಾಣಬಹುದಾಗಿದೆ.

ಭಾರತವು ಬುಡಕಟ್ಟುಗಳ ತವರುಮನೆಯಾಗಿದೆ. ಆಫ್ರಿಕಾ ಖಂಡ ಬಿಟ್ಟರೆ ಭಾರತದಲ್ಲಿ ಹೆಚ್ಚು ಬುಡಕಟ್ಟು ಪಂಗಡಗಳ ಜನರಿದ್ದಾರೆ. ಭಿಲ್, ಗೊಂಡ್, ಕೋಲ್, ಮುಂಡ, ಸಂತಾಲ್ ಮುಂತಾದ ಬುಡಕಟ್ಟು ಜನರಿದ್ದಾರೆ. ಕರ್ನಾಟಕದಲ್ಲಿ ೫೦ ಅಧಿಕೃತ ಬುಡಕಟ್ಟು ಸಮುದಾಯಗಳಿರುವವು.

೨೦೦೧ ಮತ್ತು ೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಜನಸಂಖ್ಯೆ ಕ್ರಮವಾಗಿ ೫,೨೮,೫೦,೫೬೨ ಮತ್ತು ೬,೧೦,೯೫,೨೯೭. ಇದರಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ೩೪,೬೩,೯೮೬ ಮತ್ತು ೪೨.೪೮,೯೮೭. ಹೀಗಾಗಿ ಕರ್ನಾಟಕದ ಜನಸಂಖ್ಯೆಯಲ್ಲಿ ಬುಡಕಟ್ಟುಗಳ ಶೇಕಡ ಪ್ರಮಾಣ ಒಂದು ದಶಕದಲ್ಲಿ ೬.೫೫ರಿಂದ ೬.೯೫ಕ್ಕೇರಿದೆ. ಕರ್ನಾಟಕ ರಾಜ್ಯದ ಪರಿಶಿಷ್ಟ ಪಂಗಡ ಪಟ್ಟಿಯ ಕ್ರಮ ಸಂಖ್ಯೆ ೩೮ರಲ್ಲಿ ನೈಯ್ಕಡಾ(Naikda) ಬುಡಕಟ್ಟಿರುವುದು. ಇದರ ಪರ್ಯಾಯ ಪದಗಳಾದ (Nayaka), ಚೋಳಿವಾಲ ನಾಯಕಾ (Chollivala Nayaka), ಕಪಾಡಿಯ ನಾಯಕಾ (Kapadia Nayaka), ಮೋಟಾ ನಾಯಕಾ (Mota Nayaka), ನಾನಾ ನಾಯಕಾ (Nana Nayaka) ಇವುಗಳಿರುವವು. ಇವುಗಳೊಂದಿಗೆ ಕರ್ನಾಟಕದ ಬೇಡರು ಸಮುದಾಯದ ನಾಯ್ಕ್, ಬೇಡ, ಬೇಡರ್, ವಾಲ್ಮೀಕಿ ಪದಗಳು ೧೯೯೩ರಲ್ಲಿ ಸೇರಲ್ಪಟ್ಟವು. ಬೇಡ ಸಮುದಾಯವನ್ನು ಮ್ಯಾಸಬೇಡ/ನಾಯಕಾ, ಊರ ಬೇಡ/ನಾಯಕಾ ಎಂತಲೂ ಕರೆಯುವರು. ಈ ಹೆಸರಿನ ಸಮುದಾಯವನ್ನು ಈ ಅಧ್ಯಯನದಲ್ಲಿ ಬೇಡರು ಎಂಬ ಹೆಸರಿನಿಂದಲೇ ಅಧ್ಯಯನಿಸಲಾಗಿದೆ.

ಈ ಅಧ್ಯಯನವು ಸಾಮಾಜಿಕ ಬದಲಾವಣೆಯ ತತ್ವದ ಹಿನ್ನೆಲೆಯಲ್ಲಿ ರೂಪಗೊಂಡಿದೆ. ಬೇಡ ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಪಲ್ಲಟಗಳನ್ನು ಸಾಮಾಜಿಕ ಬದಲಾವಣೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಸಾಮಾಜಿಕ ಬದಲಾವಣೆಯನ್ನು ವಿವಿಧ ಪಲ್ಲಟಗಳ ಹಿನ್ನಲೆಯಲ್ಲಿ ಅಧ್ಯಯನಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

೧.೨. ಅಧ್ಯಯನದ ಉದ್ದೇಶಗಳು

ಕರ್ನಾಟಕ ಪರಿಶಿಷ್ಟ ಪಂಗಡಗಳಲ್ಲಿ ಅತೀ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವವರೇ ಬೇಡ ಸಮುದಾಯದವರಾಗಿರುವರು. ಪ್ರಸ್ತುತ ಜಾಗತೀಕರಣ ಸಂದರ್ಭದಲ್ಲಿ ಪರಿಶಿಷ್ಟ ಪಂಗಡಗಳಿಗೆ ಸಿಗುವ ಸೌಲಭ್ಯ ಪಡೆದುಕೊಂಡು ಸಾಮಾಜಿಕವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಈ ಸಮುದಾಯವು ಯಾವ ರೀತಿ ಪಲ್ಲಟಕ್ಕೆ ಒಳಗಾಗುತ್ತಿದೆ ಮತ್ತು ಪಲ್ಲಟಕ್ಕೆ ಕಾರಣಗಳೇನು ಎನ್ನುವುದನ್ನು ತಿಳಿಯುವ ಮುಖ್ಯ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

ಉದ್ದೇಶಗಳು

೧. ಬೇಡರ ಸಾಮಾಜಿಕ, ಸಾಂಸ್ಕೃತಿಕ ಪಲ್ಲಟ ಮತ್ತು ಪಲ್ಲಟದ ಕಾರಣಗಳನ್ನು ತಿಳಿಯುವುದು.

೨. ಬೇಡರ ವೃತ್ತಿಗಳು, ಆರ್ಥಿಕತೆ ಮತ್ತು ಆರ್ಥಿಕ ಪಲ್ಲಟಗಳಿಗೆ ಕಾರಣಗಳನ್ನು ಅರಿಯುವುದು.

೩. ಬೇಡರ ಶೈಕ್ಷಣಿಕ ಸ್ಥಿತಿಗತಿ ಹಾಗೂ ಶೈಕ್ಷಣಿಕ ಪಲ್ಲಟಗಳನ್ನು ಅಧ್ಯಯನಿಸುವುದು.

೪. ಬೇಡರ ರಾಜಕೀಯ ಪಲ್ಲಟಗಳನ್ನು ಶೋಧಿಸುವುದು.

೧.೩. ಪ್ರಮೇಯಗಳು

೧. ಬೇಡರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯ ವಾಗಿ ಪರಿವರ್ತಿತರಾಗಿದ್ದಾರೆ.

೨. ಬೇಡರು ಬುಡಕಟ್ಟಿನಿಂದ ಜಾತಿಯಾಗಿ ಪಲ್ಲಟಗೊಂಡಿದ್ದಾರೆ.

೧.೪. ವ್ಯಾಪ್ತಿ

ಕರ್ನಾಟಕದಲ್ಲಿ ಬೇಡ ಸಮುದಾಯವು ಬಳ್ಳಾರಿ, ರಾಯಚೂರು, ಕೊಪ್ಪಳ, ಚಿತ್ರದುರ್ಗ ಜಿಲ್ಲೆ ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದು. ಹಿಂದೆ ಚಿತ್ರದುರ್ಗದ ಅವಿಭಾಜ್ಯ ಅಂಗವಾಗಿದ್ದ ದಾವಣಗೆರೆ ಯನ್ನು ೧೯೯೭ರಲ್ಲಿ ಚಿತ್ರದುರ್ಗದಿಂದ ಪ್ರತ್ಯೇಕಿಸಿ ಬೇರೆ ಜಿಲ್ಲೆಯಾಗಿ ರೂಪಿಸಲಾಯಿತು. ಜಗಳೂರು, ದಾವಣಗೆರೆ, ಹರಪನಹಳ್ಳಿ, ಹರಿಹರಗಳೊಂದಿಗೆ ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆಗೆ ಸೇರಿದ್ದ ಚನ್ನಗಿರಿ, ಹೊನ್ನಾಳಿ ತಾಲೂಕುಗಳು ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿರುವವು. ಈ ಜಿಲ್ಲೆಯಲ್ಲಿಯ ಪ್ರತಿ ತಾಲೂಕಿನ ೩ ಗ್ರಾಮದಲ್ಲಿಯ ಬೇಡರು ಮಾತ್ರ ಈ ಅಧ್ಯಯನದ ವ್ಯಾಪ್ತಿಗೆ ಒಳಪಡುವರು.

೧.೫. ಅಧ್ಯಯನದ ಮಹತ್ವ

ಬೇಡರ ಕುರಿತು ಹಲವಾರು ಅಧ್ಯಯನಗಳು ನಡೆದಿವೆಯಾದರೂ ಇಲ್ಲಿಯವರೆಗೆ ಬೇಡರ ವೃತ್ತಿ ಪಲ್ಲಟಗಳನ್ನು ಕುರಿತು ಯಾವುದೇ ಭಾಷೆಯಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಹೀಗಾಗಿ ಬೇಡರ ವೃತ್ತಿ ಪಲ್ಲಟಗಳನ್ನು ತಿಳಿಸುವ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಈ ಅಧ್ಯಯನದಿಂದ ಬುಡಕಟ್ಟುಗಳು ಆಧುನಿಕತೆ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಹೇಗೆ ಬದಲಾವಣೆಗೆ ಒಳಗಾಗುತ್ತಿದೆ ಎಂದು ತಿಳಿದು ಬರುತ್ತದೆ. ಮುಖ್ಯವಾಗಿ ಬೇಡರು ತನ್ನ ಮೂಲ ವೃತ್ತಿಯನ್ನು ಕಳಚಿಕೊಂಡು ವೃತ್ತಿ ಪಲ್ಲಟಗಳೊಂದಿಗೆ ಸಾಮಾಜಿಕ ಅನುಸಂಧಾನಕ್ಕೆ ಒಳಗಾಗುತ್ತಿವೆ.

ಬುಡಕಟ್ಟೊಂದು ತನ್ನ ಬುಡಕಟ್ಟು ಸ್ವರೂಪವನ್ನು ನಿಧಾನವಾಗಿ ಕಳಚಿಹಾಕಲು ಪ್ರಯತ್ನಿ ಸುತ್ತಿರುವುದು ಈ ಅಧ್ಯಯನದಲ್ಲಿ ಸಾಧಿತವಾಗುತ್ತದೆ. ಮುಖ್ಯವಾಗಿ ಬೇಡರ ಸ್ತ್ರೀ–ಪುರುಷರಲ್ಲಿ ಉಂಟಾದ ಬದಲಾವಣೆಗಳು ಯಾವ ಸ್ವರೂಪದಲ್ಲಿವೆ ಎಂಬುದನ್ನು ದರ್ಶಿಸುತ್ತವೆ. ಹೀಗಾಗಿ ಈ ಅಧ್ಯಯನವು ದಾವಣಗೆರೆ ಜಿಲ್ಲೆಯ ಬೇಡರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅರಿಯುವಲ್ಲಿ ಮಹತ್ವದ ಪಾತ್ರ ಹೊಂದಿದೆ.

೧.೬. ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವನ್ನು ದಾವಣಗೆರೆ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಮೂರು ಗ್ರಾಮಗಳಂತೆ ಜಿಲ್ಲೆಯ ಆರು ತಾಲೂಕುಗಳಲ್ಲಿ ೧೮ ಗ್ರಾಮಗಳಲ್ಲಿಯ ೧೮೦ ಬೇಡರ ಕುಟುಂಬಗಳನ್ನು

ಸಂದರ್ಶಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಅಲ್ಲದೇ ಸಾಮಾಜಿಕ ಬದಲಾವಣೆಯ ಸಿದ್ಧಾಂತ ಮತ್ತು ಸಿದ್ಧಾಂತಕಾರರಾದ ಎಂ ಡಿ ಜೋನ್ಸರ್, ಸಾಮ್ಯುಯಲ್ ಕೋನಿಂಗ್, ಮೋರಿಸ್ ಗೀನ್ಸ್‌ಬರ್ಗ್ ಮತ್ತು ಪಿಟಿರಿಮ್ ಎ ಸಾರೋಕಿನ್ ಅವರ ಸಾಮಾಜಿಕ ಬದಲಾವಣೆಯ ಸಿದ್ಧಾಂತದ ಹಿನ್ನೆಲೆಯಲ್ಲಿ ಅದರಲ್ಲೂ ಬಹುಮುಖ್ಯವಾಗಿ ಪಿಟಿರಿಮ್ ಸಾರೋಕಿನ್ ಅವರ ಸಿದ್ಧಾಂತದ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ತುಲನಾತ್ಮಕ ವಿಧಾನ ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ ಸಹಭಾಗಿತ್ವ ಅವಲೋಕನ ವಿಧಾನ, ಸಂದರ್ಶನ ವಿಧಾನ, ಸಮೀಕ್ಷೆ ಹಾಗೂ ಪ್ರಶ್ನಾವಳಿ ವಿಧಾನವನ್ನು ಅನುಸರಿಸಲಾಗಿದೆ. ಹಾಗೆಯೆ ನಕ್ಷೆಗಳು, ಕೋಷ್ಟಕಗಳು, ಜನಗಣತೀಯ ವರದಿಗಳು, ಮಾನವ ಅಭಿವೃದ್ಧಿಯ ವರದಿಗಳು ಹಾಗೂ ಇತರೆ ಮೂಲಗಳಿಂದ ಈ ಅಧ್ಯಯನಕ್ಕೆ ಮಾಹಿತಿ ಬಳಸಿಕೊಳ್ಳಲಾಗಿದೆ.

ಪ್ರಶ್ನಾವಳಿಯ ಮಾದರಿ

ಅಧ್ಯಯನದಲ್ಲಿ ಬೇಡರ ವೃತ್ತಿ ಪಲ್ಲಟಗಳ ಕುರಿತು ಮಾಹಿತಿ ಪಡೆಯುವ ಹಾಗೂ ಅವರ ಸ್ಥಿತಿಗತಿಗಳನ್ನು ಅರಿಯುವ ಉದ್ದೇಶದಿಂದ ಪ್ರಶ್ನಾವಳಿ ಮಾದರಿಗಳನ್ನು ತಯಾರಿಸಿಕೊಳ್ಳಲಾಗಿವೆ. ಪ್ರಶ್ನಾವಳಿಯಲ್ಲಿ ಎರಡು ವಿಧದ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳಲಾಗಿದೆ. ಒಂದು ಕುಟುಂಬದ ಸಾಮಾನ್ಯ ಮಾಹಿತಿ ಪಡೆಯುವುದಕ್ಕಾಗಿ ರೂಪಿಸಿದ ಸಾಮಾನ್ಯ ಪ್ರಶ್ನಾವಳಿಯಾಗಿದ್ದರೆ ಮತ್ತೊಂದು ಅವರ ಜೀವನ ವಿಧಾನವನ್ನು ಅರಿಯಲು ರೂಪಿಸಿದ ಮಾದರಿ ಪ್ರಶ್ನಾವಳಿಯಾಗಿದೆ. ಈ ಪ್ರಶ್ನಾವಳಿಯನ್ನು ಸ್ಯಾಂಪಲಿಂಗ್ ಮಾದರಿಯ ಹಿನ್ನೆಲೆಯಲ್ಲಿ ಸಮೀಕ್ಷೆಗೆ ಬಳಸಲಾಗಿದೆ.

ಸಂದರ್ಶನ ವಿಧಾನ

ಕ್ಷೇತ್ರಕಾರ್ಯದಲ್ಲಿ ಕುಟುಂಬದ ಸ್ಥಿತಿಗತಿಗಳನ್ನು, ಅವರ ವೃತ್ತಿಗಳು ಮತ್ತು ವೃತ್ತಿ ಪಲ್ಲಟಗಳು ಹಾಗೂ ಅದಕ್ಕೆ ಕಾರಣಗಳನ್ನು ಅರಿಯುವ ಉದ್ದೇಶದಿಂದ ಪ್ರತಿ ಕುಟುಂಬದ ಸದಸ್ಯನೊಬ್ಬನನ್ನು ಸಂದರ್ಶನಕ್ಕೆ ಒಳಪಡಿಸಿ ಮಾಹಿತಿಯನ್ನು ಪಡೆಯಲಾಗಿದೆ. ಅದೇ ರೀತಿ ಬೇರೆ ಬೇರೆ ವೃತ್ತಿ ಗಳನ್ನು ಅವಲಂಬಿಸಿದ ಬೇಡರ ಸದಸ್ಯರನ್ನು ಸ್ಯಾಂಪಲಿಂಗ್ ಸಮೀಕ್ಷೆಗೆ ಒಳಪಡಿಸಿ ಮಾಹಿತಿಯನ್ನು ಕ್ರೋಢೀಕರಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಚಾರಿತ್ರಿಕ ವಿಧಾನ

ಬೇಡರ ಮೂಲ ತಿಳಿಯುವ ಉದ್ದೇಶದಿಂದ ಅವರ ಚರಿತ್ರೆಯನ್ನು ಪ್ರತಿಬಿಂಬಿಸುವ ಗ್ರಂಥಗಳಿಂದ, ಮಾನವಾಭಿವೃದ್ಧಿ ವರದಿ, ಜನಸಂಖ್ಯಾ ವರದಿ, ಪತ್ರಿಕೆಯ ಲೇಖನಗಳು ಮುಂತಾದವುಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ರೀತಿ ಸಂಗ್ರಹಿಸಿದ ಮಾಹಿತಿಯನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಸಂಖ್ಯಾಶಾಸ್ತ್ರೀಯ ವಿಧಾನ

ಜನಸಂಖ್ಯಾ ವರದಿ, ಮಾನವಾಭಿವೃದ್ಧಿ ವರದಿ ಹಾಗೂ ಸಂದರ್ಶನದಲ್ಲಿ ಕಲೆಹಾಕಿದ ಮಾಹಿತಿಗಳನ್ನು ಸಂಖ್ಯಾಶಾಸ್ತ್ರೀಯ ವಿಧಾನದಲ್ಲಿ ವಿಶ್ಲೇಷಿಸಿಸಲು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ತುಲನಾತ್ಮಕ ವಿಧಾನ

ಬೇಡರ ೬೦ರ ಹಿರಿಯರು, ೪೦ರ ಮಧ್ಯವಯಸ್ಕರು ಹಾಗೂ ೨೦ರ ಯುವಕರು ಹೀಗೆ ಮೂರು ತಲೆಮಾರಿನವರನ್ನು ಅಧ್ಯಯಕ್ಕೆ ಒಳಪಡಿಸಿ ಅವರ ಮಧ್ಯ ಇರುವ ವಿವಿಧ ಅಂತರಗಳನ್ನು ತುಲನಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ.

ಸಹಭಾಗಿತ್ವ ವಿಧಾನ

ಬೇಡರ ವೃತ್ತಿಗೆ ಸಂಬಂಧಿಸಿದಂತೆ ಮತ್ತು ಬುಡಕಟ್ಟಿಗೆ ಸಂಬಂಧಿಸಿದಂತೆ ಇವರಲ್ಲಿರುವ ಆಚರಣೆಗಳು, ನಂಬಿಕೆಗಳನ್ನು ಅರಿಯುವುದು ಹಾಗೂ ಇವರ ಹಬ್ಬ ಹರಿದಿನಗಳು, ಜೀವನಾವರ್ತನ ಆಚರಣೆ ಗಳನ್ನು ಅರಿಯುವ ಉದ್ದೇಶದಿಂದ ಅವರ ಆಚರಣೆಗಳಲ್ಲಿ ಪಾಲ್ಗೊಂಡು ಮಾಹಿತಿಗಳನ್ನು ಪಡೆಯಲಾಗಿದೆ. ಹೀಗೆ ಒಟ್ಟಾಗಿ ಎಲ್ಲಾ ವಿಧಾನಗಳಿಂದಲೂ ಮಾಹಿತಿ ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧.೭. ಅಧ್ಯಯನದ ಅಧ್ಯಾಯಗಳ ವಿನ್ಯಾಸ

ಈ ಅಧ್ಯಯನವು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ ಎಂಬ ಶೀರ್ಷಿಕೆಯನ್ನು ೧ನೇ ಅಧ್ಯಯವು ಹೊಂದಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಅಧ್ಯಯನ ಕೈಗೊಂಡ ವಿಧಾನಗಳು ಮತ್ತು ಅಧ್ಯಯನದ ರೂಪುರೇಷೆಗಳು ಹಾಗೂ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಈ ಸಮೀಕ್ಷೆಯಲ್ಲಿ ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಪ್ರಕಟಣೆಗೊಂಡ ಕೃತಿಗಳು, ವಿವಿಧ ಪತ್ರಿಕೆಗಳಲ್ಲಿ ಬಂದ ಲೇಖನ, ವರದಿ ಮುಂತಾದವುಗಳ ಕುರಿತು ಅವಲೋಕಿಸಲಾಗಿದೆ.

ಅಧ್ಯಾಯ ಎರಡು

ದಾವಣಗೆರೆ ಜಿಲ್ಲೆಯ ಪರಿಚಯ ಎಂಬ ಶೀರ್ಷಿಕೆಯನ್ನು ೨ನೇ ಅಧ್ಯಯವು ಹೊಂದಿದ್ದು ಮುಖ್ಯವಾಗಿ ದಾವಣಗೆರೆ ಜಿಲ್ಲೆಯು ಹಿಂದೆ ಚಾರಿತ್ರಿಕವಾಗಿ ಎಷ್ಟು ಮಹತ್ವದ್ದಾಗಿತ್ತು, ಅದರ ಹಿನ್ನೆಲೆಯೇನು ಎಂಬುದನ್ನು ನೋಡುವುದರೊಂದಿಗೆ ಈ ಜಿಲ್ಲೆಯ ಭೌಗೋಳಿಕ ಸ್ವರೂಪ ಹೇಗಿದೆ, ಈ ಜಿಲ್ಲೆಯಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು, ಕೃಷಿ ವಿಧಾನ, ನೀರಾವರಿಯ ಸ್ವರೂಪ,

ಜನಸಂಖ್ಯೆ, ಗುಡ್ಡಗಾಡು ಪ್ರದೇಶ, ಗಣಿಗಾರಿಕೆ ಮತ್ತು ಔದ್ಯೋಗಿಕತೆ, ನೈಸರ್ಗಿಕ ಪರಿಸರ ಮುಂತಾದವುಗಳ ಕುರಿತ ಚರ್ಚಿಸಲಾಗಿದೆ.

ಅಧ್ಯಾಯ ಮೂರು

ಬೇಡರ ಪರಿಚಯ ಎಂಬ ಶಿರ್ಷಿಕೆಯನ್ನು ೩ನೇ ಅಧ್ಯಯವು ಹೊಂದಿದ್ದು ಇದರಲ್ಲಿ ಬೇಡರ ಪದನಿಷ್ಪತ್ತಿ, ಮೂಲ, ಸ್ವರೂಪ, ಬೇಡರಲ್ಲಿರುವ ಒಳಪಂಗಡಗಳು, ಅವುಗಳ ಮಧ್ಯ ಇರುವ ಸಾಮ್ಯತೆ ಹಾಗೂ ವಿರೋಧಗಳನ್ನು ಕುರಿತು ಶೋಧಿಸಲಾಗಿದೆ.

ಅಧ್ಯಾಯ ನಾಲ್ಕು

ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟ ಎಂಬ ಶಿರ್ಷಿಕೆಯನ್ನು ೪ನೇ ಅಧ್ಯಯವು ಹೊಂದಿದ್ದು ಬೇಡ ಸಮುದಾಯದ ಕೌಟುಂಬಿಕ ರಚನೆ, ಒಳಪಂಗಡಗಳು, ವಸತಿ ವ್ಯವಸ್ಥೆ, ವಿವಾಹ, ಬೆಡಗುಗಳು, ಕುಲಪಂಚಾಯಿತಿ ವ್ಯವಸ್ಥೆ ಮತ್ತು ಇತರೆ ಆಚರಣೆಗಳಲ್ಲಿಯ ಪಲ್ಲಟಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದು

ಆರ್ಥಿಕ ಪಲ್ಲಟ ಎಂಬ ಶಿರ್ಷಿಕೆಯನ್ನು ೫ನೇ ಅಧ್ಯಯವು ಹೊಂದಿದ್ದು ಬೇಡರ ಆರ್ಥಿಕತೆ, ಭೂ ಹಿಡುವಳಿ, ಮೂಲ ವೃತ್ತಿ, ಅವಲಂಬಿತ ವೃತ್ತಿಗಳು, ಕೃಷಿ, ಪಶುಪಾಲನೆ, ವ್ಯಾಪಾರ, ವಲಸೆ, ಸರ್ಕಾರಿ ಯೋಜನೆ ಇತ್ಯಾದಿಗಳನ್ನು ಕುರಿತು ಅಧ್ಯಯನಿಸಲಾಗಿದೆ.

ಅಧ್ಯಾಯ ಆರು

ಶೈಕ್ಷಣಿಕ ಪಲ್ಲಟ ಎಂಬ ಶಿರ್ಷಿಕೆಯನ್ನು ೬ನೇ ಅಧ್ಯಯವು ಹೊಂದಿದ್ದು ಬೇಡರ ಶೈಕ್ಷಣಿಕ ಪಲ್ಲಟ, ಪಲ್ಲಟಕ್ಕೆ ಕಾರಣಗಳು, ಪ್ರಸ್ಥುತ ಶೈಕಣಿಕ ಸ್ಥಿತಿಗತಿ, ಸಮುದಾಯದ ವಯಸ್ಕರರ ಶೈಕ್ಷಣಿಕ ಮಟ್ಟದ ವಿವರ ಮಕ್ಕಳ ಶೈಕ್ಷಣಿಕ ಸ್ವರೂಪದ ಬಗ್ಗೆ ವಿಶ್ಲೇಷಿಸಲಾಗಿದೆ.

ಅಧ್ಯಾಯ ಏಳು

ರಾಜಕೀಯ ಪಲ್ಲಟ ಎಂಬ ಶಿರ್ಷಿಕೆಯನ್ನು ೭ನೇ ಅಧ್ಯಯವು ಹೊಂದಿದ್ದು ಹಿಂದೆ ಮತ್ತು ಪ್ರಸ್ತುತ ಸಂದರ್ಭದಲ್ಲಿ ಬೇಡರ ರಾಜಕೀಯ ಪಲ್ಲಟವನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಎಂಟು

ಸಮಾರೋಪ ಎಂಬ ಶಿರ್ಷಿಕೆಯನ್ನು ೮ನೇ ಅಧ್ಯಯವು ಹೊಂದಿದ್ದು ಇದರಲ್ಲಿ ಎಲ್ಲಾ ಅಧ್ಯಾಯಗಳ ಸಾರಾಂಶ ಹಾಗೂ ಅವುಗಳಲ್ಲಿಯ ಸಂಶೋಧಿತ ವಿಷಯಗಳ ಫಲಿತಗಳನ್ನು ಹಾಗೂ ಮುಂದಿನ ಹೊಸ ಸಾಧ್ಯತೆಗಳ ಅಂಶಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

೧.೮. ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು

ಇತರ ಬುಡಕಟ್ಟುಗಳಿಗೆ ಹೋಲಿಸಿದರೆ ಬೇಡ ಸಮುದಾಯದ ಕುರಿತು ಸಾಕಷ್ಟು ಕೃತಿಗಳು ಕನ್ನಡದಲ್ಲಿ ಬಂದಿವೆ. ಆದರೆ ಬಹುತೇಕ ಕೃತಿಗಳು ಬೇಡರ ವಾಸ್ತವ ಸ್ಥಿತಿಯನ್ನು ಅರಿಯುವ ಪ್ರಯತ್ನ ಮಾಡದೆ ಕೇವಲ ಆ ಸಮುದಾಯವನ್ನು ವಿಜೃಂಭಿಸುವ ಕಡೆಗೇ ಹೆಚ್ಚಿನ ಲಕ್ಷ್ಯವನ್ನು ನೀಡಿವೆ. ಇಂಗ್ಲಿಷ್‌ನಲ್ಲಿಯೂ ಬೇಡರ ಕುರಿತು ಮಾಹಿತಿಗಳನ್ನು ತಿಳಿಸುವ ಕೃತಿಗಳು ಪ್ರಕಟಗೊಂಡಿವೆ. ಅವು ಈ ಕೆಳಗಿನಂತಿವೆ.

ಎಡ್ಗರ್ ಥರ್ಸ್ಟನ್ ಅವರ 'ದ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ'(೧೯೦೯)[೧] ಎನ್ನುವ ಕೃತಿಯಲ್ಲಿ ಬೇಡ ಸಮುದಾಯಗಳ ಪರಿಚಯವಿದೆ. ಮುಖ್ಯವಾಗಿ ಈ ಕೃತಿಯಲ್ಲಿ ಬೇಡ ಸಮುದಾಯದ ಮ್ಯಾಸಬೇಡ, ಊರುಬೇಡ, ಮೊಂಡರುಗಳ ಕುರಿತ ಮಾಹಿತಿ ದೊರೆಯುತ್ತದೆ. ಈ ಪಂಗಡಗಳ ಬೆಡಗು, ಸಂಪ್ರದಾಯಗಳು, ಭಾಷೆ, ವೃತ್ತಿ, ವಾಸಿಸುವ ಸ್ಥಳ ಇತ್ಯಾದಿ ವಿವರಗಳು ದೊರೆಯುತ್ತವೆ.

ಸೈಯದ್ ಸಿರಾಜ್ ಉಲ್ ಹಸನ್ ಅವರ 'ದ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ನಿಜಾಮ್ಸ್ ಡೋಮಿನಿಯನ್ಸ್'(೧೯೨೦)[೨] ಎನ್ನುವ ಕೃತಿಯಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ಬರುವ ಬೇಡ ಸಮುದಾಯದ ರೀತಿ ನೀತಿಗಳು, ಜೀವನ ಕ್ರಮ, ರಾಜಕೀಯ ಸ್ವರೂಪಗಳ ಚಿತ್ರಣ ಕಂಡುಬರುತ್ತದೆ.

ಎಚ್ ವಿ ನಂಜುಂಡಯ್ಯ ಮತ್ತು ಎಲ್ ಕೆ ಎ ಅಯ್ಯರ್ ಅವರ 'ದ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್'(೧೯೩೧)[೩] ಎನ್ನುವ ಕೃತಿಯಲ್ಲಿ ಮೈಸೂರು ಪ್ರಾಂತ್ಯದಲ್ಲಿ ನೆಲೆಸಿರುವ ಬೇಡರ ಪಂಗಡಗಳು, ಅವರ ಮದುವೆ, ಸಾವು ಮುಂತಾದ ಜೀವನಾವರ್ತನ ಆಚರಣೆಗಳು, ದೇವರು, ಬೆಡಗು, ಜೀವನ ಕ್ರಮ, ಬೇಡ ಸಮುದಾಯದ ಮೂಲ ವೃತ್ತಿ ಇತ್ಯಾದಿ ವಿವರಗಳು ದೊರೆಯುತ್ತವೆ.

'ಚಿತ್ರದುರ್ಗ ಜಿಲ್ಲಾ ಗ್ಯಾಜೆಟಿಯರ್'(೧೯೬೭)[೪]ನಲ್ಲಿ ಆ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುವ ಬೇಡ ಸಮುದಾಯದ ಕುರಿತ ವಿವರಗಳೊಂದಿಗೆ ಚಿತ್ರದುರ್ಗವನ್ನು ಆಳಿದ ಬೇಡ ಸಮುದಾಯದ ಪಾಳೆಯಗಾರರ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ಕೊಡಲಾಗಿದೆ.

ಆರ್ ರಾಜಣ್ಣನವರ 'ನಾಯಕ ಜನಾಂಗದ ಇತಿಹಾಸ'(೧೯೮೭)[೫] ಎನ್ನುವ ಕೃತಿಯಲ್ಲಿ ಬೇಡರ ಮೂಲ ಪರಂಪರೆ, ಸಮುದಾಯದ ಪ್ರಾತಃಸ್ಮರಣೀಯರ ಕುರಿತ ಮಾಹಿತಿಗಳು ಕಂಡುಬರುತ್ತವೆ.

ಎಂ ಜಿ ಈಶ್ವರಪ್ಪನವರ 'ಮ್ಯಾಸಬೇಡರು'(೧೯೮೭)[೬] ಕೃತಿಯಲ್ಲಿ ಮ್ಯಾಸಬೇಡರ ಹಟ್ಟಿಗಳು, ಅವರ ಬೆಡಗುಗಳು, ಜೀವನಕ್ರಮ, ಧಾರ್ಮಿಕ ಆಚರಣೆಗಳು, ದೈವಗಳು, ಜನಪದ, ವೇಷಭೂಷಣ ಮುಂತಾದ ವಿವರಗಳು ದೊರೆಯುತ್ತವೆ. ಈ ಕೃತಿ ಸಂಪೂರ್ಣವಾಗಿ ಮ್ಯಾಸಬೇಡರ ಕುರಿತು ಮಾಹಿತಿಯನ್ನು ನೀಡುತ್ತದೆ.

ಬಿ ಎಸ್ ಶ್ರೀನಿವಾಸ ನಾಯಕರ ಚಿತ್ರದುರ್ಗದ 'ಕಾಮಗೇತಿ ಅರಸರು'(೧೯೮೪)'[೭]ಕೃತಿಯಲ್ಲಿ ಚಿತ್ರದುರ್ಗವನ್ನಾಳಿದ ಕಾಮಗೇತಿ ಮನೆತನದ ಅರಸರ ಕುರಿತು ಮಾಹಿತಿ ದೊರೆಯುತ್ತದೆ.

ಎಚ್ ವಿ ವೀರನಾಯಕರ 'ಕ್ಷಾತ್ರಾಂಶ ಪ್ರಭೇದ'(೧೯೮೭)'[೮] ಕೃತಿಯಲ್ಲಿ ಬೇಡ ಸಮುದಾಯದ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಜೊತೆಗೆ ಆ ಸಮುದಾಯದ ಸ್ಥಿತಿಗತಿಗಳನ್ನು ಈ ಕೃತಿ ಪರಿಚಯಿಸುತ್ತದೆ.

ಲಕ್ಷ್ಮಣ್ ತೆಲಗಾವಿಯವರು ಸಂಪಾದಿಸಿದ 'ಹರತಿ ಸಿರಿ' (೧೯೯೨)'[೯] ಎನ್ನುವ ಕೃತಿಯಲ್ಲಿ ಒಟ್ಟು ೯೮ ಲೇಖನಗಳನ್ನು ವಿವಿಧ ಲೇಖಕರು ಬರೆದಿದ್ದಾರೆ. ಈ ಲೇಖನಗಳಲ್ಲಿ ಬೇಡ ಸಮುದಾಯದ ಒಳ ಪಂಗಡಗಳು, ಅವರ ಆಚರಣೆ, ಜೀವನಕ್ರಮ ಮುಂತಾದ ವಿಷಯಗಳನ್ನು ತಿಳಿಸುವ ಲೇಖನಗಳನ್ನು ಕಾಣುತ್ತೇವೆ.

ಕೃಷ್ಣಮೂರ್ತಿ ಹನೂರು ಅವರ 'ಮ್ಯಾಸಬೇಡರ ಸಂಸ್ಕೃತಿ'(೧೯೯೩)'[೧೦] ಕೃತಿಯಲ್ಲಿ ಕರ್ನಾಟಕದಲ್ಲಿ ಮ್ಯಾಸಬೇಡರ ಬೆಡಗುಗಳು, ಜೀವನಕ್ರಮ, ದೈವಗಳು, ಸಾಂಸ್ಕೃತಿಕ ವೀರರು, ಸಂಪ್ರದಾಯಗಳು, ನಂಬಿಕೆಗಳು, ಕಲೆ, ಭಾಷೆ, ಜನಪದ ಸಾಹಿತ್ಯ ಮುಂತಾದವುಗಳ ಕುರಿತು ಮಾಹಿತಿ ದೊರೆಯುತ್ತವೆ.

ಪ್ರಹ್ಲಾದ ಬೆಟಗೇರಿಯವರ 'ಅಡವಿ ಚೆಂಚರ ಸಂಸ್ಕೃತಿ'(೧೯೯೩)'[೧೧] ಕೃತಿಯಲ್ಲಿಯೂ ಸಹ ಮ್ಯಾಸಬೇಡರ ಕುರಿತು ಪ್ರಾಸಂಗಿಕವಾಗಿ ಮಾಹಿತಿಗಳನ್ನು ನೀಡಿರುವುದು ಕಂಡುಬರುತ್ತದೆ.

ಕರಿಶೆಟ್ಟಿ ರುದ್ರಪ್ಪನವರ 'ಮ್ಯಾಸನಾಯಕರು: ಒಂದು ಜನಾಂಗಿಕ ಅಧ್ಯಯನ' (೧೯೯೫)'[೧೨] ಎಂಬ ಕೃತಿಯಲ್ಲಿ ಮ್ಯಾಸಬೇಡರ ಧಾರ್ಮಿಕ ಆಚರಣೆಗಳು, ಅವರ ಹಟ್ಟಿಗಳು, ಜೀವನಕ್ರಮ, ಸಾಂಸ್ಕೃತಿಕ ವೀರರು ಮುಂತಾದ ವಿಸ್ತೃತ ಮಾಹಿತಿಗಳಿವೆ.

ವೀಣಾ ಎಂ ಪಿ ಅವರ 'ಮನೆ ಸಮಾಜ ಸಂಸ್ಕೃತಿ'(೨೦೧೧)'[೧೩] ಎನ್ನುವ ಕೃತಿಯಲ್ಲಿ ಊರು ಬೇಡ ಮತ್ತು ಮ್ಯಾಸಬೇಡರ ಮನೆಗಳ ರಚನಾ ಕ್ರಮ, ಪರಿಸರ, ಸಂಸ್ಕೃತಿಗಳ ಪರಿಚಯವಿದೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಗಾದರಿಪಾಲ ನಾಯಕ'(೧೯೯೯)'[೧೪] ಎನ್ನುವ ಕೃತಿಯಲ್ಲಿ ಬೇಡ ಬುಡಕಟ್ಟಿನ ಸಾಂಸ್ಕೃತಿಕ ವೀರನ ಹಿನ್ನೆಲೆ, ಜನಪದ ಕಥೆ ಮುಂತಾದ ವಿವರಣೆಗಳು ದೊರೆಯುತ್ತವೆ.

ಎ ಎಸ್ ಪ್ರಭಾಕರ ಅವರು ಸಂಪಾದಿಸಿರುವ 'ಮ್ಯಾಸಬೇಡರ ಕಥನಗಳು'(೨೦೦೨)'[೧೫] ಕೃತಿಯಲ್ಲಿ ಮ್ಯಾಸಬೇಡರ ಜನಪದ ಕಥನಗೀತೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಮಂಜುನಾಥ ಬೇವಿನಕಟ್ಟಿ ಮತ್ತು ತಾರಿಹಳ್ಳಿ ಹನುಮಂತಪ್ಪ ಅವರು ಸಂಪಾದಿಸಿರುವ 'ವಾಲ್ಮೀಕಿ ಸಂಪದ'(೨೦೦೨)'[೧೬] ಕೃತಿಯಲ್ಲಿ ವಿವಿಧ ಲೇಖಕರ ಒಟ್ಟು ೩೫ ಲೇಖನಗಳು ಕಂಡುಬರುತ್ತವೆ. ಇವುಗಳಲ್ಲಿ ಬಹುತೇಕ ಬೇಡ ಸಮುದಾಯದ ಮಾಹಿತಿಯನ್ನು ಹಾಗೂ ಪರಿಶಿಷ್ಟ ಪಂಗಡಗಳ

ಕಲ್ಯಾಣ ಕಾರ್ಯಕ್ರಮಗಳ ವಿವರಗಳನ್ನು ನೀಡುವ ಲೇಖನಗಳು ಇವೆ. ಕರ್ನಾಟಕದ ಬೇಡ ಜನಾಂಗ, ಬೇಡ ಜನಾಂಗದ ಉಗಮ ಮತ್ತು ವಿಕಾಸ, ಬೇಡ ಬೆಡಗುಗಳ ಪ್ರಾಚೀನತೆ ಈ ಮಾದರಿಯ ಲೇಖನಗಳು ಈ ಕೃತಿಯಲ್ಲಿವೆ.

ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಮೀರಾಸಾಬಿಹಳ್ಳಿ ಶಿವಣ್ಣನವರ 'ಮ್ಯಾಸ ಮಂಡಲ' (೨೦೦೩)'[೧೭] ಎನ್ನುವ ಕೃತಿಯಲ್ಲಿ ವಿವಿಧ ಲೇಖನಗಳೊಂದಿಗೆ ಮ್ಯಾಸನಾಯಕರ ಕುರಿತು ಮಾಹಿತಿ ನೀಡುವ ಲೇಖನಗಳೂ ಇವೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಬೇಟೆ ಮತ್ತು ಬೇಡರು'(೨೦೦೭)'[೧೮] ಎನ್ನುವ ಕೃತಿಯು ಮುಖ್ಯವಾಗಿ ಮಧ್ಯಕಾಲೀನ ಕನ್ನಡದ ಕಾವ್ಯಗಳಲ್ಲಿ ನಿರೂಪಿತಗೊಂಡಿರುವ ಬೇಟೆ ಮತ್ತು ಬೇಡರ ಸಂಬಂಧಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಇರುವುದನ್ನು ಗಮನಿಸಲಾಗಿದೆ.

ಹರ್ತಿಕೋಟೆ ವೀರೇಂದ್ರಸಿಂಹ ಮತ್ತು ಅಮರೇಶ ಯತಗಲ್ ಅವರು ಸಂಪಾದಿಸಿರುವ 'ವಾಲ್ಮೀಕಿ ಮಂದಾರ'(೨೦೦೮)'[೧೯] ಎನ್ನುವ ಸ್ಮರಣ ಸಂಪುಟ ಕೃತಿಯಲ್ಲಿ ಕರ್ನಾಟಕ ನಾಯಕ ಪಾಳೆಯಗಾರರ ಇತಿಹಾಸ-ಸಮಸ್ಯೆ ಸವಾಲುಗಳು, ರಾಷ್ಟ್ರ ಸೇವೆಯಲ್ಲಿ ನಾಯಕ ಜನಾಂಗ, ಹಲಗಲಿ ಬೇಡರು, ಮೊಂಡ ಬೇಡರು, ನಾಯಕ ಜನಾಂಗ: ಒಂದು ಪಕ್ಷಿನೋಟ ಮುಂತಾದ ೪೩ ಲೇಖನಗಳಿದ್ದು ಅವೆಲ್ಲವೂ ನಾಯಕ ಸಮುದಾಯ ಹಾಗೂ ಆ ಸಮುದಾಯಕ್ಕೆ ಸೇರಿದವರ ವಿವರಗಳನ್ನೊಳಗೊಂಡಿವೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ 'ವಾಲ್ಮೀಕಿ ಸಿರಿ'(೨೦೦೬)'[೨೦] ಎನ್ನುವ ಸಂಪಾದಿತ ಕೃತಿಯಲ್ಲಿ ಒಟ್ಟು ೩೮ ಲೇಖನಗಳನ್ನು ವಿವಿಧ ಲೇಖಕರು ಬರೆದಿದ್ದಾರೆ. ನಾಯಕ ಜನಾಂಗದಲ್ಲಿ ಸಂಪ್ರದಾಯಗಳು ಕರ್ನಾಟಕ ರಾಜ್ಯದಲ್ಲಿ ನಾಯಕರ ಅಭಿವೃದ್ಧಿ ಹೇಗೆ ಸಾಧ್ಯ, ನಾಯಕ ಜನಾಂಗದ ಮೌಖಿಕ ಕಾವ್ಯಗಳು, ಬೇಡರಲ್ಲಿ ಧಾರ್ಮಿಕ ಸಂಪ್ರದಾಯಗಳು ಮುಂತಾದ ಲೇಖನಗಳಿವೆ. ಹಾಗೆಯೇ ಬೇಡ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಕುರಿತ ಲೇಖನಗಳನ್ನು ಈ ಕೃತಿಯಲ್ಲಿ ಕಾಣುತ್ತೇವೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು'(೨೦೦೨)'[೨೧] ಎನ್ನುವ ಕೃತಿಯಲ್ಲಿ ಮುಖ್ಯವಾಗಿ ಬೇಡ ಬುಡಕಟ್ಟಿಗೆ ಸಂಬಂಧಿಸಿದ ಸಾಂಸ್ಕೃತಿಕ ವೀರರ ಚಿತ್ರಣವಿದೆ. ಬೇಡ ಬುಡಕಟ್ಟು ಸಮುದಾಯದ ಪರಿಚಯ, ಬೇಡ ನಾಯಕ ವೀರರ ಆರಾಧನಾ ಕ್ಷೇತ್ರಗಳು, ಮ್ಯಾಸನಾಯಕ ಪರಂಪರೆಯಲ್ಲಿ ಬುಡಕಟ್ಟು ವೀರರಾದ ಯರಮಂಚಿನಾಯಕ, ಗಾದರಿಪಾಲ ನಾಯಕ, ಜಗಳೂರು ಪಾಪನಾಯಕ, ಯರಗಾಟನಾಯಕ, ಕೊಡಗಲು ಬೊಮ್ಮಯ್ಯ, ಗಾಜನಾಯಕ, ದಡ್ಡಿ ಸೂರನಾಯಕ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಪೆದ್ದಯ್ಯ, ಗೋಣೆಯ್ಯ ಮುಂತಾದವರೊಂದಿಗೆ ಆಧುನಿಕ ನಾಯಕ ಸಮುದಾಯದ ಮುಖಂಡರನ್ನು ಪರಿಚಯಿಸುವ ಲೇಖನಗಳೂ ಕಂಡುಬರುತ್ತವೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ ‘ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು’(೨೦೦೬)’[೨೨] ಎನ್ನುವ ಸಂಪಾದಿತ ಕೃತಿಯಲ್ಲಿ ಒಟ್ಟು ೪೧ ಲೇಖನಗಳನ್ನು ವಿವಿಧ ಲೇಖಕರು ಬರೆದಿದ್ದಾರೆ. ಈ ಕೃತಿಯಲ್ಲಿ ಗುಹಾ, ವಾಲ್ಮೀಕಿ, ಶಬರಿ, ಧರ್ಮವ್ಯಾಧ, ಏಕಲವ್ಯ, ಬೇಡರ ಕಣ್ಣಪ್ಪನಂತಹ ಪೌರಾಣಿಕ ವ್ಯಕ್ತಿಗಳ ಕುರಿತು ಮಾಹಿತಿ ನೀಡಲಾಗಿದೆ. ಹಾಗೆಯೇ ಕುಮಾರರಾಮ, ಕನಕದಾಸ, ಎಚ್ಚಮನಾಯಕನಂತಹ ಹಲವಾರು ಚಾರಿತ್ರಿಕ ವ್ಯಕ್ತಿಗಳ ಕುರಿತು ಮಾಹಿತಿ ಲೇಖನಗಳಿವೆ. ಹಾಗೆಯೇ ಪಾಟೇಲ ಪಾಪನಾಯಕ, ಹರತಿ ವೀರನಾಯಕ, ಮಲೆಸಿದ್ದಪ್ಪ, ಸಿಜಿಕೆ ಮುಂತಾದ ಆಧುನಿಕ ವ್ಯಕ್ತಿಗಳ ಕುರಿತೂ ಮಾಹಿತಿಗಳಿವೆ. ಇದೊಂದು ವ್ಯಕ್ತಿ ಚಿತ್ರಗಳನ್ನು ಕಟ್ಟಿಕೊಡುವ ಕೃತಿಯಾಗಿದೆ.

ಡಿ ಎನ್ ಯೋಗೀಶ್ವರಪ್ಪನವರ ‘ಹಾಗಲವಾಡಿ ನಾಯಕರು’(೧೯೯೯)’[೨೩] ಚಾರಿತ್ರಿಕ ಮಾಹಿತಿಯನ್ನು ನೀಡುವ ಕೃತಿಯಾಗಿದ್ದು ಹಾಗಲವಾಡಿಯನ್ನು ಬೇಡ ಸಮುದಾಯದ ವ್ಯಕ್ತಿಗಳು ಆಳಿದರು ಎಂಬ ಮಾಹಿತಿಯನ್ನು ನೀಡುತ್ತದೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ ‘ಚಿನ್ನಹಗರಿ ಸಿರಿ’(೨೦೦೬)’[೨೪] ಎನ್ನುವ ಕೃತಿಯಲ್ಲಿ ಒಟ್ಟು ೪೮ ವಿವಿಧ ವಿಷಯಗಳನ್ನೊಳಗೊಂಡ ಲೇಖನಗಳಿವೆ. ಇವುಗಳಲ್ಲಿ ನಾಯಕ ಸಮುದಾಯ ಶತಮಾನದ ಹಿನ್ನೋಟ, ಮ್ಯಾಸ ಬ್ಯಾಡರ ನಾಯಕತನಕ್ಕೆ ಸಂಬಂಧಿಸಿದ ತಾಮ್ರಶಾಸನ ಶೋಧನೆ ಮುಂತಾದ ಕೆಲವು ಲೇಖನಗಳು ಬೇಡನಾಯಕ ಸಮುದಾಯದ ಕುರಿತು ಮಾಹಿತಿಯನ್ನು ನೀಡುತ್ತವೆ.

ಲಕ್ಷ್ಮಣ್ ತೆಲಗಾವಿಯವರ ‘ಎಪ್ಪತ್ತೇಳು ಪಾಳೆಯಗಾರರು’ (೨೦೦೮)’[೨೫] ಎನ್ನುವ ಕೃತಿಯಲ್ಲಿ ಆರು ವಿಭಾಗಗಳಿದ್ದು ದಕ್ಷಿಣ ಭಾರತದ ಪಾಳೆಯಗಾರರೊಂದಿಗೆ ಕರ್ನಾಟಕದ ಪಾಳೆಯಗಾರರ ಕುರಿತು ವಿವರಣೆಗಳಿವೆ. ಮುಖ್ಯವಾಗಿ ವಿಜಯನಗರ ಸಿಂಹಾಸನಕ್ಕೆ ಸಾಮಂತರಾಗಿದ್ದು ರಕ್ಕಸಗಿ ತಂಗಡಗಿಯ ನಿರ್ಣಾಯಕ ಯುದ್ಧದಲ್ಲಿ ವಿಜಯನಗರದ ಪರವಾಗಿ ಹೋರಾಡಿದ ೭ ಸಂಸ್ಥಾನಿಕ ಪಾಳೆಯಗಾರರ ವಿವರಗಳನ್ನು ಈ ಕೃತಿ ಒಳಗೊಂಡಿದೆ.

ವಿರೂಪಾಕ್ಷಿ ಪೂಜಾರಹಳ್ಳಿಯವರ ‘ಕಾಮಗೇತಿ ವಂಶಜರ ಚರಿತ್ರೆ’(೨೦೦೬)’[೨೬] ಬೇಡನಾಯಕ ಬುಡಕಟ್ಟಿನ ಸಾಂಸ್ಕೃತಿಕ ಚರಿತ್ರೆ, ಬೇಡನಾಯಕ ಕಟ್ಟೆಮನೆಗಳ ಸ್ಥಾಪನೆ, ನ್ಯಾಯಪಂಚಾಯ್ತಿ, ಕಾಮಗೇತನಹಳ್ಳಿ ಆಚಾರದ ಕಟ್ಟೆಮನೆ ಸ್ಥಾಪನೆ, ಕಾಮಗೇತಿ ವಂಶಜರ ರಾಜಕೀಯ ಚರಿತ್ರೆ ಮುಂತಾದ ವಿವರಗಳು ಕಂಡುಬರುತ್ತವೆ.

ಎಸ್ ಕೆ ಸಣ್ಣಓಬಯ್ಯನವರ ‘ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ’(೨೦೦೮,)’[೨೭] ಅಪ್ರಕಟಿತ ಪಿಎಚ್ ಡಿ ಮಹಾಪ್ರಬಂಧದಲ್ಲಿ ಎರಡು ಬುಡಕಟ್ಟುಗಳನ್ನು ತೌಲನಿಕವಾಗಿ ನೋಡಲಾಗಿದೆ.

ಪಿ ಕೊಟ್ರೇಶ್ ಅವರ 'ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಬೇಡರು'(೨೦೦೩ ಅಪ್ರಕಟಿತ)'[೨೮] ಎನ್ನುವ ಎಂ ಫಿಲ್ ಮಹಾಪ್ರಬಂಧದಲ್ಲಿ ಬೇಡರ ಮೂಲ ಹಾಗೂ ಸಾಮಾಜಿಕ ಬದಲಾವಣೆಯಲ್ಲಿ ಅದು ಸಾಗುತ್ತಿರುವ ಕ್ರಮವನ್ನು ತಿಳಿಸುವುದರೊಂದಿಗೆ ಅವರ ಆರ್ಥಿಕ ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಬದುಕಿನ ಬದಲಾವಣೆಗಳನ್ನು ತಿಳಿಸುತ್ತದೆ.

ಜಗದೀಶ ಕುಮಾರರ 'ಬೇಡ ಸಮುದಾಯದ ಮಹಿಳೆ'(೨೦೦೯ ಅಪ್ರಕಟಿತ)'[೨೯] ಎನ್ನುವ ಪಿಎಚ್ ಡಿ ಮಹಾಪ್ರಬಂಧವು ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳ ಬೇಡ ಸಮುದಾಯದ ಮಹಿಳೆಯರ ಸ್ಥಿತಿಗತಿಗಳ ಚಿತ್ರಣವನ್ನು ಸ್ಥೂಲವಾಗಿ ಒದಗಿಸುತ್ತದೆ.

ಒಟ್ಟಾರೆಯಾಗಿ ಇಲ್ಲಿಯವರೆಗೂ ಪ್ರಕಟಗೊಂಡ ಕೃತಿಗಳನ್ನು ನೋಡಲಾಗಿ ಯಾವೊಂದು ಕೃತಿಯಲ್ಲಿಯೂ ಬೇಡ ಬುಡಕಟ್ಟಿನ ವೃತ್ತಿ ಪಲ್ಲಟಗಳ ಕುರಿತು ವಿವರಗಳು ಕಂಡುಬಂದಿರುವುದಿಲ್ಲ. ಹೀಗಾಗಿ ಬೇಡ ಬುಡಕಟ್ಟಿನ ವೃತ್ತಿ ಪಲ್ಲಟಗಳ ಕುರಿತಾದ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ.

ಆಧಾರಗಳು

೧ ಎಡ್ಗರ್ ಥರ್ಸ್ಟನ್, ದ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ, ೧೯೦೯.

೨ ಸೈಯದ್ ಸಿರಾಜ್ ಉಲ್ ಹಸನ್, ದ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ನಿಜಾಮ್ಸ್ ಡೋಮಿನಿಯನ್ಸ್, ೧೯೨೦.

೩ ಎಚ್ ವಿ ನಂಜುಂಡಯ್ಯ ಮತ್ತು ಎಲ್ ಕೆ ಎ ಅಯ್ಯರ್, ದ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್, ೧೯೨೯.

೪ ಚಿತ್ರದುರ್ಗ ಜಿಲ್ಲಾ ಗ್ಯಾಜಿಟೀರ್, ಕರ್ನಾಟಕ ಸರ್ಕಾರ, ೧೯೭೮.

೫ ಆರ್ ರಾಜಣ್ಣ, ನಾಯಕ ಜನಾಂಗದ ಇತಿಹಾಸ, ೧೯೮೨.

೬ ಎಂ ಜಿ ಈಶ್ವರಪ್ಪ, ಮ್ಯಾಸ ಬೇಡರು ೧೯೮೨.

೭ ಬಿ ಎಸ್ ಶ್ರೀನಿವಾಸನಾಯಕ, ಚಿತ್ರದುರ್ಗದ ಕಾಮಗೇತಿ ಅರಸರು, ೧೯೮೪.

೮ ಎಚ್ ವಿ ವೀರನಾಯಕ, ಕ್ಷಾತ್ರಾಂಶ ಪ್ರಭೇದ, ೧೯೮೭.

೯ ಲಕ್ಷ್ಮಣ್ ತೆಲಗಾವಿ, (ಸಂ) ಹರತಿಯ ಸಿರಿ, ೧೯೮೩.

೧೦ ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ೧೯೯೩.

೧೧ ಪ್ರಹ್ಲಾದ ಬೆಟಗೇರಿ, ಅಡವಿ ಚೆಂಚರ ಸಂಸ್ಕೃತಿ, ೧೯೯೩.

೧೨ ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು–ಒಂದು ಜನಾಂಗಿಕ ಅಧ್ಯಯನ, ೧೯೯೫.

೧೩ ವೀಣಾ ಎಂ ಪಿ, ಮನೆ ಸಮಾಜ ಸಂಸ್ಕೃತಿ, ೨೦೧೧.

೧೪ ವಿರೂಪಾಕ್ಷಿ ಪೂಜಾರಹಳ್ಳಿ, ಗಾದರಿಪಾಲ ನಾಯಕ, ೧೯೯೯

೧೫ ಎ ಎಸ್ ಪ್ರಭಾಕರ, (ಸಂ) ಮ್ಯಾಸ ಬೇಡರ ಕಥನಗಳು, ೨೦೦೨

೧೬ ಮಂಜುನಾಥ ಬೇವಿನಕಟ್ಟಿ, ತಾರಿಹಳ್ಳಿ ಹನುಮಂತಪ್ಪ (ಸಂ), ವಾಲ್ಮೀಕಿ ಸಂಪದ, ೨೦೦೭

೧೭ ಮೀರಸಾಬಿಹಳ್ಳಿ ಶಿವಣ್ಣ, ಮ್ಯಾಸ ಮಂಡಲ, ೨೦೦೩

೧೮ ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ೨೦೦೭

೧೯ ಹರ್ತಿಕೋಟೆ ವೀರೇಂದ್ರಸಿಂಹ, ಅಮರೇಶ ಯಾತಗಲ್(ಸಂ), ವಾಲ್ಮೀಕಿ ಮಂದಾರ, ೨೦೦೮

೨೦ ವಿರೂಪಾಕ್ಷಿ ಪೂಜಾರಹಳ್ಳಿ, ವಾಲ್ಮೀಕಿ ಸಿರಿ, ೨೦೦೬

೨೧ ವಿರೂಪಾಕ್ಷಿ ಪೂಜಾರಹಳ್ಳಿ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು', ೨೦೦೨

೨೨ ವಿರೂಪಾಕ್ಷಿ ಪೂಜಾರಹಳ್ಳಿ 'ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು', ೨೦೦೬

೨೩ ಡಿ ಎನ್ ಯೋಗೇಶ್ವರಪ್ಪ, ಹಾಗಲವಾಡಿ ನಾಯಕರು, ೧೯೯೯

೨೪ ವಿರೂಪಾಕ್ಷಿ ಪೂಜಾರಹಳ್ಳಿ, 'ಚಿನ್ನಹಗರಿ ಸಿರಿ', ೨೦೦೬

೨೫ ಲಕ್ಷ್ಮಣ್ ತೆಲಗಾವಿಯವರ 'ಎಪ್ಪತ್ತೇಳು ಪಾಳೆಯಗಾರರು', ೨೦೦೮

೨೬ ವಿರೂಪಾಕ್ಷಿ ಪೂಜಾರಹಳ್ಳಿಯವರ 'ಕಾಮಗೇತಿ ವಂಶಜರ ಚರಿತ್ರೆ', ೨೦೦೬

೨೭ ಎಸ್ ಕೆ ಸಣ್ಣಓಬಯ್ಯ 'ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ'(ಅಪ್ರಕಟಿತ ೨೦೦೮,)

೨೮ ಪಿ ಕೊಟ್ರೇಶ್ ಅವರ 'ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಬೇಡರು'(೨೦೦೩)

೨೯ ಜಗದೀಶ ಕುಮಾರ 'ಬೇಡ ಸಮುದಾಯದ ಮಹಿಳೆ'(೨೦೦೯ ಅಪ್ರಕಟಿತ)

ಅಧ್ಯಾಯ - ೨

ದಾವಣಗೆರೆ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ಮತ್ತು ಭೌಗೋಳಿಕತೆ

ಅಧ್ಯಾಯ ಎರಡು

ದಾವಣಗೆರೆ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ಮತ್ತು ಭೌಗೋಳಿಕತೆ

ದಾವಣಗೆರೆ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಪ್ರಾಗೈತಿಹಾಸಿಕ ಮಾನವನ ನೆಲೆಗಳು ದಾವಣಗೆರೆ ಜಿಲ್ಲೆಯಲ್ಲಿ ಕಂಡುಬರುತ್ತವೆ. ಕ್ರಿ.ಪೂ ಮೂರನೇ ಶತಮಾನದಲ್ಲಿ ಮೌರ್ಯರ ಆಡಳಿತಕ್ಕೆ ದಾವಣಗೆರೆ ಪ್ರದೇಶವು ಒಳಪಟ್ಟಿದ್ದಾಗಿ ಐತಿಹಾಸಿಕ ಮೂಲಗಳಿಂದ ತಿಳಿದುಬರುತ್ತದೆ. ಶ್ಯಾಮನೂರು, ಲೋಕಿಕೆರೆಗಳ ಅವಲೋಕೇತೇಶ್ವರನನ್ನು ನೋಡಿದರೆ ಇಲ್ಲಿ ಮೌರ್ಯರ ಮೂಲಕ ಬೌದ್ಧಧರ್ಮದ ಪ್ರಭಾವವೂ ಇತ್ತೆಂಬುದು ತಿಳಿದುಬರುತ್ತದೆ. 'ದಾವಣಗೆರೆಯ ಅಣಜಿಯಲ್ಲಿ ದೊರೆತ ಶಿವಾನಂದ ವರ್ಮ ಹಾಗೂ ಕಾಶೀಪುರದ ರವಿವರ್ಮರ ಶಾಸನಗಳಿಂದ ಕ್ರಿಸ್ತಶಕ ೩ರಿಂದ ೬ನೇ ಶತಮಾನದವರೆಗೆ ಈ ಪ್ರದೇಶ ಬನವಾಸಿಯ ಕದಂಬರ ಆಳ್ವಿಕೆಗೆ ಒಳಪಟ್ಟಿದ್ದು ಉಚ್ಚಂಗಿದುರ್ಗವು ಅವರ ಆಳ್ವಿಕೆಯ ಮುಖ್ಯ ಪಟ್ಟಣವಾಗಿದ್ದುದಾಗಿ ತಿಳಿದುಬರುತ್ತದೆ'[೧]. ಕ್ರಿ.ಶ ೬ನೇ ಶತಮಾನದ ತರುವಾಯ ಕಲ್ಯಾಣದ ಚಾಲುಕ್ಯರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು. ಚಾಲುಕ್ಯರು ಕ್ರಿ.ಶ ೬ರಿಂದ ೮ನೇ ಶತಮಾನ ಹಾಗೂ ಕ್ರಿ.ಶ ೧೦ರಿಂದ ೧೨ನೇ ಶತಮಾನದವರೆಗೆ ಈ ಪ್ರದೇಶವನ್ನು ಆಳಿರುವುದು ಚರಿತ್ರೆಯ ಮೂಲಕ ತಿಳಿದುಬರುತ್ತದೆ. ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಹಲವಾರು ದೇವಾಲಯಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತವೆ. ನೊಳಂಬ ಪಲ್ಲವರು, ಸೇವುಣರು ಸಹ ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿರುವುದು ಆ ಕಾಲದ ಶಿಲಾಶಾಸನಗಳ ಮೂಲಕ ತಿಳಿದುಬರುತ್ತದೆ. ಸೇವುಣರ ಸುಮಾರು ೧೮ಕ್ಕೂ ಮೇಲ್ಪಟ್ಟ ಶಾಸನಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತವೆ.

[illegible]

[illegible]

[illegible]

[illegible]

ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ಈ ಜಿಲ್ಲೆಯನ್ನು ಉಚ್ಚಂಗಿ ಪಾಂಡ್ಯರು ಆಳಿದ ವಿವರಗಳೂ ಇವೆ. ಈ ಜಿಲ್ಲೆಯ ಪ್ರದೇಶದಲ್ಲಿ ಆಳಿದ ಉಚ್ಚಂಗಿ ಪಾಂಡ್ಯರಲ್ಲಿ ರಾಯಪಾಂಡ್ಯ, ವಿಜಯಪಾಂಡ್ಯ, ವೀರಪಾಂಡ್ಯರು ಪ್ರಮುಖವಾಗಿದ್ದರು. ದಾವಣಗೆರೆ ಪ್ರದೇಶವು ನೊಳಂಬವಾಡಿಯ ಒಂದು ಪ್ರಾಂತ್ಯ ವಾಗಿತ್ತು. ಇದನ್ನು ಉಚ್ಚಂಗಿ ಪಾಂಡ್ಯರನ್ನು ಹತ್ತಿಕ್ಕಿದ ಹೊಯ್ಸಳರು ಈ ಪ್ರದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿದರು. ಇವರೂ ಸಹ ಉಚ್ಚಂಗಿದುರ್ಗವನ್ನೇ ರಾಜಧಾನಿಯಾಗಿಸಿ ಕೊಂಡಿದ್ದರು.

ಕ್ರಿ.ಶ. ೧೨೧೦ರಿಂದ ೧೩೧೦ರವರೆಗೂ ದೇವಗಿರಿಯ ಯಾದವರು ದಾವಣಗೆರೆ ಪ್ರದೇಶವನ್ನು ಆಳಿದರು. ಕ್ರಿ.ಶ. ೧೨೧೦ರಲ್ಲಿ ದೇವಗಿರಿಯ ಪ್ರಾಂತಾಧಿಕಾರಿಯೊಬ್ಬ ರಾಜಧಾನಿಯನ್ನು ಉಚ್ಚಂಗಿ ದುರ್ಗದಿಂದ ಬೇತೂರಿಗೆ ರಾಜಧಾನಿಯನ್ನು ವರ್ಗಾಯಿಸಿ ಪ್ರಾಂತೀಯ ಸರ್ಕಾರ ರಚಿಸಿ ಆಳ್ವಿಕೆ ಮಾಡುತ್ತಿದ್ದುದು ತಿಳಿದುಬರುತ್ತದೆ. ಕ್ರಿ.ಶ. ೧೩೧೦ರ ಸುಮಾರಿಗೆ ದಾವಣಗೆರೆ ಇಸ್ಲಾಮಿಯರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೩೪೨ರಲ್ಲಿ ವಿಜಯನಗರ ಅರಸರ ಆಡಳಿತಕ್ಕೆ ಈ ಜಿಲ್ಲೆ ಒಳಪಟ್ಟಿತು. ಆ ಕಾಲದಲ್ಲಿ ಸಣ್ಣಪುಟ್ಟ ಪಾಳೆಯಪಟ್ಟುಗಳೆಲ್ಲಾ ವಿಜಯನಗರದ ಒಳಗೆ ಸೇರಲ್ಪಟ್ಟವು. ವಿಜಯನಗರದ ಅರಸರು ದಕ್ಷ ಆಡಳಿತ ನಡೆಸುವ ಉದ್ದೇಶದಿಂದ ರಾಜ್ಯದೊಳಗಿನ ಪ್ರದೇಶಗಳನ್ನೆಲ್ಲಾ ಹಲವು ವಿಭಾಗಗಳಾಗಿಸಿಕೊಂಡರು. ಅವುಗಳನ್ನು ಕ್ರಮವಾಗಿ ಸೀಮೆ(ಪ್ರದೇಶ, ಕೋಟೆ), ವೆಂತೆ, ಚಾವಡಿಗಳೆಂದು ಹೆಸರಿಸಲಾಗಿತ್ತು. ಹರಿಹರವು ಸೀಮೆಯಾಗಿ ಉಚ್ಚಂಗಿದುರ್ಗವು ವೆಂತೆಯಾಗಿ ಕೊಟ್ಟೂರನ್ನು ಚಾವಡಿಯಾಗಿಸಿಕೊಂಡ್ಡಿದ್ದರು. ಈ ಕೊಟ್ಟೂರಿನ ಚಾವಡಿಗೆ ದಾವಣಗೆರೆಯೂ ಸೇರಿದ್ದಿತು. ವಿಜಯನಗರ ಪತನಾನಂತರ ಈ ಪ್ರದೇಶದಲ್ಲಿ ಹಲವಾರು ಪಾಳೆಯಗಾರರು ತಲೆಯೆತ್ತಿದರು. ಇವರಲ್ಲಿ ಮುಖ್ಯವಾಗಿ ಹರಪನಹಳ್ಳಿ ಪಾಳೆಯಗಾರರು, ಉಚ್ಚಂಗಿದುರ್ಗದ ಪಾಳೆಯಗಾರರು, ಚಿತ್ರದುರ್ಗದ ಪಾಳೆಯಗಾರರು, ಬಸವಾಪಟ್ಟಣದ ಪಾಳೆಯಗಾರರನ್ನು ಹೆಸರಿಸಬಹುದು.

'ಐತಿಹಾಸಿಕವಾಗಿ ಚಿತ್ರದುರ್ಗದ ಪಾಳೆಯಗಾರರಿಗೂ ದಾವಣಗೆರೆಗೂ ಬಿಡಿಸಲಾರದ ನಂಟಿದೆ. ಚಿತ್ರದುರ್ಗದ ಎರಡು ಪಾಳೆಯಗಾರರ ಮನೆತನದವರು ಮೂಲತಃ ದಾವಣಗೆರೆ ಜಿಲ್ಲೆಯವರು. ಈ ಎರಡೂ ಮನೆತನದವರು ಹಂಪೆಯ ಆನೆಗೊಂದಿ ಕಡೆಯಿಂದ ಬಂದು ಹಟ್ಟಿ ನಿರ್ಮಿಸಿಕೊಂಡಿದ್ದು ಉಚ್ಚಂಗಿದುರ್ಗದಲ್ಲಿ ಪಾಳೆಯಪಟ್ಟನ್ನು ಹಾಕಿಕೊಂಡು ತರುವಾಯ ಬಿಳಿಚೋಡನ್ನು ಗೆದ್ದು ಕೋಗುಂಟೆ ಹೆಬ್ಬಾಳು ಮಾರ್ಗವಾಗಿ ನೀರ್ಥಡಿಗೆ ಬಂದು ಪಾಳೆಯ ಹಾಕಿಕೊಂಡರು'[೨] ಈ ಚಿತ್ರನಾಯಕರಿಗೆ ಮೂರು ಜನ ಗಂಡುಮಕ್ಕಳಿದ್ದು ಅವರಲ್ಲಿ ಒಬ್ಬನು ನೀರ್ಥಡಿಯಲ್ಲಿ ನೆಲೆ ನಿಂತರೆ ಇನ್ನೊಬ್ಬ ಶ್ಯಾಗಲೆಯಲ್ಲಿ ಮತ್ತೊಬ್ಬ ಮತ್ತಿ ಗ್ರಾಮದಲ್ಲಿ ನೆಲೆ ನಿಂತನು. ಮತ್ತಿಯಲ್ಲಿ ನೆಲೆಸಿದ್ದ ಸುಬ್ಬಗಡಿ ಓಬನಾಯಕನ ಮಗನಾದ ಮತ್ತಿ ತಿಮ್ಮಣ್ಣನಾಯಕನು ಚಿತ್ರದುರ್ಗದ ಪಾಳೆಯಗಾರರಲ್ಲಿ ಮೊದಲಿಗನೆನಿಸಿದ್ದಾನೆ. ಮತ್ತಿ ವಂಶದಲ್ಲಿ ಚಿತ್ರದುರ್ಗ

ಪಾಳೆಯಪಟ್ಟನ್ನು ಆಳಿದವರು ಮತ್ತಿ ತಿಮ್ಮಣ್ಣ ನಾಯಕ(೧೫೬೮-೧೫೮೮), ಓಬಣ್ಣ ನಾಯಕ(೧೬೦೩), ಕಸ್ತೂರಿ ರಂಗಪ್ಪ ನಾಯಕ(೧೬೦೩-೧೬೫೨), ಇಮ್ಮಡಿ ಮದಕರಿನಾಯಕ(೧೬೫೨-೧೬೭೪), ಚಿಕ್ಕಣ್ಣನಾಯಕ(೧೬೭೪-೧೬೮೬), ಮುಮ್ಮಡಿ ಲಿಂಗನಾಯಕ(೧೬೮೬-೧೬೮೯)ರು ಆಳಿದ್ದಾರೆ.

'ಮುಮ್ಮಡಿ ಲಿಂಗನಾಯಕನ ಮೂಲಕ ಮತ್ತಿ ವಂಶದ ಆಳ್ವಿಕೆ ಕೊನೆಗೊಂಡ ತರುವಾಯ ಅವರ ಸಹೋದರ ಸಂಬಂಧಿಯಾದ ಬಿಳಿಚೋಡಿನ ವಂಶದ ಆಳ್ವಿಕೆ ಪ್ರಾರಂಭಗೊಳ್ಳುತ್ತದೆ. ಬಿಳಿಚೋಡಿನ ಕಸ್ತೂರಿ ರಂಗಪ್ಪನಾಯಕರ ಮಗ ಬಿಚ್ಚುಗತ್ತಿ ಭರಮಣ್ಣ ನಾಯಕ(೧೬೮೬-೧೭೨೧) ಬಿಳಿಚೋಡಿನ ಮೊದಲ ಪಾಳೆಯಗಾರನಾಗಿದ್ದಾನೆ. ಅವನ ತರುವಾಯ ಹಿರೇ ಮದಕರಿ ನಾಯಕ (೧೭೨೧-೧೭೪೮), ಕಸ್ತೂರಿರಂಗಪ್ಪನಾಯಕ(೧೭೪೮-೧೭೫೪), ರಾಜಾ ಮದಕರಿ ನಾಯಕ (೧೭೫೪-೧೭೭೯) ಹೀಗೆ ಒಟ್ಟು ೧೪ ಜನ ಪಾಳೆಯಗಾರರು ದಾವಣಗೆರೆಯನ್ನೊಳಗೊಂಡ ಚಿತ್ರದುರ್ಗ ವನ್ನು ಆಳಿದರು. ಇವರಲ್ಲದೆ ಉಚ್ಚಂಗಿದುರ್ಗದ ಪಾಳೆಯಗಾರರು, ಹರಪನಹಳ್ಳಿ ಪಾಳೆಯಗಾರರು (ದಾದಯ್ಯ ನಾಯಕ, ಸೋಮಶೇಖರ ನಾಯಕ ಮುಂತಾದವರು) ಸಹ ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ್ದುದಾಗಿ ಇತಿಹಾಸದ ಪುಟಗಳು ತಿಳಿಸಿಕೊಡುತ್ತವೆ.'[೩]

ಹರಪನಹಳ್ಳಿ ಪಾಳೆಯಗಾರರಿಗೂ ಚಿತ್ರದುರ್ಗದ ಪಾಳೆಯಪಟ್ಟಿಗೂ ಯುದ್ಧ ನಡೆಯುತ್ತಿದ್ದುದೇ ದಾವಣಗೆರೆಯ ಅಣಜಿ, ಆಲೂರು, ಬೇತೂರು, ತೂಲಹಳ್ಳಿ, ಉಚ್ಚಂಗಿದುರ್ಗ, ಮಾಯಕೊಂಡಗಳ ನೆಲದಲ್ಲಿ. ಚಿತ್ರದುರ್ಗ ಮತ್ತು ಇತರ ಪಾಳೆಯಗಾರರಿಗೆ ಯದ್ಧಗಳು ನಡೆದಿರುವುದಾಗಿ ತಿಳಿದು ಬರುತ್ತದೆ. ದಾವಣಗೆರೆ ಸೀಮೆಗೆ ಸೇರಿದ ಬಿಳಿಚೋಡು, ಅಣಜಿ, ಹರಿಹರ, ಮಲೆಬೆನ್ನೂರು, ಬನ್ನಿಕೋಡು, ಬಸವಾಪಟ್ಟಣ, ಶ್ಯಾಮನೂರು, ಹೊನ್ನೂರು, ಸಂತೆಬೆನ್ನೂರು, ಮಾಯಕೊಂಡ, ಮುಂತಾದ ಸೀಮೆಗಳನ್ನು ಸ್ಥಳೀಯರು ತಿಳಿಸುತ್ತಾರೆ.

ದಾವಣಗೆರೆಯ ಕೆಲವು ಪ್ರದೇಶಗಳು ಚಿತ್ರದುರ್ಗದ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೭೪೭-೪೮ರಲ್ಲಿ ಚಿತ್ರದುರ್ಗದ ಪಾಳೆಯಗಾರರಿಗೂ ಬಿದನೂರಿನ ಅರಸರಿಗೂ ಮಾಯ ಕೊಂಡದ ಬಳಿ ಭೀಕರ ಕಾಳಗ ನಡೆದು ಅದರಲ್ಲಿ ಚಿತ್ರದುರ್ಗದ ಪಾಳೆಯಗಾರರು ಅವನತಿ ಹೊಂದುತ್ತಾರೆ. ಈ ಸಂದರ್ಭದಲ್ಲಿ ಕೆಲವು ಕಾಲ ಬಿದನೂರಿನವರ ಆಡಳಿತಕ್ಕೆ ಈ ಪ್ರದೇಶ ಒಳಗಾಗುತ್ತದೆ. ಹೀಗೆ ಹತ್ತು ಹಲವು ಪಾಳೆಯಗಾರರು ಅರಸರಿಂದ ಆಳ್ವಿಕೆಗೆ ಈ ಜಿಲ್ಲೆ ಒಳಗಾಗಿದೆ.

೨.೧. ದಾವಣಗೆರೆ ಜಿಲ್ಲೆ ಹುಟ್ಟು ಮತ್ತು ಮಹತ್ವ

೧೯೯೭ಕ್ಕೂ ಪೂರ್ವದಲ್ಲಿ ಚಿತ್ರದುರ್ಗದ ಒಂದು ತಾಲೂಕಾಗಿದ್ದ ದಾವಣಗೆರೆಯು ೧೫.೦೮.೧೯೯೭ರಂದು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ, ಚನ್ನಗಿರಿ ತಾಲೂಕುಗಳನ್ನು ಹಾಗೂ

ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಯ ಜಗಳೂರು, ಹರಿಹರ ತಾಲೂಕುಗಳನ್ನು ಹರಪನಹಳ್ಳಿ ತಾಲೂಕನ್ನು ತನ್ನದಾಗಿಸಿಕೊಂಡು ಹೊಸ ಜಿಲ್ಲೆಯಾಗಿ ಮಾರ್ಪಾಡು ಹೊಂದಿತು.

ಮೂಲತಃ ದಾವಣಗೆರೆ ಪೂರ್ವದಲ್ಲಿ ಚಿಕ್ಕ ಹಳ್ಳಿ. 'ದಾವಣಗೆರೆಯು ಕ್ರಿ.ಶ. ೧೮೧೧ರಲ್ಲಿ ಕೇವಲ ೫೦೦ ಮನೆಗಳನ್ನು ಹೊಂದಿದ್ದ ಚಿಕ್ಕ ಗ್ರಾಮವಾಗಿತ್ತು. ಕ್ರಿ.ಶ. ೧೯೦೦ರಲ್ಲಿ ೧೦,೦೦೦ ಜನಸಂಖ್ಯೆಯನ್ನು ಹೊಂದಿದ ಊರಾಗಿತ್ತು'[೪] ದಾವಣಗೆರೆಯ ಪಕ್ಕದ ಗ್ರಾಮವಾದ ಎಲೆಬೇತೂರು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ದಾವಣಗೆರೆ ಗ್ರಾಮ ಪ್ರದೇಶವು ಅರಮನೆಯ ದನಗಳನ್ನು ಕೂಡಿಹಾಕುವ ರೊಪ್ಪವಾಗಿದ್ದಿತೆಂದೂ, ದಾವಣಗೆರೆಗೆ ಮೂರು ಫರ್ಲಾಂಗ್ ದೂರದ ಆನಕೊಂಡವು ಆನೆಗಳ ಲಾಯವಾಗಿತ್ತೆಂದು, ನಿಟುವಳ್ಳಿಯ ಬಯಲು ಪ್ರದೇಶ ಕುದುರೆಗಳನ್ನು ಕಟ್ಟುತ್ತಿದ್ದ ಲಾಯವಾಗಿತ್ತೆಂದು ಇಂದಿಗೂ ಸ್ಥಳೀಯರು ಮೌಖಿಕವಾಗಿ ತಿಳಿಸುತ್ತಾರೆ. ಅಂದರೆ ದಾವಣಗೆರೆ ಒಂದು ಕಾಲಕ್ಕೆ ರೊಪ್ಪವಾಗಿ ತರುವಾಯ ಚಿಕ್ಕ ಗ್ರಾಮವಾಗಿ ಮಾರ್ಪಟ್ಟ ವಿಚಾರ ತಿಳಿಯುತ್ತದೆ.

'ದಾವಣಗೆರೆ ಪಕ್ಕದ ಬೇತೂರು ವರ್ತಕ ದೇವಿಶೆಟ್ಟಿ ಎನ್ನುವವನ ಹೆಸರಿನಿಂದಾಗಿ ದಾವಣಗೆರೆ ಎನ್ನುವ ಹೆಸರು ಬಂದಿತೆಂದು ಕೆಲವು ಜನ ತಿಳಿಸುತ್ತಾರೆ. ಕೆರೆಯ ಬಳಿ ಇದ್ದ ತ್ರಿಭುವನೇಶ್ವರ ಮತ್ತು ಪಾಂಡೇಶ್ವರ ದೇವರಿಗೆ ದೇವಶೆಟ್ಟಿ ದಾನವಾಗಿ ನೀಡಿದ ಸ್ಥಳವೇ ದಾವಣಗೆರೆ ಎಂದಾಯಿತು ಎಂದೂ ಸಹ ತಿಳಿಸುತ್ತಾರೆ.'[೫]

ಕ್ರಿ.ಶ. ೧೧೨೧ರ ದಾವಣಗೆರೆಯ ಮೂರನೇ ಶಾಸನದಲ್ಲಿ "ದಾವಣಗೆರೆ ಸೀಮೆಯಂ" ಎನ್ನುವ ಉಕ್ತಿ ಇರುವುದು ಕಂಡುಬರುತ್ತದೆ. ಅಂದರೆ ಕ್ರಿ.ಶ. ೧೧೨೧ರಷ್ಟೊತ್ತಿಗೆ ದಾವಣಗೆರೆ ಸೀಮೆಯೆಂದು ಗುರುತಿಸಲ್ಪಟ್ಟದ್ದುದಾಗಿ ಈ ಶಾಸನದಿಂದ ತಿಳಿದುಬರುತ್ತದೆ. ತ್ರಿಭುವನೇಶ್ವರ ಕೆರೆಯ ಮಗ್ಗುಲಲ್ಲೇ ದಾವಣಗೆರೆ ಊರು ಪ್ರಾರಂಭಗೊಂಡಿದೆ. ನಂತರ ಹಂತಹಂತವಾಗಿ ಅದು ಬೆಳೆದು ದೊಡ್ಡ ನಗರವಾಗಿ ಮಾರ್ಪಟ್ಟಿರುವುದು ಕಂಡುಬರುತ್ತಿದೆ. ದೇವಿಶೆಟ್ಟಿ ಕೆರೆಯೇ ದಾವಣಗೆರೆಯಾಗಿ ಹೆಸರು ಹೊಂದಿರಬಹುದಾದ ಸಾಧ್ಯತೆಗಳೇ ಹೆಚ್ಚಿದೆ.

೨.೨. ದಾವಣಗೆರೆ ಜಿಲ್ಲೆ–ಭೌಗೋಳಿಕತೆ

ಪ್ರಸ್ತುತ ಕರ್ನಾಟಕದ ಒಟ್ಟು ಮೂವತ್ತು ಜಿಲ್ಲೆಗಳಲ್ಲಿ ದಾವಣಗೆರೆ ಜಿಲ್ಲೆಯೂ ಒಂದು. ಐತಿಹಾಸಿಕವಾಗಿ ತುಂಬಾ ಪ್ರಸಿದ್ಧಿಯನ್ನು ಪಡೆದ ಹಲವಾರು ಪಾಳೆಯಗಾರರ ಆಡಳಿತವನ್ನು ಕಂಡಿದ್ದ ದಾವಣಗೆರೆ ೧೯೯೭ರಲ್ಲಿ ಜಿಲ್ಲೆಯಾಗಿ ಮಾರ್ಪಟ್ಟಿತು. ೧೯೯೭ರಲ್ಲಿ ಕರ್ನಾಟಕ ರಾಜ್ಯವು ಜಿಲ್ಲೆಗಳನ್ನು ಮರು ವಿಂಗಡಿಸಿದಾಗ ಹರಪನಹಳ್ಳಿಯು ದಾವಣಗೆರೆ ಜಿಲ್ಲೆಯ ಪಾಲಾಯಿತು. ಹಾಗೆಯೇ ಶಿವಮೊಗ್ಗದ ಚನ್ನಗಿರಿ ಮತ್ತು ಹೊನ್ನಾಳಿ ತಾಲೂಕುಗಳು ಸಹ ದಾವಣಗೆರೆ ಜಿಲ್ಲೆಯಲ್ಲಿ ವಿಲೀನಗೊಂಡವು. ಮೊದಲಿನ ಚಿತ್ರದುರ್ಗ ಜಿಲ್ಲೆಯ ಹರಿಹರ, ಜಗಳೂರು, ದಾವಣಗೆರೆಗಳನ್ನು ಸೇರಿಸಿ ಒಟ್ಟು ೬ ತಾಲೂಕುಗಳನ್ನೊಳಗೊಂಡ ಜಿಲ್ಲೆಯಾಗಿ ದಾವಣಗೆರೆ ಮಾರ್ಪಟ್ಟಿತು.

ದಾವಣಗೆರೆ ಜಿಲ್ಲೆಯು ಉತ್ತರ ಪೂರ್ವದಲ್ಲಿ ಬಳ್ಳಾರಿ ಜಿಲ್ಲೆ, ದಕ್ಷಿಣ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ, ಜಿಲ್ಲೆಯ ಪಶ್ಚಿಮೋತ್ತರದಲ್ಲಿ ಹಾವೇರಿ ಜಿಲ್ಲೆ, ದಕ್ಷಿಣದ ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಸುತ್ತುವರೆಯಲ್ಪಟ್ಟಿದೆ. ಜಿಲ್ಲೆಯ ದಾವಣಗೆರೆ ತಾಲೂಕಿನಲ್ಲಿ ಮಾಯಕೊಂಡದಿಂದ ಅಣಜಿಯವರೆಗೆ ಅಷ್ಟು ಎತ್ತರವಲ್ಲದ ಗುಡ್ಡದ ಸಾಲುಗಳು ಹಬ್ಬಿವೆ. 'ಈ ತಾಲೂಕಿನಲ್ಲಿರುವ ಬೆಟ್ಟದ ಉದ್ದವು ಸುಮಾರು ೯೮೩ ಕಿಲೋಮೀಟರಗಳಷ್ಟಿದೆ.'[1]

ಹೊನ್ನಾಳಿ ತಾಲೂಕಿನಲ್ಲಿ ದಕ್ಷಿಣದಿಂದ ಉತ್ತರಕ್ಕೆ ಬೋಳು ಬೆಟ್ಟದ ಸಾಲುಗಳು ಕಂಡುಬರುತ್ತವೆ. ಪ್ರಾಯಶಃ ಹಿಂದೆ ದಟ್ಟವಾದ ಕಾಡನ್ನು ಹೊಂದಿರಬಹುದಾಗಿದ್ದ ಈ ಬೆಟ್ಟಗಳು ಇಂದು ಬೋಳು ಬೋಳಾಗಿ ಕಂಡುಬರುತ್ತವೆ. ಈ ಬೆಟ್ಟಗಳಲ್ಲಿ ಅತೀ ಎತ್ತರದ ಬೆಟ್ಟವೆಂದರೆ ೧೦೩೧ ಮೀಟರ್‌ಗಳಷ್ಟಿದೆ. ಇದರೊಂದಿಗೆ ಕುದುರೆಕೊಂಡದ ಬೆಟ್ಟ, ಹಾಲಸ್ವಾಮಿ ಬೆಟ್ಟ ಸಾಲುಗಳು ಕಂಡುಬರುತ್ತಿದ್ದು ಅವು ಕಲ್ವರಂಗನ ಬೆಟ್ಟದಷ್ಟು ಎತ್ತರವಿಲ್ಲ.

ಚನ್ನಗಿರಿ ತಾಲೂಕಿನ ದಕ್ಷಿಣ ಹಾಗೂ ಪಶ್ಚಿಮದಲ್ಲಿ ಸೂಳೆಕೆರೆಯಿಂದ ಬಸವಾಪಟ್ಟಣದ ಕಡೆ ಹಾಗೂ ದಾವಣಗೆರೆಯಿಂದ ಚನ್ನಗಿರಿಯ ಕಡೆ ಬೆಟ್ಟದ ಸಾಲುಗಳು ಹಬ್ಬಿವೆ.

ಹರಪನಹಳ್ಳಿ ತಾಲೂಕಿನಲ್ಲಿ ಬಳ್ಳಾರಿಯ ಹಡಗಲಿ ಕಡೆಯಿಂದ ಸಾಗಿಬರುವ ಗುಡ್ಡವು ಕಲ್ಲಹಳ್ಳಿಯಿಂದ ಮುಂದುವರಿದು ತೆಲಗಿ, ಹರಪನಹಳ್ಳಿಯ ಕಡೆ ಸಾಗುತ್ತದೆ. ನೀಲ್ಗುಂದ ಬೆಟ್ಟವು ಉಚ್ಚಂಗಿದುರ್ಗದ ಕಡೆ ಹಬ್ಬಿರುವುದನ್ನು ಕಾಣಬಹುದು. 'ಕಲ್ಲಹಳ್ಳಿಯ ಬೆಟ್ಟದ ಎತ್ತರ ೮೫೩ ಮೀಟರಗಳಷ್ಟಿದೆ.'[2]

ಹರಿಹರ ತಾಲೂಕಿನಲ್ಲಿ ಮಲೆಬೆನ್ನೂರು ಬಳಿ ಕುಮಾರನಹಳ್ಳಿಯ ಬಳಿಯಿಂದ ಗುಡ್ಡದ ಸಾಲು ಪ್ರಾರಂಭಗೊಳ್ಳುತ್ತದೆ. ಇದರೊಂದಿಗೆ ಐರಣಿ ಬೆಟ್ಟದ ಸಾಲು, ಬೇವಿನಹಳ್ಳಿ ಬೆಟ್ಟ, ಬಾತಿ ಬೆಟ್ಟದ ಸಾಲು, ಕೊಂಡಜ್ಜಿ ಬೆಟ್ಟದ ಸಾಲುಗಳನ್ನು ಕಾಣುತ್ತೇವೆ.

ಜಗಳೂರು ತಾಲೂಕಿನಲ್ಲಿ ವಾಯವ್ಯದ ಕಡೆ ಚಿಕ್ಕಪುಟ್ಟ ಬೆಟ್ಟದ ಸಾಲುಗಳು ಕಂಡುಬರುತ್ತವೆ. ಇವುಗಳೊಂದಿಗೆ ಕೊಡತ ಗುಡ್ಡ, ಹಾಲೇಕಲ್ಲು ಬೆಟ್ಟದ ಶ್ರೇಣಿ, ಕೊಣಚಗಲ್ಲು ರಂಗನಾಥಸ್ವಾಮಿ ಬೆಟ್ಟ, ಉರಲುಕಟ್ಟೆ ಗುಡ್ಡ, ಮಲೆ ಮಾಚಿಕೆರೆ ಬೆಟ್ಟ, ಮರೇನಹಳ್ಳಿ ಕಬ್ಬಿಣದ ಬೆಟ್ಟ, ಅಣಬೂರು ಗುಡ್ಡ, ಗುತ್ತಿದುರ್ಗದ ಬೆಟ್ಟ, ಗುರುಸಿದ್ದಾಪುರ ಬೆಟ್ಟ, ಕಣಕುಪ್ಪೆ ಬೆಟ್ಟ ಸಾಲುಗಳನ್ನು ಕಾಣಬಹುದು.

ಜಿಲ್ಲೆಯಲ್ಲಿ ಹಲವಾರು ಖನಿಜಗಳು ದೊರೆಯುತ್ತಿದ್ದು ಅವುಗಳಲ್ಲಿ ಪ್ರಮುಖವಾಗಿ ದಾವಣಗೆರೆ ತಾಲೂಕಿನ ಮಾಯಕೊಂಡದ ಬಳಿ ಗಟ್ಟಿ ಎಳೆಯ ಕಲ್ನಾರು, ಅಣಜಿ, ಗುಮ್ಮನೂರಿನ ಬಳಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು, ದೇವರ ಬೆಳಕೆರೆ ಬಳಿ ಸುಣ್ಣದ ಕಲ್ಲು ದೊರೆಯುತ್ತವೆ.

ಹೊನ್ನಾಳಿ ತಾಲೂಕಿನಲ್ಲಿ ದೊರೆಯುವ ಬೆಣಚುಕಲ್ಲು ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಹೊನ್ನಾಳಿಗೆ ೨೨ ಕಿ.ಮೀ. ದೂರದಲ್ಲಿರುವ ಕುದುರೆಕೊಂಡ ಬೆಟ್ಟದಲ್ಲಿ ಬಂಗಾರದ ನಿಕ್ಷೇಪವಿದ್ದು ಹಿಂದೆ ಇಲ್ಲಿ ದೇಶಿ ಮಾದರಿಯಲ್ಲಿ ಬಂಗಾರದ ಗಣಿಗಾರಿಕೆ ನಡೆಯುತ್ತಿದ್ದುದಾಗಿ ತಿಳಿದುಬರುತ್ತದೆ. ಇವುಗಳೊಂದಿಗೆ ಇಲ್ಲಿ ಬಳಪ ಹಾಗೂ ಸುಣ್ಣದ ಕಲ್ಲು ಸಹ ದೊರೆಯುತ್ತದೆ.

'ಹರಪನಹಳ್ಳಿ ತಾಲೂಕಿನ ಕೆ ಕಲ್ಲಹಳ್ಳಿ ಬಳಿ ಕಬ್ಬಿಣ ಹಾಗೂ ಮ್ಯಾಂಗನೀಸ್ ನಿಕ್ಷೇಪವಿದ್ದು ಹಿಂದೆ ಕೆ ಕಲ್ಲಹಳ್ಳಿಯ ಮುದ್ದೆಕಂಬಾರರು ಸಾಂಪ್ರದಾಯಿಕವಾಗಿ ಕಬ್ಬಿಣ ತಯಾರಿಸುತ್ತಿದ್ದುದಾಗಿ ತಿಳಿದುಬರುತ್ತದೆ'[೮] ಜೊತೆಗೆ ಬಳಪದ ಕಲ್ಲು ಸಹ ಇಲ್ಲಿ ದೊರೆಯುತ್ತದೆ. ಈ ತಾಲೂಕಿನ ಕೊಂಗನ ಹೊಸೂರಿನಲ್ಲಿ ಚಿನ್ನದ ನಿಕ್ಷೇಪ ಕಂಡುಬಂದಿದೆ. ಹರಪನಹಳ್ಳಿಯ ಹತ್ತಿರದಲ್ಲಿ ತಾಮ್ರದ ನಿಕ್ಷೇಪವೂ ಕಂಡುಬಂದಿದೆ. ಈ ಜಿಲ್ಲೆಯಲ್ಲಿ ಸ್ವಲ್ಪಮಟ್ಟಿಗೆ ಕಬ್ಬಿಣ, ಮ್ಯಾಂಗನೀಸ್, ಚಿನ್ನದ ನಿಕ್ಷೇಪ, ತಾಮ್ರದ ನಿಕ್ಷೇಪ ಹಾಗೂ ಸುಣ್ಣದ ಕಲ್ಲು, ಬಳಪದ ಕಲ್ಲು, ಕಲ್ನಾರು ಮುಂತಾದ ನಿಕ್ಷೇಪಗಳು ಕಂಡುಬರುತ್ತವೆ

ಜಿಲ್ಲೆಯಲ್ಲಿ ಅಲ್ಪ ಪ್ರಮಾಣದ ಅರಣ್ಯ ಪ್ರದೇಶವಿದ್ದು ಬಹುತೇಕ ಅರಣ್ಯವು ಕುರುಚಲು ಕಾಡಿನಿಂದ ಕೂಡಿದೆ. ಜಗಳೂರು ತಾಲೂಕಿನಲ್ಲಿ ಕುರುಚಲು ಕಾಡನ್ನು ಮಾತ್ರ ಕಾಣಬಹುದು.

ಜಿಲ್ಲೆಯಲ್ಲಿ ಒಟ್ಟು ಆರು ತಾಲೂಕುಗಳಿದ್ದು ತಾಲೂಕಿನಿಂದ ತಾಲೂಕಿಗೆ ವಿಭಿನ್ನ ಗುಣದ ಭೂಪ್ರದೇಶ, ಹವಾಗುಣಗಳನ್ನು ಕಾಣಬಹುದು. ದಾವಣಗೆರೆ ತಾಲೂಕು ಹೆಚ್ಚು ಗುಡ್ಡಬೆಟ್ಟಗಳಿಲ್ಲದ ಬಯಲು ಪ್ರದೇಶದಿಂದ ಕೂಡಿದೆ. ಈ ತಾಲೂಕಿನಲ್ಲಿ ಶೇ. ೭೫ರಷ್ಟು ಕಪ್ಪುಮಣ್ಣು ಕಂಡುಬಂದರೆ ಶೇ. ೨೫ರಷ್ಟು ಕೆಂಪುಮಣ್ಣು ಕಂಡುಬರುತ್ತದೆ. ಹೊನ್ನಾಳಿ ತಾಲೂಕಿನಲ್ಲಿ ಜೇಡಿಮಣ್ಣು, ಮರಳು ಮಿಶ್ರಿತ ಜೇಡಿಮಣ್ಣು ಹಾಗೂ ಕೆಂಪುಬಣ್ಣದ ಮಣ್ಣು ಹೊಂದಿರುವ ಭೂಮಿ ಕಂಡುಬರುತ್ತದೆ. ಹರಪನಹಳ್ಳಿಯು ಕೆಂಪು ಹಾಗೂ ಕಪ್ಪು ಜೇಡಿಮಣ್ಣಿನ ಭೂಪ್ರದೇಶವನ್ನು ಕಾಣುತ್ತೇವೆ. ಚನ್ನಗಿರಿ ತಾಲೂಕಿನ ಸೂಳೆಕೆರೆಯ ವಾಯವ್ಯ ಉತ್ತರದಲ್ಲಿ ಫಲವತ್ತಾದ ಕಪ್ಪುಮಣ್ಣು ಕಂಡುಬಂದರೆ ದಕ್ಷಿಣದಲ್ಲಿ ಕಲ್ಲುಮಿಶ್ರಿತ ಕೆಂಪುಮಣ್ಣು ಕಂಡುಬರುತ್ತದೆ. ಉಳಿದ ಬಹುತೇಕ ಪ್ರದೇಶವು ಕೆಂಪು ಮಣ್ಣಿನಿಂದ ಕೂಡಿದೆ. ಹರಿಹರ ತಾಲೂಕಿನಲ್ಲಿ ಕೆಂಪು ಹಾಗೂ ಕಪ್ಪು ಮಿಶ್ರಿತ ಭೂಮಿ ಕಂಡುಬರುತ್ತದೆ. ಅದೇ ರೀತಿ ಜಗಳೂರು ತಾಲೂಕು ಸ್ವಲ್ಪ ಭಾಗ ಏರು ತಗ್ಗುಗಳಿಂದ ಕೂಡಿದ ಮೈದಾನ ಪ್ರದೇಶ ಹೊಂದಿದ್ದು ಶೇ. ೨೫ರಷ್ಟು ಕಪ್ಪುಮಣ್ಣಿನ ಭೂಮಿ ಕಂಡುಬರುತ್ತದೆ. ಇನ್ನುಳಿದ ಈ ತಾಲೂಕಿನ ಭೂಮಿ ಅಷ್ಟೇನೂ ಫಲವತ್ತಲ್ಲದ ಮರಳು ಮಿಶ್ರಿತ ಕೆಂಪುಮಣ್ಣಿನಿಂದ ಕೂಡಿದ ಭೂಮಿ ಇದ್ದು ವಾಯವ್ಯದಲ್ಲಿ ಕಣಿವೆ ಪ್ರದೇಶಗಳು ಕಂಡುಬರುತ್ತವೆ.

ಈ ಜಿಲ್ಲೆಯ ಆರು ತಾಲೂಕುಗಳಲ್ಲಿ ಚನ್ನಗಿರಿ, ದಾವಣಗೆರೆ ಹಾಗೂ ಹೊನ್ನಾಳಿ, ಹರಿಹರದ ಬಹುತೇಕ ಭೂಮಿಗಳಲ್ಲಿ ಕಬ್ಬು, ಬಾಳೆ, ಭತ್ತ, ಅಡಕೆ, ತೆಂಗು, ರಾಗಿ, ಮುಸುಕಿನ ಜೋಳ, ಜೋಳ ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆ. ಇನ್ನುಳಿದ ಹರಪನಹಳ್ಳಿಯ

ಕೆಲವು ಭಾಗಗಳಲ್ಲಿ ಕೊಳವೆಬಾವಿ ಆಧಾರಿತ ನೀರಿನಿಂದ ಶೇಂಗಾ, ಕಬ್ಬು, ಜೋಳ, ಮುಸುಕಿನ ಜೋಳ, ನವಣೆ, ರಾಗಿ, ದ್ವಿದಳ ಧಾನ್ಯಗಳು ಮುಂತಾದವುಗಳನ್ನು ಬೆಳೆದರೆ, ತುಂಗಭದ್ರಾ ನದಿ ದಂಡೆಗೆ ಹೊಂದಿಕೊಂಡ ಭೂಮಿಗಳು ನದಿಯ ನೀರನ್ನು ಏತ ನೀರಾವರಿ ಪದ್ಧತಿಯಲ್ಲಿ ತಮ್ಮ ಭೂಮಿಗೆ ಹಾಯಿಸಿ ಕಬ್ಬು, ಭತ್ತ, ಹೂವು, ಹಣ್ಣು, ಎಣ್ಣೆಕಾಳು ಬೀಜಗಳು ಇತ್ಯಾದಿಗಳನ್ನು ಬೆಳೆಯುತ್ತಾರೆ. ಉಳಿದಂತೆ ಒಣ ಬೇಸಾಯದ ಪದ್ಧತಿಯ ಬೆಳೆಗಳನ್ನು ಬೆಳೆಯುತ್ತಾರೆ. ಜಗಳೂರಿನ ಬಹುತೇಕ ಭೂಮಿ ಮಳೆಯಾಶ್ರಿತ ನೀರಾವರಿ ಪದ್ಧತಿಯನ್ನು ಹೊಂದಿದ ಭೂಮಿಯಿದ್ದು ಒಣ ಬೇಸಾಯ ಪದ್ಧತಿಯ ಬೆಳೆಗಳನ್ನು ಬೆಳೆಯುತ್ತಾರೆ.

ನದಿಗಳು: ದಾವಣಗೆರೆ ಜಿಲ್ಲೆಯಲ್ಲಿ ಹರಿಯುವ ಪ್ರಮುಖ ನದಿಯಂದರೆ ತುಂಗಭದ್ರಾ ನದಿಯಾಗಿದೆ. ಉಳಿದಂತೆ ಚಿಕ್ಕ ನದಿಗಳಾದ ಹರಿದ್ರಾವತಿ, ಚಿಕ್ಕ ಹಗರಿ ಹಾಗೂ ಚಿನ್ನ ಹಗರಿ ನದಿಗಳು ಕಂಡುಬರುತ್ತವೆ. ಈ ನದಿಗಳಲ್ಲದೆ ಜಿಲ್ಲೆಯಾದ್ಯಂತ ಕೆರೆ ಕುಂಟೆಗಳು ನೀರನ್ನು ಒದಗಿಸುತ್ತವೆ. ತುಂಗಭದ್ರಾ ನದಿಯು ಹೊನ್ನಾಳಿ, ಹರಿಹರ, ಹರಪನಹಳ್ಳಿ, ಚನ್ನಗಿರಿ ಈ ನಾಲ್ಕು ತಾಲೂಕುಗಳಲ್ಲಿ ಹರಿದುಬರುತ್ತದೆ. ದಾವಣಗೆರೆ ತಾಲೂಕಿಗೆ ಹತ್ತಿರದಲ್ಲಿ ಈ ನದಿಯು ಹರಿಯುತ್ತದೆ. ಜಗಳೂರು ಮಾತ್ರ ಈ ನದಿ ನೀರಿನಿಂದ ವಂಚಿತವಾಗಿದೆ. ಲಕ್ಕವಳ್ಳಿಯ ಭದ್ರಾ ಅಣೆಕಟ್ಟೆಯಿಂದ ನೀರನ್ನು ಹೊತ್ತು ಎರಡು ಕಾಲುವೆಗಳು ಈ ಜಿಲ್ಲೆಗೆ ತರುತ್ತವೆ. ಹೀಗಾಗಿ ಈ ಎರಡು ಕಾಲುವೆಗಳ ನೀರು ವ್ಯವಸಾಯಕ್ಕೆ ಹಾಗೂ ಕುಡಿಯುವ ನೀರನ್ನು ಒದಗಿಸುತ್ತವೆ. ಲಕ್ಕವಳ್ಳಿ ಜಲಾಶಯದಿಂದ ಈ ಜಿಲ್ಲೆಯ ೬೦,೦೦೦ ಹೆಕ್ಟೇರ್ ಎಕರೆ ಭೂಮಿ ನೀರನ್ನು ಕಾಣುವಂತಾಗಿದೆ. ಅದೇ ರೀತಿ ದೇವರ ಬೆಳಕೆರೆಯಲ್ಲಿ ಶಾಗಲಿ ಹಳ್ಳ ಹರಿದ್ರಾ ನದಿಗಳ ನೀರಿಗೆ ಅಡ್ಡವಾಗಿ ಅಣೆಕಟ್ಟನ್ನು ನಿರ್ಮಿಸಿ ಸುಮಾರು ೧೩೩೧೩ ಎಕರೆಗೆ ನೀರುಣಿಸಲಾಗುತ್ತಿದೆ. ಚನ್ನಗಿರಿಗೆ ೨೦ ಕಿ.ಮೀ. ದೂರದಲ್ಲಿ ಕ್ರಿಶ. ೧೦-೧೧ನೇ ಶತಮಾನದಲ್ಲಿ ನಿರ್ಮಿಸಿದ ಅತೀ ದೊಡ್ಡ ಸೂಳೆಕೆರೆಯಿದ್ದು (ಶಾಂತಿಸಾಗರ) ಇದರ ನಾಲೆಗಳಿಂದ ೧೮೭೨.೫ ಹೆಕ್ಟೇರ್ ಭೂಮಿಯ ಅಚ್ಚುಕಟ್ಟು ಪ್ರದೇಶ ನೀರನ್ನು ಕಾಣುತ್ತಿದೆ.

ತುಂಗಭದ್ರಾ ನದಿಯು ಹೊನ್ನಾಳಿಯ ಮಳಲಿ ಗ್ರಾಮದಲ್ಲಿ ತಾಲೂಕನ್ನು ಪ್ರವೇಶಿಸುತ್ತದೆ. ಈ ನದಿಯು ಹೊನ್ನಾಳಿ ಹಾಗೂ ಹಿರೇಕೆರೂರು ತಾಲೂಕುಗಳನ್ನು ಬೇರ್ಪಸುತ್ತದೆ. ಹರಿಹರ ಹಾಗೂ ಹಾವೇರಿ ಜಿಲ್ಲೆಯನ್ನು ಬೇರ್ಪಡಿಸುವ ಗಡಿಯಾಗಿ ಈ ನದಿಯಿದೆ. ಅದೇ ರೀತಿ ಹರಪನಹಳ್ಳಿ ತಾಲೂಕು ಹಾಗೂ ಗದಗ, ಬಳ್ಳಾರಿ ಜಿಲ್ಲೆಗಳನ್ನು ಈ ನದಿ ಬೇರ್ಪಡಿಸುತ್ತದೆ. ಮುಖ್ಯವಾಗಿ ದಾವಣಗೆರೆ ಜಿಲ್ಲೆಯನ್ನು ಅದಕ್ಕೆ ಹೊಂದಿಕೊಂಡಿರುವ ಇತರೆ ಜಿಲ್ಲೆಗಳನ್ನು ಬೇರ್ಪಡಿಸುವ ಗಡಿಯಾಗಿ ಈ ನದಿಯಿದೆ. ನದಿಗಳಲ್ಲದೆ ಮುಖ್ಯವಾಗಿ ನೀರುಣಿಸುವ ಕೆರೆಗಳು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಂಡುಬರುತ್ತವೆ. ದಾವಣಗೆರೆ ತಾಲೂಕಿನಲ್ಲಿ ೩೮, ಹೊನ್ನಾಳಿ ತಾಲೂಕಿನಲ್ಲಿ

೧೦೮, ಹರಪನಹಳ್ಳಿ ತಾಲೂಕಿನಲ್ಲಿ ೭೦, ಚನ್ನಗಿರಿ, ಹರಿಹರ, ಜಗಳೂರುಗಳಲ್ಲಿಯೂ ನೂರಾರು ಕೆರೆಗಳು ಕಂಡುಬರುತ್ತವೆ.

ದಾವಣಗೆರೆ ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳುವ ತಾಲೂಕೆಂದರೆ ಮಲೆನಾಡಿನ ಸೆರಗಿಗೆ ಅಂಟಿಕೊಂಡಿರುವ ಚನ್ನಗಿರಿ ತಾಲೂಕಾಗಿದೆ. ಈ ತಾಲೂಕಿನಲ್ಲಿ ವಾರ್ಷಿಕವಾಗಿ ೭೪೯.೭೫ ಮಿಲಿ ಮೀಟರ್ ಮಳೆಯಾಗುತ್ತದೆಂದು ಅಂದಾಜಿಸಲಾಗಿದೆ. ಆದರೆ, ಜಗಳೂರಿನಲ್ಲಿ ತಾಲೂಕಿನಲ್ಲಿ ಕೇವಲ ವಾರ್ಷಿಕವಾಗಿ ೫೫೦.೦೦ ಮಿಲಿ ಮೀಟರ್ ಮಳೆಯಾಗುತ್ತದೆಂದು ಅಂದಾಜಿಸಲಾಗಿದೆ. ಇನ್ನುಳಿದಂತೆ ಹೊನ್ನಾಳಿ ತಾಲೂಕಿನಲ್ಲಿ ೭೪೧.೮೪, ಹರಿಹರ ತಾಲೂಕಿನಲ್ಲಿ ೬೩೪.೬೦, ದಾವಣಗೆರೆ ತಾಲೂಕಿನಲ್ಲಿ ೬೩೯.೯೦, ಹರಪನಹಳ್ಳಿ ತಾಲೂಕಿನಲ್ಲಿ ೭೩೦.೨೯ ಮಿಲಿ ಮೀಟರ್ ಮಳೆ ಯಾಗುತ್ತದೆಂದು ಹವಾಮಾನ ಇಲಾಖೆಯ ವರದಿಗಳು ತಿಳಿಸುತ್ತವೆ. ಆದರೆ ಇತ್ತೀಚೆಗೆ ಈ ಪ್ರಮಾಣ ಇನ್ನೂ ಕಡಿಮೆಯಾಗಿದೆ. ದಾವಣಗೆರೆ ಜಿಲ್ಲೆಯು ವ್ಯಾಪಾರ ಕೇಂದ್ರವಾಗಿ ಬೆಳೆದುಬಂದಿದೆ. ಹತ್ತಿ ವ್ಯಾಪಾರ ಹಾಗೂ ಹತ್ತಿ ಬಟ್ಟೆ ತಯಾರಿಕೆಯಲ್ಲಿ ಮೊದಲಿಗೆ ಈ ಜಿಲ್ಲೆಯು ಕರ್ನಾಟಕಕ್ಕೆ ಪ್ರಥಮಸ್ಥಾನದಲ್ಲಿತ್ತು. ಇಂದು ಮುಸುಕಿನ ಜೋಳ ಈ ಜಿಲ್ಲೆಯ ಪ್ರಮುಖ ಬೆಳೆಯಾಗಿದೆ.

೨.೨.೧. ಕುಟುಂಬಗಳು

೨೦೦೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಕುಟುಂಬಗಳು ೧,೦೨,೩೨,೧೩೩ ಎಂದು ಗುರುತಿಸಲಾಗಿದೆ. ಇದರಲ್ಲಿ ದಾವಣಗೆರೆ ಜಿಲ್ಲೆಯ ಒಟ್ಟು ಕುಟುಂಬಗಳ ಸಂಖ್ಯೆಯು ೩,೭೩,೪೮೪ರಷ್ಟಿದೆ.[೯] ಅಂದರೆ ಕರ್ನಾಟಕ ರಾಜ್ಯದ ಒಟ್ಟು ಕುಟುಂಬಗಳಿಗೆ ಹೋಲಿಸಿದರೆ ದಾವಣಗೆರೆ ಜಿಲ್ಲೆಯು ಶೇ. ೩.೬೫ರಷ್ಟು ಕುಟುಂಬಗಳನ್ನು ಒಳಗೊಂಡಿದೆ. ಇದರಲ್ಲಿ ಜಿಲ್ಲೆಯ ತಾಲೂಕುವಾರು ಕುಟುಂಬಗಳ ಸಂಖ್ಯೆಯನ್ನು ನೋಡಿದರೆ ದಾವಣಗೆರೆ ಜಿಲ್ಲೆಯ ೩೧.೦೮೪ ಕುಟುಂಬಗಳನ್ನು ಒಳಗೊಂಡಿದ್ದರೆ ಹರಿಹರ ತಾಲೂಕು ೨೮,೮೭೧ ಕುಟುಂಬಗಳನ್ನು, ಹರಪನಹಳ್ಳಿ ತಾಲೂಕು ೭೦,೭೧೯ ಕುಟುಂಬಗಳನ್ನು, ಹೊನ್ನಾಳಿ ತಾಲೂಕು ೪೨,೦೯೮ ಕುಟುಂಬಗಳನ್ನು, ಚನ್ನಗಿರಿ ತಾಲೂಕು ೧,೧೭,೨೩೩ ಕುಟುಂಬಗಳನ್ನು, ಜಗಳೂರು ತಾಲೂಕು ೩೫,೨೧೮ ಕುಟುಂಬಗಳನ್ನು ಹೊಂದಿದೆ.

೨.೨.೨. ಜನಸಂಖ್ಯೆ

'೨೦೦೧ರ ಜನಗಣತಿ ಪ್ರಕಾರ ಕರ್ನಾಟಕವು ಒಟ್ಟು ೫,೨೮,೫೦,೫೬೨ ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಪುರುಷರು ೨,೬೮,೯೮,೯೧೮ರಷ್ಟಿದ್ದರೆ, ಮಹಿಳೆಯರು ೨,೫೯,೫೧,೬೪೪ ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯ(೨೦೦೧) ಒಟ್ಟು ಜನಸಂಖ್ಯೆಯು ೮೫,೬೩,೯೩೦ರಷ್ಟಿದ್ದು ಪುರುಷರು ೪೩,೩೯,೧೪೫ ಹಾಗೂ ಮಹಿಳೆಯರು ೪೨,೨೪,೧೮೫ರಷ್ಟಿದ್ದಾರೆ. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ

(೨೦೦೧) ಒಟ್ಟು ಜನಸಂಖ್ಯೆಯು ೩೪,೬೩,೯೮೬ರಷ್ಟಿದ್ದು, ಪುರುಷರು ೧೭,೫೬,೨೩೮ರಷ್ಟಿದ್ದರೆ ಮಹಿಳೆಯರು ೧೭,೦೭,೭೪೮ರಷ್ಟಿದ್ದಾರೆ.

೨೦೦೧ರ ಜನಗಣತಿ ಪ್ರಕಾರ ದಾವಣಗೆರೆ ಜಿಲ್ಲೆಯ ಒಟ್ಟು ಜನಸಂಖ್ಯೆಯು ೧೭,೯೦,೯೫೨ ರಷ್ಟಿದ್ದು ಇದರಲ್ಲಿ ಪುರುಷರು ೯,೧೭,೭೦೫ರಷ್ಟಿದ್ದಾರೆ ಹಾಗೂ ಮಹಿಳೆಯರು ೮,೭೩,೨೪೭ ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯ ಜನಸಂಖ್ಯೆಯು ಒಟ್ಟು ೩,೭೪,೨೧೮ರಷ್ಟಿದೆ. ಇದರಲ್ಲಿ ಪುರುಷರು ೧,೮೮,೫೩೬ ಹಾಗೂ ಮಹಿಳೆಯರು ೧,೮೫,೬೮೨ರಷ್ಟಿದ್ದಾರೆ.

ಪರಿಶಿಷ್ಟ ಪಂಗಡದ ಜನಸಂಖ್ಯೆಯು ಜಿಲ್ಲೆಯಲ್ಲಿ ಒಟ್ಟು ೩,೬೪,೬೩೮ರಷ್ಟಿದ್ದು ಪುರುಷರು ೧,೮೩,೬೬೨ ಹಾಗೂ ಮಹಿಳೆಯರು ೧,೮೦,೯೭೬ರಷ್ಟಿದ್ದಾರೆ.'[೧೦] ಅಂದರೆ ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೇವಲ ಶೇಕಡಾ ೧೦.೫೩ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡಾ ೫.೩೦ರಷ್ಟಿದ್ದರೆ ಮಹಿಳೆಯರ ಪ್ರಮಾಣ ಶೇಕಡಾ ೫.೨೩ರಷ್ಟಿದೆ. ೨೦೦೧ರ ಜನಗಣತಿ ಪ್ರಕಾರ ತಾಲೂಕುವಾರು ಮತ್ತು ಜಾತಿವಾರು ಜನಸಂಖ್ಯೆಯು ಈ ಕೆಳಗಿನಂತಿದೆ.

ಜಿಲ್ಲೆಯ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯಲ್ಲಿ ತಾಲೂಕುವಾರು ಜನಸಂಖ್ಯೆಯನ್ನು ನೋಡಿದರೆ ದಾವಣಗೆರೆ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯು ಶೇಕಡಾ ೩.೫೮ರಷ್ಟಿದೆ. ಇದರಲ್ಲಿ ಪುರುಷರು ಶೇಕಡಾ ೧.೮೧ರಷ್ಟು ಹಾಗೂ ಮಹಿಳೆಯರ ಜನಸಂಖ್ಯಾ ಪ್ರಮಾಣವು ಶೇಕಡಾ ೧.೭೭ರಷ್ಟಿದೆ.

ಚನ್ನಗಿರಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ, ಮೇದ, ಬೇಡ(ವಾಲ್ಮೀಕಿ) ಸಮುದಾಯಗಳು ಕಂಡುಬರುತ್ತವೆ. ಈ ತಾಲೂಕಿನಲ್ಲಿ ಹಕ್ಕಿಪಿಕ್ಕಿಗಳು ಶೇಕಡಾ ೦.೦೧ರಷ್ಟು ಜನಸಂಖ್ಯೆಯನ್ನು ಹೊಂದಿದ್ದಾರೆ, ಇದರಲ್ಲಿ ಪುರುಷರು ಶೇಕಡಾ ೦.೦೦೪ರಷ್ಟಿದ್ದರೆ ಮಹಿಳೆಯರು ಶೇಕಡಾ ೦.೦೦೬ ರಷ್ಟಿದ್ದಾರೆ.

ಮೇದ ಸಮುದಾಯವು ಈ ತಾಲೂಕಿನಲ್ಲಿ ಶೇ. ೦.೧೧ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡಾ ೦.೦೯ರಷ್ಟಿದ್ದರೆ ಮಹಿಳೆಯರ ಪ್ರಮಾಣ ಶೇಕಡಾ ೦.೦೫೧ರಷ್ಟಿದೆ. ವಾಲ್ಮೀಕಿಗಳ ಪ್ರಮಾಣವೂ ಈ ಜಿಲ್ಲೆಯಲ್ಲಿ ಕಡಿಮೆಯಾಗಿದೆ. ಜಿಲ್ಲೆಯ ಜನಸಂಖ್ಯೆಗೆ ಹೋಲಿಸಿದರೆ ಚನ್ನಗಿರಿ ತಾಲೂಕಿನ ವಾಲ್ಮೀಕಿ ಸಮುದಾಯದ ಜನಸಂಖ್ಯೆ ಪ್ರಮಾಣ ಶೇಕಡಾ ೨೭.೭೬ರಷ್ಟಿದೆ. ಇದರಲ್ಲಿ ಪುರುಷರು ಶೇಕಡಾ ೧೪.೦೫ರಷ್ಟಿದ್ದರೆ ಮಹಿಳೆಯರು ಶೇಕಡಾ ೧೩.೭೧ರಷ್ಟಿದ್ದಾರೆ.

ದಾವಣಗೆರೆ ತಾಲೂಕಿನಲ್ಲಿ ವಾಲ್ಮೀಕಿ, ಮೇದ, ಡುಂಗ್ರಿ ಗರಾಸಿಯ ಮುಂತಾದ ಪರಿಶಿಷ್ಟ ಪಂಗಡಗಳು ಕಂಡುಬರುತ್ತವೆ. ದಾವಣಗೆರೆ ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಮೇದ ಸಮುದಾಯದ ಒಟ್ಟು ಪ್ರಮಾಣವು ಶೇ. ೦.೦೮ರಷ್ಟು ಮಾತ್ರ ಇದೆ. ಇದರಲ್ಲಿ ಪುರುಷರ ಜನಸಂಖ್ಯಾ ಪ್ರಮಾಣ ಕೇವಲ ೦.೦೭ರಷ್ಟಿದೆ ಹಾಗೂ ಡುಂಗ್ರಿ ಗರಾಸಿಯಾ ಪ್ರಮಾಣ ೦.೦೪ರಷ್ಟಿದೆ. ಆದರೆ ವಾಲ್ಮೀಕಿ ಸಮುದಾಯದ ಜನಸಂಖ್ಯಾ ಪ್ರಮಾಣವು ಒಟ್ಟು ಶೇ. ೩.೫೦ರಷ್ಟಿದೆ.

ಹರಪನಹಳ್ಳಿ ತಾಲೂಕಿನಲ್ಲಿ ಮೇದ ಹಾಗೂ ವಾಲ್ಮೀಕಿಗಳ ಹೊರತಾಗಿ ಬೇರೆ ಪರಿಶಿಷ್ಟ ಪಂಗಡಗಳು ಕಂಡುಬರುವುದಿಲ್ಲ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ತಾಲೂಕಿನ ಮೇದ ಸಮುದಾಯದ ಒಟ್ಟು ಜನಸಂಖ್ಯೆ ಪ್ರಮಾಣವು ೦.೦೨ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣ ಶೇಕಡಾ ೦.೦೧ ಮತ್ತು ಮಹಿಳೆಯರ ಪ್ರಮಾಣವು ಸಹ ಶೇಕಡಾ ೦.೦೧ ಇದೆ. ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡಾ ೧೪.೪೯ ಇದೆ.

ಹರಿಹರ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ರಾಜಗೊಂಡ, ಮೇದ ಮತ್ತು ವಾಲ್ಮೀಕಿ ಸಮುದಾಯಗಳು ಇವೆ. ಈ ಮೂರು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದ ಪರಿಶಿಷ್ಟ ಪಂಗಡವೆಂದರೆ ರಾಜಗೊಂಡ ಸಮುದಾಯವಾಗಿದೆ. ಅಲೆಮಾರಿ ರಾಜಗೊಂಡ ಸಮುದಾಯವು ಈ ತಾಲೂಕಿನಿಂದ ಶಿವಮೊಗ್ಗಕ್ಕೆ ಹೋಗುವ ಹಾದಿಯಲ್ಲಿಯ ಬೆಳ್ಳೂಡಿ(ಹರಿಹರ ತಾಲೂಕಿನಲ್ಲಿ ಬರುವ ಒಂದು ಗ್ರಾಮ) ಹತ್ತಿರದ ಗ್ರಾಮ ವೊಂದರಲ್ಲಿ ಮಾತ್ರ ನೆಲೆ ನಿಂತಿದೆ.

ತಾಲೂಕಿನ ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವವರು ಮೇದ ಸಮುದಾಯದವರು ಇವರನ್ನು ತಾಲೂಕಿನ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಮೇದ ಸಮುದಾಯದ ಪುರುಷರ ಪ್ರಮಾಣ ಶೇಕಡಾ ೦.೦೩೭ ಹಾಗೂ ಮಹಿಳೆಯರ ಪ್ರಮಾಣ ಶೇ. ೦.೦೩೬ರಷ್ಟಿದೆ. ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯೆ ಶೇ. ೫.೮೬(೨೯,೩೪೫)ರಷ್ಟಿದೆ ಇದರಲ್ಲಿ ಪುರುಷರ ಪ್ರಮಾಣ ಶೇಕಡಾ ೨.೯೫ರಷ್ಟು ಹಾಗೂ ಮಹಿಳೆಯರ ಪ್ರಮಾಣ ಶೇಕಡಾ ೨.೯೧ರಷ್ಟಿದೆ.

ಹೊನ್ನಾಳಿ ತಾಲೂಕಿನಲ್ಲಿ ಮೇದ, ವಾಲ್ಮೀಕಿ ಸಮುದಾಯಗಳು ಮಾತ್ರ ಇವೆ. ಇವುಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆ ಹೊಂದಿದ ಸಮುದಾಯವೆಂದರೆ ಮೇದ ಸಮುದಾಯವಾಗಿದೆ. ಈ ಸಮುದಾಯದವರ ಒಟ್ಟು ಜನಸಂಖ್ಯೆ ಪ್ರಮಾಣ ಶೇ. ೦.೦೪ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರು ಶೇ.೦.೦೨ರಷ್ಟಿದ್ದರೆ ಮಹಿಳೆಯರು ೦.೦೨ರಷ್ಟಿದ್ದಾರೆ.

ಈ ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡಾ ೦೮.೨ರಷ್ಟಿದೆ, ಇದರಲ್ಲಿ ಪುರುಷರು ಶೇಕಡಾ ೪.೦೨ರಷ್ಟಿದ್ದರೆ ಮಹಿಳೆಯರು ಶೇಕಡಾ ೪.೦೦ ರಷ್ಟಿದ್ದಾರೆ.

ಜಗಳೂರು ತಾಲೂಕಿನಲ್ಲಿ ಮೇದ, ಡುಂಗ್ರಿ ಗರಾಸಿಯ, ವಾಲ್ಮೀಕಿ ಸಮುದಾಯಗಳು ಮಾತ್ರ ಇವೆ. ಇದರಲ್ಲಿ ಮೇದ ಸಮುದಾಯದ ಪ್ರಮಾಣ ಅತ್ಯಲ್ಪವೆಂದೇ ಹೇಳಬಹುದು. ಮೇದ ಸಮುದಾಯದ ಒಟ್ಟು ಜನಸಂಖ್ಯೆಯು(ಜಿಲ್ಲಾ ಜನಸಂಖ್ಯೆಗೆ ಹೋಲಿಸಿದರೆ) ಶೇ. ೦.೦೩ರಷ್ಟು ಮಾತ್ರ ಇದೆ. ಇದರಲ್ಲಿ ಪುರುಷರು ಶೇಕಡಾ ೦.೦೧ರಷ್ಟು ಇದ್ದರೆ ಮಹಿಳೆಯರು ಶೇಕಡಾ ೦.೦೨ರಷ್ಟಿದ್ದಾರೆ. ಈ ತಾಲೂಕಿನ ಪ್ರಮುಖ ಸಮುದಾಯವೆಂದು ಗುರುತಿಸುವ ಸಮುದಾಯ ವಾಲ್ಮೀಕಿ ಸಮುದಾಯವಾಗಿದೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ಸಮುದಾಯದ ಜನಸಂಖ್ಯಾ ಪ್ರಾಬಲ್ಯ ಅರ್ಥವಾಗುತ್ತದೆ. ಈ ತಾಲೂಕಿನ ವಾಲ್ಮೀಕಿ ಸಮುದಾಯವನ್ನು ಜಿಲ್ಲಾ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಶೇಕಡಾ ೨೦.೧೭ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡಾ ೧೦.೨೧ರಷ್ಟಿದೆ ಮಹಿಳೆಯರ ಪ್ರಮಾಣವು ಶೇಕಡಾ ೯.೯೬ರಷ್ಟಿದೆ.

ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ವಾಲ್ಮೀಕಿ ಸಮುದಾಯದ ಪ್ರಮಾಣವು ಶೇ. ೨೭.೦೩ರಷ್ಟಿದೆ.

ದಾವಣಗೆರೆ ಜಿಲ್ಲೆಯು ವಿವಿಧ ಜಾತಿ ಪಂಗಡಗಳನ್ನು ಒಳಗೊಂಡಿದೆ. ಈ ಜಿಲ್ಲೆಯಲ್ಲಿ ಮುಖ್ಯವಾಗಿ ಲಿಂಗಾಯಿತ, ಕುರುಬ, ಮುಸ್ಲಿಂ, ವಾಲ್ಮೀಕಿ, ಮಾದಿಗ, ಚಲುವಾದಿ, ಕಮ್ಮಾರ, ಕುಂಬಾರ, ಅಗಸ, ಬಡಿಗ, ಕ್ಷೌರಿಕ, ಕಮ್ಮಾ, ಡುಂಗ್ರಿ ಗರಾಸಿಯ, ಹಕ್ಕಿಪಿಕ್ಕಿ, ಮುಂತಾದ ಜಾತಿಗಳನ್ನು ಒಳಗೊಂಡಿದೆ. ಆದರೆ ಪ್ರಬಲ ಜಾತಿಯಾಗಿ ಲಿಂಗಾಯಿತ, ಕುರುಬ ಜಾತಿಗಳು ಕಂಡುಬರುತ್ತವೆ. ವಾಲ್ಮೀಕಿ, ಮಾದಿಗ, ಚಲುವಾದಿ ಜಾತಿಗಳು ಪ್ರಮಾಣದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದರೂ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ಜಾತಿಗಳಾಗಿವೆ. ಇನ್ನುಳಿದ ಮೇದ, ಡುಂಗ್ರಿ ಗರಾಸಿಯ, ಹಕ್ಕಿಪಿಕ್ಕಿ, ಅಗಸ, ಕ್ಷೌರಿಕ, ಕಮ್ಮಾರ, ಕುಂಬಾರ ಮುಂತಾದ ತಳ ಹಂತದ ಜಾತಿಗಳೂ ಜನಸಂಖ್ಯಾ ಪ್ರಮಾಣದಲ್ಲಿ ಹಿಂದುಳಿದವುಗಳಾಗಿದ್ದು ಆರ್ಥಿಕವಾಗಿ ಸಾಮಾಜಿಕವಾಗಿ ತುಂಬಾ ಹಿಂದುಳಿದಿವೆ.

೨.೩. ದಾವಣಗೆರೆ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ

ದಾವಣಗೆರೆ ಜಿಲ್ಲೆಯ ಒಟ್ಟು ವಿಸ್ತೀರ್ಣವು ೫,೪೯೮.೯೭ ಚದರ ಕಿಲೋ ಮೀಟರ್‌ಗಳಷ್ಟಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಈ ಜಿಲ್ಲೆಯ ಒಟ್ಟು ವಿಸ್ತೀರ್ಣವು ಶೇಕಡಾ ೪.೪೦ಗಳಷ್ಟಾಗಿದೆ. ಈ ಜಿಲ್ಲೆಯು ಆರು ತಾಲೂಕುಗಳನ್ನು ಒಳಗೊಂಡಿದೆ. ಈ ಜಿಲ್ಲೆಯ ಪ್ರತಿಯೊಂದು ತಾಲೂಕಿನ ವಿಸ್ತೀರ್ಣವು ಈ ಕೆಳಗಿನಂತಿದೆ.

ದಾವಣಗೆರೆ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಚನ್ನಗಿರಿ ತಾಲೂಕು ೧೧೭೦೮೬ ಚದರ ಕಿಲೋಮೀಟರ್‌ಗಳು (ಶೇ. ೨೧.೨೯), ದಾವಣಗೆರೆ ತಾಲೂಕು ೯೫೬೫೮ ಚದರ ಕಿಲೋಮೀಟರ್‌ಗಳು

(ಶೇ. ೧೭.೩೯), ಹರಪನಹಳ್ಳಿ ತಾಲೂಕು ೧೪೩೬.೭೨ ಚದರ ಕಿಲೋಮೀಟರ್‌ಗಳು (ಶೇ. ೨೬.೧೨), ಹರಿಹರ ತಾಲೂಕು ೪೮೪೬.೨ ಚದರ ಕಿಲೋಮೀಟರ್‌ಗಳು (ಶೇ. ೮.೮೧), ಹೊನ್ನಾಳಿ ತಾಲೂಕು ೮೮೪೭೪ ಚದರ ಕಿಲೋಮೀಟರ್‌ಗಳು (ಶೇ. ೧೬.೦೮), ಹಾಗೂ ಜಗಳೂರು ೯೬೩೫ ಚದರ ಕಿಲೋಮೀಟರ್(ಶೇ. ೧೭.೫೧)ಗಳಷ್ಟು ವಿಸ್ತೀರ್ಣ ಹೊಂದಿವೆ.

೨.೩.೧ ದಾವಣಗೆರೆ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣದ ವಿವರ


ಚನ್ನಗಿರಿ	೧೧೭೦೮೬	ಚದರ ಕಿಲೋಮೀಟರ್‌ಗಳು
ದಾವಣಗೆರೆ	೯೫೬೫೮	ಚದರ ಕಿಲೋಮೀಟರ್‌ಗಳು
ಹರಪನಹಳ್ಳಿ	೧೪೩೬೭೨	ಚದರ ಕಿಲೋಮೀಟರ್‌ಗಳು
ಹರಿಹರ	೪೮೪೬೨	ಚದರ ಕಿಲೋಮೀಟರ್‌ಗಳು
ಹೊನ್ನಾಳಿ	೮೮೪೭೪	ಚದರ ಕಿಲೋಮೀಟರ್‌ಗಳು
ಜಗಳೂರು	೯೬೩೩೫	ಚದರ ಕಿಲೋಮೀಟರ್‌ಗಳು

ದಾವಣಗೆರೆ ಜಿಲ್ಲೆಯ ಒಟ್ಟು ವಿಸ್ತೀರ್ಣಕ್ಕೆ ಹೋಲಿಸಿದರೆ ಆ ಜಿಲ್ಲೆಯ ೬ ತಾಲೂಕುಗಳಲ್ಲಿ ಅತೀ ಹೆಚ್ಚು ಭೂ ವಿಸ್ತೀರ್ಣ ಹೊಂದಿದ ತಾಲೂಕೆಂದರೆ ಹರಪನಹಳ್ಳಿ ತಾಲೂಕಾಗಿದೆ(೧೪೩೬೭೨ ಚ.ಕಿ.ಮೀ). ತರುವಾಯದ ಸ್ಥಾನ ಚನ್ನಗಿರಿ ತಾಲೂಕಿಗೆ(೧೧೭೦೮೬ ಚ.ಕಿ.ಮೀ) ಸಲ್ಲುತ್ತದೆ. ಮೂರನೇ ಸ್ಥಾನ ಜಗಳೂರು ತಾಲೂಕಿಗೆ(೯೬೩೩೫ ಚದರ ಕಿಲೋ ಮೀಟರ್‌ಗಳು) ಸಲ್ಲುತ್ತದೆ. ಹೊನ್ನಾಳಿ ತಾಲೂಕು ೮೮೪೭೪ ಚದರ ಕಿಲೋಮೀಟರ್‌ಗಳಷ್ಟಿದೆ. ಕೊನೆಯ ಸ್ಥಾನ ಹರಿಹರ ತಾಲೂಕಿಗೆ ಸಲ್ಲುತ್ತದೆ(೪೮೪೬೨ ಚ.ಕಿ.ಮೀ). ಆದರೆ ಜನಸಾಂದ್ರತೆಯನ್ನು ಗಮನಿಸಿದರೆ ಜಿಲ್ಲೆಯಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ತಾಲೂಕು ದಾವಣಗೆರೆಯಾಗಿದೆ(೧ ಚ.ಕಿ.ಮೀ.ಗೆ ೪೧೫ ರಷ್ಟು). ಅತಿ ಕಡಿಮೆ ಜನಸಾಂದ್ರತೆ ಹೊಂದಿರುವ ತಾಲೂಕು ಚನ್ನಗಿರಿ(೧೬೪)ಯಾಗಿದೆ.

೨.೪. ದಾವಣಗೆರೆ ಜಿಲ್ಲೆಯ ಸಾಕ್ಷರತೆಯ ಪ್ರಮಾಣ

೨೦೦೧ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರರ ಸಂಖ್ಯೆ ೧೦೪೫೬೨೦(ಶೇಕಡಾ ೫೮.೩೮)ರಷ್ಟಿದೆ. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇಕಡಾ ಒಂಬತ್ತರಷ್ಟು ಕಡಿಮೆ ಇದೆ. ಹೀಗಾಗಿ ಸಾಕ್ಷರತೆಯಲ್ಲಿ ಸಾಧಿಸಬೇಕಾದಷ್ಟು ಪ್ರಗತಿಯನ್ನು ಈ ಜಿಲ್ಲೆ ಸಾಧಿಸಿಲ್ಲ. ಆದರೆ ೨೦೧೧ರ ಜನಗಣತಿ ಪ್ರಕಾರ ೧೩೦೮೫೪೦ ಶೇ. ಪ್ರ. ೭೫.೭೪ರಷ್ಟು ಇದೆ. ಕಾರಣ ಇತ್ತೀಚೆಗೆ ಮಧ್ಯಾಹ್ನದ ಬಿಸಿಯೂಟ, ಸರ್ವಶಿಕ್ಷಾ ಅಭಿಯಾನ, ಕಡ್ಡಾಯ ಶಿಕ್ಷಣ ಮುಂತಾದ ಯೋಜನೆಗಳಿಂದ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ ಅಲ್ಪಮಟ್ಟಿಗೆ ಹೆಚ್ಚಾಗಿದೆಯೆಂದು ಕಂಡುಬಂದರೂ ಜಿಲ್ಲೆಯಲ್ಲಿ ಕೃಷಿ ಮತ್ತು ಕೃಷಿ ಕೂಲಿ ಮುಂತಾದ ಚಟುವಟಿಕೆಗಳ ಕಾರಣಗಳಿಗಾಗಿ ಬಹುತೇಕ ತಳವರ್ಗದ

ವೃತ್ತಚಿತ್ರ ೨.೩.೧ ಭೂವಿಸ್ತೀರ್ಣ: ಚದರ ಕಿಲೋಮೀಟರ್ ಶೇಕಡಾವಾರುಗಳಲ್ಲಿ



ಮಕ್ಕಳು ಶಾಲೆಯಿಂದ ವಂಚಿತವಾಗಿ ಶಾಲೆಯ ಹೊರಗೆ ಉಳಿಯುವುದೇ ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ನಿರ್ಲಕ್ಷಿತ ಅಲ್ಪಸಂಖ್ಯಾತ ತಳಜಾತಿ ವರ್ಗಗಳ ಮಕ್ಕಳು ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿಯುವುದೇ ಹೆಚ್ಚು. ಅದರಲ್ಲೂ ಶಾಲೆಯಿಂದ ಹೊರಗುಳಿಯುವವರಲ್ಲಿ ಹೆಣ್ಣು ಮಕ್ಕಳ ಪ್ರಮಾಣವೇ ಹೆಚ್ಚಾಗಿದೆ.

೨.೫. ಆರ್ಥಿಕ ಚಟುವಟಿಕೆಗಳು

ಜಿಲ್ಲೆಯಲ್ಲಿ ನಡೆಯುವ ಕೃಷಿ, ಕೃಷಿಕೂಲಿ ಮತ್ತು ಕೈಗಾರಿಕೆ ಚಟುವಟಿಕೆಗಳು ಹೆಚ್ಚಾಗಿ ಜರಗುತ್ತಿದೆ. ಆದರೆ, ವಿಪರ್ಯಾಸವೆಂದರೆ ತಾಂತ್ರಿಕ ಶಿಕ್ಷಣದ ಕೊರತೆ, ವೃತ್ತಿ ಪ್ರಾವೀಣ್ಯತೆಯ ಕೊರತೆ ಇತ್ಯಾದಿ ಕಾರಣಗಳಿಗಾಗಿ ಜಿಲ್ಲೆಯ ಬಹುತೇಕ ಯುವಶಕ್ತಿ ಔದ್ಯೋಗಿಕ ಚಟುಚಟಿಕೆಗಳಲ್ಲಿ ಪಾಲ್ಗೊಳ್ಳದೆ ಹೊರಗುಳಿಯಬೇಕಾಗಿದೆ. ಜನಸಾಮಾನ್ಯರು ಕೇವಲ ಕೂಲಿ ಕೆಲಸಕ್ಕೆ ಮಾತ್ರ ಸೀಮಿತ ಎನ್ನುವ ಮಟ್ಟದ ವಾತಾವರಣ ಸೃಷ್ಟಿಗೊಂಡಿದೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕರು ಉನ್ನತ ಉದ್ಯೋಗ ಅವಕಾಶಗಳಿಂದ ಹೆಚ್ಚು ವಂಚಿತರಾಗಿದ್ದಾರೆ.

ದಾವಣಗೆರೆ ಜಿಲ್ಲೆಯನ್ನು ಪ್ರಾದೇಶಿಕವಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮುಖ್ಯವಾಗಿ ಚನ್ನಗಿರಿ, ಹೊನ್ನಾಳಿ, ಹರಪನಹಳ್ಳಿ, ಜಗಳೂರು ತಾಲೂಕುಗಳು ಔದ್ಯೋಗಿಕ ಚಟುವಟಿಕೆಗಳಿಂದ ದೂರ ಉಳಿದಿವೆ. ಚನ್ನಗಿರಿ, ಹೊನ್ನಾಳಿ ತಾಲೂಕುಗಳು ನೀರಾವರಿಯಾಧಾರಿತ ಕೃಷಿ ಚಟುವಟಿಕೆಗಳಿಗೇ ಹೆಚ್ಚಿನ ಲಕ್ಷ್ಯ ವಹಿಸಿವೆ. ದಾವಣಗೆರೆ ಹಾಗೂ ಹರಿಹರ ತಾಲೂಕುಗಳಲ್ಲಿ ಕೈಗಾರಿಕಾ ಚಟುವಟಿಕೆಗಳು ಜರಗುತ್ತಿವೆ. ಹರಿಹರದಲ್ಲಿ ಕಬ್ಬಿಣ ಉಕ್ಕು ಕಾರ್ಖಾನೆ ಹಾಗೂ ಅಕ್ಕಿ ಮಿಲ್ಲುಗಳು, ಮಣ್ಣಿನಿಂದ

[illegible]



[illegible]

ಸುಟ್ಟ ಇಟ್ಟಿಗೆಗಳನ್ನು ತಯಾರಿಸುವುದಲ್ಲದೆ ಇತರ ಚಿಕ್ಕಮಟ್ಟ ಕೈಗಾರಿಕಾ ಚಟುವಟಿಕೆಗಳು ಜರಗುತ್ತಿವೆ. ಆದರೆ ಇತ್ತೀಚೆಗೆ ಕಬ್ಬಿಣ ಉಕ್ಕು ಕಾರ್ಖಾನೆ ಸ್ಥಗಿತಗೊಂಡ ತರುವಾಯ ಈ ಜಿಲ್ಲೆಯ ಶ್ರೀಸಾಮಾನ್ಯ ಕಾರ್ಮಿಕರು ಬೀದಿಗೆ ಬಿದ್ದಿರುವುದು ಕಂಡುಬರುತ್ತದೆ. ಶಾಮನೂರು ಕುಟುಂಬವು ಸಕ್ಕರೆ ಕಾರ್ಖಾನೆ ಯನ್ನು ಹರಪನಹಳ್ಳಿ ತಾಲೂಕಿನಲ್ಲಿ ಸ್ಥಾಪಿಸಿದೆ ಹಾಗೂ ಮಧ್ಯ ತಯಾರಿಕಾ ಘಟಕವನ್ನು ಸ್ಥಾಪಿಸಿದೆ. ದಾವಣಗೆರೆಯಲ್ಲಿ ಹಿಂದೆ ಹತ್ತಿ ಗಿರಣಿಗಳು ಲಾಭದಾಯಕ ಚಟುವಟಿಕೆಗಳಲ್ಲಿ ತೊಡಗಿ ಕಾರ್ಮಿಕರಿಗೆ ಕೆಲಸವನ್ನು ಕೊಡುತ್ತಿದ್ದವು. ಆದರೆ ಇಂದು ಈ ಉದ್ದಿಮೆಯೂ ರೋಗಗ್ರಸ್ತವಾಗಿಬಿಟ್ಟಿದೆ. ಹೀಗಾಗಿ ಕಾರ್ಖಾನೆಗಳನ್ನು ನೆಚ್ಚದೆ ಇತರ ಚಟುವಟಿಕೆಗಲ್ಲಿ ಶ್ರೀಸಾಮಾನ್ಯ ತೊಡಗುವಂತಾಗಿದೆ. ಅದರಲ್ಲೂ ಈ ಪ್ರದೇಶಗಳು ಹೆಚ್ಚಾಗಿ ಲಾಭಕರವಲ್ಲದ ಕೃಷಿ ಚಟುಚಟಿಕೆಗಳಲ್ಲಿ ತೊಡಗಿರುವುದನ್ನು ನೋಡಬಹುದು. ಆದರೆ ಜಗಳೂರು ತಾಲೂಕು ಮಾತ್ರ ಬಹುತೇಕ ಪಶುಪಾಲನೆ ಹಾಗೂ ಲಾಭಕರವಲ್ಲದ ಮಳೆಯಾಧಾರಿತ ಕೃಷಿ ಚಟುವಟಿಕೆಯಲ್ಲಿ ನಿರತವಾಗಿದೆ. ಪ್ರಾಥಮಿಕ ವಲಯ ಶೇಕಡಾ ೭೬.೧೮ರಷ್ಟು, ದ್ವಿತೀಯ ವಲಯ ಶೇಕಡಾ ೭.೪೩ರಷ್ಟು, ತೃತೀಯ ವಲಯ ಶೇಕಡಾ ೧೬.೯೯ರಷ್ಟಿದೆ. ರಾಜ್ಯಕ್ಕೆ ಹೋಲಿಸಿದರೆ ಈ ಪ್ರಮಾಣ ಕ್ರಮವಾಗಿ ಶೇಕಡಾ ೧೬.೯೯ರಷ್ಟಿದೆ.

ಜಿಲ್ಲೆಯ ಒಟ್ಟು ಶ್ರಮಶಕ್ತಿಯ ವಲಯವಾರು ವಿತರಣೆ ಹಾಗೂ ಆ ವಿತರಣೆಯಲ್ಲಿ ೧೯೮೧ ರಿಂದ ೧೯೯೧ರಲ್ಲಿ ಉಂಟಾದ ಬದಲಾವಣೆ ಅಭಿವೃದ್ಧಿಯ ದೃಷ್ಟಿಯಿಂದ ಅಷ್ಟೇನೂ ಅನುಕೂಲಕರ ವಾಗಿಲ್ಲ. ಪ್ರಾಥಮಿಕ ವಲಯವೆಂದರೆ ಕೃಷಿ, ಗಣಿಗಾರಿಕೆ, ಮೀನುಗಾರಿಕೆ ಮುಂತಾದ ಕಸುಬುಗಳನ್ನು ಅವಲಂಬಿಸಿರುವವರ ಪ್ರಮಾಣ ಶೇಕಡಾ ೮೭.೦೧ರಿಂದ ಶೇಕಡಾ ೮೭.೮೭ರಷ್ಟು ಏರಿಕೆಯಾಗಿದೆ. ಇದನ್ನು ಅಭಿವೃದ್ಧಿಯ ವಿಮುಖ ಚಲನೆ ಎಂದು ಹೇಳಲಾಗುತ್ತದೆ.

ತುಂಗಭದ್ರಾ ನದಿ ಜಿಲ್ಲೆಯೊಳಗೆ ಹಾದು ಹೋದರೂ ಜಿಲ್ಲೆಯ ಜಗಳೂರು ಹಾಗೂ ಹರಪನಹಳ್ಳಿಯ ಶೇ. ೬೦ರಷ್ಟು ಭಾಗವು ಕೃಷಿಗಾಗಿ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ. ನದಿಯ ದಂಡೆಯ ಮೇಲಿನ ಭಾಗದಲ್ಲಿರುವ ಕೆಲವೇ ಕೆಲವು ರೈತರು ಏತ ನೀರಾವರಿ ಹಾಗೂ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ನೀರಾವರಿ ಮಾಡಿಕೊಳ್ಳುವರಾದರೂ ರಾಜ್ಯದ ವಿದ್ಯುತ್ ಅಭಾವದಿಂದಾಗಿ ಪಂಪ್‌ಸೆಟ್‌ಗಳು ಸಹ ಸರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ಒಟ್ಟಾರೆಯಾಗಿ ಈ ಎಲ್ಲ ಚಟುವಟಿಕೆಗಳನ್ನು ಗಮನಿಸಿದರೆ ಜಿಲ್ಲೆಯ ಹರಪನಹಳ್ಳಿ ಹಾಗೂ ಜಗಳೂರು ತಾಲೂಕುಗಳು ಆರ್ಥಿಕವಾಗಿ ಹಿಂದುಳಿದಿರುವುದನ್ನು ಸೂಚಿಸುತ್ತವೆ. ಯಾವ ಪ್ರದೇಶವು ಕೇವಲ ಪ್ರಾಥಮಿಕ ವಲಯವನ್ನು ಹೆಚ್ಚು ಅವಲಂಬಿಸಿರುತ್ತದೆಯೋ ಆ ಪ್ರದೇಶವನ್ನು ಹಿಂದುಳಿದ ಪ್ರದೇಶವೆಂದು ಗ್ರಹಿಸಲಾಗಿದೆ.

ಆರ್ಥಿಕವಾಗಿ ಜಿಲ್ಲೆಯ ವರಮಾನವು ೧೯೯೫-೯೬ರ ಅವಧಿಯಲ್ಲಿ ಶೇ. ೮೫೪೪ ರೂಪಾಯಿ ಗಳಿದ್ದು ರಾಜ್ಯದ ಸರಾಸರಿಗಿಂತ ರೂ. ೮೪೦ ಕಡಿಮೆ ಇದೆ. ವರಮಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ೭ನೇ ಸ್ಥಾನವನ್ನು ಹೊಂದಿದೆ. ಜಿಲ್ಲೆಯಲ್ಲಿ ಔದ್ಯೋಗಿಕ ವಲಯದ ಪ್ರಗತಿ ಕಂಡುಬಂದರೂ ಅದು ಕೇವಲ ಕೆಲವೇ ಕೆಲವು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ಜಿಲ್ಲೆಯ ಜನಸಾಮಾನ್ಯನ ವರಮಾನ ಅತ್ಯಂತ ಕಡಿಮೆಯಿರುವುದನ್ನು ಕಾಣಬಹುದಾಗಿದೆ.

ಈ ಅಧ್ಯಯನದಲ್ಲಿ ದಾವಣಗೆರೆ ಜಿಲ್ಲೆಯ ಆರು ತಾಲೂಕುಗಳಲ್ಲಿ ಪ್ರತಿ ತಾಲೂಕಿನ ಮೂರು ಗ್ರಾಮಗಳ ಬೇಡರ ವೃತ್ತಿ ಪಲ್ಲಟಗಳನ್ನು ಅರಿಯುವ ಉದ್ದೇಶಕ್ಕಾಗಿ ಆಯಾ ಗ್ರಾಮದ ಬೇಡರನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವುದರಿಂದ ಆ ಗ್ರಾಮಗಳ ಭೌಗೋಳಿಕ ಸ್ವರೂಪವನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಕೋಷ್ಟಕ ೨.೬. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕು, ಗ್ರಾಮಗಳ ವಿವರ

ಕ್ರಸಂ.	ತಾಲೂಕುಗಳು	ಗ್ರಾಮಗಳು
೧	ಚನ್ನಗಿರಿ	ಕಬ್ಬ, ನಲ್ಲೂರು, ಕಾರಿಗನೂರು
೨	ದಾವಣಗೆರೆ	ಹುಣಸಿಕಟ್ಟೆ, ಬೇತೂರು, ದೊಡ್ಡ ಬಾತಿ
೩	ಹರಪನಹಳ್ಳಿ	ಕಂಚಿಕೇರಿ, ಮಾಚಿಹಳ್ಳಿ, ಕೊಮಾರನಹಳ್ಳಿ
೪	ಹರಿಹರ	ದೇವರ ಬೆಳಕೆರೆ, ಕೊಕ್ಕನೂರು, ರಾಜನಹಳ್ಳಿ
೫	ಹೊನ್ನಾಳಿ	ಕಂಚಿಕೊಪ್ಪ, ಹನುಮನಹಳ್ಳಿ, ಕುಳಗಟ್ಟ
೬	ಜಗಳೂರು	ಸೊಕ್ಕೆ, ಮಾಗಡಿ, ಬಸವನಕೋಟೆ

೨.೬.೧. ಚನ್ನಗಿರಿ ತಾಲೂಕು

೧೯೯೭ಕ್ಕೂ ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆಗೆ ಸೇರಿದ್ದ ಈ ತಾಲೂಕು ಪ್ರಸ್ತುತ ದಾವಣಗೆರೆ ಜಿಲ್ಲಾ ವ್ಯಾಪ್ತಿಗೆ ಸೇರಿದೆ. ಚಿಕ್ಕ ಬೆಟ್ಟ ಗುಡ್ಡಗಳಿಂದ ಕೂಡಿದ ಈ ತಾಲೂಕಿನಲ್ಲಿ ತುಂಗಭದ್ರಾ ನದಿಯು ಹರಿಯುತ್ತದೆ. ಜಿಲ್ಲಾ ಕೇಂದ್ರದಿಂದ ಸುಮಾರು ೬೫ ಕಿ.ಮೀ.ಗಳಷ್ಟು ಅಂತರದಲ್ಲಿ ತಾಲೂಕು ಕೇಂದ್ರವಿದೆ. ಶಿವಮೊಗ್ಗ, ಭದ್ರಾವತಿ, ದಾವಣಗೆರೆ, ಹರಿಹರ, ಹೊಸದುರ್ಗ ತಾಲೂಕು ಗಳಿಂದ ಹಾಗೂ ಚಿಕ್ಕಮಗಳೂರು ಜಿಲ್ಲೆಯಿಂದ ಸುತ್ತುವರೆದಿರುವ ತಾಲೂಕು ಇದಾಗಿದೆ. ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಅಲ್ಪಮಟ್ಟಿಗೆ ಪ್ರಗತಿಯಲ್ಲಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣವು ೧,೧೨೧ ಚ.ಕಿ.ಮೀಟರ್‌ಗಳಷ್ಟಿದೆ. ಈ ತಾಲೂಕಿನಲ್ಲಿ ಒಟ್ಟು ೨೫೪ ಗ್ರಾಮಗಳಿವೆ. ಜಿಲ್ಲೆಯಲ್ಲಿಯೇ ಹೆಚ್ಚು ಭೂ ಪ್ರದೇಶ ಹೊಂದಿರುವ ಹಾಗೂ ಹೆಚ್ಚು

ಹಳ್ಳಿಗಳನ್ನು ಹೊಂದಿರುವ ತಾಲೂಕು ಇದಾಗಿದೆ. ತಾಲೂಕಿನಲ್ಲಿ ಸಂತೆಬೆನ್ನೂರು, ಬಸವಾಪಟ್ಟಣಗಳು ಹೋಬಳಿ ಕೇಂದ್ರಗಳಾಗಿವೆ. ಅವೆರಡರ ಹೊರತಾಗಿ ಇನ್ನುಳಿದವುಗಳೆಲ್ಲಾ ಹಳ್ಳಿಗಳೇ ಆಗಿವೆ. ಇಲ್ಲಿಯ ಬಹುತೇಕ ಗ್ರಾಮಗಳಿಗೆ ಇಂದಿಗೂ ಸಮರ್ಪಕವಾದ ಸರ್ಕಾರಿ ಬಸ್ಸಿನ ಸೌಲಭ್ಯ ಅಥವಾ ಸಾರಿಗೆ ಸಂಪರ್ಕವಿಲ್ಲವಾಗಿದೆ.

ಒಟ್ಟು ೪೯,೮೧೯ ಕುಟುಂಬಗಳನ್ನು ಈ ತಾಲೂಕು ಹೊಂದಿದೆ. ಮಳೆಯಾಶ್ರಿತ ಚಿಕ್ಕ ಪುಟ್ಟ ಕೆರೆಗಳಲ್ಲದೆ ಸೂಳೆಕೆರೆ ಎನ್ನುವ ತುಂಬಾ ದೊಡ್ಡದಾದ ಕೆರೆಯನ್ನು ಈ ತಾಲೂಕು ಹೊಂದಿದೆ. ತುಂಗಭದ್ರಾ ನದಿಯ ಕಾಲುವೆಗಳಿಂದಾಗಿ ಈ ತಾಲೂಕು ನೀರಾವರಿ ಸೌಲಭ್ಯವನ್ನು ಪಡೆಯುವಂತಾಗಿದೆ. ಈ ತಾಲೂಕಿನ ಜನಸಾಂದ್ರತೆಯು ೧೬.೮ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಈ ತಾಲೂಕಿನ ಒಟ್ಟು ಜನಸಂಖ್ಯೆ ೨,೯೨,೩೩೭ ಇದ್ದು ಇದರಲ್ಲಿ ಪುರುಷರು ೧,೪೯,೭೯೬ ಹಾಗೂ ಮಹಿಳೆಯರು ೧,೪೨,೭೧೧ರಷ್ಟಿದ್ದಾರೆ. ಈ ತಾಲೂಕಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೬೮,೬೬೫ ಇದ್ದು ಪುರುಷರು ೩೫,೧೫೫ ಹಾಗೂ ಮಹಿಳೆಯರು ೩೫,೫೧೦ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದಲ್ಲಿ ಒಟ್ಟು ಜನಸಂಖ್ಯೆ ೩೬,೬೫೩ ಇದ್ದು ಇದರಲ್ಲಿ ಪುರುಷರು ೧೮,೬೭೫ ಹಾಗೂ ಮಹಿಳೆಯರು ೧೬,೯೭೮ರಷ್ಟಿದ್ದಾರೆ. ಈ ತಾಲೂಕಿನಲ್ಲಿ ಮೇದ, ಮರಾಟಿ, ಗೌಡ್ಲು, ವಾಲ್ಮೀಕಿ ಮುಂತಾದ ಪರಿಶಿಷ್ಟ ಪಂಗಡದ ಸಮುದಾಯಗಳು ಇವೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡಾ ೨೩.೪೮ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇಕಡಾ ೧೨.೫೩ರಷ್ಟಿದೆ. ತಾಲೂಕಿನ ರಾಜಕೀಯ ಹಿಡಿತ ಮೇಲ್ವರ್ಗಗಳದ್ದಾಗಿದೆ.

ಈ ತಾಲೂಕಿನಲ್ಲಿ ಕಬ್ಳ, ನಲ್ಲೂರು, ಕಾರಿಗನೂರು ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಆ ಮೂರು ಗ್ರಾಮಗಳ ವಿವರಗಳು ಈ ಕೆಳಗಿನಂತಿವೆ.

ಕಬ್ಳ ಗ್ರಾಮ

ಕಬ್ಳ ಗ್ರಾಮವು ಚನ್ನಗಿರಿ ತಾಲೂಕು ಕೇಂದ್ರದಿಂದ ಸುಮಾರು ೧೨ ಕಿ.ಮೀ.ಗಳಷ್ಟು ದೂರವಿದೆ. ಹೋಬಳಿ ಕೇಂದ್ರಿಂದಲೂ ೧೨ ಕಿ.ಮೀ. ದೂರವಿದೆ. ೭೭ ಹೆಕ್ಟೇರ್‌ಗಳಷ್ಟು ಭೌಗೋಳಿಕಾ ಪರಿಸರವನ್ನು ಈ ಹಳ್ಳಿ ಹೊಂದಿದೆ. ನೀರಾವರಿಗೊಂಡ ಭೂಮಿಯು ೭೫ ಹೆಕ್ಟೇರ್‌ಗಳಷ್ಟಿದೆ. ೪೫ ಹೆಕ್ಟೇರನಷ್ಟು ಭೂಮಿಯು ಕೊಳವೆಬಾವಿಯನ್ನು ಅವಲಂಬಿಸಿದೆ. ಈ ಗ್ರಾಮದ ಠಾಣಾ ವ್ಯಾಪ್ತಿಯು ೮ ಹೆಕ್ಟೇರ್ ಇದೆ. ಈ ಭೂಮಿಯಲ್ಲಿ ಅಡಕೆ, ತೆಂಗು, ಭತ್ತ, ಕಬ್ಬು, ಶೇಂಗಾ, ಈರುಳ್ಳಿ, ತರಕಾರಿ, ಜೋಳ, ಮುಸುಕಿನ ಜೋಳ, ರಾಗಿ, ತೊಗರಿ, ರೇಷ್ಮೆ, ಹತ್ತಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಗ್ರಾಮ ವ್ಯಾಪ್ತಿಯ ಒಟ್ಟು ಕುಟುಂಬಗಳ ಸಂಖ್ಯೆಯು ೪೦ ಇದ್ದು ಅದರಲ್ಲಿ ೨೦ರಷ್ಟು ಕುಟುಂಬಗಳು ಕೃಷಿ ಹಾಗೂ ಕೃಷಿಕೂಲಿಯನ್ನೇ ಆಧರಿಸಿವೆ. ಇನ್ನುಳಿದ ಕುಟುಂಬಗಳು ಕೃಷಿ

ಕೂಲಿಯೊಂದಿಗೆ ಇತರ ಕೂಲಿಯನ್ನು ಸಹ ಮಾಡುವುದನ್ನು ಕಾಣುತ್ತೇವೆ. ಇದರಲ್ಲಿ ಪರಿಶಿಷ್ಟ ಜಾತಿಗಳ ಕುಟುಂಬಗಳು ಈ ಗ್ರಾಮದಲ್ಲಿ ನೆಲೆಸಿಲ್ಲ. ಆದರೆ ಪರಿಶಿಷ್ಟ ಪಂಗಡದ ೧೫ ಕುಟುಂಬಗಳು ಇಲ್ಲಿ ನೆಲೆಸಿವೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ವ್ಯಾಪ್ತಿಯ ಒಟ್ಟು ಜನಸಂಖ್ಯೆಯ ೪೬೨ರಷ್ಟಿದೆ. ಇದರಲ್ಲಿ ಪುರುಷರ ಸಂಖ್ಯೆಯು ೨೫೩ ಹಾಗೂ ಮಹಿಳೆಯರ ಸಂಖ್ಯೆಯು ೨೦೯ರಷ್ಟಿದೆ.

ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೭೪ ಇದ್ದು ಪುರುಷರು ೩೮ ಹಾಗೂ ಮಹಿಳೆಯರು ೩೬ರಷ್ಟಿದ್ದಾರೆ. ಒಟ್ಟಾರೆಯಾಗಿ ನೋಡಿದರೆ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರಿಶಿಷ್ಟ ಪಂಗಡದ ಜನಸಂಖ್ಯಾ ಪ್ರಮಾಣವು ಶೇಕಡಾ ೫.೦೪ರಷ್ಟಿದೆ.

ನಲ್ಲೂರು ಗ್ರಾಮ

ನಲ್ಲೂರು ಗ್ರಾಮವು ಚನ್ನಗಿರಿ ತಾಲೂಕು ಕೇಂದ್ರದಿಂದ ಸುಮಾರು ೯ ಕಿ.ಮೀ.ಗಳಷ್ಟು ದೂರವಿರುವ ಈ ಗ್ರಾಮಕ್ಕೆ ಹೋಬಳಿಯು ಕೇವಲ ೯ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೪೯೩ ಹೆಕ್ಟೇರುಗಳಷ್ಟಿದೆ. ಇದರಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯು ೩೪೩ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿ ನೀರಾವರಿ ಸೌಲಭ್ಯ ಪಡೆಯುತ್ತಿರುವ ಭೂ ವಿಸ್ತೀರ್ಣವು ೨೯೪ ಹೆಕ್ಟೇರುಗಳಷ್ಟಿದೆ. ಕಾಲುವೆಯ ಹೊರತಾಗಿ ಕೊಳವೆಬಾವಿಯಿಂದಲೂ ಕೆಲವು ಪ್ರದೇಶ ನೀರಾವರಿಯಾಗಿದೆ. ಇನ್ನುಳಿದ ಪ್ರದೇಶವು ಗುಡ್ಡ ಬೆಟ್ಟ, ಕಾಡಿನಿಂದ ಕೂಡಿದೆ. ಈ ಗ್ರಾಮ ವ್ಯಾಪ್ತಿಯಲ್ಲಿರುವ ಕೃಷಿ ಭೂಮಿಗೆ ನೀರುಣಿಸುವ ಬಾವಿಗಳು/ಕೊಳವೆಬಾವಿಗಳ ಸಂಖ್ಯೆ ಕೇವಲ ೧೫ರಷ್ಟಿವೆ. ಇದರಿಂದ ಒಟ್ಟು ನೀರಾವರಿಗೊಂಡ ಕೃಷಿ ಪ್ರದೇಶವು ಸುಮಾರು ೩೨ ಹೆಕ್ಟೇರುಗಳಷ್ಟಾಗಿದೆ. ಈ ಊರಿನ ಕೆರೆಯ ಬಳಿ ಈಶ್ವರ ದೇವಸ್ಥಾನವಿದ್ದು, ಇದರ ಬಳಿಯೇ ಸುಮಾರು ೪೦೦ ವರ್ಷಗಳ ಹಿಂದೆ ವ್ಯಾಸಮುನಿಗಳಿಂದ ಸ್ಥಾಪಿಸಲ್ಪಟ್ಟ ವೀರಾಂಜನೆಯ ದೇವಾಲಯವಿದೆ. ಈ ಗ್ರಾಮದಲ್ಲಿ ವಿಶೇಷವಾಗಿ ನೆಲ್ಲು(ಭತ್ತ) ಹೆಚ್ಚಾಗಿ ಬೆಳೆಯುತ್ತಿದ್ದರಿಂದ 'ನೆಲ್ಲೂರು' ಎಂದು ಹೆಸರು ಬಂದಿದೆ ಎಂಬುದು ಐತಿಹಾಸಿಕ ಮೂಲದಿಂದ ತಿಳಿದುಬರುತ್ತದೆ. ಇದು ಕಾಲಕ್ರಮೇಣ ನಲ್ಲೂರಾಗಿ ಪರಿವರ್ತನೆಗೊಂಡಿದೆ.

ಈ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೧೭೯೦ರಷ್ಟಿದೆ. ೫೪೦ರಷ್ಟು ಕುಟುಂಬಗಳು ಕೃಷಿ ಚಟುವಟಿಕೆಗಳಲ್ಲಿ ತೊಡಗಿವೆ. ಇನ್ನುಳಿದ ಕುಟುಂಬಗಳು ಇತರ ಕೂಲಿಯನ್ನು ಅವಲಂಬಿಸಿವೆ. ಪರಿಶಿಷ್ಟ ಜಾತಿಯವರ ಕುಟುಂಬಗಳು ೨೯೦ರಷ್ಟಿದ್ದು, ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೯೦ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆ ೮೮೦೧ರಷ್ಟಿದ್ದು ಪುರುಷರು ೪೬೧೦ ಹಾಗೂ ಮಹಿಳೆಯರು ೪೧೯೧ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ

ಒಟ್ಟು ಜನಸಂಖ್ಯೆ ೧೦೮೮ರಷ್ಟಿದ್ದು ಇದರಲ್ಲಿ ಪುರುಷರು ೫೮೦ ಹಾಗೂ ಮಹಿಳೆಯರು ೫೦೮ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೨೪೪ರಷ್ಟಿದ್ದು ಇದರಲ್ಲಿ ಪುರುಷರ ಜನಸಂಖ್ಯೆ ೧೨೯ ಹಾಗೂ ಮಹಿಳೆಯರ ಜನಸಂಖ್ಯೆ ೧೧೫ರಷ್ಟಿದೆ. ಗ್ರಾಮದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡಾ ೧೨.೩೬ರಷ್ಟು ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ಪ್ರಮಾಣವು ಶೇಕಡಾ ೨.೭೭ರಷ್ಟಿದೆ.

ಕಾರಿಗನೂರು ಗ್ರಾಮ

ಕಾರಿಗನೂರು ಗ್ರಾಮವು ಚನ್ನಗಿರಿ ತಾಲ್ಲೂಕು ಕೇಂದ್ರದಿಂದ ಸುಮಾರು ೩೫ ಕಿ.ಮೀ. ದೂರದಲ್ಲಿದೆ ಹಾಗೂ ಹೋಬಳಿ ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಈ ಗ್ರಾಮ ವ್ಯಾಪ್ತಿಯ ಭೌಗೋಳಿಕ ವಿಸ್ತೀರ್ಣವು ೧೨೪೪ ಹೆಕ್ಟೇರುಗಳಷ್ಟಿದೆ. ಇದರಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯು ೧೧೪೫.೦೦ ಹೆಕ್ಟೇರುಗಳಷ್ಟಿದೆ. ಇದರಲ್ಲಿ ೮೧೦ ಹೆಕ್ಟೇರ್ ಭೂಮಿಯು ನೀರಾವರಿ ಸೌಲಭ್ಯದಿಂದಾಗಿ ಕೃಷಿಗೊಳ್ಳುತ್ತಿದೆ. ಈ ಭೂಮಿಗಳಲ್ಲಿ ಭತ್ತ, ಕಬ್ಬು, ಶೇಂಗಾ, ಹತ್ತಿ, ಸೂರ್ಯಕಾಂತಿ, ಮುಸುಕಿನ ಜೋಳ, ಜೋಳ, ಅಕ್ಕಡಿಕಾಳು, ಅಡಕೆ, ತೆಂಗು ಇತ್ಯಾದಿ ಬೆಳೆಗಳನ್ನು ಕಾಣುತ್ತೇವೆ. ಒಟ್ಟು ಗ್ರಾಮಠಾಣಾ ಪ್ರದೇಶವು ೪೦ ಹೆಕ್ಟೇರುಗಳಷ್ಟಿದ್ದು ಈ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೬೯೪ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳು ೪೧೯ ಇದ್ದ್ರೆ ಪರಿಶಿಷ್ಟ ಪಂಗಡದ ಕುಟುಂಬಗಳು ಕೇವಲ ೧೭.

೨೦೧೧ರ ಜನಗಣತಿ ಪ್ರಕಾರ ಕಾರಿಗನೂರು ಗ್ರಾಮ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೩,೯೩೨ರಷ್ಟಿದೆ. ಇದರಲ್ಲಿ ಪುರುಷರು ೨೦೨೮ ಹಾಗೂ ಮಹಿಳೆಯರು ೧೯೦೪ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೧೦೬೪ರಷ್ಟಿದೆ. ಇದರಲ್ಲಿ ಪುರುಷರು ೫೫೦ ಹಾಗೂ ಮಹಿಳೆಯರು ೫೧೪ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೧೮ರಷ್ಟಿದೆ. ಇದರಲ್ಲಿ ಪುರುಷರು ೬೩ ಹಾಗೂ ಮಹಿಳೆಯರು ೫೫ರಷ್ಟಿದ್ದಾರೆ. ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡಾ ೨೭.೦೬ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ಪ್ರಮಾಣವು ಶೇಕಡಾ ೩.೦೦ರಷ್ಟಿದೆ.

೨.೬.೨. ದಾವಣಗೆರೆ ತಾಲೂಕು

ದಾವಣಗೆರೆಯು ಜಿಲ್ಲಾ ಕೇಂದ್ರವಾದಂತೆ ತಾಲೂಕು ಕೇಂದ್ರವೂ ಹೌದು. ದಾವಣಗೆರೆಯು ಕರ್ನಾಟಕದ ಹೃದಯ ಭೂಮಿ, ಉತ್ತರ ಮತ್ತು ದಕ್ಷಿಣ ಕರ್ನಾಟಕದ ಸಂಪರ್ಕ ಸೇತುವೆಯಾಗಿದೆ. ದಾವಣಗೆರೆ ತಾಲೂಕು ತುಂಗಾಭದ್ರ ನದಿಯ ದಡದಲ್ಲಿ ವಿಸ್ತರಿಸಿಕೊಂಡು ವಿಶಿಷ್ಟ ಸಾಂಸ್ಕೃತಿಕ ಹಿರಿಮೆಯನ್ನು ಮೆರೆಸಿರುವ ನಾಡಾಗಿದೆ. ಅನಾದಿಕಾಲದಿಂದಲೂ ಐತಿಹಾಸಿಕ ಮಹತ್ವ ಪಡೆದಿರುವ ತಾಲೂಕು. ಭೌಗೋಳಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ

ವಿಶಿಷ್ಟ ಮತ್ತು ವಿಶೇಷತೆಯನ್ನು ಪಡೆದಿದೆ. ಕರ್ನಾಟಕದಲ್ಲಿಯೇ ತನ್ನದೇ ಆದ ಪ್ರಭಾವವನ್ನು ಬೀರಿರುವ ತಾಲೂಕು. ಕೃಷಿ, ಕೈಗಾರಿಕೆ, ಕಲೆ, ಶಿಲ್ಪಕಲೆ, ಶಿಕ್ಷಣ, ಸಾಹಿತ್ಯ, ವ್ಯಾಪಾರ ಕ್ಷೇತ್ರದಲ್ಲಿ ಔಚಿತ್ಯಗೊಳಿಸಿದೆ. ಮೊದಲು ಚಿತ್ರದುರ್ಗ ಜಿಲ್ಲೆಯಲ್ಲಿದ್ದ ದಾವಣಗೆರೆಯು ೧೯೯೭ರಲ್ಲಿ ನೂತನ ಜಿಲ್ಲೆಯಾಗಿ ರೂಪಗೊಂಡಿತು. ನಂತರ ಹೊಸ ಮಹತ್ವದ ಚಿಂತನ ಮಂಥನ, ವಿಚಾರಗಳು ನಮ್ಮ ದಾವಣಗೆರೆ ಹಬ್ಬ ಮುಂತಾದವುಗಳ ವಿಶಿಷ್ಟತೆಯನ್ನು ಹೊಂದಿದೆ. ಇದನ್ನು ಕರ್ನಾಟಕದ ಮ್ಯಾಂಚಿಸ್ಟರ್ ನಗರವೆಂದು ಕರೆಯುತ್ತಾರೆ.

ದಾವಣಗೆರೆ ತಾಲೂಕು ೫೫೬.೭೨ ಚ.ಕಿ.ಮೀ. ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಜಿಲ್ಲೆಯ ಇನ್ನುಳಿದ ಆರು ತಾಲೂಕುಗಳಲ್ಲಿ ಕಡಿಮೆ ವಿಸ್ತೀರ್ಣ(ಶೇ. ೧೦.೭೦)ವನ್ನು ಹೊಂದಿರುವ ಎರಡನೇ ತಾಲೂಕು ಇದಾಗಿದೆ. ಜಿಲ್ಲೆಯ ಇತರೆ ತಾಲೂಕುಗಳಿಗಿಂತ ಹೆಚ್ಚಿನ ಜನಸಾಂದ್ರತೆ ಹೊಂದಿದೆ. ಈ ತಾಲೂಕಿನ ಜನಸಾಂದ್ರತೆಯು ೪೧೫ರಷ್ಟಿದೆ. ಒಟ್ಟು ೧೭೪ ಗ್ರಾಮಗಳನ್ನು ಒಳಗೊಂಡಿರುವ ಈ ತಾಲೂಕು ಕಸಬಾ, ಆನಗೋಡು, ಮಾಯಕೊಂಡ ಎಂಬ ಮೂರು ಹೋಬಳಿ ಪ್ರದೇಶಗಳನ್ನು ಒಳಗೊಂಡಿದೆ.

ದಾವಣಗೆರೆ ತಾಲೂಕಿನಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ೭೦.೭೯ ಕುಟುಂಬಗಳು ನೆಲೆ ನಿಂತಿವೆ. ಹಾಗೇ ಒಟ್ಟು ೨೦೦೧ರ ಪ್ರಕಾರ ಜನಸಂಖ್ಯೆಯು ೬,೦೨,೫೨೩ರಷ್ಟಿದೆ. ಇದರಲ್ಲಿ ಪುರುಷರು ೩,೦೯,೬೪೨ರಷ್ಟಿದ್ದರೆ, ಮಹಿಳೆಯರು ೨,೯೨,೮೮೧ರಷ್ಟಿದ್ದಾರೆ. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಒಟ್ಟು ೯೪,೭೪೨ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಪುರುಷರು ೪೮೩೭೦ರಷ್ಟಿದ್ದಾರೆ ಹಾಗೂ ಮಹಿಳೆಯರು ೪೬೩೭೨ರಷ್ಟಿದ್ದಾರೆ. ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೫೫,೭೪೯ರಷ್ಟಿದೆ. ಇದರಲ್ಲಿ ಪುರುಷರು ೨೮,೩೭೭ ಹಾಗೂ ಮಹಿಳೆಯರು ೨೭,೩೭೨ರಷ್ಟಿದ್ದಾರೆ.

ದಾವಣಗೆರೆ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡಾ ೬೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇಕಡಾ ೭೧.೬ರಷ್ಟಿದ್ದರೆ ಮಹಿಳೆಯರ ಸಾಕ್ಷರತೆ ಪ್ರಮಾಣ ಕೇವಲ ಶೇಕಡಾ ೫೦ರಷ್ಟು ಮಾತ್ರವಿದೆ. ಅದರಲ್ಲೂ ಮೇಲ್ವರ್ಗದ ಮಹಿಳೆಯರೇ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣ ಪಡೆಯುತ್ತಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಇತರೆ ಹಿಂದುಳಿದ ವರ್ಗಗಳು ಬಹುತೇಕ ಶಿಕ್ಷಣದಿಂದ ವಂಚಿತಗೊಂಡಿವೆ. ಅದರಲ್ಲೂ ಮಹಿಳೆಯರು ಶಿಕ್ಷಣದಿಂದ (ಶೇ. ೫೦ಕ್ಕೂ) ಹೆಚ್ಚು ವಂಚಿತರಾಗಿದ್ದಾರೆ.

ಹುಣಸಿಕಟ್ಟೆ ಗ್ರಾಮ

ಹುಣಸಿಕಟ್ಟೆ ಗ್ರಾಮವು ದಾವಣಗೆರೆ ತಾಲೂಕು ಕೇಂದ್ರದಿಂದ ಸುಮಾರು ೨೬ ಕಿ.ಮೀ ದೂರದಲ್ಲಿಯೂ, ಹೋಬಳಿಗೆ ಸುಮಾರು ೬ ಕಿ.ಮೀ. ದೂರದಲ್ಲಿ ಹುಣಸಿಕಟ್ಟೆ ಗ್ರಾಮವಿದೆ.

ಮಾಯಕೊಂಡ ಹೋಬಳಿಗೆ ಸೇರಿದ ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೫೧೪ ಹೆಕ್ಟೇರುಗಳಷ್ಟಿದೆ. ಆದರೆ ಕೃಷಿ ಯೋಗ್ಯ ಭೂಮಿಯ ಪ್ರಮಾಣ ಮಾತ್ರ ೮೦೧ ಹೆಕ್ಟೇರುಗಳಷ್ಟು ಮಾತ್ರವಿದೆ. ಉಳಿದ ೭೧೩ ಹೆಕ್ಟೇರ್‌ನಷ್ಟು ಭೂಮಿಯು ಕೃಷಿ ಯೋಗ್ಯವಲ್ಲದ ಕುರುಚಲು ಕಾಡುಗಳಿಂದ ಕೂಡಿದೆ. ಕೆರೆಗಳಿಂದ ನೀರಾವರಿ ಹೊಂದಲು ಸಾಧ್ಯವಾಗದ ಭೂಮಿಯು ಸಹ ಈ ಗ್ರಾಮದಲ್ಲಿದ್ದು ಅದರಲ್ಲಿ ಬಹುತೇಕ ರೈತರು ತಾವೇ ಸ್ವತಂತ್ರವಾಗಿ ತೆರೆದ ಬಾವಿ ಹಾಗೂ ಕೊಳವೆಬಾವಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಇಂದು ಬಹುತೇಕ ತೆರೆದ ಬಾವಿಗಳು ಭೂಮಿಗಳಿಗೆ ಹೆಚ್ಚು ನೀರನ್ನು ಒದಗಿಸದೇ ಇರುವುದರಿಂದ ಕೊಳವೆಬಾವಿಗಳನ್ನೇ ಆಶ್ರಯಿಸಿದವರ ಸಂಖ್ಯೆ ಈ ಗ್ರಾಮದಲ್ಲಿ ಹೆಚ್ಚು. ಈ ಗ್ರಾಮದಲ್ಲಿ ಸುಮಾರು ಎಪ್ಪತ್ತೆಂಟುರಷ್ಟು ಕೊಳವೆಬಾವಿಗಳನ್ನು ನೋಡ ಬಹುದು. ಈ ರೀತಿಯ ಬಾವಿಗಳಿಂದ ನೀರಾವರಿಯಾದ ಕ್ಷೇತ್ರ ೩೭೧ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮಠಾಣಾ ಪ್ರದೇಶವು ಕೇವಲ ಐವತ್ತೊಂದು ಹೆಕ್ಟೇರುಗಳಷ್ಟು ಮಾತ್ರ ಇದೆ.

ಹುಣಸಿಕಟ್ಟೆ ಗ್ರಾಮದಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆಯು ೧೯೯ ಇದ್ದು ಇದರಲ್ಲಿ ಪರಿಶಿಷ್ಟ ಜಾತಿ ಕುಟುಂಬಗಳ ಪ್ರಮಾಣ ೫೯ ಹಾಗೂ ಪರಿಶಿಷ್ಟ ಪಂಗಡಗಳ ಕುಟುಂಬ ಪ್ರಮಾಣ ೩೪ರಷ್ಟಿದೆ. ಈ ಗ್ರಾಮದಲ್ಲಿ ಬ್ರಾಹ್ಮಣ, ಲಿಂಗಾಯಿತ, ಕುರುಬ, ಉಪ್ಪಾರ, ಬೆಸ್ತ(ಗಂಗಾಮತ). ಮುಸ್ಲಿಂ, ಮಾದಿಗ, ಚಲುವಾದಿ, ಕ್ಷೌರಿಕ, ಮಡಿವಾಳ, ಸಿಂಪಿಗ, ಅಕ್ಕಸಾಲಿ, ಕಮ್ಮಾರ, ಭೋವಿ, ವಾಲ್ಮೀಕಿ ಮುಂತಾದ ಜಾತಿಗಳು ಕಂಡುಬರುತ್ತವೆ. ಈ ಗ್ರಾಮದ ಬಲಾಢ್ಯ ಜಾತಿ ಲಿಂಗಾಯಿತರದ್ದೇ ಆಗಿದೆ.

೨೦೦೧ರ ಜನಗಣತಿ ಪ್ರಕಾರ ಹುಣಸಿಕಟ್ಟೆ ಗ್ರಾಮದ ಒಟ್ಟು ಜನಸಂಖ್ಯೆ ೯೫೪ರಷ್ಟಿದೆ. ಇದರಲ್ಲಿ ಪುರುಷರು ೫೦೧ ಹಾಗೂ ಮಹಿಳೆಯರು ೪೫೩ರಷ್ಟಿದ್ದಾರೆ. ಒಟ್ಟು ದಾವಣಗೆರೆ ತಾಲೂಕು ಜನಸಂಖ್ಯೆಗೆ ಹೋಲಿಸಿದರೆ ಈ ಗ್ರಾಮದ ಜನಸಂಖ್ಯೆ ಪ್ರಮಾಣ ಶೇಕಡಾ ೧.೬೪ರಷ್ಟು ಮಾತ್ರವಿದೆ. ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೧೮೫ರಷ್ಟಿದ್ದು ಇದರಲ್ಲಿ ಪುರುಷರು ೯೯ ಹಾಗೂ ಮಹಿಳೆಯರು ೮೬ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೭೯ ಇದ್ದು ಇದರಲ್ಲಿ ಪುರುಷರು ೧೦೩ ಹಾಗೂ ಮಹಿಳೆಯರು ೭೬ರಷ್ಟಿದ್ದಾರೆ. ಹುಣಸಿಕಟ್ಟೆ ಗ್ರಾಮದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಒಟ್ಟು ಪ್ರಮಾಣ ಶೇಕಡಾ ೨೨.೫೬ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಒಟ್ಟು ಪ್ರಮಾಣ ಶೇಕಡಾ ೫.೨೦ರಷ್ಟಿದೆ. ಇನ್ನುಳಿದ ಇತರೆ ಜನರ ಒಟ್ಟು ಪ್ರಮಾಣ ಶೇಕಡಾ ೭೨.೨೨ರಷ್ಟಿದೆ. ಈ ಗ್ರಾಮದ ಒಟ್ಟು ಸಾಕ್ಷರತೆಯ ಪ್ರಮಾಣಕ್ಕೆ ಹೋಲಿಸಿದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಸಾಕ್ಷರತೆಯ ಪ್ರಮಾಣ ಅತ್ಯಲ್ಪವಾಗಿದೆ.

ಬೇತೂರು ಗ್ರಾಮ

ಬೇತೂರು ಗ್ರಾಮವು ದಾವಣಗೆರೆ ಜಗಳೂರು ಮಾರ್ಗದಲ್ಲಿದೆ. ದಾವಣಗೆರೆ ಕೇಂದ್ರ ಸ್ಥಾನದಿಂದ ೪ ಕಿ.ಮೀ. ದೂರದಲ್ಲಿರುತ್ತದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಗೆ ಕಲಪನಹಳ್ಳಿ ಮತ್ತು ಚಿತ್ತಾನಹಳ್ಳಿ ಗ್ರಾಮಗಳು ಸೇರಿವೆ. ಬೇತೂರು ಐತಿಹಾಸಿಕ ಮಹತ್ವವನ್ನು ಪಡೆದ ಸ್ಥಳವಾಗಿದೆ. ಇದಕ್ಕೆ ಅನೇಕ ಶಿಲಾಶಾಸನಗಳೇ ಮೂಕ ಸಾಕ್ಷಿಯಾಗಿವೆ. ಪಾಂಡ್ಯಂಡ ಕಾಲದಲ್ಲಿ ಈ ಊರಿನ ಮೊದಲ ಹೆಸರು ಬೇಳೂರು ಎಂದಿತ್ತು. ಆದರೆ ಪಾಂಡ್ಯರು ಉಚ್ಚಂಗಿ ದುರ್ಗದಿಂದ ತಮ್ಮ ರಾಜಧಾನಿಯನ್ನು ಬದಲಾಯಿಸಿಕೊಂಡಾಗ ಬೇತೂರು ಎಂದಾಯಿತು. ಐತಿಹಾಸಿಕ ಹಿನ್ನೆಲೆಯಿಂದ ತಿಳಿದುಬರುತ್ತದೆ. ಬೇತೂರು ಚಿತ್ರದುರ್ಗದ ಪಾಳೆಗಾರರ ಕಾಲದ ವೇಳೆಗೆ ತನ್ನ ಹಿಂದಿನ ವೈಭವವನ್ನೆಲ್ಲ ಕಳೆದುಕೊಂಡಿತು. ರಾಜಧಾನಿಯಿಂದ ಪ್ರಾಂತ್ಯ ಮಟ್ಟಕ್ಕೆ ಬಂದ ಗ್ರಾಮ ಇಂದು ಹೋಬಳಿ ಗ್ರಾಮವಾಗಿದೆ. ಹಿಂದೆ ಕೋಟೆ ಕೊತ್ತಲುಗಳಿದ್ದ ಊರು ಇಂದು ಆರ್.ಸಿ.ಸಿ. ಮನೆಗಳ ಬೀಡಾಗಿದೆ. ಇಲ್ಲಿ ರೇವಣಸಿದ್ಧೇಶ್ವರ ದೇವಾಲಯ ಕಲಾತ್ಮಕವಾಗಿದೆ. ಊರಿನ ಮಧ್ಯೆ ಮಾರಮ್ಮನ ಗುಡಿ ಇದ್ದು, ದೆವಾಲಯದ ವಿಗ್ರಹ ಕಟ್ಟಿಗೆಯಿಂದ ಮಾಡಿದ್ದು ಬಹಳ ಸುಂದರವಾಗಿದೆ. ಅಲ್ಲದೇ ಇದರ ಭೌಗೋಳಿಕ ವಿಸ್ತೀರ್ಣ ೮೪೬ ಚದರ ಕಿಲೋಮೀಟರುಗಳು. ಸಮತಟ್ಟಾದ ಭೂಮಿಯನ್ನು ಹೊಂದಿದ ಈ ಪ್ರದೇಶದ ಕೃಷಿ ಯೋಗ್ಯ ಭೂಮಿಯ ಒಟ್ಟು ವಿಸ್ತೀರ್ಣ ೬೯೯ ಹೆಕ್ಟೇರುಗಳಾಗಿದೆ. ಭದ್ರಾ ಕಾಲುವೆಯಿಂದ ನೀರಾವರಿಯಾದ ಭೂಮಿಯ ವಿಸ್ತೀರ್ಣ ೩೯೦ ಹೆಕ್ಟೇರುಗಳಷ್ಟಿದೆ. ಈ ಗ್ರಾಮಕ್ಕೆ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿರುವ ಕೆರೆಯಿಂದಲೂ ನೀರಾವರಿ ಸೌಲಭ್ಯವನ್ನು ಇಲ್ಲಿಯ ಕೃಷಿಕರು ಪಡೆಯುತ್ತಿದ್ದಾರೆ. ಕೆರೆಯಿಂದ ನೀರಾವರಿಯ ಸೌಲಭ್ಯವನ್ನು ಪಡೆಯುವ ಭೂಮಿಯ ವಿಸ್ತೀರ್ಣ ೭೪ ಹೆಕ್ಟೇರುಗಳಷ್ಟಿದೆ. ಹಾಗೆಯೇ ತೆರೆದ ಬಾವಿಗಳು ಹಾಗೂ ಕೊಳವೆಬಾವಿಗಳಿಂದಲೂ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ರೀತಿಯ ಬಾವಿಗಳು ಒಟ್ಟು ೩೮ ಇವೆ. ಇಂಥ ಬಾವಿಗಳಿಂದ ನೀರಾವರಿಯಾದ ಪ್ರದೇಶದ ವಿಸ್ತೀರ್ಣವು ೧೪೬ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿರುವ ಒಟ್ಟು ೬೯೯ ಹೆಕ್ಟೇರುಗಳಷ್ಟಿರುವ ಕೃಷಿ ಯೋಗ್ಯ ಭೂಮಿಯಲ್ಲಿ ಒಟ್ಟು ನೀರಾವರಿ ಸೌಲಭ್ಯ ಹೊಂದಿದ ಕೃಷಿಭೂಮಿಯ ವಿಸ್ತೀರ್ಣ ೬೧೨ ಹೆಕ್ಟೇರುಗಳಾಗಿದೆ. ಈ ಗ್ರಾಮ ವ್ಯಾಪ್ತಿಯ ಒಟ್ಟು ಠಾಣಾ ಪ್ರದೇಶವು ೨೨ ಹೆಕ್ಟೇರುಗಳಷ್ಟಿದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಜನಸಂಖ್ಯೆ ೨೦೦೧ರ ಪ್ರಕಾರ ೫೩೫೬ ಇದ್ದು, ಇದರಲ್ಲಿ ಪುರುಷರು ೨,೦೭೩ ಹಾಗೂ ಮಹಿಳೆಯರ ೩೨೮೩ರಷ್ಟಿದ್ದಾರೆ. ಇದರಲ್ಲಿ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ೧೧೬೬ರಷ್ಟಿದೆ. ಇದರಲ್ಲಿ ಪುರುಷರು ೬೦೧ ಹಾಗೂ ಮಹಿಳೆಯರು ೫೬೫ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ಒಟ್ಟು ೧೩೧೮ರಷ್ಟಿದೆ. ಇದರಲ್ಲಿ ಪುರುಷರು ೬೫೮ ಹಾಗೂ ಮಹಿಳೆಯರು ೬೬೦ರಷ್ಟಿದ್ದಾರೆ. ಈ ಗ್ರಾಮದಲ್ಲಿ ಲಿಂಗಾಯಿತ, ಗೊಲ್ಲ, ಗಂಗಾಮತ, ಭೋವಿ, ಮುಸ್ಲಿಂ, ಮಾದಿಗ, ಕ್ಷೌರಿಕ, ಅಗಸ,

ವಾಲ್ಮೀಕಿ ಮುಂತಾದ ಜಾತಿಗಳು ಕಂಡುಬರುತ್ತಿದ್ದು ಇವುಗಳಲ್ಲಿ ಬಲಿಷ್ಠ ಜಾತಿಯಾಗಿ ಲಿಂಗಾಯಿತ ಹಾಗೂ ಕುರುಬ ಸಮುದಾಯವಿದೆ.

ದೊಡ್ಡಬಾತಿ ಗ್ರಾಮ

ದೊಡ್ಡಬಾತಿ ಗ್ರಾಮವು ದಾವಣಗೆರೆ ತಾಲೂಕು ಕೇಂದ್ರದಿಂದ ೧೧ ಕಿಲೋಮೀಟರ್ ದೂರದಲ್ಲಿದೆ. ಈ ಗ್ರಾಮವು ದಾವಣಗೆರೆಯಿಂದ ಹರಿಹರಕ್ಕೆ ಸಾಗುವ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಈ ಗ್ರಾಮವು ಸಂಪೂರ್ಣವಾಗಿ ಗುಡ್ಡದಿಂದ ಆವರಿಸಿದ್ದು ಗುಡ್ಡದ ಇಳಿಜಾರಿನಲ್ಲಿದೆ ಹಾಗೂ ಕೆಳಭಾಗದಲ್ಲಿ ಮನೆಗಳು ನಿರ್ಮಾಣವಾಗಿ ಒಂದು ಗ್ರಾಮವಾಗಿತ್ತು. ಈಗ ಇದು ಒಂದು ದೊಡ್ಡ ಊರಾಗಿ ನಿರ್ಮಾಣಗೊಂಡಿದೆ. ದೊಡ್ಡಬಾತಿ ಗ್ರಾಮವು ಗುಡ್ಡದಿಂದ ಆವೃತ್ತವಾಗಿರುವುದರಿಂದ ಇದನ್ನು ಬಾತಿಗುಡ್ಡ ಎಂಬುದಾಗಿಯೂ ಕರೆಯಲಾಗುತ್ತದೆ. ಈ ಗ್ರಾಮವು ತಾಲೂಕು ಕೇಂದ್ರದಿಂದ ೧೧ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ದಾವಣಗೆರೆಯಿಂದ ಹರಿಹರಕ್ಕೆ ಹೋಗುವ ಮಾರ್ಗಮಾಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಕಂಡುಬರುತ್ತದೆ. ಈ ಗ್ರಾಮವನ್ನು ಹಾಲು ಉತ್ಪಾದನೆಯ ಕೇಂದ್ರ ಎನ್ನುತ್ತಾರೆ. ಈ ಗ್ರಾಮ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೨,೯೮೩ ಹೆಕ್ಟೇರುಗಳಷ್ಟಿದೆ. ದೊಡ್ಡಬಾತಿ ಹಾಗೂ ಚಿಕ್ಕಬಾತಿಗಳ ಮಧ್ಯದಲ್ಲಿರುವ ಕೆರೆಯು ಕುಡಿಯುವ ನೀರನ್ನು ಒದಗಿಸುವುದರೊಂದಿಗೆ ಕೃಷಿ ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸುತ್ತಿದೆ. ಜೊತೆಗೆ ಕಾಲುವೆಯ ನೀರು ಸಹ ಕೃಷಿ ಭೂಮಿಗೆ ನೀರನ್ನು ಒದಗಿಸುತ್ತವೆ. ನೀರಿಗಾಗಿ ಕೆರೆ ಹಾಗೂ ಕಾಲುವೆಯನ್ನಾಶ್ರಯಿಸಿದ ಒಟ್ಟು ಕೃಷಿ ಭೂಮಿ ೫೦೫ ಹೆಕ್ಟೇರುಗಳಷ್ಟಿದೆ. ಗ್ರಾಮದ ಒಟ್ಟು ಠಾಣಾ ಪ್ರದೇಶವು ೧೦ ಹೆಕ್ಟೇರುಗಳಷ್ಟಿದ್ದು ಇದರಲ್ಲಿ ಒಟ್ಟು ೭೩೫ರಷ್ಟು ಕುಟುಂಬಗಳು ನೆಲೆಸಿರುವುದನ್ನು ನೋಡಬಹುದು. ೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ವ್ಯಾಪ್ತಿಯ ಒಟ್ಟು ಜನಸಂಖ್ಯೆಯು ೬೪೪೨ರಷ್ಟಿದೆ, ಇದರಲ್ಲಿ ಪುರುಷರು ೩೨೯೧ ಹಾಗೂ ಮಹಿಳೆಯರು ೩೧೫೧ರಷ್ಟಿದ್ದಾರೆ. ಇದರಲ್ಲಿ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ೯೫೫ ರಷ್ಟಿದ್ದಾರೆ. ಅದರಲ್ಲಿ ಪರುಷರು ೪೬೯ ಹಾಗೂ ಮಹಿಳೆಯರು ೪೮೬ರಷ್ಟಿದ್ದಾರೆ. ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೪೮೨ರಷ್ಟಿದೆ. ಇದರಲ್ಲಿ ಪುರುಷರು ೨೪೨ ಹಾಗೂ ಮಹಿಳೆಯರು ೨೪೦ರಷ್ಟಿದ್ದಾರೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಲಿಂಗಾಯಿತ, ವಾಲ್ಮೀಕಿ, ಮಾದಿಗ, ಮಡಿವಾಳ, ಬಡಿಗ, ಮುಸ್ಲಿಂ ಈಡಿಗ ಮುಂತಾದ ಸಮುದಾಯಗಳು ನೆಲೆನಿಂತಿವೆ.

೨.೬.೩. ಹರಪನಹಳ್ಳಿ ತಾಲೂಕು

ದಾವಣಗೆರೆ ಜಿಲ್ಲೆಗೆ ಸೇರುವ ಪೂರ್ವದಲ್ಲಿ ಬಳ್ಳಾರಿ ಜಿಲ್ಲೆಗೆ ಹರಪನಹಳ್ಳಿ ಸೇರಿತ್ತು. ಜಿಲ್ಲಾ ಕೇಂದ್ರಕ್ಕೆ ತುಂಬಾ ದೂರವಿದೆ ಎನ್ನುವ ಕಾರಣಕ್ಕಾಗಿ ಹರಪನಹಳ್ಳಿಯನ್ನು ದಾವಣಗೆರೆಗೆ ಸೇರಿಸಲಾಯಿತು. ಈ ತಾಲೂಕನ್ನು ಹಾಯ್ದೇ ತುಂಗಭದ್ರಾ ನದಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶ

ಮಾಡುತ್ತದೆ. ಆದರೆ ಈ ತಾಲ್ಲೂಕಿಗೆ ತುಂಗಭದ್ರೆಯಿಂದ ಅಷ್ಟೇನೂ ಉಪಯೋಗವಾಗಿಲ್ಲ. ನದಿ ಪಕ್ಕದ ಗ್ರಾಮಗಳ ಕೃಷಿ ಭೂಮಿಗಳಿಗೆ ಏತ ನೀರಾವರಿ ಅಥವಾ ನದಿಗೆ ನೇರವಾಗಿ ಪಂಪ್‌ಸೆಟ್ಟುಗಳನ್ನು ಕೂಡಿಸಿಕೊಳ್ಳುವ ಮೂಲಕ ನದಿದಂಡೆಯ ರೈತರು ತಮ್ಮ ಭೂಮಿಗಳಿಗೆ ನೀರಾವರಿ ಮಾಡಿ ಕೊಂಡಿದ್ದಾರೆ. ಅದರಾಚೆಗೆ ಈ ತಾಲೂಕು ಬಹುತೇಕ ಮಳೆಯಾಧಾರಿತ ಒಣಬೇಸಾಯವನ್ನೇ ನೆಚ್ಚಿಕೊಂಡಿದೆ. ಈ ತಾಲೂಕಿನಲ್ಲಿ ಅಂತಹ ಕೈಗಾರಿಕಾ ಚಟುವಟಿಕೆಗಳೂ ನಡೆಯುತ್ತಿಲ್ಲ. ಶಾಮನೂರು ಶುಗರ್ಸ್‌ನ ಸಕ್ಕರೆ ಕಾರ್ಖಾನೆ ಬಿಟ್ಟರೆ ಹೇಳಿಕೊಳ್ಳುವಂತಹ ಕೈಗಾರಿಕೋದ್ಯಮಗಳೂ ಇಲ್ಲಿಲ್ಲ. ಕಣಿವಿಹಳ್ಳಿ ಸಮೀಪದ ಗುಡ್ಡಗಳಲ್ಲಿ ಪವನ ವಿದ್ಯುತ್ ತಯಾರಿಸುವ ಗಾಳಿಯಂತ್ರಗಳನ್ನು ಕಾಣಬಹುದು. ಆದರೆ ಇವು ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವಲ್ಲಿ ಸೋತಿವೆ. ಈ ತಾಲೂಕು ಚಿಕ್ಕ ಚಿಕ್ಕ ಗುಡ್ಡಗಳನ್ನು ಹೊಂದಿದ ತಾಲೂಕಾಗಿದೆ. ಈ ತಾಲೂಕಿನಲ್ಲಿ ಕಬ್ಬಿಣ, ಮ್ಯಾಂಗನೀಸ್ ಅಲ್ಪ ಪ್ರಮಾಣದಲ್ಲಿ ದೊರೆಯುತ್ತವೆ. ಹರಪನಹಳ್ಳಿಯ ಬಳಿ ತಾಮ್ರದ ನಿಕ್ಷೇಪ ದೊರೆತಿದೆ. ಕೆಲವು ಕಡೆ ಬಂಗಾರ ದೊರೆಯುತ್ತಿದ್ದು, ಹಿಂದೆ ಕಬ್ಬಿಣ, ಮ್ಯಾಂಗನೀಸ್, ಬಂಗಾರದ ಗಣಿಗಾರಿಕೆಯನ್ನು ಸ್ಥಳೀಯ ಬುಡಕಟ್ಟುಗಳು ನಡೆಸುತ್ತಿದ್ದುದಾಗಿ ತಿಳಿದುಬರುತ್ತದೆ. ಇತ್ತೀಚೆಗೆ ಬೀಡಿ ಕಟ್ಟುವ ಉದ್ಯಮದಿಂದ ಬಡ ಕುಟುಂಬಗಳು ಜೀವನ ನಿರ್ವಹಣೆ ಮಾಡುತ್ತವೆ. ಮಳೆ ಯಾಧರಿತ ಕೃಷಿ ಚಟುವಟಿಕೆಯೇ ಈ ತಾಲೂಕಿನಲ್ಲಿ ಮುಖ್ಯವಾಗಿರುವುದರಿಂದ ಮಳೆಗಾಲದ ಸುಗ್ಗಿ ಮುಗಿದ ತರುವಾಯ ಇಲ್ಲಿಯ ಜನರು ಚಿಕ್ಕಮಗಳೂರು ಕಾಫಿ ತೋಟಗಳು, ಗೋವಾ, ಬೆಂಗಳೂರು, ಮಂಗಳೂರುಗಳಂತಹ ನಗರಗಳಿಗೆ ಕೂಲಿಯರಸಿ ವಲಸೆ ಹೋಗುತ್ತಿದ್ದಾರೆ. ಬಹುತೇಕ ಮಳೆಯಾಶ್ರಿತ ಭೂಮಿಯನ್ನು ಹೊಂದಿರುವ ಈ ತಾಲೂಕಿನ ಒಟ್ಟು ವಿಸ್ತೀರ್ಣವು ೧,೪೨೨.೦೩ ಚದರ ಕಿಲೋ ಮೀಟರ್‌ಗಳು. ಈ ತಾಲೂಕಿನ ಹೋಬಳಿ ಕೇಂದ್ರಗಳು ತೆಲಗಿ ಮತ್ತು ಚಿಗಟೇರಿಗಳಾಗಿವೆ. ಇಡೀ ತಾಲೂಕಿನಲ್ಲಿ ನೆಲೆ ನಿಂತಿರುವ ಒಟ್ಟು ಕುಟುಂಬಗಳು ೨೮,೮೭೧ರಷ್ಟು. ಈ ತಾಲೂಕಿನ ಒಟ್ಟು ಜನಸಾಂದ್ರತೆಯು ೧೬೪ರಷ್ಟಿದೆ.

೨೦೧೧ರ ಜನಗಣತಿ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆಯು ೨,೬೮,೯೩ರಷ್ಟಿದೆ. ಇದರಲ್ಲಿ ಪುರುಷರು ೧,೩೭,೬೦೮ ಹಾಗೂ ಮಹಿಳೆಯರು ೧,೩೧,೧೮೫ರಷ್ಟಿದ್ದಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೫೭,೩೮೪ ಇದ್ದು ಪುರುಷರು ೨೯,೫೪೯ ಹಾಗೂ ಮಹಿಳೆಯರು ೨೭,೮೩೫ರಷ್ಟಿದ್ದಾರೆ. ಈ ತಾಲೂಕಿನ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೪೩,೦೫೦ ಇದ್ದು ಇದರಲ್ಲಿ ಪುರುಷರು ೨೧,೯೯೧ ಹಾಗೂ ಮಹಿಳೆಯರು ೨೧,೦೫೯ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ಶೇಕಡಾ ೧೮.೨ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡಾ ೧೩.೬ರಷ್ಟಿದೆ. ಈ ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಲಿಂಗಾನುಪಾತವು ೯೫೩ರಷ್ಟಿದೆ. ಪರಿಶಿಷ್ಟ ಪಂಗಡದಲ್ಲಿ ೯೧೫ರಷ್ಟಿದೆ. ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡಾ ೫೮.೧ರಷ್ಟಿದೆ.

ಈ ತಾಲೂಕಿನಲ್ಲಿಯ ಕಂಚಿಕೇರಿ, ಮಾಚಿಹಳ್ಳಿ, ಕುಮಾರನಹಳ್ಳಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು ಆ ಮೂರು ಗ್ರಾಮಗಳ ವಿವರಗಳು ಈ ಕೆಳಗಿನಂತಿವೆ.

ಕಂಚಿಕೇರಿ ಗ್ರಾಮ

ಕಂಚಿಕೆರೆ ಗ್ರಾಮವು ಹರಪನಹಳ್ಳಿ ತಾಲೂಕು ಕೇಂದ್ರದಿಂದ ಸುಮಾರು ೪೦ ಕಿ.ಮೀ. ದೂರವಿರುವ ಈ ಗ್ರಾಮ ಒಳದಾರಿಯಲ್ಲಿ ದಾವಣಗೆರೆಗೆ ಹೋಗುವ ಹಾದಿಯಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೩೪೪ ಹೆಕ್ಟೇರುಗಳಷ್ಟಿದೆ. ಮಳೆಯಾಧಾರಿತ ಕೃಷಿಯನ್ನು ಈ ಗ್ರಾಮದ ಜನತೆ ಅವಲಂಬಿಸಿದ್ದಾರೆ. ಇತ್ತೀಚೆಗೆ ಗಂಗಾ ಕಲ್ಯಾಣ ಯೋಜನೆಯಿಂದ ಕೆಲವರು, ಬ್ಯಾಂಕಿನ ಸಹಕಾರದಿಂದ ಕೆಲವರು ಕೊಳವೆಬಾವಿಗಳನ್ನು ತೋಡಿಸಿಕೊಂಡು ತಮ್ಮ ಭೂಮಿಗಳಿಗೆ ನೀರಾವರಿ ಸೌಲಭ್ಯಗಳನ್ನು ಪಡೆದಿದ್ದಾರೆ. ಈ ಗ್ರಾಮದಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೧೭೦ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ವ್ಯಾಪ್ತಿಯಲ್ಲಿ ಒಟ್ಟು ೧೫ರಷ್ಟು ಕೊಳವೆಬಾವಿಗಳನ್ನು ನಿರ್ಮಿಸಲಾಗಿದೆ. ಈ ಬಾವಿಗಳಿಂದ ನೀರಾವರಿಗೊಂಡ ಭೂಮಿಯು ೪೦ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮಠಾಣಾ ಪ್ರದೇಶ ೬೦ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೧೧೪ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ ೯೬ ಇದ್ದರೆ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೯೮ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಕಂಚಿಕೇರಿ ಗ್ರಾಮದಲ್ಲಿರುವ ಒಟ್ಟು ಜನಸಂಖ್ಯೆಯು ೪೮೯೧ರಷ್ಟಿದ್ದು ಇದರಲ್ಲಿ ಪುರುಷರು ೨,೫೯೩ ಹಾಗೂ ಮಹಿಳೆಯರು ೨,೩೧೮ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆಯು ಒಟ್ಟು ೧೮೬ ಇದ್ದು ಪುರುಷರು ೫೩೮ ಹಾಗೂ ಮಹಿಳೆಯರು ೫೫೮ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೮೯೧ ಇದ್ದು ಇದರಲ್ಲಿ ಪುರುಷರು ೫೪೪ ಹಾಗೂ ಮಹಿಳೆಯರು ೪೯೭ರಷ್ಟಿದ್ದಾರೆ. ಅಂದರೆ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡಾ ೧೨.೧೨ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣವು ಶೇಕಡಾ ೧೨.೦೨ರಷ್ಟಿದೆ. ಲಿಂಗಾಯಿತ, ಬ್ರಾಹ್ಮಣ, ಮಾದಿಗ, ಕೊರಮ, ಮುಸ್ಲಿಂ, ಕುರುಬ, ವಾಲ್ಮೀಕಿ ಮುಂತಾದ ಜಾತಿಗಳಿಂದ ಕೂಡಿದ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಲಿಂಗಾಯಿತರ ಪ್ರಭಾವ ಹೆಚ್ಚಾಗಿದೆ.

ಮಾಚಿಹಳ್ಳಿ ಗ್ರಾಮ

ಮಾಚಿಹಳ್ಳಿ ಗ್ರಾಮವು ಹರಪನಹಳ್ಳಿ ತಾಲೂಕು ಕೇಂದ್ರದಿಂದ ಸುಮಾರು ೨೦ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಹರಿಹರಕ್ಕೆ ಹೋಗುವ ರಸ್ತೆಯಲ್ಲಿ ಬರುತ್ತದೆ. ಈ ಗ್ರಾಮ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೬೫ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯು ೩೪೪ ಹೆಕ್ಟೇರುಗಳಷ್ಟಿದೆ. ಬಹುತೇಕ ಒಣಬೇಸಾಯ ಕ್ರಮವನ್ನೇ ಅನುಸರಿಸುವ

ಒಂದು ಚಿಕ್ಕ ಕೆರೆ ಇದೆ. ಈ ಕೆರೆ ಸಹ ಮಳೆ ನೀರನ್ನೇ ಆಶ್ರಯಿಸಿದ ಕೆರೆಯಾಗಿದೆ. ಸಾಮಾನ್ಯವಾಗಿ ಮಳೆ ಕಡಿಮೆ ಬೀಳುವ ಪ್ರದೇಶ ಇದಾದುದರಿಂದ ಕೆರೆಗಳು ಒಂದು ವರ್ಷ ತುಂಬಿದರೆ ಮತ್ತೊಂದು ವರ್ಷ ತುಂಬಲಾರವು. ಹೀಗಾಗಿ ಕೆರೆ ನೀರನ್ನೇ ನಂಬಿ ರೈತರು ಜೀವಿಸುವಂತಿಲ್ಲ. ಕೆರೆ ನೀರಿನಿಂದ ನೀರಾವರಿಗೊಳ್ಳುವ ಭೂಮಿಯ ವಿಸ್ತೀರ್ಣ ಸುಮಾರು ೧೫ ಹೆಕ್ಟೇರುಗಳಷ್ಟಾಗಬಹುದು. ಆದರೆ ಇತ್ತೀಚೆಗೆ ರೈತರು ಕೊಳವೆಬಾವಿಗಳನ್ನು ತೆಗೆಸಿರುವುದರಿಂದ ಅಲ್ಪ ಪ್ರಮಾಣದಲ್ಲಿ ಒಣಬೇಸಾಯವನ್ನು ಅನುಸರಿಸುತ್ತಿದ್ದ ಭೂಮಿಗಳು ನೀರಾವರಿ ಕಾಣುವಂತಾಗಿದೆ. ಈ ಗ್ರಾಮ ವ್ಯಾಪ್ತಿಯಲ್ಲಿ ಈ ರೀತಿಯ ಒಟ್ಟು ೧೩ ಬಾವಿಗಳನ್ನು ಕಾಣಬಹುದು. ಬಾವಿಗಳಿಂದ ನೀರಾವರಿಗೊಂಡ ಭೂಮಿಯ ವಿಸ್ತೀರ್ಣ ೬೨ ಹೆಕ್ಟೇರುಗಳಷ್ಟಿದೆ. ಈ ಬಾವಿಗಳು ಸಹ ಮಳೆ ಬಾರದ ವರ್ಷ ಹೆಚ್ಚಿನ ಪ್ರಮಾಣದ ನೀರನ್ನು ಹೊರಹಾಕಲಾರವು. ಕೆರೆ ಬಾವಿಗಳಿದ್ದರೂ ಈ ಗ್ರಾಮಸ್ಥರು ನೀರಾವರಿಗಾಗಿ ಹೆಚ್ಚು ಬಳಲಬೇಕಾದ ಪ್ರಸಂಗಗಳೇ ಹೆಚ್ಚಾಗಿವೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ೪೭ ಹೆಕ್ಟೇರುಗಳಷ್ಟು ವ್ಯಾಪ್ತಿಯಲ್ಲಿ ಕುರುಚಲು ಕಾಡು ಇದೆ.

ಮಾಚಿಹಳ್ಳಿಯ ಒಟ್ಟು ಗ್ರಾಮಠಾಣಾ ಪ್ರದೇಶ ೨೧ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೆಲೆನಿಂತಿರುವ ಒಟ್ಟು ಕುಟುಂಬಗಳ ಸಂಖ್ಯೆ ೫೦೩ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ ೪೭ ಹಾಗೂ ಪರಿಶಿಷ್ಟ ಪಂಗಡಗಳ ಕುಟುಂಬಗಳ ಸಂಖ್ಯೆ ೨೨ರಷ್ಟಿವೆ.

೨೦೦೧ರ ಜನಗಣತಿ ಪ್ರಕಾರ ಮಾಚಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಯು ೩೮೪೩ ರಷ್ಟಿದ್ದು ಇದರಲ್ಲಿ ಪುರುಷರು ೨೦೧೮ ಹಾಗೂ ಮಹಿಳೆಯರು ೧೮೨೫ರಷ್ಟಿದ್ದಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೨೪೯ ಇದೆ. ಇದರಲ್ಲಿ ಪುರುಷರು ೧೩೬ ಹಾಗೂ ಮಹಿಳೆಯರು ೧೧೩ರಷ್ಟು ಇದ್ದಾರೆ. ಹಾಗೆ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೬೯ ಇದ್ದು ಪುರುಷರು ೮೧ ಮಹಿಳೆಯರು ೭೮ರಷ್ಟಿದ್ದಾರೆ. ಇತರರಿಗೆ ಹೋಲಿಸಿದರೆ ಈ ಗ್ರಾಮದ ಒಟ್ಟು ಪರಿಶಿಷ್ಟ ಜಾತಿಯವರ ಜನಸಂಖ್ಯಾ ಪ್ರಮಾಣ ಶೇಕಡಾ ೬.೨೧ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಜನಸಂಖ್ಯೆ ಪ್ರಮಾಣ ಶೇಕಡಾ ೪.೧೩ರಷ್ಟಿದೆ.

ಕುಮಾರನಹಳ್ಳಿ ಗ್ರಾಮ

ಕುಮಾರನಹಳ್ಳಿ ಗ್ರಾಮವು ಹರಪನಹಳ್ಳಿ ತಾಲೂಕು ಕೇಂದ್ರದಿಂದ ಸುಮಾರು ೧೦ ಕಿ.ಮೀ.ಗಳಷ್ಟು ದೂರದಲ್ಲಿದೆ. ಸಮತಟ್ಟಾದ ಭೂಮಿಯನ್ನು ಹೊಂದಿದ ಗ್ರಾಮದ ಒಟ್ಟು ಭೌಗೋಳಿಕ ವ್ಯಾಪ್ತಿಯು ೩೬ ಹೆಕ್ಟೇರುಗಳಷ್ಟಿದೆ. ಒಟ್ಟು ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೫೩೪ ಹೆಕ್ಟೇರುಗಳಷ್ಟಿದೆ. ಕೇವಲ ಒಣ ಬೇಸಾಯವನ್ನು ಇಲ್ಲಿಯ ಜನ ಅವಲಂಬಿಸಿದ್ದಾರೆ. ಇತ್ತೀಚೆಗೆ ಕೆಲವರು ಕೊಳವೆ ಬಾವಿಯನ್ನು ತೋಡಿಸಿರುವರಾದರೂ ವಿದ್ಯುತ್ ಕೊರತೆಯಿಂದ ಅವು ಅಷ್ಟಕ್ಕಷ್ಟೇ ಎನ್ನುವಂತಾಗಿದೆ.

ಮುಸುಕಿನ ಜೋಳ, ಜೋಳ, ಸಜ್ಜೆ, ರಾಗಿ, ಮೆಣಸಿನಕಾಯಿ, ಹತ್ತಿ ಮುಂತಾದವುಗಳನ್ನು, ಇತ್ತೀಚಿನ ದಿನಗಳಲ್ಲಿ ಸೀಡ್ಸ್ ಬೆಳೆಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಒಟ್ಟು ಗ್ರಾಮಠಾಣಾ ಪ್ರದೇಶವು ೨೭ ಹೆಕ್ಟೇರುಗಳಷ್ಟಿದೆ.

ಕುಮಾರನಹಳ್ಳಿ ಗ್ರಾಮದಲ್ಲಿ ನೆಲೆ ನಿಂತ ಒಟ್ಟು ಕುಟುಂಬಗಳ ಸಂಖ್ಯೆ ೮೮೧ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಕುಟುಂಬಗಳ ಸಂಖ್ಯೆ ೧೬ ಇದ್ದರೆ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆಯು ೪೯೮ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಕುಮಾರನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಜನಸಂಖ್ಯೆಯು ೧೪೨೫ ಇದ್ದು ಇದರಲ್ಲಿ ಪುರುಷರು ೭೪೫ ಹಾಗೂ ಮಹಿಳೆಯರು ೬೮೦ರಷ್ಟಿದ್ದಾರೆ.ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೧೨೪ ಇದ್ದು ಪುರುಷರು ೬೪ ಹಾಗೂ ಮಹಿಳೆಯರು ೬೦ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೦೩೬ ಇದ್ದು ಇದರಲ್ಲಿ ಪುರುಷರು ೬೭ ಹಾಗೂ ಮಹಿಳೆಯರು ೩೬೪ರಷ್ಟಿದ್ದಾರೆ. ಅಂದರೆ ಗ್ರಾಮದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡಾ ೮.೭೦ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡ ದವರ ಜನಸಂಖ್ಯಾ ಪ್ರಮಾಣವು ಶೇಕಡಾ ೭೨.೭೦ರಷ್ಟಿದೆ. ಪರಿಶಿಷ್ಟ ಪಂಗಡದಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣ ತುಂಬಾ ಕಡಿಮೆಯಿದೆ. ಲಿಂಗಾಯಿತ, ಬ್ರಾಹ್ಮಣ, ಕುಂಬಾರ, ಕಮ್ಮಾರ, ಅಕ್ಕಸಾಲಿ, ಕುರುಬ, ವಾಲ್ಮೀಕಿ, ಮಾದಿಗ, ಮುಸ್ಲಿಂ ಮುಂತಾದ ಜಾತಿಗಳನ್ನು ಹೊಂದಿರುವ ಈ ಗ್ರಾಮದಲ್ಲಿ ಬೇಡರೇ ಪ್ರಬಲರಾಗಿದ್ದಾರೆ.

೨.೬.೪. ಹರಿಹರ ತಾಲೂಕು

ಹರಿಹರ ತಾಲೂಕು ಕರ್ನಾಟಕದ ಮಧ್ಯದಲ್ಲಿದೆ. ಒಂದು ಕಾಲದಲ್ಲಿ ಇದನ್ನು ರಾಜ್ಯದ ರಾಜಧಾನಿಯನ್ನಾಗಿ ಮಾಡುವ ಉದ್ದೇಶವಿತ್ತಂತೆ. ಈ ತಾಲೂಕು ಹಾವೇರಿ ಜಿಲ್ಲೆಯ ಗಡಿಯನ್ನು ಹೊಂದಿದೆ. ಈ ತಾಲೂಕಿನಲ್ಲಿ ತಂಗಾಭದ್ರ ನದಿಯಿಂದಾಗಿ ನೀರಾವರಿ ಕಂಡುಬರುತ್ತದೆ. ತುಂಗಾಭದ್ರ ನದಿಯು ಜಿಲ್ಲೆಯ ಜೀವನದಿಯಾಗಿದೆ. ರಾಜ್ಯದ ರಾಜಧಾನಿಗೆ ಸುಮಾರು ೨೭೫ ಕಿ.ಮೀ. ದೂರದಲ್ಲಿದೆ. ಇದು ರಾಷ್ಟ್ರೀಯ ಹೆದ್ದಾರಿ ೪ (ಪೂನಾ, ಬೆಂಗಳೂರು) ಮಾರ್ಗದಲ್ಲಿದೆ. ಹರಿಹರವನ್ನು ದೇವಸ್ಥಾನಗಳ ಊರೆಂದು ಕರೆಯಲಾಗುತ್ತದೆ. ಇಲ್ಲಿಯ ಮುಖ್ಯ ಬೆಳೆ ಭತ್ತ, ಕಬ್ಬು, ಮೆಕ್ಕೆಜೋಳ, ಜೋಳ, ಹತ್ತಿ, ಮೆಣಸಿನಕಾಯಿ ಮುಂತಾದವುಗಳಾಗಿವೆ. ಅಲ್ಲದೆ ಹಲವು ಪ್ರಮುಖ ಕೈಗಾರಿಕಾ ಸಂಸ್ಥೆಗಳನ್ನು ಹೊಂದಿದೆ. ಆದ್ದರಿಂದ ಈ ತಾಲೂಕು ಸಾಕಷ್ಟು ಜನರಿಗೆ ಜೀವನಾಧಾರವಾಗಿದೆ. ಇಲ್ಲಿಯ ಪ್ರಮುಖ ಕೈಗಾರಿಕಾ ಸಂಸ್ಥೆಗಳಲ್ಲಿ ಉಲ್ಲೇಖನೀಯವಾದವುಗಳೆಂದರೆ ಮೈಸೂರು ಕಿರ್ಲೋಸ್ಕರ ಲಿಮಿಟೆಡ್ ಕಾರ್ಖಾನೆ (ಮೆಷಿನ್ ಟೂಲ್) ಈಗ ಮುಚ್ಚಲಾಗಿದೆ. ಹಾಗೆಯೇ ಹರಿಹರ ಪಾಲಿಫೈಬರ್ ಕಾರ್ಖಾನೆಗಳು ಕಂಡುಬರುತ್ತವೆ. ಅಲ್ಲದೇ ದುಂಡಪ್ಪ, ಶ್ರೀಕಾಂತ ತಾಂಬೆ, ಡಾ. ಪಿ.ಎಲ್.

ಲೋಕಾಪುರ, ಡಿ. ಪ್ರಿನ್ಸಿಸ್ ಕೇವಿಯರ್, ವಿರೂಪಾಕ್ಷ ಕುಲಕರ್ಣಿ, ಲಲಿತಮ್ಮ, ಚಂದ್ರಶೇಖರ ಎನ್ನುವ ಅನೇಕ ಸಾಹಿತಿಗಳನ್ನು ಕಂಡಂತಹ ತಾಲೂಕು ಇದಾಗಿದೆ. ಭೌಗೋಳಿಕವಾಗಿ ದಾವಣಗೆರೆ ಜಿಲ್ಲೆಯಲ್ಲಿ ವಿಸ್ತಾರದಲ್ಲಿ ಈ ತಾಲೂಕು ಕೊನೆಯ ಸ್ಥಾನವನ್ನು ಪಡೆದಿದೆ. ಈ ತಾಲೂಕಿನ ಒಟ್ಟು ವಿಸ್ತೀರ್ಣವು ೪೮೬.೦೮ ಚ.ಕಿ.ಮೀಗಳಷ್ಟಿದೆ. ಈ ತಾಲೂಕಿನ ಹೋಬಳಿ ಕೇಂದ್ರವು ಮಲೆಬೆನ್ನೂರಾಗಿದೆ. ಕೈಗಾರಿಕೆ ಹಾಗೂ ಕೃಷಿಯನ್ನು ಆಧರಿಸಿದ ಪ್ರಮುಖ ತಾಲೂಕು ಇದಾಗಿದೆ. ಈ ತಾಲೂಕು ಆರ್ಥಿಕವಾಗಿ ಮುಂದಿದ್ದರೂ ಕೈಗಾರಿಕೋದ್ಯಮಗಳ ಕುಸಿತದಿಂದಾಗಿ ಸ್ವಲ್ಪಮಟ್ಟಿಗೆ ಹಿನ್ನೆಡೆ ಸಾಧಿಸಿದಂತಾಗಿದೆ. ಒಟ್ಟು ೮೬ ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ೪,೨೯೮ ಕುಟುಂಬಗಳು ನೆಲೆನಿಂತಿವೆ. ಪಕ್ಕದ ಬಳ್ಳಾರಿ, ಹಾವೇರಿ ಕಡೆಯ ಜನರು ಕೆಲಸ ಹುಡುಕಿಕೊಂಡು ಈ ಕಡೆ ವಲಸೆ ಬರುತ್ತಾರೆ. ಜೊತೆಗೆ ಇದೇ ಜಿಲ್ಲೆಯ ಹರಪನಹಳ್ಳಿ ಜಗಳೂರಿನ ಕಡೆಯ ಕೂಲಿ ಕಾರ್ಮಿಕರು ವಲಸೆ ಬರುವುದುಂಟು. ಒಟ್ಟಾರೆಯಾಗಿ ೨೨೭ರಷ್ಟು ಜನಸಾಂದ್ರತೆಯನ್ನು ಈ ತಾಲೂಕು ಹೊಂದಿದೆ. ೨೦೦೧ರ ಜನಗಣತಿ ಪ್ರಕಾರ ಈ ತಾಲೂಕಿನ ಜನಸಂಖ್ಯೆ ಒಟ್ಟು ೨,೪೫,೬೫೪ರಷ್ಟಿದೆ. ಇದರಲ್ಲಿ ಪುರುಷರು ೧,೨೬,೧೨೮ ಹಾಗೂ ಮಹಿಳೆಯರು ೧,೧೯,೫೨೬ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ೩೧,೨೦೩ರಷ್ಟಿದೆ. ಪರಿಶಿಷ್ಟ ಜಾತಿಯವರಲ್ಲಿ ಪುರುಷರು ೧೫,೯೪೮ ಹಾಗೂ ಮಹಿಳೆಯರು ೧೫,೨೫೫ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದ ಜನಸಂಖ್ಯೆ ೨೦,೮೯೨ರಷ್ಟಿದೆ. ಇದರಲ್ಲಿ ಪುರುಷರು ೧೦,೬೫೪ ಹಾಗೂ ಮಹಿಳೆಯರು ೧೦,೨೩೮ರಷ್ಟಿದ್ದಾರೆ. ಅಂದರೆ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡಾ ೧೯.೩ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡಾ ೧೭.೯ರಷ್ಟಿದೆ. ಈ ತಾಲೂಕಿನಲ್ಲಿ ದೇವರಬೆಳಕೆರೆ, ಕೊಕ್ಕನೂರು, ರಾಜನಹಳ್ಳಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು ಅವುಗಳ ವಿವರ ಈ ಕೆಳಗಿನಂತಿದೆ.

ದೇವರಬೆಳಕೆರೆ ಗ್ರಾಮ

ದೇವರ ಬೆಳಕೆರೆ ಗ್ರಾಮವು ತಾಲೂಕು ಕೇಂದ್ರದಿಂದ ಆಗ್ನೆಯದಿಕ್ಕಿನಲ್ಲಿ ೧೫ ಕಿ.ಮೀ. ದೂರದಲ್ಲಿ ಕಂಡುಬರುತ್ತದೆ. ಜಿಲ್ಲಾಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಈ ಗ್ರಾಮಕ್ಕೆ ದೇವರ ಬೆಳಕೆರೆ ಎಂದು ಹೆಸರು ಬಂದಿರುವ ಹಿನ್ನೆಲೆಯನ್ನು ಅವಲೋಕಿಸಿದಾಗ ಎರಡು ರೀತಿಯ ಹಿನ್ನೆಲೆಗಳು ಕಂಡುಬರುತ್ತವೆ. ಒಂದು ಮೂಲದ ಪ್ರಕಾರ ಚನ್ನಗಿರಿ ತಾಲೂಕಿನ ಶಾಂತಿ ಸಾಗರ ಕೆರೆಯಲ್ಲಿ ದುಮ್ಮಿ ಬೆಟ್ಟದವರೆಗೆ ನೀರು ನಿಲ್ಲಿಸುತ್ತೇನೆಂದು ಆ ಪ್ರಾಂತ್ಯದ ಅರಸ ತನ್ನ ಪ್ರೇಯಸಿಗೆ ಮಾತು ಕೊಟ್ಟಿದ್ದು ನಂತರ ನಿಲ್ಲಿಸಲು ಸಾಧ್ಯವಾಗದೆ ಬಿಳಿ ಪಂಚೆಯನ್ನು ದುಮ್ಮಿ ಬೆಟ್ಟಕ್ಕೆ ಹೊಂದಿಕೊಂಡಂತೆ ನಂಬಿಸಲು ಪ್ರಯತ್ನಿಸುತ್ತಾನೆ. ಆದರೆ ಇದರ ಮೋಸವನ್ನರಿತ ಪ್ರೇಯಸಿ ಕೋಪಗೊಂಡು ಶಾಂತಿ ಕೆರೆಗೆ ಹಾರಿದಾಗ ಅಲ್ಲಿನ ಕತ್ತರಿ ಚಕ್ರಕ್ಕೆ ಸಿಕ್ಕು ಆಕೆಯ ದೇಹ ತುಂಡು

ತುಂಡಾಯಿತು. ಇದರಿಂದ ಆಕೆಯ ದೇಹದ ಭಾಗಗಳು ಬಿದ್ದಸ್ಥಳಗಳು ಅದೇ ಹೆಸರಿನಲ್ಲಿ ಕರೆಯಲ್ಪಡುತ್ತವೆ. ಕಾಲುಬಿದ್ದ ಕಡೆ ಕಾರಿಗನೂರು, ಕೈಬಿದ್ದ ಕಡೆ ಕತ್ತಲಗೆರೆ, ಮೂಗು ಬಿದ್ದ ಕಡೆ ಮುತ್ತೇನೆಹಳ್ಳಿ, ನಾಲಿಗೆ ಬಿದ್ದಕಡೆ ನಾಗರಸನಹಳ್ಳಿ, ಜಡೆ ಬಿದ್ದಕಡೆ ಜೆಡೆಗನಹಳ್ಳಿ, ಬಾಯಿ ಬಿದ್ದಕಡೆ ಬಲ್ಲೂರು, ಶಿರ ಬಿದ್ದಕಡೆ ಶಿರಗಾನಹಳ್ಳಿ ಹಾಗೂ ದೇಹದ ಎಲ್ಲಾ ಭಾಗಗಳು ಸೇರಿ ತಂದು ಇಟ್ಟ ಸ್ಥಳವು ದೇವರ ಬೆಳಕೆರೆ ಎಂದು ಹೆಸರು ಬಂದಿದೆ ಎಂದು ಚಾರಿತ್ರಿಕ ಮೂಲಗಳು ತಿಳಿಸಿದರೆ ಮತ್ತೊಂದು ಮೂಲದ ಪ್ರಕಾರ ದೇವರ ಬೆಳಕೆರೆಯ ಸುತ್ತ ಹಿಂದೆ ದಟ್ಟ ಅಡವಿ ಇದ್ದು, ಪಕ್ಕದ ಗ್ರಾಮದ ಹಸು ಅಡವಿ ಮದ್ಯದಲ್ಲಿರುವ ಹುತ್ತಕ್ಕೆ ಹಾಲು ಕರೆಯುತ್ತಿತ್ತು. ನಂತರ ಜನರು ಇದನ್ನು ಗಮನಿಸಿ ಹುತ್ತವನ್ನು ಒಡೆದಾಗ ಶಿವಲಿಂಗ ಪತ್ತೆಯಾಯಿತು. ಆ ಶಿವಲಿಂಗದಲ್ಲಿ ಬೆಳಕು ಕಂಡಿತು. ಆದ್ದರಿಂದ ಇದನ್ನು ದೇವರು ಮೂಡಿದ ಸ್ಥಳವೆಂದು ಕರೆದರು. ಈ ಸ್ಥಳದ ಹತ್ತಿರ ಕೆರೆಯಿದ್ದುದರಿಂದ ದೇವರ ಬಳಿ ಕೆರೆ ಎಂದು ಕ್ರಮೇಣ ಇಂದು ದೇವರ ಬೆಳಕೆರೆ ಎಂಬ ಹೆಸರು ಬಂದಿದೆ ಎಂಬ ಕಥೆಯೂ ಕೂಡ ಕೇಳಿಬರುತ್ತದೆ. ಅಂದು ಪತ್ತೆಯಾದ ಶಿವಲಿಂಗವೇ ಇಂದು ಗ್ರಾಮದ ಪ್ರಮುಖ ದೇವಸ್ಥಾನದ ಮೈಲಾರ ಲಿಂಗೇಶ್ವರ ಮುಖ್ಯಮೂರ್ತಿ ಎಂಬ ನಂಬಿಕೆ ಇದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೩,೩೬೪ ಹೆಕ್ಟೇರುಗಳಷ್ಟಿದೆ. ಈ ಗ್ರಾಮದ ವ್ಯಾಪ್ತಿಯಲ್ಲಿ ಭದ್ರಾ ಕಾಲುವೆಯು ಹರಿಯುತ್ತದೆ. ಈ ಕೆರೆ, ಕಾಲುವೆಯಿಂದಾಗಿ ಗ್ರಾಮದ ವ್ಯಾಪ್ತಿಯಲ್ಲಿ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರೆತಂತಾಗಿದೆ. ಕಾಲುವೆ ನೀರು ಉಣಿಸಲು ಸಾಧ್ಯವಾಗದ ಭೂಮಿಗಳಿಗೆ ಕೊಳವೆ ಬಾವಿಯ ನೀರನ್ನು ಪೂರೈಸಲಾಗುತ್ತದೆ. ಈ ರೀತಿಯ ಒಟ್ಟು ಹದಿನೈದು ಬಾವಿಗಳು ಗ್ರಾಮದ ವ್ಯಾಪ್ತಿಯಲ್ಲಿ ಕಂಡುಬರುತ್ತವೆ. ಇಂತಹ ಬಾವಿಗಳಿಂದಾಗಿ ನೀರಾವರಿಗೊಂಡ ಕೃಷಿ ಪ್ರದೇಶವು ಸುಮಾರು ೭೫ ಹೆಕ್ಟೇರುಗಳಷ್ಟಾಗುತ್ತದೆ. ಈ ಗ್ರಾಮ ವ್ಯಾಪ್ತಿಯಲ್ಲಿ ಕೃಷಿಗಾಗಿ ನೀರಾವರಿಗೊಂಡ ಭೂಮಿಯ ವಿಸ್ತೀರ್ಣ ೨೩೯ ಹೆಕ್ಟೇರುಗಳಾಗಿದೆ. ಒಟ್ಟು ಗ್ರಾಮ ವ್ಯಾಪ್ತಿಯ ಠಾಣಾ ಪ್ರದೇಶವು ೨೭ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿ ನೆಲೆ ನಿಂತಿರುವ ಕುಟುಂಬಗಳ ಸಂಖ್ಯೆಯು ೫೪೯ರಷ್ಟಿದೆ. ಇದರಲ್ಲಿ ೩೭ ಪರಿಶಿಷ್ಟ ಜಾತಿ ಕುಟುಂಬಗಳು ಹಾಗೂ ೪೬ ಪರಿಶಿಷ್ಟ ಪಂಗಡದ ಕುಟುಂಬಗಳು ಕಂಡುಬರುತ್ತವೆ. ಈ ಗ್ರಾಮದ ಒಟ್ಟು ಜನಸಂಖ್ಯೆ ೨೦೧೧ರ ಪ್ರಕಾರ ೨೭೧೨ರಷ್ಟಿದೆ. ಇದರಲ್ಲಿ ಪುರುಷರು ೧೪೮೯ ಹಾಗೂ ಮಹಿಳೆಯರು ೧೨೯೫ರಷ್ಟಿದ್ದಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೪೬೧ ಇದ್ದು ಇದರಲ್ಲಿ ಪುರುಷರು ೨೪೮ ಹಾಗೂ ಮಹಿಳೆಯರು ೨೧೩ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ಒಟ್ಟು ೬೫೧ರಷ್ಟಿದ್ದು ಇದರಲ್ಲಿ ಪುರುಷರು ೩೪೦ ಹಾಗೂ ಮಹಿಳೆಯರು ೩೧೧ರಷ್ಟಿದ್ದಾರೆ.

ಕೊಕ್ಕನೂರು ಗ್ರಾಮ

ಕೊಕ್ಕನೂರು ಗ್ರಾಮವು ಹರಿಹರ ತಾಲೂಕು ಕೇಂದ್ರದಿಂದ ಸುಮಾರು ೨೬ ಕಿ.ಮೀ. ದೂರದಲ್ಲಿದೆ. ಜಿಲ್ಲಾ ಕೇಂದ್ರದಿಂದ ೩೯ ಕಿ.ಮೀ. ದೂರದಲ್ಲಿದೆ. ಕೊಕ್ಕನೂರು ಎಂಬ ಹೆಸರಿನ

ಹಿನ್ನೆಲೆಯನ್ನು ಅವಲೋಕಿಸಿದಾಗ ಎರಡು ರೀತಿಯ ಐತಿಹಾಸಿಕ ಹಿನ್ನೆಲೆಗಳು ಕಂಡುಬರುತ್ತದೆ. ಹಿಂದೆ ಕೊಕ್ಕಪ್ಪಜ್ಜ ಎಂಬ ಹೆಸರಿನ ವೈದ್ಯ ತನ್ನ ವೈದ್ಯ ವೃತ್ತಿಯನ್ನು ಮಾಡುತ್ತಾ ಮೊಟ್ಟಮೊದಲು ಬಂದು ಈ ಊರಿನಲ್ಲಿ ನೆಲೆಸಿದನಂತೆ. ಇದರಿಂದ ಕೊಕ್ಕನೂರು ಎಂಬ ಹೆಸರು ಬಂದಿದೆ ಎಂಬುದು ಒಂದು ಮೂಲದಿಂದ ತಿಳಿದು ಬಂದರೆ, ಹಿಂದೆ ಈ ಪ್ರದೇಶದಲ್ಲಿ ಕೋಳಿ, ಪಾರಿವಾಳಗಳನ್ನು ಹಿಂಡು ಹಿಂಡಾಗಿ ಸಾಕುತ್ತಿದ್ದರಂತೆ, ಆದ್ದರಿಂದ ಈ ಊರನ್ನು ಕೊಕ್ಕಟೆಗಳ ಊರು ಎಂದು ಕರೆಯುತ್ತಿದ್ದರಂತೆ ಇದು ಕಾಲಕ್ರಮೇಣ ಕೊಕ್ಕನೂರು ಎಂದಾಗಿದೆ ಎಂದು ತಿಳಿದುಬರುತ್ತದೆ. ಈ ಗ್ರಾಮವು ಭೌಗೋಳಿಕವಾಗಿ ೩೯೭೬ ಹೆಕ್ಟೇರುಗಳಷ್ಟು ವಿಸ್ತೀರ್ಣವಾಗಿದೆ. ಈ ಗ್ರಾಮವು ಸಮತಟ್ಟಾದ ಭೂಮಿಯನ್ನು ಹೊಂದಿದೆ. ಈ ಗ್ರಾಮ ವ್ಯಾಪ್ತಿಯಲ್ಲಿ ಒಟ್ಟು ೬೮೫ ಹೆಕ್ಟೇರುಗಳಷ್ಟು ಭೂಮಿಯು ಸಾಗುವಳಿ ಮಾಡಲು ಯೋಗ್ಯವಾಗಿದೆ. ತುಂಗಭದ್ರಾ ನದಿಯ ನೀರನ್ನು ಏತ ನೀರಾವರಿ ಪದ್ಧತಿಯಲ್ಲಿ ಕೃಷಿ ಭೂಮಿಗೆ ಒದಗಿಸಲಾಗುತ್ತದೆ. ಹಾಗೇ ಭದ್ರಾ ನಾಲೆಯ ನೀರು ಸಹ ಕೃಷಿಗೆ ನೀರೊದಗಿಸಲು ಬಳಕೆಯಾಗುತ್ತದೆ. ಈ ಗ್ರಾಮದಲ್ಲಿ ನೀರಾವರಿ ಹೊಂದಿದ ಪ್ರದೇಶವು ೫೭೪ ಹೆಕ್ಟೇರುಗಳಷ್ಟಿದೆ. ಕಾಲುವೆಯ ಹೊರತಾಗಿ ಇತರ ಮೂಲಗಳಿಂದ ನೀರಾವರಿಗೊಂಡ ಪ್ರದೇಶವು ೯೩ ಹೆಕ್ಟೇರುಗಳಷ್ಟಿದೆ. ಹೀಗಾಗಿ ಈ ಗ್ರಾಮದಲ್ಲಿ ನೀರಾವರಿಗೊಂಡ ಒಟ್ಟು ಭೂ ಪ್ರದೇಶ ೬೬೭ ಹೆಕ್ಟೇರುಗಳಷ್ಟಾಗುತ್ತದೆ. ಇಲ್ಲಿಯ ಮುಖ್ಯ ಬೆಳೆಯು ಭತ್ತವಾಗಿದ್ದು ಒಣಭೂಮಿಯಲ್ಲಿ ರಾಗಿ, ಜೋಳ, ಅಕ್ಕಡಿಕಾಳು ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಈ ಗ್ರಾಮದ ಗ್ರಾಮಠಾಣಾ ಪ್ರದೇಶ ೮ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೩೦೩ ಕುಟುಂಬಗಳು ನೆಲೆ ನಿಂತಿವೆ.

೨೦೧೧ರ ಜನಗಣತಿ ಪ್ರಕಾರ ಕೊಕ್ಕನೂರು ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿದ ಒಟ್ಟು ಜನಸಂಖ್ಯೆಯು ೪೬೭೩ ಇದ್ದು, ಇದರಲ್ಲಿ ಪುರುಷರು ೨೩೯೩ ಹಾಗೂ ಮಹಿಳೆಯರು ೨೨೮೦ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆಯ ೭೯೦ ಇದ್ದು ಪರಿಶಿಷ್ಟ ಜಾತಿಯ ಪುರುಷರು ೨೫೪ ಹಾಗೂ ಮಹಿಳೆಯರು ೨೬೭ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧೨೮೭ ಇದ್ದು ಪುರುಷರು ೬೫೫ ಹಾಗೂ ಮಹಿಳೆಯರು ೬೩೨ರಷ್ಟಿದ್ದಾರೆ. ಅಂದರೆ ಗ್ರಾಮದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಜನಸಂಖ್ಯಾ ಪ್ರಮಾಣವು ಶೇ. ೧೬.೦೧ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇ. ೬.೬೫ರಷ್ಟಿದೆ. ಈ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಾಕ್ಷರತೆಯ ಪ್ರಮಾಣ ತುಂಬಾ ಶೋಚನೀಯವಾಗಿದೆ.

ರಾಜನಹಳ್ಳಿ ಗ್ರಾಮ

ರಾಜನಹಳ್ಳಿ ಗ್ರಾಮವು ಹರಿಹರ ತಾಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿರುವ ರಾಜನಹಳ್ಳಿ ಗ್ರಾಮವು ಸಮತಟ್ಟಾದ ಭೂಮಿಯನ್ನು ಹೊಂದಿದೆ. ಈ ಗ್ರಾಮವು ರಾಜ್ಯ ಹೆದ್ದಾರಿಗೆ

ಹತ್ತಿರದಲ್ಲಿರುವ ಸಾರಥಿ ಗ್ರಾಮದ ಪಕ್ಕದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೫೫೨ ಹೆಕ್ಟೇರುಗಳಷ್ಟಿದೆ. ಇದರಲ್ಲಿ ನೀರಾವರಿ ಹೊಂದಿದ ಒಟ್ಟು ಭೂಮಿ ೪೫೨ ಹೆಕ್ಟೇರುಗಳಷ್ಟಿದೆ. ಕಾಲುವೆಯ ನೀರನ್ನು ಉಪಯೋಗಿಸಿಕೊಂಡು ಕೃಷಿ ಮಾಡಲ್ಪಡುವ ಭೂಮಿಯು ೩೫೦ ಹೆಕ್ಟೇರುಗಳಷ್ಟಿದೆ. ಕುರುಚಲು ಕಾಡನ್ನು ಹೊಂದಿರುವ ಈ ಗ್ರಾಮದ ಅರಣ್ಯ ಪ್ರದೇಶವು ಸುಮಾರು ೨೦ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮದ ಗ್ರಾಮಠಾಣಾ ಪ್ರದೇಶವು ೩೭ ಚ.ಕಿ.ಮೀ.ಗಳಷ್ಟು ಹರಡಿಕೊಂಡಿದೆ. ಈ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳು ೩೫೦ರಷ್ಟಿವೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳು ಒಟ್ಟು ೧೦೭ ಇದ್ದು ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೪೯ರಷ್ಟಿದೆ. ೨೦೧೧ರ ಜನಗಣತಿ ಪ್ರಕಾರ ಈ ಗ್ರಾಮದ ಜನಸಂಖ್ಯೆ ೨೭೪೯ ಇದ್ದು ಇದರಲ್ಲಿ ಪುರುಷರು ೧೪೩೧ ಹಾಗೂ ಮಹಿಳೆಯರು ೧೩೧೮ರಷ್ಟಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಒಟ್ಟು ೭೯೦ ಇದ್ದು ಇದರಲ್ಲಿ ಪುರುಷರು ೪೦೯ ಹಾಗೂ ಮಹಿಳೆಯರು ೩೮೧ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ಒಟ್ಟು ೨೬೭ ಇದ್ದು ಪುರುಷರು ೧೪೧ ಹಾಗೂ ಮಹಿಳೆಯರು ೧೨೬ರಷ್ಟಿದ್ದಾರೆ. ಅಂದರೆ ಒಟ್ಟು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡಾ ೩೨.೫ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣ ಶೇಕಡಾ ೭.೨೭ರಷ್ಟಿದೆ. ಇನ್ನುಳಿದ ಇತರರ ಪ್ರಮಾಣವು ಶೇ. ೬೦.೨೩ರಷ್ಟಿದೆ. ಪರಿಶಿಷ್ಟ ಪಂಗಡಕ್ಕೆ ಹೋಲಿಸಿದರೆ ಪರಿಶಿಷ್ಟ ಜಾತಿ ಹಾಗೂ ಇತರರಲ್ಲಿ ಮಹಿಳೆಯರ ಪ್ರಮಾಣಕ್ಕಿಂತ ಪುರುಷರ ಪ್ರಮಾಣವೇ ಅಧಿಕವಾಗಿರುವುದು ಕಂಡು ಬರುತ್ತದೆ. ಈ ಗ್ರಾಮದಲ್ಲಿ ಕೃಷಿಕರು ಹಾಗೂ ಶ್ರೀಮಂತರಿಗಿಂತ ಕೃಷಿಕೂಲಿಕಾರರೇ ಅಧಿಕವಾಗಿದ್ದಾರೆ. ಈ ಗ್ರಾಮಗಳಿಂದ ಹತ್ತಿರದ ತಾಲೂಕು ಕೇಂದ್ರಕ್ಕೆ ಕೂಲಿಯನ್ನು ಹುಡುಕಿಕೊಂಡು ಹೋಗುವವರ ಪ್ರಮಾಣ ಅಧಿಕವಾಗಿದೆ. ಇಲ್ಲಿಯೂ ಸಾಕ್ಷರತೆಯ ಪ್ರಮಾಣ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಅತ್ಯಧಿಕವಾಗಿ ತಳಹಂತದಲ್ಲಿರುವುದು ಕಂಡುಬರುತ್ತದೆ. ಈ ಗ್ರಾಮದಲ್ಲಿ ವಾಲ್ಮೀಕಿ ಗುರುಪೀಠವಿದೆ

೨.೬.೫. ಹೊನ್ನಾಳಿ ತಾಲೂಕು

೧೯೯೭ಕ್ಕೂ ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆಗೆ ಸೇರಿದ್ದ ಹೊನ್ನಾಳಿ ತಾಲೂಕು ಪ್ರಸ್ತುತ ದಾವಣಗೆರೆ ಜಿಲ್ಲಾ ವ್ಯಾಪ್ತಿಗೆ ಸೇರಿದೆ. ಚಿಕ್ಕ ಬೆಟ್ಟ ಗುಡ್ಡಗಳಿಂದ ಕೂಡಿದ ಈ ತಾಲೂಕಿನಲ್ಲಿ ತುಂಗಭದ್ರಾ ನದಿಯು ಹರಿಯುತ್ತದೆ ಜಿಲ್ಲಾ ಕೇಂದ್ರದಿಂದ ಸುಮಾರು ೬೩ ಕಿ.ಮೀ.ಗಳಷ್ಟು ಅಂತರದಲ್ಲಿ ತಾಲೂಕು ಕೇಂದ್ರವಿದೆ. ಶಿವಮೊಗ್ಗ, ಭದ್ರಾವತಿ, ಹರಿಹರ, ತಾಲೂಕುಗಳಿಂದ ಹಾಗೂ ಹಾವೇರಿ ಜಿಲ್ಲೆಯಿಂದ ಸುತ್ತುವರೆದಿರುವ ತಾಲೂಕು ಇದಾಗಿದೆ. ಸಾಂಸ್ಕೃತಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಅಲ್ಪಮಟ್ಟಿಗೆ ಪ್ರಗತಿಯಲ್ಲಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣವು ೫೫೬.೦೭ ಚ.ಕಿ.ಮೀಟರ್ ಗಳಷ್ಟಿದೆ. ಈ ತಾಲೂಕಿನಲ್ಲಿ ಒಟ್ಟು ೧೬೬ ಗ್ರಾಮಗಳಿವೆ. ಜಿಲ್ಲೆಯಲ್ಲಿಯೇ

ಕಡಿಮೆ ಭೂಪ್ರದೇಶ ಹೊಂದಿದ ಎರಡನೇ ತಾಲೂಕು ಇದಾಗಿದೆ. ಕೊನೆಯ ಸ್ಥಾನ ಹರಿಹರಕ್ಕೆ ಸಲ್ಲುತ್ತದೆ. ತಾಲೂಕಿನಲ್ಲಿ ಬೆಳಗುತ್ತಿ, ಗೋವಿನಕೋವಿ, ನ್ಯಾಮತಿ ಹೋಬಳಿ ಕೇಂದ್ರಗಳಾಗಿವೆ. ಅವುಗಳ ಹೊರತಾಗಿ ಇನ್ನುಳಿದವುಗಳೆಲ್ಲಾ ಹಳ್ಳಿಗಳೇ ಆಗಿವೆ. ಇಲ್ಲಿಯ ಬಹುತೇಕ ಗ್ರಾಮಗಳಿಗೆ ಇಂದಿಗೂ ಸಮರ್ಪಕವಾದ ಸರ್ಕಾರಿ ಬಸ್ಸಿನ ಸೌಲಭ್ಯ ಅಥವಾ ಸಾರಿಗೆ ಸಂಪರ್ಕವಿಲ್ಲವಾಗಿದೆ.

ಒಟ್ಟು ೪೨,೮೧೧ ಕುಟುಂಬಗಳನ್ನು ಹೊನ್ನಾಳಿ ತಾಲೂಕು ಹೊಂದಿದೆ. ಮಳೆಯಾಶ್ರಿತ ಚಿಕ್ಕ ಪುಟ್ಟ ಕೆರೆಗಳಲ್ಲದೆ ತುಂಗಭದ್ರಾ ನದಿಯನ್ನು ಈ ತಾಲೂಕು ಹೊಂದಿದೆ. ತುಂಗಭದ್ರಾ ನದಿಯ ಕಾಲುವೆಗಳಿಂದಾಗಿ ಈ ತಾಲೂಕು ನೀರಾವರಿ ಸೌಲಭ್ಯವನ್ನು ಪಡೆಯುವಂತಾಗಿದೆ. ಈ ತಾಲೂಕಿನ ಜನಸಾಂದ್ರತೆಯು ೧೨.೮ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಹೊನ್ನಾಳಿ ತಾಲೂಕಿನ ಒಟ್ಟು ಜನಸಂಖ್ಯೆ ೨,೨೨,೫೯೨ ಇದ್ದು ಇದರಲ್ಲಿ ಪುರುಷರು ೧,೧೩,೫೭೭ ಹಾಗೂ ಮಹಿಳೆಯರು ೧,೦೯,೦೧೫ರಷ್ಟಿದ್ದಾರೆ. ಈ ತಾಲೂಕಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೪೩,೩೯೬ ಇದ್ದು ಪುರುಷರು ೨೨,೦೮೮ ಹಾಗೂ ಮಹಿಳೆಯರು ೨೧,೩೦೮ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದಲ್ಲಿ ಒಟ್ಟು ಜನಸಂಖ್ಯೆ ೧೫,೮೭೪ ಇದ್ದು ಇದರಲ್ಲಿ ಪುರುಷರು ೮೦೩೫ ಹಾಗೂ ಮಹಿಳೆಯರು ೭,೮೩೯ರಷ್ಟು ಕಂಡು ಬರುತ್ತಾರೆ. ಈ ತಾಲೂಕಿನಲ್ಲಿ ಮೇದ, ವಾಲ್ಮೀಕಿ ಮುಂತಾದ ಪರಿಶಿಷ್ಟ ಪಂಗಡದ ಸಮುದಾಯ ದವರಿದ್ದಾರೆ.

ಹೊನ್ನಾಳಿ ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡಾ ೧೯.೪೯ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇಕಡಾ ೭.೧೩ರಷ್ಟಿದೆ. ತಾಲೂಕಿನ ರಾಜಕೀಯ ಹಿಡಿತ ಮೇಲ್ವರ್ಗಗಳದ್ದಾಗಿದೆ.

ಹೊನ್ನಾಳಿ ತಾಲೂಕಿನಲ್ಲಿ ಕಂಚಿಕೊಪ್ಪ, ಹನುಮನಹಳ್ಳಿ, ಕುಳಗಟ್ಟೆ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಆ ಮೂರು ಗ್ರಾಮಗಳ ವಿವರಗಳು ಈ ಕೆಳಗಿನಂತಿವೆ.

ಕಂಚಿಕೊಪ್ಪ ಗ್ರಾಮ

ಕಂಚಿಕೊಪ್ಪ ಗ್ರಾಮವು ಹೊನ್ನಾಳಿ ತಾಲೂಕು ಕೇಂದ್ರದಿಂದ ಸುಮಾರು ೯ ಕಿ.ಮೀ.ಗಳಷ್ಟು ದೂರವಿದೆ. ಹೋಬಳಿ ಕೇಂದ್ರಿಂದಲೂ ೯ ಕಿ.ಮೀ. ದೂರವಿದೆ. ಈ ಗ್ರಾಮಕ್ಕೆ ಕಂಚಿಕೊಪ್ಪ ಎಂಬ ಹೆಸರು ಬರಲು ಕಾರಣ, ಒಂದು ಬಾರಿ ಕಂಚಿನ ತೇರು, ಪಾದಗಟ್ಟೆ ಸೇರಿ ವಾಪಾಸಾಗುವಾಗ ಇರೋಗಣೆ ಸರದಲ್ಲಿ ತೇರು ಮುಳುಗಿದ್ದರಿಂದ ಕಂಚಿನಕೊಪ್ಪ ಎಂಬುದಾಗಿ ಹೆಸರು ಬಂದಿತೆಂದು ಐತಿಹಾಸಿಕ ಮೂಲದಿಂದ ತಿಳಿದುಬರುತ್ತದೆ. ಈ ಗ್ರಾಮವು ೫೩೭ ಹೆಕ್ಟೇರ್‌ಗಳಷ್ಟು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ೪೧೮ ಹೆಕ್ಟೇರ್‌ನಷ್ಟು ಭೂಮಿಯು ಸಾಗುವಳಿಗೆ ಯೋಗ್ಯವಾಗಿದೆ.

ನೀರಾವರಿಗೊಂಡ ಭೂಮಿಯು ೪೦೦ ಹೆಕ್ಟೇರ್‌ಗಳಷ್ಟಿದೆ. ೧೫೦ ಹೆಕ್ಟೇರ್‌ನಷ್ಟು ಭೂಮಿಯು ತುಂಗಭದ್ರಾ ನದಿಗೆ ನೇರವಾಗಿ ಪಂಪ್‌ಸೆಟ್ಟುಗಳನ್ನು ಅಳವಡಿಸಿಕೊಂಡು ಭೂಮಿಗೆ ನೀರು ಪಡೆಯಲಾಗುತ್ತಿದೆ. ಇನ್ನು ಸ್ವಲ್ಪ ಭೂಮಿ ಕೊಳವೆಬಾವಿಯನ್ನು ಅವಲಂಬಿಸಿದೆ. ಈ ಗ್ರಾಮದ ಠಾಣಾ ವ್ಯಾಪ್ತಿಯು ೧೦ ಹೆಕ್ಟೇರ್ ಇದೆ. ಈ ಗ್ರಾಮದ ಭೂಮಿಯಲ್ಲಿ ಅಡಕೆ, ತೆಂಗು, ಭತ್ತ, ಕಬ್ಬು, ಶೇಂಗಾ, ಈರುಳ್ಳಿ, ತರಕಾರಿಗಳು, ಜೋಳ, ಮುಸುಕಿನ ಜೋಳ, ರಾಗಿ, ತೊಗರಿ, ರೇಷ್ಮೆ, ಹತ್ತಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಗ್ರಾಮ ವ್ಯಾಪ್ತಿಯ ಒಟ್ಟು ಕುಟುಂಬಗಳ ಸಂಖ್ಯೆಯು ೩೨೦ ಇದ್ದು ಅದರಲ್ಲಿ ೨೬೦ರಷ್ಟು ಕುಟುಂಬಗಳು ಕೃಷಿ ಹಾಗೂ ಕೃಷಿಕೂಲಿಯನ್ನೇ ಆಧರಿಸಿವೆ. ಇನ್ನುಳಿದ ಕುಟುಂಬಗಳು ಕೃಷಿಕೂಲಿ ಯೊಂದಿಗೆ ಇತರ ಕೂಲಿಯನ್ನೂ ಸಹ ಮಾಡುವುದನ್ನು ಕಾಣುತ್ತೇವೆ. ಇದರಲ್ಲಿ ಪರಿಶಿಷ್ಟ ಜಾತಿಗಳ ೭೦ ಕುಟುಂಬಗಳು ಈ ಗ್ರಾಮದಲ್ಲಿ ನೆಲೆಸಿವೆ. ಪರಿಶಿಷ್ಟ ಪಗಡದ ೭ ಕುಟುಂಬಗಳು ನೆಲೆಸಿವೆ.

೨೦೦೧ರ ಜನಗಣತಿ ಪ್ರಕಾರ ಕಂಚಿಕೊಪ್ಪ ಗ್ರಾಮ ವ್ಯಾಪ್ತಿಯ ಒಟ್ಟು ಜನಸಂಖ್ಯೆಯ ೧೯೩೪ರಷ್ಟಿದೆ. ಇದರಲ್ಲಿ ಪುರುಷರ ಸಂಖ್ಯೆಯು ೧೦೦೬ ಹಾಗೂ ಮಹಿಳೆಯರ ಸಂಖ್ಯೆಯು ೯೨೮ರಷ್ಟಿದೆ. ಪರಿಶಿಷ್ಟ ಜಾತಿಯವರು ೨೭೫ರಷ್ಟಿದ್ದು ಇದರಲ್ಲಿ ಪುರುಷರು ೧೫೩ ಹಾಗೂ ಮಹಿಳೆಯರು ೧೨೨ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೨೫ ಇದ್ದು ಪುರುಷರು ೧೨ ಹಾಗೂ ಮಹಿಳೆಯರು ೧೩ರಷ್ಟಿದ್ದಾರೆ. ಒಟ್ಟಾರೆಯಾಗಿ ನೋಡಿದರೆ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರಿಶಿಷ್ಟ ಜಾತಿಯವರ ಜನಸಂಖ್ಯಾ ಪ್ರಮಾಣವು ಶೇಕಡಾ ೧೪.೨೧ರಷ್ಟಿದೆ, ಪರಿಶಿಷ್ಟ ಪಂಗಡದ ಜನಸಂಖ್ಯಾ ಪ್ರಮಾಣವು ಶೇಕಡಾ ೧.೨೯ರಷ್ಟಿದೆ.

ಹನುಮನಹಳ್ಳಿ ಗ್ರಾಮ

ಹನುಮನಹಳ್ಳಿ ಗ್ರಾಮವು ಹೊನ್ನಾಳಿ ತಾಲೂಕು ಕೇಂದ್ರದಿಂದ ಸುಮಾರು ೧೦ ಕಿ.ಮೀ.ಗಳಷ್ಟು ದೂರವಿರುವ ಹನುಮನಹಳ್ಳಿ ಗ್ರಾಮಕ್ಕೆ ಹೋಬಳಿಯು ಕೇವಲ ೨ ಕಿ.ಮೀ. ದೂರ ದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೮೩೬ ಹೆಕ್ಟೇರುಗಳಷ್ಟಿದೆ. ಇದರಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯು ೮೦೬ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿ ನೀರಾವರಿ ಸೌಲಭ್ಯ ಪಡೆಯುತ್ತಿರುವ ಭೂ ವಿಸ್ತೀರ್ಣವು ೩೧೭ ಹೆಕ್ಟೇರುಗಳಿದೆ. ಕಾಲುವೆಯ ಹೊರತಾಗಿ ಕೊಳವೆಬಾವಿ ಯಿಂದಲೂ ಕೆಲವು ಪ್ರದೇಶ ನೀರಾವರಿಯಾಗಿದೆ. ಇನ್ನುಳಿದ ಪ್ರದೇಶವು ಗುಡ್ಡ ಬೆಟ್ಟ, ಕಾಡಿನಿಂದ ಕೂಡಿದೆ. ಈ ಗ್ರಾಮ ವ್ಯಾಪ್ತಿಯಲ್ಲಿರುವ ಕೃಷಿ ಭೂಮಿಗೆ ನೀರುಣಿಸುವ ಬಾವಿಗಳು/ಕೊಳವೆಬಾವಿಗಳ ಸಂಖ್ಯೆ ಕೇವಲ ೧೨ರಷ್ಟಿವೆ. ಇದರಿಂದ ಒಟ್ಟು ನೀರಾವರಿಗೊಂಡ ಕೃಷಿ ಪ್ರದೇಶವು ಸುಮಾರು ೨೨ ಹೆಕ್ಟೇರುಗಳಷ್ಟಾಗಿದೆ.

ಹನುಮನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೨೮೩ರಷ್ಟಿದೆ. ೧೯೯ರಷ್ಟು ಕುಟುಂಬಗಳು ಕೃಷಿ ಚಟುವಟಿಕೆಗಳಲ್ಲಿ ತೊಡಗಿವೆ. ಇನ್ನುಳಿದ ಕುಟುಂಬಗಳು ಇತರ ಕೂಲಿಯನ್ನು ಅವಲಂಬಿಸಿವೆ. ಪರಿಶಿಷ್ಟ ಜಾತಿಯವರ ಕುಟುಂಬಗಳು ೧೮ರಷ್ಟಿದ್ದು, ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೩೬ರಷ್ಟಿದೆ.

೨೦೧೧ರ ಜನಗಣತಿ ಪ್ರಕಾರ ಹನುಮನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆ ೯೮೭ರಷ್ಟಿದ್ದು ಪುರುಷರು ೫೦೫ ಹಾಗೂ ಮಹಿಳೆಯರು ೪೮೨ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೬೮ರಷ್ಟಿದ್ದು ಇದರಲ್ಲಿ ಪುರುಷರು ೩೪ ಹಾಗೂ ಮಹಿಳೆಯರು ೩೪ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೫೨ರಷ್ಟಿದ್ದು ಇದರಲ್ಲಿ ಪುರುಷರ ಜನಸಂಖ್ಯೆ ೨೨ ಹಾಗೂ ಮಹಿಳೆಯರ ಜನಸಂಖ್ಯೆ ೩೦ರಷ್ಟಿದೆ. ಗ್ರಾಮದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡಾ ೬.೮೮ರಷ್ಟು ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ಪ್ರಮಾಣವು ಶೇಕಡಾ ೫.೨೬ರಷ್ಟಿದೆ.

ಕುಳಗಟ್ಟೆ ಗ್ರಾಮ

ಕುಳಗಟ್ಟೆ ಗ್ರಾಮವು ಹೊನ್ನಾಳಿ ತಾಲೂಕು ಕೇಂದ್ರದಿಂದ ಸುಮಾರು ೨೧ ಕಿ.ಮೀ. ದೂರದಲ್ಲಿದೆ ಹಾಗೂ ಹೋಬಳಿ ಕೇಂದ್ರದಿಂದ ೩ ಕಿ.ಮೀ. ದೂರದಲ್ಲಿದೆ. ಈ ಗ್ರಾಮ ವ್ಯಾಪ್ತಿಯ ಭೌಗೋಳಿಕ ವಿಸ್ತೀರ್ಣವು ೧೪೮೪ ಹೆಕ್ಟೇರುಗಳಷ್ಟಿದೆ. ಇದರಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯು ೧೪೦೦ ಹೆಕ್ಟೇರುಗಳಷ್ಟಿದೆ. ಆದರೆ ೫೦೫ ಹೆಕ್ಟೇರ್ ಭೂಮಿಯು ನೀರಾವರಿ ಸೌಲಭ್ಯದಿಂದಾಗಿ ಕೃಷಿಗೊಳ್ಳುತ್ತಿದೆ. ಈ ಭೂಮಿಗಳಲ್ಲಿ ಭತ್ತ, ಕಬ್ಬು, ಶೇಂಗಾ, ಹತ್ತಿ, ಸೂರ್ಯಕಾಂತಿ, ಮುಸುಕಿನ ಜೋಳ, ಜೋಳ, ಅಕ್ಕಡಿಕಾಳು, ಅಡಕೆ, ತೆಂಗು, ವೀಳ್ಯದ ಎಲೆ ಇತ್ಯಾದಿ ಬೆಳೆಗಳನ್ನು ಕಾಣುತ್ತೇವೆ.

ಒಟ್ಟು ಗ್ರಾಮಠಾಣಾ ಪ್ರದೇಶವು ೯ ಹೆಕ್ಟೇರುಗಳಷ್ಟಿದ್ದು ಕುಳಗಟ್ಟೆ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೫೧೯ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳು ೧೬೫ ಇದ್ದು ಪರಿಶಿಷ್ಟ ಪಂಗಡದ ಕುಟುಂಬಗಳು ೧೭ರಷ್ಟಿವೆ.

೨೦೧೧ರ ಜನಗಣತಿ ಪ್ರಕಾರ ಕುಳಗಟ್ಟೆ ಗ್ರಾಮ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೩,೩೫೫ರಷ್ಟಿದೆ. ಇದರಲ್ಲಿ ಪುರುಷರು ೧೬೮೮ ಹಾಗೂ ಮಹಿಳೆಯರು ೧೬೭೭ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೨೯೯ರಷ್ಟಿದೆ. ಇದರಲ್ಲಿ ಪುರುಷರು ೧೫೧ ಹಾಗೂ ಮಹಿಳೆಯರು ೧೪೮ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೯೪೫ರಷ್ಟಿದೆ. ಇದರಲ್ಲಿ ಪುರುಷರು ೪೭೭ ಹಾಗೂ ಮಹಿಳೆಯರು ೪೬೮ರಷ್ಟಿದ್ದಾರೆ. ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡಾ ೮.೯೧ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ಪ್ರಮಾಣವು ಶೇಕಡಾ ೨೮.೧೬ರಷ್ಟಿದೆ.

೨.೬.೬. ಜಗಳೂರು ತಾಲೂಕು

ದಾವಣಗೆರೆ, ಹರಪನಹಳ್ಳಿ ತಾಲೂಕುಗಳಿಂದ ಹಾಗೂ ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಿಂದ ಈ ತಾಲೂಕು ಸುತ್ತುವರಿದಿದೆ. ಇಡೀ ದಾವಣಗೆರೆ ಜಿಲ್ಲೆಯಲ್ಲಿ ಹರಪನಹಳ್ಳಿ ಹೊರತುಪಡಿಸಿದರೆ ಹೆಚ್ಚು ಬಡತನವನ್ನು ಅನುಭವಿಸುತ್ತಿರುವ ತಾಲೂಕು ಇದಾಗಿದೆ. ಈ ತಾಲೂಕಿನಲ್ಲಿ ಯಾವುದೇ ನದಿ ಹರಿಯದಿದ್ದರೂ ಚಿಕ್ಕ ಪುಟ್ಟ ಕೆರೆ ಕುಂಟೆಗಳನ್ನು ಕಾಣಬಹುದು. ತಾಲೂಕಿನ ಬಹುಪಾಲು ಭೂಮಿಯು ಮಳೆಯಾಶ್ರಿತ ಕೃಷಿ ಭೂಮಿಯನ್ನು ಹೊಂದಿದೆ. ಕೆಲವೇ ಕೆಲವು ಜನ ಕೊಳವೆಬಾವಿಗಳನ್ನು ಅಳವಡಿಸಿಕೊಂಡಿರುವ ಉದಾಹರಣೆಗಳಿದ್ದರೂ ಅವುಗಳ ಪ್ರಮಾಣ ಹೆಚ್ಚಿಲ್ಲ. ಮಳೆಯಾಶ್ರಿತದಿಂದ ಜೋಳ, ಹತ್ತಿ, ಮೆಣಸಿನ ಕಾಯಿ, ಅಕ್ಕಡಿಕಾಳು, ಮೆಕ್ಕೆ ಜೋಳ ಮುಂತಾಗಿ ಬೆಳೆಯಲಾಗುತ್ತದೆ. ಭೌಗೋಳಿಕವಾಗಿ ಈ ತಾಲೂಕಿನ ಒಟ್ಟು ವಿಸ್ತೀರ್ಣವು ೯೬೬ ಚ.ಕಿ.ಮೀ.ಗಳಷ್ಟಿದೆ. ಈ ತಾಲೂಕಿನ ಹೋಬಳಿ ಕೇಂದ್ರವು ಸೊಕ್ಕೆ, ಬಿಳಿಚೋಡುಗಳಾಗಿವೆ. ಜಿಲ್ಲೆಯಲ್ಲಿ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕು ಇದಾಗಿದೆ. ಒಟ್ಟು ೧೭೦ ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ೩,೫೦೩೮ ಕುಟುಂಬಗಳು ನೆಲೆ ನಿಂತಿವೆ. ಮಳೆಗಾಲ ಮುಗಿದ ತರುವಾಯ ಇಲ್ಲಿಯ ಜನರು ಕಾಫಿ ತೋಟಗಳಿಗೆ ಮತ್ತು ಬೆಂಗಳೂರು ಗೋವಾ ಕಡೆಗೆ ಕೂಲಿ ಹುಡುಕಿಕೊಂಡು ವಲಸೆ ಹೋಗುತ್ತಾರೆ. ಜೊತೆಗೆ ಇದೇ ಜಿಲ್ಲೆಯ ಹರಪನಹಳ್ಳಿ ತಾಲೂಕಿಗೆ ಜಗಳೂರಿನ ಕಡೆಯ ಕೂಲಿ ಕಾರ್ಮಿಕರು ವಲಸೆ ಬರುವುದುಂಟು. ಒಟ್ಟಾರೆಯಾಗಿ ೨೨೭ರಷ್ಟು ಜನಸಾಂದ್ರತೆಯನ್ನು ಈ ತಾಲೂಕು ಹೊಂದಿದೆ. ೨೦೦೧ರ ಜನಗಣತಿ ಪ್ರಕಾರ ಈ ತಾಲೂಕಿನ ಜನಸಂಖ್ಯೆ ಒಟ್ಟು ೧,೫೮,೮೮೩ರಷ್ಟಿದೆ. ಇದರಲ್ಲಿ ಪುರುಷರು ೮೦,೯೫೪ ಹಾಗೂ ಮಹಿಳೆಯರು ೭೭,೯೨೯ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ೩೭,೮೩೭ರಷ್ಟಿದೆ. ಪರಿಶಿಷ್ಟ ಜಾತಿಯವರಲ್ಲಿ ಪುರುಷರು ೧೯,೨೫೫ ಹಾಗೂ ಮಹಿಳೆಯರು ೧೮,೫೮೨ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದ ಜನಸಂಖ್ಯೆ ೩೭,೪೮೩ರಷ್ಟಿದೆ. ಇದರಲ್ಲಿ ಪುರುಷರು ೧೯,೨೦೦ ಹಾಗೂ ಮಹಿಳೆಯರು ೧೮,೨೮೩ರಷ್ಟಿದ್ದಾರೆ. ಅಂದರೆ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡಾ ೨೩.೮೧ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡಾ ೨೩.೫೯ರಷ್ಟಿದೆ. ಈ ತಾಲೂಕಿನಲ್ಲಿ ಸೊಕ್ಕೆ, ಮಾಗಡಿ, ಬಸವನಕೋಟೆ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು ಅವುಗಳ ವಿವರ ಈ ಕೆಳಗಿನಂತಿದೆ.

ಸೊಕ್ಕೆ ಗ್ರಾಮ

ಸೊಕ್ಕೆ ಗ್ರಾಮವು ಜಗಳೂರು ತಾಲೂಕು ಕೇಂದ್ರದಿಂದ ೨೪ ಕಿಲೋಮೀಟರ್ ದೂರದಲ್ಲಿದೆ. ತಾಲೂಕಿನ ಹೋಬಳಿ ಕ್ಷೇತ್ರವಾಗಿರುವ ಸೊಕ್ಕೆ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೭೬೪ ಹೆಕ್ಟೇರುಗಳಷ್ಟಿದೆ. ಯಾವುದೇ ಕೆರೆ ಕುಂಟೆಗಳಿರದೆ ಜನರು ಕುಡಿಯುವ ನೀರಿಗಾಗಿ ಕೈಪಂಪುಗಳು ಹಾಗೂ ಕೊಳವೆ ಬಾವಿಯ ನೀರನ್ನು ಅವಲಂಬಿಸಬೇಕಾಗಿದೆ. ಇತ್ತೀಚಿನ ದಶಕದಲ್ಲಿ ಕುಡಿಯುವ ನೀರಿಗಾಗಿ ಗ್ರಾಮೀಣ ಕಿರು ನೀರು ಸರಬರಾಜು ಯೋಜನೆಯನ್ನು ಅನುಸರಿಸಿದ್ದಾರೆ. ಈ ಗ್ರಾಮದ

ವ್ಯಾಪ್ತಿಯಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೭೧೬ ಹೆಕ್ಟೇರುಗಳಷ್ಟಿದೆ. ಕೇವಲ ಮಳೆಯನ್ನಾಶ್ರಯಿಸಿ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಕೆಲವು ರೈತರು ತಮ್ಮ ಭೂಮಿಗಳಿಗೆ ನೀರುಣಿಸಲು ಕೊಳವೆ ಬಾವಿಗಳನ್ನು ಕೊರೆಸಿದ್ದಾರೆ. ಇಂತಹ ಬಾವಿಗಳಿಂದಾಗಿ ನೀರಾವರಿಗೊಂಡ ಕೃಷಿ ಪ್ರದೇಶವು ಸುಮಾರು ೨೬ ಹೆಕ್ಟೇರುಗಳಷ್ಟಾಗುತ್ತದೆ. ೨೬ ಹೆಕ್ಟೇರಿನಷ್ಟು ಅರಣ್ಯ ಭೂಮಿ ಕಂಡುಬರುತ್ತದೆ. ಒಟ್ಟು ಗ್ರಾಮ ವ್ಯಾಪ್ತಿಯ ಠಾಣಾ ಪ್ರದೇಶವು ೧೨ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿ ನೆಲೆ ನಿಂತಿರುವ ಕುಟುಂಬಗಳ ಸಂಖ್ಯೆಯು ೭೯ರಷ್ಟಿದೆ. ಇದರಲ್ಲಿ ೧೮೮ ಪರಿಶಿಷ್ಟ ಜಾತಿ ಕುಟುಂಬಗಳು ಹಾಗೂ ೧೩೬ ಪರಿಶಿಷ್ಟ ಪಂಗಡದ ಕುಟುಂಬಗಳು ಕಂಡುಬರುತ್ತವೆ. ಈ ಗ್ರಾಮದ ಒಟ್ಟು ಜನಸಂಖ್ಯೆ ೨೦೦೧ರ ಪ್ರಕಾರ ೩೩೪೯ರಷ್ಟಿದೆ. ಇದರಲ್ಲಿ ಪುರುಷರು ೧೬೮೦ ಹಾಗೂ ಮಹಿಳೆಯರು ೧೬೬೯ರಷ್ಟಿದ್ದಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೬೪೯ ಇದ್ದು ಇದರಲ್ಲಿ ಪುರುಷರು ೩೪೯ ಹಾಗೂ ಮಹಿಳೆಯರು ೩೪೦ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ಒಟ್ಟು ೬೦೩ರಷ್ಟಿದ್ದು ಇದರಲ್ಲಿ ಪುರುಷರು ೩೪೧ ಹಾಗೂ ಮಹಿಳೆಯರು ೨೬೫ರಷ್ಟಿದ್ದಾರೆ.

ಮಾಗಡಿ ಗ್ರಾಮ

ಮಾಗಡಿ ಗ್ರಾಮವು ಜಗಳೂರು ತಾಲೂಕು ಕೇಂದ್ರದಿಂದ ಸುಮಾರು ೨೭ ಕಿ.ಮೀ. ದೂರವಿರುವ ಮಾಗಡಿ ಗ್ರಾಮವು ಹೋಬಳಿ ಕೇಂದ್ರದಿಂದ ೧೪ ಕಿ.ಮೀ. ದೂರವಿದೆ. ಭೌಗೋಳಿಕವಾಗಿ ೧೪೫ ಹೆಕ್ಟೇರುಗಳಷ್ಟು ವಿಸ್ತೀರ್ಣವಾಗಿದೆ. ಈ ಗ್ರಾಮ ವ್ಯಾಪ್ತಿಯಲ್ಲಿ ಒಟ್ಟು ೧೦೫ ಹೆಕ್ಟೇರುಗಳಷ್ಟು ಭೂಮಿಯು ಸಾಗುವಳಿ ಮಾಡಲು ಯೋಗ್ಯವಾಗಿದೆ. ತುಂಗಭದ್ರಾ ನದಿಯ ನೀರನ್ನು ಏತ ನೀರಾವರಿ ಪದ್ಧತಿಯಲ್ಲಿ ಕೃಷಿ ಭೂಮಿಗೆ ಒದಗಿಸಲಾಗುತ್ತದೆ. ಕೇವಲ ಮಳೆಯಾಶ್ರಿತ ಕೃಷಿ ಪದ್ಧತಿ ಇಲ್ಲಿ ಕಂಡುಬರುತ್ತದೆ. ಕೇವಲ ಒಂದು ಕೊಳವೆಬಾವಿಯನ್ನು ಕೃಷಿಗೆ ಬಳಸಲಾಗುತ್ತದೆ. ಹೀಗಾಗಿ ಈ ಗ್ರಾಮದಲ್ಲಿ ನೀರಾವರಿಗೊಂಡ ಒಟ್ಟು ಭೂ ಪ್ರದೇಶ ೪ ಹೆಕ್ಟೇರುಗಳಷ್ಟಾಗುತ್ತದೆ. ಇಲ್ಲಿಯ ಮುಖ್ಯ ಬೆಳೆಯು ಮಳೆಯಾಶ್ರಿತ ರಾಗಿ, ಜೋಳ, ಅಕ್ಕಡಿ ಕಾಳು ಮುಂತಾದವುಗಳನ್ನು ಬೆಳೆಯಲಾಗುತ್ತದೆ. ೪೦ ಹೆಕ್ಟೇರಿನಷ್ಟು ಅರಣ್ಯ ಪ್ರದೇಶ ಕಂಡುಬರುತ್ತದೆ. ಈ ಗ್ರಾಮದ ಗ್ರಾಮಠಾಣಾ ಪ್ರದೇಶ ೫ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೯೧ ಕುಟುಂಬಗಳು ನೆಲೆ ನಿಂತಿದ್ದು ಇದರಲ್ಲಿ ಪರಿಶಿಷ್ಟ ಜಾತಿಗಳ ಕುಟುಂಬಗಳು ೩೮ರಷ್ಟಿವೆ ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳು ಒಟ್ಟು ೧೪೩ರಷ್ಟಿವೆ.

೨೦೦೧ರ ಜನಗಣತಿ ಪ್ರಕಾರ ಮಾಗಡಿ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿದ ಒಟ್ಟು ಜನಸಂಖ್ಯೆಯು ೭೨೮ ಇದ್ದು, ಇದರಲ್ಲಿ ಪುರುಷರು ೩೬೭ ಹಾಗೂ ಮಹಿಳೆಯರು ೩೬೧ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆಯು ೩೪ ಇದ್ದು ಪರಿಶಿಷ್ಟ ಜಾತಿಯ ಪುರುಷರು ೧೭ ಹಾಗೂ ಮಹಿಳೆಯರು ೧೭ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೫೯೫ ಇದ್ದು

ಪುರುಷರು ೩೦೪ ಹಾಗೂ ಮಹಿಳೆಯರು ೨೯೧ರಷ್ಟಿದ್ದಾರೆ. ಅಂದರೆ ಗ್ರಾಮದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯು ಜನಸಂಖ್ಯಾ ಪ್ರಮಾಣವು ಶೇ ೪.೬೭ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇ. ೮೧.೫೯ರಷ್ಟಿದೆ. ಈ ಗ್ರಾಮದಲ್ಲಿ ಪರಿಶಿಷ್ಟ ಪಂಗಡದವರೇ ಬಹುಸಂಖ್ಯಾತರಾಗಿದ್ದಾರೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಾಕ್ಷರತೆಯ ಪ್ರಮಾಣ ತುಂಬಾ ಶೋಚನೀಯವಾಗಿದೆ.

ಬಸವನಕೋಟೆ ಗ್ರಾಮ

ಬಸವನಕೋಟೆ ಗ್ರಾಮವು ಜಗಳೂರು ತಾಲೂಕು ಕೇಂದ್ರದಿಂದ ೪೪ ಕಿ.ಮೀ ದೂರದಲ್ಲಿರುವ ಬಸವನಕೋಟೆ ಗ್ರಾಮವು ಹೋಬಳಿ ಕೇಂದ್ರದಿಂದ ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೬೭ ಹೆಕ್ಟೇರುಗಳಷ್ಟಿದೆ. ಈ ಗ್ರಾಮದ ಅರಣ್ಯ ಪ್ರದೇಶವು ಸುಮಾರು ೪೯೦ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮದ ಗ್ರಾಮಠಾಣಾ ಪ್ರದೇಶವು ೨೧ ಚ.ಕಿ.ಮೀಗಳಷ್ಟು ಹರಡಿಕೊಂಡಿದೆ. ಈ ಗ್ರಾಮ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳು ೬೫೨ರಷ್ಟಿವೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳು ಒಟ್ಟು ೬೮ ಇದ್ದು ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೫೯ರಷ್ಟಿವೆ. ೨೦೦೧ರ ಜನಗಣತಿ ಪ್ರಕಾರ ಈ ಗ್ರಾಮದ ಜನಸಂಖ್ಯೆ ೩೨೬೦ ಇದ್ದು ಇದರಲ್ಲಿ ಪುರುಷರು ೧೬೭೧ ಹಾಗೂ ಮಹಿಳೆಯರು ೧೫೮೯ರಷ್ಟಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಒಟ್ಟು ೪೯೩ ಇದ್ದು ಇದರಲ್ಲಿ ಪುರುಷರು ೨೪೨ ಹಾಗೂ ಮಹಿಳೆಯರು ೨೫೧ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ಒಟ್ಟು ೨೫೭ ಇದ್ದು ಪುರುಷರು ೧೩೫ ಹಾಗೂ ಮಹಿಳೆಯರು ೧೨೨ರಷ್ಟಿದ್ದಾರೆ. ಅಂದರೆ ಒಟ್ಟು ಗ್ರಾಮ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡಾ ೧೫.೧೨ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣ ಶೇಕಡಾ ೭.೮೮ರಷ್ಟಿದೆ. ಈ ಗ್ರಾಮಗಳಿಂದ ಕಾಫಿ ಸೀಮೆಗೆ ಹಾಗೂ ಬೆಂಗಳೂರು, ಗೋವಾ, ಮಂಗಳೂರು ಕಡೆಗೆ ಕೂಲಿಯನ್ನು ಹುಡುಕಿಕೊಂಡು ವಲಸೆ ಹೋಗುವವರ ಪ್ರಮಾಣ ಅಧಿಕವಾಗಿದೆ. ಇಲ್ಲಿಯೂ ಸಾಕ್ಷರತೆಯ ಪ್ರಮಾಣ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಅತ್ಯಧಿಕವಾಗಿ ತಳಹಂತದಲ್ಲಿದೆ.

ಆಧಾರಗಳು

೧. ತಿಪ್ಪೇಸ್ವಾಮಿ ಎಚ್, ದಾವಣಗೆರೆ ಜಿಲ್ಲೆಯ ದೇವಾಲಯಗಳು ಮತ್ತು ಶಾಸನಗಳು, ಪು ೧೩, ೧೯೮೨

೨. ಗಿರಿಜ ಟಿ ದಾವಣಗೆರೆ ಜಿಲ್ಲಾ ದರ್ಶನ, ಪು ೩೧, ೨೦೦೦

೩. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗದ ಪಾಳೆಯಗಾರರು, ೧೨೪, ೨೦೦೩.

೪. ಟಿ ಗಿರಿಜ, ದಾವಣಗೆರೆ ಜಿಲ್ಲಾ ದರ್ಶನ, ಪು ೧೧, ೨೦೦೦.

೫. ಅದೇ, ಪು. ೧೩

೬. ಅದೇ, ಪು ೧

೭. ಹೆಚ್ ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಯ ದೇವಾಲಯಗಳು ಮತ್ತು ಶಾಸನಗಳು, ೧೧೨, ೨೦೦೦ (ಅಪ್ರಕಟಿತ ಪಿಎಚ್ ಡಿ ಪ್ರಬಂಧ, ಹಂಪಿ).

೮. ಆರ್ ಬಿ ಕುಮಾರ್, ಮುದ್ದೆಕಂಬಾರರು, ಪು ೯೫, ೨೦೦೪.

೯. ಜನಗಣತಿ ವರದಿ, ಕರ್ನಾಟಕ ಸರ್ಕಾರ, ಪು ೨೫, ೨೦೦೨.

೧೦ ಅದೇ ಪು ೨೮

ಅಧ್ಯಾಯ – ೩

ಬೇಡರ ಪರಿಚಯ

೩.೧. ಊರಬೇಡರು

೩.೨. ಮ್ಯಾಸಬೇಡರು

೩.೩. ಮೊಂಡ ಬೇಡರು

೩.೪. ಒಳಾಡಳಿತ ವ್ಯವಸ್ಥೆ

ಅಧ್ಯಾಯ ಮೂರು

ಬೇಡರ ಪರಿಚಯ

ಪ್ರಾಚೀನ ಬುಡಕಟ್ಟುಗಳಲ್ಲಿ ಒಂದಾದ ಬೇಡ ಸಮುದಾಯವನ್ನು ನಾಯಕ, ತಳವಾರ, ವಾಲ್ಮೀಕಿ, ಬೇಡ ಪರಿವಾರ, ಪಾಳೇಗಾರ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಈ ಸಮುದಾಯ ಕರ್ನಾಟಕದ ಆಚೆಗೂ ಕಂಡುಬರುತ್ತಿದ್ದು ಅದನ್ನು ಆಯಾ ಪ್ರದೇಶಕ್ಕನುಗುಣವಾಗಿ ನಾನಾ ಹೆಸರುಗಳಿಂದ ಕರೆಯಲಾಗುತ್ತದೆ. ತಮಿಳುನಾಡಿನಲ್ಲಿ ಇವರನ್ನು ನಾಯಷಾ, ನಾಯಕರ್, ವಾಲ್ಮೀಕಿ, ವೇಡನ್, ವೆತ್ತಲ್, ವೇಡುವಾಸ, ವೇಟಕಾರನ್ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಉತ್ತರ ಪ್ರದೇಶದಲ್ಲಿ ಜಾಟ್, ಪಂಜಾಬ್‌ನಲ್ಲಿ ಭಿಲ್, ಬಾಲಮೀಕಿ, ನಾಯಕಮಾಂಗ್, ಬಿಹಾರಸೇನ್ ಎನ್ನುತ್ತಾರೆ. ಕೇರಳದಲ್ಲಿ ನಾಯರ್ ಎಂದೂ ಮಹಾರಾಷ್ಟ್ರದಲ್ಲಿ ರಾಮೋಶಿ, ರಾಣವಾಸಿ, ಬೇರಡ್ ಮುಂತಾಗಿ ಕರೆಯಲಾಗುತ್ತದೆ. ದ್ರಾವಿಡಮೂಲ ಸಮುದಾಯದ ಉಲ್ಲೇಖವು ಪ್ರಾಚೀನ ಗ್ರಂಥಗಳಲ್ಲಿ ಪುಳಿಂದ, ಭಿಲ್ಲ, ಕಿರಾತ, ವ್ಯಾಧ, ನಿಷಾದ, ಶಿಬಿರ ಮುಂತಾದ ಹೆಸರುಗಳಿಂದ ಉಲ್ಲೇಖಿಸಿರುವುದು ಕಂಡುಬರುತ್ತದೆ. ಬೇಡ ಎಂಬ ಪದವು ಸಂಸ್ಕೃತದ ವ್ಯಾಧ ಪದದಿಂದ ಬಂದಿದೆ ಎಂಬ ವಾದವಿದೆ. ನಂಜುಂಡಯ್ಯ ಎಚ್ ವಿ ಮತ್ತು ಅನಂತಕೃಷ್ಣ ಅಯ್ಯರ್ ಅವರು 'The Bedas are an aboriginal tribe of the Telugu and Canarese district. Most of the Mysore Palegar's of petty chiefs are Beda's'[೧] ಬುಕಾನನ್ ಅವರು ಬೇಡ ಬುಡಕಟ್ಟು ದ್ರಾವಿಡ ಜನಾಂಗಕ್ಕೆ ಸೇರಿದವರಿರಬೇಕು ಎಂದು ಅಭಿಪ್ರಾಯಪಡುತ್ತಾರೆ. ಬೇಡರಲ್ಲಿ ಮುಖ್ಯವಾಗಿ ಊರಬೇಡರು ಮತ್ತು

ಮ್ಯಾಸಬೇಡರು ಎಂಬ ಪಂಗಡಗಳು ಇವೆ. ಇವುಗಳಾಚೆ ಮೊಂಡರು ಸಹ ತಾವು ಬೇಡ ಪಂಗಡಕ್ಕೆ ಸೇರಿದವರು ಎಂದು ಹೇಳಿಕೊಳ್ಳುತ್ತಾರೆ. ಮೈಸೂರು ಪ್ರಾಂತ್ಯದ ಮಹದೇಶ್ವರನ ಬೆಟ್ಟದ ಸುತ್ತಮುತ್ತ ಬೇಡಗಂಪಣರು ಎನ್ನುವ ಸಮುದಾಯವೊಂದಿದ್ದು ತಾವೂ ಮೂಲತಃ ಬೇಡನಾಯಕರು, ತಮ್ಮ ಮೂಲಪುರುಷ ಬೇಡರಕಣ್ಣಪ್ಪ ಎಂದು ಹೇಳಿಕೊಳ್ಳುತ್ತಾರೆ. ಆದರೆ ಈ ಯಾವ ಪಂಗಡಗಳು ಪರಸ್ಪರ ರಕ್ತಸಂಬಂಧವನ್ನು ಬೆಸೆದುಕೊಳ್ಳುವುದಿಲ್ಲ. ಇತ್ತೀಚೆಗೆ ಊರನಾಯಕರು ಮತ್ತು ಮ್ಯಾಸನಾಯಕರಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುತ್ತಿವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಬೇಡ ನಾಯಕರು ಪಾಳೆಯಗಾರರಾಗಿ, ಚಿಕ್ಕ ಚಿಕ್ಕ ರಾಜ್ಯಗಳ ಅರಸರಾಗಿ, ಸೈನಿಕರಾಗಿ ಕಾರ್ಯ ನಿರ್ವಹಿಸಿದ ಉದಾಹರಣೆಗಳು ಸಾಕಷ್ಟಿವೆ. ಉದಾಹರಣೆಗೆ ಚಿತ್ರದುರ್ಗದ ಪಾಳೆಯಗಾರರು, ಬಸವಾಪಟ್ಟಣದ ಪಾಳೆಯಗಾರರು, ಕಂಪಿಲರಾಯ ಮತ್ತು ಅವನ ವಂಶಸ್ಥರು, ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಬುಕ್ಕ, ಹರಪನಹಳ್ಳಿಯ ಪಾಳೆಯಗಾರರು, ಉಚ್ಚಂಗಿದುರ್ಗದ ಪಾಳೆಯಗಾರರು ಮುಂತಾದವರನ್ನು ಹೆಸರಿಸಬಹುದು.

ಬೇಡರಲ್ಲಿ ಕವಲೊಡೆದ ಅನೇಕ ಪಂಗಡಗಳಿದ್ದು ಅವುಗಳಲ್ಲಿ ವಾಲ್ಮೀಕಿ, ತಳವಾರ, ಪರಿವಾರ ಎಂಬ ಮುಂತಾದ ಒಳಪಂಗಡಗಳು ಬರುತ್ತವೆಯಂಬ ವಾದವೂ ಇದೆ. ವಾಲ್ಮೀಕಿ ಋಷಿಯಿಂದಾಗಿ ಈ ಬುಡಕಟ್ಟಿಗೆ ವಾಲ್ಮೀಕಿ ಎನ್ನುವ ಹೆಸರು ಬಂದಿದೆ. ವಾಲ್ಮೀಕಿ ಮಹರ್ಷಿಯು ಮೂಲತಃ ಬೇಡರವನಾಗಿದ್ದನೆಂದು ತಿಳಿದುಬರುತ್ತದೆ.

'ರಾಮಾಯಣದ ಕರ್ತೃವಾಗುವುದಕ್ಕೂ ಪೂರ್ವದಲ್ಲಿ ವಾಲ್ಮೀಕಿಯು ಆದಿಮಾನವನಂತೆ ಅಡವಿಯಲ್ಲಿಯೇ ಅಲೆಯುತ್ತಿದ್ದನಂತೆ. ಇವನು ಪ್ರಚೇತನ ಮತ್ತು ಪ್ರಮೋಜಿಯರ ಮಗನಾಗಿ ಹುಟ್ಟಿ ತಮಸಾ ನದಿ ತೀರದಲ್ಲಿ ವಾಸವಾಗಿದ್ದು ಕಿರಾತರ ಯಜಮಾನನಾಗುವ ಶಕ್ತಿಯನ್ನು ಪಡೆದನೆಂಬ ಪ್ರತೀತಿಯಿದೆ.'[೨]

'ಚಿತ್ರದುರ್ಗದ ಪಾಳೆಯಗಾರರು' ಎಂಬ ಕೃತಿಯ ಉಪೋದ್ಘಾತದಲ್ಲಿ ಎಂ ಎಸ್ ಪುಟ್ಟಣ್ಣನವರು "ತುಂಗಾಭದ್ರಾ ತೀರದಲ್ಲಿ ವಿಜಯನಗರ ಸಂಸ್ಥಾನದ ಚಕ್ರಾಧಿಪತಿಗಳು ಬಹುಖ್ಯಾತಿಯಿಂದ ಆಳುತ್ತಾ ಇರುವಾಗ... ತಮ್ಮ ರಾಜ್ಯದ ದೊರೆತನವು ಬಿಗಿಯಾಗಿ ನಡೆಯುವುದಕ್ಕಾಗಿ ಅನುಕೂಲಕ್ಕೆಂದು ಎಣಿಸಲ್ಪಟ್ಟು ಪೂರ್ವದಿಂದಲೂ ರೂಢಿಗೆ ಬಂದಿದ್ದ ಒಂದು ಏರ್ಪಾಡನ್ನು ಉಪಯೋಗ ಮಾಡಿಕೊಂಡಿದ್ದರು. ಇವರ ಚಕ್ರಾಧಿಪತ್ಯದ ಮುಖ್ಯವಾದ ಸ್ಥಳಗಳಲ್ಲಿ ಅಧಿಕಾರ ಮಾಡಲು ಪ್ರಮುಖರಾದ ಜನರನ್ನು ನೇಮಿಸಿದ್ದರು. ಈ ಆಡಳಿತಾಧಿಕಾರಿಗಳಿಗೆ ನಾಯಕರು ಎಂದು ಸರ್ವಸಾಧಾರಣವಾಗಿ ಹೆಸರಾಗಿತ್ತು. ಈ ನಾಯಕರು ತಮ್ಮ ತಮ್ಮ ಅಧಿಕಾರಕ್ಕೆ ಒಳಪಟ್ಟ ಸೀಮೆಗಳಲ್ಲಿ ದೊರೆಗಳಂತೆ ಇರುತ್ತಾ ಅಲ್ಲಿ ಪ್ರಜೆಗಳಿಂದ ಕಂದಾಯ ಮೊದಲಾದ್ದನ್ನು ವಸೂಲ್ಮಾಡಿಕೊಂಡು ಚಕ್ರಾಧೀಶ್ವರರಿಗೆ

ನಿಗದಿಯಾದ ಕಪ್ಪವನ್ನು ವರ್ಷ ವರ್ಷವೂ ಕೊಡುತ್ತ ತಯಾರಾದ ಸೇನೆಯನ್ನು ಯುದ್ಧಪ್ರಸಕ್ತಿ ಬಿದ್ದಾಗ ವಿಜಯನಗರ ಅಧೀಶ್ವರರಿಗೆ ಸಹಾಯ ಮಾಡುತ್ತಾ ಇದ್ದರು. ಪಾಳೆಯಗಾರರೆಂದರೆ ದಂಡಿನೊಡನೆ ಪಾಳೆಯವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧವಾಗಿರತಕ್ಕದ್ದೆಂದು ಅರ್ಥ. ಸಾಧಾರಣವಾಗಿ ಈ ಪಾಳೆಯಗಾರರಲ್ಲಿ ಅನೇಕ ಬೇಡರು ಅಥವಾ ವ್ಯಾಧರು, ಇವರಲ್ಲಿ ಊರಬೇಡರು, ಮ್ಯಾಸಬೇಡರು ಎಂದು ಎರಡು ಪಂಗಡಗಳುಂಟು. ಮ್ಯಾಸಬೇಡರು ಪರಿಶುದ್ಧರು, ಈಚಲ ಹೆಂಡವನ್ನು ಪಾನ ಮಾಡುವುದಿಲ್ಲ, ಈಚಲು ಚಾಪೆಯನ್ನು ಕೂಡ ಹಾಸಿ ಮಲಗುವುದಿಲ್ಲ..."[೩] ಪ್ರಾಯಶಃ ಬೇಡನಾಯಕರಿಗೆ ಇತರೆ ವೃತ್ತಿಗಿಂತ ದಂಡಿನಲ್ಲಿ ಸೇರಿ ಪರಾಕ್ರಮ ಮೆರೆಯುವುದು ಹೆಚ್ಚು ಇಷ್ಟವಾದ ಕೆಲಸವೆಂದು ಭಾವಿಸಿರಬೇಕು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸಿದ ಬೇಡನಾಯಕರು ಆ ಸಾಮ್ರಾಜ್ಯದ ಸೈನಿಕರಾಗಿ ಕಾರ್ಯ ನಿರ್ವಹಿಸಿದ ಕುರುಹುಗಳು ಇಂದಿಗೂ ಹಂಪಿ ಸುತ್ತಮುತ್ತಲ ಪ್ರದೇಶದಲ್ಲಿ ಕಂಡುಬರುತ್ತದೆ. ಕಮಲಾಪುರದ ನಾಯಕ ಸಮುದಾಯದ ಏಳು ಕೇರಿ ಹಾಗೂ ಹೊಸಪೇಟೆಯ ಏಳು ಕೇರಿಯ ನಾಯಕ ಸಮುದಾಯದ ಜನ ಹಿಂದೆ ವಿಜಯನಗರ ಅರಸರ ಸೈನಿಕರಾಗಿ ಕಾರ್ಯ ನಿರ್ವಹಿಸಿದವರು ತಾವು ಎಂದು ಹೇಳಿಕೊಳ್ಳುತ್ತಾರೆ. ಇಂದಿಗೂ ಕಮಲಾಪುರದ ನಾಯಕರು ಆನೆಗೊಂದಿ ಅರಸರಿಗೆ ನಿಷ್ಠರಾಗಿಯೇ ನಡೆದುಕೊಳ್ಳುತ್ತಾರೆ.

ಕಪಟರಾಳ ಕೃಷ್ಣರಾಯರು 'ಸುರಪುರದ ಸಂಸ್ಥಾನದ ಇತಿಹಾಸ' ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಗೆಜೆಟಿಯರ್‌ನಲ್ಲಿ ಪ್ರಸ್ತಾಪಿತವಾದ ಕೆಲವು ವಿಷಯಗಳ ಕುರಿತು ಉಲ್ಲೇಖಿಸಿದ್ದಾರೆ. "ಈ ಭೋಯಾ ಜನರಿಗೆ ಕನ್ನಡ ದೇಶದಲ್ಲಿ ಬೇಡರೆಂದು ಕರೆಯಲಾಗುತ್ತದೆ. ವಿಜಯನಗರಕ್ಕಿಂತ ಪೂರ್ವ ಕ್ರಿಸ್ತಶಕ ಹತ್ತೊಂಬತ್ತನೇ ಶತಮಾನದವರೆಗೆ ಕರ್ನಾಟಕಾಂಧ್ರದಲ್ಲಿ ಸೈನಿಕ ವೃತ್ತಿಯಿಂದ ಜೀವನ ಸಾಗಿಸುತ್ತಾ ಬಂದಿರುವವರು ಈ ಬೇಡರೆ. ಇವರನ್ನೇ ಕರ್ನಾಟಕ ಸೈನ್ಯವೆಂದೂ ಬೇಡರ ಪಡೆಯಂದೂ ಪ್ಯಾದಾಹಾಯಾ ಕರ್ನಾಟಕೀಯಾ ಎಂದು ಬೇರೆಬೇರೆ ಕಾಲಗಳಲ್ಲಿ ಕರೆಯಲಾಗಿದೆ. ಕಾಳಗದಲ್ಲಿ ಇವರ ಶೌರ್ಯಕ್ಕೆ ಎಣೆಯಿಲ್ಲ. ಇವರ ಸಾಹಸ ಅವರ್ಣನೀಯವಾದುದು, ಹತ್ತೊಂಬತ್ತನೇ ಶತಮಾನದಲ್ಲಿ ಇವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಾರದೆಂದು ಸರಕಾರಿ ಹುಕುಮು ಹೊರಟಿದ್ದರಿಂದ ಇವರು ತಮ್ಮ ಕ್ಷೇತ್ರವೃತ್ತಿಯ ಉಪಜೀವನ ಸಾಧನೆಯಿಂದ ತೆರವಾದರು. ಆದರೂ ಇಂದಿನವರೆಗೆ ಇವರು ತಮ್ಮ ಗಂಡು ಸ್ವಭಾವವನ್ನು ಕಳೆದುಕೊಂಡಿಲ್ಲ. ಬೇಟೆಗಾರರೆಂದು ಇವರು ಮೊದಲಿನಿಂದಲೂ ಪ್ರಸಿದ್ಧರು. ಬೇಡನೆಂದರೆ ಕಾಲಾಳು. ಗುಂಡಿನ ಗುರಿ ಹೊಡೆಯುವುದರಲ್ಲಿ ಎತ್ತಿದ ಕೈ ಇವರದು. ಕಾಲಮಹಿಮೆ ಯಿಂದ ಇವರು ಹಿಂದುಳಿದವರಾದರು."[೪] ಹಟ್ಟಿ ನಾಯಕರು ಆಂಧ್ರದ ಶ್ರೀಶೈಲದ ಕಡೆಯಿಂದ ಬಂದವರೆಂಬ ವಾದವೂ ಇದೆ. ಈ ವಾದಕ್ಕೆ ಪುಷ್ಟಿ ಕೊಡುವಂತೆ ಹಟ್ಟಿನಾಯಕರ ಮನೆಮಾತು ತೆಲುಗು ಭಾಷೆಯಾಗಿದೆ. ಇಂದು ಇವರಾಡುವ ತೆಲುಗು ಭಾಷೆಯು ಕನ್ನಡ ಮಿಶ್ರಿತ ತೆಲುಗಾಗಿದ್ದು

ಅದು ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿದೆ. ಬೇಡನಾಯಕರು ಆಂಧ್ರದ ಗುಡ್ಡಗಾಡನ್ನು ಬಿಟ್ಟು ಕರ್ನಾಟಕದ ಕಡೆ ವಲಸೆ ಬರಲು ಆ ಕಾಲಕ್ಕೆ ಆಂಧ್ರದಲ್ಲಿ ಬರ ಬಿದ್ದಿತಂತೆ ಎಂದು ತಿಳಿಸುತ್ತಾರೆ. ಪ್ರಾಯಶಃ ಬರದ ಕಾರಣಕ್ಕೆ ಇವರು ವಲಸೆ ಬಂದಿರುವ ಸಾಧ್ಯತೆಗಳು ತುಂಬಾ ಕಡಿಮೆಯೆಂದೇ ಹೇಳಬಹುದು. 'ಬಹುಶಃ ಉತ್ತರ ಭಾರತದ ಕಡೆಯಿಂದ ಮೇಲಿಂದ ಮೇಲೆ ದಾಳಿ ನಡೆಸುತ್ತಿದ್ದ ಮುಸ್ಲಿಮರ ಉಪಟಳ ತಡೆಯಲಾರದೆ ದಕ್ಷಿಣದ ಕಡೆಗೆ ವಲಸೆ ಬಂದರು ಎಂದು ತಮಿಳಿನ ವೇಟವನ್ ಕೃತಿಯೊಂದರಲ್ಲಿ ತಿಳಿಸಿದೆ.'[೫] ನಂಬಿಯಾರರ ಈ ವಾದವನ್ನು ಹೆಚ್ಚಾಗಿ ನಂಬಬಹುದು. ಯಾಕೆಂದರೆ ಬಹುತೇಕ ಕರ್ನಾಟಕದ ಬುಡಕಟ್ಟುಗಳು ಈ ರೀತಿಯ ಯಾವುದೋ ಅನಿವಾರ್ಯ ಕಾರಣಗಳಿಗಾಗಿ ವಲಸೆ ಬಂದಿರುವ ಕುರಿತು ತಿಳಿದುಬರುತ್ತದೆ. ತಮ್ಮ ಹಿರಿಯ ಕಾಟಿಮಲ್ಲನಾಯಕ ನೊಂದಿಗೆ ತಮ್ಮ ಬೇಡಜಾತಿಯವರೆಲ್ಲ ವಲಸೆ ಬಂದುದಾಗಿ ವಕ್ತೃಗಳು ತಿಳಿಸುತ್ತಾರೆ. ಥರ್ಸ್ಟನ್ ಅವರು ಬೇಡನಾಯಕರ ಕುರಿತು ಈ ಕೆಳಗಿನಂತೆ ತಿಳಿಸುತ್ತಾರೆ '....Both Telugu speaking Boyers and canarees Beders are split into the two main number of division of *uru* or village men and *myasa* or grass land men, each of these division is again subdivided into a exogamous bedags, according to Mysore census report 1901 the chief diety of the Bedas in Tirupati Venkataramanaswamy worshiped locally under the name of tirumala devaru, but off srings and sacrifices are also made to Mariyamma. Their Guru Thirumala Tatacharya who is also a head of Srivaishnava Brahmins.....the Dewan of Sandur informs me that the recent times some Mysore Bedas have changed their faith and are now showing special reverence to Mahadeva. They were appareerently converted by Jangamas but not to the fullest extent. The guru is the head of *ujjani lingait* matt which is in Kudligi taluk, Bellary district...'[೬] ಬೇಡರು ಪೂರ್ವದಲ್ಲಿ ಶೈವ ಪರಂಪರೆಗೆ ಸೇರಿದವರಾಗಿದ್ದರು. ಪ್ರಾಯಶಃ ವಿಜಯನಗರ ಅರಸರ ಕಾಲಕ್ಕೆ ವೈಷ್ಣವ ಪ್ರಭಾವ ಹೆಚ್ಚಾಗಿದ್ದಿತು. ಆ ಕಾರಣಕ್ಕಾಗಿ ಅವರ ಅನುವರ್ತಿಗಳಾಗಿದ್ದ ಬೇಡರ ಮೇಲೆ ಆ ಪಂಥದ ಪ್ರಭಾವವಾಗಿರುವ ಸಾಧ್ಯತೆಯೂ ಇದೆ. ಬೇಡರು ಮೂಲತಃ ಒಂದೇ ಪಂಗಡವಾಗಿದ್ದು ಯಾವುದೋ ಒಂದು ಹಂತದಲ್ಲಿ ಅವುಗಳೊಳಗೇ ಬೇರೆ ಬೇರೆ ಪಂಗಡಗಳು ಹುಟ್ಟಿರುವ ಸಾಧ್ಯತೆಯೂ ಇದೆ. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ ಇವರ ಆರಾಧನಾ ದೈವ ಕುಮಾರರಾಮನನ್ನು ವೆಂಕಟೇಶ, ಗೋವಿಂದ ಮುಂತಾದ ಹೆಸರುಗಳಲ್ಲಿ ಇಂದಿಗೂ ಪೂಜಿಸುತ್ತಾರೆ. ಇವೆಲ್ಲವುಗಳ ಆಚೆ ಇವರು ಮಾತೃದೇವತಾ ಆರಾಧಕರು. ವೀರತ್ವವನ್ನೇ ಮೆರೆದ ಈ ಸಮುದಾಯವು ಬ್ರಿಟಿಷರ ಆಡಳಿತ ಕಾಲದಲ್ಲಿ ಅಪರಾಧಿ ಬುಡಕಟ್ಟು ಎಂದು ಗುರುತಿಸಲ್ಪಟ್ಟಿತು. ಊರುಬೇಡ ಮತ್ತು ಮ್ಯಾಸಬೇಡರು ವಿಭಾಗವಾದುದಕ್ಕೆ ಕಾರಣ ನೀಡುವ ಕಥೆಯೊಂದು ಬೇಡರಲ್ಲಿ ಪ್ರಚಲಿತವಿದೆ. ಆ ಕಥೆಯ ಪ್ರಕಾರ

ಇಬ್ಬರು ಅಣ್ಣ ತಮ್ಮಂದಿರಲ್ಲಿ ಹಾದಿತಪ್ಪಿ ಕಾಡಿನ ಕಡೆ ಸಾಗಿದವನು ಮ್ಯಾಸಬೇಡನಾದರೆ ನಾಡಿನ ಕಡೆ ಸಾಗಿದವನು ಊರಬೇಡನಾದನಂತೆ. ಊರನಾಯಕ ಮತ್ತು ಮ್ಯಾಸನಾಯಕರು ಇವತ್ತಿಗೂ ತಾವು ಅಣ್ಣ ತಮ್ಮಂದಿರೆಂದೇ ಹೇಳಿಕೊಳ್ಳುತ್ತಾರೆ.

ಬೇಡನಾಯಕ ಸಮುದಾಯದಂತಹ ಸಮುದಾಯಗಳು ತಮ್ಮ ಆಶ್ರಯದಾತ ರಾಜಮನೆತನಗಳ ಅವನತಿಯಿಂದಾಗಿ ದಿಕ್ಕೇಡಿಗಳಾದವು. ಇಂತಹ ಆಸರೆ ತಪ್ಪಿದ ಬುಡಕಟ್ಟುಗಳಿಗೆ ಸುಲಭವಾಗಿ ಆಸರೆ ನೀಡಿದ್ದು ಕಾಡುಗಳು. ಕಾಡುಗಳಲ್ಲಿ ನೆಲೆನಿಂತ ಬುಡಕಟ್ಟುಗಳಿಗೆ ಅರಣ್ಯನೀತಿ ಕಾಯ್ದೆಯ ನೆವದಿಂದ ಅರಣ್ಯಗಳಿಂದ ಹೊರಹಾಕಲಾಯಿತು. ಅವರ ಸ್ವಾವಲಂಬನೆಯ ಬದುಕಿಗೆ ಈ ಮೂಲಕ ಸಂಚಕಾರ ಬಂದುದರಿಂದ ಕೆಲವು ಬುಡಕಟ್ಟುಗಳು ಜೀವನಮಾರ್ಗ ತಿಳಿಯದೆ ಕಂಗಾಲಾದವು. ಈ ರೀತಿ ಕಂಗಾಲಾದ ಕೆಲವು ಬುಡಕಟ್ಟು ಸಮುದಾಯಗಳು ತಮ್ಮ ಜೀವನ ನಿರ್ವಹಣೆಗಾಗಿ ಚಿಕ್ಕ ಪುಟ್ಟ ಅಪರಾಧಗಳನ್ನು ಮಾಡುವುದು ಅನಿವಾರ್ಯವಾಯಿತು. ಆದರೆ ಅದನ್ನೇ ದೊಡ್ಡ ಅಪರಾಧವೆಂದು ಬ್ರಿಟಿಷ್ ಸರ್ಕಾರ ಭಾವಿಸಿತು. ಅದಕ್ಕಿಂತಲೂ ಮುಖ್ಯವಾಗಿ ಬ್ರಿಟಿಷರು ಆ ಕಾಲದ ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವ ಅಸ್ತ್ರವಾಗಿಯೂ ಅಪರಾಧಿ ಬುಡಕಟ್ಟುಗಳ ಕಾಯ್ದೆಯನ್ನು ಜಾರಿಗೆ ತಂದಿತೇನೋ. ಉದಾಹರಣೆಗೆ ಹಲಗಲಿ ಬೇಡರು ತಮ್ಮ ವಿರುದ್ಧ ತಿರುಗಿಬೀಳದಂತೆ ನಿಶ್ಶಸ್ತ್ರೀಕರಣ ಕಾಯ್ದೆಯನ್ನು ಬ್ರಿಟಿಷ್ ಸರ್ಕಾರ ಜಾರಿಗೆ ತಂದಿತು. ತಮ್ಮ ಬೇಟೆಯ ಜೀವನಕ್ಕೆ ಅವಶ್ಯಕವಾದ ಆಯುಧಗಳನ್ನು ಸರ್ಕಾರ ಕಿತ್ತುಕೊಳ್ಳಲು ನೋಡಿದಾಗ ಸಹಜವಾಗಿಯೇ ಬೇಡಪಡೆ ವಿರೋಧ ವ್ಯಕ್ತಪಡಿಸಿತು. ಹೀಗಾಗಿ ಬ್ರಿಟಿಷರಿಗೂ ಹಲಗಲಿಯ ಬೇಡರ ಮಧ್ಯ ಸಂಘರ್ಷವೇರ್ಪಟ್ಟಿತು. ಇದು ಕೇವಲ ಒಂದು ಉದಾಹರಣೆ. ಈ ರೀತಿಯ ಸಂಘರ್ಷಗಳು ಬುಡಕಟ್ಟುಗಳು ಹಾಗೂ ಆಗಿನ ಸರ್ಕಾರದಲ್ಲಿ ಬೇಕಾದಷ್ಟು ನಡೆದ ಉದಾಹರಣೆಗಳಿವೆ.

ಬೇಡರಲ್ಲಿ ಒಳಪಂಗಡಗಳು ಹಲವಾರಿವೆ ಎಂಬುದನ್ನು ಹೆಚ್ ವಿ ನಂಜುಂಡಯ್ಯನವರು ತಿಳಿಸುತ್ತಾರೆ. ಅವರ ಪ್ರಕಾರ ಕರ್ನಾಟದಲ್ಲಿನ ಬೇಡರಿಗೆ ನಾಯಕ ಮತ್ತು ವಾಲ್ಮೀಕಿ ಎಂದು ಕರೆಯುತ್ತಾರೆ. ಇವರಲ್ಲಿ ಈ ಕೆಳಗಿನ ಒಳಬಾಂಧವ್ಯದ ಪ್ರಭೇಧಗಳನ್ನು ಹೀಗೆ ತಿಳಿಸುತ್ತಾರೆ. 'ಊರುಬೇಡರು(ಚಿನ್ನಬೋಯಿವಾಂಡ್ಲು), ಮ್ಯಾಸಬೇಡರು(ಪೆದ್ದ ಬೋಯಿವಾಂಡ್ಲು), ಗುಡ್ಲು ಬೇಡರು(ಗುಂತಬೋಯಿವಾಂಡ್ಲು), ಮಾರೆಮ್ಮನ ಬೇಡರು(ಮುತ್ಯಾಲಮ್ಮ ಅಥವಾ ಉರುಮೆ ಬೇಡರು), ಹಾಲು ಬೇಡರು, ಮೊಂಡ ಬೇಡರು ಎಂದು ಗುರುತಿಸಿದ್ದಾರೆ'[೭]

ಹೆಗ್ಗಡದೇವನಕೋಟೆ ಹಾಗೂ ಕಾಕನಕೋಟೆ ಪರಿಸರದಲ್ಲಿ ಕಂಡುಬರುವ ಓಡಿಗ ಮತ್ತು ಓಡಿಗ ಗೌಡ ಎಂಬ ಸಮುದಾಯವು ಬೇಡ ಬುಡಕಟ್ಟಿನಿಂದ ಒಡೆದು ಹೊರಹೋಗಿರುವ ಸಾಧ್ಯತೆಗಳ ಕುರಿತು ಕೆ ಎಂ ಮೇತ್ರಿಯವರು ಅಭಿಪ್ರಾಯಪಡುತ್ತಾರೆ. ನಾಯ್ಕ್, ನಾಯಕ್, ಬೇಡ,

ಬೇಡರ್ ಮತ್ತು ವಾಲ್ಮೀಕಿ ಪದಗಳು ಕರ್ನಾಟಕದಲ್ಲಿ ೧೯೯೧ರಲ್ಲಿ ನಾಯಕ್ಡ್ ಬುಡಕಟ್ಟಿನ ಪರ್ಯಾಯ ಪದಗಳೆಂದು ಸೇರಿಸಲ್ಪಟ್ಟಿದ್ದರೂ ದಿನಾಂಕ ೧೯.೦೪.೧೯೯೩ರಿಂದ ಈ ಪದಗಳು ಮೀಸಲಾತಿ ಅನುಭವಿಸಲು ಆರಂಭಿಸಿದವು. ನೈಯ್ಕಡಾ ಮತ್ತು ಅದರ ಪರ್ಯಾಯ ಪದಗಳು ೧೯೭೦ರಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿರುವವು. ೧೯೫೦ರಿಂದಲೇ ಬಾಂಬೆ ರಾಜ್ಯದಲ್ಲಿ ನೈಯ್ಕಡಾ ಅಥವಾ ನಾಯಕಾ ಬುಡಕಟ್ಟು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಇದ್ದವು.'[೮]

'ಮಹಾರಾಷ್ಟ್ರ ಸೀಮೆಯಲ್ಲಿ ಬೇಡರಿಗೆ ರಾಮೋಸಿ(ರಾಣವಾಸಿಯೇ ರಾಮೋಸಿಯಾಗಿ ಮಾರ್ಪಾಡು ಹೊಂದಿದೆ) ಎನ್ನುವರು. ಖಾನ್ ದೇಶದ ಉತ್ತರದಲ್ಲಿ ಬೇಡರಿಗೆ ಭಿಲ್ ಎನ್ನುವರು. ಮೂಲತಃ ಬೇಡರ್ ಎನ್ನುವುದು ಉರ್ದು ಮೂಲದ ಪದವಾಗಿದ್ದು ಅದರ ಅರ್ಥ ಉರ್ದುವಿನಲ್ಲಿ ಅಂಜದವರು, ಧೈರ್ಯಶಾಲಿ ಮುಂತಾದ ಅರ್ಥವಾಗಿರುವುದಾಗಿ ತಿಳಿದುಬರುತ್ತದೆ. ತೆಲುಗಿನಲ್ಲಿ ಬೋಯಾ, ಬೋವಿಯೆಂದು ಸಹ ಕರೆಯುವುದನ್ನು ಕಾಣಬಹುದು. ಆಂಧ್ರದಲ್ಲಿ ಬೇಡರಿಗೆ ಈ ಕೆಳಗಿನ ಒಳಬಾಂಧವ್ಯದ ಗುಂಪುಗಳು ಕಂಡುಬರುತ್ತವೆ. ಅವು ಕ್ರಮವಾಗಿ ಈ ರೀತಿಯಾಗಿವೆ. ಸಾದರ(ಉನ್ನತ ಶ್ರೇಣಿಯ) ಅಥವಾ ನಾಯ್ಕುಲು(ವಾಲ್ಮೀಕಿ) ಬೇಡರು, ಟೆಂಜ್ಞ ಬೇಡರು, ಮಂಗಲ(ಕ್ಷೌರಿಕ) ಬೇಡರು, ಚಾಕ್ಲಾ(ಅಗಸ) ಬೇಡರು, ನೀಚ ಬೇಡರು, ಬಸವಿ ಬೇಡರು, ರಾವೋಶಿ ಬೇಡರು, ಜಾಸ ಬೇಡರು, ಸ್ಥಳೀಯ ಬೇಡರು ಎಂದಿದ್ದು ಈ ಗುಂಪುಗಳು ಅವರ ಸಾಮಾಜಿಕ, ರಾಜಕೀಯ ಸ್ಥಾನಮಾನ ಮತ್ತು ಕಸುಬುಗಳನ್ನು ಪ್ರತಿನಿಧಿಸುತ್ತವೆ.'[೯]

ಕರ್ನಾಟಕದಲ್ಲಿ ಮುಖ್ಯವಾಗಿ ಊರಬೇಡರು ಅಥವಾ ಊರನಾಯಕರು, ಮ್ಯಾಸಬೇಡರು ಅಥವಾ ಮ್ಯಾಸನಾಯಕರು ಹಾಗೂ ಕರಕರ ಮುಂಡ, ಬುಟ್ಟಿ ನಾಯಕರು ಮುಂತಾದ ಪಂಗಡಗಳು ಕಂಡುಬರುತ್ತವೆ. ಇಂದು ಬುಟ್ಟಿ ನಾಯಕರು ಎಲ್ಲಿದ್ದಾರೆ ಎಂಬುದು ತಿಳಿದುಬರುವುದಿಲ್ಲ ವಾದರೂ ಊರುಬೇಡರು, ಮ್ಯಾಸಬೇಡರು, ಹಾಗೂ ಕರಕರಮುಂಡ ಸಮುದಾಯಗಳು ಕಂಡುಬರುತ್ತವೆ. ಈ ಮೂರು ಪಂಗಡಗಳು ಒಂದೇ ಜಾತಿ ಮೂಲದವರಾದರೂ ಇವುಗಳ ನಡುವೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಬಹುತೇಕ ಭಾರತದ ಬುಡಕಟ್ಟುಗಳು ತುಂಬಾ ಸ್ವಾಭಿಮಾನದ ಬದುಕನ್ನು ಬದುಕಿದವು. ಬೇಡರಲ್ಲಿ ಇದರದೇ ಆದ ಕಟ್ಟೆಮನೆ ಪದ್ಧತಿ, ಜಾತಿ ಪಂಚಾಯ್ತಿಗಳನ್ನು ಇಂದಿಗೂ ಕಾಣಬಹುದು. ಇತ್ತೀಚೆಗೆ ಊರುಬೇಡ ಮತ್ತು ಮ್ಯಾಸಬೇಡರಲ್ಲಿ ವಿದ್ಯಾವಂತರಾದವರು ವೈವಾಹಿಕ ಸಂಬಂಧಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಏರ್ಪಡಿಸಿಕೊಳ್ಳುತ್ತಿದ್ದಾರೆ. ಆದರೆ ಮೊಂಡರೊಂದಿಗೆ ಈ ಎರಡೂ ಪಂಗಡಗಳು ವೈವಾಹಿಕ ಸಂಬಂಧ ಏರ್ಪಡಿಸಿಕೊಂಡ ಉದಾಹರಣೆ ಇಲ್ಲ. ಬೇಡರ ಈ ಮೂರೂ ಪಂಗಡಗಳಲ್ಲಿಯೂ ಅವುಗಳದೇ ಆದ ವಿಶಿಷ್ಟ ಬೆಡಗುಗಳು, ಆರಾಧನಾ ದೈವಗಳು ಇವೆ. ಇವರದೇ ಆದ ಸಾಂಸ್ಕೃತಿಕ ನಾಯಕರು ಇಂದು ದೈವಗಳಾಗಿ ಪೂಜೆಗೊಳ್ಳುತ್ತವೆ.

೩.೧. **ಊರಬೇಡರು**

ಊರಬೇಡರು ಅಥವಾ ಊರನಾಯಕರು ಮೂಲತಃ ಊರಿನ ಇತರರೊಂದಿಗೆ ಸಹಬಾಳ್ವೆ ಮಾಡುತ್ತಾರೆ. ಜಾತಿವ್ಯವಸ್ಥೆಯಲ್ಲಿ ಇವರು ಮಧ್ಯದಲ್ಲಿ ನಿಲ್ಲುತ್ತಾರೆ. ಮಾದಿಗ, ಹೊಲೆಯ ಸಮುದಾಯ ಗಳನ್ನು ಇತರರಂತೆ ಅಸ್ಪೃಶ್ಯರಾಗಿ ನೋಡುವ ಇವರು ಕುರುಬ, ಬ್ರಾಹ್ಮಣ, ಅಕ್ಕಸಾಲಿ, ಲಿಂಗಾಯತ, ಗೌಡ ಮುಂತಾದ ಸಮುದಾಯಗಳು ಶ್ರೇಣೀಕರಣದಲ್ಲಿ ತಮಗಿಂತ ಮುಂದಿವೆಯಂದು ಭಾವಿಸುತ್ತಾರೆ. ವಿಶೇಷವೆಂದರೆ ಮ್ಯಾಸಬೇಡರು ಹಾಗೂ ಮೊಂಡ ಸಮುದಾಯಗಳು ತನಗಿಂತ ಕೀಳು ಎಂದು ಭಾವಿಸುತ್ತದೆ. ದನ, ಕಾಡುಹಂದಿ, ಕುರಿ, ಕೋಳಿ, ಉಡ ಮುಂತಾದ ಪ್ರಾಣಿಗಳ ಮಾಂಸವನ್ನು ಭಕ್ಷಣೆ ಮಾಡುತ್ತಾರೆ.

ಊರಬೇಡರು ಸಾಮಾಜಿಕವಾಗಿ ತಾವು ಮೇಲಿದ್ದೇವೆಯಂದು ತೋರಿಸಿಕೊಳ್ಳಲು ಇಷ್ಟಪಡುವರು. ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವಾಗ ಮುಖ್ಯವಾಗಿ ಬೆಡಗುಗಳನ್ನು ಪರಿಗಣಿಸುತ್ತಾರೆ. ವಿಜಾತಿ ಬೆಡಗುಗಳಲ್ಲಿ ಮಾತ್ರ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ. ಸಜಾತಿ ಬೆಡಗಿನವರನ್ನು ಸಹೋದರರೆಂದು ಭಾವಿಸುತ್ತಾರೆ. ತೆರ ಪದ್ಧತಿ ಇವರಲ್ಲಿ ಹಿಂದೆ ಜಾರಿಗೆ ಇದ್ದರೂ ಈಗ ಇಲ್ಲವಾಗಿದೆ. ತೆರ ಪದ್ಧತಿಯ ಬದಲಿಗೆ ವರದಕ್ಷಿಣೆ ಪದ್ಧತಿ ಇವರಲ್ಲಿ ಕಂಡುಬರುತ್ತಿದೆ. ಊರನಾಯಕರು ಗಂಡಿನ ಮನೆ ಮುಂದೆ ಮದುವೆ ಮಾಡುತ್ತಾರೆ. ಕೆಲವೊಮ್ಮೆ ಹೆಣ್ಣಿನ ಮನೆ ಮುಂದೆ ಮದುವೆ ಮಾಡುವುದೂ ಉಂಟು. ಅತ್ತಿಕಂಭ, ಆಲಗಂಭ ತರುವುದು, ಮನೆ ಮುಂದೆ ಚಪ್ಪರ ಹಾಕುವುದು, ಐರಣಿ ಮತ್ತು ಸುರಗಿ ಪದ್ಧತಿಗಳು ಜಾರಿಯಲ್ಲಿವೆ. ತಾಳಿ ಕಟ್ಟಲು ಪುರೋಹಿತರನ್ನು ಕರೆಸುತ್ತಾರೆ. ಇತರ ಮ್ಯಾಸಬೇಡ ಹಾಗೂ ಮೊಂಡರಿಗಿಂತ ಆರ್ಥಿಕವಾಗಿ ಈ ಸಮುದಾಯ ಸಬಲವಾಗಿದೆ. ಹಾಗೆಯೇ ಶಿಕ್ಷಣ ಪಡೆದವರ ಪ್ರಮಾಣ ಮ್ಯಾಸಬೇಡರು ಹಾಗೂ ಮೊಂಡರಿಗಿಂತ ಹೆಚ್ಚಿನ ಪ್ರಮಾಣದಲ್ಲಿದೆ.

ಬೆಡಗುಗಳು: ಮ್ಯಾಸಬೇಡರ ಬೆಡಗುಗಳು ಈ ಕೆಳಗಿನಂತಿವೆ.

ಮುಮ್ಮಡ್ಲೋರು, ನಲ್ಲಬೋತುಲು(ಇವೆರಡೂ ಸಹೋದರ ಬೆಡಗುಗಳೆಂದು ಭಾವಿಸುತ್ತಾರೆ.) ಮೀನಿಗ್ಲೋರು, ಕಾಶೇರು, ಗುಜ್ಜಲ, ಪೂಲೋರು, ಚಿನ್ನಮಾದಲ, ಪೆದ್ದಮಾದಲ, ಮುದಗುಂಡ್ಲು, ಸಾಕೇಲ್ಲೋರು, ಎನಿಮಲೋರು, ನೆಲ್ಲಬಾಮುಡ್ಲು, ಡೋಣಮಂಡ್ಲು, ಬೋಸುರಲು, ನಶೆನೋರು, ಮುನ್ನೋಲ್ಲೋರು, ಗಟ್ಟಿಮತ್ತೇರು, ಕುಂಬ್ರೇಲು, ಕಾದುಗಡ್ಲೇರು, ಎತ್ತಿನೋರು, ದಡ್ಡಿದಾಸರಿಗಳು, ಪಾಲಜ್ಜಿಗಳು, ಗಾಡವುಲು, ಓಬನಾಯಕರು, ಪಟ್ಟಪಲ್ಲಾರು, ಭಾನೋರ್, ಬೋನಳ್ಳಿಯೋರ್, ಚಿನ್ನನಾಯ್ಕಲು, ಪಾಮಲ್ಲೇರು, ರಾಯಬೋರ್, ಬಡಸಲೋರ್ ಮುಂತಾದ ಬೆಡಗುಗಳು ಕಂಡು ಬರುತ್ತವೆ. ಮೇಲಿನ ಎರಡು ಬೆಡಗುಗಳಿಗೆ ಇವು ವಿಜಾತಿ ಬೆಡಗುಗಳಾಗುವುದರಿಂದ ಅವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ.

ಹೆರಿಗೆ: ಊರನಾಯಕರಲ್ಲಿ ವಿವಾಹಿತ ಹೆಣ್ಣು ಬಸಿರಿಯಾದರೆ ಮೂರನೇ ತಿಂಗಳಲ್ಲಿ ಹೆಣ್ಣಿನ ತವರು ಮನೆಯವರು ಬಯಕೆ ಬುತ್ತಿಯನ್ನು ಒಯ್ಯುತ್ತಾರೆ. ಬಯಕೆ ಬುತ್ತಿಯಲ್ಲಿ ಮುಖ್ಯವಾಗಿ ಮೊಸರನ್ನ, ರೊಟ್ಟಿ, ವಿವಿಧ ತರಕಾರಿ ಪಲ್ಯಗಳು, ಸಿಹಿತಿನಿಸುಗಳನ್ನು ಒಯ್ಯುತ್ತಾರೆ. ತರುವಾಯ ಐದು ಅಥವಾ ಎಂಟನೇ ತಿಂಗಳಲ್ಲಿ ಬಸಿರಿ ಹೆಣ್ಣಿಗೆ ಸೀರೆ ಮಾಡುವ ಕಾರ್ಯಕ್ರಮ ಮಾಡುತ್ತಾರೆ. ಇದನ್ನು ಸೀಮಂತ ಕಾರ್ಯವೆಂದೂ ಸಹ ಕರೆಯುತ್ತಾರೆ. ಸೀಮಂತ ಕಾರ್ಯವನ್ನು ಸಾಮಾನ್ಯವಾಗಿ ಗಂಡನ ಮನೆಯಲ್ಲಿಯೇ ಮಾಡಲಾಗುತ್ತದೆ. ಆದರೆ ಅಂದಿನ ಊಟೋಪಚಾರದ ಮತ್ತು ಇತರ ಖರ್ಚುಗಳು ಕೇವಲ ಹೆಣ್ಣಿನ ತವರು ಮನೆಯವರೇ ಮಾಡುತ್ತಾರೆ. ಬಸಿರಿ ಹೆಂಗಸಿಗೆ ಹೊಸ ಸೀರೆ, ಕುಬುಸ, ಇಷ್ಟವಾದ ಪದಾರ್ಥಗಳನ್ನು ತರುತ್ತಾರೆ. ರಾತ್ರಿ ಮುತ್ತೈದೆಯರ ಸಮ್ಮುಖದಲ್ಲಿ ಬಸಿರಿ ಹೆಂಗಸನ್ನು ಕೂಡಿಸಿ ಹೂವಿನ ಸೂಸುಗ ಇತ್ಯಾದಿಗಳನ್ನು ಹಾಕಿ ತವರಿನವರು ಉಡಿ ತುಂಬುತ್ತಾರೆ. ಅಂದು ತವರಿನವರೇ ಗಂಡಿನ ಊರಿನ ಊರದೈವಕ್ಕೆ ಸಿಹಿ ಊಟವನ್ನು ಕೊಡುತ್ತಾರೆ. ಈ ಕಾರ್ಯಕ್ರಮವಾದ ಮಾರನೇ ದಿನ ಬಸಿರಿ ಹೆಂಗಸನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ. ಈ ಕಾರ್ಯಕ್ರಮ ಕೇವಲ ಚೊಚ್ಚಿಲು ಬಸಿರಿಗೆ ಮಾತ್ರ ಮಾಡಲಾಗುತ್ತದೆ.

ಊರಬೇಡರು ಮನೆಯೊಳಗೆ ಹೆರಿಗೆಯನ್ನು ಮಾಡಿಸುತ್ತಾರೆ. ಹೆರಿಗೆಯಾದ ೧೬ ದಿನದವರೆಗೆ ಆ ಮನೆಯನ್ನು ಮೈಲಿಗೆ ಮನೆಯೆಂದು ಪರಿಗಣಿಸಲಾಗುತ್ತದೆ. ಹೆರಿಗೆಯಾದ ತರುವಾಯ ಮೈಲಿಗೆ ಬಟ್ಟೆಗಳನ್ನು ಅಗಸರು ತೊಳೆದುಕೊಡುತ್ತಾರೆ. ೧೬ ದಿನದವರೆಗೆ ಮೈಲಿಗೆ ಬಟ್ಟೆ ತೊಳೆಯು ವವರು ಅಗಸರೇ ಆಗಿರುತ್ತಾರೆ. ತರುವಾಯ ಮನೆಗೆ ಸುಣ್ಣ ಹಚ್ಚಿ ಮನೆ ತೊಳೆದುಕೊಂಡ ತರುವಾಯ ದೇವರನ್ನು ತೊಳೆದುಕೊಳ್ಳುತ್ತಾರೆ. ಆ ನಂತರ ಬಾಣಂತಿಯ ಕೈಯಲ್ಲಿ ಗಂಗೆಪೂಜೆ ಮಾಡಿಸುತ್ತಾರೆ. ಸಾಮಾನ್ಯವಾಗಿ ೧೬ ದಿನದಲ್ಲಿಯೇ ಮಗುವಿಗೆ ಹೆಸರಿಡುವ ಕಾರ್ಯ ಮಾಡುತ್ತಾರೆ. ತಮ್ಮ ಮನೆದೇವರ ಹೆಸರು ಕರೆದು ತರುವಾಯ ತಮಗೆ ಇಷ್ಟವಾದ ಹೆಸರುಗಳನ್ನು ಇಡುತ್ತಾರೆ. ಮಗುವಿಗೆ ಸೋದರಮಾವ ಅಥವಾ ಸೋದರತ್ತೆ ಹೆಸರಿಡುತ್ತಾರೆ. ಮಗುವಿಗೆ ಹೆಸರಿಡುವಾಗ ಬಾಣಂತಿಗೆ ಸೂಸುಗ ಹಾಕುತ್ತಾರೆ. ಕಂಕಣ ಕಟ್ಟುತ್ತಾರೆ. ತೊಟ್ಟಿಲು ಕೆಳಗೆ ಬಾಣಂತಿ ಪೂಜೆ ಮಾಡಿ ತಂದ ಗಂಗಮ್ಮನ ಕೊಡ ಇರಿಸುತ್ತಾರೆ. ಮುತ್ತೈದೆಯರು ಕಂಕಣ ಕಟ್ಟಿಕೊಂಡು ಹೆಸರಿಡುವ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಹೆರಿಗೆಯಾದ ಐದು ತಿಂಗಳ ತರುವಾಯ ಗಂಡಿನ ಮನೆಗೆ ಕಳಿಸಿಕೊಡಲಾಗುತ್ತದೆ. ಅಂದು ಮಗುವಿನ ಸೋದರಮಾವ ತೊಟ್ಟಿಲನ್ನು ಒಯ್ಯುತ್ತಾನೆ.

ಋತುಮತಿ : ಊರಬೇಡರಲ್ಲಿ ಹೆಣ್ಣು ಋತುಮತಿಯಾದಾಗ ಹೆಣ್ಣನ್ನು ಮನೆಯ ಒಂದು ಮೂಲೆಯಲ್ಲಿ ಕೂರಿಸುತ್ತಾರೆ. ಆ ಹೆಣ್ಣಿಗೆ ತಾಯಿ ಇಲ್ಲವೇ ಅತ್ತೆಯು ಮುಟ್ಟು ನೀರು ಎರೆಯುತ್ತಾಳೆ. ಹೆಣ್ಣು ಋತುಮತಿಯಾದ ಮನೆಯನ್ನು ಮೈಲಿಗೆ ಮನೆಯೆಂದು ಪರಿಗಣಿಸಲಾಗುತ್ತದೆ. ಹೆಣ್ಣಿನ ಮೈಲಿಗೆ ಬಟ್ಟೆಗಳನ್ನು ತೊಳೆಯುವವರು ಅಗಸರಾಗಿರುತ್ತಾರೆ. ಇಲ್ಲಿಯೂ ಸಹ ಐದು ದಿನ ಅಥವಾ

೯ನೇ ದಿನಕ್ಕೆ ಮನೆ ಶುದ್ಧ ಮಾಡಿಕೊಂಡು ಹುಡುಗಿಯ ಕೈಯ್ಯಲ್ಲಿ ಗಂಗೆಪೂಜೆ ಮಾಡಿಸುತ್ತಾರೆ. ತರುವಾಯ ಹುಡುಗಿಯನ್ನು ೯ ದಿನ ಅಥವಾ ೧೬ ದಿನದವರೆಗೆ ಹುಡುಗಿಗೆ ಹೂ ಮುಡಿಸುವ ಕಾರ್ಯ ಮಾಡುತ್ತಾರೆ. ಹದಿನಾರನೇ ದಿನಕ್ಕೆ ಹುಡುಗಿಯ ಕೈಯಲ್ಲಿ ತಂಗಡಿ ಗಿಡದ ಪೂಜೆ ಮಾಡಿಸಿ ತರುವಾಯ ಆಂಜನೇಯನ ದೇವಾಲಯಕ್ಕೆ ಬಂದು ಹಣ್ಣು ಕಾಯಿ ಮಾಡಿಸುತ್ತಾರೆ. ಹುಡುಗಿಯ ಸೋದರತ್ತೆ, ಬೀಗರು ಒಸಗೆ ತರುವ ಪದ್ಧತಿಯೂ ಇದೆ

ದೇವರಿಗೆ ಬಿಡುವ ಪದ್ಧತಿ : ಸಾಮಾನ್ಯವಾಗಿ ಹುಡುಗಿಗೆ ರೋಗಗಳು ಬಂದಾಗ, ಮನೆಯಲ್ಲಿ ಗಂಡುಮಗು ಜನನವಾಗದಿರುವಾಗ, ಮನೆಯ ರೂಢಿ ಪದ್ಧತಿ ಎನ್ನುವ ಕಾರಣಕ್ಕೆ ಹೆಣ್ಣನ್ನು ದೇವರಿಗೆ ಬಿಡಲಾಗುತ್ತದೆ. ಊರನಾಯಕರು ಹಾಗೂ ಮ್ಯಾಸನಾಯಕರಲ್ಲಿ ದೇವದಾಸಿ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿ ಒಂದರ್ಥದಲ್ಲಿ ಬುಡಕಟ್ಟು ನಿಯಮಗಳಿಗೆ ವಿರುದ್ಧವಾದುದಾಗಿದೆ. ಪ್ರಾಯಶಃ ಮಧ್ಯಕಾಲೀನ ಕರ್ನಾಟಕದ ರಾಜರ ಆಡಳಿತ ಸಂದರ್ಭದಲ್ಲಿ ಬೇಡ ಸಮುದಾಯದಲ್ಲಿ ಇಂತಹ ಆಚರಣೆ ಪ್ರವೇಶ ಪಡೆದಿರಬೇಕು. ಈ ಪದ್ಧತಿ ದೇವರ ಹೆಸರಿನಲ್ಲಿ ಇಂದಿಗೂ ಅಲ್ಲಲ್ಲಿ ಗೌಪ್ಯವಾಗಿ ಜಾರಿಯಲ್ಲಿರುವುದು ಕಂಡುಬರುತ್ತದೆ. ಇವರ ಈ ಪದ್ಧತಿಗೆ ಆಂಜನೇಯ, ಹುಲಿಗೆಮ್ಮ, ಯಲ್ಲಮ್ಮ, ತುಳಜಾ ಭವಾನಿ, ಅಂಬಾ ಜೋಗಾಯಿ, ಗುತ್ಯಮ್ಮನಂತಹ ದೈವಗಳು ನೆರವಾಗಿವೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕೂಡ್ಲಿಗಿ, ಕಮಲಾಪುರ, ಹೊಸಪೇಟೆ, ಬಳ್ಳಾರಿಯಂತಹ ಊರುಗಳಲ್ಲಿ ದೇವದಾಸಿ ಹೆಸರಿನಲ್ಲಿ ಜೀವನ ನಿರ್ವಹಣೆ ಮಾಡುವ ಬೇಡ ಸಮುದಾಯದ ಮಹಿಳೆಯರನ್ನು ಕಾಣಬಹುದು. ಸಾಮಾಜಿಕವಾಗಿ ಅವಮಾನಕರವಾದ ಈ ಅನಿಷ್ಟ ಪದ್ಧತಿಯಿಂದಾಗಿ ಮಹಿಳೆಯರು ಅನುಭವಿಸುವ ನೋವು ಯಾತನೆಗಳು ಎಂಥವು ಎಂಬುದು ಅನುಭವಿಸಿದವರಿಗೆ ಮಾತ್ರ ಅರ್ಥವಾಗುವಂಥದ್ದು. ದೇವದಾಸಿ ಪದ್ಧತಿ ಅಳವಡಿಸಿಕೊಂಡ ಏಕೈಕ ಕಾರಣಕ್ಕಾಗಿ ಈ ಬೇಡ ಸಮುದಾಯದ ಬಹುತೇಕ ಮಹಿಳೆಯರು ಸಾಮಾಜಿಕವಾಗಿ ತುಂಬಾ ಅಪಮಾನಕಾರಿ ಜೀವನ ನಿರ್ವಹಿಸಬೇಕಾದಂತಹ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ವಿದ್ಯಾಭ್ಯಾಸ ಪಡೆದು ಶಿಕ್ಷಿತರಾದ ಹೊಸ ತಲೆಮಾರಿನ ಹುಡುಗಿಯರು ಈ ಅನಿಷ್ಟ ಪದ್ಧತಿಯಿಂದ ದೂರವಾಗುತ್ತಿರುವುದು ಕಂಡುಬರುತ್ತಿದೆ.

ಸಾವು : ಮನೆಯಲ್ಲಿ ಸಾವುಂಟಾದಾಗ ಸತ್ತ ವ್ಯಕ್ತಿಯ ದೇಹವನ್ನು ಉತ್ತರ ದಕ್ಷಿಣ ಮುಖವಾಗಿ ಮಲಗಿಸಲಾಗುತ್ತದೆ. ಹೆಣದ ತಲೆದೆಸೆಗೆ ತೆಂಗಿನ ಕಾಯಿ ಇರಿಸುತ್ತಾರೆ. ಒಂದು ಪ್ರಣತಿಯ ದೀಪವನ್ನು ಇರಿಸುತ್ತಾರೆ. ಹೆಣದ ಎರಡು ಕಾಲುಗಳ ಹೆಬ್ಬೆರಳನ್ನು ಸೇರಿಸಿ ನೂಲಿನಿಂದ ಕಟ್ಟುತ್ತಾರೆ. ಹೆಣದ ಕಣ್ಣಿನ ಮೇಲ್ಭಾಗದಲ್ಲಿ ನವಣೆ ಅಥವಾ ಅಕ್ಕಿಯನ್ನು ಹಾಕುತ್ತಾರೆ. ಬಾಯಿಗೆ ಎಲೆಯಡಿಕೆ ಕುಟ್ಟಿ ಇರಿಸುತ್ತಾರೆ. ಮೂಗಿಗೆ ಹತ್ತಿಯನ್ನು ಇರಿಸುತ್ತಾರೆ. ಬಂಧು ಬಾಂಧವರು ಬಂದ ತರುವಾಯ ಹೆಣವನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಹೆಣವನ್ನು ಸಿದಿಗೆಯ ಮೇಲೆ ಮಲಗಿಸಿ ಒಯ್ಯುತ್ತಾರೆ.

ಸಿದಿಗೆಯನ್ನು ಕಳ್ಳಿ ಅಥವಾ ಬಿದಿರಿನ ಕೋಲನ್ನು ಬಳಸಿ ತಯಾರಿಸುತ್ತಾರೆ. ಸಿದಿಗೆಯ ಮೇಲೆ ಹೆಣ ಮಲಗಿಸುವ ಪೂರ್ವದಲ್ಲಿ ಸಿದಿಗೆಯ ಮೇಲ್ಭಾಗದಲ್ಲಿ ಬಿಳಿ ಬಟ್ಟೆ ಹಾಸುತ್ತಾರೆ. ತರುವಾಯ ಹೆಣವನ್ನು ಬಿಳಿ ಬಟ್ಟೆ ಮೇಲೆ ಮಲಗಿಸಿ ಅದರ ಕಾಲಿನ ಭಾಗದಿಂದ ಬಿಳಿಬಟ್ಟೆಯನ್ನು ತಲೆಭಾಗಕ್ಕೆ ಬರುವಂತೆ ಮೇಲೆ ಹೊದಿಸುತ್ತಾರೆ. ತರುವಾಯ ಉರಿಕೊನೆಯಿಂದ ಸಿದಿಗೆಗೆ ಹೊಂದಿಸಿ ಹೆಣವನ್ನು ಕಟ್ಟಲಾಗುತ್ತದೆ. ಹೆಣಕ್ಕೆ ಅರಿಸಿಣ, ಕುಂಕುಮ ಹಚ್ಚಿ ಪೂಜೆ ಮಾಡಲಾಗುತ್ತದೆ. ಹೆಣದ ತಲೆಭಾಗದಲ್ಲಿ ತೆಂಗಿನ ಕಾಯಿ ಇರಿಸಿರುತ್ತಾರೆ. ಹೆಣವನ್ನು ಮೊದಲಿಗೆ ಹೊತ್ತವರೇ ಕೊನೆಯವರೆಗೂ ಹೊರಬೇಕೆಂಬ ಪದ್ಧತಿ ಇದೆ. ಆದರೆ ಮಧ್ಯಭಾಗದಲ್ಲಿ ಕೆಲವು ಬಂಧುಬಾಂಧವರು ಹೆಗಲುಕೊಡುವ ಪದ್ಧತಿಯೂ ಉಂಟು. ಹೆಣದ ಮುಂಭಾಗದಲ್ಲಿ ಮನೆಯ ವಾರಸುದಾರ ಅಥವಾ ಹಿರಿಯ ಮಗನು ಮಣ್ಣಿನ ಮಡಕೆಯಲ್ಲಿ ಬೆಂಕಿ ಹಾಗೂ ಕೂಳನ್ನು ಹಿಡಿದುಕೊಂಡು ಹೋಗುತ್ತಾನೆ. ಸ್ಮಶಾನದ ಮಧ್ಯಭಾಗದಲ್ಲಿ ಹೆಣವನ್ನು ಇಳಿಸುವಾಗ ಮೊದಲಿಗೆ ಆ ಸ್ಥಳದಲ್ಲಿ ತುಂಬಿದ ಕೊಡದ ನೀರನ್ನು ಹಾಕಿ ಹೆಣವನ್ನು ಇಳಿಸಿ ಮುಖ ನೋಡದವರು ಹೆಣದ ಮುಖ ನೋಡುತ್ತಾರೆ. ಈ ಕಾರ್ಯದ ತರುವಾಯ ಮಗನ ಕೈಯಲ್ಲಿಯ ಅನ್ನದ ಮಡಕೆಯನ್ನು ನೆಲದ ಮೇಲೆ ಬೋರಲಾಕಿ ಎಡಗಾಲಿನಿಂದ ತುಳಿದು ಹೆಣವನ್ನು ಸ್ಮಶಾನಕ್ಕೆ ಸಾಗಿಸುತ್ತಾರೆ. ಹೆಣ ಇಡಲು ಕುಣಿಯನ್ನು ಸಾಮಾನ್ಯವಾಗಿ ಹೊಲೆಯರು ತೆಗೆಯುತ್ತಾರೆ. ಅವರಿಗೆ ಇಂತಿಷ್ಟು ಎಂದು ಕಾಣಿಕೆ ಸಲ್ಲಿಸಲಾಗುತ್ತದೆ. ಹೆಣವನ್ನು ಕುಣಿಗೆ ಇಳಿಸುವ ಪೂರ್ವದಲ್ಲಿ ಎಡಭಾಗದಿಂದ ಬಲಭಾಗಕ್ಕೆ ಮೂರು ಸುತ್ತು ಸುತ್ತಲಾಗುತ್ತದೆ. ಹೆಣಕ್ಕೆ ಪೂಜೆ ಸಲ್ಲಿಸಿದ ತರುವಾಯ ಹೆಣವನ್ನು ಬಿಳಿಬಟ್ಟೆಯಿಂದ ಹೊರತೆಗೆದು ಉತ್ತರ ದಕ್ಷಿಣಾಭಿ ಮುಖವಾಗುವಂತೆ ಇರಿಸಿ ಬಲಭಾಗಕ್ಕೆ ಬರುವಂತೆ ಸ್ವಲ್ಪ ಮುಖವನ್ನು ಓರೆಮಾಡಿ ಮಲಗಿಸಿ ಮಣ್ಣನ್ನು ಹಾಕಲಾಗುತ್ತದೆ. ಸಾಮಾನ್ಯವಾಗಿ ಗಂಡು ಸತ್ತರೆ ಅವನ ಹೆಂಡತಿಯ ಬಳೆ, ತಾಳಿ, ಮೂಗುತಿ ತೆಗೆಸಿಕೊಂಡು ಬರಲಾಗುತ್ತದೆ.

ಕೂಳು ಹಾಕುವುದು : ವ್ಯಕ್ತಿ ಸತ್ತ ಜಾಗದಲ್ಲಿ ಕುರಿ ಅಥವಾ ಕೋಳಿಯನ್ನು ಬಲಿ ಕೊಡಲಾಗುತ್ತದೆ. ಆ ಪ್ರಾಣಿಯ ಮಾಂಸ ಹಾಗೂ ಇಷ್ಟವಾದ ಪದಾರ್ಥಗಳನ್ನು ಅಡುಗೆ ಮಾಡಿಕೊಂಡು ಹೋಗಿ ಗುಟ್ಟೆಯ ಮೂರು ಭಾಗಗಳ ಮೇಲೆ ಪೂಜೆ ಮಾಡಿ ಇರಿಸುತ್ತಾರೆ. ವಿಶೇಷವಾಗಿ ಮಾಂಸದ ಪದಾರ್ಥವನ್ನು ಕಾಗೆ ಮುಟ್ಟುವವರೆಗೂ ಕಾದು ನಂತರ ಗುಟ್ಟೆಯ ಕಡೆಗೆ ತಿರುಗಿನೋಡದೆ ಮನೆಗೆ ಹಿಂದಿರುಗುತ್ತಾರೆ. ಮನೆಗೆ ಬಂದು ಊಟ ಮಾಡುತ್ತಾರೆ. ಇವರ ಊಟದ ತರುವಾಯ ಇತರರು ಊಟ ಮಾಡುತ್ತಾರೆ.

ದಿವಸ ಕಾರ್ಯ : ವ್ಯಕ್ತಿ ಸತ್ತ ೯ ಅಥವಾ ೧೧ ದಿನಕ್ಕೆ ದಿವಸ ಮಾಡಲಾಗುತ್ತದೆ. ಅಂದು ಸಾಯಂಕಾಲ ಗಂಗೆಗೆ ಹೋಗಿ ದೇವರನ್ನು ತೊಳೆಯುತ್ತಾರೆ ಮತ್ತು ಗಂಗೆಪೂಜೆ ಮಾಡಿ ತುಂಬಿದ ಕೊಡವನ್ನು ಹಿರಿಯ ಮಗ ಹೊತ್ತುಕೊಂಡು ಬರುತ್ತಾನೆ. ಬರುವಾಗ ಸತ್ತ ವ್ಯಕ್ತಿಯು ದೇವಲೋಕಕ್ಕೆ

ಹೋಗಿದ್ದಾನೆಂದು ಜೋರಾಗಿ ಹೊಗಳುತ್ತಾ ಬರಲಾಗುತ್ತದೆ. ಮನೆಗೆ ಬಂದ ತರುವಾಯ ಗೊರವಪ್ಪನ ಆಕಳ ಮೂತ್ರ ಹಾಕಿ ಮನೆ ಶುದ್ಧಗೊಳಿಸುತ್ತಾನೆ. ಅವನ ಕಾರ್ಯದ ತರುವಾಯ ವ್ಯಕ್ತಿ ಸತ್ತ ಸ್ಥಳದಲ್ಲಿ ತಂಬಿಗೆ ತುಂಬಿರಿಸಿ ಪೂಜೆ ಸಲ್ಲಿಸಿ ಮನೆಯ ಜನರು ಹಾಗೂ ಬಂಧುಬಾಂಧವರು ಊಟ ಮಾಡುತ್ತಾರೆ. ಅಂದು ಸಿಹಿ ಅಡುಗೆ ಮಾಡುತ್ತಾರೆ.

ಧಾರ್ಮಿಕ ಆಚರಣೆಗಳು : ಊರುಬೇಡರಲ್ಲಿ ಸಾಮಾನ್ಯವಾಗಿ ಇತರ ಹಿಂದೂಗಳು ಆಚರಿಸುವ ಹಬ್ಬಗಳನ್ನೆಲ್ಲಾ ಆಚರಿಸುತ್ತಾರೆ. ವಿಶೇಷವಾಗಿ ಆಂಜನೇಯನ ಭಕ್ತರಾದ ಇವರ ದೇವದಾಸಿ ಹೆಣ್ಣುಮಕ್ಕಳು ಓಕುಳಿ ಚೆಲ್ಲುವ ಆಟದಲ್ಲಿ ಭಾಗವಹಿಸುವುದುಂಟು. ಮುಖ್ಯವಾಗಿ ಸ್ತ್ರೀ ದೈವ ಆರಾಧಕರಾದ ಇವರು ಸ್ತ್ರೀ ದೈವಗಳಿಗೆ ಕುರಿ, ಕೋಳಿ ಬಲಿ ಕೊಡುವುದನ್ನು ಕಾಣಬಹುದಾಗಿದೆ. ವಿಶೇಷವಾಗಿ ಮಲೆಯಮ್ಮ, ಸುಂಕ್ಲಮ್ಮ, ಹುಲಿಗೆಮ್ಮ, ಎಲ್ಲಮ್ಮ, ಮಾರೆಮ್ಮ ಮುಂತಾದ ದೈವಗಳನ್ನು ಆರಾಧಿಸುತ್ತಾರೆ

೩.೨. ಮ್ಯಾಸಬೇಡರು

ಮ್ಯಾಸಬೇಡರು ಕುರಿ, ಕಾಡುಹಂದಿ, ದನ ಮತ್ತು ಇತರ ಕಾಡುಪ್ರಾಣಿಗಳನ್ನು ತಿನ್ನುವರಾದರೂ ಕೋಳಿ ಮತ್ತು ಕೋಳಿಯ ಮೊಟ್ಟೆ ಇವರಿಗೆ ನಿಷಿದ್ಧವಾಗಿದೆ. ಹಾಗೆಯೇ ಈಚಲು ಹೆಂಡ, ಈಚಲು ಚಾಪೆ, ಈಚಲು ಹಣ್ಣು ಯಾವುದನ್ನೂ ಇವರು ಬಳಸುವುದಿಲ್ಲ. ಕೋಳಿ ಮತ್ತು ಈಚಲು ಪದಾರ್ಥಗಳನ್ನು ಬಳಸಿದರೆ ಅಂಥವರನ್ನು ಕುಲದಿಂದ ಹೊರಗಿಡುವ ಪದ್ಧತಿ ಇವರಲ್ಲಿದೆ.

ಕಾಡುಗೊಲ್ಲರಂತೆ ಮ್ಯಾಸಬೇಡರು ಸಹ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸ ಮಾಡುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಆದರೆ ಕೆಲವು ಕಡೆ ನಿಧಾನವಾಗಿ ಮ್ಯಾಸ ಬೇಡರು ಊರಿನ ಮಧ್ಯಕ್ಕೆ ಬರುತ್ತಿದ್ದಾರೆ. ಇಂದಿಗೂ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡಿರುವ ಇವರು ಮದುವೆ ಇತ್ಯಾದಿ ಕಾರ್ಯದಲ್ಲಿ ಬ್ರಾಹ್ಮಣ ಪುರೋಹಿತರನ್ನು ಆಹ್ವಾನಿಸುವುದಿಲ್ಲ. ಮದುವೆ ಕಾರ್ಯಗಳನ್ನು ಕುಲದ ಹಿರಿಯನೇ ಮುಂದೆ ನಿಂತು ಮಾಡುತ್ತಾನೆ. ಸಾಮಾನ್ಯವಾಗಿ ಹೆಣ್ಣಿನ ಮನೆ ಮುಂದೆ ಮದುವೆಗಳು ನಡೆಯುತ್ತವೆ. ಇವರಲ್ಲಿಯೂ ಐರಣಿ, ಸುರಗಿ ಪದ್ಧತಿಗಳಿರುವುದನ್ನು ಕಾಣಬಹುದು. ಮ್ಯಾಸಬೇಡರು ಮತ್ತು ಊರಬೇಡರ ನಡುವೆ ಆಚರಣೆಗಳಲ್ಲಿ ವ್ಯತ್ಯಾಸ ಕಂಡು ಬರುವುದಾದರೂ ಶೇಕಡಾ ಎಂಭತ್ತರಷ್ಟು ಆಚರಣೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಮದುವೆಯಲ್ಲಿ ಬಾಸಿಂಗ ದಂಡೆಯನ್ನು ಕಟ್ಟುವುದಿಲ್ಲ. ಗಂಡಿಗೆ ರುಮಾಲನ್ನು ಸುತ್ತಿದರೆ ಹೆಣ್ಣಿಗೆ ಕೇವಲ ಹೂವು ಮುಡಿಸುತ್ತಾರೆ. ಮ್ಯಾಸನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ. ಹಾಲುಗಂಬ, ಅತ್ತಿಕಂಭದ ಪದ್ಧತಿಯಾಗಲೀ ಸುರಗಿ ಪದ್ಧತಿಯಾಗಲೀ ಇವರಲ್ಲಿರಲಿಲ್ಲ. ಆದರೆ ಇತ್ತೀಚೆಗೆ ಇವರಲ್ಲಿ ಸುರಗಿ ಪದ್ಧತಿ ಪ್ರವೇಶ ಪಡೆದಿದೆ. ಹೆಣ್ಣನ್ನು ನೋಡಲು ಹೋಗುವಾಗ ಐದು ಎಲೆ, ಐದು ಅಡಕೆ, ಐದು

ಚಿಪ್ಪು ಬಾಳೆಹಣ್ಣು, ಐದು ಉತ್ತುತ್ತಿ, ಐದು ಕೊಬ್ಬರಿ ಗಿಟುಗ, ಐದು ಅರಿಸಿಣಕೊಂಬು, ಐದು ಸೇರು ಅಕ್ಕಿ ಇಲ್ಲವೇ ಅಕ್ಕಿಯಿಂದ ಮಾಡಿದ ಹಿಟ್ಟು, ಐದು ಸೇರು ಸಜ್ಜೆ ಹಿಟ್ಟಿನ ರೊಟ್ಟಿಗಳನ್ನು ಹೆಣ್ಣಿನ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಹೆಣ್ಣು ಒಪ್ಪಿಗೆಯಾದ ತರುವಾಯ ಹೆಣ್ಣಿನ ಮನೆಗೆ ತಾವು ಒಯ್ದು ಪದಾರ್ಥಗಳನ್ನೆಲ್ಲ ಕೊಡುತ್ತಾರೆ. ಇದು ನಿಶ್ಚಯ ಕಾರ್ಯವಿದ್ದಂತೆ. ಇದಾದ ತರುವಾಯ ಕಟ್ಟೆಮನೆಯವರ ಒಪ್ಪಿಗೆ ಪಡೆದು ಒಂದು ನಿಶ್ಚಿತ ದಿನದಂದು ಮದುವೆ ಮಾಡುತ್ತಾರೆ. ಕಟ್ಟೆಮನೆಯ ಯಜಮಾನನೇ ಪುರೋಹಿತನಂತೆ ಮದುವೆ ಕಾರ್ಯಗಳನ್ನು ನಡೆಸಿ ಕೊಡುತ್ತಾನೆ. ಇವರಲ್ಲಿ ಇಂದಿಗೂ ತೆರ ಪದ್ಧತಿ ಜಾರಿಯಲ್ಲಿದೆ.

ಮ್ಯಾಸಬೇಡರಲ್ಲಿ *ಮಂಡಲರು* ಮತ್ತು *ಮಲ್ಲಿನಾಯಕರು* ಎಂಬ ಎರಡು ಪಂಗಡಗಳಿವೆ. ಈ ರೀತಿಯ ಪಂಗಡಗಳು ಊರನಾಯಕರಲ್ಲಿ ಕಂಡುಬರುವುದಿಲ್ಲ. ಈ ಎರಡು ಪಂಗಡಗಳು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಿಗೆ ಸೇರಿದವರು ಎಂದು ತಿಳಿಸುತ್ತಾರೆ. ಈ ಎರಡು ಪಂಗಡಗಳ ನಡುವೆ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ.

ಬೆಡಗುಗಳು : ಮ್ಯಾಸಬೇಡರಲ್ಲಿ ಮಲ್ಲಿನಾಯಕರು, ಯರಮಂಚನಾಯಕರು, ಮಂದಾಲರು, ಬುಡಗ್ಲೋರು, ಮಂಡ್ಲೋರು ಮುಂತಾದ ಪ್ರಮುಖ ಬೆಡಗುಗಳಿದ್ದು ಅವುಗಳಲ್ಲಿ ಮತ್ತೆ ಉಪಬೆಡಗುಗಳು ಕಂಡುಬರುತ್ತವೆ. ಮಲ್ಲಿನಾಯಕ ಬೆಡಗಿನಲ್ಲಿ ಈಶ್ವರೋರು, ಎನುಮನಲೋರ್, ಓಬನಾಯಕರು, ಕಾಟಮಲ್ಲರ್, ಚೆನ್ನಕಾದನೋರ್, ಪೆದ್ಧನಾಯಕರು, ಕೇರುಲೋರ್, ಮೇಸಲೋರ್, ಎಡೇಲೋರು ಎಂಬ ಉಪ ಬೆಡಗುಗಳಿವೆ.

ಯರಮಂಚನಾಯಕರಲ್ಲಿ ಅಚ್ಚಪುವೇರ್, ಕರೇನೋರ್, ನಲಗಟೇರ್, ಯರಗೋಟಿಯೇರ್, ಯರಗಟ್ಲಾರ್, ಎಡೇಲರ್ ಎಂದಿವೆ. ಮಂದಾಲರಲ್ಲಿ ಕಾಮಗೇತಿ, ಗಾದ್ರಿಪಾಲ, ಬುಲ್ಲೋಡರ್, ಸಾಕಲೋರು ಎಂದಿವೆ.

ಮಂಡ್ಲೋರಲ್ಲಿ ಜರಕಡ್ಲು ಪಾಮುಡ್ಲು, ನಲ್ಲ ಪಾಮುಡ್ಲು, ಪೂಜಾರಳ್ಳಿ ಪಾಮುಡ್ಲು, ಯರಪಾಲ ಮುಡ್ಲುಗಳು ಎಂದಿವೆ. ದಾಸರಲ್ಲಿ ಗುಗ್ರಿದಾಸರು, ಗೊಡಗು ದಾಸರು, ಬೋಡ ದಾಸರು, ದಡ್ಡಿ ದಾಸರು ಎಂಬ ಉಪಬೆಡಗುಗಳು ಕಂಡುಬರುತ್ತವೆ. ಮ್ಯಾಸಬೇಡರಲ್ಲಿ ಸುಮಾರು ೫೦೦ರಷ್ಟು ಬೆಡಗುಗಳಿವೆಯಂದು ಡಾ ಕೊತ್ತಮ್ಮನವರು ತಮ್ಮ 'ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ' ಎನ್ನುವ ಮಹಾಪ್ರಬಂಧದಲ್ಲಿ ದಾಖಲಿಸಿದ್ದಾರೆ. ಮ್ಯಾಸಬೇಡರು ೬೦-೭೦ ಕುಟುಂಬಗಳು ಸೇರಿ ಗುಂಪಾಗಿ ಹಟ್ಟಿಗಳನ್ನು ಕಟ್ಟಿಕೊಳ್ಳುತ್ತಾರೆ. ಹಟ್ಟಿಯ ಮಾದರಿಯ ಚಿಕ್ಕ ಚಿಕ್ಕ ಗುಂಪಾದ ಗುಡಿಸಲುಗಳಾಗಿರುತ್ತವೆ. ಈ ಹಟ್ಟಿ ಸುತ್ತ ಮುಳ್ಳು ಬೇಲಿ ಹಾಕುವ ಪದ್ಧತಿ ಯಿದ್ದುದಾಗಿ ತಿಳಿದುಬರುತ್ತದೆ. ಬಹುತೇಕ ಈಗ ಬೇಲಿ ಹಾಕುವ ಪದ್ಧತಿ ಕೈಬಿಡಲಾಗಿದೆ.

ಜನನ : ಹೆಣ್ಣು ಮಗಳು ಬಸಿರಿಯಾಗಿ ಮಗುವನ್ನು ಪಡೆಯುವ ಸಂದರ್ಭವನ್ನು ಸೂತಕವೆಂದು ಇವರು ಭಾವಿಸುತ್ತಾರೆ. ಹೀಗಾಗಿ ಹಿಂದೆ ಹೆಣ್ಣಿಗೆ ಹೆರಿಗೆಗಾಗಿ ಪ್ರತ್ಯೇಕ ಗುಡಿಸಲನ್ನು ನಿರ್ಮಿಸಲಾಗುತ್ತಿತ್ತು. ಆದರೆ ಈ ಪದ್ಧತಿ ಇಂದು ಮ್ಯಾಸನಾಯಕರಲ್ಲಿ ಕಾಣೆಯಾಗಿದೆ. ಮನೆಯ ಒಂದು ಮೂಲೆಯನ್ನೇ ಹೆರಿಗೆಯ ಸ್ಥಳ ಹಾಗೂ ಬಾಣಂತಿಯನ್ನಿರಿಸುವ ಸ್ಥಳವಾಗಿ ಮಾರ್ಪಡಿಸಲಾಗುತ್ತದೆ. ಹೆರಿಗೆಯಾದ ೧೬ ದಿನದವರೆಗೆ ಇವರೂ ಸಹ ಮೈಲಿಗೆ ಮನೆಯೆಂದೇ ಭಾವಿಸುತ್ತಾರೆ. ಇನ್ನುಳಿದಂತೆ ಹೆರಿಗೆ ಸಂದರ್ಭದಲ್ಲಿ ಮಾಡುವ ಆಚರಣೆಗಳು ಊರಬೇಡರನ್ನೇ ಹೋಲುತ್ತವೆ. ಹಿಂದೆ ಇವರಲ್ಲಿ ಸೀಮಂತ ಮಾಡುವ ಪದ್ಧತಿ ಇರಲಿಲ್ಲ. ಆದರೆ ಅಕ್ಕಪಕ್ಕದವರನ್ನು ಅನುಕರಣೆ ಮಾಡುವ ಇವರಲ್ಲಿ ಇಂದು ಸೀಮಂತಕಾರ್ಯ ಪದ್ಧತಿ ಪ್ರವೇಶ ಪಡೆದಿದೆ.

ಋತುಮತಿ ಆಚರಣೆ : ಮ್ಯಾಸಬೇಡರ ಹೆಣ್ಣುಮಕ್ಕಳು ಮೈನೆರೆತರೆ ಇತರ ಬುಡಕಟ್ಟುಗಳಂತೆ ಮನೆಯ ಹೊರಗೆ ಪ್ರತ್ಯೇಕವಾಗಿ ಗುಡಿಸಲು ಹಾಕಿ ಇರಿಸುವ ಪದ್ಧತಿ ಇತ್ತು. ಆದರೆ ಇಂದು ಗುಡಿಸಲನ್ನು ಪ್ರತ್ಯೇಕವಾಗಿ ಹಾಕದೆ ಮನೆಯ ಮೂಲೆಯಲ್ಲಿ ಹುಡುಗಿಯನ್ನು ೧೦ ದಿನದವರೆಗೂ ಕೂಡಿಸುತ್ತಾರೆ. ಆ ೧೦ ದಿನಗಳು ಸೂತಕದ ದಿನಗಳಾಗಿರುತ್ತವೆ. ಹನ್ನೊಂದನೇ ದಿನ ಹುಡುಗಿಗೆ ತಂಗಡಿ ಗಿಡದ ಬಳಿಗೆ ಕರೆದುಕೊಂಡು ಹೋಗಿ ತಂಗಡಿ ಗಿಡದ ಪೂಜೆ ಮಾಡಿಸುತ್ತಾರೆ ಹಾಗೂ ಆ ಗಿಡವನ್ನು ಹುಡುಗಿ ದಾಟುವಂತೆ ತಿಳಿಸುತ್ತಾರೆ. ಇಷ್ಟು ಮಾಡಿದರೆ ಮೈಲಿಗೆ ಮುಗಿಯುತ್ತದೆ. ಹುಡುಗಿಯ ನಾಲಿಗೆಯನ್ನು ಬೇವಿನ ಕಡ್ಡಿಯಿಂದ ಸುಟ್ಟು ಶುದ್ಧಗೊಳಿಸುತ್ತಾರೆ. ತರುವಾಯ ಹುಡುಗಿಯಿಂದ ಗಂಗೆಪೂಜೆ ಮಾಡಿಸಿ ಮುತ್ತೈದೆಯರು ತುಂಬಿದ ಕೊಡ ಮನೆಗೆ ತರುವರು. ಇತ್ತೀಚೆಗೆ ಹುಡುಗಿಯನ್ನು ಅಲಂಕರಿಸಿ ಕುಳಿಸುವ ಪದ್ಧತಿ ಇವರಲ್ಲಿ ಪ್ರವೇಶ ಪಡೆದಿದೆ.

ಸಾವು : ವ್ಯಕ್ತಿ ಸತ್ತರೆ ಅವನ ಹೆಣಕ್ಕೆ ಮೊದಲಿಗೆ ಸ್ನಾನ ಮಾಡಿಸಿ ಉತ್ತರ ದಕ್ಷಿಣಾಭಿಮುಖವಾಗಿ ಮಲಗಿಸಲಾಗುತ್ತದೆ. ಊರನಾಯಕರಂತೆಯೇ ಮ್ಯಾಸಬೇಡರು ಸಹ ಸತ್ತಾಗ ಮಾಡುವ ಆಚರಣೆಗಳನ್ನೇ ಮಾಡುವುದನ್ನು ಕಾಣಬಹುದು.

ಕೂಳು ಕಾರ್ಯ : ಮೂರನೇ ದಿನ ವ್ಯಕ್ತಿ ಸತ್ತ ಜಾಗದಲ್ಲಿ ಕುರಿ ಬಲಿ ನೀಡಲಾಗುತ್ತದೆ. ತರುವಾಯ ಅದರ ಅಡುಗೆ ಮಾಡಿ ಸುಡುಗಾಡಿಗೆ ನೈವೇದ್ಯ ಒಯ್ದು ಹೆಣದ ಗುಟ್ಟಿಯ ಮೂರು ಭಾಗಕ್ಕೆ ಆಹಾರವನ್ನು ಇರಿಸಲಾಗುವುದು. ಕಾಗೆ ಬಂದು ಆಹಾರವನ್ನು ಮುಟ್ಟಿದ ತರುವಾಯ ಮರಳಿ ಬಂದು ಮನೆಯಲ್ಲಿ ಊಟ ಮಾಡುವರು. ಹೆಣ ಹೊತ್ತವರು ಹಾಗೂ ಕೂಳು ಹಾಕಲು ಹೋದವರು ಊಟ ಮಾಡಿದ ತರುವಾಯ ಇತರರು ಊಟ ಮಾಡುತ್ತಾರೆ. ಇನ್ನು ಹನ್ನೆರಡನೇ ದಿನಕ್ಕೆ ಊರ ಬೇಡರಂತೆ ಇವರು ದಿವಸ ಕಾರ್ಯ ಮಾಡುತ್ತಾರೆ. ದಿವಸ ಕಾರ್ಯದ ತರುವಾಯ ಇವರ ಮನೆಯ ಮೈಲಿಗೆ ಹೊರಟು ಹೋಗುತ್ತದೆ. ಊರ ಬೇಡರಿಗೂ ಇವರಿಗೂ ಇರುವ ವ್ಯತ್ಯಾಸವೆಂದರೆ ಇವರು ಗೊರವಪ್ಪನವರನ್ನು ಕರೆಸುವುದಿಲ್ಲ. ಈ ಕಾರ್ಯವನ್ನು ಕಟ್ಟೆಮನೆ ಯಜಮಾನ ಅಥವಾ ಪೆಟ್ಟಿಗೆ ದೇವರ ಪೂಜಾರಿ ಮಾಡುತ್ತಾನೆ.

ದೈವಾರಾಧನೆ : ಮ್ಯಾಸಬೇಡರು ಮೂಲತಃ ಅಲೆಮಾರಿಗಳು. ಹೀಗಾಗಿ ಇವರು ಪೆಟ್ಟಿಗೆ ದೈವಗಳನ್ನು ಆಋುಆಧಿಸುವುದೇ ಹೆಚ್ಚು. ಇವರ ಪ್ರಮುಖ ದೈವಗಳ ಸಂಖ್ಯೆ ಹನ್ನೆರಡು. ಅವುಗಳು ಬೋರೆದೇವರು, ಕಂಪಳ ರಂಗನಾಥ ದೇವರು, ಗಾದ್ರಿಪಾಲನಾಯಕ, ತಿಪ್ಪೇಸ್ವಾಮಿ, ಓಬಳದೇವರು, ಭೋಸೇದೇವರು, ಬೋರವದೇವರು, ಬೊಮ್ಮದೇವರು, ಸೂರನಾಯಕ ದೇವರು ಮುಂತಾದವುಗಳನ್ನು ಪೂಜಿಸುತ್ತಾರೆ. ಪ್ರಾಯಶಃ ಇವು ಅವರ ಸಾಂಸ್ಕೃತಿಕ ನಾಯಕರಾಗಿದ್ದು ತರುವಾಯ ಇವರ ದೈವಗಳಾಗಿ ಮಾರ್ಪಾಡು ಹೊಂದಿರುವಂತೆ ಕಂಡುಬರುತ್ತದೆ. ಈ ದೈವಗಳಲ್ಲದೆ ಇತರ ಮಾತೃದೇವತೆಗಳಾದ ಸುಂಕ್ಲಮ್ಮ, ಮಾರೆಮ್ಮ, ಕೆಂಚಮ್ಮ, ಮಾಸದಮ್ಮ, ಮಾಸ್ತಮ್ಮ ಮುಂತಾದ ದೈವಗಳನ್ನೂ ಆರಾಧಿಸುತ್ತಾರೆ. ವಿಶೇಷವಾಗಿ ಸುಗ್ಗಿ ಕಾಲದಲ್ಲಿ ಕಂಪಳದೇವರಹಟ್ಟಿ ಮತ್ತು ಮಿಂಚೇರಿ ಭಾಗಗಳಲ್ಲಿ ಇಂದಿಗೂ ಮ್ಯಾಸಬೇಡರ ದೈವಗಳ ದೊಡ್ಡ ಜಾತ್ರೆ ನಡೆಯುವುದನ್ನು ಕಾಣಬಹುದು.

೩.೩. ಮೊಂಡರು

ಮೊಂಡರು ಇಂದಿಗೂ ಅಲೆಮಾರಿಗಳಾಗಿ ಉಳಿದಿರುವ ಅಲ್ಪಸಂಖ್ಯಾತ ಸಮುದಾಯವಾಗಿದೆ. ತಾವು ಬೇಡ ಸಮುದಾಯಕ್ಕೆ ಸೇರಿದವರು ಎಂದು ಇವರು ಹೇಳುತ್ತಾರೆ. ಮ್ಯಾಸಬೇಡರು ತಾವು ಅಣ್ಣ ತಮ್ಮಂದಿರೆಂದು ತಿಳಿಸುತ್ತಾರೆ. ಆದರೆ ಬೇಡ ಸಮುದಾಯಗಳು ಮೊಂಡರನ್ನು ತಮ್ಮ ಸಮುದಾಯದ ಒಳಪಂಗಡವೆಂದು ಒಪ್ಪುವುದಿಲ್ಲ. ಭಿಕ್ಷಾಟನೆಯನ್ನೇ ವೃತ್ತಿಯಾಗಿಸಿಕೊಂಡಿರುವ ಇವರ ಸ್ಥಿತಿ ಹೆಚ್ಚುಕಡಿಮೆ ಈ ನಾಡಿನ ದಕ್ಕಲಿಗರ ಸ್ಥಿತಿಯೇ ಆಗಿದೆ. ಕೈಯಲ್ಲಿ ಕಬ್ಬಿಣದ ಕಡಗ ಹಾಕಿಕೊಂಡು ಕತ್ತಿಯಿಂದ ಅದಕ್ಕೆ ಉಜ್ಜುತ್ತ ಶಬ್ದವನ್ನು ಬರಿಸುತ್ತಾ ರಾಗಬದ್ಧವಾಗಿ ಹಾಡುತ್ತಾ ಭಿಕ್ಷಾಟನೆಯನ್ನು ನಡೆಸುತ್ತಾರೆ. ಸಾಮಾನ್ಯವಾಗಿ ಮಹಿಳೆಯರು ಸಹ ಕಸಬರಿಗೆ ಕಟ್ಟುವುದು ಮುಂತಾದ ಚಿಕ್ಕ ಪುಟ್ಟ ಕೆಲಸಗಳಲ್ಲಿ ತೊಡಗುವರಾದರೂ ಮುಖ್ಯವಾಗಿ ಭಿಕ್ಷಾಟನೆಯನ್ನೇ ಅವಲಂಬಿಸಿದ್ದಾರೆ. ಇವರ ಬೆಡಗುಗಳು ಮ್ಯಾಸಬೇಡರ ಬೆಡಗುಗಳನ್ನು ಹೊಂದುತ್ತವೆಂದು ಮೊಂಡರು ತಿಳಿಸುತ್ತಾರೆ. ಭಿಕ್ಷೆ ಕೊಡದಿದ್ದ ಪಕ್ಷದಲ್ಲಿ ಕತ್ತಿಯಿಂದ ಕೈ ಕೊಯ್ದುಕೊಳ್ಳುವುದು, ತಲೆಗೆ ಹೊಡೆದುಕೊಳ್ಳುವುದು, ವಾಂತಿ ಮಾಡುವುದು ಮುಂತಾಗಿ ಅಸಹ್ಯ ಬರುವಂತೆ ನಡೆದುಕೊಳ್ಳುತ್ತಾರೆ. ಹೀಗಾಗಿ ಇವರಿಗೆ ಊರವರು ಬೇಗನೆ ಭಿಕ್ಷೆ ನೀಡಿ ಸಾಗಹಾಕುವುದುಂಟು. ಊರ ಹೊರಗೆ ಕೌದಿ, ಹಳೇಬಟ್ಟೆ, ಪ್ಲಾಸ್ಟಿಕ್ ಹಾಳೆ ಬಳಸಿ ಗುಡಿಸಲು ಹಾಕಿಕೊಳ್ಳುವ ಇವರು ಊರಿಂದೂರಿಗೆ ಸಂಚರಿಸುತ್ತ ಭಿಕ್ಷಾಟನೆ ಮಾಡುತ್ತಾರೆ. ಮ್ಯಾಸಬೇಡರಂತೆ ತೆಲುಗು ಮೂಲದ ಭಾಷೆಯನ್ನು ಮನೆ ಮಾತಾಗಿಸಿಕೊಂಡಿದ್ದಾರೆ. ಮೂಲತಃ ತಾವು ಆಂಧ್ರದ ಕಡೆಯಿಂದ ವಲಸೆ ಬಂದವರೆಂದು ತಿಳಿಸುತ್ತಾರೆ.

ಮದುವೆ : ಮೊಂಡರಲ್ಲಿ ಊರಬೇಡರು ಹಾಗೂ ಮ್ಯಾಸಬೇಡರಲ್ಲಿರುವ ಯಾವ ಆಚರಣೆಗಳೂ ಜಾರಿಯಲ್ಲಿಲ್ಲ. ಸಾಮಾನ್ಯವಾಗಿ ಹುಡುಗಿ ತೊಟ್ಟಿಲಲ್ಲಿದ್ದಾಗಲೇ ಮದುವೆ ಮಾಡುವ ಸಂದರ್ಭಗಳೇ ಹೆಚ್ಚು. ಇತ್ತೀಚೆಗೆ ತೊಟ್ಟಿಲ ಮದುವೆ ಇವರಲ್ಲಿ ಕಡಿಮೆಯಾದರೂ ಬಾಲ್ಯ ವಿವಾಹಗಳು ಇನ್ನೂ

ನಿಂತಿಲ್ಲ. ಹುಡುಗಿ ಮೈನೆರೆಯುವುದಕ್ಕೆ ಬಂದಿದ್ದಾಳೆ ಅಥವಾ ಮೈನೆರೆತ ಸ್ವಲ್ಪ ದಿನಗಳಲ್ಲಿ ಹೆಣ್ಣನ್ನು ಮದುವೆ ಮಾಡಿಕೊಡುತ್ತಾರೆ. ಮದುವೆಗಾಗಿ ಅಂತಹ ಖರ್ಚುವೆಚ್ಚಗಳೇನೂ ಇರುವುದಿಲ್ಲ. ಹೆಣ್ಣಿನ ಮನೆಗೆ ಗಂಡಿನವರು ಮೊದಲು ಬರುತ್ತಾರೆ. ಹುಡುಗಿಯ ತಂದೆ ತಾಯಿಯರಿಗೆ ಹೆಂಡ ಕುಡಿಸಿ ಮಾತುಕತೆ ನಡೆಸಿ ಹುಡುಗಿಯನ್ನು ಗೊತ್ತುಮಾಡಿಕೊಳ್ಳುತ್ತಾರೆ. ತರುವಾಯ ತಮಗೆ ಅನುಕೂಲವಾದ ಕಡೆ ತುಂಬಾ ಸಂಕ್ಷಿಪ್ತವಾಗಿ ಮದುವೆ ನಡೆಸಲಾಗುತ್ತದೆ. ಮೈನೆರೆದ ಹುಡುಗಿಯಾಗಿದ್ದರೆ ತಕ್ಷಣಕ್ಕೆ ಗಂಡಿನೊಂದಿಗೆ ಹೊರಟುಹೋಗುತ್ತಾಳೆ. ಮದುವೆಯಾಗಿ ಹುಡುಗಿ ಗಂಡನ ಮನೆಗೆ ಬಂದರೆ ಅವನ ಕುಟುಂಬ ಪ್ರತ್ಯೇಕವಾಗುತ್ತದೆ. ಹುಡುಗಿಯ ಸಂಪೂರ್ಣ ಜವಾಬ್ದಾರಿ ಆಕೆಯ ಗಂಡನಿಗೆ ಸೇರುತ್ತದೆ. ಊರುನಾಯಕರು, ಮ್ಯಾಸನಾಯಕರು, ಮೊಂಡರಲ್ಲಿ ವಿಧವಾ ವಿವಾಹ ಪದ್ಧತಿಯಿದೆ. ಇದನ್ನು ಸೀರುಡಿಕೆ ಎಂದು ಕರೆಯುತ್ತಾರೆ. ಈ ರೀತಿಯ ಮದುವೆ ವಿಜೃಂಭಣೆಯಿಂದ ನಡೆಯುವುದಿಲ್ಲ, ಕೇವಲ ಗಂಡು ಹೆಣ್ಣು ಕುಲಸ್ಥರ ಒಪ್ಪಿಗೆ ಪಡೆದು ಮದುವೆಯಾಗುತ್ತಾರೆ. ಈ ರೀತಿಯ ಸೀರುಡಿಕೆಯವರಿಗೆ ಮಕ್ಕಳಾದರೆ ಅವರನ್ನು ಇತರರು ಮದುವೆಯಾಗಲು ಹಿಂಜರಿಯುತ್ತಾರೆ. ಸಾಮಾನ್ಯವಾಗಿ ಸೀರುಡಿಕೆ ಮನೆತನಗಳಲ್ಲಿಯೇ ಮದುವೆ ಸಂಬಂಧಗಳನ್ನು ಕಂಡುಕೊಳ್ಳುತ್ತಾರೆ.

ಜನನ : ಹುಡುಗಿ ಊರೂರಿಗೆ ಗಂಡನೊಂದಿಗೆ ಭಿಕ್ಷಾಟನೆ ಮಾಡುತ್ತಾ ಹೋಗುತ್ತಾಳೆ. ವರ್ಷಕ್ಕೊಮ್ಮೆಯೋ ಎರಡು ವರ್ಷಕ್ಕೊಮ್ಮೆಯೋ ಅತ್ತೆ ಮಾವ, ತಂದೆ ತಾಯಿಯನ್ನು ನೋಡುವ ಸೌಭಾಗ್ಯವು ಅವಳಿಗೆ ದೊರೆಯಬಹುದು, ಹೀಗಾಗಿ ಬಸಿರು ಬಾಣಂತನದ ಪೂರ್ತಿ ಜವಾಬ್ದಾರಿ ಗಂಡ ಹೆಂಡತಿಗೆ ಮಾತ್ರ ಸಂಬಂಧಿಸಿದ್ದು. ಆಕೆ ಯಾವ ಊರಿನಲ್ಲಿರುತ್ತಾಳೋ ಅಲ್ಲಿಯೇ ಅವಳ ಹೆರಿಗೆಯಾಗುತ್ತದೆ. ಗಂಡ ಹೆಂಡತಿ ಮಾತನಾಡಿಕೊಂಡು ತಮ್ಮ ಮಗುವಿಗೆ ಒಂದು ಹೆಸರಿಟ್ಟುಕೊಳ್ಳುತ್ತಾರೆ. ಇವರಲ್ಲಿ ತೊಟ್ಟಿಲುಶಾಸ್ತ್ರ ಇತ್ಯಾದಿಗಳು ಕಂಡುಬರುವುದಿಲ್ಲ.

ಋತುಮತಿ ಆಚರಣೆ : ಈ ಸಮುದಾಯದಲ್ಲಿ ಹುಡುಗಿ ಋತುಮತಿಯಾದರೆ ಅಂತಹ ಕಟ್ಟು ನಿಟ್ಟಿನ ಆಚರಣೆಗಳಿಲ್ಲ. ಹುಡುಗಿ ಮೈನೆರೆದಿದ್ದಾಳೆಂದು ತಿಳಿದ ತಕ್ಷಣ ಅವಳಿಗಾಗಿ ತಮ್ಮ ಗುಡಾರದ ಪಕ್ಕದಲ್ಲಿಯೇ ಚಿಕ್ಕ ಗುಡಾರವನ್ನು ಹಾಕಿಕೊಡುತ್ತಾರೆ. ಹುಡುಗಿಯ ತಾಯಿ ಅತ್ತೆ ಯಾರಾದರೂ ಒಬ್ಬರು ಹುಡುಗಿಗೆ ಮೈತೊಳೆಯುತ್ತಾರೆ. ಹುಡುಗಿಗೆ ಐದು ದಿನದವರೆಗೂ ಬಿಸಿ ಅನ್ನ ಕಾಡಿನ ಚಿಕ್ಕ ಪ್ರಾಣಿಗಳಾದ ಅಳಿಲು ಅಥವಾ ಕಾಡುಹಕ್ಕಿಗಳ ಪದಾರ್ಥವನ್ನು ಮಾಡಿ ಕೊಡುತ್ತಾರೆ. ಕೆಲವೊಮ್ಮೆ ಅಕ್ಕಿ, ಗೋಧಿ ಗಂಜಿಯನ್ನು ಮಾಡಿಕೊಡುತ್ತಾರೆ. ಐದು ದಿನಕ್ಕೆ ಹುಡುಗಿಗೆ ಮೈತೊಳೆದು ತಂಗಡಿ ಗಿಡ ಮುಟ್ಟಿಸುವ ಶಾಸ್ತ್ರ ಮಾಡಲಾಗುತ್ತದೆ. ಅದರಾಚೆಗೆ ಅವಳ ಗುಡಾರವನ್ನು ಕಿತ್ತು ಹಾಕಲಾಗುತ್ತದೆ. ಐದನೇ ದಿನದ ತರುವಾಯ ಆ ಊರನ್ನು ಬಿಟ್ಟು ಬೇರೆ ಊರಿಗೆ ಹೊರಡುತ್ತಾರೆ. ತರುವಾಯ ಭಿಕ್ಷಾಟನೆಯಿಂದ ಬಂದ ಆಹಾರವನ್ನೇ ಅವಳು ತೆಗೆದುಕೊಳ್ಳುತ್ತಾಳೆ.

ಸಾವು: ಸಾವಿಗೆ ಸಂಬಂಧಿಸಿದ ಆಚರಣೆಯೂ ತುಂಬಾ ಸರಳವಾಗಿದೆ. ಇವರಲ್ಲಿ ಸಾವು ಸಂಭವಿಸಿದರೆ ಸಾಮಾನ್ಯವಾಗಿ ಒಂದು ಗಳ ತೆಗೆದುಕೊಳ್ಳಲಾಗುತ್ತದೆ. ಆ ಗಳಕ್ಕೆ ಹೆಣದ ಕೈ ಹಾಗೂ ಕಾಲುಗಳನ್ನು ಹೊಂದಿಸಿ ಕಟ್ಟಲಾಗುತ್ತದೆ. ತರುವಾಯ ಹೆಣದ ಮೇಲೆ ಕೌದಿಯನ್ನು ಹಾಕಿ ಅದನ್ನೂ ಗಳುವಿಗೆ ಕಟ್ಟಿ ಇಬ್ಬರೇ ಹೆಣವನ್ನು ಒಯ್ಯುವ ಪದ್ಧತಿ ಇವರಲ್ಲಿತ್ತು. ಇತ್ತೀಚೆಗೆ ಈ ಪದ್ಧತಿ ಇವರಿಂದ ದೂರವಾಗಿದೆ. ಕಳ್ಳಿ ಕಟ್ಟಿಗೆ ಅಥವಾ ಬಿದಿರಿನಿಂದ ಚಟ್ಟ ಮಾಡಿ ನಾಲ್ಕು ಜನ ಹೆಣವನ್ನು ಒಯ್ಯುತ್ತಾರೆ. ಹೆಣಕ್ಕೆ ಕುಣಿಯನ್ನು ತಾವೇ ತೋಡುತ್ತಾರೆ. ಹೆಣ ಮಣ್ಣು ಮಾಡಿ ಬಂದ ತರುವಾಯ ಹೆಂಡ ಅಥವಾ ಸಾರಾಯಿ ಕುಡಿಸಿ ಇಸಬಾಯಿ ತೊಳೆಸುತ್ತಾರೆ. ತರುವಾಯ ಮೂರುದಿನಕ್ಕೆ ಕೋಳಿಯನ್ನು ಕೊಯ್ದು ದಿವಸ ಮಾಡುತ್ತಾರೆ. ಇಷ್ಟು ಮಾಡಿದ ತರುವಾಯ ಆ ಊರಿನಲ್ಲಿ ನಿಲ್ಲದೆ ಬೇರೆ ಊರಿಗೆ ತೆರಳುತ್ತಾರೆ.

ದೈವಾಚರಣೆಗಳು: ಮಾತೃದೇವತಾರಾಧಕರಾದ ಮೊಂಡರು ಸುಂಕ್ಲಮ್ಮ, ಗಾಳೆಮ್ಮ, ಉಡಚಲಮ್ಮ, ಹುಲಿಗೆಮ್ಮ, ಮಾಸ್ತೆಮ್ಮ ಮುಂತಾದ ದೈವಗಳನ್ನು ಆರಾಧಿಸುತ್ತಾರೆ. ಸರ್ವ ಸಚೇತನವಾದಿಗಳಾದ ಇವರು ತಂಗಡಿ ಗಿಡ, ಬೇವಿನ ಮರ ಮುಂತಾದವುಗಳನ್ನು ದೇವತೆಗಳ ಹೆಸರಿನಲ್ಲಿ ಪೂಜಿಸುವುದನ್ನು ಕಾಣಬಹುದಾಗಿದೆ. ಇನ್ನುಳಿದಂತೆ ಹಿಂದೂಗಳ ಹಬ್ಬಗಳನ್ನೆಲ್ಲಾ ಇವರು ಮಾಡುತ್ತಾರೆ.

೩.೪. ಒಳಾಡಳಿತ ವ್ಯವಸ್ಥೆ

ಊರಬೇಡರು ಕಟ್ಟೆಮನೆಗಳನ್ನು ಹೊಂದಿದ್ದರು. ಆದರೆ ಇತ್ತೀಚೆಗೆ ಇವರಲ್ಲಿ ಕಟ್ಟೆಮನೆ ಪದ್ಧತಿ ಇಲ್ಲವಾಗುತ್ತಿದೆ. ಮದುವೆ ಹಾಗೂ ಇತರ ಕಾರ್ಯಗಳನ್ನು ನಡೆಸಲು ಕಟ್ಟೆಮನೆ ಯಜಮಾನ ನಿರುತ್ತಿದ್ದನು. ಕಟ್ಟೆಮನೆ ಯಜಮಾನನೊಂದಿಗೆ ಈ ಸಮುದಾಯದಲ್ಲಿ ತಳವಾರ ಮತ್ತು ಇತರ ನಾಲ್ಕು ಜನ ಪ್ರಮುಖರಿರುತ್ತಿದ್ದರು. ಈ ಐದು ಜನರನ್ನು ಸೇರಿಸಿ ಕಟ್ಟೆಮನೆಯನ್ನು ರಚಿಸಲಾಗುತ್ತಿತ್ತು. ಸಮುದಾಯದೊಳಗೆ ನಡೆಯುವ ಜಾತಿ ಪಂಚಾಯಿತಿ, ಜಾತಿಯಿಂದ ಹೊರಹಾಕುವುದು, ಜಾತಿಗೆ ಮರುಸೇರ್ಪಡೆ ಮಾಡಿಕೊಳ್ಳುವುದು, ಸಾವು ಇತ್ಯಾದಿ ಸಂಭವಿಸಿದಾಗ ಅವುಗಳ ಮೇಲ್ವಿಚಾರಣೆ ನಡೆಸುವುದು, ಹುಡುಗ ಹಾಗೂ ಹುಡುಗಿ ಅನ್ಯ ಜಾತಿಯವರೊಂದಿಗೆ ಅನೈತಿಕ ಸಂಬಂಧಗಳನ್ನಿರಿಸಿ ಕೊಂಡರೆ ಅವರನ್ನು ಜಾತಿಯಿಂದ ಹೊರಹಾಕುವುದು, ಚಪ್ಪಲಿಯಿಂದ ಹೊಡೆಸಿಕೊಳ್ಳುವುದು, ಸಮುದಾಯದ ಶುಭ ಸಮಾರಂಭಗಳಿಗೆ ಹಾಜರಾಗದೇ ಇರುವುದು, ಸಮುದಾಯದ ಕೆಲಸಕಾರ್ಯ ಗಳನ್ನು ವಿರೋಧಿಸುವುದು ಮುಂತಾದ ವಿಧಿನಿಷೇಧಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಕಟ್ಟೆಮನೆ ಯಜಮಾನನಿಗೆ ಸೇರಿರುತ್ತದೆ.

ಜನಬಾಹುಳ್ಯವಿರುವ ಊರಬೇಡರು ಈ ಪದ್ಧತಿಗಳಿಂದ ದೂರ ಸರಿಯುತ್ತಿದ್ದಾರೆ. ಇಂದು ಎಷ್ಟೋ ಊರಬೇಡರಲ್ಲಿ ಯುವಕರು ಇತರ ಸಮುದಾಯದ ಹೆಣ್ಣುಗಳನ್ನು ವಿವಾಹವಾಗಿರು

ವುದನ್ನು ಕಾಣಬಹುದು. ಆದರೆ ಮ್ಯಾಸಬೇಡರಲ್ಲಿ ಹಾಗೂ ಮೊಂಡರಲ್ಲಿ ಇನ್ನೂ ಗಟ್ಟಿಯಾಗಿ ಕಟ್ಟೆಮನೆ ಪದ್ಧತಿ ಉಳಿದುಕೊಂಡಿದೆ.

'ಸಾಮಾನ್ಯವಾಗಿ ಊರಹೊರಗೆ ಹಟ್ಟಿ ಕಟ್ಟಿಕೊಂಡಿರುವ ಬುಡಕಟ್ಟುಗಳು ತಮ್ಮ ಜೀವನಕ್ರಮ ಸಡಿಲದಂತೆ ಈ ರೀತಿಯ ಕಟ್ಟುಪಾಡುಗಳನ್ನು ಹೇರಿಕೊಂಡಿರುತ್ತವೆ'[10] ಇದಕ್ಕೆ ಮ್ಯಾಸಬೇಡರು ಹೊರತಲ್ಲ. ಇಡೀ ಹಟ್ಟಿ ಒಂದು ಕುಟುಂಬದಂತೆ ವರ್ತಿಸುತ್ತದೆ. ಹೆಣ್ಣು ಹೊರಕುಲದವನನ್ನು ಮದುವೆಯಾದರೆ ಅವಳನ್ನು ಜಾತಿಯ ಒಳಗೆ ಸೇರಿಸಿಕೊಳ್ಳುವುದಿಲ್ಲ. ಕುಲಕ್ಕೆ ಹೆಣ್ಣು ಹೊರಗೆ ಎಂದೇ ಭಾವಿಸುತ್ತಾರೆ. ಗಂಡಸರಾದರೆ ವಿಜಾತಿ ಹೆಣ್ಣನ್ನು ಮದುವೆಯಾಗಿ ಕುಲದೊಳಗೆ ಬರಲು ಅಪೇಕ್ಷಿಸಿದರೆ ಅಂಥವರು ತಾವು ಮದುವೆಯಾದ ಹೆಣ್ಣನ್ನು ಬಿಟ್ಟು ಬರಬೇಕು. ಊರನಾಯಕರು ಈ ವಿಚಾರದಲ್ಲಿ ಇತ್ತೀಚೆಗೆ ಸ್ವಲ್ಪ ಉದಾರಿಗಳಾದಂತೆ ಕಂಡುಬರುವರಾದರೂ ಮ್ಯಾಸಬೇಡರಲ್ಲಿ ಹಾಗೂ ಮೊಂಡರಲ್ಲಿ ಇನ್ನೂ ಈ ಪದ್ಧತಿಗಳೆಲ್ಲಾ ಗಟ್ಟಿಯಾಗಿ ಉಳಿದುಕೊಂಡಿವೆ. ಮ್ಯಾಸಬೇಡರಲ್ಲಿ ಯಾರಾದರೂ ಕೋಳಿ, ಮೊಟ್ಟೆ ತಿಂದುಬಂದರೂ ಅವರನ್ನು ಜಾತಿಯಿಂದ ಬಹಿಷ್ಕರಿಸುತ್ತಿದ್ದರು. ಆದರೆ ಇತ್ತೀಚೆಗೆ ಪುರುಷರು ಯಾರಿಗೂ ತಿಳಿಯದಂತೆ ನಗರ ಪ್ರದೇಶದ ಹೋಟೆಲುಗಳಲ್ಲಿ ಕೋಳಿ, ಮೊಟ್ಟೆ ತಿಂದುಬರುವುದುಂಟು. ಆದರೆ ಹಟ್ಟಿಯಲ್ಲಿ ಬದುಕುವ ಮ್ಯಾಸಬೇಡರ ಕುಟುಂಬಗಳು ತಮ್ಮ ದೈವ ಮುನಿಸುಗೊಂಡೀತೆಂದು ಹೆದರುತ್ತಾರೆ. ಸಾಮಾನ್ಯವಾಗಿ ಕೋಳಿ, ಮೊಟ್ಟೆ ತಿಂದು ಹೆಂಡ ಕುಡಿದು ಹಟ್ಟಿಯನ್ನು ಪ್ರವೇಶಿಸುವುದಿಲ್ಲ. ಅಕಸ್ಮಾತ್ ಪ್ರವೇಶಿಸಿದರೂ ಸ್ನಾನ ಮಾಡಿ ಹಟ್ಟಿ ಪ್ರವೇಶಿಸುತ್ತಾರೆ. 'ಪ್ರಪಂಚದ ಎಲ್ಲ ಬುಡಕಟ್ಟುಗಳಿಗೂ ಆಹಾರಕ್ಕೆ ಸಂಬಂಧಿಸಿದ ಇಂತಹ ವಿಧಿನಿಷೇಧಗಳು ಕಾಣಬಹುದು. ಕರ್ನಾಟಕದ ಬುಡಕಟ್ಟುಗಳಲ್ಲಿಯೇ ನೋಡುವುದಾದರೆ ಅಟ್ಟಿ ಕುಣಬಿಯರು ಮೊಲವನ್ನು ಕೊಲ್ಲುವುದಿಲ್ಲ, ಕುಂಬ್ರಿಗಳು ಹುಲಿ ಕೊಲ್ಲುವುದಿಲ್ಲ, ನಾಮಧಾರಿಗಳು ಪಡಚಿ ಹುಳುವನ್ನು ಪವಿತ್ರವೆಂದು ಭಾವಿಸಿ ಕೊಲ್ಲುವುದಿಲ್ಲ. ಲಂಬಾಣಿಗರು ಕೋಳಿಯನ್ನು ಪವಿತ್ರವೆಂದು ಭಾವಿಸುವರು, ಹರಿಕಂತ್ರ ಬೆಸ್ತರು ಮಡ್ಲೆ ಮೀನನ್ನು ಪವಿತ್ರವೆಂದು ಭಾವಿಸಿ ಹಿಡಿಯುವುದಿಲ್ಲ. ಈ ರೀತಿಯ ಆಹಾರದಲ್ಲಿ ನಿಷೇಧಗಳನ್ನು ಹೇರಿಕೊಂಡಿರುವುದನ್ನು ಕಾಣಬಹುದು'[11] ಈ ರೀತಿ ಆಹಾರ ಪದ್ಧತಿಯನ್ನು ಮೀರಿ ನಡೆದವರಿಗೆ ಬಹಿಷ್ಕರಿಸುವ ಹಕ್ಕು ಕಟ್ಟೆಮನೆ ಯಜಮಾನನಿಗಿರುತ್ತದೆ. ಈ ಮೂರೂ ಪಂಗಡಗಳಲ್ಲಿ ಅವಾಚ್ಯ ಶಬ್ದದಿಂದ ಬೈಸಿಕೊಳ್ಳುವುದು ಹಾಗೂ ಚಪ್ಪಲಿಯಿಂದ ಹೊಡೆಸಿಕೊಳ್ಳುವುದು ಜಾತಿ ಬಹಿಷ್ಕಾರಕ್ಕೆ ಕಾರಣವಾಗುತ್ತದೆ. ಅಂತಹ ವ್ಯಕ್ತಿ ಜಾತಿಗೆ ಮರಳಿ ಸೇರಲು ಕಟ್ಟೆಮನೆ ಯಜಮಾನರ ಸಮ್ಮುಖದಲ್ಲಿ ಶುದ್ಧಗೊಳ್ಳಬೇಕು. ಈ ರೀತಿಯ ಹಲವಾರು ವಿಧಿನಿಷೇಧಗಳು ಊರ ನಾಯಕರಲ್ಲಿ ಬಹುತೇಕ ಕಡಿಮೆಯಾದರೆ ಮ್ಯಾಸಬೇಡರಲ್ಲಿ ಸ್ವಲ್ಪಮಟ್ಟಿಗೆ ಉಳಿದುಕೊಂಡು ಬಂದಿವೆ. ಮೊಂಡರಲ್ಲಿ ಅವಿನ್ನೂ ಪ್ರಬಲವಾಗಿಯೇ ಇವೆ.

ಆಧಾರಗಳು

೧. ಅನಂತಕೃಷ್ಣ ಅಯ್ಯರ್ ಕೆ., *'ದ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್ಸ್'*, ಸಂ–೧, ಪು ೧೨೪, ೧೯೩೪

೨. ಅಮರೇಶ ಯಾತಗಲ್., *ವಾಲ್ಮೀಕಿ ಸಮುದಾಯ ಮತ್ತು ಚರಿತ್ರೆ*, ಪು ೨೪, ೨೦೦೮

೩. ಎಂ ಎಸ್ ಪುಟ್ಟಣ್ಣ, *ಚಿತ್ರದುರ್ಗದ ಪಾಳೆಗಾರರು*, ಪು ೩೬, ೧೯೪೩

೪. ಕಪಟರಾಳ ಕೃಷ್ಣಾರಾವ್, *ಸುರಪುರದ ಸಂಸ್ಥಾನದ ಇತಿಹಾಸ*, ಪು ೬೫, ೧೯೬೪

೫. ನಂಬಿಯಾರ್ ಎಸ್, *ದ ವಿಲೇಜ್ ಸರ್ವೆ ಆಫ್ ತಮಿಳ್ನಾಡು*, ಪು ೨೭, ೧೯೯೮

೬. ಎಡ್ಗರ್ ಥರ್ಸ್ಟನ್, *ಕಾಸ್ಟ್ ಅಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾ*, ಸಂ–೨, ಪು ೧೩೯, ೧೯೦೯

೭. ಎಚ್ ವಿ ನಂಜುಂಡಯ್ಯ, *ಎಥ್ನೋಗ್ರಫಿಕ್ ಸರ್ವೇ ಆಫ್ ಮೈಸೂರ್*, ಪು ೮೪, ೧೯೮೯

೮. ಮೇತ್ರಿ, ಕೆ ಎಂ (ಲೇ), ಬುಡಕಟ್ಟು ಅಧ್ಯಯನ ನೆಲೆಯಲ್ಲಿ ಬೇಡ ನಾಯಕರು; *ಗಟ್ಟಿ ಹೊಸಳ್ಳಿ ಗಟ್ಟಿಗ :ಸಿ ಮಲೆಸಿದ್ದಪ್ಪ ಅವರ ಸ್ಮರಣ ಸಂಪುಟ* ; ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೨, ಪು ೭-೧೩

೯. ಉಲ್ಲೇಖ: ಎಂ ಕೆ ದುರುಗಪ್ಪ, *ವಿಜಯನಗರೋತ್ತರಕಾಲೀನ ಬೇಡ ಜನಾಂಗ*, ಪು ೧೨೪, ೨೦೧೧.

೧೦. ಕುಮಾರ್, ಆರ್ ಬಿ., *ಮುದ್ದೆಕಂಬಾರರು*, ಪು ೭೩, ೨೦೦೪

೧೧. ಕೃಷ್ಣಮೂರ್ತಿ ಹನೂರು; *ಮ್ಯಾಸಬೇಡರು*; ಪು ೮೯, ೨೦೦೬.

ಅಧ್ಯಾಯ – ೪

ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು

೪.೧ ಕೌಟುಂಬಿಕ ರಚನೆ

೪.೨ ವಿವಾಹ

೪.೩ ಬೆಡಗುಗಳು

೪.೪ ವಸತಿ ವ್ಯವಸ್ಥೆ

೪.೫ ಇತರ ಆಚರಣೆಗಳು

ಅಧ್ಯಾಯ ನಾಲ್ಕು

ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು

ಭಾರತೀಯ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸ ಮತ್ತು ತನ್ನದೇ ಆದ ಪರಂಪರೆ ಇದೆ. ಈ ಭವ್ಯ ಪರಂಪರೆ ನಿರಂತರವಾಗಿ ಚಲನಶೀಲವಾಗಿರುತ್ತದೆ. ಅಲ್ಲದೆ ಮಾನವನ ಬದುಕನ್ನು ನಿಯಂತ್ರಿಸುವ ಮೌಲ್ಯವಾಗಿ ಪರಿಣಮಿಸಿದೆ. ಹಾಗೆಯೇ ಭವ್ಯ ಪರಂಪರೆಗೆ ಸಾಂಸ್ಕೃತಿಕ ತಳಹದಿಯೂ ಆಗಿದೆ. ಮಾನವನ ಚಿಂತನಾಕ್ರಮದಲ್ಲಿ ಸಂಸ್ಕೃತಿ ಅಂತರಗತವಾಗಿ ಕೆಲಸಮಾಡುತ್ತದೆ. ಆಗಸ್ಟ್ ಕಾಮ್ಟೆಯು ತನ್ನ ಮೂರು ಹಂತಗಳ ಸೂತ್ರದಲ್ಲಿ ಮಾನವನ ಸಾಮಾಜಿಕ ಚಿಂತನೆಯ ಮೂರು ಹಂತಗಳನ್ನು ತಿಳಿಸಿದ್ದಾರೆ. ಈ ಮೂರು ಹಂತಗಳು ಅನುಕ್ರಮವಾಗಿ ಸೈನಿಕ ಸಮಾಜ, ನ್ಯಾಯ ಪ್ರಧಾನ ಸಮಾಜ, ಕೈಗಾರಿಕಾ ಸಮಾಜಗಳನ್ನು ಪ್ರತಿನಿಧಿಸುತ್ತವೆ. ಹರ್ಬರ್ಟ್ ಸ್ಪೆನ್ಸರ್ ಅವರು "ಥಿಯರಿ ಆಫ್ ಸೋಷಿಯಲ್ ಇವಾಲ್ಯುವೇಷನ್" ಎನ್ನುವ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಈ ಸಿದ್ಧಾಂತದಲ್ಲಿ ಜೀವ ವಿಕಾಸದಂತೆ ಮಾನವ ಸಮಾಜದಲ್ಲಿಯೂ ಹಂತ ಹಂತವಾಗಿ ವಿಕಾಸವುಂಟಾಗುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಸಮಾಜದಲ್ಲಿ ಯಾವಾಗಲೂ ಏರಿಳಿತಗಳು ಉಂಟಾಗುತ್ತಲೇ ಇರುತ್ತವೆ. ಆ ಏರಿಳಿತಗಳಿಗೆ ತಕ್ಕಂತೆ ಸಮುದಾಯವು ತನ್ನ ನಡತೆಯಲ್ಲಿಯೂ ಬದಲಾವಣೆಯನ್ನು ತಂದುಕೊಳ್ಳಬೇಕಾಗುತ್ತದೆ.

ಸಂಸ್ಕೃತಿ ಎಂಬ ಪರಿಕಲ್ಪನೆಯನ್ನು ಬಹಳ ಸರಳ ಮತ್ತು ವಿಶಾಲ ಅರ್ಥದಲ್ಲಿ ಬಳಕೆ ಮಾಡಿ ಕೊಳ್ಳಲಾಗುತ್ತದೆ. ಸಂಸ್ಕೃತಿ ಎಂಬ ಪರಿಕಲ್ಪನೆಯಿಂದ ಜನರು ತಮ್ಮನ್ನು ಇತರರಿಗಿಂತ ಭಿನ್ನವೆಂದು

ಗುರುತಿಸಿಕೊಳ್ಳಲು ಅಥವಾ ಸ್ವತಃ ದಿನನಿತ್ಯದ ಬದುಕಿನ ಕ್ರಮವಾಗಿ ಮಾಡಿಕೊಂಡಿರ ಬಹುದು. ಸಂಸ್ಕೃತಿಯನ್ನು ಕುರಿತು ಹಲವಾರು ಚಿಂತಕರು ಅವರವರ ಜ್ಞಾನ ಶಾಖೆಯ ಹಿನ್ನೆಲೆಯಲ್ಲಿ ಬೇರೆ ಬೇರೆ ವ್ಯಾಖಾನಗಳನ್ನು ನೀಡಿದ್ದಾರೆ. ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಸಂಸ್ಕೃತಿ ಎಂದರೆ ಮಾನವನ ದಿನನಿತ್ಯದ ನಡವಳಿಕೆ ಎಂದೇ ಗುರುತಿಸಬಹುದು. ಅಂದರೆ ಮನುಷ್ಯನನ್ನು ನಿಯಂತ್ರಿಸುವ ಒಂದು ಸಾಧನ ಕ್ರಮ ಎಂದು ಹೇಳಬಹುದು. ಸಂಸ್ಕೃತಿ ಎನ್ನುವುದು ಒಂದು ಉತ್ಪಾದನೆ. ಅದು ಪ್ರಾಕೃತಿಕವಾದುದ್ದಲ್ಲ, ಅದು ಮನುಷ್ಯನು ನಿರ್ಮಿಸಿರುವುದಾಗಿದೆ. ಅಂದರೆ ಕಾಡು ಪ್ರಕೃತಿಯಾದರೆ, ವನ ಸಂಸ್ಕೃತಿ ಎಂದು ಕರೆಯುತ್ತೇವೆ. ಕೆಲವು ಸಂದರ್ಭದಲ್ಲಿ ಪ್ರಕೃತಿಯಲ್ಲಿರುವ ಹಲವಾರು ಅಂಶಗಳನ್ನು ಮಾರ್ಪಡಿಸಿಕೊಂಡು ಸಂಸ್ಕೃತಿಯನ್ನು ನಿರ್ಮಿಸಿಕೊಳ್ಳುತ್ತೇವೆ. ಉದಾಹರಣೆಗೆ ಗುಹೆಯನ್ನು ಮನೆಯನ್ನಾಗಿ ಮಾಡಿರುವುದು ಇದರ ಮೂಲಕ ನಗರವನ್ನು ನಿರ್ಮಾಣ ಮಾಡಿಕೊಂಡಿರುವುದು. ಈ ಐತಿಹಾಸಿಕತೆಯನ್ನು ಅವಲೋಕಿಸಿದಾಗ ಆದಿಮಾನವರ ಬದುಕು ಪ್ರಕೃತಿಯೊಂದಿಗೆ ಸಂಬಂಧವೂ ಮತ್ತು ಸಂಘರ್ಷವು ಇದೆ. ಏಕೆಂದರೆ ಮಾನವನ ಬದುಕಿನಲ್ಲಿ ಸಂಸ್ಕೃತಿಯೂ ತನ್ನದೇ ಆದ ಪರಿಣಾಮವನ್ನು ಬೀರುತ್ತದೆ. ಇದರಿಂದ ಮಾನವನ ಸಾಂಸ್ಕೃತಿಕ ವಿಕಾಸವನ್ನು ಈ ನಾಲ್ಕನೆಯ ಅಧ್ಯಾಯವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು ಎಂಬುದರಲ್ಲಿ ವಿಶ್ಲೇಷಿಸಲಾಗಿದೆ.

ಆದಿಮಾನವನು ಮೊದಲು ಅಲೆಮಾರಿಯಾಗಿದ್ದು ಗುಂಪು ಗುಂಪಾಗಿ ಮರದ ಪೊಟರೆಗಳಲ್ಲಿ, ಗುಹೆಗಳಲ್ಲಿ ವಾಸಿಸುತ್ತಿದ್ದ ಎಂಬುದನ್ನು ಇತಿಹಾಸದ ಮೂಲಕ ಅರಿಯುತ್ತೇವೆ. ಅಲೆಮಾರಿಯಾಗಿದ್ದ ಮಾನವನಿಗೆ ಒಂದೆಡೆ ನೆಲೆ ನಿಲ್ಲುವಂತಹ ಅನಿವಾರ್ಯತೆಯುಂಟಾಯಿತು. ಮಹಿಳೆಯರಿಗೆ ಹೆರಿಗೆಯಾದ ಸಂದರ್ಭದಲ್ಲಿ ದೈಹಿಕವಾದ ಅಸಾಹಾಯಕತೆ ಮತ್ತು ನೀರಿನ ಅವಶ್ಯಕತೆಯಿತ್ತು. ಹೀಗಾಗಿ "ಮಾನವನು ನೀರು ಮತ್ತು ಆಹಾರ ಮತ್ತು ವಾಸಿಸಲು ಅನುಕೂಲವಿರುವ ಕಡೆಗಳಲ್ಲಿ ನೆಲೆನಿಲ್ಲುವಂತಾಯಿತು. ಮಗುವಿನ ಲಾಲನೆ ಪಾಲನೆಯಲ್ಲಿದ್ದ ಮಹಿಳೆಯರು ತನ್ನ ಸಹಚರರು ತಂದ ಆಹಾರವನ್ನು ಸೇವಿಸುತ್ತಾ ಅಲ್ಲಿಯೇ ಕಾಲಕಳೆಯಬೇಕಾಗಿತ್ತು. ಈಕೆ ದೈಹಿಕವಾಗಿ ಸಬಲಳಾಗಲು ಕೆಲವು ತಿಂಗಳುಗಳೇ ಬೇಕಾಗುತ್ತಿತ್ತು. ಈ ಅವಧಿಯಲ್ಲಿ ಮಹಿಳೆಯು ಒಂದು ಬೀಜವನ್ನು ಹಾಕಿದರೆ ಅದು ಹೆಚ್ಚಿನ ಫಲವನ್ನು ನೀಡುತ್ತದೆಂಬ ಸಂಗತಿಯನ್ನು ಕಂಡುಕೊಂಡಳು. ಈ ಜ್ಞಾನವೇ ಕೃಷಿ ಬೆಳವಣಿಗೆಗೆ ಸಹಾಯಕವಾಯಿತು. ಕೃಷಿ ಅಭಿವೃದ್ಧಿ ಹೊಂದಿದಂತೆ ಕೃಷಿ ಸಂಬಂಧಿ ಚಟುವಟಿಕೆಗಳು ಮತ್ತು ಪ್ರಾಣಿ ಸಾಕಾಣಿಕೆಯು ಅನಿವಾರ್ಯವಾಯಿತು".[೧] ಕಾಡಿನ ಪ್ರಾಣಿಗಳನ್ನು ಪಳಗಿಸಿ ತನ್ನ ಅಗತ್ಯವನ್ನು ಪೂರೈಸಿಕೊಳ್ಳಲು ಮೊದಲಿಗೆ ಕುಂಬ್ರಿಬೇಸಾಯ ಚಟುವಟಿಕೆ ಗಳಲ್ಲಿ ತೊಡಗಿದ. ಇದರಿಂದ ಅರೆ ಅಲೆಮಾರಿತನ ಅನಿವಾರ್ಯವಾಯಿತು. ಪಶುಸಂಗೋಪನೆ ಮತ್ತು ಕೃಷಿ ಚಟುವಟಿಕೆಗಳು ಮಾನವನ ಸಂಘಜೀವನದ ಬದುಕಿಗೆ ಕಾರಣವಾದವು.

[illegible]

ಪ್ರಕೃತಿಯ ಮಡಿಲಲ್ಲಿ ಜೀವನ ಕಳೆಯುತ್ತಿದ್ದ ಮಾನವನು ಮುಂದುವರೆದಂತೆ ತನ್ನ ಬೌದ್ಧಿಕ ಶಕ್ತಿಗೆ ಮೀರಿದ ಅಗೋಚರ ಶಕ್ತಿಗೆ ಗೌರವಭಾವನೆಯನ್ನು ವ್ಯಕ್ತಪಡಿಸಲು ಆರಂಭಿಸಿದ ಮಳೆ, ಗಾಳಿ, ಮರ, ಗುಡುಗು, ಸಿಡಿಲು, ಕಲ್ಲು, ಪ್ರಾಣಿ ಪಕ್ಷಿಗಳನ್ನು ಗೌರವ ಭಾವನೆಯಿಂದ ಕಾಣಲು ಬಯಸಿದ. ಇವುಗಳನ್ನು ಪೂಜ್ಯಭಾವನೆಯಿಂದ ನೋಡುತ್ತಾ ನಂಬಿಕೆ ಆಚರಣೆಗಳಿಗೆ ಪ್ರೇರಕ ಶಕ್ತಿಗಳನ್ನಾಗಿ ಮಾಡಿಕೊಂಡ ನಂತರ ಕಾಲಾಂತರದಲ್ಲಿ ಮಾನವನು ವೃತ್ತಿಯನ್ನಾಧರಿಸಿ ಬೇರೆ ಬೇರೆ ಜಾತಿಯಾಗಿ ವಿಭಜನೆಗೊಂಡ ತಮ್ಮ ಮೂಲ ಸಂಸ್ಕೃತಿ, ಭಾಷೆ, ವೃತ್ತಿ, ಗುಂಪಾಗಿ ನೆಲೆಸುವ ಕ್ರಮಗಳಿಂದ ದೂರವಾಗದೆ ಇನ್ನು ತಮ್ಮ ಅನನ್ಯತೆಗಳನ್ನು ಉಳಿಸಿಕೊಂಡವುಗಳೇ ಬುಡಕಟ್ಟುಗಳು. ಈ ಬುಡಕಟ್ಟುಗಳ ಮೇಲೆ ಸಮಾಜ ಸಂಸ್ಕೃತಿ ಮತ್ತು ಇತರೆ ಜಾತಿಗಳ ಪ್ರಭಾವ ಹೆಚ್ಚಾಗಿ ಅವು ತಮ್ಮ ಮೂಲ ಜೀವನ ವಿಧಾನದಿಂದ ಪಲ್ಲಟಗೊಳ್ಳುತ್ತಾ ಸಾಗುತ್ತಿರುವುದನ್ನು ಕಾಣುತ್ತೇವೆ. ಈ ರೀತಿಯ ಪಲ್ಲಟಗಳಿಗೆ ಆಧುನೀಕರಣ, ಜಾಗತೀಕರಣ ಹಾಗೂ ಅವು ತಂದೊಡ್ಡಿದ ಸವಾಲುಗಳು ಕಾರಣವಾಗಿವೆ. ಅಲ್ಲದೇ ಮುಖ್ಯವಾಗಿ ಸಾಂಸ್ಕೃತಿಕ ಪಲ್ಲಟಕ್ಕೆ ಅನ್ಯರ ಆಕ್ರಮಣವೂ ಕಾರಣ ಎಂದು ಹೇಳಬಹುದು. ವರ್ಣ ಮತ್ತು ಧರ್ಮ ಇವುಗಳು ಗೊತ್ತಿಲ್ಲದ ಸಂಘಜೀವಿಯಾಗಿದ್ದ ಮಾನವರು ಭೌಗೋಳಿಕವಾಗಿ ತನ್ನನ್ನು ಗುರುತಿಸಿಕೊಳ್ಳಲು ಸಂಕೇತಗಳನ್ನು ಇಟ್ಟುಕೊಂಡಿದ್ದರು. ಯಾವಾಗ ಆರ್ಯರು ಎನ್ನುವ ಬಿಳಿಯ (ವರ್ಣಾಶ್ರಮಗಳ ಕಾಲ ಅಥವಾ ವೇದಗಳ ಕಾಲ) ಜನ ಈ ಆದಿಮಾನವರ ಕಾಡಿಗೆ ಕಾಲಿಟ್ಟರೊ ಆಗ ಪ್ರಪ್ರಥಮ ಬಾರಿಗೆ ನೆಲ ಅವರ ಪರವಶವಾಗಿ ವಸಾಹತುಶಾಹಿಯ ಮುಷ್ಠಿಗೆ ಸಿಲುಕಿಕೊಂಡಿತು. ಇವರು ಮಾನವರಾಗಿದ್ದವರನ್ನು ವರ್ಣಗಳಿಂದ ಛಿದ್ರಿತರನ್ನಾಗಿ ಮಾಡಿದ್ದಲ್ಲದೆ ಬಣ್ಣದ ಕಾರಣಕ್ಕಾಗಿ ಅಸ್ಪೃಶ್ಯರನ್ನಾಗಿಸಿ ಬಿಟ್ಟರು. ಕ್ರಮೇಣ ನಿಸರ್ಗದಿಂದ ಹಿಂದೆ ಸರಿದು ಆರ್ಯರು ಹೊತ್ತುತಂದ ಮನುಷ್ಯ ರೂಪದ ಅತಿಮಾನುಷ ದೇವರುಗಳು, ನಿಸರ್ಗವನ್ನೇ ನಿಯಂತ್ರಿಸಲು ಹೊರಟುಬಿಟ್ಟವು. ಸ್ಥಳೀಯ ಜನರ ಮೇಲೆ ತನ್ನ ಹಿಡಿತ ಸಾಧಿಸಿದವು. ಸ್ಥಳೀಯ ಸಂಸ್ಕೃತಿಯನ್ನು ಕೀಳು ಭಾವನೆಯಿಂದ ನೋಡುವಂತೆ ಮಾಡಿದ್ದಲ್ಲದೆ ಅವರ ಸಂಸ್ಕೃತಿಯನ್ನು ಒತ್ತಾಯಪೂರ್ವಕವಾಗಿ ಹೇರಲ್ಪಟ್ಟವು. ಇದರಿಂದ ಸಾಂಸ್ಕೃತಿಕ ರಾಜಕಾರಣವು ಅನಕ್ಷರಸ್ಥರನ್ನು ಅನಾಗರೀಕರೆಂದು ಗ್ರಹಿಸಿದ್ದಲ್ಲದೆ ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣವಾಯಿತು. ಹೊರಗಿನ ಶಕ್ತಿಯ ವಿರುದ್ಧ ಹೋರಾಟ ಮಾಡಿ ಸೋಲನ್ನು ಅನುಭವಿಸಿದ್ದು ಸ್ಥಳೀಯ ಬುಡಕಟ್ಟು ಸಮುದಾಯಗಳು ಅನಿವಾರ್ಯವಾಗಿ ಗೆದ್ದವರ ಸಂಸ್ಕೃತಿಯನ್ನು ಅನುಸರಿಸಬೇಕಾಯಿತು. ಇದನ್ನು ಗಮನಿಸಿದಾಗ ರಾಜ ಪ್ರಭುತ್ವದ ಕಾಲವಿದು ಎಂದು ಸ್ಪಷ್ಟವಾಗುತ್ತದೆ. ಅಲ್ಲಿ ಗೆದ್ದವನೇ ರಾಜ ಆತ ರೂಪಿಸಿದ್ದೆಲ್ಲವೂ ಕಾನೂನುಗಳೇ ಎನ್ನುವಂತಾಯಿತು. ಮುಖ್ಯವಾಗಿ ಆರ್ಯರು ಮುಸ್ಲಿಮರು ಯುರೋಪಿಯನ್ನರು ಫ್ರೆಂಚರು, ಡಚ್ಚರು ಮತ್ತು ಬ್ರಿಟಿಷರು ಆದರೂ ಮೊದಲ ತಲೆಮಾರಿನ ಬುದ್ಧಿವಂತ ವರ್ಗವು ಆರ್ಯರ ಆಗಮನ ಮುಸ್ಲಿಂರ ದಾಳಿ ಬ್ರೀಟಿಷರ ಪ್ರವೇಶವೆಂದು ಗ್ರಹಿಸುತ್ತದೆ. ಇದರಿಂದ ಕ್ರಮೇಣವಾಗಿ ಸಾಂಸ್ಕೃತಿಕ ಪಲ್ಲಟವು ನಿರಂತರವಾಗಿ ನಡೆಯುತ್ತಲೇ ಬಂದಿತು.

ಆರ್ಯರು ಮತ್ತು ದ್ರಾವಿಡರ ನಡುವಿನ ಹೋರಾಟದಲ್ಲಿ ಸೋಲು ಅನುಭವಿಸಿದ ಕೆಲವು ದ್ರಾವೀಡ ಸಮುದಾಯಗಳು ಕಾಡು ಸೇರಿದವು. ಇನ್ನು ಕೆಲ ಸಮುದಾಯಗಳು ಆರ್ಯರು ನೀಡಿದ ತಳಸ್ಥರ ಸ್ಥಾನಗಳನ್ನು ಸ್ವೀಕರಿಸಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡವು. ಈ ದ್ರಾವಿಡ ಜನಾಂಗಕ್ಕೆ ಸೇರಿದ ಸಮುದಾಯಗಳಲ್ಲಿ ಒಂದಾದ ಬೇಡರ ಕೌಟುಂಬಿಕ ರಚನೆಯಲ್ಲಿ ಪಲ್ಲಟವನ್ನು ಕಂಡುಕೊಳುತ್ತಾ ಬಂದಿದೆ. ಈ ನಿಟ್ಟಿನಲ್ಲಿ ನೋಡುವುದಾದರೆ ಮೂಲತಃ ಅಲೆಮಾರಿತನವನ್ನು ಮೈಗೂಡಿಸಿಕೊಂಡಿದ್ದ ಬೇಡಬುಡಕಟ್ಟು ಕರ್ನಾಟಕದ "ಮದ್ಯಕಾಲೀನ ಸಂದರ್ಭದಲ್ಲಿ ವಾಸ್ತವ್ಯ ಮಾಡಲು ಅಥವಾ ವಾಸಮಾಡಲು ಅದಕ್ಕೆ ಪೂರಕವಾದ ವೇದಿಕೆಯನ್ನು ಸೃಷ್ಟಿಸಿರುವರು. ಕುಮಾರರಾಮ ಮತ್ತು ಆತನ ತಂದೆ ಕಂಪಿಲರಾಯರು"[೧] ಇವರ ಕಾಲಾನಂತರ ಬಂದ ವಿಜಯನಗರದ ಅರಸರು ಬೇಡರನ್ನು ತಮ್ಮ ಕೆಲಸಕ್ಕಾಗಿ ಸೇವಕರನ್ನಾಗಿಸಿಕೊಳ್ಳುವುದಕ್ಕಾಗಿಯೇ ಬಳಸಿ ಕೊಂಡಿದ್ದು ಇತಿಹಾಸ. ಈ ರೀತಿ ಸೇವೆಗೆ ನಿಂತ ಬೇಡರು ಒಂದೇ ಕಡೆ ನೆಲೆ ನಿಲ್ಲಬೇಕಾದದ್ದು ಅನಿವಾರ್ಯವಾಯಿತು.

ಬೇಡರು ಗ್ರಾಮದ ತಳವಾರನಾಗಿಯೋ, ಸೈನಿಕನಾಗಿಯೋ, ಮೇಣಿ ಹೋರುವವನಾಗಿಯೋ ಪುರುಷರು ಸೇವೆ ಮಾಡಿದರೆ ಮಹಿಳೆಯರು ಸೈನಿಕರಿಗೆ ರಾಜರಿಗೆ ಕೊನೆಗೆ ದೇವರ ಸೇವೆಗಾಗಿ ದೇವದಾಸಿಗಳಾಗಿ ತಮ್ಮ ಇಡೀ ಬದುಕನ್ನು ಮೀಸಲಿಡಬೇಕಾಯಿತು. ಇಂದು ಬೇಡರಲ್ಲಿ ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಿವೆ. ಆದಿವಾಸಿ ಸಮುದಾಯವೊಂದು ಎಲ್ಲಿಯವರೆಗೆ ಪಾರಂಪಾರಿಕ ಕಸುಬುಗಳಲ್ಲಿ ತೊಡಗಿಕೊಂಡಿರುತ್ತದೆಯೋ ಅಲ್ಲಿಯವರೆಗೆ ಸಮುದಾಯದ ಸಾಮಾಜಿಕ ಸಂಬಂಧಗಳನ್ನು ಸಾಂಪ್ರದಾಯಿಕ ಕುಲಮೂಲದ ವೃತ್ತಿಗಳು ನಿಯಂತ್ರಿಸುತ್ತವೆಯೊ ಅಲ್ಲಿಯವರೆಗೆ ಕುಟುಂಬಗಳು ಅವಿಭಕ್ತವಾಗಿರುತ್ತವೆ. "ಕುಟುಂಬದ ಸದಸ್ಯರು ಹೊಸ ಉತ್ಪಾದನೆಯನ್ನು ಕಂಡುಕೊಂಡಾಕ್ಷಣ ಆ ಉತ್ಪಾದನಾ ವ್ಯವಸ್ಥೆಯೇ ಕುಟುಂಬದ ಸ್ವರೂಪವನ್ನು ಮತ್ತು ಸಾಮಾಜಿಕ ಸಂಬಂಧಗಳನ್ನು ರೂಪಿಸುತ್ತಾ ಹೋಗುತ್ತವೆ"[೨] ಎಂದು ಹೇಳಬಹುದು.

ಸಾಮಾಜಿಕ ಪಲ್ಲಟ

ಸಮಾಜ ಚಲನಶೀಲವಾದದ್ದು ಕಾಲ ಪ್ರವಾಹದ ಜೊತೆ ಅದರ ಬದಲಾವಣೆ ಸಹಜ. ಈ ಬದಲಾವಣೆಯ ಹಿನ್ನೆಲೆಯಲ್ಲಿ ಬುಡಕಟ್ಟು ಸಮಾಜ ಹಾಗೂ ಬುಡಕಟ್ಟೇತರ ಸಮಾಜಗಳೆಂದು ವಿಭಾಗಿಸಬಹುದು. ಬಡುಕಟ್ಟು ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯ ಪ್ರಕ್ರಿಯೆ ನಿಧಾನಗತಿ ಯಾಗಿರುತ್ತದೆ. ಬುಡಕಟ್ಟೇತರ ಸಮಾಜದಲ್ಲಿ ಈ ಕ್ರೀಯೆ ತ್ವರಿತವಾಗಿರುತ್ತದೆ. ಬುಡಕಟ್ಟು ಸಮುದಾಯದ ಜನರು ತಮ್ಮ ಮೂಲ ಸಂಸ್ಕೃತಿ ಆಚಾರ, ವಿಚಾರ, ನಂಬಿಕೆ, ರೂಢಿ, ಸಂಪ್ರದಾಯ ಮುಂತಾದವುಗಳನ್ನು ಮುಂದುವರೆಸಿಕೊಂಡು ಬರುವಲ್ಲಿ ತೋರಿದ ಕಾಳಜಿಯೇ ಇದಕ್ಕೆ ಕಾರಣ ವಾಗಬಹುದು. ಬೇಡರ ಆರಂಭಿಕ ಸಾಮಾಜಿಕ ಸ್ಥಿತಿಗತಿಯನ್ನು ಪ್ರಸ್ತುತ ದಿನಗಳಲ್ಲಿ ಯಥಾಸ್ಥಿತಿಯಲ್ಲಿ

ಕಾಣಲಾಗದು. ಸಾಮಾಜಿಕವಾಗಿ ಬೇಡರು ಹಲವಾರು ರೀತಿಯಲ್ಲಿ ಪಲ್ಲಟಕ್ಕೆ ಒಳಗಾಗುತ್ತಿರುವುದು ಕಂಡುಬರುತ್ತದೆ.

೪.೧. ಕೌಟುಂಬಿಕ ರಚನೆ

“ಒಂದು ಸಮುದಾಯದ ಕನಿಷ್ಠತಮ ಘಟಕವಾಗಿ ಜಾತಿ, ಸಮುದಾಯ ಅಥವಾ ಬುಡಕಟ್ಟಾದರೆ ಆ ಸಮುದಾಯದ ಚಿಕ್ಕ ಘಟಕ ಕುಟುಂಬವಾಗಿದೆ. ಕುಟುಂಬದೊಳಗಿನ ಕನಿಷ್ಠತಮ ಘಟಕ ಮಾನವನಾಗಿದ್ದಾನೆ”.[೪] ಕನಿಷ್ಠತಮವಾದ ಮಾನವನು ತನ್ನ ವಂಶದ ಮುಂದುವರಿಕೆಗಾಗಿ ಕುಟುಂಬದ ವ್ಯವಸ್ಥೆಯನ್ನು ರಚಿಸಿಕೊಂಡಿದ್ದಾನೆ. “ಕುಟುಂಬದ ಬಗ್ಗೆ ಹಲವಾರು ಸಮಾಜಶಾಸ್ತ್ರಜ್ಞರು ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಆಗ್‌ಬರ್ನ್ ಮತ್ತು ನಿಮ್‌ಕಾಫರ್ ಅವರ ಪ್ರಕಾರ ಮಕ್ಕಳೊಂದಿಗೆ ಅಥವಾ ಮಕ್ಕಳಿಲ್ಲದ, ಗಂಡ–ಹೆಂಡತಿಯರ ಸಹ ಜೀವನ ಅಥವಾ ಗಂಡ–ಹೆಂಡತಿ, ಮಕ್ಕಳೊಂದಿಗೆ ಬಹುಕಾಲ ಬಾಳುವ ಜೀವನ ಘಟಕವೇ ಕುಟುಂಬ ಎಂದು ಕರೆಯುತ್ತಾರೆ”.[೫] ಕುಟುಂಬವೊಂದರಲ್ಲಿ ತಾಯಿ, ತಂದೆ, ಗಂಡ, ಹೆಂಡತಿ, ಮಕ್ಕಳು, ಸಹೋದರರು ಮತ್ತು ಅವರಿಗೆ ಸಂಬಂಧಿಸಿದ ಇತರೆ ಜನರು ಸಹೋದರಿಯರು ಹೀಗೆ ಎಲ್ಲರನ್ನೊಳಗೊಂಡಿರುವುದು ಒಂದು ಕುಟುಂಬ ಎನ್ನುವ ಪರಿಕಲ್ಪನೆ ಹಳೆಯ ತಲೆಮಾರಿನ ಪೀಳಿಗೆಗೆ ಇತ್ತು. ಅದರ ಪರಿಕಲ್ಪನೆಗೆ ತಕ್ಕಂತೆ ಇಡೀ ಕುಟುಂಬ ಒಂದೇ ಮನೆಯಲ್ಲಿ ನೆಲೆಸುತ್ತಿತ್ತು. ಇದನ್ನೇ ಅವಿಭಕ್ತ ಕುಟುಂಬವೆಂದು ಕರೆಯಲಾಗಿದೆ. ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಗ್ರಾಮಗಳಲ್ಲಿ ನೆಲೆಸಿರುವ ಹಳೆಯ ತಲೆಮಾರಿನ ವ್ಯಕ್ತಿಗಳನ್ನು ಸಂದರ್ಶಿಸಿದಾಗ ತಮ್ಮ ಮಕ್ಕಳು ಯಜಮಾನಿಕೆ ಪಡೆಯುವವರೆಗೂ ತಾವೆಲ್ಲಾ ಅಣ್ಣ ತಮ್ಮಂದಿರು ಮತ್ತು ಅವರ ಕುಟುಂಬದ ಸದಸ್ಯರು ಒಂದೇ ಸೂರಿನಡಿ ಜೀವನ ಸಾಗಿಸುತ್ತಿದ್ದುದಾಗಿ ತಿಳಿಸಿದರು. ಆದರೆ ತಮ್ಮ ಮಕ್ಕಳ ಯಜಮಾನಿಕೆಯ ಕಾಲಕ್ಕೆ ಅಣ್ಣ ತಮ್ಮಂದಿರ ಮಕ್ಕಳು ಬೇರೆ ಬೇರೆ ಸೂರಿನಡಿ ನೆಲೆಸುವಂತಾಯಿತೆಂದು ಹೇಳಿಕೊಂಡ ವಕ್ತೃಗಳೂ ಕಂಡುಬಂದರು. ಜಗಳೂರು ತಾಲೂಕು ಮತ್ತು ಹರಪನಹಳ್ಳಿ ತಾಲೂಕಿನಲ್ಲಿ ಇಂದಿಗೂ ಒಂದೇ ಸೂರಿನಡಿ ಅವಿಭಕ್ತವಾಗಿ ನೆಲೆಸಿರುವ ಎರಡು ಕುಟುಂಬಗಳು ಕಂಡುಬಂದವು. ಆದರೆ ಇತರೆ ಯಾವ ಗ್ರಾಮಗಳಲ್ಲಿಯೂ ಆ ರೀತಿಯ ಅವಿಭಕ್ತ ಕುಟುಂಬಗಳು ಕಂಡುಬಂದಿಲ್ಲವಾದರೂ ತಮ್ಮ ತಂದೆ, ತಾಯಿ, ಸೋದರ, ಸಹೋದರಿಯರ ಜೊತೆಗೆ ಮಾತ್ರ ನೆಲೆಸಿದ ಕುಟುಂಬಗಳು ಕಂಡುಬಂದವು. ಇವುಗಳನ್ನು ಸಹ ಅವಿಭಕ್ತ ಕುಟುಂಬಗಳೆಂದೇ ಪರಿಗಣಿಸಬಹುದು. ಆದರೆ ಕೇವಲ ತಾನು ತನ್ನ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ನೆಲೆಸಿದ ವಿಭಕ್ತ ಕುಟುಂಬಗಳೇ ಹೆಚ್ಚಾಗಿ ಕ್ಷೇತ್ರಕಾರ್ಯದಲ್ಲಿ ಕಂಡುಬಂದವು. ಇವುಗಳನ್ನು ಮೂರು ತಲೆಮಾರಿನ ಪೀಳಿಗೆಗಳ ಜೀವನ ಪದ್ಧತಿಯೊಂದಿಗೆ ಹೋಲಿಕೆ ಮಾಡಬಹುದು. ಮೊದಲ ತಲೆಮಾರಿನಲ್ಲಿ ಅವಿಭಕ್ತ ಕುಟುಂಬದಲ್ಲಿ ಪೂರ್ವಿಕರ ಕಾಲದಿಂದಲೂ ತಂದೆ, ತಂದೆಯ ಸಹೋದರರು, ಆತನ ರಕ್ತ ಸಂಬಂಧಿಕರೆಲ್ಲರೂ ಒಂದೇ ಸೂರಿನಡಿ ನೆಲೆಸಿರುವುದು ಕಂಡುಬರುತ್ತದೆ. ನಂತರ ಎರಡನೇ


ತಲೆಮಾರಿಗಾಗಲೇ ಅವಿಭಕ್ತ ಕುಟುಂಬದಲ್ಲಿ ತಂದೆ ತಂದೆಯ ಸಹೋದರು ಬೇರೆಯಾಗಿ ಪ್ರತ್ಯೇಕವಾಗಿ ಅವರ ಮಕ್ಕಳು, ಮೊಮ್ಮಕ್ಕಳನ್ನು ಒಳಗೊಂಡ ಕುಟುಂಬವಾಗಿ ಪಲ್ಲಟವಾಯಿತು. ನಂತರ ಮೂರನೇ ತಲೆಮಾರಿಗೆ ಒಂದು ಮತ್ತು ಎರಡನೇ ತಲೆಮಾರಿನಲ್ಲಿದ್ದಂತಹ ಕುಟುಂಬ ವಿಭಕ್ತ ಕುಟುಂಬವಾಗಿ ಗಂಡ ಹೆಂಡತಿ, ಮಕ್ಕಳು ಹೀಗೆ ಒಟ್ಟುಗೂಡಿರುವ ಕುಟುಂಬಗಳು ಹೆಚ್ಚಾಗಿವೆ.

ದಾವಣಗೆರೆ ಜಿಲ್ಲೆಯ ತಾಲೂಕುವಾರು ಬೇಡರ ಕುಟುಂಬಗಳನ್ನು ಅವಲೋಕಿಸಿದಾಗ ಕಂಡುಬಂದ ಅವಿಭಕ್ತ ಹಾಗೂ ವಿಭಕ್ತ ಕುಟುಂಬಗಳ ಅಂಶಗಳು ಈ ಕೆಳಗಿನಂತಿವೆ. ಅವಿಭಕ್ತ ಕುಟುಂಬಗಳಲ್ಲಿ ಸಾಮಾನ್ಯವಾಗಿ ೧೫ರ ಮೇಲ್ಪಟ್ಟ ಸದಸ್ಯರನ್ನೊಳಗೊಂಡಿರುವ ಕುಟುಂಬ ವರ್ಗವನ್ನು ಕಾಣಬಹುದಾಗಿದೆ. ವಿಭಕ್ತ ಕುಟುಂಬಗಳಲ್ಲಿ ೧೦ರ ಒಳಗಿನ ಸದಸ್ಯರನ್ನೊಳಗೊಂಡ ಕುಟುಂಬ ವರ್ಗವನ್ನು ಕಾಣಬಹುದಾಗಿದೆ.

ಕೋಷ್ಟಕ ೪.೧ ಬೇಡರ ತಲೆಮಾರುಗಳವಾರು ಕೌಟುಂಬಿಕ ಸ್ವರೂಪ

ಕ್ರಸಂ.	ತಾಲೂಕುಗಳು	ಮೊದಲ ತಲೆಮಾರು			ಎರಡನೇ ತಲೆಮಾರು			ಮೂರನೇ ತಲೆಮಾರು		
		ಕುಟುಂಬಗಳು	ವಿಭಕ್ತ	ಅವಿಭಕ್ತ	ಕುಟುಂಬಗಳು	ವಿಭಕ್ತ	ಅವಿಭಕ್ತ	ಕುಟುಂಬಗಳು	ವಿಭಕ್ತ	ಅವಿಭಕ್ತ
೧	ಚನ್ನಗಿರಿ	೩೦	೨	೨೮	೩೦	೨೭	೩	೩೦	೩೦	–
೨	ದಾವಣಗೆರೆ	೩೦	೧	೨೯	೩೦	೨೮	೨	೩೦	೩೦	–
೩	ಹರಪನಹಳ್ಳಿ	೩೦	–	೩೦	೩೦	೨೯	೧	೩೦	೩೦	–
೪	ಹರಿಹರ	೩೦	೪	೨೬	೩೦	೩೦	–	೩೦	೩೦	–
೫	ಹೊನ್ನಾಳಿ	೩೦	೧	೨೯	೩೦	೩೦	–	೩೦	೩೦	–
೬	ಜಗಳೂರು	೩೦	–	೩೦	೩೦	೨೫	೫	೩೦	೩೦	–
ಒಟ್ಟು		೧೮೦	೮	೧೭೨	೧೮೦	೧೬೯	೧೧	೧೮೦	೧೮೦	–

ಲಂಬಚಿತ್ರ ೪.೧ ಬೇಡರ ತಲೆಮಾರುಗಳವಾರು ಕೌಟುಂಬಿಕ ಪ್ರಮಾಣ



ಮೊದಲನೇ ತಲೆಮಾರಿನ ಕೋಷ್ಟಕ ಮತ್ತು ಲಂಬಚಿತ್ರವನ್ನು ತಾಲೂಕುವಾರು ಗಮನಿಸಿದಾಗ ಚನ್ನಗಿರಿ ತಾಲೂಕಿನ ಕುಟುಂಬವರ್ಗ ಶೇ.೯೩.೪ರಷ್ಟು ಅವಿಭಕ್ತ ಕುಟುಂಬಗಳು, ಶೇ. ೬.೬೬ರಷ್ಟು ವಿಭಕ್ತ ಕುಟುಂಬ ವರ್ಗ ಇರುವುದು ಕಂಡುಬಂದರೆ, ದಾವಣಗೆರೆ ತಾಲೂಕಿನಲ್ಲಿ ಶೇ. ೯೦ರಷ್ಟು ಅವಿಭಕ್ತ ಕುಟುಂಬಗಳು, ಶೇ. ೧೦ರಷ್ಟು ವಿಭಕ್ತ ಕುಟುಂಬಗಳಿವೆ. ಹರಪನಹಳ್ಳಿ ತಾಲೂಕಿನಲ್ಲಿ ಶೇ. ೧೦೦ರಷ್ಟು ಅವಿಭಕ್ತ ಕುಟುಂಬಗಳಿವೆ, ಯಾವುದೇ ವಿಭಕ್ತ ಕುಟುಂಬಗಳಿಲ್ಲದಿರುವುದು ಕಂಡುಬರುತ್ತದೆ. ಹರಿಹರ ತಾಲೂಕಿನಲ್ಲಿ ಶೇ. ೮೬.೬೬ರಷ್ಟು ಅವಿಭಕ್ತ ಕುಟುಂಬಗಳು, ಶೇ. ೧೩.೩೩ರಷ್ಟು ವಿಭಕ್ತ ಕುಟುಂಬಗಳಿವೆ. ಹೊನ್ನಾಳಿ ತಾಲೂಕಿನಲ್ಲಿ ಶೇ. ೯೬.೬೬ರಷ್ಟು ಅವಿಭಕ್ತ ಕುಟುಂಬಗಳು, ಶೇ. ೩.೩೩ರಷ್ಟು ವಿಭಕ್ತ ಕುಟುಂಬಗಳಿವೆ. ಜಗಳೂರು ತಾಲೂಕಿನಲ್ಲಿ ಶೇ. ೧೦೦ರಷ್ಟು ಅವಿಭಕ್ತ ಕುಟುಂಬಗಳಿವೆ, ಯಾವುದೇ ವಿಭಕ್ತ ಕುಟುಂಬಗಳಿರುವುದಿಲ್ಲ.

ಎರಡನೇ ತಲೆಮಾರಿನ ತಾಲೂಕುವಾರು ಕುಟುಂಬ ವರ್ಗವನ್ನು ಗಮನಿಸಿದಾಗ ಚನ್ನಗಿರಿ ತಾಲೂಕಿನ ಕುಟುಂಬವರ್ಗ ಶೇ. ೧೦ರಷ್ಟು ಅವಿಭಕ್ತ ಕುಟುಂಬಗಳು, ಶೇ. ೯೦ರಷ್ಟು ವಿಭಕ್ತ ಕುಟುಂಬ ವರ್ಗ ಇರುವುದು ಕಂಡುಬರುತ್ತದೆ. ದಾವಣಗೆರೆ ತಾಲೂಕಿನಲ್ಲಿ ಶೇ. ೬.೬೬ರಷ್ಟು ಅವಿಭಕ್ತ ಕುಟುಂಬಗಳು, ಶೇ. ೯೩.೩೪ರಷ್ಟು ವಿಭಕ್ತ ಕುಟುಂಬಗಳಿವೆ. ಹರಪನಹಳ್ಳಿ ತಾಲೂಕಿನಲ್ಲಿ ಶೇ. ೩.೩೪ರಷ್ಟು ಅವಿಭಕ್ತ ಕುಟುಂಬಗಳಿವೆ, ಶೇ. ೯೬.೬೬ರಷ್ಟು ವಿಭಕ್ತ ಕುಟುಂಬಗಳಿವೆ. ಹರಿಹರ ಮತ್ತು ಹೊನ್ನಾಳಿ ತಾಲೂಕಿನಲ್ಲಿ ಶೇ. ೧೦೦ರಷ್ಟು ವಿಭಕ್ತ ಕುಟುಂಬಗಳಿವೆ. ಯಾವುದೇ ಅವಿಭಕ್ತ ಕುಟುಂಬಗಳಿಲ್ಲದಿರುವುದು ಕಂಡುಬರುತ್ತದೆ. ಜಗಳೂರು ತಾಲೂಕಿನಲ್ಲಿ ಶೇ. ೧೬.೬೬ರಷ್ಟು ಅವಿಭಕ್ತ ಕುಟುಂಬಗಳಿವೆ, ಶೇ. ೮೩.೩೪ರಷ್ಟು ವಿಭಕ್ತ ಕುಟುಂಬಗಳಿರುವುದು ಕಂಡುಬರುತ್ತದೆ.

ಇನ್ನು ಮೂರನೇ ತಲೆಮಾರಿನ ಕುಟುಂಬಗಳನ್ನು ನೋಡಿದಾಗ ಆರು ತಾಲೂಕುಗಳಲ್ಲಿಯೂ ಶೇ. ೧೦೦ರಷ್ಟು ವಿಭಕ್ತ ಕುಟುಂಬಗಳಿವೆ. ೩ ತಲೆಮಾರಿನ ಕುಟುಂಬ ವರ್ಗವನ್ನು ಗಮನಿಸಿದಾಗ ತಲೆಮಾರಿನಿಂದ ತಲೆಮಾರಿಗೆ ಕುಟುಂಬಗಳು ಪಲ್ಲಟವಾಗಿವೆ. ಮೊದಲನೇ ತಲೆಮಾರಿನ ಕುಟುಂಬಗಳಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಕಾರಣ ಮೊದಲ ತಲೆಮಾರಿನ ಜನರಲ್ಲಿ 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಸಿದ್ಧಾಂತವು ಬೇರೂರಿತ್ತು ಎಂದು ತಿಳಿಯುತ್ತದೆ. ಮಾನವ ಸಮಾಜದ ಇತಿಹಾಸದಲ್ಲಿಯೆ ಮಾನವ ನಿರ್ಮಿಸಿಕೊಂಡ ಮೊಟ್ಟಮೊದಲ ಸಂಘಟನೆ ಕುಟುಂಬವಾಗಿದೆ. ಮೊದಲನೇ ತಲೆಮಾರಿನವರಲ್ಲಿ ಸಾಮಾಜಿಕ ಮತ್ತು ಸಾಂಪ್ರದಾಯಿಕ ಸಂಘಟನೆಯಾಗಿ ಕುಟುಂಬಗಳು ಕಂಡುಬರುತ್ತವೆ. ಇವರಲ್ಲಿ ಸಂಘ ಜೀವಿಯಾಗಿ ಬದುಕಿರುವ ವಿಶೇಷಗುಣಗಳಲ್ಲೊಂದಾಗಿ ಕುಟುಂಬ ಕಂಡುಬರುತ್ತದೆ. ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ನೋಡುವುದಾದರೆ ಅವಿಭಕ್ತ ಕುಟುಂಬಗಳಲ್ಲಿ ವಿಶೇಷ ಆಚರಣೆಗಳು, ನಿರ್ದಿಷ್ಟ ಕಟ್ಟುಪಾಡುಗಳು, ಕೆಲವು ನಿಷೇಧಗಳು, ಕಟ್ಟುನಿಟ್ಟಾದ ಪರಿಕಲ್ಪನೆಗಳು ಇವೆ. ಇಲ್ಲಿ ವ್ಯವಸಾಯ ವೃತ್ತಿಯನ್ನೇ ಪ್ರದಾನವನ್ನಾಗಿಟ್ಟುಕೊಂಡು ಕಂಡುಬರುವ ಕುಟುಂಬಗಳು ಎಲ್ಲಾ ವಿವಿಧ ರೀತಿಯ ಆವಿಷ್ಕಾರವನ್ನು ಹೊಂದಿವೆ. ಅಲ್ಲದೇ ಕೃಷಿ ಎಂಬ ದೇಹ ಚೈತನ್ಯದ

ಶಕ್ತಿಯನ್ನೇ ಹೆಚ್ಚಿಸಲು ಕೈಗಾರಿಕೆಗಳು ಪ್ರವೇಶವಾದವು. ಇದರಿಂದ ಆಧುನಿಕತೆಯ ಪ್ರಭಾವ ಕುಟುಂಬ ವರ್ಗವನ್ನು ಒಂದೇ ಸೂರಿನಡಿಯಲ್ಲಿ ವಾಸಿಸುವಂತಹ ಸದಸ್ಯರುಗಳು ಉದ್ಯೋಗವನ್ನರಿಸಿ ಪಟ್ಟಣಗಳಿಗೆ ವಲಸೆ ಹೋಗುವಂತಾಯಿತು. ಇನ್ನು ಮೂರನೇ ತಲೆಮಾರಿನ ಹೊತ್ತಿಗೆ ಅವಿಭಕ್ತ ಕುಟುಂಬಗಳು ವಿಘಟನೆಯಾದವು. ಇದಕ್ಕೆ ಮೂರು ರೀತಿಯ ಕಾರಣಗಳು ಕಾಣಸಿಗುತ್ತವೆ. ಒಂದು ಔದ್ಯೋಗಿಕ ಕಾರಣದಿಂದಾಗಿ ಕೃಷಿ ಮತ್ತು ಗುಡಿಕೈಗಾರಿಕೆಗಳ ಅವನತಿ, ಪಾಶ್ಚಾತ್ಯ ಶಿಕ್ಷಣದ ಪ್ರಭಾವ ಅಲ್ಲದೇ ಸಾರಿಗೆ ಸಂಪರ್ಕಗಳ ಬೆಳವಣಿಗೆ ಮಾಧ್ಯಮಗಳ ಪ್ರಭಾವ, ಭಾರತೀಯ ಕಾನೂನು ವ್ಯವಸ್ಥೆ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ. ಚಿಕ್ಕ ಸಂಸಾರ ಮತ್ತು ಚೊಕ್ಕ ಸಂಸಾರದ ಸಿದ್ಧಾಂತ ಪ್ರಭಾವದಿಂದ ಇಂದು ಅವಿಭಕ್ತ ಕುಟುಂಬಗಳು ನಷ್ಟವಾಗಿವೆ. ಅಲ್ಲದೇ ಭೂಸುಧಾರಣಾ ಕಾಯ್ದೆ ಸ್ತ್ರೀಯರಿಗೆ ಆಸ್ತಿಯ ಹಕ್ಕಿನ (೧೯೫೦) ಕಾಯ್ದೆ ಮುಂತಾದ ಕಾರಣಗಳು ಅವಿಭಕ್ತ ಕುಟುಂಬಗಳ ಮೇಲೆ ಪ್ರಭಾವ ಬೀರಿ ಅವಿಭಕ್ತ ಕುಟುಂಬಗಳೆಲ್ಲವೂ ವಿಭಕ್ತ ಕುಟುಂಬಗಳಾಗಿ ನಿಂತಿವೆ.

ಒಟ್ಟಾರೆಯಾಗಿ ಹೇಳುವುದಾದರೆ ಮೇಲಿನ ಅಂಶಗಳನ್ನು ಗಮನಿಸಿದಾಗ ಮೊದಲನೇ ತಲೆಮಾರಿನಲ್ಲಿ ಹೆಚ್ಚಾಗಿ ಕೃಷಿ ಪ್ರಧಾನ ಕುಟುಂಬಗಳು ಕಂಡುಬಂದರೆ, ಎರಡನೇ ತಲೆಮಾರಿಗಾಗಲೇ ಎಮ್.ಎನ್.ಸಿ. ಗಳಂತಹ ಬಹುರಾಷ್ಟ್ರೀಯ ಕಂಪನಿಗಳಂತಹ ಪ್ರಭಾವ ನಿಧಾನಗತಿಯಲ್ಲಿ ಪ್ರಭಾವ ಬೀರಿರುವುದು ಇನ್ನು ಮೂರನೇ ತಲೆಮಾರಿಗೆ ಬಂದರೆ ಸಂಪೂರ್ಣವಾಗಿ ಪಾಶ್ಚಾತ್ಯೀಕರಣ, ಔದ್ಯೋಗಿಕರಣ, ಕೈಗಾರಿಕರಣ ಪ್ರಭಾವ ಆವರಿಸಿಕೊಂಡಿದೆ. ಈ ಕಾರಣಕ್ಕಾಗಿಯೇ ಹಲವು ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗಿವೆ.

೪.೨. ವಿವಾಹ

ವರ್ತಮಾನದಲ್ಲಿ ಸಾಮಾನ್ಯವಾಗಿ ಯಾವುದೇ ಸಮಾಜ ಆಧುನಿಕತೆಯ ಪ್ರಭಾವದಿಂದ ದೂರ ಉಳಿದಿಲ್ಲ. ಭಾರತೀಯ ಸಾಮಾಜಿಕ ಕ್ಷೇತ್ರಗಳಲ್ಲಿ ತೀವ್ರಗತಿಯ ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿನ ಬದುಕು ಇಂದು ಬದಲಾವಣೆಗಳನ್ನು ಕಂಡಿದೆ. ಹೊಸದನ್ನು ಬಯಸುವ ಸಮಾಜ ದಿನಕಳೆದಂತೆ ತನ್ನ ಮೂಲ ಆಚಾರ ವಿಚಾರಗಳಲ್ಲಿ ಬದಲಾವಣೆ ಯನ್ನು ಕಂಡುಕೊಳ್ಳುತ್ತಾ ಇದೆ. ಅದೇ ರೀತಿ ಸಾಮಾಜಿಕ ಸಂಸ್ಥೆಗಳಲ್ಲಿ ಬಂದಾಗ ವಿವಾಹವೂ ಕೂಡ ಬದಲಾವಣೆಗೆ ಒಳಗಾಗಿರುವುದು ಕಂಡುಬರುತ್ತದೆ.

ವಿವಾಹವೆಂದರೆ ಹೆಣ್ಣು ಗಂಡುವಿನ ನಡುವೆ ಸಾಮಾಜಿಕವಾಗಿ ಮಾನ್ಯವಾದ ಸ್ಥಿರವಾದ ಲೈಂಗಿಕ ಸಂಬಂಧವನ್ನು ನಿರ್ಧರಿಸುವ ಒಂದು ಸಾಮಾಜಿಕ ಸಂಸ್ಥೆ ಎಂದು ಹೇಳಬಹುದು. ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದಾಗ ಹಲವಾರು ಸಮಾಜಶಾಸ್ತ್ರಜ್ಞರು ತಮ್ಮದೇ ಆದ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಹ್ಯಾರಿಯಂ ಜಾನ್‌ಸನ್ ಅವರ ಪ್ರಕಾರ "ಒಬ್ಬ ಪುರುಷ

ಮತ್ತು ಒಬ್ಬ ಮಹಿಳೆಗೆ ಸಾಮಾಜಿಕವಾಗಿ ಅನುಮತಿ ನೀಡಲಾದ ಸಮುದಾಯದಲ್ಲಿ ತಮ್ಮ ಸ್ಥಾನಕ್ಕೆ ಚ್ಯುತಿಬಾರದಂತೆಯೇ ಮಕ್ಕಳನ್ನು ಪಡೆಯುವುದರ ಜೊತೆಗೆ ಕರ್ತವ್ಯ ಹಾಗೂ ತಮ್ಮ ಸ್ಥಾನಮಾನಗಳನ್ನು ಉಳಿಸಿಕೊಳ್ಳುವ ಪರಸ್ಪರ ಒಪ್ಪಂದ" ಎಂದಿದ್ದಾರೆ.[5]

ಬೇಡರು ಇತರರೊಂದಿಗೆ ಸಹಬಾಳ್ವೆ ಮಾಡುತ್ತಾ ಜಾತಿವ್ಯವಸ್ಥೆಯ ಮಧ್ಯದಲ್ಲಿ ನಿಲ್ಲುತ್ತಾರೆ. ಇವರಲ್ಲಿ ವಿವಾಹವು ಒಂದು ಪವಿತ್ರವಾದ ಧಾರ್ಮಿಕ ವಿಧಿ ವಿಧಾನಗಳಲ್ಲಿ ಏರ್ಪಡುವ ಗಂಡುಹೆಣ್ಣಿನ ಸಂಬಂಧವೆಂದು ಹೇಳಬಹುದು. ಬೇಡರಲ್ಲಿ ಮೊದಲನೇ ತಲೆಮಾರಿನಲ್ಲಿ ವಿವಾಹವೆಂಬುದು ವಿಜಾತಿ ಬೆಡಗುಗಳ ಆಧಾರದ ಮೇಲೆ ವೈವಾಹಿಕ ಸಂಬಂಧಗಳು ಏರ್ಪಡುತ್ತಿದ್ದವು. ಸ್ವಜಾತಿ ಬೆಡಗುಗಳಾದರೆ ಅಣ್ಣ ತಮ್ಮಂದಿರಾಗುತ್ತಾರೆಂದು ಭಾವಿಸಲಾಗುತ್ತಿತ್ತು. ಮೊದಲನೆ ತಲೆಮಾರಿನಲ್ಲಿ ತೆರ ಕೊಡುವ ಪದ್ಧತಿ ವಧುಶುಲ್ಕ ಇವರಲ್ಲಿ ಜಾರಿಯಲ್ಲಿತ್ತು. ಹೆಣ್ಣಿನ ಮನೆಯ ಮುಂದೆಯೇ ಧಾರ್ಮಿಕ ವಿಧಿ ವಿಧಾನಗಳ ಮೂಲಕ ವಿವಾಹ ಮಾಡಲಾಗುತ್ತಿದ್ದು. ಮದುವೆ ಮಾಡಿಕೊಳ್ಳಬೇಕಾದರೆ ಗಂಡು ವಿವಾಹಪೂರ್ವದಲ್ಲಿ ಕನಿಷ್ಟ ಎರಡು ವರ್ಷಗಳ ಕಾಲ ಹೆಣ್ಣಿನ ಮನೆಯಲ್ಲಿದ್ದು ತಾನು ಮದುವೆಯಾಗುವ ಹೆಣ್ಣನ್ನು ಸ್ವತಂತ್ರವಾಗಿ ಸಾಕಬಲ್ಲೆ ಎಂಬುದನ್ನು ದೃಢೀಕರಿಸಬೇಕಾಗಿತ್ತು. ಮದುವೆ ಎಂಬುದು ಕೇವಲ ಒಂದು ದಿನದ ಆಚರಣೆಯಾಗದೆ ತಿಂಗಳುಗಟ್ಟಲೇ ನಡೆಯುವ ಸಂಭ್ರಮವಾಗಿತ್ತು. ಮದುವೆಯ ಪೂರ್ವದಲ್ಲಿ ಮನೆಯಲ್ಲಿ ಕನಿಷ್ಟ ಒಂದು ತಿಂಗಳ ಮುಂಚೆಯೇ ವಿಧಿ ಆಚರಣೆಗಳ ಸಿದ್ಧತೆಗಳು ನಡೆಯುತ್ತಿದ್ದವು. ಮನೆಗೆ ಸುಣ್ಣ, ಕೆಮ್ಮಣ್ಣು ಹಚ್ಚುವ ಕಾರ್ಯದಿಂದ ಜೊತೆಗೆ ಶ್ಯಾವಿಗೆಮಣೆ ಪೂಜೆ, ಬೀಸುವ ಕಲ್ಲು ಪೂಜೆ, ಒನಕೆ ಪೂಜೆ, ಇವುಗಳನ್ನೊಳಗೊಂಡಂತೆ ಕಾರ್ಯಕ್ರಮಗಳು ಪ್ರಾರಂಭಗೊಳ್ಳುತ್ತಿದ್ದ ಆಚರಣೆಗಳು ಹುಡುಗಿಗೆ ನಿಷೇಕ (ಸೋಬಾನೆ, ಕಡೆವಾರು) ಮಾಡಿ ಗಂಡನ ಮನೆಗೆ ಕಳುಹಿಸುವಲ್ಲಿಗೆ ಮುಕ್ತಾಯಗೊಳ್ಳುತ್ತಿತ್ತು. ಮದುವೆ ಮಾಡುವಲ್ಲಿ ಜಂಗಮ ಅಥವಾ ಬ್ರಾಹ್ಮಣ ಪುರೋಹಿತರ ಪ್ರವೇಶವಿರಲಿಲ್ಲ. ಕಟ್ಟೆಮನೆ ಯಜಮಾನನೇ ತನ್ನ ನೇತೃತ್ವದಲ್ಲಿ ಹುಡುಗಿಗೆ ತಾಳಿ ಕಟ್ಟಿಸಲಾಗುತ್ತಿತ್ತು. ಕಟ್ಟೆಮನೆ ಪದ್ಧತಿ ಮೊದಲನೇ ತಲೆಮಾರಿನವರಲ್ಲಿ ತುಂಬಾ ಬಲಿಷ್ಠವಾಗಿತ್ತು. ಹೆಣ್ಣು ಅಥವಾ ಗಂಡು ತಪ್ಪುಗಳನ್ನು ಮಾಡದಂತೆ ಕುಲಪದ್ಧತಿಯ ನಿಯಮಗಳಿದ್ದವು. ತಪ್ಪು ಮಾಡಿದವರಿಗೆ ಜಾತಿ ಬಹಿಷ್ಕಾರದಂತಹ, ಗಡಿಪಾರಿನಂತಹ ಶಿಕ್ಷೆಗಳಿದ್ದವು. ವಿಶೇಷವಾಗಿ ಬೆಡಗಿನ ಆಧಾರದಲ್ಲಿಯೇ ಇವರ ಪ್ರತಿಯೊಂದು ಚಟುವಟಿಕೆಗಳು ನಡೆಯುತ್ತಿದ್ದವು. ಹಳೆತಲೆಮಾರಿನವರಲ್ಲಿ ಬಹುಪತ್ನಿತ್ವ ಜಾರಿಯಲ್ಲಿತ್ತು ವಿಧವಾ ವಿವಾಹಕ್ಕೆ ಅವಕಾಶವಿತ್ತು. ಅದನ್ನು 'ಕೂಡಿಕೆ ವಿವಾಹ' ಎಂದು ಕರೆಯುತ್ತಿದ್ದರು.

ಮೊದಲ ತಲೆಮಾರಿನಲಿ ತಿಂಗಳುಗಟ್ಟಲೆ ನಡೆಯುವ ಮದುವೆಯ ಸಂಭ್ರಮ ಎರಡನೇ ತಲೆಮಾರಿನಲ್ಲಿ ಕೇವಲ ಮೂರು ದಿನಗಳಿಗೆ ಸೀಮಿತಗೊಂಡಿತು. ಮೊದಲದಿನ ಹಂದರ ಶಾಸ್ತ್ರ, ಎರಡನೆ ದಿನ ವೀಳ್ಯಶಾಸ್ತ್ರ, ಮೂರನೆ ದಿನ ತಾಳಿ ಶಾಸ್ತ್ರಕ್ಕೆ ಸೀಮಿತಗೊಂಡಿತು. ವಿವಾಹದ ನಿಯಮಗಳು

ಹೆಚ್ಚು ಸಡಿಲಗೊಂಡವು. ಬೆಡಗುಗಳನ್ನು ನೋಡುತ್ತಿದ್ದರಾದರೂ ಅದು ಕಟ್ಟುನಿಟ್ಟಾಗಿ ಪಾಲನೆಗೊಳ್ಳುತ್ತಿರಲಿಲ್ಲ. ಈ ಹಂತದಲ್ಲಿ ಬೇಡರ ಹಿರಿಯನ ಸ್ಥಾನದಲ್ಲಿ ಬ್ರಾಹ್ಮಣ ಪುರೋಹಿತ ಇಲ್ಲವೇ, ಜಂಗಮನ ಪ್ರವೇಶವಾಗಿದೆ. ಬ್ರಾಹ್ಮಣನ ನೇತೃತ್ವದಲ್ಲಿ ತಾಳಿ ಕಟ್ಟಿಸಲಾಗುತ್ತಿದೆ. ಎರಡನೇ ಹಂತಕ್ಕೆ ಬಹುಪತ್ನಿತ್ವ ಸಂಖ್ಯೆ ಕಡಿಮೆಯಾಗುತ್ತಾ ಇಲ್ಲವೆಂಬಷ್ಟು ಗೌಣವಾಗಿ, ಬಾಲ್ಯವಿವಾಹವು ಕಡಿಮೆಯಾಗಿದೆ. ತೆರ ಪದ್ಧತಿ ಜಾರಿಯಲ್ಲಿದೆಯಾದರೂ ಅದು ಕೇವಲ ಸಂಪ್ರದಾಯವನ್ನು ಮುರಿಯಬಾರದೆಂಬ ಕಾರಣಕ್ಕೆ ಅಲ್ಪ ಪ್ರಮಾಣದಲ್ಲಿ ತೆರ ತೆಗೆದುಕೊಳ್ಳಲಾಗುತ್ತಿತ್ತು. ಈ ಹೊತ್ತಿಗಾಗಲೇ ವರದಕ್ಷಿಣೆ ಎಂಬುದು ಕೇವಲ ಕೆಲವೇ ಕೆಲವು ಸ್ಥಿತಿವಂತ ಕುಟುಂಬಗಳಲ್ಲಿ ಪ್ರವೇಶವಾಗಿತ್ತು ಮತ್ತು ಮೂರು ದಿನದ ವಿವಾಹ ಮುಗಿದ ನಂತರ ೧೬ನೇ ದಿನಕ್ಕೆ ಇಲ್ಲವೇ ಮೂರು ತಿಂಗಳಿಗೋ ಹುಡುಗಿಯನ್ನು ಗಂಡನ ಮನೆಗೆ ಕಳುಹಿಸಲಾಗುತ್ತಿತ್ತು.

ಮೂರನೇ ತಲೆಮಾರಿನ ಹೊಸ ಪೀಳಿಗೆಯಲ್ಲಿ ತುಂಬಾ ಬದಲಾವಣೆಗಳಾಗಿವೆ. ಈ ಹಂತದ ಪೀಳಿಗೆಯಲ್ಲಿ ಬಹುಪತ್ನಿತ್ವ ಇಲ್ಲವೆಂದೇ ಹೇಳಬಹುದು. ಇಂದು ಬಹುಪತ್ನಿತ್ವ ಕಾನೂನು ಬಾಹಿರ ಎಂಬುವ ಸ್ಥಿತಿಗೆ ಬಂದಿದೆ. ಹಿಂದೆ ಒಂದಕ್ಕಿಂತ ಹೆಚ್ಚು ಹೆಣ್ಣನ್ನು ವಿವಾಹವಾದರೆ ಅದು ಗೌರವದ ಮತ್ತು ಬಲಾಢ್ಯತೆಯ ಪ್ರತೀಕವಾಗಿತ್ತು. ಇಂದು ಅದು ಕಾನೂನು ಬಾಹಿರವಾಗಿದೆ. ವಧುದಕ್ಷಿಣೆಯ ಬದಲಾಗಿ ಇಂದು ಲಕ್ಷಗಟ್ಟಲೆ ವರದಕ್ಷಿಣೆ ನೀಡಬೇಕಾಗಿದೆ. ಇದಕ್ಕೆ ಜಾಗತೀಕರಣದ ಪ್ರಭಾವವೇ ಕಾರಣ. ಇಂದು ವರದಕ್ಷಣೆ ಇಲ್ಲದೇ ಮದುವೆಯೇ ನಡೆಯಲಾರದು ಎನ್ನುವ ಸ್ಥಿತಿಗೆ ಬಂದಿದೆ. ಎಷ್ಟೋ ಸಂಬಂಧಗಳು ವರದಕ್ಷಣೆ ಕೊಡದ ಕಾರಣಕ್ಕೆ ಏರ್ಪಟ್ಟ ವಿವಾಹ ಸಂಬಂಧಗಳು ಮುರಿದು ಹೋಗಿರುವ ಉದಾಹರಣೆಗಳುಂಟು. ಗಂಡಿನ ಅಥವಾ ಹೆಣ್ಣಿನ ಮನೆಯ ಮುಂದೆ ನಡೆಯುವ ಮದುವೆಗಳು ಕ್ಷತ್ರಗಳಲ್ಲಿ ನಡೆಯುತ್ತಿವೆ. ಮೂರು ದಿನಗಳಲ್ಲಿ ನಡೆಯುತ್ತಿದ್ದ ಎಲ್ಲಾ ಕಾರ್ಯಗಳನ್ನು ಇಂದು ಸಂಕ್ಷಿಪ್ತವಾಗಿ ಒಂದೇ ದಿನದಲ್ಲಿ ಮಾಡಿ ಮುಗಿಸಲಾಗುತ್ತಿದೆ. ಇಂದು ವಿವಾಹಗಳು ದೇವಸ್ಥಾನಗಳಲ್ಲಿ ಅಥವಾ ಕಲ್ಯಾಣಮಂಟಪಗಳಲ್ಲಿ ಹೆಚ್ಚಾಗಿ ನಡೆಯುತ್ತಿವೆ. ಬಾಲ್ಯ ವಿವಾಹಗಳು ಗೌಣವಾಗಿವೆ. ಕಾರಣ ಕಟ್ಟುನಿಟ್ಟಾದ ಕಾನೂನು ಕ್ರಮದಿಂದ ಎಂದು ಹೇಳಬಹುದು.

ಅಲ್ಲದೇ ಇಂದು ಬೆಡಗುಗಳೂ ಸಹ ಗೌಣವಾಗುತ್ತಿವೆ. ಹಿಂದೆ ಯಾವ ಬೆಡಗಿನವರು ಮತ್ತಾವ ಬೆಡಗಿನವರೊಂದಿಗೆ ರಕ್ತ ಸಂಬಂಧಗಳನ್ನು ಕಲ್ಪಿಸಿಕೊಳ್ಳಬೇಕು ಎಂಬ ನಿಯಮಗಳಿದ್ದವು. ಪ್ರತಿಯೊಬ್ಬನಿಗೂ ತಮ್ಮ ಬೆಡಗುಗಳು ಯಾವುವು ಎಂಬುದು ಕರಾರುವಕ್ಕಾಗಿ ತಿಳಿದಿತ್ತು. ಆದರೆ ಇಂದು ಬೆಡಗುಗಳನ್ನು ಕುರಿತು ಹೊಸ ತಲೆಮಾರಿನ ಪೀಳಿಗೆಗೆ ಅಷ್ಟಾಗಿ ತಿಳಿದಿಲ್ಲ. ಕಟ್ಟೆಮನೆ ಯಜಮಾನನಿಗೆ ತಮ್ಮ ಕಟ್ಟೆಮನೆಯಲ್ಲಿರುವ ಅಷ್ಟು ಕುಟುಂಬಗಳ ಬೆಡಗುಗಳ ಪರಿಚಯವಿತ್ತು. ಕ್ಷೇತ್ರಕಾರ್ಯದಲ್ಲಿ ಕಂಡ ೮೫ ವರ್ಷದ ಯಜಮಾನರು ತಮ್ಮ ಕಟ್ಟೆಮನೆ ಸಮುದಾಯದಲ್ಲಿರುವ ಬೆಡಗುಗಳನ್ನು ಸುಲಲಿತವಾಗಿ ತಿಳಿಸಿದರು ಅವರ ಪ್ರಕಾರ ಊರು ಬೇಡರಲ್ಲಿ ನೂರಾರು ಬೆಡಗುಗಳಿವೆಯಂತೆ ಇದರಂತೆ ಮ್ಯಾಸಬೇಡರಲ್ಲಿಯೂ ಹಲವಾರು ಬೆಡಗುಗಳಿವೆಯಂತೆ. ಮ್ಯಾಸಬೇಡರ

ಮತ್ತು ಊರುಬೇಡರ ಬೆಡಗಿಗೆ ಹೊಂದಾಣಿಕೆಯಾಗುವುದಿಲ್ಲವಂತೆ. ಆದರೆ ಇಂದು ಇವರಿಬ್ಬರ ಮಧ್ಯೆ ವೈವಾಹಿಕ ಸಂಬಂಧಗಳು ಏರ್ಪಡುತ್ತಿವೆ. ಅಲ್ಲದೇ ಇದರಾಚೆಯು ಅಂತರ್ಜಾತಿಯ ವಿವಾಹಗಳೂ ನಡೆಯುತ್ತಿವೆ. ಹಿರಿಯರು ವಧುವನ್ನು ಆಯ್ಕೆ ಮಾಡಿ ವಿವಾಹವನ್ನು ನಿಶ್ಚಯಿಸಿ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಮಾಡುತ್ತಿದ್ದ ಸಂಪ್ರದಾಯಬದ್ಧ ವಿವಾಹಗಳು ಇಂದು ಬೇಡರಲ್ಲಿ ಕಡಿಮೆಯಾಗುತ್ತಿವೆ. ವಿವಾಹದಲ್ಲಿಯೇ ಆಯ್ಕೆ ವಿಧಾನವು ವಿವಾಹವಾಗುವ ಪುರುಷ ಮತ್ತು ಮಹಿಳೆಯರದ್ದೇ ಆಗಿದೆ. ಇಂದು ಸಾಮೂಹಿಕ ವಿವಾಹ, ನೋಂದಾಯಿತ ವಿವಾಹ, ಪ್ರೇಮವಿವಾಹ, ದೇವಸ್ಥಾನದಲ್ಲಿ ನಡೆಯುವ ವಿವಾಹ ಮುಂತಾದ ಸರಳ ಆದರ್ಶ ಮಿತವ್ಯಯ ವಿವಾಹಗಳು ಬೇಡರಲ್ಲಿ ನಡೆಯುತ್ತಿವೆ. ಹಿಂದಿನ ಮಹತ್ವ, ವೈಭವ, ಕಾಳಜಿ, ಪೂರ್ವತಯಾರಿಗಳು ಇಂದಿನ ವಿವಾಹದದಲ್ಲಿ ಮರೆಮಾಚುತ್ತಿವೆ. ಮೊದಲಿದ್ದ ವಿವಾಹ ನಿರ್ಬಂಧಗಳು ಮೂರನೇ ತಲೆಮಾರಿನ ಹೊತ್ತಿಗೆ ಬದಲಾವಣೆಗೊಳ್ಳುತ್ತಾ ಬಂದಿವೆ.

೪.೩. ಬೆಡಗುಗಳು

ಊರುಬೇಡರಲ್ಲಿ ಕನಿಷ್ಠ ೨೨೪ ಬೆಡಗುಗಳಿವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಳೇ ತಲೆಮಾರಿನ ಜನರು ತಿಳಿಸಿದ ಬೆಡಗುಗಳ ವಿವರ ಈ ಕೆಳಗಿನಂತಿದೆ. ಅವರು ತಿಳಿಸಿದ ಕೆಲವು ಬೆಡಗುಗಳ ಉಚ್ಚಾರಣೆಯಲ್ಲಿ ಬದಲಾವಣೆ ಕಂಡುಬಂದರೂ ಅವು ಒಂದೇ ಬೆಡಗನ್ನು ಸೂಚಿಸ ಬಹುದೇನೋ ಎನ್ನುವ ಅನುಮಾನ ಇದೆ. ಇದೇ ರೀತಿ ಮ್ಯಾಸಬೇಡರಲ್ಲಿಯೂ ಹಲವಾರು ಬೆಡಗುಗಳು ಕಂಡುಬರುತ್ತವೆ. ಮ್ಯಾಸಬೇಡರ ಬೆಡಗುಗಳನ್ನು ಮೂರನೇ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಊರುಬೇಡರ ಬೆಡಗುಗಳು

ಅಂಕೆಲೋರು	ಅರಕೋರು	ಒನ್ನಗಟ್ಲೋರು
ಅಂಗಮೊಲೋರು	ಅಲಕತ್ತಿನವರು	ಒಳ್ಳೆಲೋರು
ಅಂದರದವರು	ಅವುಲೋರು	ಓತಲವರು
ಅಕ್ಕಲೋರು	ಆಚರ್ಲದವರು	ಓಬನಾಯಕರು
ಅಗಸ್ತ್ಯ	ಆನಂದರು	ಕಂಕರು
ಅಜ್ಜಡ್ಲೋರು	ಇಡಿತರಪತೋರು	ಕಂಕುಲೋರು
ಅಜ್ಜಪ್ಪಲೋರು	ಇಮ್ಮಳ್ಳವರು	ಕಂಕುಲೋರು
ಅನಾಲರ	ಈರಗಾರ	ಕಂತಳಸಹಕೇತರು
ಅನ್ಯಾವರು	ಉರಿಶಿಗರು	ಕಂದಿರ್ಲೋರು
ಅನ್ಯಾವರು	ಎಪ್ಪತ್ಲೋರು	ಕಂದಿರ್ಲೋರು

ಕತ್ತಿಯವರು
ಕಬ್ಬಿಲವರು
ಕಬ್ಬೋಳ್ಳು
ಕಬ್ಬೋಳ್ಳು
ಕಮಲದವರು
ಕಮಲದವರು
ಕರೇಸಲ್ಲರು
ಕರೇಸಲ್ಲರು
ಕಲ್ಯಾಣದವರು
ಕಲ್ಲಲೇರ
ಕಲ್ಲಲೇರ
ಕವಲೇರು
ಕವಾರಿಕಾರರು
ಕಸೂರಿಯವರು
ಕಳಪದವರು
ಕಾಂಗೆತ್ತಿನವರು
ಕಾಗಣ್ಣವರು
ಕಾಗಣ್ಣವರು
ಕಾಡುಚರರು
ಕಾಡುಚರರು
ಕಾಮಲೋರು
ಕಾಶಿಗೋತ್ರದವರು
ಕಾಶಿಗೋತ್ರದವರು
ಕಿಜ್ಜಸಿನವರು
ಕಿನ್ನರರು
ಕಿರಾತರು
ಕಿರಾತರು

ಕುಂಚ್ಲೇರು
ಕುಂಟ್ಲವರು
ಕುಂಟ್ಲವರು
ಕುಂತಳದೋರು
ಕುಂಬಳದೋರು
ಕುರುಜರು
ಕುರುವಂತದವರು
ಕುರುಸಾಲದೋರು
ಕುರ್ತೀರ್
ಕುರ್ಲೇರು
ಕುರ್ಲೇರು
ಕೂರಿಯೋರು
ಕೆಂಗಲರ
ಕೆಟ್ಟಿಲೋರು
ಕೋಣಿಗಲ್ಲರು
ಕೊಳಾಯಿಲೋರು
ಕೊಳಾಯಿಲೋರು
ಕೋರೆಣ್ಣದೋರು
ಗಂಗಾನಾಥರು
ಗಂಗೋನಾಯಕರು
ಗಗ್ಗಡಲೋರು
ಗಬ್ಬೆಲ್ಲರ್‌ಮಲ್ಲರು
ಗವಲೇರು
ಗುಜ್ಜಲರು
ಗುಡ್ಡದವರು
ಗುಮ್ಮಟದೋರು
ಗುರ್ಲೇರು

ಗುಲ್ಲಿನವರು
ಗೂಜಲವರು
ಗೆಜ್ಜೆಡೇರು
ಗೆದ್ದಲವರು
ಗೊಬ್ಬಿಲಾರು
ಗೊರಲೋರು
ಗೊಲ್ಲಾಳರು
ಗೋಪನವರು
ಗೋಪಾಲದವರು
ಗೋಲೇರು
ಗೋವಿನೋರು
ಗೋಸಲಾರು
ಗೌಂಪೋರು
ಗೌಲರು
ಚಕ್ರದೋರು
ಚಚ್ಚಟ್ಲವರು
ಚನ್ನಮುದೀಲರು
ಚಾಟಕಲ್ಲೇರ
ಚಿನಗಾಟಿನಾಯಕರು
ಚಿನ್ನಮಾಗಲೇರು
ಚಿಪ್ಪಲವರು
ಚೀಮಲವರು
ಜಂಪಲೋರು
ಜಕ್ಕಲವರು
ಜನುಕ್ರಿಯವರು
ಡಾಕೆಲವರು
ಡೇವಕಲ್ಲೋರು

ತಂಗಲರ
ತಟ್ಟೆಲ್ಲರ
ತನುಲಮತ್ತೇರು
ತಪುಲೋರು
ತಳಗಲ್ಲಾರು
ತಿರಮುಖರು
ತೇರುಸಾಮಾಂತೋರು
ದ್ವಿರಕಲ್ಲೇರ
ನಗರಾಂತವರು
ನಲಕೇತಲವರು
ನಲ್ಲಬೋತ್ಲೇರು
ನಲ್ಲೆತೀರ
ನಲ್ಲೆಲ್ಲೋರು
ನವಣೇರ
ನಾಗರಸೋರು
ನಾದೆರ್ಲವರು
ನಾಮುಲೋರು
ನಾಯಿಗಜ್ಜಲೋರು
ನಾರಪೋರು
ನಿಚ್ಚಮಲೆಯರು
ನೀರಕಾಶಿಯೋರು
ನೀಲಮೋರು
ನುಮಲೈರುಏರ್ರದವರು
ನೆಲ್ಲೆಲ್ಲಾರು
ಪಂಚಕದೋರು
ಪಗಲವರು
ಪಡವಲಿವಲರು

ಪಡ್ಡಲೋರು
ಪದ್ಮಕಾಂತರು
ಪದ್ಮಕಾಶಿಲೋರು
ಪರಮಶಿವಲರು
ಪರಮುಖರ
ಪರಿಬಲ್ಲಾಳಲೋರು
ಪಲೆವರು
ಪಾನುಮಲೋರು
ಪಾಮುಡಲೋರು
ಪಾಮುಲೋರು
ಪಾಲಮುನಗೋತ್ರಾಲು
ಪಾಲೋರು
ಪಾವಕಲವರು
ಪಾವುಲೋರು
ಪಿಂಗಾರ
ಪಿತಲವರು
ಪಿರಿಯಮಿನಗಲೋರು
ಪುಟ್ಟಮುಲೋರು
ಪುಟ್ಟಲೋರು
ಪುಟ್ಟುಪೋಲವರು
ಪುರಳಿಯೋರು
ಪುರುಳಿಯೋರು
ಪುರ್ತೀರ
ಪುವ್ವಲೋರು
ಪೂಲೋರು
ಪೂವಮೂಡ್ಲೋರು
ಪೆದ್ದಮಾಗಲೋರು

ಪೆದ್ದಮುಕ್ಕಲೋರು
ಪೆದ್ದಮುದಲೋರು
ಪೆದ್ದಳನಾಯಕರು
ಪೆನ್ನಯ್ಯಲವರು
ಪೆಯ್ಯಲವರು
ಪೆರುಮಕ್ಕಳೋರು
ಪೊತ್ತುಗಳೇರ
ಪೊನ್ನಮೀನಿಗೋಳ್ಳು
ಪೊಲಮಾಲೋರು
ಪೋತಗೊಳ್ಳೋರು
ಪೋತಲೋರು
ಪೋಲರ
ಪೋಲೋರು
ಬಂಟನೋರು
ಬಂಟ್ರಮುಲೋರು
ಬಂಟ್ಲೋರು
ಬಂಡೆಬಲದವರು
ಬಂದೇಲೋರು
ಬಟಿಜೆನಾಥರು
ಬಡಕಲರಕ್ಕಳಿಸಲದ
ಬಡಸಲೋರು
ಬರಿಪಲರ್
ಬಸವನೋರು
ಬಾಗಮಿಲೋರು
ಬಾಚನೋರು
ಬಾರೇರು
ಬಾಲನಾಯಕಲು

ಬುಟಕಲವರು
ಬುಟಿಗಲೋರು
ಬುಟುಕರು
ಬುಟುಗನೋರು
ಬುಟ್ಟಿಕಲೋರು
ಬುಡಕರು
ಬುಡಕಲು
ಬುಡಕಲೋರು
ಬುಲ್ಲಡಲೋರು
ಬೆಂಚಲರ
ಬೆನಕನವರಕುರ್ತಿಕರು
ಬೆಲ್ಲೋಲರ
ಬೊಂತಲೋರು
ಬೊಗೋಳ್ಳೋರು
ಬೊಮ್ಮದೇವಡ್ಲನೋರು
ಬೊಮ್ಮರಾಜುಲು
ಬೋಗಿಮೋರು
ಬೋಗಿಲ್ಲೋರು
ಬೋಪಿನಾಯಕಲು
ಭಟ್ಟರ್
ಭಿಲ್ಲನೋರು
ಭಿಲ್ಲರ್
ಭೀಷ್ಮನೋರು
ಮಂಚಿಕಲ್ಲ ಬುಡುಕರು
ಮಂಡಲೋರು
ಮಂಡ್ರಿಗವರು
ಮಂಡ್ಲೆಯೋರು
ಮಂದಾಲೋರು
ಮಂದೋರು
ಮಂಪಾಲರು
ಮಚ್ಚಲೋರು
ಮಡಿತೋಡಿನೋರು
ಮಡಿಪತೇರು
ಮಣಿಕಲರು
ಮದಲೋರು
ಮನವೊಲ್ಲಾರು
ಮನ್ನಲ್ಲರು
ಮರಲೇರು
ಮರುವಲೋರು
ಮರ್ತೇರ
ಮಲಿಗೇಲವರು
ಮಲೆಯರು
ಮಲ್ಲಗ್ಲಾರು
ಮಲ್ಲೆಲ್ಲೋರು
ಮಲ್ಲೋರು
ಮಷಿಲರು
ಮಸಗಲ್ಲರ
ಮಸಿಬಟ್ಟಲೋರು
ಮಳಗಲ್ಲರ
ಮಳಲೇರು
ಮಾಗೆಲೋರು
ಮಾರೆಪ್ಪನೋರು
ಮಾರ್ದಲಿಂಗೋರು
ಮಾರ್ಲೇರು
ಮಾಲಿಗಲೋರು
ಮಿನುಗೋತ್ರ
ಮಿರ್ತಿರ
ಮಿಲಿಗಲೋರು
ಮೀನಗಲ್ಲರು
ಮುಂಡಲೀಕನೋರು
ಮುಂದಲೋರು
ಮುಗಲೋರು
ಮುಚ್ಚಳವರು
ಮುತಶ್ಯಾರು
ಮುತ್ತೋರು
ಮುದಗಂಟಲೋರು
ಮುದಗೊಂಡ್ಲರು
ಮುಮ್ಮಡಲೋರು
ಮುಮ್ಮಿಗಿಳ್ಳು
ಮೂಡಲೋರು
ಮೇಕಲೋರು
ಯಂಡಲೋರು
ಯಮಗಲ್ಲೋರು
ಯಮಡಲೋರು
ಯರಕಾಟನಾಯಕರು
ಯಾಕಲೋರು
ಯುದ್ಧಲವರು
ರಂಗಶ್ಯರು
ರಾಗೋಜಿಗೋಳು
ರಾಘವನೋರು
ರಾಜಪುತ್ರರು

ರಾಮಕೇತಲವರು	ಶಿನಮಾಗಲೋರು	ಸಿದ್ದಕಲ್ಲೋರು
ರಾಮಾಂಕನಾಥೋರು	ಶೀಲದೋರು	ಸಿನಮುದಿಲೋರು
ರಾಯಿಗುವ್ವಲೋರು	ಸಂತಾಲೇರು	ಸೀಮಲವರು
ರೆಂಗಾಲೇರು	ಸಣ್ಣಮುಚ್ಚಲವರು	ಸೂರ್ಯವಂಶಿ
ರೆಂಬಲೋರು	ಸಹಕೇತರು	ಸೆಟ್ಟಿದೋರು
ರೋಮ್ಯನೋರು	ಸಾಕ್ಲೇರು	ಸೊಳ್ಳೇರು
ಲಕ್ಷ್ಮಿಲೋರು	ಸಾಗರಚಕ್ರವರ್ತಿಲು	ಹುಲೇರ
ಲಿಂಗದೋರು	ಸಾತ್ರಲೋರು	ಹೆಗಡೇರು
ವೆಂಕಲೋರು	ಸಾರ್ಜರು	ಹೊನ್ನಬಂಟ್ಲೋರು

ಅದೇ ರೀತಿ ಮ್ಯಾಸಬೇಡರಲ್ಲಿಯೂ ಬೆಡಗುಗಳು ಪ್ರತ್ಯೇಕವಾಗಿವೆ. ಅವುಗಳ ವಿವರ ಈ ಕೆಳಗೆ ನೀಡಲಾಗಿದೆ.

ಅಜ್ಜಡ್ಲೋರು	ಎನುಮಲೋರು	ಕಿನ್ನರದೋರು
ಅಜ್ಜದಲ್ಲೋರು	ಎಮ್ಲೇರು	ಕಿನ್ನರವರು
ಅಜ್ಜಮುತ್ತಿಯೋರು	ಏಳುಬೆಟ್ಟದೋರು	ಕುಂಚಲದೋರು
ಅರಕೋರೋರು	ಏಳುಮನೆಯೋರು	ಕುಂತಲೋರು
ಅಲಿಕೇರು	ಓತಲೋರು	ಕುಂಬಳದೋರು
ಆನಂದಲೋರು	ಓಬನಾಯಕರು	ಕುರಿಯೋರು
ಈಗ್ಲಾರು	ಓಬಳೆಯೋರು	ಕುಳಿಂದರು
ಈಚಿಯೋರು	ಕಗ್ಗಲ್ಲೋರು	ಗಂಡ್ಲೋರು
ಈರಗಾರು	ಕತ್ತಿಯೋರು	ಗಜ್ಜಡ್ಲೋರು
ಉದ್ದಲೋರು	ಕರಿಬೇವಿನೋರು	ಗಜ್ಜಿನಾಯಕರು
ಉರಶಿಂಗರು	ಕಲಶದೋರು	ಗಜ್ಜಿನಾಯಕರು
ಉರಸಿಂಗನೋರು	ಕಶ್ಯಪನೋರು	ಗಡ್ಡದೋರು
ಉರುವಲೋರು	ಕಾಕರು	ಗಾಡಿಗಿರಿಯೋರು
ಎಕ್ಕೆಲೋರು	ಕಾಡುಚೆಂಚರು	ಗುಂಟೆತ್ಲೋರು
ಎತ್ತಿನೋರು	ಕಾಮಗೇತೇರು	ಗುಜಗುಡ್ಲೋರು
ಎದ್ದಲೋರು	ಕಾವರಿಕರು	ಗುಜ್ಜಲದೋರು

ಗೆಜ್ಜಲೋರು	ಪಟ್ಟಪಲ್ಲಾರು	ಮಸಿಗೇಲೇರು
ಗೊಡಗುದಾಸರು	ಪರಮೇಸಿಗೋಳ್ಳು	ಮಾಚಿಕಲ್ಲಿನೋರು
ಗೊಲ್ಲಾಳರು	ಪಾಮುಡ್ಲೋರು	ಮಾದೇಲಿಂಗನೋರು
ಗೋನೂರರು	ಪಾಲೋರು	ಮಾನಗಲೋರು
ಗೋಪಾಲಪಾತಕರು	ಪೀಪನೋರು	ಮಾರೆಮ್ಮಬುಟಕಲೋರು
ಗೋಪಾಲರು	ಪೆದ್ದನ್ನೋರು	ಮಾಸಲೋರು
ಗೋವಿನೋರು	ಪೆದ್ದುಳ್ಳ ನಾಯ್ಕರು	ಮೀನಗಲೋರು
ಗೋಸಲೋರು	ಪೆನ್ನಯ್ಯಲೋರು	ಮುಗೊಡ್ಲೋರು
ಚಿನಗಾಟನಾಯಕ್ಲು	ಪೊಟ್ಟಪೊಲ್ಲನೋರು	ಮುಚ್ಚಲವರು
ಚೆನ್ನಮೊಗಲೋರು	ಪೋತರಾಜುಲೋರು	ಮೂಡೆಲ್ಲೋರು
ಚೆನ್ನೆವಾರು	ಬಂಗಾರಹಟ್ಟಿಯೋರು	ಮೇಕಲರು
ಜಂಕಲೇರು	ಬಂಜಿಗೆರೇರು	ಯಮಡಲೋರು
ಜಂಟಿಗೇರು	ಬಲ್ಲಾಳೋರು	ಯಮ್ಮಲೇರು
ಜಗ್ಗೇಲೋರು	ಬಲ್ಲೆಡದೋರು	ಯರಗಾಟಿಯೋರು
ಜೋಗಯ್ಯನೋರು	ಬಸವನೋರು	ಯರಗಾನನಾಯಕರು
ತಮಲಮತ್ತೇರು	ಬಿಜ್ಜಲ್ಲದವರು	ಯರಬಾಲನಾಯಕರು
ತೋಡಲೋರು	ಬಿಲ್ಲಿನೋರು	ಯರಮಂಚನಾಯಕರು
ದಡ್ಡಿಮತ್ತಿನೋರು	ಬುಟಕಲೋರು	ಯರಮಂತಲೋರು
ದಡ್ಡಿಸೂರನಾಯಕರು	ಬುಟಕಲೋರು	ಯರ‍್ರಪಾಮುಡ್ಲೋರು
ದೇವಲರು	ಬುಡ್ಡೆಬೋರನೋರು	ಯರ‍್ರಬೊಮ್ಮನೋರು
ದೊಡ್ಡೆತಿನುವೋರು	ಬೊಗ್ಗಲೋರು	ಯರ‍್ರಬೋತ್ಲೇರು
ದೊರೆಲವರು	ಬೊಗ್ಗಲೋರು	ಯಾಕಲೋರು
ನಗರಿಮನೇರು	ಬೊಮ್ಮದೇವರೋರು	ರಂಗನಾಥೋರು
ನಲ್ಲಬೊದ್ಲವರು	ಭಿಲ್ಲಿನಸೂರರು	ರಂಗಯಚ್ಚಿನೋರು
ನಾಗಪೋರರು	ಭೋಸೆನಾಯಕರು	ರಾಜಧಾನಿಯೋರು
ನಾಗರತಕರು	ಮಂದಲವರು	ರಾಜಪುತ್ತರಾರು
ನೀರಗಂಟೇರು	ಮದಗಟ್ಟದೋರು	ರಾಜಬುಟಕಲೋರು
ನೆಲ್ಲಕೆತ್ಲೋರು	ಮಲ್ಲಿನಾಯಕರೋರು	ರಾಜ್ಯಾಂಗದೋರು
ನೆಲ್ಲಕ್ಕಿಯೋರು	ಮಲ್ಲೋರು	ರಾಣಿಗಳೋರು


ರಾಮಂಡಾಳದೋರು	ಸನ್ನಲವರು	ಸಿದ್ದಿಪ್ಪಬುಡಕಲು
ರಾರಪೋರರವರು	ಸಮುದ್ರದೋರು	ಸಿನಮಂಗಲದೋರು
ಲಸ್ಮೆಯೋರು	ಸಾತೇಲನೋರು	ಸೂರ್ಯವಂಶದೋರು
ಲಿಂಗನೋರು	ಸಾಮಾಂತರು	ಸೆಟ್ಟೆಲ್ಲೇರು
ಶಬ್ದಿಲವರು	ಸಾಲೈಕರು	ಹಬ್ಬಲನೋರು

೪.೪. ವಸತಿ ವ್ಯವಸ್ಥೆ

ಕರ್ನಾಟಕದ ಬೇಡ ಬುಡಕಟ್ಟು ಪಂಗಡಗಳಲ್ಲಿ ಈ ಹಿಂದೆ ಶಾಶ್ವತ ಮನೆಗಳು ಕಂಡು ಬರುವುದು ಅತ್ಯಲ್ಪವಾಗಿತ್ತು. ಕೇವಲ ಹುಲ್ಲಿನ ಗುಡಿಸಿಲು, ತಾಳೆಗರಿ ಗುಡಿಸಿಲುಗಳ ಪ್ರಮಾಣವೇ ಹೆಚ್ಚಾಗಿತ್ತು. ಅದರಲ್ಲೂ ಮ್ಯಾಸಬೇಡರು ಹಟ್ಟಿಗಳಲ್ಲಿಯೇ ಗುಂಪುಗುಂಪಾಗಿ ಗುಡಿಸಲನ್ನು ಹಾಕಿಕೊಂಡು ವಾಸ ಮಾಡುತ್ತಿದ್ದರು. ಜಗಳೂರು ತಾಲೂಕಿನಲ್ಲಿ ಈ ರೀತಿಯ ಬೇಡರ ಹಟ್ಟಿಗಳ ಪ್ರಮಾಣ ಅತ್ಯಧಿಕವಾಗಿದ್ದಿತು. ಮ್ಯಾಸಬೇಡರು ತಮ್ಮ ಹಟ್ಟಿಗಳಲ್ಲಿ 'ಕಿಲಾರಿ'ಗಳೆಂದು ಕರೆಯುವ ದನಗಳನ್ನು ಸಾಕಿಕೊಂಡಿರುತ್ತಿದ್ದರು. ಪಶುಪಾಲನೆಯೇ ಇವರ ಮುಖ್ಯ ಕಸುಬಾದುದರಿಂದ ದನಗಳೊಂದಿಗೇ ಇವರ ಸಹಜೀವನವಿರುತ್ತಿತ್ತು. ಇವರ ಹಟ್ಟಿಯೊಳಗೆ ಇತರರ ಪ್ರವೇಶ ನಿಷಿದ್ಧವಾಗಿತ್ತು. ಆದರೆ ಇಂದು ಇದು ನಿಧಾನವಾಗಿ ಪಲ್ಲಟಕ್ಕೆ ಒಳಗಾಗುತ್ತಿವೆ. ಇತ್ತೀಚಿನ ಎರಡು ದಶಕಗಳೀಚೆಗೆ ಕರ್ನಾಟಕ ಸರ್ಕಾರ ಕೊಡಮಾಡುವ ಆಶ್ರಯ ಯೋಜನೆ, ಅಂಬೇಡ್ಕರ್ ಯೋಜನೆ, ಇಂದಿರಾ ಆವಾಸ್ ಯೋಜನೆ ಮುಂತಾದ ವಸತಿ ಯೋಜನೆಗಳ ಫಲಾನುಭವಿಗಳಾಗಿ ತಮ್ಮ ಹುಲ್ಲು ಮನೆಯ ಬದಲಾಗಿ ಹೊಸ ಮಾದರಿಯ(ಹಂಚಿನ ಮನೆ, ತಗಡಿನ ಮನೆ, ಆರ್‌ಸಿಸಿ ಮನೆ.) ಮನೆಗಳನ್ನು ಕಾಣುವಂತಾಗಿದೆ. ಬೇಡರ ಸ್ಥಿತಿಗೂ ಮತ್ತು ಇತರ ಬುಡಕಟ್ಟುಗಳ ವಸತಿ ಸ್ಥಿತಿಗೂ ಅಂತಹ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲವಾದರೂ ಬೇಡರಂತೆ ಇತರ ಬುಡಕಟ್ಟುಗಳು ಸರ್ಕಾರದ ಯೋಜನೆಗಳಿಗೆ ಹೆಚ್ಚಾಗಿ ಸ್ಪಂದಿಸುತ್ತಿಲ್ಲವೆನಿಸುತ್ತದೆ. ಪ್ರಾಯಶಃ ಈ ಕಾರಣಕ್ಕಾಗಿಯೇ ಬೇಡ ಬುಡಕಟ್ಟಿನಷ್ಟು ತೀವ್ರಗತಿಯಲ್ಲಿ ಇತರ ಬುಡಕಟ್ಟುಗಳು ಪ್ರಗತಿಗೊಳ್ಳಲು ಸಾಧ್ಯವಾಗುತ್ತಿಲ್ಲ.

ಕೋಷ್ಟಕ ೪.೪ ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ (೨೦೦೧)

ಶಾಶ್ವತ	೬೬.೯
ಅರೆ ಶಾಶ್ವತ	೨೩.೧
ತಾತ್ಕಾಲಿಕ	೧೦.೦



ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಸಬಲರಾದವರು ಸರ್ಕಾರದ ಯೋಜನೆಗಳ ಗೊಡವೆಗೆ ಹೋಗದೆ ಸ್ವತಂತ್ರವಾಗಿ ಮನೆಗಳನ್ನು ನಿರ್ಮಿಸಿಕೊಂಡ ಉದಾಹರಣೆಗಳು ಉಂಟು. ಒಟ್ಟಾರೆಯಾಗಿ ಪಕ್ಕಾ (ಶಾಶ್ವತ) ಮನೆಗಳನ್ನು ಹೊಂದಿದ ಪರಿಶಿಷ್ಟ ಪಂಗಡಗಳ ಪ್ರಮಾಣ ಶೇಕಡಾ ೬೬.೯ರಷ್ಟಿದೆ. ಅರೆ ಶಾಶ್ವತ ಅಂದರೆ ಕೆಳಭಾಗವೆಲ್ಲಾ ಕಲ್ಲು ಅಥವಾ ಇಟ್ಟಿಗೆ ಗೋಡೆಗಳನ್ನು ನಿರ್ಮಿಸಿಕೊಂಡಿದ್ದು ಮೇಲ್ಭಾಗದಲ್ಲಿ ಹುಲ್ಲು ಮುಂತಾದ ತಾತ್ಕಾಲಿಕವಾದ ಮೇಲುಹೊದಿಕೆ ಹೊದಿಸಿದ ಮನೆಗಳ ಪ್ರಮಾಣ ಶೇಕಡಾ ೨೩.೧ರಷ್ಟಿದೆ. ಇನ್ನೂ ತಾತ್ಕಾಲಿಕವಾದ ಗುಡಿಸಲು ರಚಿಸಿಕೊಂಡು ಜೀವಿಸುವ ಪರಿಶಿಷ್ಟ ಪಂಗಡಗಳಿದ್ದು ಬಹುತೇಕ ಅವು ಕಾಡಿನಲ್ಲಿ ವಾಸಿಸುವ ಬುಡಕಟ್ಟುಗಳಾಗಿವೆ. ಇಂತಹ ಸಮುದಾಯಗಳ ಮನೆಗಳು ಶೇಕಡಾ ೧೦.೦ರಷ್ಟಿವೆ.[೬]

ದಾವಣಗೆರೆ ಜಿಲ್ಲೆಯ ಪರಿಶಿಷ್ಟ ಪಂಗಡಗಳನ್ನು ಗಮನಿಸಿದರೆ, ಡುಂಗ್ರಿ ಗರಾಸಿಯ ಸಮುದಾಯ ದಾವಣಗೆರೆ ನಗರ ಪ್ರದೇಶದಲ್ಲಿ ನೆಲೆಸಿದ್ದು ಬಹುತೇಕ ಕೊಳಚೆ ಪ್ರದೇಶವಾಗಿದೆ. ಇವರು ತಮ್ಮ ನೆಲೆಯಲ್ಲಿ ಚಿಕ್ಕ ಚಿಕ್ಕ ಹೆಂಚಿನ ಮನೆಗಳು, ತಗಡಿನ ಮನೆಗಳನ್ನು ಹೊಂದಿದ್ದಾರೆ. ಹಾಗೇ ಹಕ್ಕಿ ಪಿಕ್ಕಿಗಳು ಇನ್ನೂ ತಾತ್ಕಾಲಿಕವಾದ ಕಚ್ಚಾಮನೆಗಳಲ್ಲಿ ಹಾಗೂ ತಾತ್ಕಾಲಿಕವಾದ ಡೇರೆಗಳಲ್ಲಿ ವಾಸಿಸುತ್ತಿವೆ. ಇವುಗಳ ಹೊರತಾಗಿ ಮೇದ ಹಾಗೂ ನಾಯಕ ಸಮುದಾಯದವರು ಸ್ವಂತ ಮನೆಗಳನ್ನು ಹೊಂದಿದ್ದು ಸರ್ಕಾರದ ವಸತಿ ಯೋಜನೆಗಳ ಲಾಭ ಪಡೆದು ಇದ್ದುದರಲ್ಲಿಯೇ ಸಂಪೂರ್ಣವಾಗಿ ಅಲ್ಲದಿದ್ದರೂ ವಾಸಕ್ಕೆ ಯೋಗ್ಯವಾದ ಮನೆಗಳನ್ನು ನಿರ್ಮಿಸಿಕೊಳ್ಳಲು ಯಶಸ್ವಿ ಯಾಗಿದ್ದಾರೆ.

೪.೪.೧. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬೇಡರ ವಸತಿ ವಿವರ


ಒಂದು ತಲೆಮಾರಿನ ಹಿಂದೆ ಕೇವಲ ಗುಡಿಸಲುಗಳನ್ನು ಹೊಂದಿದ್ದ ಮತ್ತು ಹಟ್ಟಿಗಳಲ್ಲಿ ನೆಲೆಸಿದ್ದ ಬೇಡರು ಸ್ವಂತ ಮನೆಗಳನ್ನು ಹೊಂದುವಲ್ಲಿ ಬಹುತೇಕ ಯಶಸ್ವಿಯಾಗಿದ್ದಾರೆ. ಅಧ್ಯಯನಕ್ಕೆ

ಆಯ್ಕೆ ಮಾಡಿಕೊಂಡ ಒಟ್ಟಾರೆ ೧೮ ಗ್ರಾಮಗಳ ಪರಿಶಿಷ್ಟ ಪಂಗಡದ ೧೮೦ ಬೇಡರ ಕುಟುಂಬಗಳಲ್ಲಿ ಗುಡಿಸಲು, ಟಿನ್, ದಾಬಾಮಾಳಿಗೆ, ಆರ್.ಸಿ.ಸಿ., ಹೆಂಚಿನ ಮನೆಗಳಲ್ಲಿ ಹಾಗೂ ಕೆಲವು ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಸರ್ಕಾರ ನೀಡಿದ ವಸತಿ ಯೋಜನೆಯ ಮನೆಗಳನ್ನು ತಮ್ಮ ಸ್ವಂತ ಹಣ ವಿನಿಯೋಗಿಸಿ ತಮಗೆ ಅನುಕೂಲವಾಗುವ ರೀತಿಯಲ್ಲಿ ಮನೆಗಳನ್ನು ನಿರ್ಮಿಸಿ ಕೊಂಡಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿತು. ಆದರೆ ಅವು ಒಂದು ಕಾಲಕ್ಕೆ ಸರ್ಕಾರಿ ಯೋಜನೆಯ ಲಾಭ ಪಡೆದು ನಿರ್ಮಾಣಗೊಂಡಿದ್ದ ಮನೆಗಳಾಗಿರುವುದರಿಂದ ಅವುಗಳನ್ನು ಸರ್ಕಾರಿ ವಸತಿ ಯೋಜನೆಯ ಮನೆಗಳೆಂದೇ ಪರಿಗಣಿಸಲಾಗಿದೆ.

ಹಲವು ಕುಟುಂಬಗಳು ಕೆಳಗಡೆ ಮಣ್ಣಿನ ಗೋಡೆಗಳನ್ನು ನಿರ್ಮಿಸಿಕೊಂಡು ಮೇಲ್ಭಾಗದಲ್ಲಿ ಕಾಚಿಕಡ್ಡಿ ಹುಲ್ಲು, ಮೆದೆ ಮುಂತಾದವುಗಳನ್ನು ಹೊದೆಸಿಕೊಂಡಿದ್ದಾರೆ. ಹಾಗೆ ಈ ಗುಡಿಸಲ ಜಾಗಗಳು ಇವರ ಸ್ವಂತ ಸ್ಥಳವಾಗಿರದೆ ಸರ್ಕಾರಿ ಜಾಗಗಳಲ್ಲಿ ಗುಡಿಸಲು ನಿರ್ಮಿಸಿಕೊಂಡಿರುವುದು ತಿಳಿದುಬರುತ್ತದೆ.

೪.೪.೧. ದಾವಣಗೆರೆ ಜಿಲ್ಲೆಯ ಬೇಡರ ವಸತಿ ವಿವರ(ಶೇಕಡಾವಾರು)

ಕ್ರಸಂ.	ವಸತಿ ವಿವರ	
೧	ಗುಡಿಸಲು	೫೭
೨	ಟಿನ್	೧೧೩
೩	ದಾಬಾಮಾಳಿಗೆ	೧೦೩
೪	ಆರ್.ಸಿ.ಸಿ.	೯೬
೫	ಹೆಂಚಿನ	೧೦೮
೬	ಆಶ್ರಯ	೩೬
೭	ಬಾಡಿಗೆ	೨೭





ಕೋಷ್ಟಕ ೪.೪.೨ ಬೇಡರ ಮೊದಲ ತಲೆಮಾರಿನವರ ಮನೆಗಳ ಸ್ವರೂಪ

ಕ್ರ.ಸಂ.	ತಾಲೂಕುಗಳು	ಮನೆ ಮಾದರಿ						
		ಗುಡಿಸಲು	ಟಿನ್	ದಾಬಾಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಆಶ್ರಯ	ಬಾಡಿಗೆ
೧	ಚನ್ನಗಿರಿ	೧೨	೧	೧೧		೬		
೨	ದಾವಣಗೆರೆ	೧೧		೮		೧೧		
೩	ಹರಪನಹಳ್ಳಿ	೮		೨೧		೧		
೪	ಹರಿಹರ	೬		೨೩		೧		
೫	ಹೊನ್ನಾಳಿ	೧೧		೧೪		೫		
೬	ಜಗಳೂರು	೯		೨೦		೧		
ಒಟ್ಟು		೫೭	೧	೯೭		೨೫		
ಶೇಕಡವಾರು		೩೧.೬೭	೦.೫೫	೫೩.೮೯		೧೩.೮೯		

ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳ ವಸತಿ ಸ್ಥಿತಿಗತಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ತಾಲೂಕಿನ ಬೇಡರ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಅವುಗಳಲ್ಲಿ ಶೇಕಡಾ ೩೧.೬೭ ಕುಟುಂಬಗಳು ಗುಡಿಸಲು; ಶೇಕಡಾ ೫೩.೮೯ರಷ್ಟು ಕುಟುಂಬಗಳು ದಾಬಾಮಾಳಿಗೆ; ಶೇಕಡಾ ೧೩.೮೯ರಷ್ಟು ಕುಟುಂಬಗಳು ಹೆಂಚಿನ ಮನೆಗಳನ್ನು ಕಂಡುಬಂದರೆ, ಒಂದೇ ಒಂದು ಕುಟುಂಬವು ಟೀನ್ ಮನೆಯಾಗಿದೆ. ಮೊದಲ ತಲೆಮಾರಿನಲ್ಲಿ ಯಾವುದೇ ರೀತಿಯ ಸರ್ಕಾರ ಆಶ್ರಯ ಯೋಜನೆಯಡಿಯಲ್ಲಿ ನೀಡುವ ವಸತಿಗಳು ಲಭ್ಯವಾಗದಿರುವುದು. ಆರ್.ಸಿ.ಸಿ. ಮತ್ತು ಬಾಡಿಗೆಮನೆಗಳಲ್ಲಿ ಯಾವುದೇ ಕುಟುಂಬಗಳು ಆಶ್ರಯಿಸಿಲ್ಲದಿರುವುದು ಕೋಷ್ಟಕ ೪.೪.೨ರಲ್ಲಿ ಕಾಣಬಹುದು.

ಮೊದಲ ತಲೆಮಾರಿನ ತಾಲೂಕುವಾರು ಬೇಡರ ವಸತಿಗಳ ಮಾದರಿಗಳನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೪೦ರಷ್ಟಿದ್ದು, ಟಿನ್‌ಮನೆ ಶೇ. ೩.೩೩ರಷ್ಟಿದ್ದು, ದಾಬಾಮಾಳಿಗೆ ಶೇ. ೩೬.೬೬ರಷ್ಟು, ಹೆಂಚಿನ ಮನೆ ಶೇ. ೨೦ರಷ್ಟಿದೆ(ಅಂಕಿಅಂಶಗಳು: ಪು.೨೫೩ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೩೬.೬೬ರಷ್ಟಿದ್ದು, ದಾಬಾಮಾಳಿಗೆ ಶೇ. ೨೬.೬೬ರಷ್ಟು, ಹೆಂಚಿನ ಮನೆ ಶೇ. ೩೬.೬೬ರಷ್ಟಿವೆ(ಅಂಕಿಅಂಶಗಳು: ಪು.೨೫೩ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೨೬.೬೬ರಷ್ಟಿದ್ದು, ದಾಬಾಮಾಳಿಗೆ ಶೇ. ೭೦ರಷ್ಟು, ಹೆಂಚಿನ ಮನೆ ಶೇ. ೩.೩೩ರಷ್ಟಿವೆ(ಅಂಕಿಅಂಶಗಳು: ಪು.೨೫೩ ನೋಡಿ).

[illegible]

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೨೦ರಷ್ಟಿದ್ದು, ಟಿನ್‌ಮನೆ ಶೇ. ೩.೩೩ರಷ್ಟಿದ್ದು, ದಾಬಾಮಾಳಿಗೆ ಶೇ. ೭೬.೬೬ರಷ್ಟಿವ(ಅಂಕಿಅಂಶಗಳು: ಪು.೨೩೯ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೩೬.೬೬ರಷ್ಟಿದ್ದು, ದಾಬಾಮಾಳಿಗೆ ಶೇ. ೪೬.೬೬ರಷ್ಟು, ಹೆಂಚಿನ ಮನೆ ಶೇ. ೧೬.೬೬ರಷ್ಟಿವೆ(ಅಂಕಿಅಂಶಗಳು: ಪು.೨೩೯ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೩೦ರಷ್ಟಿದ್ದು, ದಾಬಾಮಾಳಿಗೆ ಶೇ. ೬೬.೬೬ರಷ್ಟು, ಹೆಂಚಿನ ಮನೆ ಶೇ. ೩.೩೩ರಷ್ಟಿವೆ(ಅಂಕಿಅಂಶಗಳು: ಪು.೨೩೯ ನೋಡಿ).

ಮೊದಲ ತಲೆಮಾರಿನ ಬೇಡಬುಡಕಟ್ಟಿನ ಕುಟುಂಬಗಳ ವಸತಿ ಸ್ವರೂಪವನ್ನು ನೋಡಿದಾಗ ಇವರ ಬಡತನದ ಸ್ವರೂಪ, ಆರ್ಥಿಕಮಟ್ಟ ಇವರ ಬದುಕನ್ನು ತೋರಿಸುತ್ತಿದೆ. ಮೊದಲನೇ ತಲೆಮಾರಿನವರು ಹೆಚ್ಚಾಗಿ ಮಾಳಿಗೆ ಮನೆ, ಗುಡಿಸಲು ಮನೆ ಮತ್ತು ಹಟ್ಟಿಗಳಲ್ಲಿ ಹೆಚ್ಚಾಗಿ ನೆಲೆಸಿರುವುದು. ಕಾರಣ ಮೊದಲನೇ ತಲೆಮಾರಿನವರಿಗೆ ವಿವಿಧ ರೀತಿಯ ಮನೆಗಳ ವಿನ್ಯಾಸಗಳ ಬಗ್ಗೆ ಮತ್ತು ಈಗ ಬಳಕೆಯಾಗುತ್ತಿರುವ ಸರಕು ಸಲಕರಣೆಗಳ ಬಗ್ಗೆ ಅಷ್ಟೊಂದು ಮಾಹಿತಿ ಲಭ್ಯವಿಲ್ಲದಿರುವುದು ಕಾರಣವಾಗಿರಬಹುದೆಂದು ಹೇಳಬಹುದು. ಅಲ್ಲದೇ ಆರ್ಥಿಕವಾಗಿ ಇವರಿಗೆ ಅಷ್ಟೊಂದು ಸುಧಾರಣೆಯಾಗಿರಲಿಲ್ಲ ಎಂಬುದನ್ನು ಗಮನಿಸಬಹುದು.

ಎರಡನೇ ತಲೆಮಾರಿನ ವಸತಿ

ಕೋಷ್ಟಕ ೪.೪.೩ ಬೇಡರ ಎರಡನೇ ತಲೆಮಾರಿನವರ ಮನೆಗಳ ಸ್ವರೂಪ

ಕ್ರ.ಸಂ.	ತಾಲೂಕುಗಳು	ಮನೆ ಮಾದರಿ						
		ಗುಡಿಸಲು	ಟಿನ್	ದಾಬಾಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಆಶ್ರಯ	ಬಾಡಿಗೆ
೧	ಚನ್ನಗಿರಿ		೧೫	೩	೧	೧೦		೧
೨	ದಾವಣಗೆರೆ		೨೫			೪	೧	
೩	ಹರಪನಹಳ್ಳಿ		೧೧	೧	೧	೧೧	೬	
೪	ಹರಿಹರ		೧೮	೧		೭	೪	೦
೫	ಹೊನ್ನಾಳಿ		೧೭			೧೨	೧	೦
೬	ಜಗಳೂರು		೨೦	೧		೭	೨	
ಒಟ್ಟು			೧೦೬	೬	೨	೫೧	೧೪	೧
ಶೇಕಡವಾರು			೫೮.೮೯	೩.೩೩	೧.೧೧	೨೮.೩೩	೭.೮	೦.೬

ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳ ವಸತಿ ಸ್ಥಿತಿಗತಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ತಾಲೂಕಿನ ಬೇಡ ಸಮುದಾಯದ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಅವುಗಳಲ್ಲಿ ಶೇಕಡಾ ೫೮.೮೯ ಕುಟುಂಬಗಳು ಟಿನ್ ವಸತಿಗಳಿವೆ. ಶೇಕಡಾ ೩.೩೩ರಷ್ಟು ಕುಟುಂಬಗಳು ದಾಬಾಮಾಳಿಗೆ ಮನೆಗಳಾಗಿವೆ. ಶೇಕಡಾ ೧.೧೧ರಷ್ಟು ಕುಟುಂಬಗಳು ಆರ್.ಸಿ.ಸಿ. ಮನೆಗಳಾಗಿವೆ. ಶೇಕಡಾ ೨೮.೩೩ರಷ್ಟು ಕುಟುಂಬಗಳು ಹೆಂಚಿನ ವಸತಿಗಳು, ಶೇಕಡಾ ೭.೮ರಷ್ಟು ಕುಟುಂಬಗಳು ಆಶ್ರಯ ಮನೆಗಳಾಗಿ ಕಂಡುಬಂದರೆ, ಒಂದೇ ಒಂದು ಕುಟುಂಬವು ಬಾಡಿಗೆ ಮನೆಯಾಗಿದೆ. ಎರಡನೇ ತಲೆಮಾರಿನಲ್ಲಿ ಯಾವುದೇ ರೀತಿಯ ಗುಡಿಸಲು ಮನೆಗಳು ಕಂಡುಬರುವುದಿಲ್ಲ. ಕೋಷ್ಟಕ ೪.೪.೩ರಲ್ಲಿ ಗಮನಿಸಿ.

ಎರಡನೇ ತಲೆಮಾರಿನ ತಾಲೂಕುವಾರು ಬೇಡರ ವಸತಿಗಳ ಮಾದರಿಗಳನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಟಿನ್‌ಮನೆ ಶೇ. ೫೦ರಷ್ಟಿದ್ದು, ದಾಬಾಮಾಳಿಗೆ ಶೇ. ೧೦ರಷ್ಟು, ಆರ್.ಸಿ.ಸಿ. ಶೇ. ೩.೩೩ರಷ್ಟಿದ್ದು, ಹೆಂಚಿನ ಮನೆ ಶೇ. ೩೩.೩೩ರಷ್ಟು, ಬಾಡಿಗೆ ಶೇ. ೩.೩೩ರಷ್ಟಿವೆ. (ಅಂಕಿಅಂಶಗಳು: ಪು.೨೪೦ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಟಿನ್‌ಮನೆ ಶೇ. ೮೩.೩೩ರಷ್ಟಿದ್ದು, ಹೆಂಚಿನ ಮನೆ ಶೇ. ೧೩.೩೩ರಷ್ಟು, ಆಶ್ರಯ ಶೇ. ೩.೩೩ರಷ್ಟಿವೆ(ಅಂಕಿಅಂಶಗಳು: ಪು.೨೪೦ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಗುಡಿಸಲು ಶೇ. ೨೬.೬೬ರಷ್ಟಿದ್ದು, ದಾಬಾಮಾಳಿಗೆ ಶೇ. ೩.೩೩ರಷ್ಟು, ಆರ್.ಸಿ.ಸಿ. ಶೇ. ೩.೩೩ರಷ್ಟಿದ್ದು, ಹೆಂಚಿನ ಮನೆ ಶೇ. ೩೬.೬೬ರಷ್ಟಿರುವುದು ಹಾಗೂ ಆಶ್ರಯಮನೆಗಳು ಶೇ. ೨೦ರಷ್ಟಿವೆ(ಅಂಕಿಅಂಶಗಳು: ಪು.೨೪೦ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಟಿನ್‌ಮನೆ ಶೇ. ೬೦ರಷ್ಟಿದ್ದು, ದಾಬಾಮಾಳಿಗೆ ಶೇ. ೩.೩೩ರಷ್ಟಿದ್ದು, ಹೆಂಚಿನ ಮನೆ ಶೇ. ೨೩.೩೩ರಷ್ಟಿದ್ದು, ಆಶ್ರಯಮನೆಗಳು ಶೇ. ೧೩.೩೩ರಷ್ಟಿವೆ. (ಅಂಕಿಅಂಶಗಳು: ಪು.೨೪೦ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಟಿನ್‌ಮನೆ ಶೇ. ೫೬.೬೬ರಷ್ಟಿದ್ದು, ಹೆಂಚಿನ ಮನೆ ಶೇ. ೪೦ರಷ್ಟಿದ್ದು, ಆಶ್ರಯಮನೆಗಳು ಶೇ. ೩.೩೩ರಷ್ಟಿವೆ(ಅಂಕಿಅಂಶಗಳು: ಪು.೨೪೦ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಟಿನ್‌ಮನೆ ಶೇ. ೬೬.೬೬ರಷ್ಟಿದ್ದು, ದಾಬಾಮಾಳಿಗೆ ಶೇ. ೩.೩೩ರಷ್ಟು, ಹೆಂಚಿನ ಮನೆ ಶೇ. ೨೩.೩೩ರಷ್ಟಿದ್ದು, ಆಶ್ರಯಮನೆಗಳು ಶೇ. ೬.೬೬ರಷ್ಟಿವೆ (ಅಂಕಿಅಂಶಗಳು: ಪು.೨೪೦ ನೋಡಿ).

ಎರಡನೇ ತಲೆಮಾರಿನ ಬೇಡಬುಡಕಟ್ಟಿನ ಕುಟುಂಬಗಳ ವಸತಿ ಸ್ವರೂಪವನ್ನು ನೋಡಿದಾಗ ಇವರ ಬಡತನದ ಸ್ವರೂಪ, ಆರ್ಥಿಕಮಟ್ಟ ಸುಧಾರಿಸಿದ ಬದುಕನ್ನು ತೋರಿಸುತ್ತಿದೆ.

ಮೂರನೇ ತಲೆಮಾರಿನ ವಸತಿ

ಮೂರನೇ ತಲೆಮಾರಿನ ಬೇಡರ ಕುಟುಂಬಗಳ ವಸತಿ ಸ್ವರೂಪವನ್ನು ನೋಡಿದಾಗ ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳ ವಸತಿ ಸ್ಥಿತಿಗತಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ತಾಲೂಕಿನ ಮೂರನೇ ತಲೆಮಾರಿನ ಬೇಡ ಸಮುದಾಯದ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಅವುಗಳಲ್ಲಿ ಶೇಕಡಾ ೩.೩೩ ಕುಟುಂಬಗಳು ಟಿನ್ ವಸತಿಗಳಿವೆ. ಶೇಕಡಾ ೫೨.೨ರಷ್ಟು ಕುಟುಂಬಗಳು ಆರ್.ಸಿ.ಸಿ. ಮನೆಗಳಾಗಿವೆ. ಶೇಕಡಾ ೧೭.೭೮ರಷ್ಟು ಕುಟುಂಬಗಳು ಹೆಂಚಿನ ಮನೆಗಳಾಗಿವೆ. ಶೇಕಡಾ ೧೨ರಷ್ಟು ಕುಟುಂಬಗಳು ಆಶ್ರಯ ಮನೆಗಳಾಗಿವೆ. ಶೇಕಡಾ ೧೪ರಷ್ಟು ಕುಟುಂಬಗಳು ಬಾಡಿಗೆ ಮನೆಗಳಲ್ಲಿ ವಾಸವಾಗಿರುವುದು ಕೋಷ್ಟಕ ೪.೪.೪ರಲ್ಲಿ ಗಮನಿಸಿ.

ಕೋಷ್ಟಕ ೪.೪.೪ ಬೇಡರ ಮೂರನೇ ತಲೆಮಾರಿನವರ ಮನೆಗಳ ಸ್ವರೂಪ

ಕ್ರ.ಸಂ.	ತಾಲೂಕುಗಳು	ಮನೆ ಮಾದರಿ						
		ಗುಡಿಸಲು	ಟಿನ್	ದಾಬಾಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಆಶ್ರಯ	ಬಾಡಿಗೆ
೧	ಚನ್ನಗಿರಿ				೨೦	೪		೬
೨	ದಾವಣಗೆರೆ				೨೦	೨	೨	೬
೩	ಹರಪನಹಳ್ಳಿ		೪		೧೧	೮	೪	೩
೪	ಹರಿಹರ		೨		೧೭	೨	೬	೩
೫	ಹೊನ್ನಾಳಿ				೧೮	೪	೩	೫
೬	ಜಗಳೂರು				೮	೧೨	೭	೩
ಒಟ್ಟು			೬		೯೪	೩೨	೨೨	೨೬
ಶೇಕಡವಾರು			೩.೩೩		೫೨.೨	೧೭.೭೮	೧೨	೧೪

ಮೂರನೇ ತಲೆಮಾರಿನ ತಾಲೂಕುವಾರು ಬೇಡರ ವಸತಿಗಳ ಮಾದರಿಗಳನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಆರ್.ಸಿ.ಸಿ. ಶೇ. ೬೬.೬೬ರಷ್ಟಿದ್ದು, ಹೆಂಚಿನ ಮನೆ ಶೇ. ೧೩.೩೩ರಷ್ಟು, ಬಾಡಿಗೆ ಶೇ. ೨೦ರಷ್ಟಿವೆ (ಅಂಕಿಅಂಶಗಳು: ಪು.೨೪೧ ನೋಡಿ).

[illegible]

[illegible]

[illegible]

[illegible]

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಆರ್.ಸಿ.ಸಿ. ಶೇ. ೬೬.೬೬ರಷ್ಟಿದ್ದು, ಹೆಂಚಿನ ಮನೆ ಶೇ. ೬.೬೬ರಷ್ಟು, ಆಶ್ರಯ ಮನೆ ಶೇ. ೬.೬೬ರಷ್ಟು, ಬಾಡಿಗೆ ಶೇ. ೨೦ರಷ್ಟಿವೆ(ಅಂಕಿಅಂಶಗಳು: ಪು.೨೪೧ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಟಿನ್‌ಮನೆ ಶೇ. ೧೩.೩೩ರಷ್ಟಿದ್ದು, ಆರ್.ಸಿ.ಸಿ. ಶೇ. ೩೬.೬೬ರಷ್ಟಿದ್ದು, ಹೆಂಚಿನ ಮನೆ ಶೇ. ೨೬.೬೬ರಷ್ಟಿದ್ದು, ಆಶ್ರಯಮನೆಗಳು ಶೇ. ೧೩.೩೩ರಷ್ಟು, ಬಾಡಿಗೆ ಶೇ. ೧೦ರಷ್ಟಿವ(ಅಂಕಿಅಂಶಗಳು: ಪು.೨೪೧ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಟಿನ್‌ಮನೆ ಶೇ. ೬.೬೬ರಷ್ಟಿದ್ದು, ಆರ್.ಸಿ.ಸಿ. ಶೇ. ೫೬.೬೬ರಷ್ಟಿದ್ದು, ಹೆಂಚಿನ ಮನೆ ಶೇ. ೬.೬೬ರಷ್ಟಿದ್ದು, ಆಶ್ರಯಮನೆಗಳು ಶೇ. ೨೦ರಷ್ಟು, ಬಾಡಿಗೆ ಶೇ. ೧೦ರಷ್ಟಿವೆ(ಅಂಕಿಅಂಶಗಳು: ಪು.೨೪೧ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಆರ್.ಸಿ.ಸಿ. ಶೇ. ೬೦ರಷ್ಟಿದ್ದು, ಹೆಂಚಿನ ಮನೆ ಶೇ. ೧೩.೩೩ರಷ್ಟಿದ್ದು, ಆಶ್ರಯಮನೆಗಳು ಶೇ. ೧೦ರಷ್ಟು, ಬಾಡಿಗೆ ಶೇ. ೧೬.೬೬ರಷ್ಟಿವೆ(ಅಂಕಿಅಂಶಗಳು: ಪು.೨೪೧ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ವಸತಿಗಳ ಮಾದರಿಗಳಾದ ಆರ್.ಸಿ.ಸಿ. ಶೇ. ೨೬.೬೬ರಷ್ಟಿದ್ದು, ಹೆಂಚಿನ ಮನೆ ಶೇ. ೪೦ರಷ್ಟಿದ್ದು, ಆಶ್ರಯಮನೆಗಳು ಶೇ. ೨೩.೩೩ರಷ್ಟು, ಬಾಡಿಗೆ ಶೇ. ೧೦ರಷ್ಟಿವೆ(ಅಂಕಿಅಂಶಗಳು: ಪು.೨೪೧ ನೋಡಿ).

ಮೂರನೇ ತಲೆಮಾರಿನ ಬೇಡಬುಡಕಟ್ಟಿನ ಕುಟುಂಬಗಳ ವಸತಿ ಸ್ವರೂಪವನ್ನು ನೋಡಿದಾಗ ಇವರ ಮೊದಲನೇ ಹಾಗೂ ಎರಡನೇ ತಲೆಮಾರುಗಳ ಬಡತನದ ಸ್ವರೂಪ, ಆರ್ಥಿಕಮಟ್ಟ ಉತ್ತಮ ರೀತಿಯಲ್ಲಿ ಹಾಗೂ ಆಧುನಿಕತೆಯ ಪ್ರಭಾವದೊಂದಿಗೆ ಬದುಕು ಸುಧಾರಿಸುವುದು ತೋರಿಸುತ್ತಿದೆ.

ಒಟ್ಟಾರೆಯಾಗಿ ಮೂರು ತಲೆಮಾರುಗಳನ್ನು ಗಮನಿಸಿದಾಗ ಮೊದಲನೇ ತಲೆಮಾರಿನವರು ಹೆಚ್ಚಾಗಿ ಮಾಳಗಿ, ಗುಡಿಸಲು ಮನೆಗಳಲ್ಲಿ ವಾಸಿವಾಗಿದ್ದಾರೆ. ಕಾರಣ ಬಡತನ, ಆರ್ಥಿಕ ತೊಂದರೆ, ಅನಕ್ಷರತೆ ಇವುಗಳು ಅವರ ಬದುಕಿನ ನೆಲೆಯನ್ನು ಪ್ರತಿಬಿಂಬಿಸುವ ಹಿನ್ನೆಲೆಯಲ್ಲಿ ಅವರ ವಾಸದ

ನೆಲೆಯೂ ಒಂದಾಗಿದೆ. ಮಳೆಯನ್ನು ಆಶ್ರಯಿಸಿ ಬೆಳೆಯನ್ನು ಬೆಳೆಯಬೇಕಾಗಿತ್ತು. ಅಂದು ಅವರು ಬೆಳೆಯುವಂತಹ ಬೆಳೆಗಳು ಅಷ್ಟೊಂದು ಆದಾಯ ತರುವಂತಹ ಬೆಳೆಗಳಾಗಿರಲಿಲ್ಲ. ಮಾಡುವುದಕ್ಕೂ ಉಣ್ಣುವುದಕ್ಕೂ ಸರಿಹೋಗುವಂತಹ ಸ್ಥಿತಿ ಇತ್ತು. ಅಲ್ಲದೇ ಈ ಅವಧಿಯಲ್ಲಿ ಪಶುಪಾಲನೆ ಹೆಚ್ಚಾಗಿದ್ದರಿಂದ ಮೊದಲನೇ ತಲೆಮಾರಿನವರು ಕಾಚಿಹುಲ್ಲು, ಬರಲುಕಡ್ಡಿ ಮುಂತಾದವುಗಳನ್ನು ಬಳಸಿಕೊಂಡು ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಅಲ್ಲದೇ ಸರ್ಕಾರದಿಂದ ಯಾವುದೇ ಸೌಲಭ್ಯಗಳು ಲಭ್ಯವಿರಲಿಲ್ಲ. ಆದರೆ ಎರಡನೇ ತಲೆಮಾರಿನ ಹೊತ್ತಿಗೆ ಕಾಚಿಹುಲ್ಲು, ಬರಲು ಕಡ್ಡಿ ಇಂಥವುಗಳ ಬದಲಾಗಿ ಹೆಂಚಿನ ಮನೆ, ತಗಡಿನ ಮನೆ ಅಥವಾ ಟಿನ್ ಮನೆಗಳನ್ನು ಕಟ್ಟಿಕೊಳ್ಳುವಷ್ಟರ ಮಟ್ಟಿಗೆ ಬದಲಾಗಿದ್ದಾರೆ. ಅಲ್ಲದೇ ಈ ಹೊತ್ತಿಗಾಗಲೇ ಬೇಡರು ಸ್ವಲ್ಪಮಟ್ಟಿಗೆ ಪಿತ್ರಾರ್ಜಿತವಾಗಿ ಬಂದ ಮನೆಗಳಿಗೆ ಸಿಮೆಂಟ್ ಪ್ಲಾಸ್ಟಿಂಗ್ ಮಾಡಿಕೊಂಡಿರುವುದು, ನೆಲಕ್ಕೆ ಗಾರೆ ಹಾಕಿಸಿಕೊಳ್ಳುವ ಮುಖಾಂತರ ಅನೇಕ ರೀತಿಯಲ್ಲಿ ಕೆಲವು ಬದಲಾವಣೆ ಮಾಡಿಕೊಂಡರು. ಈ ಹೊತ್ತಿಗಾಗಲೇ ಸರ್ಕಾರದ ವಸತಿ ಯೋಜನೆಗಳ ಉಪಯೋಗ ಇವರನ್ನು ಸ್ವಲ್ಪಮಟ್ಟಿಗೆ ತಲುಪಿರುವುದು ಕಾರಣವಾದರೆ. ಆದರೆ ಮೂರನೇ ತಲೆಮಾರಿನ ಹೊತ್ತಿಗಾಗಲೇ ಸಂಪೂರ್ಣವಾಗಿ ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಸರ್ಕಾರ ನೀಡುವ ವಸತಿ ಯೋಜನೆಗಳಾದ ಅಂಬೇಡ್ಕರ್ ಯೋಜನೆ, ಇಂದಿರಾ ಆವಾಸ್ ಯೋಜನೆ, ಜವಹರಲಾಲ್ ವಸತಿ ಯೋಜನೆ ಇಂಥವುಗಳ ಲಾಭ ಪಡೆದು ಮನೆಗಳನ್ನು ವಿವಿಧ ವಿನ್ಯಾಸಗಳಲ್ಲಿ ಬದಲಾವಣೆಗೊಳಿಸಿಕೊಂಡಿರುವುದು ಅದರಲ್ಲೂ ಆರ್ಥಿಕವಾಗಿ ಭದ್ರವಾಗಿರುವರು ಆರ್.ಸಿ.ಸಿ. ಮನೆಗಳನ್ನು ನಿರ್ಮಿಸಿಕೊಂಡಿರುವುದು ಮತ್ತು ತಮ್ಮ ಪೂರ್ವಜರ ಮನೆಗಳನ್ನು ತ್ಯಜಿಸಿ ಬೇರೆಡೆಯಲ್ಲಿ ಜಾಗವನ್ನು ಖರೀದಿಸಿ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುವ ಮಟ್ಟದಲ್ಲಿ ನಿಂತಿದ್ದಾರೆ. ಇದಕ್ಕೆಲ್ಲಾ ಶಿಕ್ಷಣದ ಪ್ರಭಾವ ಕೃಷಿಯಲ್ಲಾದ ಆವಿಷ್ಕಾರ ಕಾರಣವಾಗಿದೆ.

ದೇವದಾಸಿ ಪದ್ಧತಿ

ದೇವದಾಸಿ ಪದ್ಧತಿಯು ಧರ್ಮದ ಚೌಕಟ್ಟಿನಲ್ಲಿ ಬೆಳೆದು ಬಂದಿದೆ. ದೇವದಾಸಿ ಎಂದರೆ ದೇವಸ್ಥಾನಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡವರು ಅಥವಾ ದೇವರೊಂದಿಗೆ ಮದುವೆಯಾದವರು ಎಂದರ್ಥ. ಇವರನ್ನು ಯಾರೂ ಮದುವೆಯಾಗುವಂತಿಲ್ಲ. ಮೊದಲ ತಲೆಮಾರಿನವರಲ್ಲಿ ದೇವದಾಸಿಯರಿಗೆ ವಿಶೇಷವಾದ ಸ್ಥಾನಮಾನವನ್ನು ನೀಡಲಾಗುತ್ತಿತ್ತು. ದೇವದಾಸಿಯರು ಎಂದರೆ ದೇವರಿಗೆ ಸಮಾನವೆಂದು ಭಾವಿಸಲಾಗುತ್ತಿತ್ತು. ಈ ಕಾರಣಕ್ಕಾಗಿ ಕೆಲ ಒಂದು ಸಂದರ್ಭದಲ್ಲಿ ಇವರ ಕೈಯಿಂದಲೇ ಪೂಜೆ ಪುನಸ್ಕಾರಗಳನ್ನು ಮಾಡಿಸಲಾಗುತ್ತಿತ್ತು. ಕೆಳವರ್ಗದಲ್ಲಿ ಹುಟ್ಟಿಕೊಂಡ ಈ ಪದ್ಧತಿ ಮೂಲವಾಗಿದ್ದರೂ, ಆಳುವ ವರ್ಗವೇ ಬೇರೆಯಾಗಿತ್ತು. ಈ ದೇವದಾಸಿಯರನ್ನು ಆಳುತ್ತಿದ್ದವರು ರಾಜ, ಊರಿನಗೌಡ, ಶಾನಭೋಗ ಹೀಗೆ ಮೇಲ್ವರ್ಗದವರಾಗಿದ್ದರು. ದೇವದಾಸಿಯರು ಮೊದಲು ಸಸ್ಯಹಾರ ವರ್ಗದ ಸಂಸ್ಕೃತಿಯನ್ನು ಅನುಸರಿಸುತ್ತಿದ್ದರೆಂದು ತಿಳಿದುಬರುತ್ತದೆ.

ದೇವದಾಸಿ ಯರಿಗೆ ಮೊದಲು ಒಳ್ಳೆಯ ಗೌರವ ಸ್ಥಾನಮಾನಗಳಿದ್ದವು. ಸಮಾಜದಲ್ಲಿ ಅವರು ಯಾವುದೇ ಸಂಕೋಚವಿಲ್ಲದೆ ಬದುಕುತ್ತಿದ್ದರು. ದೇವಸ್ಥಾನಕ್ಕೆ ಸೀಮಿತವಾಗಿದ್ದ ಈ ಪದ್ಧತಿ ಕ್ರಮೇಣ ತನ್ನ ಅರ್ಥವನ್ನು ಕಳೆದುಕೊಂಡು ಎರಡನೇ ತಲೆಮಾರಿನ ಹೊತ್ತಿಗೆ ಸೂಳೆಗಾರಿಕೆ ಎಂದು ಹೆಸರಾಯಿತು. ವ್ಯಕ್ತಿಸೂಳೆ, ದೇವಸೂಳೆ, ಸಮಾಜಸೂಳೆ ಎಂದು ಕರೆಯುವ ಪ್ರವೃತ್ತಿ ಜಾರಿಗೆ ಬಂದಿತು. ಒಂದೇ ಹೆಸರಿನಲ್ಲಿ ಕರೆಯಿಸಿಕೊಳ್ಳುವ ಈ ಪದ್ಧತಿಯನ್ನು ಬೇಡರಲ್ಲಿ ಹನುಮಂತದೇವರ ಗುಡಿಯಲ್ಲಿ ದೇವದಾಸಿಗೆ ಮುದ್ರೆ ಹಾಕುವ ಮೂಲಕ ಮತ್ತು ಹೆಣ್ಣು ದೇವರಿಗೆ ದಾಸಿ ಬಿಡುವರು, ಮುತ್ತುಕಟ್ಟುವ ಮೂಲಕ ಈ ಪದ್ಧತಿಯನ್ನು ಅನುಸರಿಸಲಾಗುತಿತ್ತು. ಈ ಒಂದು ಪದ್ಧತಿಯಿಂದ ಪ್ರಧಾನ ಸಮಾಜದ ಬಹುಮುಖ್ಯ ಅಂಶಗಳಲ್ಲಿ ಸ್ತ್ರೀಯನ್ನು ಉಪಭೋಗದ ವಸ್ತುವಾಗಿ ಪರಿಣಮಿಸಿರುವುದನ್ನು ಗಮನಿಸಬಹುದು.

ದೇವದಾಸಿ ಪದ್ಧತಿಯು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ದೇಶಾದ್ಯಾಂತ ಮತ್ತು ಜಾಗತೀಕ ಮಟ್ಟದಲ್ಲಿಯೂ ಒಂದು ಬೃಹತ್ ಸಮಸ್ಯೆಯಾಗಿ ಪರಿಣಮಿಸಿದೆ. ನಮ್ಮ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆಯಾಗಿ ಕರೆಯಲ್ಪಡುತ್ತದೆ. ಕೇರಳದಲ್ಲಿ ಮಹರಿಗಳು, ಅಸ್ಸಾಂನಲ್ಲಿ ನಟಿಯರು, ಮಹಾರಾಷ್ಟ್ರದಲ್ಲಿ ಮುರಳಿ, ಆಂಧ್ರ ಪ್ರದೇಶದಲ್ಲಿ ಬೋಗಮೆ, ಕರ್ನಾಟಕ ದಲ್ಲಿ ಜೋಗತಿ ಎಂದು ಕರೆಯುತ್ತಾರೆ. ಈ ಪದ್ಧತಿಯ ಹಿಂದೆ ಪುರುಷಮಯ ಧೋರಣೆಗಳು ಕಣ್ಣಿಗೆ ಕಾಣದ ಹಾಗೆ ಕೆಲಸ ಮಾಡುತ್ತಿವೆ. ಏಕೆಂದರೆ ಈ ಪದ್ಧತಿಗೆ ಬಲಿಯಾದವರನ್ನು ಸಂದರ್ಶಿಸಿದಾಗ ದೇವದಾಸಿಗೆ ಹಿಂದೆ ಧರ್ಮದ ಹೆಸರಿನಲ್ಲಿ ಒಂದು ಗೌರವಸ್ಥಾನವಿತ್ತು. ಅದು ಇಂದು ಗೌಣವಾಗಿದೆ. ದೇವದಾಸಿಯರೆಂದರೆ ವ್ಯವಹಾರದ ದೃಷ್ಟಿಯಲ್ಲಿ ದಿನಗಟ್ಟಲೆ, ಗಂಟೆಗಟ್ಟಲೆ ಲೈಂಗಿಕ ಆಮಿಷವನ್ನು ತೀರಿಸಿಕೊಳ್ಳುವ ಒಂದು ವ್ಯವಹಾರವಾಗಿ ಪರಿಣಮಿಸಿದೆ. ಇದಕ್ಕೆ ಬಲಿ ಯಾದವರು ಹೆಚ್ಚಾಗಿ ಅನಕ್ಷರಸ್ಥರು ಮತ್ತು ಅಜ್ಞಾನದ ಕೈಗೊಂಬೆಯಾಗಿದ್ದವರು. ಆದರೆ ಮೂರನೇ ತಲೆಮಾರಿನ ಹೊತ್ತಿಗೆ ಪ್ರಸ್ತುತ ದಿನಮಾನಗಳಲ್ಲಿ ದೇವದಾಸಿ ಪದ್ಧತಿಯು ಬೇರೆಯ ಆಟದ ಸ್ವರೂಪವನ್ನು ಪಡೆದುಕೊಂಡು ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬರುತ್ತಿದೆ. ಇಂದು ಈ ಪದ್ಧತಿಗೆ ಹಲವಾರು ಕಡೆ ವಿರೋಧಗಳು ವ್ಯಕ್ತವಾಗುತ್ತಿರುವುದರಿಂದ ದೇವಸ್ಥಾನಗಳಲ್ಲಿ ದೇವರಿಗೆ ಬಿಡುವುದನ್ನು ನಿಷೇಧಿಸಿದ್ದರಿಂದ ಕೆಲವೊಂದು ಕಡೆ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಇದರ ಹೆಸರನ್ನು ಬದಲಾಯಿಸಿ ಮನೆಗೆ ಬಿಡುವುದು ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಿದೆ. ಮನೆಗೆ ಬಿಟ್ಟ ಮಹಿಳೆಯನ್ನು *ಲೇಸಿ* ಎಂದು ಕರೆಯುತ್ತಾರೆ. ಆದರೆ ನಗರ ಪ್ರದೇಶಗಳಲ್ಲಿ ವೇಶ್ಯೆಯರ ರೂಪದಲ್ಲಿ ಚಾಲ್ತಿಯಲ್ಲಿದೆ. ವೇಶ್ಯೆಯರೆಲ್ಲರೂ ಸಹ ದೇವದಾಸಿಯರಲ್ಲ ಕೆಲವರು ಮಾತ್ರ ಸಂಪ್ರದಾಯಬದ್ಧರಾಗಿರುವುದು ಕಂಡುಬರುತ್ತದೆ. ಆದರೆ ಇಂದು ದೇವದಾಸಿಯರಿಗೂ ಮತ್ತು ವೇಶ್ಯಯರಿಗೂ ಯಾವುದೇ ವ್ಯತ್ಯಾಸಗಳಿಲ್ಲದಂತಾಗಿದೆ. ಇತ್ತೀಚಿನ ಪೀಳಿಗೆಯಲ್ಲಿ ಇದು ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ಕಂಡುಕೊಂಡಿದೆ. ದೇವದಾಸಿ ಪದ್ಧತಿಯಿಂದ ಇಂದು ಸಂಪೂರ್ಣವಾಗಿ

ದೂರುಳಿಯುತ್ತಿರುವುದು ಕಾನೂನಿನ ಅರಿವು ಹಾಗೂ ಶಿಕ್ಷಣದ ಪ್ರಭಾವ ಎನ್ನುವುದು ವಾಸ್ತವ ಸತ್ಯ.

ಸಂಘಟನೆ

'ಸಂಘಟನೆ' ಎಂದರೆ ಮಾನವನು ತನ್ನ ಗುರಿ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ನಿರ್ಮಿಸಿ ಕೊಂಡಿರುವ ಒಂದು ವ್ಯವಸ್ಥೆ ಎಂದೇ ಹೇಳಬಹುದು. ಸಮಾಜಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ ಸಂಘಟನೆ ಎಂದರೆ ಒಂದು ನಿರ್ದಿಷ್ಟ ಉದ್ದೇಶದ ಈಡೇರಿಕೆಗಾಗಿ ಒಂದುಗೂಡಿರುವ ಜನಸಮೂಹ ಎಂದರ್ಥ. ಇಲ್ಲಿ ಮಾನವನು ತನ್ನ ಸಾಮಾನ್ಯ ಗುರಿಗಳನ್ನು ಪೂರೈಸಿಕೊಳ್ಳಲು ಸಹಕರಿಸಿ ನಿಶ್ಚಿತ ಮಾರ್ಗವನ್ನು ರೂಪಿಸಿಕೊಳ್ಳುವ ವ್ಯವಸ್ಥೆಯಾಗಿದೆ. ಒಟ್ಟಾರೆಯಾಗಿ ಹೇಳುವಾದದರೆ ಸಂಘಟನೆಯು ಜನರ ಗುಂಪು, ಸಮಾನ ಉದ್ದೇಶ, ಸಹಕಾರ, ನಿಯಮಗಳು ಇವುಗಳ ತತ್ವಗಳ ನ್ನೊಳಗೊಂಡಿರುತ್ತದೆ. ಸಮಾಜಶಾಸ್ತ್ರಜ್ಞರಾದ ಸಿ ಎಚ್ ಕೂಲೆ ಅವರು "ವ್ಯಕ್ತಿಗಳು ಸಾಮಾನ್ಯ ಗುರಿಗಳನ್ನು ಪೂರೈಸಿಕೊಳ್ಳಲು ಸಹಕರಿಸಿ ನಿಶ್ಚಿತಮಾರ್ಗಗಳನ್ನು ರೂಪಿಸಿಕೊಳ್ಳುವ ವ್ಯವಸ್ಥೆ ಎಂದು ಕರೆದರೆ ಬೋಗಾರ್ಡಸ್ ಅವರು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಒಂದು ಕೂಡಿಕೊಂಡು ದುಡಿಯುವ ಜನರ ಸಮೂಹ ಎನ್ನುತ್ತಾರೆ".[೮] ಈ ಸಂಘಟನೆಯ ಹಿನ್ನೆಲೆಯಲ್ಲಿ ಬೇಡರ ಸಂಘಟನೆ ಯನ್ನು ಕುರಿತು ಹೇಳುವುದಾದರೆ ಜನ ಸಂಘಟನೆಯ ಹಿನ್ನೆಲೆಯಲ್ಲಿ ಬೇಡ ಮುಖಂಡರು ವಾಲ್ಮೀಕಿ ಮತ್ತು ಚಾರಿತ್ರಿಕ ಪುರುಷ ಹೆಸರಿನಲ್ಲಿ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಬೇಡರ ಜಾಗೃತಿಗಾಗಿ ಸಮ್ಮೇಳನಗಳನ್ನು ೧೯೭೧ರಿಂದಲೇ ಹಮ್ಮಿಕೊಳ್ಳುತ್ತಿದ್ದಾರೆ. ೧೩.೬.೧೯೭೧ರಲ್ಲಿ ಅಖಿಲ ಕರ್ನಾಟಕ ನಾಯಕರ ಪ್ರಥಮ ಸಮ್ಮೇಳನವು ಬೆಂಗಳೂರಿನ ಪುಟ್ಟಣ್ಣಶೆಟ್ಟಿ ನಗರ ಭವನದಲ್ಲಿ ಜರುಗಿತು. ಕಾರ್ಯಕ್ರಮವನ್ನು ಅಂದಿನ ಮುಖ್ಯಮಂತ್ರಿ ದೇವರಾಜ್ ಅರಸರು ಉದ್ಘಾಟಿಸಿದರು. ಕೋಸಗಿ ರಾಜಮನೆತನದ ಶ್ರೀ ಸತ್ಯನಾರಾಯಣ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಎರಡನೇ ಸಮ್ಮೇಳನವು ೧೮.೩.೧೯೭೩ರಲ್ಲಿ ದಾವಣಗೆರೆಯಲ್ಲಿ ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ರಾಜ್ಯದ ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷರಾಗಿದ್ದ ಎಚ್ ಸಿ ಬೋರಯ್ಯನವರು ವಹಿಸಿದ್ದರು. ಪುನಃ ೧೯೮೦ರಲ್ಲಿ ಬೆಳಗಾವಿಯಲ್ಲಿಯೂ ನಾಯಕರ ಸಮ್ಮೇಳನವು ನಡೆಯಿತು. ನಂತರ ೩.೫.೧೯೮೭ರಲ್ಲಿ ಹರ್ತಿಕೋಟೆಯಲ್ಲಿ ಅಖಿಲ ಕರ್ನಾಟಕ ಗಿರಿಜನ ನಾಯಕ ಜನಾಂಗದ ಸಂಘಟನಾ ಸಮ್ಮೇಳನವು ನಡೆಯಿತು. ಈ ಸಮ್ಮೇಳನಕ್ಕೆ ಕರ್ನಾಟಕದ ವಿವಿಧ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ೧೯೯೯ರಲ್ಲಿ ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ಮಹಾಸಮ್ಮೇಳನ ನಡೆಯಿತು. ನಂತರ ೧೧.೧೧.೨೦೦೧ರಲ್ಲಿ ಬೆಳಗಾವಿಯಲ್ಲಿ ರಾಜ್ಯಮಟ್ಟದ ವಾಲ್ಮೀಕಿ ಜಯಂತೋತ್ಸವ ಮತ್ತು ಸಮ್ಮೆಳನ ನಡೆಯಿತು. ಹೀಗೆ ಹಂತ ಹಂತವಾಗಿ ನಡೆಯುತ್ತಾ ಬಂದಿರುವ ಸಮ್ಮೇಳನದಿಂದ ಪರಿಜ್ಞಾನರಾಗಿ ಬೇಡರು ಇದೀಗ ರಾಜ್ಯಾದ್ಯಂತ ಹಳ್ಳಿ ಹಳ್ಳಿಯಲ್ಲಿಯೂ ವಾಲ್ಮೀಕಿ ಜಯಂತೋತ್ಸವ ಮತ್ತು ಓಂದಿನ ಬೇಡರ ಚಾರಿತ್ರಿಕ ಮಹಾಪುರುಷರ ಹೆಸರಿನಲ್ಲಿ ಅನೇಕ ಸಂಘಟನೆಗಳು

ವೇದಿಕೆಗಳು ಹುಟ್ಟಿಕೊಳ್ಳುತ್ತಲಿವೆ. ಈ ಸಂಘಟನೆಗಳು ಇಂದು ದಾವಣಗೆರೆ ಜಿಲ್ಲೆಯಾದ್ಯಂತ ವಾಲ್ಮೀಕಿ ಸೇನೆಗಳು ಎಂಬ ಹೆಸರಿನ ಸಂಘಟನೆಗಳು ಕಂಡುಬರುತ್ತವೆ. ಇವು ತಮ್ಮ ಸಮುದಾಯ ದಲ್ಲಿ ಕಂಡುಬರುವ ಸಮಸ್ಯೆಗಳನ್ನು ಗಮನಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತಿವೆ.

ಕುಲಪಂಚಾಯಿತಿ

ಬುಡಕಟ್ಟು ಸಮುದಾಯಗಳ ಮುಖ್ಯವಾದ ಅಂಶಗಳಲ್ಲಿ ಕುಲಪಂಚಾಯಿತಿ ವ್ಯವಸ್ಥೆಯೂ ಒಂದಾಗಿದೆ. ನ್ಯಾಯ ಇತ್ಯಾರ್ಥದ ಒಂದು ವ್ಯವಸ್ಥೆಯ ಕುಲಪಂಚಾಯಿತಿ. ಹಿಂದೆ ಬೇಡರಲ್ಲಿ ತೆಗೆದುಕೊಳ್ಳುವ ತೀರ್ಮಾನಗಳಿಗೆ ವಿಶೇಷವಾದ ಸ್ಥಾನವನ್ನು ನೀಡಲಾಗುತ್ತಿತ್ತು. ಈ ತೀರ್ಮಾನಗಳು ಜನರ ಆಚರಣೆ, ಗೌರವ, ಆದರ್ಶ, ನಂಬಿಕೆ ಮೌಲ್ಯಗಳ ನ್ಯಾಯ ಪದ್ಧತಿಯನ್ನು ರೂಪಿಸುತ್ತಿದ್ದವು. ಆದರೆ ಇಂದು ಕುಲಪಂಚಾಯಿತಿಗಳು ಕಂಡುಬರುವುದಿಲ್ಲ. ಕಂಡುಬಂದರೂ ಅದು ಅಲ್ಲೊಂದು ಇಲ್ಲೊಂದು ಇರಬಹುದು. ಬೇಡರು ತಮ್ಮ ಸಮಸ್ಯೆಗಳನ್ನು ಕುಲಪಂಚಾಯಿತಿಯ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ನಂತರ ಊರು ಬೆಳದಂತೆ ಇವುಗಳಿಗೆ ನೀಡುವ ಮಹತ್ವ ಕಡಿಮೆಯಾಯಿತು. ಇಂದು ಪಂಚಾಯಿತಿ ಕಟ್ಟೆಗಳ ಮೇಲೆ ಯಾವುದೇ ಪಂಚಾಯಿತಿಗಳು ನಡೆಯುವುದಿಲ್ಲ. ವಕ್ತೃ ವಿವರದ ಪ್ರಕಾರ ಹಿಂದೆ ನಮ್ಮ ತಂದೆ ಊರಿನಲ್ಲಿ ಒಂದು ಕಟ್ಟೆಯ ಮೇಲೆ ಕೆಲವು ದೇವರ ಕಲ್ಲುಗಳನ್ನಿಟ್ಟು ಪೂಜೆ ಮಾಡುತ್ತಿದ್ದರು. ಆ ಕಟ್ಟೆಯ ಮೇಲೆಯೇ ನ್ಯಾಯ ತೀರ್ಮಾನ ಮಾಡಲಾಗುತ್ತಿತ್ತು. ಆದರೆ ಇಂದು ಇಂತಹ ಯಾವುದೇ ಪಂಚಾಯಿತಿಕಟ್ಟೆಗಳು ಕಂಡುಬರುವುದಿಲ್ಲ. ಅವು ಕಂಡುಬಂದರೂ ಇಂದು ಸೋಮಾರಿಗಳ ವಿಶ್ರಾಂತಿ ತಾಣಗಳಾಗಿವೆ. ಇಲ್ಲಿ ಯಾವುದೇ ನ್ಯಾಯ ತೀರ್ಮಾನಗಳು ನಡೆಯುವುದಿಲ್ಲ ಮತ್ತು ಇಂದು ನಿಷ್ಪಕ್ಷಪಾತವಾಗಿ ನ್ಯಾಯ ತೀರ್ಮಾನಿಸುವ ವ್ಯಕ್ತಿಗಳೇ ಕಾಣದಾಗಿದ್ದಾರೆ. ಇಂದು ಕಾನೂನಿನ ಪ್ರಭಾವಕ್ಕೆ ಒಳಗಾಗಿ ಯಾವುದೇ ನ್ಯಾಯ ತೀರ್ಮಾನಗಳು ನ್ಯಾಯಾಲಯ, ನ್ಯಾಯಾಧೀಶ, ನ್ಯಾಯವಾದಿ ಮತ್ತು ಪೋಲೀಸ್ ಠಾಣೆಗಳ ಪಾಲಗಿವೆ ಎಂದು ವಿವರಿಸಿದರು. ಇದಕ್ಕೆಲ್ಲ ಜಾಗತೀಕರಣ ಮತ್ತು ಶಿಕ್ಷಣದ ಪ್ರಭಾವವೇ ಕಾರಣವಾಗಿದೆ.

ಸಾಂಸ್ಕೃತಿಕ ಪಲ್ಲಟಗಳು

ಮಾನವ ಸಮಾಜ ಜೀವಿ, ಸಮೂಹ ಜೀವಿ, ಧಾರ್ಮಿಕ ಜೀವಿಯಾಗಿರುವಂತೆ ಸಾಂಸ್ಕೃತಿಕ ಜೀವಿಯೂ ಹೌದು. ಮಾನವನ ವ್ಯಕ್ತಿತ್ವವನ್ನು ರೂಪಿಸಲು ಅಥವಾ ಮಾನವನನ್ನು ಸಾಮಾಜಿಕ ಪ್ರಾಣಿಯನ್ನಾಗಿ ಪರಿವರ್ತನೆಗೊಳಿಸಲು ಸಂಸ್ಕೃತಿ ಮಹತ್ವದ ಪಾತ್ರವಹಿಸುತ್ತದೆ. ಮಾನವ ಮತ್ತು ಪ್ರಾಣಿಗಳ ನಡುವಿನ ಅಂತರವನ್ನು ವಿವರಿಸುವ ಸಾಧನವೇ ಸಂಸ್ಕೃತಿ. ಸಂಸ್ಕೃತಿಯು ಮಾನವನಿಗೊಂದು ವರದಾನವಿದ್ದಂತೆ ಮೆಕೈವರ್ ಮತ್ತು ಫೇಜ್ ಅವರು ಹೇಳುವಂತೆ ನಾವು ಹೇಗೆ ಇದ್ದೇವೆ ಎನ್ನುವುದು ನಮ್ಮ ಸಂಸ್ಕೃತಿ ನಾವು ಏನನ್ನು ಪಡೆದುಕೊಂಡಿದ್ದೇವೆ ಎನ್ನುವುದು ನಮ್ಮ

ನಾಗರೀಕತೆ ಎನ್ನುತ್ತಾರೆ.[5] ಸಂಸ್ಕೃತಿಯು ವಿಶಾಲವಾದ ಅರ್ಥದಲ್ಲಿ ಮಾನವನ ಆಚಾರ, ವಿಚಾರ, ಅವನು ಬದುಕುವ ರೀತಿ ನೀತಿ ಮತ್ತು ಅವನ ಬದುಕಿಗಾಗಿ ಉಪಯೋಗಿಸುವ ವಸ್ತುಗಳು ಅಡಗಿಕೊಂಡಿವೆ. ಸಂಸ್ಕೃತಿಯು ಎರಡು ಅಂಶಗಳಲ್ಲಿ ಕಂಡುಬರುತ್ತದೆ. ಸಾಮಾಜಿಕ ಅಂಶಗಳು ಮತ್ತು ಭೌತಿಕ ಅಂಶಗಳು ಸಾಮಾಜಿಕ ಅಂಶಗಳಿಗೆ ಸಂಸ್ಕೃತಿ ಎಂದು ಕರೆದರೆ ಭೌತಿಕ ಅಂಶಗಳಿಗೆ ನಾಗರಿಕತೆ ಎನ್ನಬಹುದು. ಸಂಸ್ಕೃತಿಯು ಸಮಾಜದ ಕನ್ನಡಿ. ಸಮಗ್ರ ವರ್ತನೆಗಳಿಗೆ ಮಾರ್ಗದರ್ಶನ ನೀಡುವ ಪ್ರಬಲ ಶಕ್ತಿಯಾಗಿದೆ. ಇದು ವ್ಯಕ್ತಿಯ ಜೀವನಪರ್ಯಂತ ಆವರಿಸಿರುತ್ತದೆ. ಸಂಸ್ಕೃತಿಯು ಮಾನವನ ಬದುಕಿನಲ್ಲಿ ತನ್ನ ಅವಶ್ಯಕತೆಗಳನ್ನು ಈಡೇರಿಸುವ ಮತ್ತು ಸಾಮಾಜಿಕ ಜೀವಿಯಾಗಿ ಬದುಕಲು ಮಾರ್ಗದರ್ಶನವಾಗಿದೆ. ಇದನ್ನು ನೋಡಿದಾಗ ಸಂಸ್ಕೃತಿ ಸಮಾಜದ ಅವಿಭಾಜ್ಯ ಅಂಗ.

ಸಮಾಜ ಮತ್ತು ಸಂಸ್ಕೃತಿಗಳೆರಡೂ ಅನ್ಯೋನ್ಯತೆ ಸಂಬಂಧಗಳನ್ನು ಹೊಂದಿದ ಸಮೂಹ ಮತ್ತು ಸಂಬಂಧಗಳ ಆಯಾಮದಲ್ಲಿ ಪ್ರಕಟಗೊಳ್ಳುವ ಸಾಮಾಜಿಕ ಸತ್ಯಗಳ ಮೊತ್ತವೇ ಸಮಾಜ. ಇದೇ ಮೊತ್ತದ ಕ್ರಿಯೆಯ ಆಯಾಮವೇ ಸಂಸ್ಕೃತಿ. ಸಂಸ್ಕೃತಿಯ ಮೂಲ ನಿರ್ಮಾಪಕರ ಮತ್ತು ನಿರ್ದೇಶಕರ ಮನುಷ್ಯ, ಟೈಲ್ಡ್ ಸಮಾಜಶಾಸ್ತ್ರಜ್ಞನು ಹೇಳುವಂತೆ ಮನುಷ್ಯನ ಶ್ರಮ ಎಷ್ಟು ಬಳಕೆಯಾಗುತ್ತದೊ ಅಷ್ಟಷ್ಟೂ ಸಂಸ್ಕೃತಿ ವಿಕಾಸವಾಗುತ್ತದೆ. ಮನುಷ್ಯನ ದೈಹಿಕ ಹಾಗೂ ಬೌದ್ಧಿಕ ಶ್ರಮ ಬಳಕೆಯಾದಂತೆಲ್ಲ ಬದಲಾವಣೆಗಳಾಗುತ್ತವೆ. ಹೊಸ ಹೊಸ ವಿನ್ಯಾಸಗಳು ರೂಪಗೊಳ್ಳುತ್ತವೆ. ಒಂದು ನಿರ್ಧಿಷ್ಟ ಸಮಾಜದ ಸದಸ್ಯರು ಹಂಚಿಕೊಳ್ಳುವ ಹಾಗೂ ಪ್ರಸಾರ ಮಾಡುವ ಜ್ಞಾನ ದೃಷ್ಟಿಕೋನ ಮತ್ತು ಸ್ವಾಭಾವಿಕ ನಡವಳಿಕೆಯ ನಮೂನೆಗಳ ಒಟ್ಟು ಮೊತ್ತವೇ ಸಂಸ್ಕೃತಿ ಎಂದು ಲಿಂಟನ್ ಹೇಳಿದ್ದಾರೆ. ಸಂಸ್ಕೃತಿಯು ಏಕ ವ್ಯಕ್ತಿಗೆ ಸೀಮಿತವಾದುದಲ್ಲ, ಅದೊಂದು ಸಾಮೂಹಿಕ ಪ್ರಕ್ರಿಯೆ.

ದೇವರು ಮತ್ತು ಧರ್ಮ

ಸಾಂಸ್ಕೃತಿಕ ಅಂಶಗಳಲ್ಲಿ ದೇವರು ಮತ್ತು ಧರ್ಮದ ಪರಿಕಲ್ಪನೆಯೂ ಒಂದು. ಧರ್ಮವು ಸೃಷ್ಟಿಯ ರಹಸ್ಯ ಆತ್ಮ ಪರಮಾತ್ಮ ಸಂಬಂಧ ಮಾನವ ಜೀವನದ ಅಂತಿಮ ಗುರಿ. ಇತ್ಯಾದಿ ನಿರೂಪಣೆಯನ್ನುಗೊಳಿಸುವಂತಹ ಇದೊಂದು ಮಾನವ ಜೀವನದ ಅವಿಭಾಜ್ಯ ಅಂಶವೂ ಆಗಿದೆ. ಧರ್ಮವನ್ನು ಒಂದು ಜನ ಸಮುದಾಯದ ಜೀವನ ಮಾಡುವ ಶ್ರಮ ಅಥವಾ ವಿಧಾನವೆಂದು ಪರಿಗಣಿಸಬಹುದು. ಬುಡಕಟ್ಟುಗಳಲ್ಲಿ ಬಹುತೇಕವಾಗಿ ಅವರ ಬದುಕಿನಲ್ಲಿ ದೇವರು ಮತ್ತು ಧರ್ಮದ ಮೌಲ್ಯಗಳು ಕಂಡುಬರುತ್ತವೆ. ಸಂಸ್ಕೃತಿಯು ಏಕಕಾಲದಲ್ಲಿ ಸ್ಥಿರವೂ ಚಲನಶೀಲವೂ ಆಗಿರುತ್ತದೆಂದು ಸಮಾಜಶಾಸ್ತ್ರಜ್ಞ ಹರಸ್ಕೊವಿಟ್ಸರ್ ಹೇಳಿಕೆ ಬುಡಕಟ್ಟು ಸಮುದಾಯಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಸಮಾಜದಲ್ಲಿ ಹೇಳೆಯ ಆಚಾರ ವಿಚಾರಗಳು ಹೊಸ ಜೀವನ

ವಿಧಾನವನ್ನು ನೋಡಬಹುದು. ಈ ಹಿನ್ನೆಲೆಯಲ್ಲಿ ಬೇಡರು ಮೂಲತಃ ಪ್ರಕೃತಿಯ ಆರಾಧಕರು. ಸೂರ್ಯಚಂದ್ರ ಗಿಡ, ಪ್ರಾಣಿ ಪಕ್ಷಿಗಳನ್ನು ಪೂಜಿಸಿಕೊಂಡು ಬಂದವರು. ಕಾಲಕ್ರಮೇಣ ಮೂರ್ತಿಪೂಜೆಯು ಪ್ರಕೃತಿ ಆರಾಧನೆಯ ಜೊತೆಗೂಡಿತು. ಬೇಡರಲ್ಲಿ ಶೈವ ಪರಂಪರೆಯ ಆರಂಭದಲ್ಲಿ ಕಂಡುಬಂದಿತ್ತಾದರೂ ಜೊತೆಗೆ ವೈಷ್ಣವ ಮತ್ತು ಶಾಕ್ತ ಪರಂಪರೆ ಕಂಡುಬಂದಿತು. ದ್ರಾವಿಡ ಪಶುಪಾಲಕರ ಸಮುದಾಯಗಳಲ್ಲಿ ಒಂದಾದ ಬೇಡರು ಭೈರ, ಸಿದ್ಧ, ಶಿವ, ನಾಥಪಂಥ ಗಳನ್ನು ಆರಾಧಿಸುತ್ತಾ ಬಂದರು. ಜೊತೆಗೆ ವೈಷ್ಣವರ ಪ್ರಭಾವವೂ ಕಂಡುಬಂದಿತು. ಶಿವಭಕ್ತರಲ್ಲಿ ಒಬ್ಬನಾದ ಬೇಡರ ಕಣ್ಣಪ್ಪ ಬೇಡ ಸಮುದಾಯದವನೆಂದು. ಹೀಗಾಗಿ ಬೇಡರು ಕನ್ನಯ್ಯನ ಮಕ್ಕಳು ಎಂದು ಹೇಳಿಕೊಳ್ಳುವರು. ಇದರಿಂದ ಬೇಡರಿಗೆ ಮಹಾಶಿವರಾತ್ರಿ ಪವಿತ್ರವಾದುದೆಂದು ಭಾವಿಸಲಾಗಿದೆ. ನಂತರ ೧೭ನೇ ಶತಮಾನದ ಹೊತ್ತಿಗೆ ಶೈವ ಮತ್ತು ಜೈನ ಸಂಪ್ರದಾಯಗಳ ಸ್ಥಾನವನ್ನು ವೈಷ್ಣವ ಸಂಪ್ರದಾಯ ಆಕ್ರಮಿಸಿಕೊಂಡಿತು. ಇದರಿಂದ ಬೇಡರು ವೈಷ್ಣವ ಸಂಪ್ರದಾಯವನ್ನು ಅನುಸರಿಸಿ ವೆಂಕಟೇಶ್ವರ, ರಂಗನಾಥ ದೇವರುಗಳ ಪ್ರಭಾವಕ್ಕೆ ಒಳಗಾದವರು. ಅಲ್ಲದೇ ಹನುಮಂತನೂ ಒಂದು ಮಹತ್ವದ ದೇವರಾಗಿ ಪ್ರಸಿದ್ಧಿಗಳಿಸಿದನು. ಬೇಡರಲ್ಲಿ ಮುದ್ರೆ ಹಾಕುವ ಪದ್ಧತಿ ಆಚರಣೆಯಲ್ಲಿದೆ. ಶಂಖ ಮತ್ತು ಚಕ್ರ ಮುದ್ರೆಗಳಿಂದ ಭುಜಗಳೆರಡಕ್ಕೂ ಒತ್ತುವ ಈ ಕಾರ್ಯಕ್ರಮ ಆಗದೆ ಹೊರತು ಮದುವೆ ಮತ್ತು ಪ್ರಮುಖ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ಈ ಒಂದು ಪದ್ಧತಿಯು ದೊರೆಗಳ ಸಮ್ಮುಖದಲ್ಲಿಯೇ ನಡೆಯಬೇಕಾಗಿತ್ತು. ನಂತರ ೧೨ನೇ ಶತಮಾನದ ಹೊತ್ತಿಗೆ ವೀರಶೈವ ಧರ್ಮವು ಪ್ರಭಾವ ಬೀರಿತು. ವೀರಶೈವ ಧರ್ಮದ ಸಿದ್ಧಾಂತಗಳನ್ನು ಗೌರವಿಸಿದರು.

ಆದರೆ ಪ್ರಸ್ತುತ ದಿನಗಳಲ್ಲಿ ಹಿಂದಿದ್ದ ವೀರಶೈವ ಧರ್ಮಾಚರಣೆ ಕಡಿಮೆಯಾಗಿ ವಾಲ್ಮೀಕಿ ನಾಯಕ ಮಹಾಸಂಸ್ಥಾನದ ಮೊದಲ ಪೀಠಾಧೀಶ್ವರರಾದ ಶ್ರೀ ಪುಣ್ಯಾನಂದಪುರಿ ಸ್ವಾಮಿಗಳು ಬೇಡರನ್ನು ಒಂದುಗೂಡಿಸಲು ಅವರಲ್ಲಿ ಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿರುವುದು ಸ್ಮರಣೀಯ. ಧಾರ್ಮಿಕ ಕಂದಾಚಾರಗಳನ್ನು ಅಂದರೆ ಬಲಿಕೊಡುವುದು, ದೇವದಾಸಿ ಬಿಡುವುದು ಮುಂತಾದ ಅನೇಕ ಪದ್ಧತಿಗಳನ್ನು ಬೇಡರಿಂದ ತಗೆದು ಹಾಕುವ ಪ್ರಯತ್ನ ಅವರದಾಗಿತ್ತು. ಇದರಿಂದ ಬೇಡರಿಗೆ ನವಶಕ್ತಿ ಬಂದಂತಾಯಿತು. ಬೇಡರ ಮೇಲೆ ಇಂದು ಇತರೇ ಧರ್ಮಗಳ ಪ್ರಭಾವವೂ ಆಗಿದೆ. ೨೦೦೧ರ ಜನಗಣತಿಯ ಪ್ರಕಾರ ಶೇ. ೯೯.೯೧ರಷ್ಟು ಬೇಡರು ಹಿಂದೂ ಧರ್ಮವನ್ನು ಆಚರಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೇ ಕ್ರೈಸ್ತ, ಇಸ್ಲಾಂ, ಬೌದ್ಧ, ಇತರೆ ಧರ್ಮಗಳ ಪ್ರಭಾವವೂ ಇರುವುದು ಕಂಡುಬರುತ್ತದೆ. ಇವರು ಮುಸ್ಲಿಂ ಹಬ್ಬವಾದ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಬಹುತೇಕ ಹಿಂದೂಗಳೇ ಇಂದು ಹೆಚ್ಚಾಗಿ ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ದರ್ಗಾಗಳಿಗೆ ಭಕ್ತಿಪೂರ್ವಕವಾಗಿ ಹೋಗಿ ಬರುವ ಅನೇಕ ಬೇಡರು ಇದ್ದಾರೆ. ಅಲ್ಲಗೆ ಬೇಡರು ಸಂತರ ಹೆಸರುಗಳನ್ನು ಇಟ್ಟಿರುವುದು ಸಹ ಕಾಣಬಹುದು. ಯಮನೂರಪ್ಪ ,

ಹೊನ್ನೂರಪ್ಪ, ಹೊನ್ನೂರಸ್ವಾಮಿ ಇದನ್ನೆಲ್ಲ ನೋಡಿದಾಗ ಇಂದು ಪ್ರಸ್ತುತ ಕಾಲಘಟಕ್ಕೆ ಬೇಡರು ಸಮನ್ವಯ ದೇವರು ಮತ್ತು ಧರ್ಮ ಆರಾಧಕರಾಗಿದ್ದಾರೆಂದು ಕಂಡುಬರುತ್ತದೆ.

ಹಬ್ಬ ಹರಿದಿನಗಳು

ಹಿಂದೆ ಅರಣ್ಯವಾಸಿಗಳಾಗಿದ್ದ ಬೇಡರರಿಗೆ ಹಬ್ಬಹರಿದಿನಗಳು ಅಷ್ಟು ಪ್ರಮುಖವಾಗಿರಲಿಲ್ಲ ಇವರಿಗೆ ಊರಿನ ಒಟ್ಟಿನವರ ಹಬ್ಬಕ್ಕಿಂತ ಬುಡಕಟ್ಟು ದೇವರುಗಳ ಜಾತ್ರೆ ಉತ್ಸವಗಳೇ ಹಬ್ಬದಂತೆ. ಹೀಗಾಗಿ ಅಲೆಮಾರಿಗಳಾಗಿದ್ದ ಇವರಲ್ಲಿ ದೀಪಾವಳಿ, ಯುಗಾದಿ, ವಿನಾಯಕ ಚೌತಿ, ಇಂತಹ ಹಬ್ಬಗಳನ್ನು ಆಚರಿಸಲ್ಪಡುತ್ತಿರಲಿಲ್ಲ. ಆದರೆ ಇಂದು ಬದಲಾವಣೆಯ ರೂಪಗಳನ್ನು ಕಂಡುಕೊಂಡಿದೆ.

೧. **ಮುಂಗಾರಿ ಹಬ್ಬ** : ಇದು ಹೆಚ್ಚಾಗಿ ಎತ್ತುಗಳಿಗೆ ಸೀಮಿತವಾದ ಹಬ್ಬವಾಗಿದೆ. ಈ ಹಬ್ಬದಲ್ಲಿ ಹೆಚ್ಚಾಗಿ ದನಕರುಗಳನ್ನು ಅಲಂಕರಿಸಿ ಪೂಜಿಸುವ ಹಬ್ಬ. ಈ ಹಬ್ಬದಲ್ಲಿ ವಿಶೇಷವಾಗಿ ಎತ್ತುಗಳನ್ನು ಅಲಂಕರಿಸಿ ಅವುಗಳನ್ನು ನಡುಮನೆಯಲ್ಲಿ ತಂದು ಕರಿಕಂಬಳಿಯ ಮೇಲೆ ನಿಲ್ಲಿಸಿ ಅವುಗಳನ್ನು ಪೂಜೆ ಮಾಡಿ ಆರತಿ ಬೆಳಗುತ್ತಾರೆ. ನಂತರ ಅವುಗಳಿಗೆ ವಿಶೇಷವಾಗಿ ಜೋಳವನ್ನು ಕುಟ್ಟಿ ಜೋಳದ ಅಕ್ಕಿಯಿಂದ ಅನ್ನವನ್ನು ಮಾಡಿ ಬಾಳೆಹಣ್ಣು ಮತ್ತು ಅನ್ನ(ಬಾನ)ವನ್ನು ತಿನ್ನಲು ಕೊಡುತ್ತಾರೆ. ಅದು ತಿಂದು ಬಿಟ್ಟಿದ್ದನ್ನ ಪ್ರಸಾದವೆಂದು ಎತ್ತಿಕೊಳ್ಳುತ್ತಾರೆ. ಮತ್ತೇ ಸಂಜೆಯ ಹೊತ್ತಿಗೆ ಅವುಗಳನ್ನು ಅಲಂಕಾರ ಮಾಡಿ ಊರೆಲ್ಲಾ ಮೆರವಣಿಗೆ ಮಾಡಿಸಿ ವಾಪಾಸ್ ಮನೆಯ ಕಡೆಗೆ ಬಂದಾಗ ಹೆಂಗಸರು ಅವುಗಳಿಗೆ ಮತ್ತೊಮ್ಮೆ ಆರತಿ ಎತ್ತಿ ಒಳಗಡೆ ಕರೆದುಕೊಳ್ಳುತ್ತಾರೆ. ನಂತರ ಮನೆಯವರೆಲ್ಲರೂ ಅದೇ ವರ್ಷ ಬೆಳೆದ ದವಸಧಾನ್ಯಗಳಿಂದ ಅಡುಗೆ ಮಾಡಿ ಎಲ್ಲರೂ ಊಟ ಮಾಡುತ್ತಾರೆ. ಊಟ ಮಾಡಿದ ನಂತರ ಎತ್ತುಗಳಿಗೆ ನಮಸ್ಕರಿಸುತ್ತಾರೆ. ಈ ಆಚರಣೆಯು ಬೇಡರಲ್ಲಿ ಇಂದಿಗೂ ಕಂಡುಬರುತ್ತದೆ.

೨. **ನಾಗರಪಂಚಮಿ** : ಇದು ಶ್ರಾವಣ ಮಾಸದಲ್ಲಿ ಬರುವ ಹಬ್ಬ. ಆ ತಿಂಗಳ ನಾಲ್ಕನೇ ವಾರದಲ್ಲಿ ಸಾಮಾನ್ಯವಾಗಿ ಈ ಹಬ್ಬವನ್ನು ಆಚರಿಸುವುದುಂಟು. ಹೆಂಗಸರು ಬೆಳಿಗ್ಗೆ ಎದ್ದು ಮಡಿಯುಟ್ಟು ತಂಬಿಟ್ಟು ಅಕ್ಕಿ ಮತ್ತು ಬೆಲ್ಲದಿಂದ ತಯಾರಿಸಿದ್ದು ಊದುಬತ್ತಿ ಹೂವು ತೆಗೆದು ಕೊಂಡು ಹುತ್ತವನ್ನು ಪೂಜಿಸಿ ಹಾಲನ್ನ ಹುತ್ತದ ಬಾಯಿಗೆ ಹಾಕುತ್ತಾರೆ. ಬೇಡರು ಮುಂಗಾರಿ ಹಬ್ಬದಲ್ಲಿ ತಮ್ಮ ಆಸ್ತಿ ಐಶ್ವರ್ಯ ಸಂಪತ್ತೆಂದು ತಿಳಿದು ಗೋವುಗಳನ್ನು ಪೂಜಿಸದರೆ ತಮಗೆ ಶತ್ರುವಾಗಿರುವ ನಾಗಪ್ಪನನ್ನು ಶ್ರಾವಣದಲ್ಲಿ ಪೂಜಿಸುತ್ತಾರೆ. ಒಂದು ರಕ್ಷಕ ದೈವ ಇನ್ನೊಂದು ಶಿಕ್ಷಕ ದೈವ ಒಂದು ಬೇಡರಿಗೆ ಪ್ರೀತಿಗೆ ಕಾರಣವಾದ ಪ್ರಾಣಿಯಾದರೆ ಇನ್ನೊಂದು ಭಿತಿಗೆ ಆಸ್ಪದ ಕೊಡುವ ಪೂಜಿಸಿಕೊಳ್ಳುವ ದೈವವಾಯಿತು. ಇದು ಇಂದಿಗೂ ಇವರಲ್ಲಿ ಕಂಡುಬರುತ್ತದೆ.

೩. **ಹಿರಿಯರ ಹಬ್ಬ** : ಆಶ್ವೀಜ ಮಾಸದಲ್ಲಿ ಈ ಹಬ್ಬ ಬರುತ್ತದೆ. ಆದಿನ ಬೇಡರು ದೇವರ ಫೋಟೋ ಇಟ್ಟು ಪೂಜೆ ಮಾಡುವುದರ ಬದಲು ಆ ಜಾಗದಲ್ಲಿ ಹಿಂದಿನ ಕಾಲದಲ್ಲಿ ಹಿರಿಯರಿಗೆ

ಬೇಟೆಯಾಡಲು ನೆರವಾಗಿರುವ ಆಯುಧಗಳನ್ನು ಅಂದರೆ ಬಿಲ್ಲು, ಬಾಣ, ಈಟಿ, ಭರ್ಜಿ, ಕಠಾರಿ, ಕತ್ತಿ ಎಲ್ಲವನ್ನೂ ಹಿರಿಯರ ಹೆಸರಿನಲ್ಲಿಟ್ಟು ಪೂಜಿಸುತ್ತಿದ್ದರು. ಆದರೆ ಇಂದು ಇದು ಬದಲಾವಣೆಯ ಸ್ವರೂಪವನ್ನು ಪಡೆದುಕೊಂಡಿದೆ. ಆಯುಧಗಳ ಬದಲಾಗಿ ಕರಿಕಂಬಳಿ ಹಾಸಿ ತಂಬಿಗೆಯ ನೀರನ್ನು ತುಂಬಿಟ್ಟು ಪೂಜಿಸುತ್ತಾರೆ. ನಂತರ ತಮ್ಮ ಬಂಧುಬಳಗಕ್ಕೆಲ್ಲಾ ಊಟವಾದ ಮೇಲೆ ವೀಳ್ಯಕೊಟ್ಟು ಕಳುಹಿಸುವ ಪದ್ಧತಿಯಾಗಿ ಬದಲಾವಣೆಯಾಗಿದೆ.

೪. **ಸೀಗೆ ಹುಣ್ಣಿಮೆ** : ಈ ಹಬ್ಬವನ್ನು ಭೂಮಿಯು ಒಂದು ಹೆಣ್ಣು ಅನ್ನುವ ಪರಿಕಲ್ಪನೆಯಲ್ಲಿ ಪೂಜಿಸಲಾಗುತ್ತದೆ. ಆ ದಿನ ವಿಶೇಷವಾಗಿ ಎಳ್ಳುಹಚ್ಚಿದ ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಗೋದಿ ಹುಗ್ಗಿ, ಅಕ್ಕಿ ಹುಗ್ಗಿ, ಪುಂಡಿಪಲ್ಯ, ಕುಂಬಳಕಾಯಿ, ಪಲ್ಯ, ಎಣ್ಣೆಗಾಯಿ, ಹುರಿಹಕ್ಕಿ ಹೋಳಿಗೆ, ಕರ್ಚಿಕಾಯಿ ಈ ಎಲ್ಲಾ ಪದಾರ್ಥಗಳನ್ನು ಸ್ವಲ್ಪ ಸ್ವಲ್ಪ ತೆಗೆದುಕೊಂಡು ಹೋಗಿ ಹೋಲದ ತುಂಬೆಲ್ಲಾ *ಹುಲಿಗ್ಗೋ, ಹುರಿಗ್ಗೊ* ಎಂಧು ಹೇಳುತ್ತಾ ಎರಚುವರು ಇದನ್ನು ಚರಗಚಲ್ಲುವುದು ಎನ್ನುತ್ತಾರೆ. ಇದು ಇಂದಿಗೂ ಬೇಡರಲ್ಲಿ ಆಚರಣೆಯಲ್ಲಿರುವುದು ಕಂಡುಬರುತ್ತದೆ.

೫. **ಮಣ್ಣೆತ್ತಿನ ಅಮವಾಸ್ಯೆ** : ಇದು ಮಣ್ಣು ಮತ್ತು ಎತ್ತುಗಳಿಗೆ ಕೃತಜ್ಞತಾ ರೂಪದಲ್ಲಿ ಆಚರಿಸಲ್ಪಡುವ ಹಬ್ಬವಾಗಿದೆ. ಇಲ್ಲಿ ಊರ ಮುಂದಿನ ಕೆರೆ ಅಥವಾ ಹೊಲದಲ್ಲಿನ ಮಣ್ಣನ್ನು ತಂದು ಅದರಿಂದ ಎರಡು ಎತ್ತುಗಳನ್ನು ಮಾಡಿ ಅವುಗಳನ್ನು ದೇವರ ಜಗುಲಿಯ ಮೇಲಿಟ್ಟು ಹೋಳಿಗೆಯ ನೈವೆದ್ಯ ಮಾಡಿ ಪೂಜಿಸುತ್ತಾರೆ. ಈ ಸಂದರ್ಭದಲ್ಲಿ ಭಿತ್ತನೆಯ ಕಾರ್ಯ ಮುಗಿದು. ಬಿತ್ತಿದ ಬೀಜಗಳೆಲ್ಲಾ ಸಸಿಯಾಗಿ ತಲೆ ಎತ್ತಿ ನಿಂತಿರುತ್ತವೆ. ಹಸಿರು ತುಂಬಿದ ಭೂಮಿತಾಯಿಯ ನೋಟ ರೈತನ ಕಣ್ಣ್‌ಮನಗಳಿಗೆ ಹರುಷವನ್ನುಂಟು ಮಾಡುತ್ತವೆ. ಈ ಸಮಯದಲ್ಲಿ ರೈತನಿಗೆ ಯಾವುದೇ ಕೆಲಸವಿಲ್ಲದ ವಿಶ್ರಾಂತಿ ಸಮಯವಾಗಿರುತ್ತದೆ. ಅಲ್ಲದೆ ತನ್ನೊಡನೆ ದುಡಿದ ಬಸವಣ್ಣನಿಗೆ ವಿಶ್ರಾಂತಿಯ ಕಾಲವಿದು. ಮಣ್ಣಿಗೂ ಬಸವಣ್ಣನಿಗೂ ಇರುವ ಸಂಬಂಧವನ್ನು ನೆನೆದು ಹಿಗ್ಗುತ್ತಾನೆ. ಅದು ಸಾಕಾಗದೆ ತನ್ನ ಹೊಲದಲ್ಲಿರುವ ಮಣ್ಣನ್ನು ಎತ್ತಿಕೊಂಡು ಬಂದು ಮಣ್ಣಿನ ಬಸವಣ್ಣ(ನಂದಿ)ಗಳನ್ನು ಮಾಡಿ ಪೂಜೆಗೈದು ಮಣ್ಣಿನ ಮೂಲಕ ಎತ್ತುಗಳಿಗೂ ಎತ್ತುಗಳ ಮೂಲಕ ಮಣ್ಣಿಗೂ ಕೃತಜ್ಞತೆಯನ್ನು ಅರ್ಪಿಸುತ್ತಾನೆ. ಇದನ್ನು ಬಸವಜಯಂತಿ ಎಂತಲೂ ಕರೆಯುತ್ತಾರೆ. ಆದರೆ ಪ್ರಸ್ತುತ ದಿನಗಳಲ್ಲಿ ಈ ಆಚರಣೆ ತೆರೆಮರೆಯಲ್ಲಿ ಸರಿಯುತ್ತಿದೆ. ಕಾರಣ ರೈತನು ಇಂದು ಅನೇಕ ಕೃಷಿ ಮಾಡುವ ಯಂತ್ರಗಳ ಬಳಕೆಗೆ ಮಾರು ಹೋಗಿದ್ದಾನೆ. ಇಂದು ಎತ್ತಿನ ಬದಲಾಗಿ ಟ್ರಾಕ್ಟರ್, ಬಿತ್ತನೆಯ ಯಂತ್ರ ಮುಂತಾದವುಗಳು ಬಳಕೆಯಾಗುತ್ತಿವೆ. ಇಂದು ಈ ಹಬ್ಬವು ಆಚರಣೆಯು ಬೇಡರಲ್ಲಿ ನೆಪವಾಗಿ ಉಳಿದಿದೆ ಎಂದು ಹೇಳಬಹುದು.

೬. **ಯುಗಾದಿ** : ಬುಡಕಟ್ಟು ಜನರ ಸಂಸ್ಕೃತಿಯೇ ಒಂದು ವಿಶೇಷ ಸಂಸ್ಕೃತಿ ಎಂದು ತೋರಿಸುವುದೇ ಯುಗಾದಿಯ ಆಚರಣೆಯಾಗಿದೆ ಎಂದೇ ಹೇಳಬಹುದು. ಇಂದಿನ ಆಧುನಿಕ

ಯುಗದಲ್ಲಿಯೂ ಇದರ ಮಹತ್ವ ಕಡಿಮೆಯಾಗಿಲ್ಲ. ಅಲೆಮಾರಿಗಳಾಗಿದ್ದ ಬೇಡರು ಯುಗಾದಿಯಲ್ಲಿ ಪಾಡ್ಯದ ದಿನ ಪ್ರತಿಯೊಬ್ಬರೂ ತಮ್ಮ ಮನೆಗಳಿಗೆ ಮಾವಿನ ತೋರಣಗಳನ್ನು ಕಟ್ಟುತ್ತಾರೆ. ಬೇವಿನ ಎಲೆಗಳನ್ನು ಅದರಲ್ಲಿ ಸೇರಿಸುತ್ತಾರೆ. ಮನೆಯಲ್ಲಿ ನೀರನ್ನು ಬಿಸಿಮಾಡಿ ಮೈಯಿಗೆ ಎಣ್ಣೆಯನ್ನು ಹಚ್ಚಿ ನೀರಿನಲ್ಲಿ ಬೇವಿನ ಎಲೆಯನ್ನು ಹಾಕಿಕೊಂಡು ಸ್ನಾನ ಮಾಡುತ್ತಾರೆ. ನಂತರ ಬೇವು ಹಾಗೂ ಬೆಲ್ಲವನ್ನು ಸೇರಿಸಿದ ಪುಡಿಯನ್ನು ಸೇವಿಸುತ್ತಾರೆ. ಅಂದರೆ ಬಾಳಿನಲ್ಲಿ ಕಷ್ಟ ಹಾಗೂ ಸುಖಗಳು ಸಮನಾಗಿ ಬರಲಿ ಎಂದು, ಈ ಹಬ್ಬದ ಮರುದಿನ ಬೇಡರು ಚಾಚೂತಪ್ಪದೇ ಬೇಟೆ ಯಾಡಲು ಹೋಗುತ್ತಿದ್ದರು. ಇಂದು ಬರುಬರುತ್ತಾ ಇದು ನೇಪಮಾತ್ರಕ್ಕೆ ಹೋಗುವಂತದ್ದಾಗಿದೆ. ಕಾರಣ ಕಾಡುಗಳ ನಾಶ ಒಂದಡೆಯಾದರೆ ಮತ್ತೊಂದೆಡೆ ಕಾನೂನಿನ ಬಿಕ್ಕಟ್ಟು ಈ ಹಬ್ಬದಿಂದಲೇ ಬೇಡರಿಗೆ ಹಬ್ಬಳು ಪ್ರಾರಂಭ ನಂತರವೇ ನಮ್ಮ ಹಬ್ಬಳು ಒಂದಾದನಂತರ ಒಂದು ಬರುತ್ತವೆ ಎಂಬುದೇ ಇವರ ನಂಬಿಕೆ. ಆದರೆ ಯುಗಾದಿಯ ಮರುದಿನ ಬೇಟೆಯಾಡುವ ಸಂಪ್ರದಾಯ ಬೇಟೆಯಾಡಲು ಬಳಸುತ್ತಿದ್ದ ಆಯುಧಗಳು ಇವುಗಳೆಲ್ಲಾ ಇಂದು ತೆರೆಮರೆಗೆ ಸರಿಯುತ್ತಿವೆ. ಬೇಟೆಯೇ ಮುಖ್ಯ ಕಸುಬಾಗಿದ್ದ ಬೇಡರಿಗೆ ಇಂದು ನಾಮಮಾತ್ರಕ್ಕೆ ಒಂದು ಆಚರಣೆಯಾಗಿ ಪರಿಣಮಿಸಿದೆ.

೭. **ಶಿವರಾತ್ರಿ** : ಶಿವರಾತ್ರಿಯು ಬೇಡರು ಹೆಚ್ಚು ಆಚರಿಸುತ್ತಿರುವ ಹಾಗೂ ಸಂಪ್ರದಾಯಬದ್ಧ ಹಬ್ಬವಾಗಿದೆ. ಬೇಡರ ಕಣ್ಣಪ್ಪ ಎಂಬ ಶಿವಭಕ್ತನ ಹಿನ್ನೆಲೆಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಏಕೆಂದರೆ ಬೇಡರ ಕಣಪ್ಪ ಬೇಡರವನು ಎಂಬುವ ಉಲ್ಲೆಖವನ್ನು ನಾವು ಇತಿಹಾಸದಿಂದ ತಿಳಿಯುತ್ತೆವೆ. ಶಿವರಾತ್ರಿ ಅಮವಾಸ್ಯೆಯ ದಿನದಂದು ಜಾಗರಣೆ ಮಾಡುವುದರ ಮೂಲಕ ಅಂದು ಸಂಜೆ ಬೇಡರು ಅಲ್ಲಿರುವ ಶಿವನ ಗುಡಿಗೆ ಹೋಗಿ ಹಣ್ಣು ಕಾಯಿಗಳನ್ನು ತಂದು ಪೂಜೆ ಸಲ್ಲಿಸುತ್ತಾರೆ. ಈ ಹಬ್ಬವನ್ನು ಬೇಡರಷ್ಟೇ ಅಲ್ಲ ಎಲ್ಲ ಸಾಮಾನ್ಯ ಜನರು ಆಚರಿಸುತ್ತಾರೆ. ರಾತ್ರಿ ಇಡೀ ಜಾಗರಣೆ ಮಾಡುತ್ತಾರೆ. ಭಜನಾ ತಂಡಗಳು ರಾತ್ರಿ ಇಡೀ ತಮ್ಮ ಕಲೆಯನ್ನು ತೋರಿಸುತ್ತಾ ಉಪವಾಸ ಮಾಡುವುದು ಅಂದಿನ ವಿಶೇಷವಾಗಿದೆ. ಕೆಲವೊಬ್ಬರು ಅಲ್ಪ ಆಹಾರವನ್ನು ಸೇವಿಸುತ್ತಾರೆ. ಇನ್ನು ದಾವಣಗೆರೆ ಜಿಲ್ಲೆಯಲ್ಲಿ ಈ ಹಬ್ಬವನ್ನು ಗಮನಿಸಿದಾಗ ಅರಸಿಕೆರೆ ಹತ್ತಿರ ಬೆಟ್ಟದ ಮೇಲಿರುವ ಕೊಟ್ಟೂರೇಶ್ವರ ದೇವಸ್ಥಾನ, ಹೊನ್ನಾಳಿ ತಾಲೂಕಿನಲ್ಲಿ ತೀರ್ಥರಾಮೇಶ್ವರ ದೇವಸ್ಥಾನ, ಚನ್ನಗಿರಿ ತಾಲೂಕಿನ ಸೂಳೆಕೆರೆ ಹತ್ತಿರವಿರುವ ಸಿದ್ಧೇಶ್ವರ ದೇವಸ್ಥಾನ ಮುಂತಾದ ಕಡೆಗಳಲ್ಲಿ ವಿಶೇಷ ಪೂಜೆ ಮಾಡಲಾಗುತ್ತದೆ. ಇಲ್ಲಿ ಬೆಟ್ಟದ ಮೇಲೆಯೂ ಸಹ ಭಜನಾ ತಂಡಗಳು, ಪುರಾಣ ಹೇಳುವವರು ಸಹ ಕಾಣಿಸಿಕೊಳ್ಳುತ್ತಾರೆ. ನಂತರ ಬೆಳಿಗ್ಗೆ ಪ್ರಸಾದ ಸ್ವೀಕರಿಸಿ ಮನೆಗೆ ಹಿಂದಿರುಗುತ್ತಾರೆ.

೮. **ದಸರಾ** : ದಸರಾ ಹಬ್ಬವು ಬೇಡರು ಆಚರಿಸುವ ವಿಶೇಷ ಹಬ್ಬವಾಗಿದೆ. ಇದು ಒಂದು ರೀತಿಯಲ್ಲಿ ಹಿರಿಯರನ್ನು ಮತ್ತು ಹಳೆಯ ಸಂಪ್ರದಾಯಗಳನ್ನು ನೆನಪಿಸಿಕೊಳ್ಳುವ ಹಬ್ಬವಾಗಿದೆ.

ದಸರಾ ದಿನದಂದು ಬೇಡರು ಸಂಜೆ ಬನ್ನಿ ಸೊಪ್ಪು ತಂದು ತಮ್ಮ ಮನೆಯಲ್ಲಿರುವ ಆಯುಧಗಳನ್ನು ಪೂಜೆ ಮಾಡುತ್ತಾರೆ. ಅವು ಈ ರೀತಿಯ ಉಪಕರಣಗಳಾಗಿರುತ್ತವೆ. ಕೊಡಲಿ, ಕುಡುಗೋಲು, ಕುರ್ಚಿ, ಗಂಡುಗೊಡಲಿ, ಈಳಿಗೆ, ಇತರ ವಸ್ತುಗಳಿಗೆ ಪೂಜೆಸಲ್ಲಿಸುತ್ತಾರೆ. ಅಲ್ಲದೇ ಮನೆಯಲ್ಲಿರುವ ಸೈಕಲ್, ಬೈಕ್, ಕಾರು, ವಿದ್ಯುತ್ ಯಂತ್ರಗಳನ್ನೂ ಸಹ ಪೂಜಿಸುತ್ತಾರೆ. ಅಂದರೆ ಈ ಹಿಂದೆ ಬೇಡರು ಬಳಸುತ್ತಿದ್ದ ಆಯುಧಗಳನ್ನು ಆಯುಧ ಪೂಜೆ ಎಂದು ಮಾಡುತ್ತಾರೆ. ಪ್ರಸ್ತುತ ದಿನಗಳಲ್ಲಿ ಕೆಲ ಒಂದು ಆಯುಧಗಳೇ ಇಲ್ಲದಂತಾಗಿರುವುದರಿಂದ ಸೈಕಲ್, ಈಳಿಗೆ, ವಿದ್ಯುತ್ ಯಂತ್ರಗಳೇ ಇಂದು ಆಯುಧಗಳಾಗಿವೆ. ಈ ಆಯುಧಗಳಿಗೆ ಬೇಡರಲ್ಲಿ ಸಾಮಾನ್ಯವಾಗಿ ಮಾಂಸದ ತುಂಡುಗಳನ್ನು ಕಡ್ಡಿಯಲ್ಲಿ ಚುಚ್ಚಿ ಎಡೆ ನೀಡುವ ಪದ್ಧತಿ ಹೆಚ್ಚಾಗಿ ಕಂಡುಬರುತ್ತದೆ. ಬೇಡರ ಮನೆಯಲ್ಲಿ ಹೆಚ್ಚಾಗಿ ಈ ಹಬ್ಬದಂದು ಸಿಹಿ ಊಟ ಮಾಡುವುದು ಕಡಿಮೆ. ಈ ಹಬ್ಬವನ್ನು ಬೇಡರು ಬನ್ನಿಕೊಡುವುದರ ಮೂಲಕ ಮತ್ತು ತೆಗೆದುಕೊಳ್ಳುವುದರ ಮೂಲಕ ಜಾತಿ ಬೇಧವಿಲ್ಲದೆ ಪರಸ್ಪರ ಒಬ್ಬರಿಗೊಬ್ಬರು ಬನ್ನಿಯನ್ನು ವಿನಿಮಯಿಸಿಕೊಂಡು ಈ ಹಬ್ಬವನ್ನು ಆಚರಿಸುತ್ತಾರೆ.

೯. **ವಾಲ್ಮೀಕಿ ಜಯಂತಿ :** ಇದು ಕರ್ನಾಟಕದ ಪ್ರತಿಯೊಂದು ಊರುಗಳಲ್ಲಿಯೂ ನೆಲೆಸಿರುವ ಬೇಡರಿಗೆ ಸೀಮಿತವಾಗಿರುವ ಹಬ್ಬವಾಗಿದೆ. ಇದು ಹಿಂದಿನ ಪೀಳಿಗೆಯಲ್ಲಿ ಕಂಡುಬರುವುದಿಲ್ಲ. ಇತ್ತೀಚೆಗೆ ಅಷ್ಟೇ ಆಚರಿಸುವ ಆಚರಣೆಯಾಗಿದೆ. ಬೇಡರಲ್ಲಿ ವಾಲ್ಮೀಕಿಯು ನಮ್ಮ ಮೂಲಪುರುಷನೆಂದು ನಂಬಲಾಗಿದೆ. ಆದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿ ದೇವಸ್ಥಾನಗಳಿಲ್ಲದಿದ್ದರೂ ಬೇಡರ ಮನೆಯಲ್ಲಿ ವಾಲ್ಮೀಕಿಯ ಭಾವಚಿತ್ರ ಇರುವುದು ಕಂಡುಬರುತ್ತದೆ. ಈ ಭಾವಚಿತ್ರಕ್ಕೆ ದಿನಾಲೂ ಪೂಜೆಯೂ ಸಹ ಸಲ್ಲಿಸುವವರಿದ್ದಾರೆ. ವಾಲ್ಮೀಕಿಯ ಜಯಂತಿಯ ದಿನದಂದು ವಾಲ್ಮೀಕಿ ಭಾವಚಿತ್ರವನ್ನು ಊರಿನ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡುವುದರ ಮೂಲಕ ವಿಶೇಷ ರೀತಿಯ ಕುಣಿತ, ಡೊಳ್ಳು, ಉರಿಮೆ, ಹಲಗೆ ಇತ್ಯಾದಿಗಳು ಇದಕ್ಕೆ ಮೆರಗನ್ನು ನೀಡುತ್ತವೆ. ಇಂದು ಊರಿನ ಪ್ರಮುಖ ಬೀದಿಯಲ್ಲಿ ರಾಜವೀರ ಮದಕರಿ ನಾಯಕನ ವೃತ್ತಗಳನ್ನು ನಿರ್ಮಿಸಲಾಗಿದೆ. ಇಂತಹ ಆಚರಣೆಯ ಜಯಂತಿ ಹಿಂದೆ ಇರಲಿಲ್ಲ. ಆದರೆ ಅದು ಇಂದು ಒಂದು ವಾರ್ಷಿಕ ಆಚರಣೆಯ ಹಬ್ಬವಾಗಿ ಬೆಳೆದು ನಿಂತಿದೆ. ಇಂದು ಈ ಹಬ್ಬಕ್ಕೆ ಸರ್ಕಾರವೂ ಸಹ ರಜೆಯನ್ನು ಘೋಷಣೆ ಮಾಡಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಇಂತಹ ಹಬ್ಬ, ಜಯಂತಿ ಆಚರಣೆಗಳಿಂದ ತಿಳಿದುಬರುವ ಮುಖ್ಯ ಅಂಶವೆಂದರೆ ಬೇಡರಲ್ಲಿ ಒಂದು ಕಾಲದಲ್ಲಿ ಇವರು ಮ್ಯಾಸಬೇಡರು, ಇವರು ಊರು ಬೇಡರು ಎಂಬ ಭಾವನೆಯು ಇತ್ತು ಇಂದು ಬದಲಾವಣೆಯನ್ನು ಕಂಡಿದೆ. ಅಲ್ಲದೇ ಇತರ ಸಮುದಾಯಗಳೊಂದಿಗೆ ಪರಸ್ಪರ ಸೌಹಾರ್ದಯುತವಾಗಿ ಬದುಕುವ ಪದ್ಧತಿಯು ನಿರ್ಮಾಣವಾಗಿದೆ.

ಇದರಿಂದ ಇನ್ನು ಮುಂದೆ ಬರುವ ಹೊಸ ತಲೆಮಾರುಗಳಿಗೆ ನಾವೆಲ್ಲರೂ ಒಂದೇ ಎಂಬ ಭಾವನೆಗೆ ಹಬ್ಬ ಹರಿದಿನಗಳು, ಆಚರಣೆಗಳೆಲ್ಲ ನಾಂದಿ ಹಾಡುತ್ತವೆ.

ಆಹಾರ ಪದ್ಧತಿ

ಆಹಾರ ಪದ್ಧತಿಗೆ ಸಂಬಂಧಪಟ್ಟಂತೆ ನೋಡುವುದಾದರೆ ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಆಹಾರವು ಬಹುಮುಖ್ಯವಾದದ್ದು. ಇದು ಮನುಷ್ಯರನ್ನು ಜೀವಿಸಲು ಪ್ರೇರಣೆ ನೀಡುತ್ತದೆ. ಬೇಡರಲ್ಲಿ ಅತಿ ಹೆಚ್ಚಾಗಿ ಚಿಕ್ಕದಾದ ತುಂಡು ಭೂಮಿಯನ್ನು ಹೊಂದಿದವರು ಕಂಡುಬರುತ್ತಾರೆ. ಮಳೆಗಾಲದ ಸಮಯದಲ್ಲಿ ಜೋಳ, ಸಜ್ಜೆ, ದ್ವಿದಳ ದಾನ್ಯಗಳು ಬೆಳೆದುಕೊಂಡು ತಮ್ಮ ಜೀವನಕ್ಕೆ ಆಹಾರವಾಗಿ ಬಳಕೆ ಮಾಡಿಕೊಳ್ಳುತ್ತಾರೆ. ಆಹಾರ ಪದ್ಧತಿಯಲ್ಲಿ ಅಂತಹ ವ್ಯತ್ಯಾಸವೇನು ಕಂಡು ಬರುವುದಿಲ್ಲ. ಒಂದು ಕಾಲದಲ್ಲಿ ಮ್ಯಾಸಬೇಡರು ಕೋಳಿ ಮತ್ತು ಅದರ ಮಾಂಸವನ್ನು ಮುಟ್ಟಿದರೆ ಅಪರಾಧವೇನೊ ಎನ್ನುವಷ್ಟರ ಮಟ್ಟಿಗೆ ಇದ್ದರು. ಆದರೆ ಇಂದು ಕೋಳಿಮಾಂಸವನ್ನು ತಿನ್ನುತ್ತಾರೆ. ಕೋಳಿಗಳನ್ನು ಸಹ ಸಾಕುತ್ತಾರೆ. ಬೇಡರು ಹಿಂದೆ ಹೆಚ್ಚಾಗಿ ಬೇಟೆಯಾಡಿ ತಂದು ಮಾಂಸದ ಅಡುಗೆಯನ್ನು ಮಾಡುತ್ತಿದ್ದರು. ಅಂದರೆ ಇಂದು ಅದು ಬದಲಾಗಿದೆ. ಬೇಟೆ, ಕಾಡುಗಳ ನಾಶ ಒಂದು ಕಡೆಯಾದರೆ ಮತ್ತೊಂದು ಕಡೆ ವೈಷ್ಣವ ಮತ್ತು ಶೈವ ಧರ್ಮಗಳೆರಡನ್ನೂ ಅನುಸರಿಸುತ್ತಿರುವ ಬೇಡರು ಧರ್ಮಸ್ಥಳದ ಮಂಜುನಾಥ, ತಿರುಪತಿ ವೆಂಕಟೇಶ, ಮಂತ್ರಾಲಯ ರಾಘವೇಂದ್ರ ಇತ್ಯಾದಿ ದೇವರುಗಳ ಆರಾಧಕರಾಗಿ ಊಟೋಪಚಾರಗಳಲ್ಲಿ ಬದಲಾವಣೇಯಾಗಿರುವುದು ಕಂಡುಬರುತ್ತದೆ. ಅಲ್ಲದೇ ಬೇಡರಲ್ಲಿ ಭೂಮಿ ಇಲ್ಲದವರು ಬೇರೆಯವರ ಭೂಮಿಯಲ್ಲಿ ಕೃಷಿ ಕಾರ್ಮಿಕರಾಗಿ ದುಡಿದು ಬಂದಂತಹ ಧಾನ್ಯಗಳನ್ನು ಉಪಯೋಗಿಸುತ್ತಾರೆ. ಇದರ ಜೊತೆಗೆ ಕುರುಚುಲು ಅರಣ್ಯದಲ್ಲಿ ದೊರೆಯುವ ಕೌಜುಗ, ಬುರ್ಲಿ, ಮೊಲ ಇತರೆ ಪ್ರಾಣಿ ಪಕ್ಷಿಗಳ ಮಾಂಸವನ್ನು ಸೇವನೆ ಮಾಡುತ್ತಾರೆ.

ಇಂದು ಕೃಷಿ ಕ್ಷೇತ್ರದಲ್ಲಾದ ಬದಲಾವಣೆಯಿಂದ ಮತ್ತು ನೀರಾವರಿ ವ್ಯವಸ್ಥೆಯ ಕಾರಣಗಳಿಂದ ಸಣ್ಣಪುಟ್ಟ ಭೂ ಹಿಡುವಳಿದಾರರು ತಮ್ಮ ಕೌಟುಂಬಿಕ ಆರ್ಥಿಕ ತೊಂದರೆಗಳಿಂದ ಭೂ ಮಾರಾಟ ಮಾಡಿಕೊಂಡು ದಿನ ಕೂಲಿಕೆಲಸಕ್ಕೆ ಹೋಗುತ್ತಾರೆ. ಇದರ ಜೊತೆಗೆ ಸರ್ಕಾರದಿಂದ ಕಡಿಮೆ ಬೆಲೆಗೆ ಸಿಗುವ ನ್ಯಾಯಬೆಲೆ ಅಂಗಡಿಯಲ್ಲಿ ವಿತರಿಸುವ ಅಕ್ಕಿ, ಗೋದಿ, ಮುಂತಾದ ಪದಾರ್ಥಗಳನ್ನು ಬಳಕೆ ಮಾಡಿಕೊಂಡು ತಮ್ಮ ಜೀವನ ನಿರ್ವಹಿಸುತ್ತಿದ್ದಾರೆ.

ಉಡುಗೆ ತೊಡುಗೆ

ಬೇಡ ಬುಡಕಟ್ಟಿನ ಆದಿಮ ಸಾಮಾಜಿಕ ಜೀವನವು ಇಂದಿನ ವಿಕಾಸ ಮುಖ ಸಂಸ್ಕೃತಿ ಪರ ಪ್ರತಿರೋದಿಸುವಾಗ ಉದ್ಭವಿಸುವ ಅನನ್ಯತೆಯ ಭಯವೂ ಎದ್ದು ಕಾಣುತ್ತದೆ. ಅದರಲ್ಲಿ ಸಮುದಾಯದ ಉಡುಗೆ ತೊಡುಗೆ ಶೈಲಿ, ಸಂಸ್ಕೃತಿ, ರೂಪಾಂತರತೆಗೆ ಇಂದು ವಿಶ್ಲೇಷಿಸುವುದು

ಕಷ್ಟದ ಕೆಲಸ. ಆದರೂ ಸಹ ಅಂದಿನ ಅನಿವಾರ್ಯತೆಯ ಸಂದರ್ಭದಲ್ಲಿ ಮನುಷ್ಯ ವೈಚಾರಿಕ ತಿಳುವಳಿಕೆಯ ಮೊದಲ ಘಟ್ಟವೇ ಅಂಗಾಂಶಗಳನ್ನು ಮುಚ್ಚಿಕೊಳ್ಳಲು ಮರದ ತೊಗಟೆ, ತಪ್ಪಲು, ಪ್ರಾಣಿಗಳ ಚರ್ಮ ಇತ್ಯಾದಿಗಳಿಂದ ರಕ್ಷಣೆ ಮಾಡಿಕೊಂಡು ವೇಷಭೂಷಣದ ಮೊದಲಕ್ರಾಂತಿಯನ್ನು ಹಾಡಿರುವವನೇ ಕಾಡಿನ ಮಾನವ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಇಂದು ಇದು ಯಾವುದೂ ಕಂಡುಬರುವುದಿಲ್ಲ. ವಸಾಹತುಶಾಹಿಯ ಪ್ರಭಾವದಿಂದ ತನಗಿಷ್ಟ ಬಂದಂತೆ ಉಡುಗೆ ತೊಡುಗೆಗಳನ್ನು ಧರಿಸಲು ಪ್ರಾರಂಭಿಸಿದ್ದಾನೆ. ಬೇಡರಲ್ಲಿ ಉಡುಗೆಗೆ ಸಂಬಂಧಪಟ್ಟಂತೆ ನೋಡುವು ದಾದರೆ ಗಂಡಸರು ಮೊದಲನೆ ತಲೆಮಾರಿನಲ್ಲಿ ಒಂದು ಚಡ್ಡಿ ಅಥವಾ ಚಲ್ಲಾಣ, ಹೆಗಲಮೇಲೆ ಕರಿಯ ಕಂಬಳಿ ಹಾಕಿಕೊಂಡು ಬದುಕುತ್ತಿದ್ದರು. ಈ ವ್ಯವಸ್ಥೆ ತೀರಾ ಸರಳವಾಗಿತ್ತು. ಸ್ವಲ್ಪ ವಯಸ್ಸಾದ ವ್ಯಕ್ತಿಗಳು ತಲೆಗೆ ರುಮಾಲು ಸುತ್ತುತ್ತಿದ್ದ ಪದ್ಧತಿಯೂ ಇತ್ತು. ಹಿಂದೆ ಕೇವಲ ಇವರ ಉಡುಗೆ ತೊಡುಗೆಗಳನ್ನು ನೋಡಿದ ಮಾತ್ರಕ್ಕೆ ಇವರು ಬೇಡರು ಎಂದು ಗುರುತಿಸುವ ಕಾಲ ಆದಾಗಿತ್ತು. ಇನ್ನೂ ಹೆಂಗಸರಿಗೆ ಸಂಬಂಧಿಸಿದಂತೆ ಹೇಳುವುದಾದರೆ ಹೆಂಗಸರು ಬಿಳಿಯ ದಟ್ಟಿ ಸೀರೆಗಳನ್ನು ಧರಿಸುತ್ತಿದ್ದರು. ರವಿಕೆ ಅಥವಾ ಕುಪ್ಪಸ ತೊಡುತ್ತಿರಲಿಲ್ಲ ಎನ್ನುವ ಅಭಿಪ್ರಾಯ ಕ್ಷೇತ್ರಕಾರ್ಯದಲ್ಲಿ ಸಂದರ್ಶಕ ಮಹಿಳೆಯರಿಂದ ತಿಳಿದು ಬಂದಿತು. ಆದರೆ ಇಂದು ನಂಬಲಾರದಷ್ಟು ಬದಲಾವಣೆಯಾಗಿದೆ. ಜಾಗತೀಕರಣ ಮತ್ತು ನಗರೀಕರಣದ ಗಾಳಿಯಿಂದಾಗಿ ಆಗಿದ್ದ ಚಡ್ಡಿ ಚಲ್ಲಣ ಹಾರಿ ಹೋಗಿ ಅಂಗಿ, ವಿವಿಧ ರೀತಿಯ ಪ್ಯಾಂಟುಗಳು, ಸೀರೆ, ರವಿಕೆಗಳು ಹೋಗಿ ನೈಟಿ, ಚೂಡಿದಾರ, ಮಿಡಿ ವಿವಿಧ ರೀತಿಯ ಸೀರೆಗಳು ಬಂದಿವೆ. ಪ್ರಸ್ತುತ ದಿನಗಳಲ್ಲಿ ಇವುಗಳನ್ನು ಧರಿಸುವ ಬೇಡರನ್ನು ನೋಡಿದಾಕ್ಷಣ ಇವರು ಬೇಡರೆಂದು ಗುರುತಿಸುವುದು ಅಸಾಧ್ಯದ ಮಾತಾಗಿದೆ. ಒಂದು ಹೊತ್ತು ಊಟ ಮಾಡದಿದ್ದರೂ ಪರವಾಗಿಲ್ಲ ವಿವಿಧ ರೀತಿಯ ವಿನ್ಯಾಸದ ಬಟ್ಟೆಗಳನ್ನು ತೊಡುವುದು ಸರ್ವೇಸಾಮಾನ್ಯವಾಗಿ ಬಿಟ್ಟಿದೆ.

ತೊಡುಗೆಗಳು : ಬೇಡರಲ್ಲಿ ಹೆಂಗಸರು ಹಿಂದೆ ಬಂಗಾರವನ್ನು ಬಳಸುತ್ತಿರಲಿಲ್ಲ. ಅದು ಕೇವಲ ಸಾಧಾರಣ ರೀತಿಯ ಉಡುಪು ಧರಿಸುತ್ತಿದ್ದರು. ಕಿವಿಗೆ ಹಿತ್ತಾಳೆಯ ಓಲೆ, ಕೈಗಳಿಗೆ ಗಾಜಿನ ಬಳೆಗಳನ್ನು ಧರಿಸುತ್ತಿದ್ದರೆಂದು ಎಂ ಜಿ ಈಶ್ವರಪ್ಪನವರು ಉಲ್ಲೇಖೀಸಿದ್ದಾರೆ. ಈ ಮಾತು ಇಂದು ಅರ್ಧಸತ್ಯವೆನಿಸಿದೆ. ಏಕೆಂದರೆ ಯಾವ ಬೇಡರ ಸ್ತ್ರೀಯು ಕಿವಿಗೆ ಹಿತ್ತಾಳೆಯ ಓಲೆಯನ್ನು ಧರಿಸುವುದು ಕಂಡುಬರುವುದಿಲ್ಲ. ಆದರೆ ಗಾಜಿನ ಬಳೆಗಳನ್ನು ಧರಿಸುವುದು ಕಂಡುಬರುತ್ತದೆ. ಪ್ರಸ್ತುತ ದಿನಗಳಲ್ಲಿ ಬೇಡ ಮಹಿಳೆಯರು ಬಂಗಾರದ ಒಡವೆಗಳ ಕಡೆ ಹೆಚ್ಚಿನ ಒಲವು ತೋರುತ್ತಿದ್ದಾರೆ. ಜೊತೆಗೆ ಕೈಗಳಿಗೆ ಬಂಗಾರದ ಬಳೆಗಳನ್ನು, ಬೆರಳಿಗೆ ಉಂಗುರಗಳನ್ನು ಮತ್ತು ಆಧುನಿಕ ರೀತಿಯ ಚಿನ್ನದ ಆಭರಣಗಳನ್ನು ಧರಿಸುವುದು ಕಂಡುಬರುತ್ತದೆ. ಗಂಡಸರು ಕೊರಳಿಗೆ ಬಂಗಾರದ ಸರ, ಕೈಗೆ ಕಪ್ಪ, ಬೆರಳಿಗೆ ಉಂಗುರ, ಬೆಳ್ಳಿಯ ಉಡುದಾರಗಳನ್ನು ಧರಿಸುವುದು ಸಹ ಕಂಡುಬರುತ್ತದೆ.

ಕ್ರಿಡೆಗಳು

ಇಂದು ಆಧುನಿಕ ಮಾನವನಿಗೆ ಜಗತ್ತಿನಾದ್ಯಾಂತ ಅದೆಷ್ಟೋ ಆಟಗಳು ಉಗಮವಾಗಿವೆ. ಕ್ರೀಡೆಯಿಂದ ಎರಡು ಬಗೆಯ ಮುಖ್ಯವಾದ ಲಾಭಗಳಿವೆ. ೧. ಶರೀರಕ್ಕೆ ವ್ಯಾಯಾಮ ೨. ಮನಸ್ಸಿಗೆ ಉಲ್ಲಾಸ ಎಂದು ಹೇಳಬಹುದು. ಕ್ರೀಡೆಗಳಿಗೆ ದೈಹಿಕ ಸಾಮರ್ಥ್ಯ ಮತ್ತು ಚಾಣಾಕ್ಷತನ, ಧೈರ್ಯ ಮುಖ್ಯವಾದದು. ಬೇಡರು ಮೂಲತಃ ಬೇಟೆಯಾಡುವವರಾಗಿದ್ದರು. ಬೇಡರು ಹೆಚ್ಚಾಗಿ ಕಾಡುಗಳಲ್ಲಿ ವಾಸಿಸುವರಾಗಿದ್ದರು. ಬೇಟೆಯಾಡುವಾಗ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ತಮ್ಮ ಸ್ವಂತ ರಕ್ಷಣೆಗಾಗಿ ಬಲಿಷ್ಠ ದೇಹದ ಅವಶ್ಯಕತೆ ಇತ್ತು. ಬೇಟೆಯ ಹಿಂದೆ ಓಡುವುದು, ನೆಗೆಯುವುದು, ಈಟಿಯನ್ನು ಗುರಿ ಇಟ್ಟು ಎಸೆಯುವುದು, ಕಾಡಿನಲ್ಲಿ ಅಲೆಯುವುದು, ಹೀಗಾಗಿ ಬೇಡರಲ್ಲಿ ಕಷ್ಟ ಸಹಿಷ್ಣುತೆ, ಚಪಲತೆ, ಶಕ್ತಿಬಲ, ಧೈರ್ಯ ಇವುಗಳು ಅವರಿಗೆ ಗೊತ್ತಿಲ್ಲದಂತೆ ಬೆಳೆದು ಬರುತ್ತಿದ್ದವು. ರಾಜ ಮಹಾರಾಜರುಗಳು ಬೇಡರನ್ನು ಊರುಕಾಯಲು, ಕೋಟೆ ಕೊತ್ತಲಗಳನ್ನು ಕಾಯಲು ಬಳಸಿಕೊಳ್ಳುತ್ತಿದ್ದರು. ಇದಕ್ಕೆ ಧೈರ್ಯ ಒಂದೇ ಇದ್ದರೆ ಸಾಲದು ಎಂದು ಪೂರ್ವಜರು ಸಾಮಾನ್ಯವಾಗಿ ತಮ್ಮ ಮಕ್ಕಳನ್ನು ಚಿಕ್ಕಂದಿನಿಂದಲ್ಲೇ ಕುಸ್ತಿ, ಓಟ, ಗುಂಡು ಎಸೆತ, ಎತ್ತಿನಗಾಡಿ ಎಳೆಯುವುದು, ಕಾಯಿ ಒಡೆಯುವುದು, ಭರ್ಚಿ ಎಸೆಯುವುದು, ಕುಸ್ತಿ ಆಡುವುದು, ಮುಂತಾದವುಗಳಿಗೆ ಹೋಗುವಂತೆ ಪ್ರೇರೇಪಿಸುತ್ತಿದ್ದರು. ಅಂದು ಇವುಗಳ ಮನೋರಂಜನಾ ಕ್ರೀಡೆಗಳಾಗಿದ್ದವು. ಆದರೆ ಇಂದು ಇವುಗಳೆಲ್ಲವೂ ಸಂಪೂರ್ಣವಾಗಿ ಬದಲಾವಣೆಯನ್ನು ಕಂಡಿವೆ. ಇವುಗಳ ಬದಲಾಗಿ ಕ್ರಿಕೇಟ್, ಬಾಸ್ಕೆಟ್‌ಬಾಲ್, ಬಾಲ್‌ಬ್ಯಾಟ್‌ಮಿಟನ್, ಶಟಲ್‌ಕಾಕ್, ಮುಂತಾದ ಆಧುನಿಕ ಕ್ರೀಡೆಗಳಿಗೆ ಮಾರುಹೋಗಿದ್ದಾರೆಂದು ಹೇಳಬಹುದು. ಇದಕ್ಕೆಲ್ಲಾ ಒಂದಡೆ ಶಿಕ್ಷಣ ಮತ್ತೊಂದಡೆ ಜಾಗತೀಕರಣದ ಹೊಸ ಗಾಳಿ ಕಾರಣವಾಗಿದೆ.

ವಾಲ್ಮೀಕಿ ಗುರುಪೀಠ

ಕರ್ನಾಟಕದಲ್ಲಿ ಅಸಂಖ್ಯಾತ ಗುರುಪೀಠಗಳಿವೆ. ಈ ಗುರುಪೀಠ ಗುರುಗಳ ನೇತೃತ್ವದಲ್ಲಿ ಅನೇಕ ಪೂಜೆ ಪುನಸ್ಕಾರಗಳು, ಹಬ್ಬ ಜಾತ್ರೆಗಳು, ಆಚರಣೆಗಳು, ಧಾರ್ಮಿಕ ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ನಡೆಸುತ್ತಾ ಮುಂದುವರಿದಿವೆ. ಅಧ್ಯಾತ್ಮಿಕ ರಂಗಗಳಲ್ಲಿಯೂ ಮಠ, ಪೀಠಗಳು ಸರ್ವಶ್ರೇಷ್ಠ ಕಾರ್ಯಗಳನ್ನು ಕೈಗೊಂಡು ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿದಿರುವುದು ಕಂಡುಬರುತ್ತದೆ. ಕರ್ನಾಟಕದ ಅನೇಕ ಮಠಗಳಿಗೆ ನೂರಾರು ವರ್ಷಗಳ ಇತಿಹಾಸವಿದೆ. ಇದರಂತೆ ಕರ್ನಾಟಕದಲ್ಲಿ ವಾಲ್ಮೀಕಿ ಗುರುಪೀಠಕ್ಕೂ ಒಂದು ಇತಿಹಾಸವಿದೆ. "ಕನಾರ್ಟಕದಲ್ಲಿ ಜನಸಂಖ್ಯೆಯ ದೃಷ್ಟಿಯಿಂದ ಐದನೇ ಸ್ಥಾನವನ್ನು ಹೊಂದಿರುವ ಬೇಡ ಸಮುದಾಯವು ಕರ್ನಾಟಕದಲ್ಲಿ ಋಗ್ವೇದ ಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂದು ಐತಿಹಾಸಿಕ ದಾಖಲೆಗಳು ಮತ್ತು ಪುರಾವೆಗಳ ಮೂಲಕ ತಿಳಿದುಬರುತ್ತದೆ".[೧೧] ಈ ವಾಲ್ಮೀಕಿ ಸಮಾಜದ ಗುರುಪರಂಪರೆ ಮತ್ತು ಪೀಠದ ಬಗ್ಗೆ ಇತಿಹಾಸವನ್ನು ಇಣುಕಿದಾಗ ಹಿಂದಿನ

ಕಾಲದಲ್ಲಿದ್ದ ಬೇಡರ ದೊರೆಗಳು ಬೇಡರ ಸಮುದಾಯದ ಗುರುಗಳಾಗಿದ್ದರು. ಅವರ ಕೋಟೆ ಕೊತ್ತಲುಗಳೇ ಮಠ ಅಥವಾ ಗುರುಪೀಠವಾಗಿತ್ತು. ಅವರೇ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿದ್ದರು. ಮತ್ತು ಅವರವರ ಕ್ಷೇತ್ರಗಳಲ್ಲಿ ಸಂಚರಿಸಿ ಮನೆಗೆ ಭೇಟಿ ನೀಡಿ ಹಾಗೂ ಭಕ್ತರಿಂದ ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದರು.

ಇವರು ನಮ್ಮ ಸಮಾಜದ ಗುರುಗಳೆಂದು ಎಲ್ಲರೂ ಕೂಡ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು. ಇದು ಬರುಬರುತ್ತಾ ಈ ಗುರುಗಳು ಬರೀ ಗುರುಕಾಣಿಕೆ ಪಡೆಯುವದಷ್ಟೇ ಇವರ ಕಾಯಕವಾಯಿತು. ಸಮಾಜದ ಆಗುಹೋಗುಗಳಿಗೆ ನಿಂತು ಕಾಯಕ ಮಾಡದೆ ಮತ್ತು ಅಭಿವೃದ್ಧಿಯ ಕಾರ್ಯಗಳಿಗೆ ಮುಂದಾಗದೆ ಇರುವುದರಿಂದ ಮತ್ತು ಅನ್ಯ ಸಮಾಜದ ಅನೇಕ ಮಠಗಳ ಪ್ರಗತಿಯನ್ನು ನೋಡಿ ಕರ್ನಾಟಕದಾದ್ಯಂತದ ನಾಯಕ ಬಂಧುಗಳು ಒಂದೆಡೆ ಸೇರಿ ಮಠ, ಗುರು, ಗುರಿಗಳ ಸಾಧನೆಯ ಬಗ್ಗೆ ಯೋಚನೆ ಮಾಡಿ ವಾಲ್ಮೀಕಿ ಮಠವನ್ನು ಸ್ಥಾಪಿಸಲು ತೀರ್ಮಾನ ಮಾಡಿದರು.

ಬೆಂಗಳೂರಿನಲ್ಲಿ ೧೯೯೪ನೇ ಇಸ್ವಿಯಲ್ಲಿ ಶ್ರೀ ಶ್ರೀ ಶ್ರೀ ತಿರುಚಿ ಮಹಾಸ್ವಾಮಿಗಳ ಆಶ್ರಯದಲ್ಲಿ ಸಮಾಜದ ಓರ್ವ ವ್ಯಕ್ತಿಯನ್ನು ಆರಿಸಿಕೊಂಡು ದೀಕ್ಷೆಗಾಗಿ ಕೈಲಾಸ ಆಶ್ರಮದಲ್ಲಿಟ್ಟರು. ಮುಂದೆ ಬೆಂಗಳೂರಿನ ಶ್ರೀ ಶಿವಭಕ್ತ ಬೇಡರ ಕಣ್ಣಪ್ಪ ಮಹಾಗುರು ಟ್ರಸ್ಟಿನ ಅಶ್ವಥ್‌ರಾಮಯ್ಯನವರು ಹಾಗೂ ಸಮಾಜದ ಗಣ್ಯವ್ಯಕ್ತಿಗಳು ಕೂಡಿಕೊಂಡು ಬೆಂಗಳೂರಿನಲ್ಲಿ ಶ್ರೀ ಶ್ರೀ ಶ್ರೀ ಡಾ ಸತ್ಯಾನಂದಪುರಿ ಸ್ವಾಮಿಗಳನ್ನು ಆಯ್ಕೆಮಾಡಿಕೊಂಡು. ೧೯೯೭ರಲ್ಲಿ ಗುರುಪೀಠವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿದರು. ಪೀಠದ ಸ್ವಾಮೀಜಿಗೂ ಮತ್ತು ಟ್ರಸ್ಟಿನ ಸದಸ್ಯರಿಗೂ ಹಲವಾರು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿ ೨೦೦೦ ಇಸ್ವಿ ಆಗಸ್ಟ್ ತಿಂಗಳಲ್ಲಿ ಡಾ ಸತ್ಯಾನಂದಪುರಿ ಸ್ವಾಮಿಗಳು ಪೀಠತ್ಯಾಗ ಮಾಡಿದರು. ಇದರಿಂದ ಪ್ರಥಮವಾಗಿ ಸ್ಥಾಪಿತವಾದ ವಾಲ್ಮೀಕಿ ಗುರುಪೀಠ ಸ್ವಾಮಿಗಳಿಲ್ಲದೇ ಅನಾಥವಾಯಿತು. ನಂತರ ಸನ್ಮಾನ್ಯ ಶ್ರೀ ತಿಪ್ಪೇಸ್ವಾಮಿಗಳು ೧೯೯೮ರಲ್ಲಿ ಕರ್ನಾಟಕ ಸರ್ಕಾರದ ಮಂತ್ರಿಗಳಾಗಿದ್ದರು. ಇವರು ಕರ್ನಾಟಕದ ಮಧ್ಯವರ್ತಿ ಸ್ಥಳದಲ್ಲಿ ಮಠಸ್ಥಾಪನೆಯಾಗಬೇಕೆಂದು ಯೋಚಿಸಿದರು. ಇವರ ಯೋಚನೆಯಂತೆ ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ೧೭ ಎಕರೆ ಭೂಮಿಯನ್ನು ಖರೀದಿಸಿ ಅನೇಕ ವಾಲ್ಮೀಕಿ ಸಮುದಾಯದ ಗಣ್ಯವ್ಯಕ್ತಿಗಳು ಮತ್ತು ಬಂಧುಗಳ ಜೊತೆಗೂಡಿ ದಿನಾಂಕ ೯.೨.೧೯೯೮ರಂದು ರಾಜನಹಳ್ಳಿಯಲ್ಲಿ ಕೈಲಾಸ ಆಶ್ರಮದ ಜಗದ್ಗುರುಗಳಾದ ಶ್ರೀ ತಿರುಚಿ ಸ್ವಾಮಿಗಳ ಕೃಪಾಶಿರ್ವಾದದೊಡನೆ ಅವರ ದೀಕ್ಷೆ ಶಿಷ್ಯರಾದ ಮತ್ತು ತುಮಕೂರು ಜಿಲ್ಲೆಯ ತಿಪಟೂರಿನ ನಾಯಕ ಮನೆತನದ ಶ್ರೀ ರಂಗಸ್ವಾಮಿ ಮತ್ತು ಮಹದೇವಮ್ಮನವರ ಮಗನಾದ ಪ್ರೇಮಕುಮಾರ (ಇವರ ಮೊದಲ ಹೆಸರು) ನಂತರ ಇವರ ಹೆಸರನ್ನು ಪ್ರಸನ್ನಾನಂದರೆಂದು ಬದಲಾಯಿಸಲಾಗಿದೆ. ಪ್ರಸನ್ನಾನಂದ ಪುರಿ ಸ್ವಾಮಿಗಳಿಗೆ ಪಟ್ಟಕಟ್ಟಲಾಯಿತು. ಪರಮಪೂಜ್ಯ

ಜಗದ್ಗುರು ಬಾಲಗಂಗಾಧರನಾಥ ಸ್ವಾಮಿಗಳು ತಮ್ಮ ಅಮೃತಹಸ್ತದಿಂದ ವಾಲ್ಮೀಕಿ ಗುರುಗಳಿಗೆ ಬಂಗಾರದ ಕಿರೀಟಧಾರಣೆ ಮಾಡಿದರು. ಇವರು ರಾಜನಹಳ್ಳಿಯ ವಾಲ್ಮೀಕಿ ಸಂಸ್ಥಾನದ ಪ್ರಥಮ ಪೀಠಾಧಿಪತಿಗಳಾದರು. ಇವರು ಎಂಟು ವರ್ಷಗಳವರೆಗೆ ಮಠದ ಅಖಂಡ ಸೇವೆ ಮಾಡಿ ಕರ್ನಾಟಕದಲ್ಲಿ ಅಲ್ಲಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹಾಗೂ ವಸತಿ ನಿಲಯಗಳನ್ನು ಪ್ರಾರಂಭ ಮಾಡಿದರು. ಕರ್ನಾಟಕದಾದ್ಯಂತ ಮಿಂಚಿನ ಸಂಚಾರ ಕೈಗೊಂಡು ಸಮಾಜದ ಬಾಂಧವರಿಗೆ ಸಾಮಾಜಿಕ ಅರಿವನ್ನು ಮೂಡಿಸಿ ಸಾಮಾಜಿಕವಾಗಿ ಒಂದು ಗೂಡಿಸುವ ಪ್ರಯತ್ನ ಮಾಡಿದರು. ಆದರೆ ಇವರು ೩.೪.೨೦೦೭ರಲ್ಲಿ ಭಕ್ತರ ಮನೆಗೆ ಭೇಟಿ ನೀಡಿ ಮಠಕ್ಕೆ ವಾಪಾಸಾಗುವಾಗ ರೈಲು ದುರಂತಕ್ಕೆ ಸಿಲುಕಿ ವಿಧಿವಷವಾದರು. ಇದರಿಂದ ನಾಯಕ ಸಮಾಜಕ್ಕೆ ಇದ್ದಕ್ಕಿದ್ದ ಹಾಗೆ ಕತ್ತಲಾವರಿಸಿ ಬಿಟ್ಟಿತು. ಆಗ ಮಠದ ಟ್ರಸ್ಟಿನ ಅಧ್ಯಕ್ಷರಾಗಿದ್ದ ಶ್ರೀ ಸತೀಶ ಜಾರಕೀಹೊಳೆಯವರು ಕರ್ನಾಟಕದಾದ್ಯಂತ ಸಂಚರಿಸಿ ಸಮಾಜದ ಬಾಂಧವರನ್ನು ಮುಖಂಡರನ್ನು ಭೇಟಿಯಾಗಿ ಅವರ ಅಭಿಪ್ರಾಯಗಳನ್ನು ಪಡೆದುಕೊಂಡು ಚಿತ್ರದುರ್ಗದ ಮುರುಘಾಮಠದಲ್ಲಿ ಶ್ರಿ ಶ್ರೀ ಶ್ರೀ ಶಿವಮೂರ್ತಿಸ್ವಾಮಿಯವರ ತರಬೇತಿ ಹೊಂದಿ ಸನ್ಯಾಸಿಯಾಗಿದ್ದ ಗದಗ ಜಿಲ್ಲೆಯ ರೋಣ ತಾಲೂಕಿನ ಹಿರೆಮಣ್ಣೂರು ಗ್ರಾಮದ ಬಸಪ್ಪ ಸಿದ್ರಾಮಪ್ಪ ಗುಡಿ ಮತ್ತು ಯಲ್ಲಮ್ಮ ಎಂಬ ದಂಪತಿಗಳ ಮೂರನೇ ಪುತ್ರನಾದ ಪ್ರಸನ್ನಕುಮಾರ ಎಂಬುವವರನ್ನು ಎರಡನೇ ಪುಣ್ಯಾನಂದ ಪುರಿಸ್ವಾಮಿಜಿಯಾಗಿ ಗುರುಪೀಠಕ್ಕೆ ಎರಡನೇ ಪೀಠಾದಿಪತಿಯನ್ನಾಗಿ ದಿನಾಂಕ ೬.೯.೨೦೦೭ರಲ್ಲಿ ನೇಮಕ ಮಾಡಲಾಯಿತು. ಇವರನ್ನು ಈಗ ಪ್ರಸನ್ನಾನಂದಪುರಿ ಸ್ವಾಮಿಗಳು ಎಂದು ಕರೆಯಲಾಗುತ್ತದೆ. ಪುರಿ ಎಂದರೆ ದೈವಾನ್ ಸಂಭೂತ ಎಂದು ತಿಳಿದುಬರುತ್ತದೆ. ಈ ವಾಲ್ಮೀಕಿ ಗುರುಪೀಠವು ಇಂದು ನಾಯಕರ ಚಲನಾ ಶಕ್ತಿಯಾಗಿ ಪಲ್ಲಟವಾಗುತ್ತಿದೆ. ಇದರಿಂದ ಹಲವಾರು ಕಡೆ ೧೫೦ಕ್ಕೂ ಹೆಚ್ಚು ವಿದ್ಯಾರ್ಥಿ ಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ಶೈಕ್ಷಣಿಕವಾಗಿ ಮುಂದುವರೆಯಲು ಅವಕಾಶ ಮಾಡಿ ಕೊಡುತ್ತದೆ. ಅಷ್ಟೇ ಅಲ್ಲದೇ ಈ ಮಠವು ಇಂದು ಬೇಡರಿಗೆ ಅಥವಾ ನಾಯಕರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಇಡೀ ಸಮುದಾಯವೇ ಬದಲಾವಣೆಗೆ ಒಳಪಡುವಂತೆ ಮೌನವಾಗಿ ತನ್ನ ಕಾರ್ಯವನ್ನು ಮಾಡುತ್ತಿದೆ. ಅಲ್ಲದೇ ಮಠದ ಮೂಲಕ ಅಂದರೆ ಗುರುವಿನ ಮೂಲಕ ಇಂದು ಬೇಡರು ಮಠದ ಸಿದ್ಧಾಂತಗಳಿಗೆ ಒಳಗಾಗಿ ಇಡೀ ತಮ್ಮ ಬದುಕನ್ನೆ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಾಯ – ೫

ಬೇಡಬುಡಕಟ್ಟಿನ ಆರ್ಥಿಕ ಪಲ್ಲಟಗಳು

ಅಧ್ಯಾಯ ಐದು

ಬೇಡರ ಆರ್ಥಿಕ ಪಲ್ಲಟಗಳು

ಯಾವುದೇ ಒಂದು ಸಮುದಾಯದ ಆರ್ಥಿಕತೆ ಅದು ಅವಲಂಬಿತಗೊಂಡ ವೃತ್ತಿಯ ಮೇಲೆ ನಿರ್ಧರಿತವಾಗುತ್ತದೆ. ವೃತ್ತಿ ಎಂದರೆ ಮಾನವನು ತನ್ನ ಜೀವನ ನಿರ್ವಹಣೆಗೆ ಕಂಡುಕೊಂಡ ಮಾರ್ಗವೆಂದು ಹೇಳಬಹುದು. ಧರ್ಮವನ್ನೊಳಗೊಂಡಂತೆ ಸಮುದಾಯದ ಎಲ್ಲಾ ಸಾಂಸ್ಕೃತಿಕ ಅಂಶಗಳೂ ಕೂಡ ಆರ್ಥಿಕ ಶಕ್ತಿಗಳ ವಿಕಾಸದಿಂದಲೇ ನಿರ್ಧರಿತವಾಗುತ್ತದೆಂದು ಕಾರ್ಲ್ ಮಾರ್ಕ್ಸ್ ತಿಳಿಸುತ್ತಾರೆ. ಆಯಾ ಸಮುದಾಯದ ಆರ್ಥಿಕ ಚಟುವಟಿಕೆಗಳು ಆಯಾ ಸಮುದಾಯದ ಸಾಮಾಜಿಕ ರಾಜಕೀಯ ಶೈಕ್ಷಣಿಕ ಸ್ಥಿತಿಗತಿಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ಆರ್ಥಿಕ ಉತ್ಪಾದನೆಯ ರೂಪವೇ ಸಾಮಾಜಿಕ ಪರಿವರ್ತನೆಯ ಮೂಲವೆಂಬ ಮಾರ್ಕ್ಸ್‌ನ ಹೇಳಿಕೆಯಿಂದ ಸ್ಪಷ್ಟವಾಗುವುದು. ದುಡಿಮೆಯನ್ನು ಅವಲಂಬಿಸಿದ ಜನರು ತಮ್ಮ ಉತ್ಪಾದನಾ ರೀತಿಯ ವೈಶಿಷ್ಟ್ಯತೆಗೆ ಅನುಸಾರವಾಗಿ ನಿರ್ದಿಷ್ಟ ರೀತಿಯ ಸಾಮಾಜಿಕ ಸಂಘಟನಾ ವ್ಯವಸ್ಥೆಯನ್ನು ನಿರ್ಮಿಸುತ್ತಾರೆ. ಆದಿಮ ಕಾಲದ ಮಾನವನ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯಿದ್ದಿತೆಂಬುದು ತಿಳಿದುಬರುವುದಾದರೂ ನಂತರದ ಹಂತದ ಮಾನವನ ಸಾಮಾಜಿಕ ವ್ಯವಸ್ಥೆ ಹೆಚ್ಚು ಹೆಚ್ಚು ಅಸಮಾನತೆಯಿಂದ ಕೂಡಿದ್ದಿತು ಮತ್ತು ಅದು ನಿರಂತವಾಗಿ ಮುಂದುವರೆದಿದೆ ಎಂಬುದು ಸ್ಪಷ್ಟ. ಬಹುಶಃ ಈ ರೀತಿಯ ಅಸಮಾನತೆಗೆ ಶ್ರಮ ವಿಭಜನೆಯೇ ಕಾರಣವೆಂಬುದು ಅಷ್ಟೇ ಸ್ಪಷ್ಟ. 'ಮಿಗುತಾಯದ ಮೇಲೆ ಒಡೆತನವನ್ನು ಹೊಂದಿದ ವರ್ಗವು ಉತ್ಪಾದನಾ ಸಾಧನಗಳ ಮೇಲೂ ತನ್ನ ಏಕಸ್ವಾಮ್ಯವನ್ನು ನಿರ್ದಿಷ್ಟ

ಸ್ತರಗಳಿಗೆ ಸೀಮಿತಗೊಳಿಸಿಕೊಳ್ಳುತ್ತದೆ. ಈ ಕಾರಣಕ್ಕಾಗಿ ಆರ್ಥಿಕತೆಯು ಲೌಕಿಕ ಅಧಿಕಾರ ರಚನೆಯನ್ನು ಮತ್ತು ಅಧೀನ ಸ್ಥಿತಿಯನ್ನು ರೂಪಿಸುತ್ತದೆ.'[೧] ಬುಡಕಟ್ಟುಗಳನ್ನು ಮುಖ್ಯವಾಹಿನಿಯಲ್ಲಿಲ್ಲದ ಪ್ರತ್ಯೇಕವಾದ ಸಮುದಾಯಗಳೆಂದು ಪರಿಗಣಿಸಿದರೂ ಕೂಡ ಮುಖ್ಯವಾಹಿನಿ ಸಮುದಾಯಗಳ ಮಧ್ಯದಲ್ಲಿಯೇ ಜೀವನ ಕಂಡುಕೊಂಡಿರುವ ಬೇಡರಂತಹ ಸಮುದಾಯಗಳ ಮೇಲೆ ಮುಖ್ಯವಾಹಿನಿಗೆ ಒಳಗಾದ ಎಲ್ಲಾ ಜಾತಿ ಸಮುದಾಯಗಳ ಪ್ರಭಾವ ದಟ್ಟವಾಗಿ ಆವರಿಸಿರುವುದನ್ನು ಕಾಣುತ್ತೇವೆ. ಬುಡಕಟ್ಟುಗಳ ಸಂರಚನೆಯು ಸಡಿಲಗೊಂಡಿದ್ದು ಬಹುಶಃ ವಿದೇಶಿ ಮಿಷನರಿಗಳ ಮತ್ತು ಯುರೋಪಿಯನ್ನರ ಆಡಳಿತ ಕ್ರಮದಿಂದ ಎಂದು ಹೇಳಬಹುದು. ಆ ನಂತರ ಭಾರತ ಸ್ವತಂತ್ರಗೊಂಡ ತರುವಾಯ ಭಾರತದ ಸಂವಿಧಾನ ಮತ್ತು ಶಾಸನಗಳು, ಕಾನೂನುಗಳಿಂದ ಸಾಮಾಜಿಕ ವೇಗವು ಇನ್ನೂ ಚುರುಕುಗೊಂಡಿತು. ಭಾರತಕ್ಕೆ ಲಗ್ಗೆಯಿಟ್ಟ ಕೈಗಾರೀಕರಣವು ಶ್ರೇಣೀಕೃತ ಜಾತಿ ವ್ಯವಸ್ಥೆ ಹಾಗೂ ವೃತ್ತಿ ರಚನೆಗಳ ನಡುವಿನ ಹೊಂದಾಣಿಕೆಯನ್ನೇ ಮೇಲುಕೆಳಗು ಮಾಡಿತು. ಈ ರೀತಿಯ ಚಟುವಟಿಕೆಗಳು ಮುಂದೆ ಹೊಸಬಗೆಯ ಬೆಳವಣಿಗೆಗೆ ಕಾರಣವಾಯಿತು.

ಯುರೋಪಿನ ಪ್ರವೇಶದಿಂದ ಉಂಟಾದ ಕೈಗಾರೀಕರಣದ ಮಾದರಿಗಳನ್ನು ಅನುಕರಿಸುವ ಮೂಲಕ ಸ್ವಾತಂತ್ರ್ಯ ಭಾರತದ ಆರ್ಥಿಕ ಯೋಜನೆಗಳು ಅನೇಕ ತಳಸಮುದಾಯಗಳ ಆರ್ಥಿಕ ವ್ಯವಸ್ಥೆಯನ್ನೇ ದುರ್ಬಲಗೊಳಿಸಿತು. ದೇಶಿ ಉತ್ಪಾದನಾ ವ್ಯವಸ್ಥೆಯನ್ನು ನಂಬಿಕೊಂಡ ಸಮುದಾಯ ಗಳೆಲ್ಲಾ ದಿಕ್ಕೇಡಿಗಳಾಗುವ ಸ್ಥಿತಿಯುಂಟಾಯಿತು. ತಮ್ಮ ಪಾಡಿಗೆ ತಾವು ದೇಶಿ ಉತ್ಪಾದನೆಗಳನ್ನು ಮಾಡಿಕೊಂಡ ಸಮುದಾಯಗಳ ಉತ್ಪಾದನೆಗೆ ಮಾರುಕಟ್ಟೆ ಇಲ್ಲದಂತಾಯಿತು. ದೇಶಿ ಉತ್ಪಾದನೆ ಗಳನ್ನು ನಂಬಿಕೊಂಡ ಬಹುತೇಕ ಬುಡಕಟ್ಟುಗಳು ತಮ್ಮ ಮೂಲ ಕಸುಬನ್ನು ಮಾಡಲು ಸಾಧ್ಯ ವಾಗದ ಹಾಗೂ ಬಿಡಲೂ ಸಾಧ್ಯವಾಗದ ಸ್ಥಿತಿ ನಿರ್ಮಾಣಗೊಂಡಿತು.

ಯುರೋಪಿಯನ್ನರು ಹುಟ್ಟುಹಾಕಿದ ವ್ಯವಸ್ಥೆಯ ಎದುರು ದೇಶಿ ವ್ಯವಸ್ಥೆ ಕೈಚೆಲ್ಲಿ ಕೂಡಬೇಕಾದ ಸ್ಥಿತಿಯುಂಟಾಯಿತು. ತಮ್ಮ ಮೂಲ ವೃತ್ತಿಯಿಂದ ವಂಚಿತಗೊಂಡ ಬುಡಕಟ್ಟುಗಳು ಪರ್ಯಾಯ ವಾಗಿ ಹೊಸ ವೃತ್ತಿಗಳಲ್ಲಿ ತೊಡಗಬೇಕು ಇಲ್ಲವೇ ಹಸಿವೆಯಿಂದ ಸಾಯಬೇಕು ಎನ್ನುವಂತಹ ಸ್ಥಿತಿಯುಂಟಾಯಿತು. ಹೊಸ ವೃತ್ತಿಗಳ ಕೌಶಲ್ಯವರಿಯದ ಬುಡಕಟ್ಟುಗಳು ವೃತ್ತಿಯೇ ಅಲ್ಲದ ಯಾವುದೋ ಒಂದು ವೃತ್ತಿಯಲ್ಲಿ ತೊಡಗುವಂತಾಯಿತು. ಅಂತಹ ಬುಡಕಟ್ಟುಗಳನ್ನು ತುಂಬಾ ಗುಮಾನಿಯಿಂದ ಕಾಣುವಂತಾಯಿತು. ಬುಡಕಟ್ಟುಗಳ ಮೇಲೆ ಮೇಲ್ಜಾತಿಗಳು ಗುಮಾನಿ ಪಡುವಂತೆ ಮಾಡುವಲ್ಲಿಯೂ ಯುರೋಪಿಯನ್ನರ ಕೈವಾಡವಿರುವುದು ಸ್ಪಷ್ಟ. ರಾಜಕೀಯವಾಗಿ ಭಾರತವನ್ನು ಆಳುತ್ತಿದ್ದ ಬ್ರಿಟಿಶ್ ವ್ಯವಸ್ಥೆ ತಮ್ಮ ವಿರುದ್ಧ ಬುಡಕಟ್ಟುಗಳು ಯಾವ ಕ್ಷಣದಲ್ಲಾದರೂ ತಿರುಗಿ ಬೀಳುವ ಸಾಧ್ಯತೆಯನ್ನು ಮನಗಂಡು ಅವುಗಳ ಮೇಲೆ ನಿಶ್ಶಸ್ತ್ರೀಕರಣ ಕಾಯ್ದೆಯನ್ನು ಜಾರಿಗೊಳಿಸಿತು. ಆ ಕಾರಣಕ್ಕಾಗಿಯೇ ಹಲಗಲಿ ಬೇಡರಿಗೂ ಮತ್ತು ಬ್ರಿಟಿಶರಿಗೂ ಮಧ್ಯ ಗಲಭೆ ನಡೆಯಿತು.

ಹಲಗಲಿಯ ಬೇಡರ ದಂಗೆ ಎಂದು ಪ್ರಸಿದ್ಧಗೊಂಡಿತು. ಹಾಗೆಯೇ ಬುಡಕಟ್ಟುಗಳ ಮೇಲೆ ಅಪರಾಧಿ ಬುಡಕಟ್ಟುಗಳು ಎನ್ನುವ ಗೂಬೆಯನ್ನು ಕೂಡಿಸುವ ಕೆಲಸವನ್ನೂ ಯುರೋಪಿಯನ್ನರು ಮಾಡಿದರು. ತಮಗೆ ಬೇಕಾದ ರೀತಿ ಬಲವಂತವಾಗಿ ಹಿಡಿದಿಟ್ಟ ಬುಡಕಟ್ಟುಗಳನ್ನು ಬಳಕೆ ಮಾಡಿ ಕೊಂಡಿತು. ಒಂದು ಕಡೆ ಸಾಮಾಜಿಕವಾಗಿ ತಾವು ಬದುಕಲು ರೂಪಿಸಿಕೊಂಡಿದ್ದ ಮೂಲ ಕಸುಬುಗಳು ಇಲ್ಲದಂತಾಗಿದ್ದು, ಮತ್ತೊಂದು ಕಡೆ ಸಾಮಾಜಿಕವಾಗಿ ಅಪರಾಧಿಗಳೆಂಬ ಹಣೆಪಟ್ಟಿಯನ್ನು ಅಂಟಿಸಿಕೊಂಡು ಸಾರ್ವತ್ರಿಕವಾಗಿ ಅವಮಾನಕ್ಕೆ ಗುರಿಯಾಗುವಂತಾಯಿತು. ಭಾರತೀಯ ಬುಡಕಟ್ಟುಗಳು ಈ ಎರಡು ನಿಟ್ಟಿನ ಹೊಡೆತಗಳಿಂದ ಹೊರಬರುವುದು ಅಷ್ಟು ಸುಲಭಸಾಧ್ಯವಾದ ವಿಚಾರವಾಗಿರಲಿಲ್ಲ. ಇಂದಿಗೂ ಇನ್ನೂ ಬಹುಪಾಲು ಬುಡಕಟ್ಟುಗಳು ಮೇಲೇಳಲಾಗದ ಸ್ಥಿತಿ ಇದೆ. ಆದರೆ ಮುಖ್ಯವಾಹಿನಿ ಸಮುದಾಯಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡ ಬೇಡರು ತನ್ನ ಮೂಲ ಸ್ಥಿತಿಯಿಂದ ಹೊರಬರುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗದೇ ಹೋದರೂ ಬಹುಮಟ್ಟಿಗೆ ಯಶಸ್ಸುಗೊಂಡಿದೆ ಯಂದೇ ಹೇಳಬಹುದು. ಬಹುತೇಕ ಭಾರತದ ನಗರಕೇಂದ್ರಿತ ಅಧಿಕಾರ ವರ್ಗವು ಐರೋಪ್ಯ ಮಾದರಿಯಲ್ಲಿಯೇ ಯೋಜನೆಗಳನ್ನು ರೂಪಿಸುತ್ತವೆ ಮತ್ತು ಅವು ಏಕಮುಖವಾಗಿರುತ್ತವೆ. ಕಡುಬಡವರ ಅದರಲ್ಲೂ ಬುಡಕಟ್ಟುಗಳ ಜೀವನ ವಿಧಾನದ ಪರಿಚಯವಿರದವರು ಬಹುಪಾಲು ಯೋಜನೆಗಳನ್ನು ರೂಪಿಸುವುದರಿಂದ ಅಂತಹ ಯೋಜನೆಗಳು ಬುಡಕಟ್ಟುಗಳನ್ನು ತಲುಪುವಲ್ಲಿ ಸೋಲುತ್ತವೆ. ಅಂತಹ ಯೋಜನೆಗಳಿಂದ ತುಂಬಾ ಹಿಂದುಳಿದ ಬುಡಕಟ್ಟುಗಳು ಫಲಾನುಭವಿಗಳಾಗಲು ಕಷ್ಟಸಾಧ್ಯ ವಾಗುತ್ತದೆ. ಅವೈಜ್ಞಾನಿಕವಾಗಿ ರೂಪಿತಗೊಂಡ ಯೋಜನೆಗಳಿಂದಾಗಿ ಬಹುತೇಕ ಬುಡಕಟ್ಟುಗಳು ಆರ್ಥಿಕ ಪ್ರವೇಶವನ್ನು ಪಡೆಯಲು ಸಾಧ್ಯವಾಗುವುದೇ ಇಲ್ಲ. ಹೀಗಾಗಿ ಆರ್ಥಿಕತೆ ಎನ್ನುವುದು ಬುಡಕಟ್ಟು ಬದುಕಿನ ನೆಮ್ಮದಿಯನ್ನು ಕಳೆಯುತ್ತಿರುವುದಲ್ಲದೆ ಅವುಗಳಲ್ಲಿ ಹೆಚ್ಚಿನ ಗೊಂದಲಗಳನ್ನು ಸೃಷ್ಟಿಸುತ್ತಿದೆ. ಆಧುನಿಕ ಅಭಿವೃದ್ಧಿ ಮಿಮಾಂಸೆಯಲ್ಲಿ ಆರ್ಥಿಕ ಏಳ್ಗೆಯೇ ಮಾನದಂಡವಾಗಿರುವುದರಿಂದ ಈ ರೀತಿಯ ಗೊಂದಲಗಳು ಸೃಷ್ಟಿಗೊಳ್ಳುತ್ತವೆ. ಜಾಗತೀಕರಣದ ಗಾಳಿಯು ಬುಡಕಟ್ಟುಗಳು ಹಾಗೂ ಪಾರಂಪರಿಕ ಕುಶಲಕರ್ಮಿಗಳನ್ನು ಹೆಚ್ಚು ಹೆಚ್ಚು ಅತಂತ್ರಗೊಳಿಸುತ್ತ ಅವರನ್ನು ವ್ಯವಸ್ಥೆಯ ತಳಕ್ಕೆ ನೂಕಲಾಗುತ್ತಿರುವುದು ಕಂಡುಬರುತ್ತಿದೆ. ಬುಡಕಟ್ಟುಗಳಿಗೆ ನೀಡಲಾಗುವ ಮೀಸಲಾತಿಯೆಂಬುದು ಕೇವಲ ಉಳ್ಳವರ ರಾಜಕೀಯ ಲಾಭಕ್ಕೆ ಬಳಕೆಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಕರ್ನಾಟಕದಲ್ಲಿರುವ ಅನುಸೂಚಿತ ೫೦ ಬುಡಕಟ್ಟುಗಳಿಗೆ ಹೋಲಿಸಿದರೆ ಬೇಡ ಬುಡಕಟ್ಟನ್ನು ಹೊರತುಪಡಿಸಿ ಉಳಿದ ೪೯ ಬುಡಕಟ್ಟುಗಳು ಸರ್ಕಾರದ ಯೋಜನೆಗಳ ಲಾಭ ಪಡೆಯುವಲ್ಲಿ ಸೋತಿವೆ. ಬೇಡ ಬುಡಕಟ್ಟು ಸಹ ಸಂಪೂರ್ಣವಾಗಿ ಲಾಭ ಪಡೆದಿದೆ ಎಂದು ಹೇಳಲು ಸಾಧ್ಯವಾಗದಿದ್ದರೂ ಇದ್ದುದರಲ್ಲಿ ಇತರ ಬುಡಕಟ್ಟುಗಳಿಗಿಂತ ಅದು ಹೆಚ್ಚು ಲಾಭಗಳನ್ನು ಪಡೆಯುವಲ್ಲಿ ಹವಣಿಸುತ್ತಿದೆ.

ಜಾಗತೀಕರಣ ಸಂದರ್ಭದಲ್ಲಿಯ ಕರ್ನಾಟಕದಲ್ಲಿರುವ ಒಟ್ಟು ಬುಡಕಟ್ಟುಗಳಲ್ಲಿ ಎರಡು ರೀತಿಯ ಬುಡಕಟ್ಟು ಸಮುದಾಯಗಳನ್ನು ಕಾಣಬಹುದು. ಅವುಗಳನ್ನು ಮುಖ್ಯವಾಗಿ ಕಾಡುವಾಸಿ

ಬುಡಕಟ್ಟುಗಳು ಮತ್ತು ಬಯಲುಪ್ರದೇಶವಾಸಿ ಬುಡಕಟ್ಟುಗಳೆಂದು ವಿಭಾಗಿಸಬಹುದು. ಮುಖ್ಯವಾಗಿ ಪಶ್ಚಿಮಘಟ್ಟಗಳ ಕಾಡು, ಕೊಡಗು, ಬಿಳಿಗಿರಿ ರಂಗನಬೆಟ್ಟ, ಮಲೆಮಹದೇಶ್ವರ ಕಾಡು ಮುಂತಾದ ಕಡೆ ಇರುವ ಬುಡಕಟ್ಟುಗಳು ಬಹುತೇಕ ಇಂದಿಗೂ ಜೇನು ಸಂಗ್ರಹಣೆ, ಮರದ ಮೇಲಿನ ಪಾಚಿ ಸಂಗ್ರಹಣೆ, ಕೃಷಿ, ವನಸ್ಪತಿಗಳ ಸಂಗ್ರಹಣೆ ಮತ್ತು ಮಾರಾಟಗಳಲ್ಲಿ ತೊಡಗಿರುವುದನ್ನು ಕಾಣಬಹು ದಾಗಿದೆ. ಆದರೆ ಬಯಲುಸೀಮೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿರುವ ಬುಡಕಟ್ಟು ಸಮುದಾಯಗಳು ಇಂದು ಪಶುಪಾಲನೆ ಮತ್ತು ಸಣ್ಣ ಹಿಡುವಳಿಯ ಬೇಸಾಯ ಕ್ರಮವನ್ನೇ ಹೆಚ್ಚಾಗಿ ಅವಲಂಬಿಸಿವೆ. ಇದರಲ್ಲಿ ಪ್ರಮುಖವಾಗಿ ಗುರುತಿಸಬಹುದಾದ ಸಮುದಾಯವೆಂದರೆ ಬೇಡ ಸಮುದಾಯ. ಈ ಸಮುದಾಯದವರು ಇಂದಿಗೂ ಪಶುಪಾಲನೆ, ಸಣ್ಣ ಹಿಡುವಳಿಯ ಕೃಷಿ, ಕೃಷಿ ಕೂಲಿ ಮುಂತಾದ ಕೆಲಸಗಳಲ್ಲಿ ತೊಡಗಿದ್ದಾರೆ. ಬೇಡರ ಹೊರತಾಗಿ ಬಯಲು ಪ್ರದೇಶಗಳಲ್ಲಿ ನೆಲೆಗೊಂಡಿರುವ ಬುಡಕಟ್ಟುಗಳು ಬೇಡ ಬುಡಕಟ್ಟಿನಂತೆಯೂ ಬಾಳಲಾಗದೆ, ಅತ್ತ ಕಾಡನ್ನವಲಂಬಿಸಿರುವ ಬುಡಕಟ್ಟು ಗಳಂತೆಯೂ ಬಾಳಲಾಗದೆ ಅತಂತ್ರ ಸ್ಥಿತಿಯನ್ನು ಅನುಭವಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಬುಡಕಟ್ಟಿನ ವೃತ್ತಿ ಪಲ್ಲಟವೆಂದರೆ ಅದು ಕೇವಲ ವೃತ್ತಿ ಪಲ್ಲಟವಾಗದೆ ಇಡೀ ಸಾಮಾಜಿಕ ಬದಲಾವಣೆ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. 'Social change refers to basic alterations over time in the behaviour pattern culture and structure of society.'[2] Tension and conflict within a society also produce social change. The casual factors of social change are the following Culture, Technology, Biological, and Environmental.[3]

ಬೇಡ ಸಮುದಾಯ ತುಂಬಾ ಸ್ಥಿತ್ಯಂತರಗಳನ್ನು ಕಂಡಿದೆ. ಕರ್ನಾಟಕದ ಅನುಸೂಚಿತ ೫೦ ಬುಡಕಟ್ಟುಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಎಲ್ಲಾ ವಿಷಯ ಗಳಲ್ಲಿಯೂ ತುಂಬಾ ಬದಲಾವಣೆಗೆ ಒಳಗಾದ ಸಮುದಾಯವಾಗಿ ಗೋಚರಿಸುತ್ತದೆ. ಬಹುತೇಕವಾಗಿ ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿಯೇ ಬದಲಾವಣೆಗಳಿಗೆ ಹೆಚ್ಚು ತೆರೆದುಕೊಂಡವರು ಬೇಡರು. ಹೀಗಾಗಿ ಪ್ರಸ್ತುತ ವ್ಯವಸ್ಥೆಯಲ್ಲಿ ಮೇಲ್ಜಾತಿಗಳ ಮಧ್ಯದಲ್ಲಿಯೂ ಮುಖ್ಯವಾಹಿನಿಯಲ್ಲಿ ಇವರು ಗುರುತಿಸಿಕೊಳ್ಳಲು ಸಾಧ್ಯವಾಗುವಂತಾಗಿದೆ.

'ತಮ್ಮ ರಾಜ್ಯಾಧಿಕಾರ ಕಳೆದುಕೊಂಡ ಬಳಿಕ ಬೇಡರ ಅರಸರು ದಿಕ್ಕೇಡಿಗಳಾದರಲ್ಲದೆ ಮುಂದಿನ ಸಾಧ್ಯತೆಗಳ ಕುರಿತು ಏನೂ ತೋಚದ ಸ್ಥಿತಿಗೆ ನೂಕಲ್ಪಟ್ಟರು. ತಮಗೆ ಒಂದು ಸ್ಥಾನವಿರುವವರೆಗೆ ಮರ್ಯಾದೆಗೆ ಒಳಗಾಗಿ ಸುರಕ್ಷಿತವಾಗಿದ್ದ ಇವರು ತಮ್ಮ ಸ್ಥಾನದಿಂದ ದೂರವಾದ ತಕ್ಷಣ ತಮ್ಮ ಮುಂದಿನ ಭವಿಷ್ಯಕ್ಕೆ ಯಾವ ರೀತಿಯ ವೃತ್ತಿಯನ್ನು ಅವಲಂಬಿಸಬೇಕೆಂಬ ಗೊಂದಲಕ್ಕೆ ಬಿದ್ದರು.

ಬದಲಾದ ರಾಜಕೀಯ ಸಂದರ್ಭಕ್ಕೆ ಹೊಂದಿಕೊಳ್ಳುವ ರಾಜಿಸ್ವಭಾವ ಬೇಡ ಅರಸರಿಗೆ ಬರಲಿಲ್ಲ. ಅವರಿಗೆ ಸ್ವಾಭಿಮಾನ ಪ್ರತಿಷ್ಠೆಗಳು ಎದುರಾದವು. ಈ ಹಿಂದೆ ನಡೆಸಿದ ವಿಲಾಸಿ ಜೀವನವನ್ನು ಮುಂದುವರೆಸುವುದು ಅಸಾಧ್ಯವೆನಿಸಿದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ತಾವು ಕ್ರೋಡೀಕರಿಸಿಕೊಂಡಿದ್ದ ಆಸ್ತಿಯನ್ನು ಒಂದೊಂದಾಗಿ ಮಾರುತ್ತಾ ಸಾಗಿದರು. ಹೀಗಾಗಿ ಅವರು ಆರ್ಥಿಕವಾಗಿ ಕಷ್ಟಗಳಿಗೆ ಒಳಗಾಗುತ್ತಲೇ ಬಂದರು. ಸಾಮಾಜಿಕ ಸ್ಥಾನಮಾನ ಹಾಗೂ ರಾಜಕೀಯ ಗೌರವಗಳನ್ನು ನಿರ್ಧರಿಸುವಲ್ಲಿ ಆರ್ಥಿಕ ಸ್ಥಿತಿಗತಿಯೇ ಮುಖ್ಯ ಪಾತ್ರ ವಹಿಸುವ ಸಂದರ್ಭದಲ್ಲಿ ಬೇಡ ಅರಸರ ವಂಶಸ್ಥರು ಸರ್ವ ದೃಷ್ಟಿಯಿಂದಲೂ ಕೆಳದೂಡಲ್ಪಟ್ಟಿದ್ದು ಸಹಜವೇ ಆಗಿದೆ.'[೪]

'ಪ್ರಾಣಿ ಪಕ್ಷಿ ಜಲಚರಗಳನ್ನು ವಿವಿಧ ಪರಿಕರ, ಸೂಕ್ಷ್ಮ ಉಪಾಯ-ತಂತ್ರಗಳಿಂದ ಹೊಡೆದು ಕೊಲ್ಲುವುದೇ ಬೇಟೆ. ಶಿಷ್ಟಸಾಹಿತ್ಯದಲ್ಲಿ ಈ ವಿಧಾನಕ್ಕೆ ಮೃಗಯೆಯೆ, ಅಚ್ಛೋಧನ, ಮೃಗವ್ಯ, ಅಚ್ಛೋಟಕ, ಆಖೇಟಕ, ಪಾಪರ್ಧಿ, ಶಿಕರಿ ಎಂಬ ಅರ್ಥಗಳಿವೆ'[೫] ಬೇಟೆ ಎನ್ನುವ ಪದಕ್ಕೆ ದ್ರಾವಿಡ ಭಾಷೆಗಳಲ್ಲಿ ಒಂದೇ ರೀತಿಯ ಸಂವಾದಿರೂಪಗಳು ಕಂಡುಬರುತ್ತವೆ. ವೇಟ್ಟೈ, ವೇಟೆ, ವೇಡು(ತಮಿಳು), ವೇಟ್ಟೈ(ಮಲೆಯಾಳ), ಬೋಂಟೆ, ಬೋಣ್ಯೆ(ತುಳು), ವೇಟೆ(ತೆಲುಗು), ಬೇಟೆ(ಕನ್ನಡ) ಎಂಬ ಪದಗಳು ಬಳಕೆಯಿರುವುದನ್ನು ಕಾಣುತ್ತೇವೆ.[೬]

ಪ್ರಾಚೀನ ಮಾನವನ ಆಹಾರ ಸಂಸ್ಕೃತಿಯಲ್ಲಿ ಬೇಟೆ ಅನಿವಾರ್ಯವಾಗಿತ್ತು. ಇತರ ಮಾಂಸಾಹಾರಿ ಪ್ರಾಣಿಗಳಂತೆ ಮಾನವನು ಸಹ ಮಾಂಸಾಹಾರಿಯಾಗಿರಬೇಕು. ಏಕೆಂದರೆ ಪ್ರಾಚೀನ ಕಾಲದಲ್ಲಿ ಜೀವನ ನಿರ್ವಹಣೆಗೆ ಇಂದಿನಂತೆ ಆಹಾರದ ಹಲವು ಮೂಲಗಳಿರಲಿಲ್ಲ. ಕೃಷಿಯೂ ಆದಿಮಾನವನಿಗೆ ದೂರವಾಗಿದ್ದರಿಂದ ಆತ ಜೀವನೋಪಾಯಕ್ಕಾಗಿ ಬೇಟೆ ತಂತ್ರವನ್ನೇ ಅನುಸರಿಸುತ್ತಿರಬೇಕು. 'ಸಮಾಜ ವಿಕಾಸ ಕ್ರಮದಲ್ಲಿ ಪೃಥ್ವಿಯ ಮೇಲೆ ಪೂರ್ವಕಾಲದ ಜನರನ್ನು ಬೇಟೆಗಾರರು, ಜಲಗಾರರು, ದನಗಾಹಿಗಳು ಮತ್ತು ಒಕ್ಕಲುತನದವರೆಂದು ವಿಭಾಗಿಸಲಾಗಿದೆಯಂದು ನೇಗಳೂರು ಶ್ರೀನಿವಾಸ ಅವರು ತಿಳಿಸುತ್ತಾರೆ'.[೭]

ಪ್ರಾಣಿ ಬೇಟೆಯನ್ನೇ ಜೀವನಕ್ಕಾಗಿ ವೃತ್ತಿಯಾಗಿಸಿಕೊಂಡ ಜನಾಂಗವನ್ನು ಹಲವು ಗುಂಪುಗಳಾಗಿ ವಿಂಗಡಿಸಿ ಅಭ್ಯಸಿಸಬಹುದು. 'ಶಿಲಾಯುಗದಲ್ಲಿ ಕಂಡುಬರುವ ಬೇಟೆಗಾರರನ್ನು ಕೀಳುತರಗತಿಯ ಬೇಟೆಗಾರರು ಎಂದು ಗುರುತಿಸಬಹುದು. ಈ ಹಂತದ ಬೇಟೆಗಾರರಿಗೆ ಕಿರಾತ ಎಂಬ ಹೆಸರಿದೆ. ಈ ಬೇಟೆಗಾರರು ಪ್ರಪಂಚದ ಅಹಿತಕರವಾದ ಭೂಭಾಗಗಳಲ್ಲಿ ವಾಸಿಸುತ್ತಿದ್ದಾರೆಂದು ತಿಳಿಯುವುದು. ಅವರು ಪರ್ವತಗಳಲ್ಲಿ ಗಹನವಾದ ದರಿಕೊಳ್ಳಗಳಲ್ಲಿಯೂ ದಟ್ಟಡವಿಗಳಲ್ಲಿಯೂ ವಾಸವಾಗಿದ್ದರು. ಅವರಿಗೆ ನಿಶ್ಚಿತವಾದ ಮನೆಗಳಿರಲಿಲ್ಲ. ಸಿರಿವಂತ ಬಡವ ಎನ್ನುವ ಭೇದವಿರಲಿಲ್ಲ. ನಾಯಕನಿರಲಿಲ್ಲ. ಅವರು ಗುಂಪು ಗುಂಪಾಗಿ ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದರು'.[೮]

ಲೋಹಯುಗದ ಬೇಟೆಗಾರರನ್ನು ಎರಡನೆಯ ಅಂದರೆ ಮೇಲ್ತರಗತಿಯ ಬೇಟೆಗಾರರೆಂದು ಪರಿಗಣಿಸಬಹುದು. ಅವರು ಕಲ್ಲಿನ ಆಯುಧಗಳನ್ನು ತೊರೆದು ಬೇಟೆಗಾಗಿ ಲೋಹದ ಪರಿಕರಗಳನ್ನು ಉಪಯೋಗಿಸಿಕೊಂಡರು. 'ಈ ಹಂತದಲ್ಲಿ ಮನುಷ್ಯನು ಉಳಿದ ಪ್ರಾಣಿಗಳಿಗಿಂತ ಭಿನ್ನವಾಗಿ ಪ್ರಗತಿ ಹೊಂದುತ್ತಾ ತನ್ನ ಬುದ್ಧಿಮತ್ತೆಯಿಂದ ಉಳಿದ ಪ್ರಾಣಿಗಳಿಗಿಂತ ಬುದ್ಧಿವಂತನಾಗಿ ಶಿಲಾಯುಗ ದಿಂದ ಲೋಹಯುಗಕ್ಕೆ ಕಾಲಿಟ್ಟನು. ಜೀವನ ನಿರ್ವಹಣೆಗೆ ಬೇಟೆಯಾಡಲು ಕಬ್ಬಿಣದ ಗುದ್ದಲಿ, ಕೊಡಲಿ, ಈಟಿ, ಖಡ್ಗಗಳನ್ನು ಉಪಯೋಗಿಸಲು ಆರಂಭಿಸಿದನು. ಬೇಟೆಯಿಂದ ದೊರೆತ ಮಾಂಸವನ್ನು ಅರೆಬರೆಯಾಗಿ ಬೇಯಿಸಿ ತಿನ್ನುವುದು ರುಚಿಗೂ ಜೀರ್ಣಕ್ಕೂ ಒಳ್ಳೆಯದು ಎಂದು ಅರಿತು ಕೊಂಡನು.'[೮]

ಇಂದಿಗೂ ಬೇಟೆಯನ್ನೇ ಪರಂಪರಾಗತ ವೃತ್ತಿಯನ್ನಾಗಿಸಿಕೊಂಡ ಜನಾಂಗ ಒಂದಿದೆ. ಅವರನ್ನು ಬೇಡರು ಎಂದು ಕರೆಯುತ್ತಾರೆ. ಈ ಜಾತಿಯ ಜನರು ಹೆಚ್ಚಾಗಿ ಕಾಡುಗುಡ್ಡಗಳಲ್ಲಿ ವಾಸಿಸುತ್ತಾರೆ. ಬಿಲ್ಲು, ಬಾಣ, ಭರ್ಚಿ ಇವರು ದಿನನಿತ್ಯ ಉಪಯೋಗಿಸುವ ಆಯುಧಗಳು. ಇವರನ್ನು ಶಬರ, ಬೇಡ, ಬೇಡರ್ ಎಂದೂ ಕರೆಯುವುದಿದೆ. ಇವರಲ್ಲಿ ಒಂದು ಪಂಗಡ ತಮ್ಮನ್ನು ವಾಲ್ಮೀಕಿಗಳೆಂದು ಗುರುತಿಸಿಕೊಂಡಿದ್ದಾರೆ. ರಾಮಾಯಣವನ್ನು ಬರೆದ ವಾಲ್ಮೀಕಿ ಬೇಡ ಎಂಬುದು ಉಲ್ಲೇಖನೀಯ. ಈಗಲೂ ಬೇಟೆಯಾಡಿ ಬದುಕುವ ಕರ್ನಾಟಕಕ್ಕೆ ವಲಸೆ ಬಂದ ಬೇರೊಂದು ಜನಾಂಗ ಹಕ್ಕಿಪಿಕ್ಕಿಗಳದು. ಇವರು ಅಲೆಮಾರಿಗಳು. ಬೇಡರಿಗೆ ಕಾಡಿನ ಪ್ರಾಣಿಗಳ ಚಲನವಲನಗಳು ಸುಲಭವಾಗಿ ಗೊತ್ತಿರುತ್ತದೆ. ಹಕ್ಕಿ ಪಿಕ್ಕಿಗಳೂ ಹೀಗೆಯೆ. ಹಕ್ಕಿಪಿಕ್ಕಿಗಳು ಅಲೆಮಾರಿಗಳು. ಅವರಿಗೆ ಹಕ್ಕಿಗಳ ಕೂಗನ್ನು ಅನುಕರಿಸುವ ಕಲೆ ಗೊತ್ತು. ಎತ್ತಿನೊಂದಿಗೆ ಕಾಡಿಗೆ ನುಗ್ಗಿ ಅದರ ಮರೆಯಲ್ಲಿಯೇ ಅವಿತು ಬಲೆಹಾಕಿ ಹಕ್ಕಿಗಳನ್ನು ಹಿಡಿಯಬಲ್ಲರು. ಇವರು ಒಂದೇ ಕಡೆ ನೆಲೆ ನಿಲ್ಲರು. ಅಲೆಮಾರಿಗಳು. ಬೇಡರು ಹೀಗಲ್ಲ. ಇವರ ಬಣ್ಣ ಕಪ್ಪು. ನಾಯಕ ಎಂಬುದು ಇವರ ಉಪನಾಮ, ಹಾಗೆಯೇ ತಳವಾರ, ನಾಯಕಮಕ್ಕಳು, ನಾಯಕವಾಡಿ, ಬೇರದ್, ವೇದನ್ ಮತ್ತು ಬೋಯ ಎಂಬ ಉಪಜಾತಿಗಳೂ ಇವೆ.

ಬೇಡರು ಇತ್ತೀಚೆಗೆ ಆಧುನಿಕರಾಗುತ್ತಿದ್ದಾರೆ. ಅವರಿಗೆ ಬೇಸಾಯದ ಕಡೆಗೂ ಒಲವಿದೆ. ವಿದ್ಯಾಭ್ಯಾಸದಲ್ಲೂ ತೊಡಗಿದ್ದಾರೆ. ಉತ್ತರ ಕರ್ನಾಟಕದಲ್ಲಿ ಬೇಡರ ಪ್ರಮಾಣ ಹೆಚ್ಚು. ದೈಹಿಕವಾಗಿ ಬೇಡರು ಬಲಶಾಲಿಗಳು. ವಿಜಯನಗರ ಮತ್ತು ಹೈದರನ ಸೈನ್ಯದಲ್ಲಿ ಇವರು ಸೈನಿಕರಾಗಿ ಸೇವೆ ಸಲ್ಲಿಸಿದ್ದಾರೆ.[೯]

ವೈದಿಕ ಪದ್ಧತಿಯ ಏಣಿಶ್ರೇಣಿ ವ್ಯವಸ್ಥೆಯಲ್ಲಿ ನಿಷಾದ, ಕಿರಾತರನ್ನು ಶೂದ್ರ ವರ್ಗಕ್ಕೆ ಅಂದರೆ ಶ್ರಮಿಕವಲಯದಲ್ಲಿ ಸೇರಿಸಿರುವುದು ಕಂಡುಬರುತ್ತದೆ.[೧೦]

ಬೇಡ ಎಂಬ ಜನಾಂಗ ಸೂಚಕವಾದ ಪದವು ವ್ಯಾಧ ಎಂಬ ಪದದಿಂದ ನಿಷ್ಪನ್ನವಾದುದಲ್ಲ. ಬೇಟೆಯಾಡುವವ ಎಂಬ ದ್ರಾವಿಡ ಶಬ್ದದಿಂದ ಅದು ನಿಷ್ಪನ್ನಗೊಂಡಿದೆ. 'ತಮಿಳು, ತೆಲುಗು ಭಾಷೆಗಳಲ್ಲಿ ಕನ್ನಡದ ಬೇಟೆಗೆ ಬದಲಾಗಿ ವೇಟೆ ಎಂಬ ಪದವಿದ್ದು ಬೇಟೆಗಾರ ಎಂಬುದಕ್ಕೆ ವೇಟೆಗಾರ, ವೇಟಗಾಡು ಎಂಬ ಪದಗಳಿವೆ. ಎಂ ಬಿ ಎಮಿನೋ ಮತ್ತು ಟಿ ಬರೋರವರು ಬೇಡ ಎಂಬುದನ್ನು ದ್ರಾವಿಡ ಪದವೆಂದೇ ಭಾವಿಸಿ ಅದಕ್ಕೆ ಬೇಟೆಗಾರ ಎಂಬ ಅರ್ಥವನ್ನೇ ತಮ್ಮ ದ್ರಾವಿಡ ವ್ಯುತ್ಪತ್ತಿ ಕೋಶದಲ್ಲಿ ಕೊಟ್ಟಿದ್ದಾರೆ.[೧೧]

ಪಶುಪಾಲನೆಯ ಮೂಲದ ಭಾರತದ ಅತ್ಯಂತ ಆದಿಮ ಬುಡಕಟ್ಟುಗಳಲ್ಲಿ ಬೇಡ ಮತ್ತು ಗೊಲ್ಲ ಸಮುದಾಯಗಳು ತನ್ನದೇ ಆದ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬರುತ್ತಿವೆ. ಬೇಡರಲ್ಲಿ ಮ್ಯಾಸಬ್ಯಾಡರು ಮೂಲತಃ ಬೇಟೆಗಾರರಾಗಿದ್ದು ಕಾಲಾಂತರದಲ್ಲಿ ಮೇಷಪಾಲನೆಗೆ ಒಗ್ಗಿಕೊಂಡು ಮೇಷಬೇಡರಾದರು. ಆದರೆ ಗೊಲ್ಲರಲ್ಲಿ ಕಾಡಾಡಿಗಳು ಕೂಡ ಮೂಲತಃ ಬೇಟೆಗಾರ ರಾಗಿದ್ದು ಕಾಲಾಂತರದಲ್ಲಿ ಪಶುಗಳ ಪಾಲಕರಾಗಿರುವುದರಿಂದ ಅದರಲ್ಲೂ ಮುಖ್ಯವಾಗಿ ಗೋವುಗಳ ಪಾಲಕರಾಗಿರುವುದರಿಂದ ಗೊಲ್ಲರೆನಿಸಿಕೊಂಡರು. ಬೇಡರು ಬೇಟೆಗೆ ಮಹತ್ವ ಕೊಟ್ಟರೆ ಗೊಲ್ಲರು ಪಶುಪಾಲನೆಗೆ ಮಹತ್ವ ಕೊಡುತ್ತಾರೆ. ಬಡತನ ರೇಖೆಗಿಂತ ಕೆಳಗೆ ಜೀವಿಸುವ ಇವರು ಬೇಟೆ, ಪಶುಪಾಲನೆ, ವ್ಯವಸಾಯ ಮತ್ತು ಜನಪದ ವೈದ್ಯ ವೃತ್ತಿಗಳನ್ನು ಹಂತಹಂತವಾಗಿ ಮುಂದುವರೆಸಿ ಕೊಂಡು ಬಂದಿದ್ದಾರೆ.'[೧೨] ಪಶುಪಾಲನೆಯಿಂದ ಬೇಟೆಗಾರಿಕೆ ಹುಟ್ಟಿಕೊಂಡಿತು. ಪಶುಗಳೇ ಬುಡಕಟ್ಟು ಜನರ ಆರ್ಥಿಕ ಸಂಪತ್ತು. ಈ ಪಶುಗಳ ಮಂದೆಯನ್ನು ರಾಸುಗಳು ಎಂದೂ ಸಹ ಕರೆಯುತ್ತಾರೆ. ಮನುಷ್ಯ ಎಷ್ಟೇ ಸಾಮಾಜಿಕವಾಗಿ ಅಭಿವೃದ್ಧಿಹೊಂದಿದರೂ ತನ್ನ ಮೂಲ ಸಂಸ್ಕೃತಿಯ ಬೇರುಗಳನ್ನು ಹಾಗೇ ಜೋಪಾನವಾಗಿ ಕಾಪಾಡಿಕೊಂಡಿರುತ್ತಾನೆ. ಇದಕ್ಕೆ ಉತ್ತಮ ಉದಾಹರಣೆ ಯುಗಾದಿ ಸಂದರ್ಭದ ಬೇಟೆಮರದ ಆಚರಣೆ. ಬಹುತೇಕ ಕರ್ನಾಟಕದಾದ್ಯಂತ ಬೇಡರು ಯುಗಾದಿಯ ಮರುದಿನ ಬೇಟೆಯಾಡಿ ತಂದ ಕಾಡುಪ್ರಾಣಿಗಳನ್ನು ಬೇಟೆಗಾರನೊಂದಿಗೆ ಮೆರವಣಿಗೆ ಮಾಡಿ ಕೊನೆಗೆ ಬೇಟೆಯನ್ನು ಸಾಮೂಹಿಕವಾಗಿ ಹಂಚಿಕೊಂಡು ಪ್ರಸಾದದಂತೆ ಸ್ವೀಕರಿಸುವ ಪದ್ಧತಿಯನ್ನು ಕಾಣುತ್ತೇವೆ. ಕೆಲವು ಕಡೆ ಯುಗಾದಿ ಸಂದರ್ಭದಲ್ಲಿ ಈ ಆಚರಣೆ ಮಾಡಿದರೆ ಇನ್ನೂ ಕೆಲವು ಕಡೆ ದಸರೆಯ ಸಂದರ್ಭದಲ್ಲಿ ಮಾಡುತ್ತಾರೆ. ಬೇಟೆಯಾಡಿದ ಬೇಟೆಗಾರನಿಗೆ ಆತನ ಕುಟುಂಬದ ಮಹಿಳೆಯರು ಆರತಿಯೆತ್ತಿ ಆಸರ ತೆಗೆದು ಮನೆಯೊಳಗೆ ಕರೆದುಕೊಳ್ಳುವ ಸಂಪ್ರದಾಯವಿದೆ. ಪ್ರಾಯಶಃ ಬೇಟೆಗಾರ ಸಂಸ್ಕೃತಿಯ ಜನ ಅಲೆಮಾರಿಗಳು. ತಮ್ಮ ಅಲೆಮಾರಿತನದಲ್ಲಿ ತಮ್ಮ ಕುಟುಂಬದ ದಿನನಿತ್ಯದ ಪರಿಕರಗಳನ್ನು ಊರಿಂದ ಊರಿಗೆ ಅಥವಾ ಪ್ರದೇಶದಿಂದ ಪ್ರದೇಶಕ್ಕೆ ಹೊತ್ತೊಯ್ಯಲು ದನಗಳನ್ನು ಬಳಸುತ್ತಿದ್ದರು. ಈ ರೀತಿ ಪಶುಪಾಲನೆ ಈ ಜನರ ಮಧ್ಯಕ್ಕೆ ನುಸುಳಿರುವ ಸಾಧ್ಯತೆ ಇದೆ. ಬಹುತೇಕ ಕರ್ನಾಟಕದ ಅಲೆಮಾರಿ ಸಮುದಾಯಗಳು ನೆಲಸಿಗ

ಸಮುದಾಯಗಳಾಗಿ ಪರಿವರ್ತನೆಗೊಳ್ಳತೊಡಗಿದ್ದು ಮಧ್ಯಕಾಲೀನ ಕಾಲದಲ್ಲಿ ಎನಿಸುತ್ತದೆ. '೧೩ನೇ ಶತಮಾನದಲ್ಲಿ ಈ ರೀತಿಯಾಗಿ ನೆಲೆಸುವ ಸಂಸ್ಕೃತಿಗೆ ಬುನಾದಿ ಹಾಕಿದ್ದು ಕರ್ನಾಟಕದ ಚಿಕ್ಕ ರಾಜ್ಯವೊಂದರ ಅರಸನಾದ ಕುಮಾರರಾಮ. ಅವನು ಒಳನಾಡಿನಲ್ಲಿ ಬೇಸಾಯಕ್ಕೆ ಅನುಕೂಲ ವಾಗುವಂತೆ ಕೆರೆ ಕುಂಟೆಗಳನ್ನು ನಿರ್ಮಿಸಿ ಅಭಿವೃದ್ಧಿಗೊಳಿಸಿದ. ಈ ರೀತಿಯಾಗಿ ಅಭಿವೃದ್ಧಿಗೊಳಿಸಿದ್ದ ರಿಂದ ಬೇಡರಂತಹ ಸಮುದಾಯ ವ್ಯವಸಾಯ ವೃತ್ತಿಯನ್ನು ನಡೆಸುವ ಕಡೆಗೆ ಒಲವು ತೋರಿಸಿ ಆ ನಿಟ್ಟಿನಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತದೆ. ಅದೇ ರೀತಿ ನೀರಿನಲ್ಲಿ ಬೇಟೆಯಾಡುವ ಮತ್ತೊಂದು ಅಲೆಮಾರಿ ಸಮುದಾಯವಾದ ಬೆಸ್ತ ಸಮುದಾಯಕ್ಕೆ ಮೀನು ಬೇಟೆಗಾರಿಕೆಯನ್ನು ಒಂದೇ ಕಡೆ ನೆಲೆ ನಿಂತು ಮಾಡಲು ಇವನ ಯೋಜನೆ ಸಹಕಾರಿಯಾಯಿತು. ಇದರೊಂದಿಗೆ ತನ್ನ ರಾಜ್ಯ ವಿಸ್ತರಣೆಯಲ್ಲಿ ಈ ಅಲೆಮಾರಿ ಸಮುದಾಯಗಳನ್ನು ತುಂಬಾ ಸಮರ್ಪಕವಾಗಿ ದುಡಿಸಿಕೊಂಡ ಹೆಗ್ಗಳಿಕೆಗೂ ಇವನು ಕಾರಣನಾದ. ಇವನ ಆಡಳಿತದ ನಂತರದಲ್ಲಿ ಸ್ಥಾಪನೆಗೊಂಡ ವಿಜಯನಗರ ಅರಸರು ಕುಮಾರರಾಮನ ಹಾದಿಯನ್ನೇ ತುಳಿದು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ದಕ್ಷಿಣ ಭಾರತದ ಅತೀ ಮುಖ್ಯ ಸಾಮ್ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು.'[೧೩] ಕುಮಾರ ಅವರ ಪ್ರಕಾರ ಬೇಟೆಗಾರಿಕೆಯನ್ನೇ ಕಸುಬಾಗಿಸಿಕೊಂಡಿದ್ದ ಅಲೆಮಾರಿ ಬುಡಕಟ್ಟುಗಳು ನೆಲೆಸಿಗ ಸಂಸ್ಕೃತಿಗೆ ಪರಿವರ್ತನೆಗೊಳ್ಳುವುದರೊಂದಿಗೆ ಪಶುಪಾಲನೆ, ವ್ಯವಸಾಯದ ಕಡೆ ಪಲ್ಲಟಗೊಂಡವು. ಈ ರೀತಿ ನೆಲಸಿಗ ಸಂಸ್ಕೃತಿಗೆ ತಮ್ಮನ್ನು ಒಗ್ಗಿಸಿಕೊಂಡ ಈ ಬುಡಕಟ್ಟುಗಳು ಸಹಜವಾದ ತಮ್ಮ ದೈಹಿಕ ಬಲ, ಸಾಮರ್ಥ್ಯಗಳಿಂದಾಗಿ ಆಶ್ರಯದಾತ ರಾಜರಿಗೆ ನಿಷ್ಠೆಯ ಸೇವಕರಾಗಿ ಕೆಲಸ ಮಾಡುವ ಕಾರ್ಮಿಕರೂ ಆದರು. ಈ ಬುಡಕಟ್ಟಿನ ಮೂಲದ ಕುರಿತು ಸ್ಪಷ್ಟತೆ ಇಲ್ಲದಾದರೂ ಇವರ ವೃತ್ತಿಯ ಕುರಿತು ಹೇಳುವುದಾದರೆ ಬೇಟೆ, ಪಶುಪಾಲನೆ ಮತ್ತು ಕೃಷಿಯೆಂದು ಸ್ಪಷ್ಟವಾಗಿ ಹೇಳಬಹುದು. ಸಾಮಾನ್ಯವಾಗಿ ಬುಡಕಟ್ಟುಗಳು ತಾವು ನೆಲೆಸಿದ ಪರಿಸರಕ್ಕೆ ಹೊಂದಿಕೊಂಡು ಬದುಕುತ್ತಾರೆ. ಬುಡಕಟ್ಟುಗಳ ದೈಹಿಕ ಲಕ್ಷಣ, ಆಹಾರ ಕ್ರಮ, ಉಡುಪು, ಭಾಷೆ, ದೈವಾರಾಧನೆ, ರೀತಿನೀತಿಗಳು ಒಟ್ಟಾರೆ ಜೀವನಕ್ರಮದ ಮೇಲೆ ಅವರು ನೆಲೆಸಿದ ಭೌಗೋಳಿಕ ಪರಿಸರದ ಪ್ರಭಾವವನ್ನು ಕಾಣುತ್ತೇವೆ. ಭೌಗೋಳಿಕ ಪರಿಸರದಲ್ಲಾಗುವ ಎಲ್ಲಾ ಏರಿಳಿತಗಳಿಗೆ ತಕ್ಕಂತೆ ಬುಡಕಟ್ಟುಗಳ ಜೀವನಕ್ರಮದಲ್ಲೂ ಹಲವು ಹಂತಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. ಉದಾಹರಣೆಗೆ ಬೇಟೆಯನ್ನೇ ನೆಚ್ಚಿಕೊಂಡಿದ್ದ ಸಮುದಾಯವೊಂದು ಅರಣ್ಯ ನಾಶದಿಂದಾಗಿ ತನ್ನ ಆಹಾರಕ್ರಮವನ್ನೇ ಬದಲಿಸಿಕೊಳ್ಳ ಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಜೊತೆಗೆ ಸರ್ಕಾರ ಹುಟ್ಟುಹಾಕಿದ ಅರಣ್ಯ ಇಲಾಖೆಯ ರೀತಿನೀತಿಗಳು, ಅರಣ್ಯ ಕಾಯ್ದೆಗಳು ಇಂತಹ ಮುಕ್ತ ಬುಡಕಟ್ಟುಗಳ ಜೀವನಕ್ಕೆ ತಡೆಗೋಡೆಗಳಾಗಿ ಪರಿಣಮಿಸುತ್ತವೆ.

ಕಾಡಿನಿಂದ ನಾಡು, ನಾಡಿನಿಂದ ನಗರ, ನಗರದಿಂದ ಮಹಾನಗರ ಮುಂತಾದ ವ್ಯವಸ್ಥೆಗಳು ಸೃಷ್ಟಿಯಾಗಿರಬಹುದು. ಮೇಲಿನ ಸ್ಥಿತ್ಯಂತರಗಳಿಗೆ ಸಂವಾದಿಯಾಗಿ ಮಾನವನ ಬೆಳವಣಿಗೆಯ ಚರಿತ್ರೆಯಲ್ಲಿ ಬೇಟೆ, ಪಶುಸಂಗೋಪನೆ, ಆಹಾರ ಸಂಗ್ರಹಣೆ, ಕೃಷಿ ಮತ್ತು ವಿಜ್ಞಾನ ಯುಗಗಳೆಂದು ಐದು ಅವಸ್ಥೆಗಳನ್ನು ಕಾಣಬಹುದು. ಆದುದರಿಂದ ಒಂದು ಜನಾಂಗದ ಎಲ್ಲಾ ಸಾಮಾಜಿಕ ಚಲನಶೀಲತೆಯ ಹಾಗೂ ಪರಿವರ್ತನೆಯ ಹಿನ್ನೆಲೆಯಲ್ಲಿ ಮತ್ತು ವಿವಿಧ ಘಟ್ಟಗಳ ಮನುಷ್ಯ ಕುಲದ ಚರಿತ್ರೆಯ ಹಿನ್ನೆಲೆಯಲ್ಲಿ ಇವತ್ತಿನ ಯಾವುದೇ ಜನಾಂಗವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ ಎಂಬ ಮಾತಿನಲ್ಲಿ ಅರ್ಥವಿದೆ.'[೧೪]

ಪ್ರತಿಯೊಂದಕ್ಕೂ ತನ್ನದೇ ಆದ ಚರಿತ್ರೆ ಇರುವಂತೆ ಬೇಡಬುಡಕಟ್ಟಿಗೂ ಒಂದು ಚರಿತ್ರೆ ಇದ್ದಿರಲೇಬೇಕು. ಬೇಡಬುಡಕಟ್ಟು ಮೂಲತಃ ದ್ರಾವಿಡ ಪರಂಪರೆಗೆ ಸೇರಿದ್ದುದಾಗಿದೆ. ದ್ರಾವಿಡ ಭಾಷೆಗಳಲ್ಲಿ ಬೇಡನ, ವೇಂದನ್, ವೇಟವನ್ ಎಂದೆಲ್ಲಾ ಪದಗಳು ಬಳಕೆಯಲ್ಲಿರುವುದು ಕಂಡು ಬರುತ್ತದೆ. 'ರಾಷ್ಟ್ರಕೂಟರ ಕಾಲದಲ್ಲಿ ದ್ವಿತೀಯ ಭಾಷೆಯಾಗಿ ಬಳಕೆಯಲ್ಲಿದ್ದ ಅಪಭ್ರಂಶ ಭಾಷೆಯಲ್ಲಿ ನಾಹಲ, ನಾ ಇಲ್ಲ, ವಾಹ, ಸಮರ, ಸಿಮೀರ, ಬೆಲಾಡ, ಬಾದ್ಧಿಯ ಮುಂತಾದ ಅನೇಕ ಹೆಸರುಗಳು ದೊರೆಯುತ್ತವೆ.'[೧೫]

ಸಮಾಜವೆಂಬುದು ನಿರಂತರವಾಗಿ ಬದಲಾವಣೆಗೆ ಒಳಗಾಗುತ್ತಲೇ ಇರುತ್ತದೆ. ಬದಲಾವಣೆಗೆ ಒಳಪಡದ ಸಮಾಜವು ಬಹುಕಾಲ ಬದುಕುವ ಸಾಧ್ಯತೆಗಳು ಕಡಿಮೆ. ಬದಲಾವಣೆಯೆಂಬುದು ಸಮಾಜದ ಅನಿವಾರ್ಯತೆಯಾಗಿದೆ. ಯಾವುದೇ ಬೆಳೆಯುತ್ತಿರುವ ಸಮಾಜದಲ್ಲಿ ಬದಲಾವಣೆಯ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಬಹುಪಾಲು ಸಮುದಾಯಗಳು ಸಮಾಜದಲ್ಲಾಗುವ ಮಾರ್ಪಾಡುಗಳನ್ನು ಒಪ್ಪಿಕೊಂಡೋ ಅಥವಾ ಒಪ್ಪಿಕೊಳ್ಳದೆಯೋ ಒಟ್ಟಾರೆಯಾಗಿ ತಾನೂ ಮಾರ್ಪಾಡುಗಳಿಗೆ ಒಗ್ಗಿಕೊಳ್ಳುತ್ತ ಸಾಗುತ್ತದೆ. ಈ ರೀತಿಯ ಪಲ್ಲಟಗಳಿಂದ ಅದು ಪರಂಪರೆಯಿಂದ ನಂಬಿಕೊಂಡು ಬಂದ ಎಷ್ಟೋ ನಂಬಿಕೆಗಳು, ವಿಧಿ ನಿಷೇಧಗಳು, ಆಚರಣೆಗಳು ಮೂಲಾರ್ಥವನ್ನು ಕಳೆದುಕೊಂಡು ಸವಕಲು ನಾಣ್ಯದಂತೆ ಸಮುದಾಯದ ಮಧ್ಯ ಬಳಕೆಗೊಳ್ಳುತ್ತಾ ನಿಧಾನವಾಗಿ ಸಮುದಾಯದಿಂದ ದೂರಾಗುತ್ತಾ ಸಾಗುತ್ತವೆ. ಬಹುತೇಕವಾಗಿ ಇಂತಹ ಒತ್ತಡ ಗಳಿಂದಾಗಿಯೇ ಒಂದೇ ಪಂಗಡ ಅಥವಾ ಒಂದು ಸಮುದಾಯ ಇಬ್ಭಾಗವಾಗಿವೆಯೇನೋ ಎನಿಸುತ್ತದೆ. ಬೇಗ ಮಾರ್ಪಾಡಿಗೆ ಒಳಗಾದದ್ದು ಸಮಾಜಕ್ಕೆ ಹತ್ತಿರವಾದರೆ ಆ ಮಾರ್ಪಾಡನ್ನು ಬೇಗ ಒಪ್ಪಿಕೊಳ್ಳದಿರುವುದು ಅದರಿಂದ ವಿರುದ್ಧ ದಿಕ್ಕಿನಲ್ಲಿ ಸಾಗುತ್ತದೆ. ಉದಾಹರಣೆಗೆ ಊರಗೊಲ್ಲ ಮತ್ತು ಕಾಡುಗೊಲ್ಲ, ಊರಬೇಡ ಮತ್ತು ಮ್ಯಾಸಬೇಡ, ಊರಗಮ್ಮಾರ ಮತ್ತು ಬಯಲುಗಮ್ಮಾರ ಮುಂತಾದ ಎಷ್ಟೋ ಉದಾಹರಣೆಗಳನ್ನು ನಾವು ಈ ಸಮಾಜದೊಳಗೆ ಕಾಣಬಹುದು. ಆದರೆ ಮಾರ್ಪಾಡುಗಳಿಗೆ ಒಪ್ಪದೆ ದೂರವುಳಿದ ಸಮುದಾಯಗಳು ತಮಗೆ ಗೊತ್ತಾಗದ ರೀತಿಯಲ್ಲಿಯೇ

ಮಾರ್ಪಾಡುಗಳ ಜಾಲಕ್ಕೆ ಸಿಲಕುತ್ತಿರುವುದು ಅನಿವಾರ್ಯವಾಗಿದೆ. ಮನುಷ್ಯ ಅನೇಕ ಆವಿಷ್ಕಾರಗಳ ಮೂಲಕ ತನ್ನ ಬದುಕನ್ನು ಹೊಸ ಜೀವನಕ್ರಮಕ್ಕೆ ಒಡ್ಡುತ್ತಲೇ ಸಾಗಿದ. ಈ ವಿಕಾಸಶೀಲ ಗುಣವೇ ಶಿಲಾಯುಗದಿಂದ ಮನುಷ್ಯನನ್ನು ಆಧುನಿಕ ತಂತ್ರಜ್ಞಾನದ ವಿಶ್ವಗ್ರಾಮಕ್ಕೆ ಎಳೆದುತಂದು ನಿಲ್ಲಿಸಿದೆ.

'ಯಾವ ಭಾಷೆ, ಜನಾಂಗ ಹಾಗೂ ಪರಂಪರೆಗಳು ಜ್ಞಾನದ ಸಂಯೋಗಗಳಿಗೆ ಒಪ್ಪುವುದಿಲ್ಲವೋ ಅಂತಹವು ಜೀವಂತವಾಗಿದ್ದರೂ ಆಧುನಿಕತೆಯ ಲೆಕ್ಕದಲ್ಲಿ ಅವು ಮೃತವಾದಂತೆ.'[೧೬]

ಬೇಟೆ ಈ ಸಮುದಾಯದ ಒಂದು ಅಂಗವಾಗಿದೆ. ಬೇಟೆ ವೃತ್ತಿಯಲ್ಲ, ಈ ಸಮುದಾಯಕ್ಕೆ ಅದು ಪ್ರವೃತ್ತಿಯಾಗಿದೆ. ಬೇಟೆಯಾಡದೆ ಬದುಕುವುದು ಹೇಗೆ ಎಂದು ಪ್ರಶ್ನಿಸುವ ಕಾಲವೊಂದು ಈ ಸಮುದಾಯದಲ್ಲಿತ್ತು. ಪ್ರಾಯಶಃ ಈ ಮನೋಭಾವನೆ ಬ್ರಿಟಿಶರು ಭಾರತವನ್ನು ಆಳಲು ಪ್ರಾರಂಭಿಸುವ ಕಾಲದವರೆಗೂ ಇದ್ದಿತೇನೊ. ಬ್ರಿಟಿಷರು ಭಾರತ ಪ್ರವೇಶಿಸಿದ ನಂತರ ಇಂತಹ ಸ್ವಚ್ಛಂದ ಬದುಕಿನ ಸಮುದಾಯಗಳಿಗೆ ಅಪರಾಧಿ ಬುಡಕಟ್ಟುಗಳ ಹೆಸರಿನಲ್ಲಿ ನಿರ್ಬಂಧಗಳನ್ನು ಹೇರತೊಡಗಿದವು. ಜೊತೆಗೆ ಶಸ್ತ್ರ ನಿಶ್ಶಸ್ತ್ರೀಕರಣ ಕಾಯ್ದೆ ಮುಂತಾದ ಕಾಯ್ದೆಗಳನ್ನು ಆಗಿನ ಬ್ರಿಟಿಶ್ ಸರ್ಕಾರ ಜಾರಿಗೆ ತಂದಿತು. ಇದೇ ಕಾರಣಕ್ಕಾಗಿ ಹಲಗಲಿ ಬೇಡರು ದಂಗೆಯೇಳುತ್ತಾರೆ.

ರಾಷ್ಟ್ರೀಯ ಹೋರಾಟದಲ್ಲಿ ಬ್ರಿಟಿಷರ ತುಪಾಕಿಗಳಿಗೆ ಎದೆಕೊಟ್ಟಿದ್ದ ಸಮುದಾಯಗಳು ಸ್ವಾತಂತ್ರ್ಯಾನಂತರ ಸ್ಥಳೀಯ ಆಳುವ ವರ್ಗದ ದೃಷ್ಟಿಯಲ್ಲಿ ದೇಶದ್ರೋಹಿಗಳಾಗಿ ಪರಿಗಣಿತ ವಾಗುತ್ತವೆ.[೧೭] ರಾಷ್ಟ್ರೀಯ ಹೋರಾಟದ ಕರನಿರಾಕರಣೆ ಚಳುವಳಿಯಲ್ಲಿ ಭಾಗವಹಿಸಿ ಮನೆ, ಮಠ, ಜಮೀನುಗಳನ್ನು ಕಳೆದುಕೊಂಡ ಹಾಲಕ್ಕಿಗಳು, ಮುಕ್ರಿಗಳು ನಿರ್ಗತಿಕರಾಗಿ ಹೋದರು. ಸ್ವಾತಂತ್ರ್ಯಾನಂತರ ಇದೇ ಆದಿವಾಸಿಗಳು ಕಳೆದುಕೊಂಡ ತಮ್ಮ ಜಮೀನನ್ನು ಮರಳಿ ಪಡೆಯಲು ಚಳವಳಿ ನಡೆಸಿದಾಕ್ಷಣ ರಾಷ್ಟ್ರವಿರೋಧಿಗಳಾಗಿ ಹೋದರು.[೧೮]

ಬೇಡರ ಹಿರಿಯ ವಕ್ತೃಗಳು ಮೂಲತಃ ತಾವು ಬೇಟೆಗಾರಿಕೆಯ ಕಸುಬನ್ನು ಅವಲಂಬಿಸಿ ಕೊಂಡಿದ್ದವರೆಂದು ಹೇಳುತ್ತಾರೆ. ಇಂದು ಅರಣ್ಯ ಕಾಯ್ದೆಯ ಬಿಗಿ ಹಿಡಿತದಿಂದಾಗಿ ಬೇಟೆಗಾರಿಕೆ ಕಸುಬಿನಿಂದ ತಾವು ಹಿಂದೆ ಸರಿದಿದ್ದೇವೆಂದು ತಿಳಿಸುತ್ತಾರೆ. ಈ ಸಮುದಾಯದವರು ವಿಶೇಷವಾಗಿ ಕೆಲವು ಕಡೆ ಯುಗಾದಿಯಲ್ಲಿ ಇನ್ನೂ ಕೆಲವು ಕಡೆ ದಸರೆಯಲ್ಲಿ ಬೇಟೆ ಆಚರಣೆಯನ್ನು ಜೀವಂತ ವಾಗಿ ಉಳಿಸಿಕೊಂಡಿರುವುದು ಕಂಡುಬರುತ್ತದೆ. ಆದರೆ ಆಚರಣೆಯಾಗಿ ಉಳಿದುಕೊಂಡ ಬೇಟೆಯು ನಿಜ ಜೀವನದಿಂದ ದೂರವಾಗಿದೆ. ತುಂಬಾ ಪ್ರಾಚೀನ ಕಾಲದಲ್ಲಿ ಬೇಡರಲ್ಲಿ ಬೇಟೆಯು ವೃತ್ತಿಯಾಗಿಯೋ ಪ್ರವೃತ್ತಿಯಾಗಿಯೋ ಜೀವಂತವಾಗಿದ್ದಿರಬೇಕು. ಅದನ್ನು ಅವರ ಬೇಟೆಮರದ ಆಚರಣೆ ಪುಷ್ಟೀಕರಿಸುತ್ತದೆ. ನಂತರದ ಕಾಲದಲ್ಲಿ ಬೇಟೆಗಾರಿಕೆಯಿಂದ ದೂರವಾಗಿ ಪಶುಪಾಲನಾ

ವೃತ್ತಿಗೆ ಇವರು ಪಲ್ಲಟಗೊಂಡಿದ್ದಾರೆ. ಕಾಡುಗೊಲ್ಲರಂತೆ ಪಶುಪಾಲನೆಯನ್ನೇ ಮುಖ್ಯ ವೃತ್ತಿಯಾಗಿಸಿಕೊಂಡಿರುವುದು ಸ್ಪಷ್ಟ. ಮ್ಯಾಸಬೇಡ ಎನ್ನುವ ಮೇಸ ಅಥವಾ ಮೇಯಿಸುವ ಬೇಡ ಎನ್ನುವ ಅರ್ಥದಲ್ಲಿಯೇ ಬಳಕೆಗೊಳ್ಳುತ್ತಿರುವ ಸಾಧ್ಯತೆಗಳ ಕುರಿತು ಹಲವು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಂದಿಗೂ ಮ್ಯಾಸಬೇಡರ ಹಟ್ಟಿಗಳಲ್ಲಿ ಕಿಲಾರಿಗಳು ಅಥವಾ ದೇವರ ದನಗಳ ಮಂದೆಯನ್ನು ಕಾಣುತ್ತೇವೆ. ಇದಕ್ಕೆ ಉತ್ತಮ ಉದಾಹರಣೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ಕಂಪಲರಾಯನಹಟ್ಟಿಯಾಗಿದೆ. ಇಂದಿಗೂ ಈ ಹಟ್ಟಿಯಲ್ಲಿ ಕಿಲಾರಿ ದನಗಳು ಕಂಡುಬರುತ್ತವೆ. ಅದೇ ರೀತಿ ಜಗಳೂರು ತಾಲೂಕಿನಲ್ಲಿರುವ ಬಹುತೇಕ ಮ್ಯಾಸಬೇಡರ ಹಟ್ಟಿಗಳಲ್ಲಿ ಕಿಲಾರಿಗಳು ಕಂಡುಬರುತ್ತವೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ದಾವಣಗೆರೆ ಜಿಲ್ಲೆಯ ಗ್ರಾಮಗಳಲ್ಲಿ ಹಳೆ ತಲೆಮಾರಿನ ಪೀಳಿಗೆಯವರು ವಿಶೇಷವಾಗಿ ತಮ್ಮ ದನಗಳೇ ತಮ್ಮ ಆಸ್ತಿ ಎಂದು ನಂಬಿ ಅವುಗಳನ್ನು ಸಾಕುತ್ತಿದ್ದರು. ಹಾಗೆಯೇ ಎರಡನೇ ಪೀಳಿಗೆಯ ಜನ ದನಕರುಗಳೊಂದಿಗೆ ಕೃಷಿಕೂಲಿ ಮತ್ತು ಗೇಣಿದಾರರಾಗಿ ರೂಪುಗೊಂಡರು. ಹೀಗೆ ವೃತ್ತಿಗಳು ತಲೆಮಾರಿನಿಂದ ತಲೆಮಾರಿಗೆ ಪಲ್ಲಟಗೊಳ್ಳುತ್ತಾ ಸಾಗಿರುವುದನ್ನು ಬೇಡ ಸಮುದಾಯದ ಮೂಲಕ ಅರಿಯಬಹುದು. ತಳಸಮುದಾಯಗಳು ಸಮಾಜದಲ್ಲಿ ಮೇಲಕ್ಕೇರಿದ ಇತರ ಜಾತಿಗಳನ್ನು ನೋಡಿ ಅವುಗಳನ್ನು ಅನುಕರಿಸಲು ಪ್ರಯತ್ನಿಸುತ್ತವೆ. ಈ ರೀತಿಯ ಅನುಕರಣೆಯನ್ನೇ ಎಂ ಎನ್ ಶ್ರೀನಿವಾಸ್ ಅವರು ಸಂಸ್ಕೃತೀಕರಣವೆಂದು ಕರೆದಿದ್ದಾರೆ. ಅಂದರೆ ತಳಸಮುದಾಯಗಳು ತಮ್ಮೊಂದಿಗೆ ಬದುಕುವ ಇತರ ಮೇಲ್ಜಾತಿಗಳನ್ನು ನೋಡಿ ಅವರಂತೆಯೇ ಸಾಮಾಜಿಕವಾಗಿ ಬದಲಾವಣೆಗೆ ಒಳಗಾಗಬೇಕೆಂಬ ಉದ್ದೇಶದಿಂದ ಅವರ ನಡೆನುಡಿಗಳನ್ನು, ಸಾಧ್ಯವಾದ ಮಟ್ಟಿಗೆ ಅವರ ವೃತ್ತಿಗಳನ್ನು ಅನುಕರಿಸಲು ಪ್ರಯತ್ನಿಸುತ್ತವೆ. ಉದಾಹರಣೆಗೆ ಬ್ರಾಹ್ಮಣರ ವಠಾರ ಅಥವಾ ಅಗ್ರಹಾರದಲ್ಲಿ ಬಾಡಿಗೆಗೆ ಮನೆ ಪಡೆದ ತಳಸಮುದಾಯದ ವ್ಯಕ್ತಿಯೊಬ್ಬ ಬ್ರಾಹ್ಮಣರಂತೆ ಉಡುಗೆತೊಡುಗೆಗಳನ್ನು ಅನುಕರಿಸುವುದು, ತಾನು ಮಾಂಸಾಹಾರಿಯಾದರೂ ತಾವಾರೂ ಮಾಂಸ ಸೇವನೆ ಮಾಡುವುದಿಲ್ಲವೆಂದು ತೋರಿಸುವುದು, ಇಲ್ಲವೆ ಮಾಂಸಾಹಾರವನ್ನು ತ್ಯಜಿಸಿಬಿಡುವ ಕ್ರಿಯೆಗೆ ಒಳಗಾಗುತ್ತಾನೆ. ಇದು ಸಾಮಾಜಿಕವಾಗಿ ತಾನು ಸಹ ಮೇಲೆ ಹೋಗಬೇಕೆಂಬ ಹಂಬಲದಿಂದ ಮಾಡಲಾಗುವ ಕ್ರಿಯೆಗಳು. ಮತ್ತೊಂದು, ತನ್ನ ಮೂಲ ವೃತ್ತಿಯಿಂದ ಸಾಮಾಜಿಕವಾಗಿ ತನಗೆ ಅವಮಾನವಾಗುತ್ತದೆಂಬ ಕಾರಣಕ್ಕಾಗಿಯೂ ಮೂಲವೃತ್ತಿಯನ್ನು ತ್ಯಜಿಸುವ ಸಾಧ್ಯತೆಗಳೂ ಕಂಡುಬರುತ್ತವೆ. ಉದಾಹರಣೆಗೆ ಚಮ್ಮಾರಿಕೆ ಭಾರತೀಯ ಸಮಾಜದಲ್ಲಿ ತುಂಬಾ ನಿಕೃಷ್ಟವಾದ ವೃತ್ತಿ ಎಂದು ಭಾವಿಸಲಾಗುತ್ತದೆ. ಚರ್ಮವನ್ನು ಮುಟ್ಟಿ ಕೆಲಸ ಮಾಡುವವನನ್ನೂ ವೃತ್ತಿಯ ಕಾರಣಕ್ಕಾಗಿಯೇ ಕೀಳಾಗಿ ಕಾಣುತ್ತಿರಬೇಕು. ಹಳೆತಲೆಮಾರಿನ ವ್ಯಕ್ತಿ ಆ ವೃತ್ತಿಯನ್ನು ಅವಮಾನವೆಂದು ಪರಿಗಣಿಸದೆ ಮಾಡುತ್ತಾನೆ. ಆದರೆ ಅವನ ಹೊಟ್ಟೆಯಲ್ಲಿ ಹುಟ್ಟಿದ ವ್ಯಕ್ತಿ ಚಮ್ಮಾರಿಕೆಯಿಂದಾಗಿ

ಸಾಮಾಜಿಕವಾಗಿ ತನಗೆ ಅವಮಾನವಾಗುತ್ತದೆ. ಆ ವೃತ್ತಿಗಿಂತ ಬೇರೆ ವೃತ್ತಿಯಲ್ಲಿ ತನಗೆ ಕನಿಷ್ಠ ಸಂಪಾದನೆಯಾದರೂ ಚಿಂತೆಯಿಲ್ಲ, ಕನಿಷ್ಠ ಹಣ ಸಿಕ್ಕರೂ ಪರವಾಗಿಲ್ಲ, ಮರ್ಯಾದೆ ಸಿಗುವ ಹೊಸ ವೃತ್ತಿಗೆ ಹೋಗುವುದಕ್ಕೆ ಹವಣಿಸುತ್ತಾನೆ ಮತ್ತು ಸಾಧ್ಯವಾದಮಟ್ಟಿಗೆ ಆ ನಿಟ್ಟಿನಲ್ಲಿ ಸಾಗುತ್ತಾನೆ.

ಮೊದಲ ತಲೆಮಾರಿನ ವೃತ್ತಿಗಳು ಹಣವನ್ನು ಮಾನದಂಡವಾಗಿ ಪರಿಗಣಿಸದೆ ಕೇವಲ ತಮ್ಮ ಹಕ್ಕು ಎನ್ನುವ ಅರ್ಥದಲ್ಲಿ ಇಲ್ಲವೇ ವಾರ್ಷಿಕವಾಗಿ ಸೇವೆಗೆ ನೀಡುವ ಕಾಳುಕಡಿಗಳನ್ನು ಮಾತ್ರ ಪ್ರತಿಫಲವಾಗಿ ಸ್ವೀಕರಿಸುವುದು. ಇದನ್ನು ಹಳ್ಳಿಗರು ವರ್ತನೆ ಮಾಡುವುದು ಅಥವಾ ಸಾಗು ಮಾಡುವುದು ಅಥವಾ ಆಯಾ ಎಂದು ಕರೆಯುತ್ತಾರೆ. ಚಮ್ಮಾರ, ಕ್ಷೌರಿಕ, ಕಮ್ಮಾರ, ಬಡಿಗೇರ, ತಳವಾರ ಮುಂತಾದವರು ಈ ರೀತಿಯ ಸಾಗಿನಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದರು. ಆದರೆ ಹೊಸತಲೆಮಾರಿನಲ್ಲಿ ಈ ರೂಪದ ಸಾಗಿನ ಕ್ರಮವಿಲ್ಲದಿರುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ನೋಡಿದಾಗ ತಲೆಮಾರಿನಿಂದ ತಲೆಮಾರಿಗೆ ವೃತ್ತಿಗಳ ಸ್ವರೂಪ ಪಲ್ಲಟಗೊಂಡಿರುವುದನ್ನು ಕಾಣುತ್ತೇವೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ವೃತ್ತಿಗಳೊಂದಿಗೆ ಹಲವಾರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಅಂಶಗಳೂ ಪಲ್ಲಟಗೊಳ್ಳುತ್ತವೆ. ಇಲ್ಲಿ ಮುಖ್ಯವಾಗಿ ಬೇಡರ ವೃತ್ತಿಪಲ್ಲಟಗಳನ್ನು ನೋಡಲಾಗಿದೆ. ಈ ಅಧ್ಯಾಯದಲ್ಲಿ ಒಂದು ನೂರು ವರ್ಷಗಳ ಈಚೆಗಿನ ಜನರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಲ್ಲಿ ೬೦ ವರ್ಷಗಳ ಮೇಲ್ಪಟ್ಟು ಹಾಗೂ ನೂರು ವರ್ಷದೊಳಗಿನ ವಯೋಮಾನದವರನ್ನು ಮೊದಲ ತಲೆಮಾರೆಂದು, ೪೦ ವರ್ಷದ ಮೇಲ್ಪಟ್ಟು ೬೦ ವರ್ಷದೊಳಗಿನವರನ್ನು ಎರಡನೇ ತಲೆಮಾರಾಗಿ ಹಾಗೂ ೪೦ ವರ್ಷದೊಳಗಿನವರನ್ನು ಮೂರನೇ ತಲೆಮಾರೆಂದು ಪರಿಗಣಿಸಲಾಗಿದೆ. ಈ ಮೂರು ತಲೆಮಾರುಗಳ ನಡುವೆ ವೃತ್ತಿಗೆ ಸಂಬಂಧಿಸಿದಂತೆ ಉಂಟಾದ ಬದಲಾವಣೆಗಳು ಹಾಗೂ ಅದರಿಂದ ಉಂಟಾದ ಪರಿಣಾಮಗಳನ್ನು ನೋಡಲು ಪ್ರಯತ್ನಿಸಲಾಗಿದೆ. ಮೊದಲ ತಲೆಮಾರಿನಲ್ಲಿ ೬೦ ವರ್ಷ ಮೇಲ್ಪಟ್ಟು ಹಾಗೂ ಎರಡನೇ ತಲೆಮಾರಿನ ೪೦ ವರ್ಷ ಆಜುಬಾಜಿನಲ್ಲಿರುವವರಿಗೂ ಅಂತಹ ವ್ಯತ್ಯಾಸಗಳು ಕಾಣುವುದು ಅಪರೂಪ. ಆದುದರಿಂದ ಆದಷ್ಟು ತಲೆಮಾರಿನಿಂದ ತಲೆಮಾರಿಗೆ ವಯಸ್ಸಿನಲ್ಲಿ ಹೆಚ್ಚು ಅಂತರಗಳಿರುವವರನ್ನೇ ಆಯ್ಕೆ ಮಾಡಿಕೊಂಡು ಅವರಿಂದ ವಿಷಯ ಸಂಗ್ರಹಿಸಲಾಗಿದೆ. ಉದಾಹರಣೆಗೆ ಮೊದಲ ತಲೆಮಾರಿನಲ್ಲಿ ೮೦ ವರ್ಷಕ್ಕೆ ಮೇಲ್ಪಟ್ಟ ವಕ್ತೃಗಳಿಂದಲೇ ಮಾಹಿತಿಯನ್ನು ಕಲೆಹಾಕಲಾಗಿದೆ. ಆದರೆ ತಾಂತ್ರಿಕವಾಗಿ ಮಾತ್ರ ತಲೆಮಾರುಗಳ ವಯೋಮಾನವನ್ನು ಮೂರು ಹಂತಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ವಕ್ತೃಗಳು ನೀಡಿದ ಮಾಹಿತಿಗಳೊಂದಿಗೆ ಭೌತಿಕವಾಗಿ ಇರುವ ಸ್ಥಿತಿಗತಿಗಳನ್ನು ಹೋಲಿಸಿ ನೋಡಲಾಗಿದೆ.

ಮೂರನೇ ತಲೆಮಾರಿನವರು ತಾವು ತಳವಾರರ ವಂಶಜರು ಎಂದು ಹೇಳಿಕೊಳ್ಳಲು ಹೇಸುತ್ತಾರೆ. ತಾವು ಸಮಾಜದಲ್ಲಿ ಯಾರಿಗೇನು ಕಡಿಮೆಯಿಲ್ಲ. ಊರ ಜನಕ್ಕೆ ಚಾಕರಿ ಮಾಡಲು ತಾವು

ಬಿಟ್ಟಿ ಆಳುಗಳೂ ಅಲ್ಲವೆಂದು ತಿಳಿಸುತ್ತಾರೆ. ಮೊದಲ ಮತ್ತು ಎರಡನೇ ತಲೆಮಾರಿಗೆ ಸಿಗದ ಪರಿಶಿಷ್ಟ ಪಂಗಡದ ಮೀಸಲಾತಿ ಸೌಲಭ್ಯ ಮೂರನೇ ತಲೆಮಾರಿನವರಿಗೆ ದೊರೆತಿರುವುದರಿಂದ ಶಿಕ್ಷಣ ಪೂರೈಸಲು ತಮಗೆ ಸಾಧ್ಯವಾಗಿದೆ. ಶಿಕ್ಷಣದಿಂದ ತಮ್ಮ ಅಂತಸ್ತು ಬದಲಾಗಿದೆ ಮತ್ತು ವಿವಿಧ ಹುದ್ದೆಗಳಲ್ಲಿ ತೊಡಗಲು ಸಾಧ್ಯವಾಗಿದೆ. ೨೧ನೇ ಶತಮಾನಕ್ಕೆ ಕಾಲಿರಿಸುತ್ತಿರುವ ಈ ಹೊತ್ತಿನಲ್ಲಿಯೂ ತಾವು ಹಳೇ ಕಂದಾಚಾರಗಳಿಗೆ ಕಟ್ಟು ಬೀಳುವುದು ಎಷ್ಟು ಸರಿ ಎಂದು ಪ್ರಶ್ನಿಸುತ್ತಾರೆ.

ದಾವಣಗೆರೆ ಜಿಲ್ಲೆಯ ನಾಲ್ಕು ತಾಲೂಕುಗಳು ಬಹುತೇಕ ನೀರಾವರಿಯಿಂದ ಕೂಡಿವೆ. ಈ ತಾಲೂಗಳಲ್ಲಿ ಮಳೆಗಾಲದ ಹೊರತಾದ ಕಾಲದಲ್ಲಿಯೂ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಹೀಗಾಗಿ ಇಲ್ಲಿ ಕೃಷಿ ಕೂಲಿಗೆ ಅಂತಹ ಕೊರತೆ ಇಲ್ಲ. ಅದರ ಹೊರತಾದ ಹರಪನಹಳ್ಳಿ ಜಗಳೂರುಗಳಲ್ಲಿ ಮಳೆಯಾಶ್ರಿತ ಕೃಷಿ ಇರುವುದರಿಂದ ಸುಗ್ಗಿಕಾಲದ ತರುವಾಯ ಇಲ್ಲಿಯ ತಳಸಮುದಾಯಗಳು ಕೂಲಿಯನ್ನು ಹುಡುಕಿಕೊಂಡು ಚಿಕ್ಕಮಗಳೂರು, ಗೋವಾ, ಬೆಂಗಳೂರು ಮುಂತಾದ ಕಡೆ ವಲಸೆ ಹೋಗುತ್ತಾರೆ. ಈ ಕ್ರಿಯೆ ಎರಡನೇ ತಲೆಮಾರಿನಿಂದ ಪ್ರಾರಂಭಗೊಂಡು ಇಂದಿಗೂ ಮುಂದುವರೆದಿದೆ. ಮೊದಲ ತಲೆಮಾರಿನವರಲ್ಲಿ ಈ ರೀತಿಯ ವಲಸೆ ಕಂಡು ಬರುತ್ತಿರಲಿಲ್ಲ. ಏಕೆ ಮೊದಲ ತಲೆಮಾರಿನವರಲ್ಲಿ ಕೂಲಿಗಾಗಿ ವಲಸೆ ಇರಲಿಲ್ಲ ಎನ್ನುವ ಪ್ರಶ್ನೆಗೆ ದೊರೆತ ಉತ್ತರ ಹೀಗಿದೆ. 'ನಮ್ಮ ಕಾಲದಲ್ಲಿ ಮಳೆ ಬೆಳೆ ಚೆನ್ನಾಗಿತ್ತು. ಹಾಗಾಗಿ ನಾವು ವಲಸೆ ಹೋಗುವ ಪ್ರಶ್ನೆಯೇ ಇರಲಿಲ್ಲ ಎನ್ನುವ ಉತ್ತರ ಕೇಳಿಬಂದಿತು. ಈ ಪ್ರಶ್ನೆಗೆ ಎರಡನೇ ಮತ್ತು ಮೂರನೇ ತಲೆಮಾರಿನವರು ನೀಡಿದ ಉತ್ತರಗಳು ಹೀಗಿವೆ. ಹಳೆತಲೆಮಾರಿನವರ ಕಾಲದಲ್ಲಿ ಅವರು ವಲಸೆ ಹೋಗುವ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರು. ಬಹುತೇಕ ಅವರು ಇನ್ನೊಬ್ಬರ ಜೀತಗಾರನಾಗಿ ಇಲ್ಲವೆ ಅಡಿಯಾಳಾಗಿ ಜೀವನ ನಡೆಸಬೇಕಾಗಿತ್ತು. ಅದೇ ರೀತಿ ಸಾರಿಗೆ ಸಂಪರ್ಕವೂ ಇಷ್ಟು ಅಭಿವೃದ್ಧಿ ಹೊಂದಿರಲಿಲ್ಲ. ಹೀಗಿದ್ದಾಗ ಅವರು ವಲಸೆಯನ್ನು ಹೋಗಲು ಹೇಗೆ ಸಾಧ್ಯ ಎನ್ನುತ್ತಾರೆ. ಬಹುತೇಕ ಎರಡು ಮತ್ತು ಮೂರನೇ ತಲೆಮಾರಿನವರ ವಾದದಲ್ಲಿ ಸತ್ಯವಿದೆ. ಎರಡು ಮೂರನೇ ತಲೆಮಾರಿನವರಷ್ಟು ಹಳೆ ತಲೆಮಾರಿನವರಲ್ಲಿ ಸ್ವಾತಂತ್ರ್ಯ ಇರಲಿಲ್ಲ. ಅವರ ಕೆಲವು ನಂಬಿಕೆಗಳು, ತಾವು ಕಟ್ಟಿಕೊಂಡ ಬದುಕು ಅವರನ್ನು ವಲಸೆಗೊಳ್ಳಲು ಬಿಡುತ್ತಿರಲಿಲ್ಲ. ಹಾಗೇ ಎರಡು ಮತ್ತು ಮೂರನೇ ತಲೆಮಾರಿನವರಲ್ಲಿರುವ ಹಣದ ಕುರಿತ ಅತಿಯಾದ ವ್ಯಾಮೋಹ ಹಳೆ ತಲೆಮಾರಿನವರಲ್ಲಿ ಇರಲಿಲ್ಲವೆಂಬುದು ಅಷ್ಟೇ ಸತ್ಯ.

ಮೂರನೇ ತಲೆಮಾರಿನವರಲ್ಲಾಗಲೇ ಹಲವಾರು ಬದಲಾವಣೆಗಳು ಕಂಡುಬರುತ್ತವೆ. ಇವರಲ್ಲಿ ಉಂಟಾದ ಆರ್ಥಿಕ ಪಲ್ಲಟಗಳಿಗೆ ಜಾಗತೀಕರಣದ ಪ್ರಭಾವಕ್ಕಿಂತ ಆ ಸಮುದಾಯಕ್ಕೆ ದೊರೆತ ಮೀಸಲಾತಿ ಸೌಲಭ್ಯ ಅತೀ ಮುಖ್ಯ ಕಾರಣವೆಂದು ತಿಳಿದುಬರುತ್ತದೆ. ೧೯೯೧ರಿಂದ ಬೇಡರು

ಪರಿಶಿಷ್ಟ ಪಂಗಡದ ಸೌಲಭ್ಯ ಪಡೆಯಲಾರಂಭಿಸಿದರು. ಮೀಸಲಾತಿ ಸೌಲಭ್ಯ ವರದಾನವಾಗಿ ಪರಿಣಮಿಸಿತು. ಅನುಸೂಚಿತ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ೫೦ ಬುಡಕಟ್ಟು ಸಮುದಾಯಗಳ ಹೆಸರುಗಳಿವೆ. ಇದರಲ್ಲಿ ಬಹುಪಾಲು ಬುಡಕಟ್ಟುಗಳು ಬ್ರಿಟಿಶರ ಭಾರತದ ಆಡಳಿತ ಕಾಲಕ್ಕೆ ಬುಡಕಟ್ಟುಗಳು ಎಂದು ಗುರುತಿಸಿಕೊಂಡವುಗಳೂ ಇವೆ. ಆದರೆ ೪೯ ಬುಡಕಟ್ಟುಗಳು ಮೀಸಲಾತಿ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳುವಲ್ಲಿ ಸೋತಿವೆ. ಆದರೆ ಬೇಡ ಬುಡಕಟ್ಟು ಪರಿಶಿಷ್ಟ ಪಂಗಡದ ಮೀಸಲಾತಿ ಸೌಲಭ್ಯವನ್ನು ಆ ೪೯ ಸಮುದಾಯಗಳಿಗಿಂತ ಸಮರ್ಥವಾಗಿ ಬಳಸಿಕೊಂಡು ಮೀಸಲಾತಿಯ ಲಾಭಗಳನ್ನು ಪಡೆಯುವಲ್ಲಿ ಬಹುತೇಕ ಯಶಸ್ವಿಯಾಗಿದೆಯೆಂದೇ ಹೇಳಬೇಕು. ಇಂದು ಕರ್ನಾಟಕದಾದ್ಯಂತ ಬೇಡರಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳನ್ನು ಕಾಣಬಹುದು. ರಾಜ್ಯದ ಆಯಕಟ್ಟಿನ ಮತ್ತು ಮಹತ್ವದ ಸ್ಥಾನಗಳಲ್ಲಿದ್ದು ಅಧಿಕಾರವನ್ನು ಚಲಾಯಿಸಲು ಮೀಸಲಾತಿಯೇ ಕಾರಣವೆಂದರೆ ತಪ್ಪಾಗಲಾರದು. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರದೇಶಗಳ ಬೇಡರ ಮೂರನೇ ತಲೆಮಾರಿನವರಲ್ಲಿ ಕಂಡುಬರುವ ವೃತ್ತಿಗಳು ಈ ಕೆಳಗಿನಂತಿವೆ.

ಕೃಷಿ, ಕೃಷಿಕೂಲಿ, ಕೂಲಿ ಕಾರ್ಮಿಕ, ಕಾರ್ಖಾನೆ ನೌಕರ, ವ್ಯಾಪಾರಿ, ತರಕಾರಿ ವ್ಯಾಪಾರಿ, ಉಪನ್ಯಾಸಕ, ಇಂಜಿನೀಯರ್, ಪ್ರಾಥಮಿಕ ಶಾಲಾ ಉಪಾಧ್ಯಾಯ, ಪ್ರೌಢಶಾಲಾ ಉಪಾಧ್ಯಾಯ, ಆರೋಗ್ಯ ಸಹಾಯಕಿಯರು, ಅಂಗನವಾಡಿ ಕಾರ್ಯಕರ್ತರು ಮುಂತಾದ ಹುದ್ದೆಗಳಲ್ಲಿರುವುದು ಕಂಡುಬರುತ್ತದೆ. ಮೊದಲ ಮತ್ತು ಎರಡನೇ ತಲೆಮಾರಿಗಿಂತ ಮೂರನೇ ತಲೆಮಾರಿನವರಲ್ಲಿ ಆರ್ಥಿಕ ಭದ್ರತೆ ಹೆಚ್ಚಾಗಿದೆ. ಮೂರನೇ ತಲೆಮಾರಿನವರು ಬಹುತೇಕ ಮೀಸಲಾತಿ ಸೌಲಭ್ಯದಿಂದಲೇ ಈ ರೀತಿಯ ಆರ್ಥಿಕ ಪ್ರಗತಿ ಕಾಣಲು ಸಾಧ್ಯವಾಗಿದೆ. ಮೂರನೇ ತಲೆಮಾರಿನವರಲ್ಲಿ ಕೂಲಿ ಯನ್ನರಸಿ ವಲಸೆ ಹೋಗುವುದು ಕಂಡುಬರುವುದಾದರೂ ಅದರ ಪ್ರಮಾಣ ತುಂಬಾ ಕಡಿಮೆಯಾಗಿದೆ ಯೆಂದೇ ಹೇಳಬಹುದು. ಶಿಕ್ಷಣ, ಇತರ ಹುದ್ದೆಗಳಲ್ಲಿ ಮುಂದುವರಿಯುವಂತೆ ಆಗಿರುವುದರಿಂದಲೇ ಪ್ರದೇಶದಿಂದ ಪ್ರದೇಶಕ್ಕೆ ಕೂಲಿಯರಸಿ ವಲಸೆ ಹೋಗುತ್ತಿಲ್ಲ. ಆದರೆ ಮೂರನೇ ತಲೆಮಾರಿನ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ದುಡಿಯುವವರು ತಮ್ಮ ಮೂಲ ಗ್ರಾಮಗಳನ್ನು ತ್ಯಜಿಸಿ ಹತ್ತಿರದ ಪಟ್ಟಣಗಳಿಗೆ ಇಲ್ಲವೇ ಹುದ್ದೆಯನ್ನು ನಿರ್ವಹಿಸಬೇಕಾದ ಸ್ಥಳಗಳಿಗೆ ವಲಸೆ ಹೋಗಿದ್ದಾರೆ. ಆದರೆ ಇವರಾರೂ ಪೂರ್ಣವಾಗಿ ತಮ್ಮ ಗ್ರಾಮವನ್ನು ತ್ಯಜಿಸಿದ್ದಾರೆಂದೇನೂ ಅಲ್ಲ. ರಜೆ ಕಾಲದಲ್ಲಿ ಬಹುತೇಕ ಅವರೆಲ್ಲಾ ತಮ್ಮ ಮೂಲ ಗ್ರಾಮಗಳಲ್ಲಿಯೇ ಕಾಲ ಕಳೆಯುತ್ತಾರೆ. ತಮ್ಮ ಗ್ರಾಮವನ್ನು ತ್ಯಜಿಸಲು ಹುದ್ದೆ ಒಂದು ಕಾರಣವಾದರೆ ಮತ್ತೊಂದು ಅವರ ಮಕ್ಕಳ ವಿದ್ಯಾಭ್ಯಾಸವೂ ಕಾರಣವೆಂದು ತಿಳಿಸುತ್ತಾರೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ೧೮ ಗ್ರಾಮಗಳಲ್ಲಿ ಕ್ಷೇತ್ರಕಾರ್ಯಕ್ಕೆ ಹೋದಾಗ ಕಂಡುಬಂದ ಜನಸಂಖ್ಯಾ ಅಂಕಿ ಅಂಶಗಳನ್ನು ಗಮನಿಸಿದಾಗ ವಿವಿಧ ವಯೋಮಾನದವರು ಕಂಡುಬಂದರು.

ಸಣ್ಣ ಮಕ್ಕಳ ಹೊರತಾಗಿ ೧೮ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಕರನ್ನು ಇಲ್ಲಿ ಪರಿಗಣಿಸಿ ಅವರ ವಯಸ್ಸಿನ ಆಧಾರದ ಮೇಲೆ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

ಈ ಮೂರು ತಲೆಮಾರುಗಳಲ್ಲಿ ಉಂಟಾಗಿರುವ ಆರ್ಥಿಕ ಪಲ್ಲಟಗಳು ಯಾವ ರೀತಿಯಾಗಿದೆ, ಅವರು ಅನುಸರಿಸುತ್ತಿದ್ದ ಅಥವಾ ಅನುಸರಿಸುತ್ತಿರುವ ವೃತ್ತಿಗಳು ಯಾವುವು ಎಂಬುದನ್ನು ಮೇಲೆ ನೋಡಿದ್ದೇವೆ. ಇಲ್ಲಿ ಒಟ್ಟಾರೆ ತಾಲೂಕುವಾರು ಮೂರು ತಲೆಮಾರುಗಳ ಜನಸಂಖ್ಯೆ ಯಾವ ಪ್ರಮಾಣದಲ್ಲಿದ್ದಾರೆ ಎಂಬುದನ್ನು ನೋಡಿ ತರುವಾಯ ಯಾವ ತಲೆಮಾರಿನವರು ಯಾವ ವೃತ್ತಿಯನ್ನು ಅನುಸರಿಸುತ್ತಾರೆ ಮತ್ತು ತಲೆಮಾರಿನಿಂದ ತಲೆಮಾರಿಗೆ ವೃತ್ತಿಗಳಲ್ಲಾದ ಅಂತರಗಳನ್ನು ಕುರಿತು ಗಮನಿಸಲಾಗಿದೆ.

೫.೧ ಚನ್ನಗಿರಿ ತಾಲೂಕಿನ ಬೇಡರ ತಲೆಮಾರುಗಳ ಜನಸಂಖ್ಯಾ ವಿವರ

ಚನ್ನಗಿರಿ ತಾಲೂಕಿನ ಕಬ್ಬಳ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೧೬ ಇದರಲ್ಲಿ ಪುರುಷರು ೫೩.೨೪ ಮತ್ತು ಮಹಿಳೆಯರು ೪೬.೭೬ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೬೨ ಜನ ಪುರುಷರಿದ್ದರೆ ೫೪ ಜನ ಮಹಿಳೆಯರಿದ್ದಾರೆ. ಎರಡನೇ ತಲೆಮಾರಿನವರು ಪುರುಷರು ೨೯ ಮತ್ತು ಮಹಿಳೆಯರು ೨೭ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೨೪ ಹಾಗೂ ಮಹಿಳೆಯರು ೨೦ ಇದ್ದಾರೆ.

ತಾಲೂಕಿನ ಕಾರಿಗನೂರು ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೦೮. ಇದರಲ್ಲಿ ಪುರುಷರು ೫೩.೩೭ ಮತ್ತು ಮಹಿಳೆಯರು ೪೬.೬೩ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೫೯ ಜನ ಪುರುಷರಿದ್ದರೆ ಮಹಿಳೆಯರು ೫೪ ಜನರಿದ್ದಾರೆ. ಎರಡನೇ ತಲೆಮಾರಿನವರು ಪುರುಷರು ೩೪ ಮತ್ತು ಮಹಿಳೆಯರು ೨೮ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೧೮ ಹಾಗೂ ಮಹಿಳೆಯರು ೧೫ರಷ್ಟಿದ್ದಾರೆ.

ಕೋಷ್ಟಕ ೫.೧ ಚನ್ನಗಿರಿ ತಾಲೂಕಿನ ಬೇಡರ ತಲೆಮಾರುಗಳ ಲಿಂಗವಾರು ಜನಸಂಖ್ಯೆ

ತಾಲೂಕು	ಗ್ರಾಮ	ಒಟ್ಟು ಜನಸಂಖ್ಯೆ		ಮೊದಲನೇ ತಲೆಮಾರು		ಎರಡನೇ ತಲೆಮಾರು		ಮೂರನೇ ತಲೆಮಾರು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
ಚನ್ನಗಿರಿ	ಕಬ್ಬಳ	೧೧೫	೧೦೧	೬೨	೫೪	೨೯	೨೭	೨೪	೨೦
	ಕಾರಿಗನೂರು	೧೧೧	೯೭	೫೯	೫೪	೩೪	೨೮	೧೮	೧೫
	ನಲ್ಲೂರು	೧೧೩	೧೦೭	೬೧	೫೪	೩೨	೩೪	೨೦	೧೯
ಒಟ್ಟು		೩೩೯	೩೦೫	೧೮೨	೧೬೨	೯೫	೮೯	೬೨	೫೪

ತಾಲೂಕಿನ ನಲ್ಲೂರು ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೨೦ ಇದರಲ್ಲಿ ಪುರುಷರು ೫೧.೩೬ ಮತ್ತು ಮಹಿಳೆಯರು ೪೮.೬೪ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೬೧ ಜನ ಪುರುಷರಿದ್ದರೆ ಮಹಿಳೆಯರು ೫೪ ಜನರಿದ್ದಾರೆ. ಎರಡನೇ ತಲೆಮಾರಿನವರು ಪುರುಷರು ೩೨ ಮತ್ತು ಮಹಿಳೆಯರು ೩೪ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೨೦ ಹಾಗೂ ಮಹಿಳೆಯರು ೧೯ರಷ್ಟಿದ್ದಾರೆ.

ಚನ್ನಗಿರಿ ತಾಲೂಕಿನ ಮೂರು ಗ್ರಾಮಗಳ ಒಟ್ಟು ಬೇಡರ ಜನಸಂಖ್ಯೆ ೬೪೪ ಇದರಲ್ಲಿ ಮೊದಲ ತಲೆಮಾರಿನವರು ಒಟ್ಟು ೩೪೪ ಎರಡನೇ ತಲೆಮಾರಿನವರು ೧೮೪, ಮೂರನೇ ತಲೆಮಾರಿನವರು ಒಟ್ಟು ೧೧೬ರಷ್ಟಿದ್ದಾರೆ. ಅಂದರೆ ಒಟ್ಟಾರೆ ಮೊದಲ ತಲೆಮಾರಿನ ಶೇಕಡಾವಾರು ಪ್ರಮಾಣ ೫೩.೪೨ ಇದ್ದರೆ ಎರಡನೇ ತಲೆಮಾರಿನವರ ಪ್ರಮಾಣ ೨೮.೫೭ರಷ್ಟಿದೆ. ಹಾಗೆಯೇ ಮೂರನೇ ತಲೆಮಾರಿನವರ ಒಟ್ಟು ಪ್ರಮಾಣ ೧೮.೧೨ರಷ್ಟಿದೆ.

೫.೨ ದಾವಣಗೆರೆ ತಾಲೂಕಿನ ಬೇಡರ ತಲೆಮಾರುಗಳ ಜನಸಂಖ್ಯಾ ವಿವರ

ದಾವಣಗೆರೆ ತಾಲೂಕಿನ ಬೇತೂರು ಗ್ರಾಮದ ಬೇಡರ ಮೂರು ತಲೆಮಾರುಗಳ ಒಟ್ಟು ಜನಸಂಖ್ಯೆ ೨೦೯ ಇದ್ದು ಇದರಲ್ಲಿ ಪುರುಷರು ೫೦.೭೨ರಷ್ಟು, ಮಹಿಳೆಯರು ೪೯.೨೮ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೫೭ ಜನ ಪುರುಷರು ಇದ್ದರೆ ಮಹಿಳೆಯರು ೪೯ ಜನ ಇದ್ದಾರೆ. ಎರಡನೇ ತಲೆಮಾರಿನವರ ಪುರುಷರು ೩೩ ಮತ್ತು ಮಹಿಳೆಯರು ೩೫ ಜನರಿದ್ದಾರೆ. ಮೂರನೇ ತಲೆಮಾರಿನವರ ಪುರುಷರು ೧೬ ಹಾಗೂ ಮಹಿಳೆಯರು ೧೯ರಷ್ಟಿದ್ದಾರೆ.

ಕೋಷ್ಟಕ ೫.೨. ದಾವಣಗೆರೆ ತಾಲೂಕಿನ ಬೇಡರ ತಲೆಮಾರುಗಳ ಲಿಂಗವಾರು ಜನಸಂಖ್ಯೆ

ತಾಲೂಕು	ಗ್ರಾಮ	ಒಟ್ಟು ಜನಸಂಖ್ಯೆ		ಮೊದಲನೇ ತಲೆಮಾರು		ಎರಡನೇ ತಲೆಮಾರು		ಮೂರನೇ ತಲೆಮಾರು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
ದಾವಣಗೆರೆ	ಬೇತೂರು	೧೦೬	೧೦೩	೫೭	೪೯	೩೩	೩೫	೧೬	೧೯
	ದೊಡ್ಡಬಾತಿ	೧೧೨	೧೧೧	೫೬	೫೪	೩೬	೩೮	೨೦	೧೯
	ಹುಣಸಿಕಟ್ಟೆ	೧೨೩	೧೧೬	೬೨	೬೧	೪೦	೩೫	೨೧	೨೦
ಒಟ್ಟು		೩೪೧	೩೩೦	೧೭೫	೧೬೪	೧೦೯	೧೦೮	೫೭	೫೮

ಇದೇ ತಾಲೂಕಿನ ದೊಡ್ಡಬಾತಿ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೨೩ ಇದ್ದು ಇದರಲ್ಲಿ ಪುರುಷರು ಶೇ. ೫೦.೨೨ರಷ್ಟು, ಮಹಿಳೆಯರು ಶೇ. ೪೯.೭೮ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೫೬ ಜನ ಪುರುಷರು ಇದ್ದರೆ ಮಹಿಳೆಯರು ೫೪ ಜನ ಇದ್ದಾರೆ. ಎರಡನೇ

ತಲೆಮಾರಿನವರು ಪುರುಷರು ೩೬ ಮತ್ತು ಮಹಿಳೆಯರು ೩೮ ಜನರಿದ್ದಾರೆ. ಮೂರನೇ ತಲೆಮಾರಿನ ಪುರುಷರು ೨೦ ಹಾಗೂ ಮಹಿಳೆಯರು ೧೯ರಷ್ಟಿದ್ದಾರೆ.

ಇದೇ ತಾಲೂಕಿನ ಹುಣಸಿಕಟ್ಟೆ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೩೯ ಇದ್ದು ಇದರಲ್ಲಿ ಪುರುಷರು ಶೇ. ೫೧.೪೬ರಷ್ಟು, ಮಹಿಳೆಯರು ಶೇ. ೪೮.೫೪ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೬೨ ಜನ ಪುರುಷರು ಇದ್ದರೆ ಮಹಿಳೆಯರು ೬೧ ಜನ ಇದ್ದಾರೆ. ಎರಡನೇ ತಲೆಮಾರಿನವರ ಪುರುಷರು ೪೦ ಮತ್ತು ಮಹಿಳೆಯರು ೩೫ ಜನರಿದ್ದಾರೆ. ಮೂರನೇ ತಲೆಮಾರಿನವರನ್ನು ಒಳಗೊಂಡಂತೆ ಪುರುಷರು ೨೦ ಹಾಗೂ ಮಹಿಳೆಯರು ೨೫ರಷ್ಟಿದ್ದಾರೆ.

ದಾವಣಗೆರೆ ತಾಲೂಕಿನ ಮೂರು ಗ್ರಾಮಗಳ ಒಟ್ಟು ಬೇಡರ ಜನಸಂಖ್ಯೆ ೬೭೧ ಇದರಲ್ಲಿ ಮೊದಲ ತಲೆಮಾರಿನವರು ಒಟ್ಟು ೩೩೯, ಎರಡನೇ ತಲೆಮಾರಿನವರು ೨೧೭, ಮೂರನೇ ತಲೆಮಾರಿನವರು ಒಟ್ಟು ೧೧೫ರಷ್ಟಿದ್ದಾರೆ. ಅಂದರೆ ಒಟ್ಟು ವಯಸ್ಕರ ಸಂಖ್ಯೆಯಲ್ಲಿ ಮೊದಲ ತಲೆಮಾರಿನ ಶೇಕಡಾವಾರು ಪ್ರಮಾಣ ೫೦.೫೨ ಇದ್ದರೆ ಎರಡನೇ ತಲೆಮಾರಿನವರ ಪ್ರಮಾಣ ೩೨.೩೪ರಷ್ಟಿದೆ. ಹಾಗೇ ಮೂರನೇ ತಲೆಮಾರಿನವರ ಒಟ್ಟು ಪ್ರಮಾಣ ೧೭.೧೪ರಷ್ಟಿದೆ.

೫.೩ ಹರಪನಹಳ್ಳಿ ತಾಲೂಕಿನ ಬೇಡರ ತಲೆಮಾರುಗಳ ಜನಸಂಖ್ಯಾ ವಿವರ

ಹರಪನಹಳ್ಳಿ ತಾಲೂಕಿನ ಕುಮಾರನಹಳ್ಳಿ ಗ್ರಾಮದ ಬೇಡರ ಒಟ್ಟು ಜನಸಂಖ್ಯೆ ೨೨೨. ಇದರಲ್ಲಿ ಪುರುಷರು ೫೫.೪೧ ಮತ್ತು ಮಹಿಳೆಯರು ೪೪.೫೯ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೬೪ ಜನ ಪುರುಷರಿದ್ದರೆ ಮಹಿಳೆಯರು ೫೬ ಜನರಿದ್ದಾರೆ. ಎರಡನೇ ತಲೆಮಾರಿನವರಲ್ಲಿ ಪುರುಷರು ೩೯ ಮತ್ತು ಮಹಿಳೆಯರು ೨೫ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೨೦ ಹಾಗೂ ಮಹಿಳೆಯರು ೧೮ರಷ್ಟಿದ್ದಾರೆ.

ಕೋಷ್ಟಕ ೫.೩ ಹರಪನಹಳ್ಳಿ ತಾಲೂಕಿನ ಬೇಡರ ತಲೆಮಾರುಗಳ ಲಿಂಗವಾರು ಜನಸಂಖ್ಯೆ

ತಾಲೂಕು	ಗ್ರಾಮ	ಒಟ್ಟು ಜನಸಂಖ್ಯೆ		ಮೊದಲನೇ ತಲೆಮಾರು		ಎರಡನೇ ತಲೆಮಾರು		ಮೂರನೇ ತಲೆಮಾರು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
ಹರಪನಹಳ್ಳಿ	ಕಂಚಿಕೆರೆ	೧೧೨	೧೦೮	೫೮	೫೦	೩೫	೨೫	೧೯	೧೭
	ಕುಮಾರನಹಳ್ಳಿ	೧೨೩	೯೯	೬೪	೫೬	೩೯	೨೫	೨೦	೧೮
	ಮಾಚಿಹಳ್ಳಿ	೧೨೯	೧೧೨	೬೬	೫೮	೪೪	೩೪	೧೯	೨೦
	ಒಟ್ಟು	೩೫೪	೩೧೯	೧೮೮	೧೬೪	೧೧೮	೮೪	೫೮	೫೫

ಇದೇ ತಾಲೂಕಿನ ಮಾಚಿಹಳ್ಳಿ ಗ್ರಾಮದ ಬೇಡರ ಒಟ್ಟು ಜನಸಂಖ್ಯೆ ೨೪೧. ಇದರಲ್ಲಿ ಪುರುಷರು ೫೩.೫೩ ಮತ್ತು ಮಹಿಳೆಯರು ೪೬.೪೭ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೬೬ ಜನ ಪುರುಷರಿದ್ದರೆ ಮಹಿಳೆಯರು ೫೮ ಜನರಿದ್ದಾರೆ. ಎರಡನೇ ತಲೆಮಾರಿನವರಲ್ಲಿ ಪುರುಷರು ೪೪ ಮತ್ತು ಮಹಿಳೆಯರು ೩೪ ಜನರಿದ್ದಾರೆ. ಮೂರನೇ ತಲೆಮಾರಿನವರು ಪುರುಷರು ೧೯ ಹಾಗೂ ಮಹಿಳೆಯರು ೨೦ರಷ್ಟಿದ್ದಾರೆ.

ತಾಲೂಕಿನ ಬಸವನಕೋಟೆ ಗ್ರಾಮದ ಬೇಡಬುಡಕಟ್ಟಿನ ವಯಸ್ಕರ ಒಟ್ಟು ಜನಸಂಖ್ಯೆ ೨೧೦. ಇದರಲ್ಲಿ ಪುರುಷರು ೫೩.೩೩ ಮತ್ತು ಮಹಿಳೆಯರು ೪೬.೬೭ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೫೮ ಜನ ಪುರುಷರಿದ್ದರೆ ಮಹಿಳೆಯರು ೫೦ ಜನ ಇದ್ದಾರೆ. ಎರಡನೇ ತಲೆಮಾರಿನವರಲ್ಲಿ ಪುರುಷರು ೩೫ ಮತ್ತು ಮಹಿಳೆಯರು ೨೫ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೧೯ ಹಾಗೂ ಮಹಿಳೆಯರು ೧೭ರಷ್ಟಿದ್ದಾರೆ

ಹರಪನಹಳ್ಳಿ ತಾಲೂಕಿನ ಮೂರು ಗ್ರಾಮಗಳ ಒಟ್ಟು ಬೇಡರ ಜನಸಂಖ್ಯೆ ೬೭೩ ಇದರಲ್ಲಿ ಮೊದಲ ತಲೆಮಾರಿನವರು ಒಟ್ಟು ೩೫೨. ಎರಡನೇ ತಲೆಮಾರಿನವರು ೨೦೨, ಮೂರನೇ ತಲೆಮಾರಿನವರು ಒಟ್ಟು ೧೧೩ರಷ್ಟಿದ್ದಾರೆ. ಅಂದರೆ ಒಟ್ಟು ವಯಸ್ಕರ ಸಂಖ್ಯೆಯಲ್ಲಿ ಮೊದಲ ತಲೆಮಾರಿನ ೬೦ ವರ್ಷ ಮೇಲ್ಪಟ್ಟ ವೃದ್ಧರ ಶೇಕಡಾವಾರು ಪ್ರಮಾಣ ಶೇಕಡಾ ೫೨.೩೦ ಇದ್ದರೆ ಎರಡನೇ ತಲೆಮಾರಿನವರ ಪ್ರಮಾಣ ೩೦.೦೧ರಷ್ಟಿದೆ. ಹಾಗೇ ಮೂರನೇ ತಲೆಮಾರಿನವರ ಒಟ್ಟು ಪ್ರಮಾಣ ೧೬.೭೦ರಷ್ಟಿದೆ.

೫.೪ ಹರಿಹರ ತಾಲೂಕಿನ ಬೇಡರ ತಲೆಮಾರುಗಳ ಗ್ರಾಮವಾರು ಜನಸಂಖ್ಯಾ ವಿವರ

ಹರಿಹರ ತಾಲೂಕಿನ ದೇವರ ಬೆಳಕೆರೆ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೨೭ ಇದ್ದು ಇದರಲ್ಲಿ ಪುರುಷರು ಶೇ. ೫೨.೮೬ರಷ್ಟು, ಮಹಿಳೆಯರು ೪೭.೧೪ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೬೪ ಜನ ಪುರುಷರು ಇದ್ದರೆ ಮಹಿಳೆಯರು ೫೩ ಜನ ಇದ್ದಾರೆ. ಎರಡನೇ ತಲೆಮಾರಿನ ಪುರುಷರು ೩೬ ಮತ್ತು ಮಹಿಳೆಯರು ೩೭ ಜನರಿದ್ದಾರೆ. ಮೂರನೇ ತಲೆಮಾರಿನ ಪುರುಷರು ೨೦ ಹಾಗೂ ಮಹಿಳೆಯರು ೧೭ರಷ್ಟಿದ್ದಾರೆ.

ಕೋಷ್ಟಕ ೫.೪ ಹರಿಹರ ತಾಲೂಕಿನ ಬೇಡರ ತಲೆಮಾರುಗಳ ಲಿಂಗವಾರು ಜನಸಂಖ್ಯೆ

ತಾಲೂಕು	ಗ್ರಾಮ	ಒಟ್ಟು ಜನಸಂಖ್ಯೆ		ಮೊದಲನೇ ತಲೆಮಾರು		ಎರಡನೇ ತಲೆಮಾರು		ಮೂರನೇ ತಲೆಮಾರು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
ಹರಿಹರ	ದೇವರ ಬೆಳಕೆರೆ	೧೯೦	೧೦೭	೬೪	೫೩	೩೬	೩೭	೨೦	೧೭
	ಕೊಕ್ಕನೂರು	೧೧೯	೧೦೮	೫೮	೫೩	೩೮	೩೬	೨೩	೧೯
	ರಾಜನಹಳ್ಳಿ	೧೩೬	೧೧೭	೭೫	೫೯	೩೮	೩೬	೨೩	೨೨
ಒಟ್ಟು		೩೭೫	೩೩೨	೧೯೭	೧೬೫	೧೧೨	೧೦೯	೬೬	೫೮

ಇದೇ ತಾಲೂಕಿನ ಕೊಕ್ಕನೂರು ಗ್ರಾಮದ ಬೇಡರ ಒಟ್ಟು ಜನಸಂಖ್ಯೆ ೨೨೭ ಇದ್ದು ಇದರಲ್ಲಿ ಪುರುಷರು ೫೨.೪೨ ಮತ್ತು ಮಹಿಳೆಯರು ೪೭.೫೮ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೫೮ ಜನ ಪುರುಷರಿದ್ದರೆ ಮಹಿಳೆಯರು ೫೩ ಜನರಿದ್ದಾರೆ. ಎರಡನೇ ತಲೆಮಾರಿನವರು ಪುರುಷರು ೩೮ ಮತ್ತು ಮಹಿಳೆಯರು ೩೬ ಜನರಿದ್ದಾರೆ. ಮೂರನೇ ತಲೆಮಾರಿನ ಪುರುಷರು ೨೩ ಹಾಗೂ ಮಹಿಳೆಯರು ೧೯ರಷ್ಟಿದ್ದಾರೆ.

ತಾಲೂಕಿನ ರಾಜನಹಳ್ಳಿ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೫೩ ಇದ್ದು ಇದರಲ್ಲಿ ಪುರುಷರು ೫೩.೭೫ ಮತ್ತು ಮಹಿಳೆಯರು ೪೬.೨೫ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೭೫ ಜನ ಪುರುಷರು ಇದ್ದರೆ ಮಹಿಳೆಯರು ೫೯ ಜನ ಇದ್ದಾರೆ. ಎರಡನೇ ತಲೆಮಾರಿನವರು ೩೮ ಪುರುಷರು ಮತ್ತು ೩೬ ಮಹಿಳೆಯರಿದ್ದಾರೆ. ಮೂರನೇ ತಲೆಮಾರಿನ ೨೩ ಪುರುಷರು ಹಾಗೂ ೨೨ ಮಹಿಳೆಯರಿದ್ದಾರೆ.

ಹರಿಹರ ತಾಲೂಕಿನ ಮೂರು ಗ್ರಾಮಗಳ ಒಟ್ಟು ಬೇಡ ಬುಡಕಟ್ಟಿನ ಜನಸಂಖ್ಯೆ ೭೦೭ ಇದರಲ್ಲಿ ಮೊದಲ ತಲೆಮಾರಿನವರು ಒಟ್ಟು ೩೬೨, ಎರಡನೇ ತಲೆಮಾರಿನವರು ೨೨೧, ಮೂರನೇ ತಲೆಮಾರಿನವರು ಒಟ್ಟು ೧೨೪ರಷ್ಟಿದ್ದಾರೆ. ಅಂದರೆ ಒಟ್ಟು ವಯಸ್ಕರ ಸಂಖ್ಯೆಯಲ್ಲಿ ಮೊದಲ ತಲೆಮಾರಿನ ೬೦ರ ಹಿರಿಯರ ಶೇಕಡಾವಾರು ಪ್ರಮಾಣ ಶೇಕಡಾ ೫೧.೨೦ ಇದ್ದರೆ ಎರಡನೇ ತಲೆಮಾರಿನವರ ಪ್ರಮಾಣ ೩೧.೨೫ರಷ್ಟಿದೆ. ಹಾಗೆಯೇ ಮೂರನೇ ತಲೆಮಾರಿನವರ ಒಟ್ಟು ಪ್ರಮಾಣ ೧೭.೫೩ರಷ್ಟಿದೆ.

೫.೫ ಹೊನ್ನಾಳಿ ತಾಲೂಕಿನ ಬೇಡರ ತಲೆಮಾರುಗಳ ಗ್ರಾಮವಾರು ಜನಸಂಖ್ಯಾ ವಿವರ

ಹೊನ್ನಾಳಿ ತಾಲೂಕಿನ ಕಂಚಿಕೊಪ್ಪದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೪೪ ಇದರಲ್ಲಿ ಶೇ. ೫೩.೨೮ರಷ್ಟು ಪುರುಷರು ಮತ್ತು ಶೇ. ೪೬.೭೨ ಮಹಿಳೆಯರಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನ ೬೯ ಜನ ಪುರುಷರಿದ್ದರೆ ಮಹಿಳೆಯರು ೫೭ ಜನರಿದ್ದಾರೆ. ಎರಡನೇ ತಲೆಮಾರಿನಲ್ಲಿ

೪೨ ಪುರುಷರು ಮತ್ತು ೩೫ ಮಹಿಳೆಯರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ೧೯ ಪುರುಷರು ಹಾಗೂ ೨೨ ಮಹಿಳೆಯರಿದ್ದಾರೆ.

ಕೋಷ್ಟಕ ೫.೫ ಹೊನ್ನಾಳಿ ತಾಲೂಕಿನ ಬೇಡರ ತಲೆಮಾರುಗಳ ಲಿಂಗವಾರು ಜನಸಂಖ್ಯೆ

ತಾಲೂಕು	ಗ್ರಾಮ	ಒಟ್ಟು ಜನಸಂಖ್ಯೆ		ಮೊದಲನೇ ತಲೆಮಾರು		ಎರಡನೇ ತಲೆಮಾರು		ಮೂರನೇ ತಲೆಮಾರು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
ಹೊನ್ನಾಳಿ	ಕಂಚಿಕೊಪ್ಪ	೧೩೦	೧೧೪	೬೯	೫೭	೪೨	೩೫	೧೯	೨೨
	ಕುಳಗಟ್ಟೆ	೧೩೨	೧೧೯	೬೬	೬೧	೪೫	೩೯	೨೧	೧೯
	ಹನುಮನಹಳ್ಳಿ	೧೩೩	೧೦೮	೬೯	೫೭	೪೦	೩೦	೨೪	೨೧
ಒಟ್ಟು		೩೯೫	೩೪೧	೨೦೪	೧೭೫	೧೨೭	೧೦೪	೬೪	೬೨

ತಾಲೂಕಿನ ಕುಳಗಟ್ಟ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೫೧ ಇದರಲ್ಲಿ ಪುರುಷರು ಶೇ. ೫೨.೫೯ರಷ್ಟು ಮತ್ತು ಮಹಿಳೆಯರು ಶೇ. ೪೭.೪೧ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೬೬ ಜನ ಪುರುಷರು ಇದ್ದರೆ ಮಹಿಳೆಯರು ೬೧ ಜನ ಇದ್ದಾರೆ. ಎರಡನೇ ತಲೆಮಾರಿನವರಲ್ಲಿ ಪುರುಷರು ೪೫ ಮತ್ತು ಮಹಿಳೆಯರು ೩೯ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೨೧ ಹಾಗೂ ಮಹಿಳೆಯರು ೧೯ರಷ್ಟಿದ್ದಾರೆ.

ತಾಲೂಕಿನ ಹನುಮನಹಳ್ಳಿ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೪೨ ಇದರಲ್ಲಿ ಪುರುಷರು ಶೇ. ೫೪.೯೬ರಷ್ಟು ಮತ್ತು ಮಹಿಳೆಯರು ಶೇ. ೪೫.೦೪ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ೬೯ ಜನ ಪುರುಷರಿದ್ದರೆ ಮಹಿಳೆಯರು ೫೭ ಜನ ಇದ್ದಾರೆ. ಎರಡನೇ ತಲೆಮಾರಿನವರು ಪುರುಷರು ೪೦ ಮತ್ತು ಮಹಿಳೆಯರು ೩೦ ಜನರಿದ್ದಾರೆ. ಮೂರನೇ ತಲೆಮಾರಿನವರು ಪುರುಷರು ೨೪ ಹಾಗೂ ೨೧ ಮಹಿಳೆಯರಿದ್ದಾರೆ.

ಹೊನ್ನಾಳಿ ತಾಲೂಕಿನ ಮೂರು ಗ್ರಾಮಗಳ ಒಟ್ಟು ಬೇಡರ ಜನಸಂಖ್ಯೆ ೭೩೬ ಇದರಲ್ಲಿ ಮೊದಲ ತಲೆಮಾರಿನವರು ಒಟ್ಟು ೩೭೯ ಎರಡನೇ ತಲೆಮಾರಿನವರು ೨೩೧, ಮೂರನೇ ತಲೆಮಾರಿನವರು ಒಟ್ಟು ೧೨೬ರಷ್ಟಿದ್ದಾರೆ. ಅಂದರೆ ಒಟ್ಟು ವಯಸ್ಕರ ಸಂಖ್ಯೆಯಲ್ಲಿ ಮೊದಲ ತಲೆಮಾರಿನ ೬೦ರ ಹಿರಿಯರ ಶೇಕಡಾವಾರು ಪ್ರಮಾಣ ಶೇಕಡಾ ೫೧.೬೩ ಇದ್ದರೆ ಎರಡನೇ ತಲೆಮಾರಿನವರ ಪ್ರಮಾಣ ೩೧.೪೭ರಷ್ಟಿದೆ. ಹಾಗೇ ಮೂರನೇ ತಲೆಮಾರಿನವರ ಒಟ್ಟು ಪ್ರಮಾಣ ೧೭.೧೧ರಷ್ಟಿದೆ.

೫.೬ ಜಗಳೂರು ತಾಲೂಕಿನ ಬೇಡರ ತಲೆಮಾರುಗಳ ಗ್ರಾಮವಾರು ಜನಸಂಖ್ಯಾ ವಿವರ

ಜಗಳೂರು ತಾಲೂಕಿನ ಬಸವನಕೋಟೆ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೭೨. ಇದರಲ್ಲಿ ಪುರುಷರು ೫೩.೬೮ ಮತ್ತು ಮಹಿಳೆಯರು ೪೬.೩೨ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೭೭ ಜನ ಪುರುಷರಿದ್ದರೆ ಮಹಿಳೆಯರು ೬೨ ಜನರಿದ್ದಾರೆ. ಎರಡನೇ ತಲೆಮಾರಿನವರಲ್ಲಿ ಪುರುಷರು ೪೭ ಮತ್ತು ಮಹಿಳೆಯರು ೪೨ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೨೨ ಹಾಗೂ ಮಹಿಳೆಯರು ೨೨ರಷ್ಟಿದ್ದಾರೆ.

ಕೋಷ್ಟಕ ೫.೬ ಜಗಳೂರು ತಾಲೂಕಿನ ಬೇಡರ ತಲೆಮಾರುಗಳ ಲಿಂಗವಾರು ಜನಸಂಖ್ಯೆ

ತಾಲೂಕು	ಗ್ರಾಮ	ಒಟ್ಟು ಜನಸಂಖ್ಯೆ		ಮೊದಲನೇ ತಲೆಮಾರು		ಎರಡನೇ ತಲೆಮಾರು		ಮೂರನೇ ತಲೆಮಾರು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
ಜಗಳೂರು	ಬಸವನಕೋಟೆ	೧೪೬	೧೨೬	೭೭	೬೨	೪೭	೪೨	೨೨	೨೨
	ಮಾಗಡಿ	೧೪೩	೧೧೯	೭೫	೬೧	೪೨	೩೭	೨೬	೨೧
	ಸೊಕ್ಕೆ	೧೩೦	೧೦೯	೬೯	೫೮	೪೧	೩೬	೨೦	೧೫
	ಒಟ್ಟು	೪೧೯	೩೫೪	೨೨೧	೧೮೧	೧೩೦	೧೧೫	೬೮	೫೮

ತಾಲೂಕಿನ ಮಾಗಡಿ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೬೨. ಇದರಲ್ಲಿ ಪುರುಷರು ೫೪.೫೮ ಮತ್ತು ಮಹಿಳೆಯರು ೪೫.೪೨ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೭೫ ಜನ ಪುರುಷರಿದ್ದರೆ ಮಹಿಳೆಯರು ೬೧ ಜನರಿದ್ದಾರೆ. ಎರಡನೇ ತಲೆಮಾರಿನವರಲ್ಲಿ ಪುರುಷರು ೪೨ ಮತ್ತು ಮಹಿಳೆಯರು ೩೭ ಜನರಿದ್ದಾರೆ. ಮೂರನೇ ತಲೆಮಾರಿನವರಲ್ಲಿ ಪುರುಷರು ೨೬ ಹಾಗೂ ಮಹಿಳೆಯರು ೨೧ರಷ್ಟಿದ್ದಾರೆ.

ತಾಲೂಕಿನ ಸೊಕ್ಕೆ ಗ್ರಾಮದ ಬೇಡರ ವಯಸ್ಕರ ಒಟ್ಟು ಜನಸಂಖ್ಯೆ ೨೩೯ ಇದ್ದು ಇದರಲ್ಲಿ ಪುರುಷರು ೫೪.೩೯ ಮತ್ತು ಮಹಿಳೆಯರು ೪೫.೬೧ರಷ್ಟಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರಲ್ಲಿ ೬೯ ಜನ ಪುರುಷರಿದ್ದರೆ ಮಹಿಳೆಯರು ೫೮ ಜನ ಇದ್ದಾರೆ. ಎರಡನೇ ತಲೆಮಾರಿನವರಲ್ಲಿ ಪುರುಷರು ೪೧ ಮತ್ತು ಮಹಿಳೆಯರು ೩೬ ಜನರಿದ್ದಾರೆ. ಮೂರನೇ ತಲೆಮಾರಿನವರನ್ನು ಒಳಗೊಂಡಂತೆ ಪುರುಷರು ೨೦ ಹಾಗೂ ಮಹಿಳೆಯರು ೧೫ರಷ್ಟಿದ್ದಾರೆ.

ಜಗಳೂರು ತಾಲೂಕಿನ ಮೂರು ಗ್ರಾಮಗಳ ಒಟ್ಟು ಬೇಡರ ಜನಸಂಖ್ಯೆ ೭೭೩. ಇದರಲ್ಲಿ ಮೊದಲ ತಲೆಮಾರಿನವರು ಒಟ್ಟು ೪೦೨. ಎರಡನೇ ತಲೆಮಾರಿನವರು ೨೪೫, ಮೂರನೇ ತಲೆಮಾರಿನವರು ಒಟ್ಟು ೧೨೬ರಷ್ಟಿದ್ದಾರೆ. ಅಂದರೆ ಒಟ್ಟು ವಯಸ್ಕರ ಸಂಖ್ಯೆಯಲ್ಲಿ ಮೊದಲ ತಲೆಮಾರಿನ

೬೧ ವರ್ಷ ಮೇಲ್ಪಟ್ಟ ವೃದ್ಧರ ಶೇಕಡಾವಾರು ಪ್ರಮಾಣ ಶೇಕಡಾ ೫೨ ಇದ್ದರೆ ಎರಡನೇ ತಲೆಮಾರಿನವರ ಪ್ರಮಾಣ ೩೧.೯ರಷ್ಟಿದೆ. ಹಾಗೇ ಮೂರನೇ ತಲೆಮಾರಿನವರ ಒಟ್ಟು ಪ್ರಮಾಣ ೧೬.೩೦ರಷ್ಟಿದೆ.

ದಾವಣಗೆರೆ ಜಿಲ್ಲೆಯ ಆರು ತಾಲೂಕುಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳನ್ನು ಸಮೀಕ್ಷಿಸಿದಾಗ ಚನ್ನಗಿರಿ ತಾಲೂಕಿನಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ೬೧ ವರ್ಷಕ್ಕಿಂತ ಮೇಲ್ಪಟ್ಟವರು (ಶೇಕಡಾ ೫೩.೧೧) ಕಂಡುಬಂದರು. ಚನ್ನಗಿರಿ ನಂತರದ ಸ್ಥಾನ ಹರಪನಹಳ್ಳಿಗೆ (ಶೇಕಡಾ ೫೨.೩೦) ಸಲ್ಲುತ್ತದೆ. ಮೂರನೇ ಸ್ಥಾನ ಜಗಳೂರಿಗೆ (ಶೇಕಡಾ ೫೨.೦೦) ಅಂದರೆ ಕೊನೆಯ ಸ್ಥಾನ ದಾವಣಗೆರೆ (ಶೇಕಡಾ ೫೦.೦೨) ಸಲ್ಲುತ್ತದೆ. ಇನ್ನುಳಿದಂತೆ ಹರಿಹರ ಶೇಕಡಾ ೫೧.೭೦ ಹಾಗೂ ಹೊನ್ನಾಳಿ ಶೇಕಡಾ ೫೧.೬೩ ಹೊಂದಿವೆ. ಹರಪನಹಳ್ಳಿ ಹೊನ್ನಾಳಿ ತಾಲೂಕುಗಳು ಪಹಿಲ್ವಾನರು ಹೆಚ್ಚಾಗಿದ್ದ ತಾಲೂಕುಗಳು. ಪ್ರಾಯಶಃ ಆ ಕಾರಣಕ್ಕಾಗಿ ಆ ತಾಲೂಕಿನಲ್ಲಿ ವಯೋವೃದ್ಧರು ಹೆಚ್ಚಾಗಿರ ಬಹುದೇನೋ ಎನಿಸುತ್ತದೆ.

೫.೭ ಬೇಡರ ಕಾಯಕರ್ಹರ ಪ್ರಮಾಣ

ಕೋಷ್ಟಕ ೫.೭.೧ ಬೇಡರ ಮೊದಲನೇ ತಲೆಮಾರಿನವರ ಅವಲಂಬಿತರ ಲಿಂಗವಾರು ಪ್ರಮಾಣ

ಕ್ರಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			ಕಾಯಕರರ್ಹಲ್ಲದವರು			ಅವಲಂಬಿತರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೧೮೨	೧೬೨	೩೪೪	೪೩	೫೧	೯೪	೩೪	೧೦	೪೪
೨	ದಾವಣಗೆರೆ	೧೭೫	೧೬೪	೩೩೯	೫೦	೫೨	೧೦೨	೩೪	೧೧	೪೫
೩	ಹರಪನಹಳ್ಳಿ	೧೮೮	೧೬೪	೩೫೨	೪೬	೫೦	೯೬	೩೩	೫	೩೮
೪	ಹರಿಹರ	೧೯೭	೧೬೫	೩೬೨	೪೯	೪೮	೯೭	೪೧	೧೧	೫೨
೫	ಹೊನ್ನಾಳಿ	೨೦೪	೧೭೫	೩೭೯	೪೫	೪೨	೮೭	೪೨	೧೧	೫೩
೬	ಜಗಳೂರು	೨೨೧	೧೮೧	೪೦೨	೪೮	೩೮	೮೬	೪೭	೧೯	೬೬
ಒಟ್ಟು		೧೧೬೭	೧೦೧೧	೨೧೭೮	೨೮೧	೨೮೧	೫೬೨	೨೩೧	೬೭	೨೯೮

ದಾವಣಗೆರೆ ಜಿಲ್ಲೆಯ ಮೊದಲನೆಯ ತಲೆಮಾರು ಬೇಡರ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಒಟ್ಟು ಜನಸಂಖ್ಯೆ ೨೧೭೮ರಷ್ಟಿದೆ. ಇದರಲ್ಲಿ ೦-೧೭ ವಯೋಮಾನದವರು ಒಟ್ಟು ಶೇ ೬೫.೩೫ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ ೫೪.೮೮ ರಷ್ಟು ಹಾಗೂ ಮಹಿಳೆಯರು ಶೇ ೮೦.೭೫ರಷ್ಟಿದ್ದಾರೆ. ಹಾಗೂ ೬೧ರ ಮೇಲ್ಪಟ್ಟ ವಯೋಮಾನದವರು ಒಟ್ಟು ಶೇ ೩೪.೬೫ರಷ್ಟಿದ್ದಾರೆ. ಇದರಲ್ಲಿ ಪುರುಷರು ೪೫.೧೨ರಷ್ಟು ಹಾಗೂ ಮಹಿಳೆಯರು ೧೯.೨೫ರಷ್ಟಿದ್ದಾರೆ. ಕಾನೂನಿನ ರೀತ್ಯ ೧೭ ವಯೋಮಾನದ ಒಳಗಿನವರು ಯಾವುದೇ ವೃತ್ತಿಯನ್ನು ೬೧ರ ಮೇಲ್ಪಟ್ಟವರು ದೈಹಿಕ ದೌರ್ಬಲ್ಯದಿಂದಾಗಿ ಯಾವುದೇ ಕೆಲಸ ಮಾಡಲು ಅಸಮರ್ಥರೆಂದು ಮೂರು ತಲೆಮಾರುಗಳಲ್ಲಿಯೂ ಭಾವಿಸಲಾಗಿದೆ. ಹೀಗಾಗಿ ಈ ವಯೋಮಾನದವರನ್ನು ಅವಲಂಬಿತರೆಂದು ಭಾವಿಸಲಾಗಿದೆ.

ಕೋಷ್ಟಕ ೫.೭.೨ ದಾವಣಗೆರೆ ಜಿಲ್ಲೆಯ ಬೇಡರ ಮೊದಲನೇ ತಲೆಮಾರಿನವರ ಲಿಂಗವಾರು ಕಾಯಕರ್ಹರು, ಕಾಯಕಸ್ಥರು ಹಾಗೂ ಅವಲಂಬಿತರ ಪ್ರಮಾಣ

ಕ್ರಸಂ.	ತಾಲೂಕುಗಳು	ಕಾಯಕರ್ಹರು			ಕಾಯಕಸ್ಥರು			ಅವಲಂಬಿತರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೧೦೫	೧೦೧	೨೦೬	೧೩೪	೧೧೮	೨೫೨	೨೯	೧೭	೪೬
೨	ದಾವಣಗೆರೆ	೯೧	೧೦೧	೧೯೨	೧೨೩	೧೩೪	೨೫೭	೩೨	೩೩	೬೫
೩	ಹರಪನಹಳ್ಳಿ	೧೦೯	೧೦೯	೨೧೮	೧೩೬	೧೪೨	೨೭೮	೨೭	೩೩	೬೦
೪	ಹರಿಹರ	೧೦೭	೧೦೬	೨೧೩	೧೪೬	೧೪೨	೨೮೮	೩೯	೩೬	೭೫
೫	ಹೊನ್ನಾಳಿ	೧೧೭	೧೨೨	೨೩೯	೧೫೭	೧೫೨	೩೦೯	೪೦	೩೦	೭೦
೬	ಜಗಳೂರು	೧೨೬	೧೨೪	೨೫೦	೧೭೬	೧೬೯	೩೪೫	೫೦	೪೫	೯೫
ಒಟ್ಟು		೬೫೫	೬೬೩	೧೩೧೮	೮೭೨	೮೫೭	೧೭೨೯	೨೧೭	೧೯೪	೪೧೧

ಕೋಷ್ಟಕ ೫.೭.೨ರಲ್ಲಿ ಗಮನಿಸಿದಾಗ ಒಟ್ಟು ಜನಸಂಖ್ಯೆಯಲ್ಲಿ ಕಾಯಕರ್ಹರಲ್ಲದ ಹಾಗೂ ದೈಹಿಕ ದೌರ್ಬಲ್ಯದ ವಯೋಮಾನದವರನ್ನು ತೆಗೆದಿರಸಲಾಗಿ ಕಾಯಕರ್ಹರ ಅಂದರೆ ದುಡಿಯುವ ವರ್ಗದವರೆಂದು ಗಣಿಸಲಾಗಿದೆ. ಆದರೆ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಮಾಹಿತಿಯ ಅಂಕಿಅಂಶಗಳನ್ವಯ ಕಾಯಕರ್ಹರ ಪ್ರಮಾಣಕ್ಕಿಂತ ಹೆಚ್ಚಿನ ಕಾಯಕಸ್ಥರ ವರ್ಗದ ಲಿಂಗವಾರು ಪ್ರಮಾಣವನ್ನು ಕೋಷ್ಟಕ ೫.೨ರಲ್ಲಿ ಕಾಣಸಿಗುತ್ತದೆ. ಕಾರಣ ಮೊದಲನೇ ತಲೆಮಾರಿನಲ್ಲಿ ಹೆಚ್ಚಿನ ಕುಟುಂಬವರ್ಗಗಳು ಅವಿಭಕ್ತ ಕುಟುಂಬವಾಗಿರುವ ಹಿನ್ನೆಲೆಯಲ್ಲಿ ಲಿಂಗವಾರು ತಾರತಮ್ಯವಿಲ್ಲದೇ ಕುಟುಂಬದ ಎಲ್ಲ ಸದಸ್ಯರನ್ನೊಳಗೊಂಡಂತೆ ಕೆಲಸಗಳು ಮಾಡುತ್ತಿದ್ದುದಾಗಿತ್ತು ಎಂಬುದು ತಿಳಿದುಬರುತ್ತದೆ. ಉದಾಹರಣೆಗೆ ವ್ಯವಸಾಯದಲ್ಲಿ ಬಿತ್ತನೆ, ಹೊಲ ಉಳುಮೆ, ಕಳೆತೆಗೆಯುವುದು, ಹೀಗೆ ಅನೇಕ ಕೃಷಿ ಕೆಲಸಗಳಲ್ಲಿ ಸಹಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ಮತ್ತು ಪಶುಪಾಲನೆ ಇವರ ಎರಡನೇ ಜೀವನ ನಿರ್ವಹಣೆಯ ಆಧಾರವಾಗಿತ್ತು. ಇದರಿಂದ ದನ, ಕರು, ಎತ್ತು, ಎಮ್ಮೆಗಳನ್ನು ಮೇಯಿಸುವ, ದನಗಳ ಹಟ್ಟಿಗಳನ್ನು ಸ್ವಚ್ಛಪಡಿಸುವ, ದನಕರುಗಳಿಗೆ ಮೇವು ತರುವ ಹೀಗೆ ಅವುಗಳ ಪಾಲನೆಯಲ್ಲಿ ತೊಡಗಿರುವುದು. ಹಾಗೆಯೇ ಕುರಿ, ಮೇಕೆ, ಸಾಕಣಿಕೆ ಇವರ ಮತ್ತೊಂದು ಆರ್ಥಿಕ ಭದ್ರತೆಯ ಮೂಲ ರೂಪದಾಗಿದ್ದು, ಅವುಗಳ ಪಾಲನೆಯಲ್ಲಿಯೂ ಈ ಅವಲಂಬಿತ ವರ್ಗದವರು ಸಹಾಯಕರಾಗಿ ಕೆಲಸಗಳನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಕಾಯಕಸ್ಥರ ಪ್ರಮಾಣದಲ್ಲಿ ದುಡಿಯುವ ಹಾಗೂ ಅವಲಂಬಿತ ವರ್ಗವು ಸೇರಿಕೊಂಡಿರುವುದರಿಂದ ಇಲ್ಲಿ ಕಾಯಕರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಗಣನೀಯವಾಗಿರುವುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

ಮೊದಲನೇ ತಲೆಮಾರಿನ ತಾಲೂಕುವಾರು ಹಾಗೂ ಲಿಂಗವಾರು ಬೇಡರ ಕಾಯಕವರ್ಗವನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ

ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೭೮.೩೬ರಷ್ಟು ಪುರುಷರು, ಶೇ. ೮೫.೫೯ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿಕಂಡುಬಂದರೆ, ಶೇ. ೨೧.೬೪ರಷ್ಟು ಪುರುಷರು ಹಾಗೂ ಶೇ. ೧೪.೪೧ರಷ್ಟು ಮಹಿಳೆಯರು ಅವಲಂಬಿತ ವರ್ಗದವರು ದುಡಿಯುವ ವರ್ಗದೊಂದಿಗೆ ಸಹಕಾರಿಯಾಗಿ ಕೆಲಸಗಳಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೨ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೬೮.೯೪ರಷ್ಟು ಪುರುಷರು, ಶೇ. ೭೩.೩೭ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿಕಂಡುಬಂದರೆ, ಶೇ. ೩೧.೦೬ರಷ್ಟು ಪುರುಷರು ಹಾಗೂ ಶೇ. ೨೪.೬೩ರಷ್ಟು ಮಹಿಳೆಯರು ಅವಲಂಬಿತ ವರ್ಗದವರು ದುಡಿಯುವ ವರ್ಗದೊಂದಿಗೆ ಸಹಕಾರಿಯಾಗಿ ಕೆಲಸಗಳಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೨ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೮೦.೧೫ರಷ್ಟು ಪುರುಷರು, ಶೇ. ೬೭.೭೬ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿಕಂಡುಬಂದರೆ, ಶೇ. ೧೯.೮೫ರಷ್ಟು ಪುರುಷರು ಹಾಗೂ ಶೇ. ೩೨.೨೪ರಷ್ಟು ಮಹಿಳೆಯರು ಅವಲಂಬಿತ ವರ್ಗದವರು ದುಡಿಯುವ ವರ್ಗದೊಂದಿಗೆ ಸಹಕಾರಿಯಾಗಿ ಕೆಲಸಗಳಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೨ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೭೩.೨೯ರಷ್ಟು ಪುರುಷರು, ಶೇ. ೭೪.೬೫ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿಕಂಡುಬಂದರೆ, ಶೇ. ೨೬.೭೧ರಷ್ಟು ಪುರುಷರು ಹಾಗೂ ಶೇ. ೨೫.೩೫ರಷ್ಟು ಮಹಿಳೆಯರು ಅವಲಂಬಿತ ವರ್ಗದವರು ದುಡಿಯುವ ವರ್ಗದೊಂದಿಗೆ ಸಹಕಾರಿಯಾಗಿ ಕೆಲಸಗಳಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೨ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೭೪.೫೨ರಷ್ಟು ಪುರುಷರು, ಶೇ. ೮೦.೨೬ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೨೫.೪೪ರಷ್ಟು ಪುರುಷರು ಹಾಗೂ ಶೇ. ೧೯.೭೪ರಷ್ಟು ಮಹಿಳೆಯರು ಅವಲಂಬಿತ ವರ್ಗದವರು ದುಡಿಯುವ ವರ್ಗದೊಂದಿಗೆ ಸಹಕಾರಿಯಾಗಿ ಕೆಲಸಗಳಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೨ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೭೧.೫೯ರಷ್ಟು ಪುರುಷರು, ಶೇ. ೭೩.೩೭ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೨೮.೪೧ರಷ್ಟು ಪುರುಷರು ಹಾಗೂ ಶೇ. ೨೬.೬೩ರಷ್ಟು

ಮಹಿಳೆಯರು ಅವಲಂಬಿತ ವರ್ಗದವರು ದುಡಿಯುವ ವರ್ಗದೊಂದಿಗೆ ಸಹಕಾರಿಯಾಗಿ ಕೆಲಸಗಳಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೨ ನೋಡಿ).

ಮೊದಲನೇ ತಲೆಮಾರಿನ ಬೇಡರ ಕುಟುಂಬಗಳ ಕಾಯಕಸ್ಥರ ಅಂಕಿಅಂಶಗಳನ್ನು ನೋಡಿದಾಗ ಲಿಂಗ ತಾರತಮ್ಯವಿಲ್ಲದೇ ಕೆಲಸಗಳಲ್ಲಿ ಭಾಗಿಯಾಗಿ ಹೆಚ್ಚಿನ ಶ್ರಮಿಕ ವರ್ಗವಾಗಿರುವುದು ಕಂಡುಬರುತ್ತದೆ. 'ಆಳಾಗಿ ದುಡಿದು ಅರಸನಾಗಿ ಉಣ್ಣು' ಎಂಬ ಗಾದೆಯಂತೆ ಅವರವರ ಕೆಲಸಗಳನ್ನು ಜವಾಬ್ದಾರಿಯುತವಾಗಿ ಕುಟುಂಬದ ಹಿತರಕ್ಷಣೆ ಹಾಗೂ ಸಂರಕ್ಷಣೆಯ ಕಲ್ಪನೆಯ ಜೊತೆಗೆ ಆರ್ಥಿಕ ಪರಿಸ್ಥಿತಿಯನ್ನು ಕಾಯ್ದುಕೊಳ್ಳುವುದು ಮುಖ್ಯವಾಗಿತ್ತು.

ಕೋಷ್ಟಕ ೫.೭.೩ ದಾವಣಗೆರೆ ಜಿಲ್ಲೆಯ ಬೇಡರ ಎರಡನೇ ತಲೆಮಾರಿನವರ ಕಾಯಕರ್ಹಲ್ಲದ ಹಾಗೂ ಅವಲಂಬಿತರ ಲಿಂಗವಾರು ಪ್ರಮಾಣ

ಕ್ರಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			ಕಾಯಕರರ್ಹಲ್ಲದವರು			ಅವಲಂಬಿತರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೯೫	೮೯	೧೮೪	೨೧	೨೩	೪೪	೩	೩	೬
೨	ದಾವಣಗೆರೆ	೧೦೯	೧೦೮	೨೧೭	೨೬	೨೪	೫೦	೧	೨	೩
೩	ಹರಪನಹಳ್ಳಿ	೧೧೮	೮೪	೨೦೨	೪೩	೧೨	೫೫		೧	೧
೪	ಹರಿಹರ	೧೧೨	೧೦೯	೨೨೧	೩೬	೨೨	೫೮	೧		೧
೫	ಹೊನ್ನಾಳಿ	೧೨೭	೧೦೪	೨೩೧	೩೪	೧೧	೪೫			
೬	ಜಗಳೂರು	೧೩೦	೧೧೫	೨೪೫	೩೪	೧೦	೪೪			
ಒಟ್ಟು		೬೯೧	೬೦೯	೧೩೦೦	೧೯೪	೧೦೨	೨೯೬	೫	೬	೧೧

ಕೋಷ್ಟಕ ೫.೭.೪ ಎರಡನೇ ತಲೆಮಾರಿನ ಲಿಂಗವಾರು ಕಾಯಕರ್ಹರು, ಕಾಯಕಸ್ಥರು ಹಾಗೂ ನಿರುದ್ಯೋಗಸ್ಥರ ಪ್ರಮಾಣ

ಕ್ರಸಂ.	ತಾಲೂಕುಗಳು	ಕಾಯಕರ್ಹದವರು			ಕಾಯಕಸ್ಥರು			ನಿರುದ್ಯೋಗಿಗಳು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೭೧	೬೩	೧೩೪	೬೭	೫೭	೧೨೪	೪	೬	೧೦
೨	ದಾವಣಗೆರೆ	೮೨	೮೨	೧೬೪	೭೫	೭೦	೧೪೫	೭	೧೨	೧೯
೩	ಹರಪನಹಳ್ಳಿ	೭೫	೭೧	೧೪೬	೭೨	೬೫	೧೩೭	೩	೬	೯
೪	ಹರಿಹರ	೭೫	೮೭	೧೬೨	೭೫	೮೫	೧೬೦	೦	೨	೨
೫	ಹೊನ್ನಾಳಿ	೯೩	೯೩	೧೮೬	೮೭	೮೪	೧೭೧	೬	೯	೧೫
೬	ಜಗಳೂರು	೯೬	೧೦೫	೨೦೧	೯೩	೧೦೦	೧೯೩	೩	೫	೮
ಒಟ್ಟು		೪೯೨	೫೦೧	೯೯೩	೪೬೯	೪೬೧	೯೩೦	೨೩	೪೦	೬೩

ಕೋಷ್ಟಕ ೫.೭.೪ರಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಕಾಯಕರ್ಹರಲ್ಲದ, ಅವಲಂಬಿತ ವರ್ಗವನ್ನು ದೈಹಿಕ ದೌರ್ಬಲ್ಯದಿಂದಾಗಿ ಯಾವುದೇ ಕೆಲಸ ಮಾಡಲು ಅಸಮರ್ಥರೆಂದು ಭಾವಿಸಲಾಗಿದೆ. ದಾವಣಗೆರೆ ಜಿಲ್ಲೆಯ ಮೊದಲನೆಯ ತಲೆಮಾರು ಬೇಡರಲ್ಲಿ ಕಾಣಸಿಗುವಂತೆ ಕಾಯಕಸ್ಥರ

ಪ್ರಮಾಣದಲ್ಲಿ ದುಡಿಯುವ ಹಾಗೂ ಅವಲಂಬಿತ ವರ್ಗವು ಸಹಾಯಕರಾಗಿ ಕೆಲಸಗಳಲ್ಲಿ ಭಾಗಿಯಾಗಿದ್ದಾರೆ. ಎರಡನೇ ತಲೆಮಾರಿನಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಇಲ್ಲಿ ಕಾಯಕರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಕಡಿಮೆಯಾಗಿದ್ದು ನಿರುದ್ಯೋಗಿಗಳ ಪ್ರಮಾಣ ಇರುವುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ. ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಒಟ್ಟು ಜನಸಂಖ್ಯೆ ೧೩೦೦ರಷ್ಟಿದೆ. ಇದರಲ್ಲಿ ೦-೧೭ ವಯೋಮಾನದವರು ಒಟ್ಟು ಶೇ ೬೫.೩೫ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ ೫೪.೮೮ ರಷ್ಟು ಹಾಗೂ ಮಹಿಳೆಯರು ಶೇ ೮೦.೭೫ರಷ್ಟಿದ್ದಾರೆ. ಹಾಗೂ ೬೧ರ ಮೇಲ್ಪಟ್ಟ ವಯೋಮಾನದವರು ಒಟ್ಟು ಶೇ ೩೪.೬೫ರಷ್ಟಿದ್ದಾರೆ. ಇದರಲ್ಲಿ ಪುರುಷರು ೪೫.೧೨ರಷ್ಟು ಹಾಗೂ ಮಹಿಳೆಯರು ೧೯.೨೫ರಷ್ಟಿದ್ದಾರೆ.

ಎರಡನೇ ತಲೆಮಾರಿನ ತಾಲೂಕುವಾರು ಹಾಗೂ ಲಿಂಗವಾರು ಬೇಡರ ಕಾಯಕವರ್ಗವನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೪.೩೭ರಷ್ಟು ಪುರುಷರು, ಶೇ. ೮೨.೫೪ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೫.೬೩ರಷ್ಟು ಪುರುಷರು ಹಾಗೂ ಶೇ. ೧೭.೪೬ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೩ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೧.೪೬ರಷ್ಟು ಪುರುಷರು, ಶೇ. ೮೫.೩೭ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿಕಂಡುಬಂದರೆ, ಶೇ. ೮.೫೪ರಷ್ಟು ಪುರುಷರು ಹಾಗೂ ಶೇ. ೧೪.೬೩ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೩ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೬.೦೦ರಷ್ಟು ಪುರುಷರು, ಶೇ. ೯೧.೫೫ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೪.೦೦ರಷ್ಟು ಪುರುಷರು ಹಾಗೂ ಶೇ. ೮.೪೫ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೩ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೧೦೦ರಷ್ಟು ಪುರುಷರು, ಶೇ. ೯೭.೭೦ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೨.೩೦ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೩ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೩.೫೫ರಷ್ಟು ಪುರುಷರು, ಶೇ. ೯೦.೩೨ರಷ್ಟು ಮಹಿಳೆಯರು

ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೬.೪೫ರಷ್ಟು ಪುರುಷರು ಹಾಗೂ ಶೇ. ೯.೬೮ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೩ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೬.೮೮ರಷ್ಟು ಪುರುಷರು, ಶೇ. ೯೫.೨೪ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿಕಂಡುಬಂದರೆ, ಶೇ. ೩.೧೨ರಷ್ಟು ಪುರುಷರು ಹಾಗೂ ಶೇ. ೪.೭೬ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೩ ನೋಡಿ).

ಎರಡನೇ ತಲೆಮಾರಿನ ಬೇಡರ ಕುಟುಂಬಗಳ ಕಾಯಕಸ್ಥರ ಅಂಕಿಅಂಶಗಳನ್ನು ನೋಡಿದಾಗ ಮೊದಲನೇ ತಲೆಮಾರಿನಲ್ಲಿ ಕಂಡುಬರುವಂತೆ ಲಿಂಗತಾರತಮ್ಯವಿಲ್ಲದೇ ಕೆಲಸಗಳಲ್ಲಿ ಭಾಗಿಯಾಗಿ ಹೆಚ್ಚಿನ ಶ್ರಮಿಕವರ್ಗ ಇರುವುದು ಕಂಡುಬಂದರೆ, ಎರಡನೇ ತಲೆಮಾರಿನಲ್ಲಿ ಕಾಯಕರ್ಹರ ಸಂಖ್ಯೆಗಿಂತ ಕಡಿಮೆಯಾಗಿ ಕಾಯಕಸ್ಥರ ವರ್ಗ ಇರುವುದು ಕಂಡುಬರುತ್ತದೆ.

ಕೋಷ್ಟಕ ೫.೭.೫ ದಾವಣಗೆರೆ ಜಿಲ್ಲೆಯ ಬೇಡರ ಮೂರನೇ ತಲೆಮಾರಿನವರ ಕಾಯಕರ್ಹಲ್ಲದ ಹಾಗೂ ಅವಲಂಬಿತರ ಲಿಂಗವಾರು ಪ್ರಮಾಣ

ಕ್ರಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			ಕಾಯಕರರ್ಹಲ್ಲದವರು			ಅವಲಂಬಿತರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೬೧	೫೩	೧೧೪	೨೧	೧೮	೩೯			
೨	ದಾವಣಗೆರೆ	೫೭	೫೮	೧೧೫	೨೪	೨೧	೪೫			
೩	ಹರಪನಹಳ್ಳಿ	೫೪	೫೮	೧೧೨	೨೩	೨೦	೪೩	೧	೧	೨
೪	ಹರಿಹರ	೬೬	೫೮	೧೨೪	೩೦	೧೬	೪೬		೩	೩
೫	ಹೊನ್ನಾಳಿ	೬೨	೬೨	೧೨೪	೨೪	೧೭	೪೧	೧	೨	೩
೬	ಜಗಳೂರು	೬೭	೫೮	೧೨೫	೨೫	೧೬	೪೧	೧		೧
ಒಟ್ಟು		೩೬೭	೩೪೭	೭೧೪	೧೪೭	೧೦೮	೨೫೫	೩	೬	೯

ಕೋಷ್ಟಕ ೫.೭.೬ ಮೂರನೇ ತಲೆಮಾರಿನ ಲಿಂಗವಾರು ಕಾಯಕರ್ಹರು, ಕಾಯಕಸ್ಥರು ಹಾಗೂ ನಿರುದ್ಯೋಗಸ್ಥರ ಪ್ರಮಾಣ

ಕ್ರಸಂ.	ತಾಲೂಕುಗಳು	ಕಾಯಕರ್ಹದವರು			ಕಾಯಕಸ್ಥರು			ನಿರುದ್ಯೋಗಿಗಳು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೪೦	೩೫	೭೫	೩೮	೧೪	೫೨	೨	೨೧	೨೩
೨	ದಾವಣಗೆರೆ	೩೩	೩೭	೭೦	೩೩	೩೫	೬೮	೦	೨	೨
೩	ಹರಪನಹಳ್ಳಿ	೩೦	೩೭	೬೭	೩೦	೩೪	೬೪	೦	೩	೩
೪	ಹರಿಹರ	೩೬	೩೯	೭೫	೩೬	೩೪	೭೦	೦	೫	೫
೫	ಹೊನ್ನಾಳಿ	೩೭	೪೩	೮೦	೩೭	೪೦	೭೭	೦	೩	೩
೬	ಜಗಳೂರು	೪೧	೪೨	೮೩	೪೧	೪೨	೮೩	೦	೦	೦
ಒಟ್ಟು		೨೧೭	೨೩೩	೪೫೦	೨೧೫	೧೯೯	೪೧೪	೨	೩೪	೩೬

ಕೋಷ್ಟಕ ೫.೭.೬ರಲ್ಲಿ ಮೂರನೇ ತಲೆಮಾರಿನಲ್ಲಿ ಕಾಯಕಸ್ಥರ ವರ್ಗದಲ್ಲಿ ಸಾಕಷ್ಟು ಬದಲಾವಣೆಯಾಗಿರುವುದು ಕಂಡುಬರುತ್ತದೆ. ಇಲ್ಲಿ ಕಾಯಕರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಕಡಿಮೆಯಾಗಿದ್ದು ನಿರುದ್ಯೋಗಿಗಳ ಪ್ರಮಾಣ ಇರುವುದು ಈಗಾಗಲೇ ಗಮನಿಸಿದ್ದೇವೆ. ಮೂರನೇ ತಲೆಮಾರಿನ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಒಟ್ಟು ಜನಸಂಖ್ಯೆ ೭೧೪ರಷ್ಟಿದೆ. ಇದರಲ್ಲಿ ೦-೧೭ ವಯೋಮಾನದವರು ಒಟ್ಟು ಶೇ ೬೫.೩೫ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇ ೫೪.೮೮ ರಷ್ಟು ಹಾಗೂ ಮಹಿಳೆಯರು ಶೇ ೮೦.೭೫ರಷ್ಟಿದ್ದಾರೆ. ಹಾಗೂ ೬೧ರ ಮೇಲ್ಪಟ್ಟ ವಯೋಮಾನದವರು ಒಟ್ಟು ಶೇ ೩೪.೬೫ರಷ್ಟಿದ್ದಾರೆ. ಇದರಲ್ಲಿ ಪುರುಷರು ೪೫.೧೨ರಷ್ಟು ಹಾಗೂ ಮಹಿಳೆಯರು ೧೯.೨೫ರಷ್ಟಿದ್ದಾರೆ.

ಮೂರನೇ ತಲೆಮಾರಿನ ತಾಲೂಕುವಾರು ಹಾಗೂ ಲಿಂಗವಾರು ಬೇಡರ ಕಾಯಕವರ್ಗವನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೫ರಷ್ಟು ಪುರುಷರು, ಶೇ. ೮೫.೩೭ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೫ರಷ್ಟು ಪುರುಷರು ಹಾಗೂ ಶೇ. ೧೪.೬೩ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೪ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೧.೪೬ರಷ್ಟು ಪುರುಷರು, ಶೇ. ೮೫.೩೭ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೮.೫೪ರಷ್ಟು ಪುರುಷರು ಹಾಗೂ ಶೇ. ೧೪.೬೩ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೪ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೬.೦೦ರಷ್ಟು ಪುರುಷರು, ಶೇ. ೯೧.೫೫ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೪.೦೦ರಷ್ಟು ಪುರುಷರು ಹಾಗೂ ಶೇ. ೮.೪೫ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೪ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೧೦೦ರಷ್ಟು ಪುರುಷರು, ಶೇ. ೯೭.೭೦ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೨.೩೦ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೪ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೩.೫೫ರಷ್ಟು ಪುರುಷರು, ಶೇ. ೯೦.೩೨ರಷ್ಟು ಮಹಿಳೆಯರು

ದುಡಿಯುವ ವರ್ಗವಾಗಿ ಕಂಡುಬಂದರೆ, ಶೇ. ೬.೪೫ರಷ್ಟು ಪುರುಷರು ಹಾಗೂ ಶೇ. ೯.೬೮ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೪ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳಲ್ಲಿ ಶೇ. ೯೬.೮೮ರಷ್ಟು ಪುರುಷರು, ಶೇ. ೯೫.೨೪ರಷ್ಟು ಮಹಿಳೆಯರು ದುಡಿಯುವ ವರ್ಗವಾಗಿಕಂಡುಬಂದರೆ, ಶೇ. ೩.೧೨ರಷ್ಟು ಪುರುಷರು ಹಾಗೂ ಶೇ. ೪.೭೬ರಷ್ಟು ಮಹಿಳೆಯರು ನಿರುದ್ಯೋಗಿಗಳಾಗಿ ಇರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೪೪ ನೋಡಿ).

ಎರಡನೇ ತಲೆಮಾರಿನ ಬೇಡಬುಡಕಟ್ಟಿನ ಕುಟುಂಬಗಳ ಕಾಯಕಸ್ಥರ ಅಂಕಿಅಂಶಗಳನ್ನು ನೋಡಿದಾಗ ಮೊದಲನೇ ತಲೆಮಾರಿನಲ್ಲಿ ಕಂಡುಬರುವಂತೆ ಲಿಂಗತಾರತಮ್ಯವಿಲ್ಲದೇ ಕೆಲಸಗಳಲ್ಲಿ ಭಾಗಿಯಾಗಿ ಹೆಚ್ಚಿನ ಶ್ರಮಿಕವರ್ಗ ಇರುವುದು ಕಂಡುಬಂದರೆ, ಎರಡನೇ ತಲೆಮಾರಿನಲ್ಲಿ ಕಾಯಕರ್ಹರ ಸಂಖ್ಯೆಗಿಂತ ಕಡಿಮೆಯಾಗಿ ಕಾಯಕಸ್ಥರ ವರ್ಗ ಇರುವುದು ಕಂಡುಬರುತ್ತದೆ.

೫.೮ ಮೊದಲ ತಲೆಮಾರಿನವರು ಅವಲಂಬಿಸಿದ ವೃತ್ತಿಗಳು

ಪ್ರಸ್ತುತ ಮೊದಲನೇ ತಲೆಮಾರಿನವರ ವೃತ್ತಿಗಳು ಯಾವುವಿದ್ದ ವೆಂಬುದನ್ನು ಇಲ್ಲಿ ಗಮನಿಸೋಣ. ಮೊದಲ ತಲೆಮಾರಿನವರ ವೃತ್ತಿಗಳು ಈ ಕೆಳಗಿನಂತಿವೆ: ಪಶುಪಾಲನೆ, ಊರ ತಳವಾರಿಕೆ, ಜೀತಗಾರಿಕೆ, ಕೃಷಿ ಕೂಲಿ ಅಧ್ಯಯನಕ್ಕೆ ಆಯ್ದುಕೊಂಡ ಮೊದಲ ತಲೆಮಾರಿನವರಲ್ಲಿ ಅದಾಗಲೇ ಬೇಟೆಗಾರಿಕೆ ಇಲ್ಲವೆಂಬಷ್ಟು ಕಡಿಮೆಯಾಗಿದ್ದಿತು. ಬ್ರಿಟಿಶರ ಆಡಳಿತದಲ್ಲಿ ಬೇಟೆಗಾರಿಕೆಯನ್ನೇ ವೃತ್ತಿಯಾಗಿಸಿಕೊಂಡು ಜೀವನ ನಡೆಸುತ್ತಿದ್ದವರನ್ನು ಶಸ್ತ್ರ ನಿಷೇಧ ಕಾಯ್ದೆ ಮುಂತಾದ ಕಾಯ್ದೆಗಳಿಂದ ಬೇಟೆಗಾರಿಕೆಯಿಂದ ದೂರಗೊಳಿಸಲಾಗಿತ್ತು. ಬೇಡ ಸಮುದಾಯಕ್ಕೆ ದಾರಿಹೋಕರನ್ನು ದೋಚುವವರು ಎನ್ನುವ ಪಟ್ಟವನ್ನೂ ಬ್ರಿಟಿಶರು ಕೊಟ್ಟುಬಿಟ್ಟಿದ್ದರು. ಆ ಕಾರಣಕ್ಕಾಗಿಯೇ ಅವರನ್ನು ಅಪರಾಧಿ ಬುಡಕಟ್ಟು ಕಾಯ್ದೆಯಡಿ ಕೂಡಿಡಲಾಗಿತ್ತು. ಇಂತಹ ಸ್ಥಿತಿಯಿಂದ ಹೊರಬರಲೆಂದೋ ಅಥವಾ ಒತ್ತಾಯಪೂರ್ವಕವಾಗಿಯೋ ಬೇಟೆಗಾರಿಕೆಯಿಂದ ದೂರವುಳಿಯಬೇಕಾದ ಅನಿವಾರ್ಯತೆ ಉಂಟಾಯಿತು. ಬೇಟೆಗಾರಿಕೆಯಿಂದ ವಿಮುಖರಾದ ಬೇಡಬುಡಕಟ್ಟು ಗುಡ್ಡಗಾಡಿನ ಕುರುಚಲು ಕಾಡುಗಳಲ್ಲಿ ಸುಲಭವಾಗಿ ಜೀವನ ನಿರ್ವಹಣೆ ಮಾಡಲು ಅನುಕೂಲವಾಗುವ ಪಶುಪಾಲನೆಯನ್ನು ಜೀವನಾಧಾರ ವೃತ್ತಿಯಾಗಿ ಆಯ್ಕೆ ಮಾಡಿ ಕೊಂಡರು. ಬಹುತೇಕ ಬೇಡರು ಪಶುಪಾಲನೆಯನ್ನು ನೆಚ್ಚಿಯೇ ಜೀವನ ನಿರ್ವಹಣೆ ಮಾಡ ತೊಡಗಿದರು. ಇಡೀ ಗ್ರಾಮದ ಒಂದೆರಡು ಕುಟುಂಬಗಳು ಹಿಂದೆ ರಾಜಶಾಹಿ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸು ವಂತೆ ಬ್ರಿಟಿಶ್ ಭಾರತದ ಆಡಳಿತದಲ್ಲಿಯೂ ತಳವಾರಿಕೆ ಮಾಡತೊಡಗಿದರು. ಬ್ರಿಟಿಶರ ತರುವಾಯ ಭಾರತ ಸ್ವಾತಂತ್ರ್ಯಗೊಂಡರೂ ತಳವಾರಿಕೆ ವೃತ್ತಿಯಲ್ಲಿಯೇ ಮುಂದುವರೆಯುವಂತಾಯಿತು.

ಸಾವು ಮುಂತಾದ ಅಶುಭ ಕಾರ್ಯಗಳಲ್ಲಿ ಸಾವಾದ ಸ್ಥಳದಲ್ಲಿ ಬಂದ ತೆಂಗಿನ ಕಾಯಿ, ಹೂವು, ಊದುಬತ್ತಿಗಳನ್ನು ಗೋಣಿ ಚೀಲದಲ್ಲಿ ತುಂಬಿಕೊಂಡು ಸ್ಮಶಾನಕ್ಕೆ ಹೊತ್ತೊಯ್ಯುವುದು,

[illegible]

ಸಾವಾದ ಮನೆಗೆ ಸುಣ್ಣ ಹಚ್ಚುವುದು, ಊಟ ತಯಾರಿಸಿದ ಪಾತ್ರೆ ತೊಳೆಯುವುದು ಮುಂತಾದ ಕಾರ್ಯಗಳನ್ನು ತಳವಾರ ಕುಟುಂಬ ಮಾಡಬೇಕಾಗಿತ್ತು. ಕೆಲವು ಗ್ರಾಮಗಳಲ್ಲಿ ಸ್ಮಶಾನದಲ್ಲಿ ಹೆಣಗಳ ಕುಣಿ ತೆಗೆಯುವ ಕೆಲಸವೂ ಇವರೇ ಮಾಡಬೇಕಾಗಿತ್ತು.

ಊರಿನ ಜಾತ್ರೆ ಸಂದರ್ಭದಲ್ಲಿ ಗುಡಿಗಳಿಗೆ ಸುಣ್ಣ ಹಚ್ಚುವುದು, ದೇವರ ಪಲ್ಲಕ್ಕಿಯನ್ನು ಹೊರುವುದು, ದೈವದವರನ್ನು ಕೂಡಿಹಾಕುವುದು ಸಹ ತಳವಾರರೇ ಮಾಡಬೇಕಾಗುತ್ತಿತ್ತು.

ಹಳೆ ತಲೆಮಾರಿನವರ ದೃಷ್ಟಿಯಲ್ಲಿ ತಳವಾರಿಕೆಯು ತುಂಬಾ ಪ್ರತಿಷ್ಠೆಯ ಹುದ್ದೆಯಾಗಿದ್ದಿತೆಂಬ ಭಾವನೆಯಿದೆ. ದೇವರು ತಮ್ಮ ಜಾತಿಗೆ ನೀಡಿದ ಗೌರವ ಅದೆಂದು ಅವರು ತಿಳಿಸುತ್ತಾರೆ. ಆದರೆ ಎರಡನೇ ತಲೆಮಾರಿಗೆ ಬರುವಷ್ಟರಲ್ಲಿ ತಳವಾರಿಕೆ ವೃತ್ತಿಯ ಮೇಲೆ ಹಳೆ ತಲೆಮಾರಿನವರು ಇರಿಸಿದ ಗೌರವ ನಿಷ್ಠೆಗಳು ಸಡಿಲಗೊಂಡಂತೆ ಕಂಡುಬರುತ್ತದೆ. ತಳವಾರಿಕೆ ವೃತ್ತಿ ತಮ್ಮ ಕುಟುಂಬಕ್ಕೆ ಪಾರಂಪರಿಕವಾಗಿ ದೊರೆತಿದೆ ಎಂಬ ಕಾರಣಕ್ಕಾಗಿ ನಿರ್ವಹಿಸಬೇಕಾಗಿದೆ ಎನ್ನುವ ಭಾವನೆ ಅವರ ಅಭಿವ್ಯಕ್ತಿಯಲ್ಲಿ ಕಂಡುಬಂದಿತು. ತಳವಾರಿಕೆಗಾಗಿಯೇ ಊರಿನಲ್ಲಿ ಸಣ್ಣ ಪ್ರಮಾಣದ ಭೂಮಿಯನ್ನು ಇನಾಮಾಗಿ ತಳವಾರರಿಗೆ ನೀಡಿದ ಉದಾಹರಣೆಗಳೂ ಇವೆ. ಮೂರನೇ ತಲೆಮಾರಿಗೆ ಬರುವಷ್ಟರಲ್ಲಿ ತಳವಾರಿಕೆ ಇಲ್ಲವೆನ್ನುವಷ್ಟು ಗೌಣವಾಗಿದೆ. ಮೂರನೇ ತಲೆಮಾರಿನವರಲ್ಲಿ ಒಂದೆರಡು ಜನ ಬಿಟ್ಟರೆ ಇತರೆ ಯಾರೂ ತಳವಾರಿಕೆ ಕುರಿತು ಅಸಹ್ಯಗೊಳ್ಳುತ್ತಾರೆ ಮತ್ತು ಆ ವೃತ್ತಿಯಿಂದ ದೂರವುಳಿದಿದ್ದಾರೆ. ಅಕಸ್ಮಾತ್ ಅದು ಹಾಗೇ ತಮ್ಮ ಕುಟುಂಬದಲ್ಲಿ ಉಳಿದಿದ್ದರೂ ಮೂರನೇ ತಲೆಮಾರಿನವರು ಮಾಡದೆ ಅದೇ ಕುಟುಂಬದ ಎರಡನೇ ತಲೆಮಾರಿನವರು ತಳವಾರಿಕೆ ವೃತ್ತಿಯನ್ನು ನಿರ್ವಹಿಸುತ್ತಾರೆ. ಆದರೆ ತಳವಾರಿಕೆಯ ಕುರಿತು ಎರಡು ಮತ್ತು ಮೂರನೇ ತಲೆಮಾರಿನವರಿಗೆ ಅಂತಹ ವೃತ್ತಿ ಗೌರವಗಳಂತೂ ಇಲ್ಲ.

ಜೀತಗಾರಿಕೆಯ ಕುರಿತು ಹೇಳುವುದಾದರೆ ಬಹುತೇಕ ಮೊದಲ ತಲೆಮಾರಿನವರು ಜೀತಗಾರಿಕೆಯನ್ನು ತಮಗೆ ಸಹಜವಾದುದೆಂದೇ ಭಾವಿಸುತ್ತಾರೆ. ಮೊದಲ ತಲೆಮಾರಿನವರಲ್ಲಿ ಬಹುತೇಕರು ಜೀತಗಾರಿಕೆಯಿಂದಲೇ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಜೀತಗಾರಿಕಾ ನಿಷೇಧ ಕಾಯ್ದೆ ಬಂದ ತರುವಾಯ ಜೀತಗಾರಿಕೆಯಿಂದ ಇವರಿಗೆ ಮುಕ್ತಿ ದೊರೆಯಿತು. ಜೀತಗಾರಿಕೆಯಲ್ಲಿ ಬಹುತೇಕ ಬೇಡರು ಶ್ರೀಮಂತರ ದನ, ಕುರಿ ಕಾಯುವುದು, ಅವರ ಭೂಮಿಗಳಲ್ಲಿ ಕೃಷಿ ಕೆಲಸ ನಿರ್ವಹಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರಂತೆ. ಅವರ ಕೆಲಸಕ್ಕೆ ಪ್ರತಿಫಲವಾಗಿ ದಿನವೂ ತಂಗಳೂಟ, ಮಲಗಲು ಸ್ವಲ್ಪ ಸ್ಥಳ ಸಿಗುತ್ತಿದ್ದಿತು. ಹಾಗೇ ತಾವು ಉಟ್ಟು ಬಿಟ್ಟ ವಸ್ತ್ರಗಳನ್ನು ಜೀತಗಾರನಿಗೆ ನೀಡುತ್ತಿದ್ದರು. ದಿನಗೂಲಿಯಾಗಲೀ ಯಾವುದೇ ರೀತಿಯ ಸಂಬಳವಾಗಲಿ ಅವರಿಗೆ ನಿಗದಿಯಾಗಿರಲಿಲ್ಲವೆಂದು ವಕ್ತೃ ಮಾಹಿತಿ ನೀಡುತ್ತಾರೆ. ಎರಡು ಮತ್ತು ಮೂರನೇ ತಲೆಮಾರಿನವರಿಗೆ ಜೀತಗಾರಿಕೆಯ ಸೋಂಕು ತಗುಲದೆ ಪಾರಾಗಿರುವರು.

ಇನ್ನು ಕೃಷಿಕೂಲಿ ಮಾಡುವವರ ಸ್ಥಿತಿಯೇನೂ ಭಿನ್ನವಾಗಿರಲಿಲ್ಲ. ಒಂದು ಸೇರು ಹಿಟ್ಟಿಗೆ ಇಡೀ ದಿನ ರೈತನ ಹೊಲದಲ್ಲಿ ದುಡಿಯಬೇಕಾದ ಸ್ಥಿತಿ ಹಳೆತಲೆಮಾರಿನವರಲ್ಲಿತ್ತು. ದುಡಿತಕ್ಕೆ ತಕ್ಕುದಾದ ನಿಗದಿತ ಕೂಲಿ ಮಾತ್ರ ಇರಲಿಲ್ಲ. ಬಹುತೇಕ ಬೆಳಗ್ಗೆ ಎಂಟರ ಸುಮಾರಿಗೆ ಹೋಗಿ ಮೈಬಗ್ಗಿಸಿ ದುಡಿಯಲು ಪ್ರಾರಂಭಿಸಿದವರು ಸಂಜೆ ಹೊತ್ತು ಮುಳುಗಿದ ತರುವಾಯವೇ ಕೆಲಸ ಮಾಡುವುದನ್ನು ನಿಲ್ಲಿಸಬೇಕಾಗಿತ್ತು. ಈ ರೀತಿಯ ದುಡಿಮೆಯನ್ನು ಎರಡನೇ ತಲೆಮಾರಿನಲ್ಲಿ ಕಾಣಲು ಸಾಧ್ಯವಿಲ್ಲ.

ಮುಂದೆ ಭೂ ಹಿಡುವಳಿಯ ಕುರಿತು ಈ ಅಧ್ಯಾಯದಲ್ಲಿ ಮುಂದೆ ವಿಶ್ಲೇಷಿಸಲಾಗಿದೆ. ಬೇಡರು ಉಳುವವನಿಗೆ ಭೂಒಡೆತನ ಎಂಬ ಘೋಷಣೆಯೊಂದಿಗೆ ಪ್ರಾರಂಭಗೊಂಡ ಭೂಒಡೆತನದ ಕಾಯ್ದೆಯ(೭ ಫಾರ್ಮ್) ಲಾಭವನ್ನು ಪಡೆದುಕೊಂಡರು. ಆದರೆ ಅವರಲ್ಲಿ ಶೇಕಡಾ ೯೫ರಷ್ಟು ಭೂ ಒಡೆಯರು ಸಣ್ಣ ಮತ್ತು ಅತೀ ಸಣ್ಣ ತುಂಡು ಭೂಮಿಗಳಿಗೆ ಭೂಒಡೆಯರಾದರೇ ಹೊರತು ಯಾರೂ ೫ ಎಕರೆಗಳ ಮೇಲೆ ಆಸ್ತಿಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಈ ರೀತಿ ಭೂಮಿಗಳು ಇವರಿಗೆ ದೊರೆತವಾದರೂ ಅವು ಬಹುತೇಕ ಸಾರಯುಕ್ತ ಭೂಮಿಗಳಾಗಿರಲಿಲ್ಲ ಮತ್ತು ಕೇವಲ ಮಳೆ ನೀರನ್ನು ಆಶ್ರಯಿಸಿದ ಭೂಮಿಗಳಾಗಿದ್ದವು. ಇಂದಿಗೂ ಹರಪನಹಳ್ಳಿ ಮತ್ತು ಜಗಳೂರು ತಾಲೂಕುಗಳಲ್ಲಿ ಕೇವಲ ಮಳೆಯಾಶ್ರಿತ ಭೂಮಿಗಳಿವೆ. ಮೊದಲ ತಲೆಮಾರಿನವರು ಬಹುತೇಕ ಅನಕ್ಷರಸ್ಥರೇ ಆಗಿದ್ದರು. ತಲೆಮಾರಿನಿಂದ ತಲೆಮಾರಿಗೆ ವೃತ್ತಿಗಳಲ್ಲಾದ ಬದಲಾವಣೆಗಳನ್ನು ಗಮನಿಸುವ ಪ್ರಯತ್ನ ಮಾಡಲಾಗಿದೆ.

ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೊದಲನೇ ತಲೆಮಾರಿನ ಗ್ರಾಮಗಳ ವಿವಿಧ ಕಸುಬುಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಬೇಟೆ, ಪಶುಪಾಲನೆ, ತಳವಾರಿಕೆ, ಕೃಷಿ, ಕೃಷಿಕೂಲಿ, ದಿನಗೂಲಿ ಮತ್ತು ಮನೆಕೆಲಸ ವೃತ್ತಿಗಳು. ಒಟ್ಟಾರೆ ದಾವಣಗೆರೆ ತಾಲೂಕಿನ ಬೇಡರ ೧೮೦ ಕುಟುಂಬಗಳ ಲಿಂಗವಾರನ್ನು ಅವಲೋಕಿಸಲಾಗಿ ಒಟ್ಟಾರೆ ದಾವಣಗೆರೆ ಜಿಲ್ಲಾವಾರು ಶೇ. ೫೦.೩೧ರಷ್ಟು ಪುರುಷರು ಶೇ. ೪೯.೬೯ರಷ್ಟು ಮಹಿಳೆಯರು ವಿವಿಧ ಬಗೆಬಗೆಯ ವೃತ್ತಿಗಳಲ್ಲಿ ತೊಡಗಿರುವುದು ಕಂಡುಬರುತ್ತದೆ.

ಕೋಷ್ಟಕ ೫.೮.೧ ದಾವಣಗೆರೆ ತಾಲೂಕಿನಲ್ಲಿ ಮೊದಲನೇ ತಲೆಮಾರಿನವರು ಅವಲಂಬಿಸಿದ ವೃತ್ತಿಗಳ ವಿವರ

ಕ್ರಸಂ	ನೆಲೆಗಳು	ಕಸುಬುಗಳು																					
		ಬೇಟೆ	ಪಶು ಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಚನ್ನಗಿರಿ	೬	೨೫	೫	೩		೭೨	೧೩	೨೫	೨	೩			೯೮								
೨	ದಾವಣಗೆರೆ	೧೦	೨೬	೨೦	೪	೩	೫೩	೨೬	೨೫	೧೯	೧			೬೯								
೩	ಹರಪನಹಳ್ಳಿ	೧೯	೩೧	೨೩	೩	೧	೫೭	೨೮	೨೩	೧೬				೭೫								
೪	ಹರಿಹರ	೨೨	೨೩	೨೦	೧		೫೭	೩೫	೪೦	೩೪	೨	೪	೧	೪೯								
೫	ಹೊನ್ನಾಳಿ	೨೨	೨೬	೨೦	೨		೬೨	೫೧	೩೩	೩೩	೪	೪	೫	೪೩								
೬	ಜಗಳೂರು	೨೪	೪೭	೪೪	೪	೨	೬೭	೫೦	೨೬	೨೨			೬	೫೩								
ಒಟ್ಟು		೧೦೩	೧೭೮	೧೩೨	೧೭	೬	೩೬೮	೨೦೩	೧೭೨	೧೨೬	೧೦	೮	೧೨	೩೮೭								

ಮೊದಲ ತಲೆಮಾರಿನ ತಾಲೂಕುವಾರು ಬೇಡರ ಕೌಟುಂಬಿಕ ವೃತ್ತಿಗಳನ್ನು ಲಿಂಗವಾರು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬವು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೪.೪೭ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯಾಗಿಸಿಕೊಂಡಿದ್ದಾರೆ. ಅಲ್ಲದೆ ಪಶುಪಾಲನೆಯಲ್ಲಿ ಪುರುಷರು ಶೇ. ೧೮.೬೫ರಷ್ಟು, ಮಹಿಳೆಯರು ಶೇ. ೩೬.೬೬ರಷ್ಟು, ತಳವಾರಿಕೆಯನ್ನ ಪುರುಷರು ಶೇ. ೨.೨೩ರಷ್ಟು, ಕೃಷಿಯನ್ನ ಪುರುಷರು ಶೇ. ೫೩.೭೩ರಷ್ಟು, ಮಹಿಳೆಯರು ಶೇ. ೧೧.೦೧ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೧೮.೬೫ರಷ್ಟು, ಮಹಿಳೆಯರು ಶೇ. ೧.೬೯ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೨.೨೩ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೮೩.೦೫ರಷ್ಟಿದ್ದಾರೆ. (ಅಂಕಿಅಂಶಗಳು: ಪು.೨೪೫ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬವು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೮.೧೩ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯಾನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೨೧.೧೩ರಷ್ಟು, ಮಹಿಳೆಯರು ಶೇ. ೧೪.೯೨ರಷ್ಟು, ತಳವಾರಿಕೆಯಲ್ಲಿ ಶೇ. ೩.೨೫ರಷ್ಟು ಪುರುಷರು, ಶೇ. ೨.೨೩ರಷ್ಟು ಮಹಿಳೆಯರು, ಕೃಷಿಯಲ್ಲಿ ಪುರುಷರು ಶೇ. ೪೩.೦೮ರಷ್ಟಾಗಿದ್ದು, ಮಹಿಳೆಯರು ಶೇ. ೧೬.೪೧ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೨೦.೩೨೫ರಷ್ಟು, ಮಹಿಳೆಯರು ಶೇ. ೧೪.೧೭ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೦.೮೧ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೫೧.೪೯ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೪೫ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೧೩.೯೭ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೨೨.೭೯ರಷ್ಟು, ಮಹಿಳೆಯರು ಶೇ. ೧೬.೧೯ರಷ್ಟು, ತಳವಾರಿಕೆಯಲ್ಲಿ ಶೇ. ೨.೨೦ರಷ್ಟು ಪುರುಷರು, ಶೇ. ೦.೭೦ರಷ್ಟು ಮಹಿಳೆಯರು, ಕೃಷಿಯಲ್ಲಿ ಪುರುಷರು ಶೇ. ೪೧.೯೧ರಷ್ಟಾಗಿದ್ದು, ಮಹಿಳೆಯರು ಶೇ. ೧೯.೭೧ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೧೬.೯೧ರಷ್ಟು, ಮಹಿಳೆಯರು ಶೇ. ೧೧.೨೬ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೧.೩೬ರಷ್ಟಾಗಿದ್ದು, ಮಹಿಳೆಯರು ಶೇ. ೨.೮೧ರಷ್ಟು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೨೪.೫೦ರಷ್ಟಿದ್ದಾರೆ. (ಅಂಕಿಅಂಶಗಳು: ಪು.೨೪೫ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೧೫.೦೬ರಷ್ಟು


ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೧೫.೭೫ರಷ್ಟು, ಮಹಿಳೆಯರು ಶೇ. ೧೪.೦೮ರಷ್ಟು, ತಳವಾರಿಕೆಯಲ್ಲಿ ಶೇ. ೦.೬೮ರಷ್ಟು ಪುರುಷರು, ಕೃಷಿಯಲ್ಲಿ ಪುರುಷರು ಶೇ. ೩೯.೦೪ರಷ್ಟಾಗಿದ್ದು, ಮಹಿಳೆಯರು ಶೇ. ೨೪.೬೪ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೨೭.೩೯ರಷ್ಟು, ಮಹಿಳೆಯರು ಶೇ. ೨೩.೯೪ರಷ್ಟಿದ್ದಾರೆ. ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೫೨.೧೧ರಷ್ಟು ಹಾಗೂ ಇತರೆ ಕಸುಬುಗಳಲ್ಲಿ ಪುರುಷರು ಶೇ. ೧.೪೭ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೪೬ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೧೪.೦೧ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೧೬.೫೬ರಷ್ಟು, ಮಹಿಳೆಯರು ಶೇ. ೧೩.೧೫ರಷ್ಟು, ತಳವಾರಿಕೆಯಲ್ಲಿ ಶೇ. ೧.೨೭ರಷ್ಟು ಪುರುಷರು, ಕೃಷಿಯಲ್ಲಿ ಪುರುಷರು ಶೇ. ೩೭.೫೭ರಷ್ಟಾಗಿದ್ದು, ಮಹಿಳೆಯರು ಶೇ. ೩೩.೫೫ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೨೧.೦೧ರಷ್ಟು, ಮಹಿಳೆಯರು ಶೇ. ೧೯.೭೩ರಷ್ಟಿದ್ದಾರೆ. ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೩.೧೮ರಷ್ಟು, ಮಹಿಳೆಯರು ಶೇ. ೨೮.೨೮ರಷ್ಟು, ಸಣ್ಣ ವ್ಯಾಪಾರಗಳಲ್ಲಿ ಪುರುಷರು ಶೇ. ೧.೨೭ರಷ್ಟು, ಮಹಿಳೆಯರು ಶೇ. ೦.೬೫ರಷ್ಟು ಹಾಗೂ ಇತರೆ ಕಸುಬುಗಳಲ್ಲಿ ಪುರುಷರು ಶೇ. ೨.೫೪ರಷ್ಟು, ಮಹಿಳೆಯರು ಶೇ. ೧೯.೭ರಷ್ಟಿದ್ದಾರೆ(ಅಂಕಿಅಂಶಗಳು:ಪು.೨೪೬,ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೧೩.೬೩ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೨೬.೭೦ರಷ್ಟು, ಮಹಿಳೆಯರು ಶೇ. ೨೬.೦೩ರಷ್ಟು, ತಳವಾರಿಕೆಯಲ್ಲಿ ಶೇ. ೨.೨೭ರಷ್ಟು ಪುರುಷರು, ಮಹಿಳೆಯರು ಶೇ. ೧.೧೮ರಷ್ಟು, ಕೃಷಿಯಲ್ಲಿ ಪುರುಷರು ಶೇ. ೩೬.೩೬ರಷ್ಟಾಗಿದ್ದು, ಮಹಿಳೆಯರು ಶೇ. ೨೮.೪೦ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೧೪.೭೭ರಷ್ಟು, ಮಹಿಳೆಯರು ಶೇ. ೧೩.೦೧ರಷ್ಟಿದ್ದಾರೆ. ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೩.೪೦ರಷ್ಟು, ಮಹಿಳೆಯರು ಶೇ. ೩೧.೩೬ರಷ್ಟು ಹಾಗೂ ಇತರೆ ಕಸುಬುಗಳಲ್ಲಿ ಪುರುಷರು ಶೇ. ೧.೧೩ರಷ್ಟಿದ್ದಾರೆ. (ಅಂಕಿಅಂಶಗಳು: ಪು.೨೪೬ ನೋಡಿ).

ಮೊದಲ ತಲೆಮಾರಿನ ಬೇಡರ ಕುಟುಂಬಗಳಲ್ಲಿ ಲಿಂಗವಾರು ಕಸುಬುಗಳಲ್ಲಿ ತೊಡಗಿಸಿಕೊಂಡು ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಅವರು ವಹಿಸಿಕೊಳ್ಳುವ ಬಗೆಬಗೆಯ ವೃತ್ತಿಗಳನ್ನು ವೃತ್ತಚಿತ್ರ ೫.೮.೧ರಲ್ಲಿ ಗಮನಿಸಿದಾಗ ಒಟ್ಟಾರೆ ಜಿಲ್ಲಾವಾರು ನೋಡಿದಾಗ ತಮ್ಮದೇ ಆದ ಭೂಹಿಡುವಳಿಯಲ್ಲಿ ಕೃಷಿಯನ್ನಾಧರಿಸಿ ಜೀವನಸಾಗಿಸುತ್ತಿರುವ ಶೇ. ೩೩ರಷ್ಟು ಲಿಂಗವಾರು

ವೃತ್ತಚಿತ್ರ ೫.೮.೧ ಮೊದಲನೇ ತಲೆಮಾರಿನವರ ವಿವಿಧ ಬಗೆಯ ಕಸುಬುಗಳ ಪ್ರಮಾಣ



ಕಂಡುಬಂದರೆ, ಶೇ. ೧೭ರಷ್ಟು ಲಿಂಗವಾರು ಬೇರೆಯವರ ಒಡೆತನ ಹೊಂದಿರುವ ಭೂಮಿಗಳಲ್ಲಿ ಕೃಷಿಕೂಲಿಗಳಾಗಿ ದುಡಿದು ಬದುಕು ಕಟ್ಟಿಕೊಂಡಿರುವುದು ಕಂಡುಬರುತ್ತದೆ. ಶೇ. ೧೮ರಷ್ಟು ಲಿಂಗವಾರು ತಮ್ಮದೇ ಮತ್ತು ಇತರೆ ಶ್ರೀಮಂತರ ಪಶುಪಾಲನೆಯಲ್ಲಿ ತೊಡಗಿಸಿಕೊಂಡಿರುವುದಾಗಿ. ಹಾಗೂ ಶೇ. ೨೩ರಷ್ಟು ಲಿಂಗವಾರುಗಳಲ್ಲಿ ಮನೆಕೆಲಸಗಳಲ್ಲಿ ಅಂದರೆ, ದನಗಳ ಕೊಟ್ಟಿಗೆ ಸ್ವಚ್ಛಗೊಳಿಸುವುದು, ದನಗಳಿಗೆ ಮೇವು ತರುವುದು, ದನಗಳ ಪಾಲನೆ, ಬೆಳೆದ ಕಡಿಕಾಳುಗಳ ಸ್ವಚ್ಛತೆ ಮತ್ತು ಸಂರಕ್ಷಣೆ ಈ ರೀತಿಯಾಗಿ ಮೇಲಿನ ಎಲ್ಲ ವೃತ್ತಿಗಳಲ್ಲಿ ಲಿಂಗತಾರತಮ್ಯ ವಿಲ್ಲದೇ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಹಾಗೂ ಬದುಕಿಗೆ ಒಟ್ಟಾರೆಯಾಗಿ ಶ್ರಮಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

೫.೯ ಎರಡನೇ ತಲೆಮಾರು ಅವಲಂಬಿಸಿದ ವೃತ್ತಿಗಳು

ಎರಡನೇ ತಲೆಮಾರಿಗೆ ಬರುವಷ್ಟರಲ್ಲಿ ಹಳೆ ತಲೆಮಾರಿನ ವೃತ್ತಿಗಳೊಂದಿಗೆ ಹೊಸ ವೃತ್ತಿಗಳೂ ಸೇರ್ಪಡೆಗೊಂಡಿರುವುದನ್ನು ಕಾಣುತ್ತೇವೆ. ಎರಡನೇ ತಲೆಮಾರಿನವರಲ್ಲಿ ಸಾಮಾನ್ಯವಾಗಿ ಕಂಡು ಬರುವ ವೃತ್ತಿಗಳು ಈ ಕೆಳಗಿನಂತಿವೆ:

ಪಶುಪಾಲನೆ, ತಳವಾರಿಕೆ, ಕೃಷಿಕೂಲಿ, ಹಮಾಲಿ, ಕೃಷಿ, ತರಕಾರಿ ವ್ಯಾಪಾರ, ಇತರೆ ಎರಡನೇ ತಲೆಮಾರಿನವರು ಪಶುಪಾಲನೆಯನ್ನು ಕೇವಲ ದನಗಳಿಗೆ ಸೀಮಿತಗೊಳಿಸಿಕೊಳ್ಳದೆ ಅದನ್ನು ಸಣ್ಣ ಪ್ರಮಾಣದ ಕುರಿ ಸಾಕಾಣಿಕೆ ಹಾಗೂ ಆಡುಗಳ ಸಾಕಾಣಿಕೆಗೆ ವಿಸ್ತರಿಸಿಕೊಂಡಿರುವುದಾಗಿ ತಿಳಿಸಿದರು. ದನಗಳ ದೊಡ್ಡ ಮಂದೆಯನ್ನು ಸಾಕುತ್ತಿದ್ದ ಹಳೆ ತಲೆಮಾರಿನವರಿಗಿಂತ ಭಿನ್ನವಾಗಿ ಇವರು ಪಶುಪಾಲನೆ ಮಾಡುತ್ತಿದ್ದಾರೆ. ಇನ್ನು ಕುರಿ, ಮೇಕೆಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು. ಹೀಗಾಗಿ ಅವುಗಳನ್ನು ತಮ್ಮ ಆರ್ಥಿಕತೆಯ ರಕ್ಷಣೆಯ ದೃಷ್ಟಿಯಿಂದ ಸಾಕುತ್ತಾರೆ.

ಹಾಗೆಯೇ ಎರಡನೇ ತಲೆಮಾರಿನವರು ತಳವಾರಿಕೆಗೆ ಅಷ್ಟು ಪ್ರಾಧಾನ್ಯತೆ ಕೊಡದಿದ್ದರೂ ಸಹ ವಂಶ ಪಾರಂಪರ್ಯದಿಂದ ಬಂದ ಕಸುಬು ಎನ್ನುವ ಕಾರಣಕ್ಕೆ ಆ ಹುದ್ದೆಯಲ್ಲಿ ಮುಂದುವರಿದಿದ್ದಾರೆ. ಹಿಂದೆ ತಮ್ಮ ತಂದೆ ತಾತ ತಳವಾರಿಕೆ ಮಾಡುವಾಗ ಅವರಿಗೆ ಸಿಗುತ್ತಿದ್ದ ಗೌರವ ಬೇರೆಯಾಗಿತ್ತು. ಇಡೀ ಊರಿನ ಜನ ಅವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ಇಡೀ ಕುಟುಂಬಕ್ಕೆ ವರ್ಷಕ್ಕಾಗುವಷ್ಟು ಕಾಳು ಕಡಿಯನ್ನು ರೈತರೇ ತಮ್ಮ ಹಿರಿಯರಿಗೆ ಪೂರೈಸುತ್ತಿದ್ದರು. ಆದರೆ ತಮ್ಮ ಕಾಲಕ್ಕೆ ಇರುವ ಸ್ಥಿತಿಯೇ ಬೇರೆಯಾಗಿದೆ. ಬಹುತೇಕ ರೈತರು ಆಹಾರ ದಾನ್ಯಗಳನ್ನು ಬೆಳೆಯುವುದನ್ನು ಕೈಬಿಟ್ಟಿದ್ದಾರೆ. ಹಣ ತರುವ ವಾಣಿಜ್ಯ ಬೆಳೆಗಳತ್ತ ಮುಖ ಮಾಡಿದ್ದಾರೆ. ಅಂತಹ ರೈತರು ತಮಗೆ ಕಾಳು ಕಡಿ ನೀಡುವುದು ದೂರದ ಮಾತು. ಹಾಗೇ ತಾವು ತಳವಾರರು ಎನ್ನುವ ಕಾರಣಕ್ಕೆ ತುಂಬಾ ಕೀಳಾಗಿ ಕಾಣಲಾಗುತ್ತದೆ. ಅದರಿಂದ ಆಗುವ ಅವಮಾನ ಸಹಿಸಲು ಕಷ್ಟ. ಹೀಗಾಗಿಯೇ ತಮ್ಮ ಮಕ್ಕಳು ತಳವಾರಿಕೆ ವೃತ್ತಿಯಲ್ಲಿ ಮುಂದುವರೆಯಲು ಒಪ್ಪುತ್ತಿಲ್ಲ ಎಂದು ತಿಳಿಸಿದರು.

ಕೃಷಿಯೊಂದಿಗೆ ಕೃಷಿ ಕೂಲಿ, ಹಮಾಲಿ ವೃತ್ತಿ, ಚಿಕ್ಕ ಪುಟ್ಟ ವ್ಯಾಪಾರ, ಗೃಹಕೃತ್ಯ ಮುಂತಾದವುಗಳಲ್ಲಿ ಹೆಚ್ಚು ಜನರು ತೊಡಗಿರುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಈ ಕೆಳಗೆ ತಾಲೂಕುವಾರು ಮತ್ತು ಗ್ರಾಮವಾರು ಎರಡನೇ ತಲೆಮಾರಿನವರು ಅವಲಂಬಿಸಿದ ವೃತ್ತಿಗಳು ಯಾವುವು ಎಂಬುದನ್ನು ತಾಲೂಕು, ಗ್ರಾಮವಾರುಗಳಲ್ಲಿ ಕೋಷ್ಟಕ ೫.೧೦.೧ರಿಂದ ಕಾಣಬರುತ್ತದೆ.

ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಎರಡನೇ ತಲೆಮಾರಿನ ಗ್ರಾಮಗಳ ವಿವಿಧ ಕಸುಬುಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಬೇಟೆ, ಪಶುಪಾಲನೆ, ತಳವಾರಿಕೆ, ಕೃಷಿ, ಕೃಷಿಕೂಲಿ, ದಿನಗೂಲಿ, ಮನೆಕೆಲಸ, ವ್ಯಾಪಾರ, ಸರ್ಕಾರಿ, ಖಾಸಗಿ ಮತ್ತು ಇತರೆ ವೃತ್ತಿಗಳು. ಒಟ್ಟಾರೆ ದಾವಣಗೆರೆ ತಾಲೂಕಿನ ಬೇಡ ಸಮುದಾಯದ ೧೮೦ ಕುಟುಂಬಗಳ ಲಿಂಗವಾರನ್ನು ಅವಲೋಕಿಸಲಾಗಿ ಒಟ್ಟಾರೆ ದಾವಣಗೆರೆ ಜಿಲ್ಲಾವಾರು ಶೇ. ೫೦.೪೮ರಷ್ಟು ಪುರುಷರು ಶೇ. ೪೯.೫೨ರಷ್ಟು ಮಹಿಳೆಯರು ವಿವಿಧ ಬಗೆಬಗೆಯ ವೃತ್ತಿಗಳಲ್ಲಿ ತೊಡಗಿದ್ದಾರೆ.

ಮೊದಲ ತಲೆಮಾರಿನ ತಾಲೂಕುವಾರು ಬೇಡರ ಕೌಟುಂಬಿಕ ವೃತ್ತಿಗಳನ್ನು ಲಿಂಗವಾರು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬವು ಹೊಂದಿರುವ ಕಸುಬುಗಳ ನೋಡಲಾಗಿ ಪಶುಪಾಲನೆಯಲ್ಲಿ ಪುರುಷರು ಶೇ. ೧೦.೪೪ರಷ್ಟು, ಮಹಿಳೆಯರು ಶೇ. ೧.೭೫ರಷ್ಟು, ಕೃಷಿಯಲ್ಲಿ ಪುರುಷರು ಶೇ. ೪೩.೨೮ರಷ್ಟಾಗಿದ್ದು, ಮಹಿಳೆಯರು ಶೇ. ೭.೦೧ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೨೨.೩೮ರಷ್ಟು, ಮಹಿಳೆಯರು ಶೇ. ೩.೫೯ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೪.೪೭ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೮೭.೭೧ರಷ್ಟಿದ್ದಾರೆ. ಪುರುಷರು ಶೇ.

೧೪.೯೨ ವ್ಯಾಪಾರದಲ್ಲಿ ತೊಡಗಿರುವುದು, ಶೇ. ೧.೪೯ರಷ್ಟು ಪುರುಷರು ಸರ್ಕಾರಿ ನೌಕರಸ್ಥರಾಗಿರುವುದು, ಶೇ. ೧.೪೯ರಷ್ಟು ಪುರುಷರು ಖಾಸಗಿ ನೌಕರಸ್ಥರಲ್ಲಿ ಕಂಡುಬಂದರೆ, ಶೇ. ೧.೪೯ರಷ್ಟು ಪುರುಷರು ಇತರೆ ಕೆಲಸಗಳಲ್ಲಿದ್ದಾರೆ(ಅಂಕಿಅಂಶಗಳು: ಪು.೨೪೭ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬವು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೪ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೧೪.೬೬ರಷ್ಟು, ಮಹಿಳೆಯರು ಶೇ. ೫.೭೧ರಷ್ಟು, ತಳವಾರಿಕೆಯಲ್ಲಿ ಶೇ. ೧.೩೩ರಷ್ಟು ಪುರುಷರು, ಕೃಷಿಯಲ್ಲಿ ಪುರುಷರು ಶೇ. ೪೫.೩೩ರಷ್ಟಾಗಿದ್ದು, ಮಹಿಳೆಯರು ಶೇ. ೮.೫೭ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೧೦.೬೬ರಷ್ಟು, ಮಹಿಳೆಯರು ಶೇ. ೮.೫೭ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೪ರಷ್ಟಾಗಿದ್ದು, ಮಹಿಳೆಯರು ಶೇ. ೧.೪೨ರಷ್ಟಿದ್ದಾರೆ. ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೭೦ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೧೨ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೫.೩೩ರಷ್ಟು, ಮಹಿಳೆಯರು ಶೇ. ೫.೭೧ರಷ್ಟಿದ್ದಾರೆ. ಶೇ. ೨.೬೬ರಷ್ಟು ಪುರುಷರು ಖಾಸಗಿ ನೌಕರಿಗಳಲ್ಲಿದ್ದಾರೆ(ಅಂಕಿಅಂಶಗಳು: ಪು.೨೪೭ ನೋಡಿ).


ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಪಶುಪಾಲನೆಯಲ್ಲಿ ಪುರುಷರು ಶೇ. ೧೬.೬೬ರಷ್ಟು, ಮಹಿಳೆಯರು ಶೇ. ೯.೨೩ರಷ್ಟು, ಕೃಷಿಯಲ್ಲಿ ಪುರುಷರು ಶೇ. ೪೫.೮೩ರಷ್ಟಾಗಿದ್ದು, ಮಹಿಳೆಯರು ಶೇ. ೧೦.೭೬ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೧೩.೮೮ರಷ್ಟು, ಮಹಿಳೆಯರು ಶೇ. ೧೦.೭೬ರಷ್ಟು ಕಂಡುಬರುತ್ತಾರೆ. ದಿನಗೂಲಿಯಲ್ಲಿ ಪುರುಷರು ಶೇ. ೨.೭೭ರಷ್ಟಾಗಿದ್ದು, ಮಹಿಳೆಯರು ಶೇ. ೧.೫೩ರಷ್ಟು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೫.೫೫ರಷ್ಟಾಗಿದ್ದು, ಮಹಿಳೆಯರು ಶೇ. ೬೧.೫೩ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೨.೭೭ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೬.೯೪ರಷ್ಟು, ಮಹಿಳೆಯರು ಶೇ. ೪.೬೧ರಷ್ಟಿದ್ದಾರೆ. ಖಾಸಗಿ ನೌಕರಸ್ಥರಲ್ಲಿ ಪುರುಷರು ಶೇ. ೪.೧೬ರಷ್ಟಿದ್ದಾರೆ. ಇತರೆ ಕೆಲಸಗಳಲ್ಲಿ ಶೇ. ೧.೩೮ರಷ್ಟು ಪುರುಷರು, ಮಹಿಳೆಯರು ಶೇ. ೧.೫೩ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೪೭ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೧.೩೩ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೮ರಷ್ಟು, ಮಹಿಳೆಯರು ಶೇ. ೩.೫೨ರಷ್ಟು, ಕೃಷಿಯಲ್ಲಿ ಪುರುಷರು ಶೇ. ೪೫.೩೩ರಷ್ಟಾಗಿದ್ದು, ಮಹಿಳೆಯರು ಶೇ. ೨೨.೩೫ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೧೩.೩೩ರಷ್ಟು, ಮಹಿಳೆಯರು ಶೇ. ೧೧.೭೬ರಷ್ಟಿದ್ದಾರೆ. ದಿನಗೂಲಿಯಲ್ಲಿ

ಕೋಷ್ಟಕ ೫.೯.೧ ದಾವಣಗೆರೆ ತಾಲೂಕಿನಲ್ಲಿ ಎರಡನೇ ತಲೆಮಾರಿನವರು ಅವಲಂಬಿಸಿದ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																				
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಚನ್ನಗಿರಿ		೭	೧			೨೯	೪	೧೫	೨	೩			೫೦	೧೦		೧		೧		೧	
೨	ದಾವಣಗೆರೆ	೩	೧೧	೪	೧		೩೪	೬	೮	೬	೩	೧		೪೯	೯		೪	೪	೨			
೩	ಹರಪನಹಳ್ಳಿ		೧೨	೬			೩೩	೭	೧೦	೭	೨	೧	೪	೪೦	೨		೫	೩	೩		೧	೧
೪	ಹರಿಹರ	೧	೬	೩			೩೪	೧೯	೧೧	೧೦	೬		೭	೫೦	೪		೭	೩				
೫	ಹೊನ್ನಾಳಿ	೨	೧೧	೪			೩೩	೧೯	೭	೬	೪	೪	೧೧	೪೬	೪		೧೩	೫	೨		೦	೦
೬	ಜಗಳೂರು	೩	೧೭	೧೩			೨೯	೧೪	೧೨	೧೩	೨		೮	೫೩	೯		೯	೬	೩		೧	೧
ಒಟ್ಟು		೯	೬೪	೩೧	೧		೧೯೨	೬೯	೬೩	೪೪	೨೦	೬	೩೦	೨೮೮	೩೮		೩೯	೨೧	೧೧		೩	೨

ವೃತ್ತಚಿತ್ರ ೫.೯.೧ ಎರಡನೇ ತಲೆಮಾರಿನವರ ವಿವಿಧ ಬಗೆಯ ಕಸುಬುಗಳ ಪ್ರಮಾಣ



ಪುರುಷರು ಶೇ. ೮ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೯.೩೩ರಷ್ಟಾಗಿದ್ದು, ಮಹಿಳೆಯರು ಶೇ. ೫೮.೮೨ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೫.೩೩ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೯.೩೩ರಷ್ಟು, ಮಹಿಳೆಯರು ಶೇ. ೩.೫೨ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೪೮ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೨.೯ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೧೨.೬೪ರಷ್ಟು, ಮಹಿಳೆಯರು ಶೇ. ೪.೭೬ರಷ್ಟು, ಕೃಷಿಯಲ್ಲಿ ಪುರುಷರು ಶೇ. ೩೭.೯೩ರಷ್ಟಾಗಿದ್ದು, ಮಹಿಳೆಯರು ಶೇ. ೨೨.೬೧ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೮.೦೪ರಷ್ಟು, ಮಹಿಳೆಯರು ಶೇ. ೭.೧೪ರಷ್ಟು ಕಂಡುಬರುತ್ತಾರೆ. ದಿನಗೂಲಿಯಲ್ಲಿ ಪುರುಷರು ಶೇ. ೪.೫೯ರಷ್ಟಾಗಿದ್ದು, ಮಹಿಳೆಯರು ಶೇ. ೪.೭೬ರಷ್ಟು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೧೨.೬೪ರಷ್ಟಾಗಿದ್ದು, ಮಹಿಳೆಯರು ಶೇ. ೫೪.೭೬ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೪.೫೯ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೧೪.೯೪ರಷ್ಟು, ಮಹಿಳೆಯರು ಶೇ. ೫.೯೫ರಷ್ಟು ಇರುವುದು. ಖಾಸಗಿ ನೌಕರಸ್ಥರಲ್ಲಿ ಪುರುಷರು ಶೇ. ೨.೯ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೪೮ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಶೇ. ೩.೨೨ರಷ್ಟು ಪುರುಷರು ಬೇಟೆಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಪಶುಪಾಲನೆಯಲ್ಲಿ ಪುರುಷರು ಶೇ. ೧೮.೨೭ರಷ್ಟು,

ಮಹಿಳೆಯರು ಶೇ. ೧೩ರಷ್ಟು, ಕೃಷಿಯಲ್ಲಿ ಪುರುಷರು ಶೇ. ೩೧.೧೮ರಷ್ಟಾಗಿದ್ದು, ಮಹಿಳೆಯರು ಶೇ. ೧೪ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೧೭.೯೦ರಷ್ಟು, ಮಹಿಳೆಯರು ಶೇ. ೧೩ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೨.೧೫ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೮.೬೦ರಷ್ಟಾಗಿದ್ದು, ಮಹಿಳೆಯರು ಶೇ. ೫೩ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೯.೬೭ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೯.೬೭ರಷ್ಟು, ಮಹಿಳೆಯರು ಶೇ. ೬ರಷ್ಟು ಇರುವುದು. ಖಾಸಗಿ ನೌಕರಸ್ಥರಲ್ಲಿ ಶೇ. ೩.೨೨ರಷ್ಟು ಪುರುಷರು ಕಂಡುಬಂದರೆ, ಇತರೆ ಕಸುಬುಗಳಲ್ಲಿ ತಲಾ ಶೇ. ೧ರಂತೆ ಗಂಡು–ಹೆಣ್ಣು ಇರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೪೮ ನೋಡಿ).

ಎರಡನೇ ತಲೆಮಾರಿನ ಬೇಡರ ಕುಟುಂಬಗಳಲ್ಲಿ ಲಿಂಗವಾರು ಕಸುಬುಗಳಲ್ಲಿ ತೊಡಗಿಸಿಕೊಂಡು ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಅವರು ವಹಿಸಿಕೊಳ್ಳುವ ಬಗೆಬಗೆಯ ವೃತ್ತಿಗಳನ್ನು ವೃತ್ತಚಿತ್ರ ೫.೯.೧ರಲ್ಲಿ ಗಮನಿಸಿದಾಗ ಒಟ್ಟಾರೆ ಜಿಲ್ಲವಾರು ನೋಡಿದಾಗ ತಮ್ಮದೇ ಆದ ಭೂಹಿಡುವಳಿಯಲ್ಲಿ ಕೃಷಿಯನ್ನಾಧರಿಸಿ ಜೀವನಸಾಗಿಸುತ್ತಿರುವ ಶೇ. ೨೭ರಷ್ಟು ಲಿಂಗವಾರು ಕಂಡುಬಂದರೆ, ಶೇ. ೧೫ರಷ್ಟು ಲಿಂಗವಾರು ಬೇರೆಯವರ ಒಡೆತನ ಹೊಂದಿರುವ ಭೂಮಿಗಳಲ್ಲಿ ಕೃಷಿಕೂಲಿಗಳಾಗಿ ದುಡಿದು ಬದುಕು ಕಟ್ಟಿಕೊಂಡಿದ್ದಾರೆ. ಶೇ. ೧೦ರಷ್ಟು ಲಿಂಗವಾರು ತಮ್ಮದೇ ಮತ್ತು ಇತರೆ ಶ್ರೀಮಂತರ ಪಶುಪಾಲನೆಯಲ್ಲಿ ತೊಡಗಿಸಿ ಕೊಂಡಿರುವುದಾಗಿ. ಹಾಗೂ ಶೇ. ೩೩ರಷ್ಟು ಲಿಂಗವಾರುಗಳಲ್ಲಿ ಮನೆಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಸರ್ಕಾರಿ ನೌಕರಸ್ಥರಾಗಿ ಶೇ. ೬ರಷ್ಟು, ದಿನಗೂಲಿ ಮತ್ತು ವ್ಯಾಪಾರಗಳಲ್ಲಿ ಶೇ. ೩ರಷ್ಟಿದ್ದಾರೆ. ಖಾಸಗಿ ಹಾಗೂ ಇತರೆ ವೃತ್ತಿಗಳಲ್ಲಿ ಶೇ. ೧ರಂತೆ ಇದ್ದಾರೆ. ಈ ರೀತಿಯಾಗಿ ಇಲ್ಲಿಯೂ ಸಹ ಮೊದಲನೇ ತಲೆಮಾರಿನಂತೆ ಎಲ್ಲ ವೃತ್ತಿಗಳಲ್ಲಿ ಲಿಂಗತಾರತಮ್ಯವಿಲ್ಲದೇ ಕೆಲಸಗಳಲ್ಲಿ ಕೈಜೋಡಿಸಿಕೊಂಡಿರುವುದು ಹಾಗೂ ಕಾಯಕರ್ಹರ ಸಂಖ್ಯೆಗಿಂತ ಕಾಯಕಸ್ಥರ ಸಂಖ್ಯೆ ಕಡಿಮೆಯಾಗಿ ಹಲವು ಕುಟುಂಬಗಳಲ್ಲಿ ನಿರುದ್ಯೋಗದ ಸಮಸ್ಯೆ ಇದೆ.

೫.೧೦ ಮೂರನೆಯ ತಲೆಮಾರಿನವರ ಅವಲಂಬಿತ ವೃತ್ತಿಗಳು

ಮೂರನೇ ತಲೆಮಾರಿನವರಲ್ಲಾಗಲೇ ಹಲವಾರು ಬದಲಾವಣೆಗಳಾಗಿವೆ. ಇವರಲ್ಲಿ ಉಂಟಾದ ಆರ್ಥಿಕ ಪಲ್ಲಟಗಳಿಗೆ ಜಾಗತೀಕರಣದ ಪ್ರಭಾವಕ್ಕಿಂತ ಆ ಸಮುದಾಯ ಪಡೆದ ಮೀಸಲಾತಿ ಸೌಲಭ್ಯ ಅತೀ ಮುಖ್ಯ ಕಾರಣವೆಂದು ತಿಳಿದುಬರುತ್ತದೆ. ಇಂದು ಕರ್ನಾಟಕದಾದ್ಯಂತ ಬೇಡ ಬುಡಕಟ್ಟಿನ ದೊಡ್ಡ ದೊಡ್ಡ ಅಧಿಕಾರಿಗಳನ್ನು ಕಾಣಬಹುದು. ರಾಜ್ಯದ ಆಯಕಟ್ಟಿನ ಮತ್ತು ಮಹತ್ವದ ಸ್ಥಾನಗಳಲ್ಲಿದ್ದು ಅಧಿಕಾರವನ್ನು ಚಲಾಯಿಸಲು ಮೀಸಲಾತಿಯ ಬಳಕೆಯೇ ಕಾರಣವೆಂದರೆ ತಪ್ಪಾಗಲಾರದು. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರದೇಶಗಳ ಬೇಡಬುಡಕಟ್ಟಿನ ಮೂರನೇ ತಲೆಮಾರಿನವರಲ್ಲಿ ಕಂಡುಬರುವ ವೃತ್ತಿಗಳು ಈ ಮುಂದಿನಂತಿವೆ:


ಕೋಷ್ಟಕ ೫.೧೦.೧ ದಾವಣಗೆರೆ ತಾಲೂಕಿನಲ್ಲಿ ಮೂರನೇ ತಲೆಮಾರಿನವರು ಅವಲಂಬಿಸಿದ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																				
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಚನ್ನಗಿರಿ						೭				೨			೭	೨		೨೩	೬	೪	೧		
೨	ದಾವಣಗೆರೆ						೩				೨	೧	೧	೨೦	೪		೧೮	೧೧	೫	೨		೧
೩	ಹರಪನಹಳ್ಳಿ						೫	೧	೨	೧	೨		೧	೨೪	೨		೧೫	೮	೩			
೪	ಹರಿಹರ						೫		೨	೧	೨		೧	೨೭	೨		೧೦	೫	೧೨	೧	೨	
೫	ಹೊನ್ನಾಳಿ		೧				೫	೧			೩		೨	೩೪	೫	೧	೧೭	೪	೪			
೬	ಜಗಳೂರು		೧				೧೧	೨	೧		೩		೪	೩೫	೪	೧	೯	೩	೮			೧
	ಒಟ್ಟು		೨				೩೬	೪	೫	೨	೧೪	೧	೯	೧೪೭	೧೯	೨	೯೨	೩೭	೩೬	೪	೨	೨

ಕೃಷಿಕ, ಕೃಷಿಕೂಲಿ, ಕೂಲಿ ಕಾರ್ಮಿಕ, ಕಾರ್ಖಾನೆ ನೌಕರ, ವ್ಯಾಪಾರಿ, ತರಕಾರಿ ವ್ಯಾಪಾರಿ, ಉಪನ್ಯಾಸಕ, ಇಂಜಿನೀಯರ್, ಪ್ರಾಥಮಿಕ ಶಾಲಾ ಉಪಾಧ್ಯಾಯ, ಪ್ರೌಢಶಾಲಾ ಉಪಾಧ್ಯಾಯ, ಆರೋಗ್ಯ ಸಹಾಯಕಿಯರು, ಅಂಗನವಾಡಿ ಕಾರ್ಯಕರ್ತರು ಮುಂತಾದ ಹುದ್ದೆಗಳಲ್ಲಿರುವವರು ಸರ್ಕಾರಿ ನೌಕರರಾದರೆ, ಕಾರ್ಖಾನೆ ನೌಕರರನ್ನು ಖಾಸಗಿ ನೌಕರರೆಂದು ಪರಿಗಣಿಸಲಾಗಿದೆ. ಅಂಗನವಾಡಿ ಕಾರ್ಯಕರ್ತರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗಿದೆ.(ನೋಡಿ: ಕೋಷ್ಟಕ–೫.೧೦.೧)

ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರನೇ ತಲೆಮಾರಿನ ಗ್ರಾಮಗಳ ವಿವಿಧ ಕಸುಬುಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಪಶುಪಾಲನೆ, ಕೃಷಿ, ಕೃಷಿಕೂಲಿ, ದಿನಗೂಲಿ, ಮನೆಕೆಲಸ, ವ್ಯಾಪಾರ, ಸರ್ಕಾರಿ, ಖಾಸಗಿ ಮತ್ತು ಇತರೆ ವೃತ್ತಿಗಳು. ಒಟ್ಟಾರೆ ದಾವಣಗೆರೆ ತಾಲೂಕಿನ ಬೇಡ ಬುಡಕಟ್ಟು ಸಮುದಾಯದ ೧೮೦ ಕುಟುಂಬಗಳ ಲಿಂಗವಾರನ್ನು ಅವಲೋಕಿಸಲಾಗಿ ದಾವಣಗೆರೆ ಜಿಲ್ಲಾವಾರು ಶೇ. ೫೧.೯೩ರಷ್ಟು ಪುರುಷರು ಶೇ. ೪೮.೦೭ರಷ್ಟು ಮಹಿಳೆಯರು ವಿವಿಧ ಬಗೆಬಗೆಯ ವೃತ್ತಿಗಳಲ್ಲಿ ತೊಡಗಿದ್ದಾರೆ.

ವೃತ್ತಚಿತ್ರ ೫.೧೦.೧ ಮೂರನೇ ತಲೆಮಾರಿನವರ ವಿವಿಧ ಬಗೆಯ ಕಸುಬುಗಳ ಪ್ರಮಾಣ



ಮೊದಲ ತಲೆಮಾರಿನ ತಾಲೂಕುವಾರು ಬೇಡರ ಕೌಟುಂಬಿಕ ವೃತ್ತಿಗಳನ್ನು ಲಿಂಗವಾರು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬವು ಹೊಂದಿರುವ ಕಸುಬುಗಳ ನೋಡಲಾಗಿ ಕೃಷಿಯಲ್ಲಿ ಪುರುಷರು ಶೇ. ೧೮.೪೭ರಷ್ಟಾಗಿದ್ದು, ದಿನಗೂಲಿಯಲ್ಲಿ ಪುರುಷರು ಶೇ. ೫.೭೬ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೫೦ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೫.೭೬



ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಶೇ. ೬೦.೫೨ರಷ್ಟು ಪುರುಷರು, ಶೇ. ೪೨.೮೫ರಷ್ಟು ಮಹಿಳೆಯರಿದ್ದಾರೆ. ಖಾಸಗಿ ನೌಕರಸ್ಥರಲ್ಲಿ ಶೇ. ೧೦.೫೨ರಷ್ಟು ಪುರುಷರು, ಶೇ. ೭.೧೪ರಷ್ಟು ಮಹಿಳೆಯರಿದ್ದಾರೆ(ಅಂಕಿಅಂಶಗಳು: ಪು.೨೪೯ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬವು ಹೊಂದಿರುವ ಕಸುಬುಗಳ ನೋಡಲಾಗಿ ಕೃಷಿಯಲ್ಲಿ ಪುರುಷರು ಶೇ. ೯.೦೯ರಷ್ಟಾಗಿದ್ದು, ದಿನಗೂಲಿಯಲ್ಲಿ ಪುರುಷರು ಶೇ. ೬.೦೬ರಷ್ಟಾಗಿದ್ದು, ಮಹಿಳೆಯರು ಶೇ. ೨.೮೫ರಷ್ಟಿದ್ದಾರೆ. ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಮಹಿಳೆಯರು ಶೇ. ೫೭.೧೪ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೧೨.೧೨ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಶೇ. ೫೪.೫೪ರಷ್ಟು ಪುರುಷರು, ಶೇ. ೩೧.೪೨ರಷ್ಟು ಮಹಿಳೆಯರಿದ್ದಾರೆ. ಖಾಸಗಿ ನೌಕರಸ್ಥರಲ್ಲಿ ಶೇ. ೧೫.೧೫ರಷ್ಟು ಪುರುಷರು, ಶೇ. ೫.೭೧ರಷ್ಟು ಮಹಿಳೆಯರಿದ್ದಾರೆ. ಇತರೆ ಕೆಲಸಗಳಲ್ಲಿ ಮಹಿಳೆಯರು ಶೇ. ೨.೮೫ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೪೯ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಕೃಷಿಯಲ್ಲಿ ಪುರುಷರು ಶೇ. ೧೬.೬೬ರಷ್ಟಾಗಿದ್ದು, ಮಹಿಳೆಯರು ಶೇ. ೨.೯೪ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೬.೬೬ರಷ್ಟು, ಮಹಿಳೆಯರು ಶೇ. ೨.೯೪ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೬.೬೬ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೩.೩೩ರಷ್ಟಾಗಿದ್ದು, ಮಹಿಳೆಯರು ಶೇ. ೭೦.೫೮ ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೬.೬೬ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೫೦ರಷ್ಟು, ಮಹಿಳೆಯರು ಶೇ. ೨೩.೫೨ರಷ್ಟು ಇರುವುದು. ಖಾಸಗಿ ನೌಕರಸ್ಥರಲ್ಲಿ ಪುರುಷರು ಶೇ. ೧೦ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೪೯ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಕೃಷಿಯಲ್ಲಿ ಪುರುಷರು ಶೇ. ೧೩.೮೮ರಷ್ಟಾಗಿದ್ದು, ಕೃಷಿಕೂಲಿಯಲ್ಲಿ ಪುರುಷರು ಶೇ. ೫.೫೫ರಷ್ಟು, ಮಹಿಳೆಯರು ಶೇ. ೨.೯೪ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೫.೫೫ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೨.೭೭ರಷ್ಟಾಗಿದ್ದು, ಮಹಿಳೆಯರು ಶೇ. ೭೯.೪೧ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೫.೫೫ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೨೭.೭೭ರಷ್ಟು, ಮಹಿಳೆಯರು ಶೇ. ೧೪.೭೦ರಷ್ಟಿದ್ದಾರೆ. ಖಾಸಗಿ ನೌಕರಸ್ಥರಲ್ಲಿ ಶೇ. ೩೩.೩೩ರಷ್ಟು ಪುರುಷರು, ಶೇ. ೨.೯೪ರಷ್ಟು ಮಹಿಳೆಯರಿದ್ದಾರೆ. ಇತರೆ ಕೆಲಸಗಳಲ್ಲಿ ಪುರುಷರು ಶೇ. ೫.೫೫ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೫೦ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಪಶುಪಾಲನೆಯಲ್ಲಿ ಪುರುಷರು ಶೇ. ೨.೭೦ರಷ್ಟು, ಕೃಷಿಯಲ್ಲಿ ಪುರುಷರು ಶೇ. ೧೩.೫೧ರಷ್ಟಾಗಿದ್ದು, ಮಹಿಳೆಯರು ಶೇ. ೨.೫ರಷ್ಟು, ದಿನಗೂಲಿಯಲ್ಲಿ ಪುರುಷರು ಶೇ. ೮.೧೦ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೫.೪೦ರಷ್ಟಾಗಿದ್ದು, ಮಹಿಳೆಯರು ಶೇ. ೮೫ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೧೩.೫೧ರಷ್ಟು, ಮಹಿಳೆಯರು ಶೇ. ೨.೫ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೪೫.೯೪ರಷ್ಟು, ಮಹಿಳೆಯರು ಶೇ. ೧೦ರಷ್ಟಿದ್ದಾರೆ. ಖಾಸಗಿ ನೌಕರಸ್ಥರಲ್ಲಿ ಪುರುಷರು ಶೇ. ೧೦.೮೧ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೫೦ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕುಟುಂಬಗಳು ಹೊಂದಿರುವ ಕಸುಬುಗಳ ನೋಡಲಾಗಿ ಪಶುಪಾಲನೆಯಲ್ಲಿ ಪುರುಷರು ಶೇ. ೨.೪೩ರಷ್ಟು, ಕೃಷಿಯಲ್ಲಿ ಪುರುಷರು ಶೇ. ೨೬.೮೨ರಷ್ಟಾಗಿದ್ದು, ಮಹಿಳೆಯರು ಶೇ. ೪.೭೬ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೨.೪೩ರಷ್ಟಿದ್ದಾರೆ. ದಿನಗೂಲಿಯಲ್ಲಿ ಪುರುಷರು ಶೇ. ೭.೩೧ರಷ್ಟಾಗಿದ್ದು, ಮನೆಕೆಲಸದ ಜವಾಬ್ದಾರಿಯನ್ನು ಹೊಂದಿರುವ ಪುರುಷರು ಶೇ. ೯.೭೫ ರಷ್ಟಾಗಿದ್ದು, ಮಹಿಳೆಯರು ಶೇ. ೮೩.೩೩ರಷ್ಟಿದ್ದಾರೆ. ವ್ಯಾಪಾರದಲ್ಲಿ ಪುರುಷರು ಶೇ. ೯.೭೫ರಷ್ಟು, ಮಹಿಳೆಯರು ಶೇ. ೨.೩೮ರಷ್ಟು ತೊಡಗಿರುವುದು, ಸರ್ಕಾರಿ ನೌಕರಸ್ಥರಾಗಿ ಪುರುಷರು ಶೇ. ೨೧.೯೫ರಷ್ಟು, ಮಹಿಳೆಯರು ಶೇ. ೭.೧೪ರಷ್ಟಿದ್ದಾರೆ. ಮತ್ತು ಖಾಸಗಿ ನೌಕರಸ್ಥರಲ್ಲಿ ಪುರುಷರು ಶೇ. ೧೯.೫೧ರಷ್ಟಿದ್ದಾರೆ. ಅಲ್ಲದೆ ಇತರೆ ಕಸುಬುಗಳಲ್ಲಿ ಶೇ. ೨.೩೮ರಷ್ಟು ಮಹಿಳೆಯರಿದ್ದಾರೆ(ಅಂಕಿಅಂಶಗಳು: ಪು.೨೫೦ ನೋಡಿ).

ಮೊದಲ ಮತ್ತು ಎರಡನೇ ತಲೆಮಾರಿಗಿಂತ ಮೂರನೇ ತಲೆಮಾರಿನವರಲ್ಲಿ ಆರ್ಥಿಕ ಭದ್ರತೆ ಹೆಚ್ಚಾಗಿದೆ. ಮೂರನೇ ತಲೆಮಾರಿನವರು ಬಹುತೇಕ ಮೀಸಲಾತಿ ಸೌಲಭ್ಯದಿಂದಲೇ ಈ ರೀತಿಯ ಆರ್ಥಿಕ ಪ್ರಗತಿ ಕಾಣಲು ಸಾಧ್ಯವಾಗಿದೆ. ಮೂರನೇ ತಲೆಮಾರಿನವರಲ್ಲಿ ಕೂಲಿಯನ್ನರಸಿ ವಲಸೆ ಹೋಗುವುದು ಕಂಡುಬರುವುದಾದರೂ ಅದರ ಪ್ರಮಾಣ ತುಂಬಾ ಕಡಿಮೆಯಾಗಿದೆ. ಶಿಕ್ಷಣ ಪಡೆದು ಇತರೆ ಹುದ್ದೆಗಳಲ್ಲಿ ಮುಂದುವರೆಯುವಂತೆ ಆಗಿರುವುದರಿಂದಲೇ ಪ್ರದೇಶದಿಂದ ಪ್ರದೇಶಕ್ಕೆ ಕೂಲಿಯರಸಿ ವಲಸೆ ಹೋಗುತ್ತಿಲ್ಲ. ಆದರೆ ಮೂರನೇ ತಲೆಮಾರಿನ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ದುಡಿಯುವವರು ತಮ್ಮ ಮೂಲ ಗ್ರಾಮಗಳನ್ನು ತ್ಯಜಿಸಿ ಹತ್ತಿರದ ಪಟ್ಟಣಗಳಿಗೆ ಇಲ್ಲವೇ ಹುದ್ದೆಯನ್ನು ನಿರ್ವಹಿಸಬೇಕಾದ ಸ್ಥಳಗಳಿಗೆ ವಲಸೆ ಹೋಗಿದ್ದಾರೆ. ಆದರೆ ಇವರಾರೂ ಪೂರ್ಣವಾಗಿ ತಮ್ಮ ಗ್ರಾಮವನ್ನು ತ್ಯಜಿಸಿದ್ದಾರೆಂದೇನೂ ಅಲ್ಲ. ರಜೆ ಕಾಲದಲ್ಲಿ ಬಹುತೇಕ ಅವರೆಲ್ಲಾ ತಮ್ಮ ಮೂಲ ಗ್ರಾಮಗಳಲ್ಲಿಯೇ ಕಾಲ ಕಳೆಯುತ್ತಾರೆ. ತಮ್ಮ ಗ್ರಾಮವನ್ನು ತ್ಯಜಿಸಲು ಹುದ್ದೆ ಒಂದು ಕಾರಣವಾದರೆ ಮತ್ತೊಂದು ಅವರ ಮಕ್ಕಳ ವಿದ್ಯಾಭ್ಯಾಸವೂ ಕಾರಣವೆಂದು ತಿಳಿಸುತ್ತಾರೆ.


ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರು ತಲೆಮಾರಿಗಳ ೧೮ ಗ್ರಾಮಗಳಲ್ಲಿ ಕಂಡುಬರುವ ಕೆಲವು ಬಹು ಬಗೆಯ ವೃತ್ತಿಗಳನ್ನು ಅವಲೋಕಿಸಿದಾಗ ಬೇಟೆ, ಪಶುಪಾಲನೆ ಮತ್ತು ತಳವಾರಿಕೆಯನ್ನು ಮಾಡುತ್ತಿರುವವರು ಮೂರನೇ ತಲೆಮಾರಿಗೆ ಕಂಡುಬರುವುದಿಲ್ಲ. ಮೊದಲನೇ ಮತ್ತು ಎರಡನೇ ತಲೆಮಾರಿನಿಂದ ಹಂಚಿಕೆಯಾಗಿ ಬಂದಿರುವ ಭೂಮಿಗಳನ್ನೇ ಹೊಂದಿರುವ ಕೆಲವು ಕುಟುಂಬಗಳು ಕೃಷಿಯನ್ನು ಮುಂದುವರೆಸಿಕೊಂಡು ಬರುತ್ತಿರುವುದು, ಕೃಷಿಕೂಲಿಗಳಾಗಿ ದುಡಿಮೆ ಮಾಡುವವರ ಸಂಖ್ಯೆ ಅತಿವಿರಳವಾಗಿದ್ದು, ಇಂದು ಗ್ರಾಮಗಳು ನಗರಕ್ಕೆ ಹತ್ತಿರವಾಗುತ್ತಿರುವುದರಿಂದ ನಗರಗಳಲ್ಲಿ ದಿನಗೂಲಿಗಳಾಗಿ ಹಮಾಲಿ, ಇಟ್ಟಿಗೆ ಭಟ್ಟಿಗಳಲ್ಲಿ ಮಣ್ಣು ಹೊರುವ, ಇಟ್ಟಿಗೆ ಜೋಡಿಸುವ ಮುಂತಾದ ಕೃಷಿಯೇತರ ಕೂಲಿ ಕೆಲಸಗಳನ್ನು ಅವಲಂಬಿಸಿದ್ದಾರೆ.

ಸರ್ಕಾರಿ ಸಂಸ್ಥೆಗಳಲ್ಲಿ ಇಂಜಿನೀಯರ್, ಉಪನ್ಯಾಸಕರಾಗಿ, ಪೊಲೀಸ್, ಸಬ್‌ಇನ್ಸಪೆಕ್ಟರ್, ಡಾಕ್ಟರ್, ಕಿರಿಯ ಹಾಗೂ ಹಿರಿಯ ಸಹಾಯಕರು/ಸಹಾಯಕಿಯರಾಗಿ, ರೈಲ್ವೆ ಇಲಾಖೆ ನೌಕರರು, ಫಾರೆಸ್ಟರ್, ಸ್ಟಾಫ್ ನರ್ಸ್, ಶಾಲಾ ಶಿಕ್ಷಕರು/ಶಿಕ್ಷಕಿಯರಾಗಿ, ಅಂಗನವಾಡಿ ಕಾರ್ಯಕರ್ತೆಯರಾಗಿ, ಗ್ರಾಮ ಪಂಚಾಯಿತಿ ನೌಕರ, ಗ್ರಾಮ ಸೇವಕರಾಗಿ, ಶಾಲಾ/ಕಾಲೇಜಿನಲ್ಲಿ ಅಟೆಂಡರ್‌ಗಳಾಗಿ, ಕೋರ್ಟಿನಲ್ಲಿ ಅಮೀನರಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ಪ್ಲಾಸ್ಟಿಕ್ ಕಾರ್ಖಾನೆ, ಸಕ್ಕರೆ ಕಾರ್ಖಾನೆ ಹೀಗೆ ಖಾಸಗಿ ಸಂಸ್ಥೆಗಳಲ್ಲಿ ಹಲವು ರೀತಿಯ ವೃತ್ತಿಗಳಲ್ಲಿ ತೊಡಗಿರುವುದು ಕಂಡುಬರುವುದು.

ಕೆಲವು ಕುಟುಂಬಗಳು ಕಿರಾಣಿ ಅಂಗಡಿ, ತಳ್ಳುಗಾಡಿಯಲಿ ತರಕಾರಿ ಮಾರಾಟ, ಹೂವಿನ ವ್ಯಾಪಾರ, ಪಾನ್ ಶಾಪ್, ಅಡಿಕೆ ವ್ಯಾಪಾರ, ಸಣ್ಣ ಹೋಟೆಲ್, ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡುವುದಾಗಿ ವ್ಯಾಪಾರ ಮತ್ತು ಇತರೆ ವೃತ್ತಿಗಳಲ್ಲಿ ತೊಡಗಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುವುದು ಮೂರನೇ ತಲೆಮಾರಿನವರ ಕ್ಷೇತ್ರಕಾರ್ಯದ ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

‘ಕರ್ನಾಟಕದ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಅದರಲ್ಲಿ ಪರಿಶಿಷ್ಟ ಪಂಗಡದ ಕೆಲಸಗಾರರನ್ನು ವಿಂಗಡಸಿದರೆ ದೊರೆಯುವ ಅಂಕಿ ಅಂಶಗಳನ್ನು ಶೇಕಡಾವಾರುಗಳಲ್ಲಿ ನೀಡಲಾಗಿದೆ. ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣವು ಶೇಕಡಾ ೪೯.೪೦ ಇದ್ದು ಇದರಲ್ಲಿ ಪುರುಷರು ಶೇಕಡಾ ೫೮.೩ ಮತ್ತು ಮಹಿಳೆಯರು ಶೇಕಡಾ ೭೧.೭ರಷ್ಟಿದ್ದಾರೆ. ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಾರರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡಾ ೫೧.೫೦ ಇದ್ದು ಇದರಲ್ಲಿ ಪುರುಷರು ಶೇಕಡಾ ೫೭.೬೦ ಹಾಗೂ ಮಹಿಳೆಯರು ಶೇಕಡಾ ೪೫.೩೦ರಷ್ಟಿದ್ದಾರೆ. ಹಾಗೆಯೇ ನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡಾ ೩೭.೬೦ ಇದ್ದು ಇದರಲ್ಲಿ ಪುರುಷರು ಶೇಕಡಾ ೫೨.೬೦ ಹಾಗೂ ಮಹಿಳೆಯರು ಶೇಕಡಾ ೨೧.೯೦ರಷ್ಟಿದ್ದಾರೆ ಮತ್ತು ಅವಲಂಬಿತರು ಸಂಖ್ಯೆ ೫೦.೬ರಷ್ಟಿದೆ.

ವೃತ್ತಚಿತ್ರ ೫.೧೦.೨ ಕರ್ನಾಟಕ ಪರಿಶಿಷ್ಟ ಪಂಗಡದ ಕೆಲಸಗಾರರು (೨೦೦೧)



ಕೋಷ್ಟಕ ೫.೧೦.೨. ಕರ್ನಾಟಕ ಪರಿಶಿಷ್ಟ ಪಂಗಡದ ಕೆಲಸಗಾರರ ವಿಂಗಡಣೆ (೨೦೦೧)

ವಿವರ	ಒಟ್ಟು			ಗ್ರಾಮೀಣ			ನಗರ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕೆಲಸಗಾರರು	೫೮	೪೨	೪೯	೫೮	೪೫	೫೨	೫೩	೨೨	೩೮
ಕೆಲಸಗಾರರಲ್ಲದವರು	೪೨	೫೮	೫೧	೪೨	೫೫	೪೯	೪೭	೭೮	೬೨
ಮುಖ್ಯಕೆಲಸಗಾರರು	೯೦	೬೪	೭೮	೮೭	೬೨	೭೬	೯೨	೮೧	೮೯
ಅರೆಕಾಲಿಕ ಕೆಲಸಗಾರರು	೧೨	೩೬	೨೨	೧೩	೩೮	೨೪	೭.೬	೧೯	೧೧

ಮುಖ್ಯ ಕೆಲಸಗಾರರೆಂದು ಪರಿಗಣಿತವಾದವರ ಒಟ್ಟು ಪ್ರಮಾಣವು ಶೇಕಡಾ ೭೭.೯೦ರಷ್ಟಿದೆ. ಇದರಲ್ಲಿ ಗ್ರಾಮೀಣ ಪ್ರದೇಶದ ಒಟ್ಟು ಮುಖ್ಯಕೆಲಸಗಾರರು ಶೇಕಡಾ ೭೬.೪೦ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡಾ ೮೯.೧೦ರಷ್ಟಿದೆ.

ಖಾಯಂ ಆಗಿ ವರ್ಷಪೂರ್ತಿ ಕೆಲಸವಿಲ್ಲದೆ ಅರೆಕಾಲಿಕ ಕೆಲಸಗಾರರಾಗಿ ದುಡಿಯುವವರ ಪ್ರಮಾಣವು ಒಟ್ಟು ಶೇಕಡಾ ೨೨.೧ ಇದ್ದು ಇದು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇಕಡಾ ೨೩.೬೦ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡಾ ೧೦.೯೦ರಷ್ಟಿದೆ.

೫.೧೧ ಭೂ ಹಿಡುವಳಿ

“ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು ಭೂಮಿಯ ಪ್ರಮಾಣ ೪೨೨೫.೧೩ ಸ್ಕ್ವೇರ್ ಕಿಲೋಮೀಟರು ಗಳಷ್ಟಿದೆ. ಇದರಲ್ಲಿ ಅರಣ್ಯ ಭೂಮಿಯು ೮೭೧.೦೪ ಸ್ಕ್ವೇರ್ ಕಿಲೋಮೀಟರುಗಳಷ್ಟಿದೆ. ಒಟ್ಟು ಕೃಷಿಯೋಗ್ಯ ಭೂಮಿಯು ೩೮೨೫.೮೪ ಸ್ಕ್ವೇರ್ ಕಿಲೋಮೀಟರುಗಳಷ್ಟು ಲಭ್ಯವಿದೆ. ಆದರೆ ಇದರಲ್ಲಿ ಕೃಷಿಗಾಗಿ ಪರಿಶಿಷ್ಟ ಪಂಗಡಗಳು ಬಳಸಿಕೊಳ್ಳುತ್ತಿರುವ ಭೂಮಿಯ ಪ್ರಮಾಣ ಕಡಿಮೆಯೆಂದೇ ಹೇಳಬಹುದು.”[೧೯] ಪರಿಶಿಷ್ಟ ಪಂಗಡಗಳು ಹೊಂದಿರುವ ಭೂಮಿಗಳು ಸಣ್ಣ ಹಿಡುವಳಿಯ ತುಂಡು ಭೂಮಿಗಳಾಗಿವೆ. ಅದರಲ್ಲೂ ಇವರ ಕೃಷಿ ಭೂಮಿಗಳು ಕೆಳಮಟ್ಟದ ಉತ್ಪಾದನೆಯನ್ನು ನೀಡುವ ಭೂಮಿಗಳೇ ಹೆಚ್ಚಾಗಿವೆ. ಇವರು ಹೆಚ್ಚಿನ ಆದಾಯ ತರುವ ಯಾವ ಹುದ್ದೆಯಲ್ಲೂ ಇರದಿರುವುದಕ್ಕೆ ಕಾರಣ ಇವರ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆ ಇರುವುದರಿಂದ ಕಡಿಮೆ ಸಂಭಾವನೆ ಬರುವಂಥ ಕೆಲಸಗಳಿಗೆ ಅವರು ತಳ್ಳಲ್ಪಟ್ಟಿದ್ದಾರೆ. ಅವರ ತಲಾವಾರು ಮಾಸಿಕ ವೆಚ್ಚವು ತಮ್ಮ ಅಗತ್ಯಕ್ಕಿಂತಲೂ ಕಡಿಮೆ ಕೂಲಿ ಪಡೆಯುತ್ತಿರುವುದನ್ನು ಪ್ರತಿನಿಧಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದವರಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಪಂಗಡ ದವರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ. ೨೦೦೧ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡಾ ೭.೬ರಷ್ಟು ಸಾಗುವಳಿದಾರರಿದ್ದಾರೆ. ಶೇಕಡಾ ೧೧.೮೬ರಷ್ಟು ಕೃಷಿ ಕಾರ್ಮಿಕರಿದ್ದರೆ ಶೇಕಡಾ ೪.೭೦ರಷ್ಟು ಗೃಹ ಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ.

ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಧಿಕ ಮಹಿಳೆಯರು, ಅಂದರೆ ಶೇಕಡಾ ೫೮.೮೦ರಷ್ಟು ಮಹಿಳೆಯರು ಗೃಹ ಸಂಬಂದಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಕೇವಲ ಶೇಕಡಾ ೫೯.೮೯ರಷ್ಟು ಮಹಿಳೆಯರು ಮಾತ್ರ ಸಾಗುವಳಿದಾರರಾಗಿದ್ದಾರೆ.

“ಮಾದರಿ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಶೇಕಡಾ ೫೭.೩೯ರಷ್ಟು ಕುಟುಂಬಗಳು ಭೂ ಒಡೆತನ ಹೊಂದಿವೆ. ಅದರಲ್ಲಿ ಶೇಕಡಾ ೭೪.೩೫ರಷ್ಟು ಒಣಭೂಮಿ ಯಾಗಿದೆ. ರಾಜ್ಯದಲ್ಲಿ ಬಿತ್ತನೆಗೊಳ್ಳುವ ನೀರಾವರಿ ಕೃಷಿಭೂಮಿಯು ಶೇಕಡಾ ೨೧ರಷ್ಟು ಮಾತ್ರವಾಗಿದೆ.”[೨೦]

‘೨೦೦೧ರ ಕರ್ನಾಟಕ ಕೃಷಿ ಗಣತಿಯ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡಾ ೩೦.೯ರಷ್ಟು ಅತಿ ಸಣ್ಣ ಹಿಡುವಳಿದಾರರು ಮತ್ತು ಶೇಕಡಾ ೧೯.೪ರಷ್ಟು ಅರೆ ಮಧ್ಯಮ ಗಾತ್ರದ ಹಿಡುವಳಿ ದಾರರಿದ್ದಾರೆ.’[೨೧] ಈ ವಿಷಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಮತ್ತು ಇತರರಿಗೆ ಅಷ್ಟೇನೂ ವ್ಯತ್ಯಾಸವಿಲ್ಲ.

ಕೋಷ್ಟಕ ೫.೧೧.೧ ಪರಿಶಿಷ್ಟ ಪಂಗಡದವರ ಗಾತ್ರವಾರು ಭೂ ಹಿಡುವಳಿ ಹೊಂದಿರುವವರ ಶೇಕಡಾವಾರು ವಿವರ

ಲಕ್ಷ (ಹೆಕ್ಟೇರುಗಳಲ್ಲಿ)

ವಿವರಗಳು	ಪರಿಶಿಷ್ಟ ಪಂಗಡ		ಇತರರು	
	ಹಿಡುವಳಿಗಳ ವಿಸ್ತೀರ್ಣ		ಹಿಡುವಳಿಗಳ ವಿಸ್ತೀರ್ಣ	
	ಸಂಖ್ಯೆ	ಲಕ್ಷ (ಹೆಕ್ಟೇರು)	ಸಂಖ್ಯೆ	ಲಕ್ಷ (ಹೆಕ್ಟೇರು)
ಸಣ್ಣ ಹಿಡುವಳಿದಾರರು	೩೦.೪	೨೫.೩	೨೬.೩	೨೧.೦
ಅರೆ–ಮಧ್ಯಮ ಹಿಡುವಳಿಗಾರರು	೧೯.೪	೨೯.೭	೧೮.೩	೨೭.೯
ಮಧ್ಯಮ ಗಾತ್ರದ ಹಿಡುವಳಿಗಾರರು	೭.೯	೨೩.೩	೮.೬	೨೮.೩
ದೊಡ್ಡ ಹಿಡುವಳಿಗಾರರು	೧.೦	೭.೭	೧.೪	೧೧.೪

ಕೃಪೆ: ೨೦೦೧ರ ಕೃಷಿ ಗಣತಿ

ಆದರೆ ಮಧ್ಯಮ(ಶೇಕಡಾ ೭.೯). ಮತ್ತು ದೊಡ್ಡ ಹಿಡುವಳಿಗಳ(ಶೇಕಡಾ ೧.೦) ಪ್ರಮಾಣ ಕಡಿಮೆ ಇದೆ(ಕೋಷ್ಟಕ ೫.೧೧.೧ ನೋಡಿ).


ಇಲ್ಲಿ ಗಮನಿಸಬೇಕಾದ ಅತಿ ಮುಖ್ಯವಾದ ಅಂಶವೆಂದರೆ ಬಹುಪಾಲು ಪರಿಶಿಷ್ಟ ಪಂಗಡಗಳು ಕಡಿಮೆ ಉತ್ಪಾದಕತೆಯ ಸಣ್ಣ ಘಟಕಗಳನ್ನು ಹೊಂದಿವೆ. ಅವು ಆರ್ಥಿಕವಾಗಿಯೂ ಲಾಭಕರವಲ್ಲ. ಆದ್ದರಿಂದಲೇ ಬಹುತೇಕ ಸಣ್ಣ ಹಿಡುವಳಿದಾರರು ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕ ವೃತ್ತಿಗೆ ತಳ್ಳಲ್ಪಟ್ಟಿದ್ದಾರೆ.

'ವರಮಾನದ ವಿಚಾರವಾಗಿ ತಿಳಿಸಬಹುದೇನೆಂದರೆ ೧೯೯೯–೨೦೦೦ ಅಂಕಿ ಅಂಶಗಳ ಪ್ರಕಾರ ಬಹುಪಾಲು ಗ್ರಾಮೀಣ ಪರಿಶಿಷ್ಟ ಪಂಗಡದ ಕುಟುಂಬಗಳ ವರಮಾನದ ಮೂಲವೆಂದರೆ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುವುದು ಶೇಕಡಾ ೯.೭, ಸಾಗುವಳಿ ಶೇಕಡಾ ೭.೭, ಮೀನುಗಾರಿಕೆ ಹಾಗೂ ಇತರ ಸಣ್ಣ ಪುಟ್ಟ ಉದ್ದಿಮೆಗಳು ಶೇಕಡಾ ೧೧.೪ ಅವರ ವರಮಾನದ ಮೂಲಗಳಾಗಿವೆ.

ನಗರ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ರೂ ೧೦.೯೮೭ರಷ್ಟಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ಕೇವಲ ರೂ. ೪.೭೬೮ ಆಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಶೇಕಡಾ ೪೦ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿನ ಕುಟುಂಬಗಳಾಗಿವೆ. ಇದೇ ನಗರ ಪ್ರದೇಶದ ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಮಾಣ ಶೇಕಡಾ ೨೫ರಷ್ಟಾಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಜನರ ತಲಾವಾರು ಮಾಸಿಕ ವೆಚ್ಚವು ಅತ್ಯಂತ ಕಡಿಮೆ ಇದೆ. ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚ ರೂ. ೪೧೯ ಆಗಿದ್ದರೆ

ವೃತ್ತಚಿತ್ರ ೫.೧೧.೨. ಪರಿಶಿಷ್ಟ ಪಂಗಡದವರ ಗಾತ್ರವಾರು ಭೂ ಹಿಡುವಳಿ ಹೊಂದಿರುವವರ ಶೇಕಡಾವಾರು



ಇತರರ ತಲಾವಾರು ವೆಚ್ಚ ರೂ. ೫೦೦ ಆಗಿದೆ. ಇತರರ ಮಾಸಿಕ ತಲಾವಾರು ವೆಚ್ಚಕ್ಕೆ ಹೋಲಿಸಿದರೆ ಪರಿಶಿಷ್ಟ ಪಂಗಡದವರ ತಲಾವಾರು ವೆಚ್ಚವು ಅತ್ಯಂತ ಕಡಿಮೆಯೆಂದೇ ಹೇಳಬಹುದು. ನಗರವಾಸಿ ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚವು ರೂ. ೬೩೪ ಆಗಿದ್ದು ನಗರವಾಸಿ ಇತರರಿಗೆ ಹೋಲಿಸಿದರೆ ಅವರ ತಲಾವಾರು ವೆಚ್ಚದ ಪ್ರಮಾಣ ಅತ್ಯಂತ ಕಡಿಮೆಯೆನಿಸುತ್ತದೆ.'[೨೨]

ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಕೃಷಿಯನ್ನೇ ಆಧರಿಸಿರುವುದರಿಂದ ಅವರ ಮಾಸಿಕ ತಲಾವಾರು ವೆಚ್ಚವು ಕಡಿಮೆಯಾಗಿರುವುದು ಸಹಜವಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಎರಡು ರೀತಿಯ ಕೃಷಿ ಚಟುವಟಿಕೆಗಳನ್ನು ಕಾಣುತ್ತೇವೆ. ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ದಾವಣಗೆರೆ, ಹರಿಹರ ತಾಲೂಕುಗಳು ತುಂಗಾಭದ್ರಾ ಮೇಲ್ದಂಡೆ ಕಾಲುವೆಗಳು ಹಾಗೂ ಕೆರೆಗಳನ್ನು ಆಶ್ರಯಿಸಿ ಕೃಷಿ ಚಟುವಟಿಕೆ ನಡೆಸುತ್ತವೆ. ಹಾಗೆಯೇ ಚನ್ನಗಿರಿ ಮತ್ತು ಹೊನ್ನಾಳಿ ಮಲೆನಾಡಿನ ಸೆರಗಿನಲ್ಲಿವೆ. ಈ ಎರಡೂ ತಾಲೂಕುಗಳನ್ನು ಅರೆಮಲೆನಾಡೆಂದು ಕರೆಯಬಹುದು. ಹೀಗಾಗಿ ಈ ಎರಡೂ ತಾಲೂಕುಗಳಿಗೆ ನೀರಿನ ಕೊರತೆ ಹೆಚ್ಚಾಗಿಲ್ಲ. ವರ್ಷದ ೮–೯ ತಿಂಗಳು ಕೃಷಿ ಚಟುವಟಿಕೆಗಳು ಇಲ್ಲಿ ನಡೆಯುತ್ತವೆ. ಹಾಗೆಯೇ ಹರಿಹರ, ದಾವಣಗೆರೆ ತಾಲೂಕುಗಳಲ್ಲಿ ಚನ್ನಗಿರಿ ಹಾಗೂ ಹೊನ್ನಾಳಿಗಳಲ್ಲಾಗುವಷ್ಟು ಹೇರಳವಾಗಿ ಮಳೆಯಾಗದಿದ್ದರೂ ಕಾಲುವೆ ನೀರು ವರ್ಷದ ೯–೧೦ ತಿಂಗಳಿರುತ್ತವೆ. ಇದರ ಜೊತೆಗೆ ಕೆರೆಗಳಿವೆ. ಹೀಗಾಗಿ ಇಲ್ಲಿಯ ಕೃಷಿ ಚಟುವಟಿಕೆ ಬಹುತೇಕ ಚನ್ನಗಿರಿ ಹೊನ್ನಾಳಿಯ ಕೃಷಿಯನ್ನೇ ಹೋಲುತ್ತದೆ. ಆದರೆ ಹರಪನಹಳ್ಳಿ ಹಾಗೂ ಜಗಳೂರು ತಾಲೂಕುಗಳು ಈ ತಾಲೂಕುಗಳಿಗಿಂತ ಭಿನ್ನ ವಾತಾವರಣವನ್ನು ಹೊಂದಿವೆ. ಈ ಎರಡು ತಾಲೂಕುಗಳಲ್ಲಿ ಮಳೆಯನ್ನಾಶ್ರಯಿಸಿ ಕೃಷಿ ಚಟುವಟಿಕೆ ನಡೆಯುತ್ತದೆ.

ಸಾಮಾನ್ಯವಾಗಿ ಮಳೆಯಾಶ್ರಿತ ಕೃಷಿ ಚಟುವಟಿಕೆಗಳು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಚುರುಕಾಗಿರುತ್ತದೆ. ಇನ್ನುಳಿದ ಆರು ತಿಂಗಳು ಕೃಷಿಕರಿಗೆ ಬೇರೆ ಯಾವುದೇ ಕೆಲಸವಿರುವುದಿಲ್ಲ. ಅದೂ ಮಳೆ ಬಂದರೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಮಳೆ ಸರಿಯಾಗಿ ಬಾರದೇ ಇದ್ದರೆ ಆ ಆರು ತಿಂಗಳು ಸಹ ಅಂತಹ ಹೇಳಿಕೊಳ್ಳುವಂತಹ ಕೆಲಸಗಳು ಇರುವುದಿಲ್ಲ. ಹೀಗಾಗಿ ಅನಿಶ್ಚಿತವಾದ ದುಡಿಮೆಯನ್ನೇ ಇಲ್ಲಿಯ ಜನರು ನೆಚ್ಚಿಕೊಂಡಿರ ಬೇಕಾಗುತ್ತದೆ. ಬಹುತೇಕ ಈ ತಾಲೂಕುಗಳಲ್ಲಿ ಕೃಷಿ ಚಟುವಟಿಕೆ ಪೂರ್ಣಗೊಂಡ ತರುವಾಯ ಸಣ್ಣ ಹಿಡುವಳಿದಾರ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಜೀವನೋಪಾಯಕ್ಕಾಗಿ ಚಿಕ್ಕಮಗಳೂರು ಮುಂತಾದ ಕಡೆಯ ಕಾಫಿ ಎಸ್ಟೇಟುಗಳಲ್ಲಿ ಕೂಲಿಗಳಾಗಿ ದುಡಿಯಲು ಹೋಗುತ್ತಾರೆ. ಇಲ್ಲವಾದರೆ ಕೂಲಿ ಕೆಲಸವನ್ನು ಹುಡುಕಿಕೊಂಡು ಬೆಂಗಳೂರು, ಗೋವಾ, ಹೈದ್ರಾಬಾದು ಮುಂತಾದ ಕಡೆ ವಲಸೆ ಹೋಗುತ್ತಾರೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರು ತಲೆಮಾರಿನವರ ೧೮೦ ಕುಟುಂಬಗಳ ಅಂಕಿಅಂಶಗಳನ್ನು ಹಾಗೂ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ಈ ಕೆಳಕಂಡಂತೆ ನೋಡಬಹುದು.

ಕೋಷ್ಟಕ ೫.೧೧.೩ ಮೊದಲ ತಲೆಮಾರಿನವರ ಭೂಹಿಡುವಳಿ ಪ್ರಮಾಣ

		ಭೂ ಹಿಡುವಳಿ (ಎಕರೆಗಳಲ್ಲಿ)			ಕೌಟುಂಬಿಕ ಭೂ ಹಿಡುವಳಿ (ಶ್ರೇಣಿಗಳಲ್ಲಿ)					
					೧೫.೧ ಮೇಲ್ಪಟ್ಟು	೧೦.೧-೧೫	೫-೧೦	೨.೫೧-೫	೦.೫-೨.೫	ಭೂ ರಹಿತ
ಕ್ರ.ಸಂ.	ನೆಲೆಗಳು	ಒಣಭೂಮಿ	ನೀರಾವರಿ	ಒಟ್ಟು	ಎ *	ಬಿ *	ಸಿ *	ಡಿ *	ಇ *	ಎಫ್ *
1	ಚನ್ನಗಿರಿ	೩೭೭		೩೭೭	೫	೪	೧೧	೪	೬	
2	ದಾವಣಗೆರೆ	೨೯೫.೫		೨೯೫.೫	೫	೨	೧೧	೮	೪	
3	ಹರಪನಹಳ್ಳಿ	೩೪೨		೩೪೨	೮	೪	೮	೬	೪	
4	ಹರಿಹರ	೩೨೮.೫		೩೨೮.೫	೬	೨	೯	೪	೫	೪
5	ಹೊನ್ನಾಳಿ	೪೨೭		೪೨೭	೮	೭	೩	೪	೪	೪
6	ಜಗಳೂರು	೪೭೯		೪೭೯	೧೦	೫	೬	೬	೧	೨
ಒಟ್ಟು		೨೨೪೯		೨೨೪೯	೪೨	೨೪	೪೮	೩೨	೨೪	೧೦

ಎ* = ದೊಡ್ಡ ಭೂಹಿಡುವಳಿದಾರರು (೧೫.೧ ಎಕರೆ ಮೇಲ್ಪಟ್ಟವರು)

ಬಿ* = ಮಧ್ಯಮ ಭೂಹಿಡುವಳಿದಾರರು (೧೦.೧ ಎಕರೆಯಿಂದ ೧೫.೦೦ ಎಕರೆಗೊಳ್ಳಪಟ್ಟವರು)

ಸಿ* = ಅರೆಮಾಧ್ಯಮ ಭೂಹಿಡುವಳಿದಾರರು (೫.೧ ಎಕರೆಯಿಂದ ೧೦ ಎಕರೆಗೊಳ್ಳಪಟ್ಟವರು)


ಡಿ* = ಸಣ್ಣ ಭೂಹಿಡುವಳಿದಾರರು (೨.೫೧ ಎಕರೆಯಿಂದ ೫ ಎಕರೆಗೊಳ್ಳಪಟ್ಟವರು)

ಇ* = ಅತಿ ಸಣ್ಣ ಭೂಹಿಡುವಳಿದಾರರು (೦.೫ ಎಕರೆಯಿಂದ ೨.೫ ಎಕರೆಗೊಳ್ಳಪಟ್ಟವರು)

ಎಫ್* = ಭೂರಹಿತ ಕುಟುಂಬಗಳು

[illegible]

ವೃತ್ತಚಿತ್ರ ೫.೧೧.೩ ಮೊದಲ ತಲೆಮಾರಿನವರ ಭೂಹಿಡುವಳಿ ಪ್ರಮಾಣ



ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೊದಲನೇ ತಲೆಮಾರಿನ ಗ್ರಾಮಗಳ ಭೂಹಿಡುವಳಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ತಾಲೂಕಿನ ಬೇಡರ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಒಣಭೂಮಿಗಳನ್ನು ಕೃಷಿಭೂಮಿಗಳನ್ನಾಗಿ ಕುಟುಂಬಗಳು ಜೀವನನಿರ್ವಹಣೆಯ ಆರ್ಥಿಕತೆಯ ಮೂಲವಾಗಿ ಕಂಡುಕೊಂಡಿರುತ್ತದೆ. ಒಟ್ಟಾರೆ ದಾವಣಗೆರೆ ಜಿಲ್ಲಾವಾರು ೨೨೪೯ ಎಕರೆ ಒಣ ಭೂಹಿಡುವಳಿಯನ್ನು ಹೊಂದಿದ್ದು, ಶ್ರೇಣಿವಾರು ಶೇ. ಎ* (ದೊಡ್ಡ ಭೂಹಿಡುವಳಿದಾರರು) = ಶೇ. ೨೩.೩೩ರಷ್ಟು, ಬಿ*(ಮಧ್ಯಮ ಭೂಹಿಡುವಳಿದಾರರು) = ಶೇ. ೧೩.೩೩ರಷ್ಟು, ಸಿ* (ಅರೆಮಾಧ್ಯಮ ಭೂಹಿಡುವಳಿದಾರರು) = ಶೇ. ೨೬.೬೬ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೧೭.೭೮ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೧೩.೩೩ರಷ್ಟಾಗಿದ್ದು, ಎಫ್* = ಶೇ. ೫.೫೫ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಮೊದಲ ತಲೆಮಾರಿನ ತಾಲೂಕುವಾರು ಬೇಡರ ಕೌಟುಂಬಿಕ ಭೂ ಹಿಡುವಳಿಗಳನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೨೦ರಷ್ಟು, ಬಿ* = ಶೇ. ೧೩.೩೩ರಷ್ಟು, ಸಿ* = ಶೇ. ೩೬.೬೬ರಷ್ಟು, ಡಿ* = ಶೇ. ೧೦ರಷ್ಟು, ಇ* = ಶೇ. ೨೦ರಷ್ಟಾಗಿದ್ದು, ಯಾವುದೇ ಭೂರಹಿತ ಕುಟುಂಬಗಳಿಲ್ಲದಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೧ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೧೬.೬೬ರಷ್ಟು, ಬಿ* = ಶೇ. ೬.೬೬ರಷ್ಟು, ಸಿ* = ಶೇ. ೩೬.೬೬ರಷ್ಟು, ಡಿ* = ಶೇ. ೨೬.೬೬ರಷ್ಟು, ಇ* = ಶೇ. ೧೩.೩೩ರಷ್ಟಾಗಿದ್ದು, ಯಾವುದೇ ಭೂರಹಿತ ಕುಟುಂಬಗಳಿಲ್ಲದಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೧ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೨೩.೩೩ರಷ್ಟು, ಬಿ* = ಶೇ. ೧೩.೩೩ರಷ್ಟು, ಸಿ* = ಶೇ. ೨೦ರಷ್ಟು, ಡಿ* = ಶೇ. ೩೦ರಷ್ಟು, ಇ* = ಶೇ. ೧೩.೩೩ರಷ್ಟಾಗಿದ್ದು, ಯಾವುದೇ ಭೂರಹಿತ ಕುಟುಂಬಗಳಿಲ್ಲದಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೧ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೨೦ರಷ್ಟು, ಬಿ* = ಶೇ. ೬.೬೬ರಷ್ಟು, ಸಿ* = ಶೇ. ೩೦ರಷ್ಟು, ಡಿ* = ಶೇ. ೧೩.೩೩ರಷ್ಟು, ಇ* = ಶೇ. ೧೬.೬೬ರಷ್ಟಾಗಿದ್ದು, ಎಫ್* = ಶೇ. ೧೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೧ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೨೬.೬೬ರಷ್ಟು, ಬಿ* = ಶೇ. ೨೩.೩೩ರಷ್ಟು, ಸಿ* = ಶೇ. ೧೩.೩೩ರಷ್ಟು, ಡಿ* = ಶೇ. ೧೩.೩೩ರಷ್ಟು, ಇ* = ಶೇ. ೧೦ರಷ್ಟಾಗಿದ್ದು, ಎಫ್* = ಶೇ. ೧೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೧ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೩೩.೩೩ರಷ್ಟು, ಬಿ* = ಶೇ. ೧೬.೬೭ರಷ್ಟು, ಸಿ* = ಶೇ. ೨೦ರಷ್ಟು, ಡಿ* = ಶೇ. ೨೦ರಷ್ಟು, ಇ* = ಶೇ. ೧೩.೩೩ರಷ್ಟಾಗಿದ್ದು, ಎಫ್* = ಶೇ. ೬.೬೮ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೧ ನೋಡಿ).

ಮೊದಲ ತಲೆಮಾರಿನ ಬೇಡಬುಡಕಟ್ಟಿನ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಹರಿಹರ, ಹೊನ್ನಾಳಿ ಮತ್ತು ಜಗಳೂರು ಸೇರಿದಂತೆ ೧೦ ಭೂರಹಿತ ಕುಟುಂಬಗಳು ಕಂಡುಬರುತ್ತದೆ. ಮಳೆಯಾಧಾರಿತ ಭೂಮಿಗಳನ್ನು ಹೊಂದಿರುವ ಕುಟುಂಬಗಳಾದ್ದರಿಂದ ಮುಂಗಾರು

ಮತ್ತು ಹಿಂಗಾರು ಮಳೆಯನ್ನು ಆಶ್ರಯಿಸಿ ಬೆಳೆಗಳನ್ನು ಬೆಳೆದುಕೊಳ್ಳುತ್ತಿದ್ದರು. ಹೆಚ್ಚಿನ ಲಾಭವನ್ನು ಕಾಣದ ಈ ಭೂಮಿಗಳ ಕೃಷಿಯಿಂದ ಇತರೆ ಪಶುಪಾಲನೆಗಳನ್ನು ಹೊಂದಿದ್ದರು. ಇವರ ಬಡತನದ ಸ್ವರೂಪ, ಆರ್ಥಿಕಮಟ್ಟ ಇವರ ಬದುಕನ್ನು ಈ ಭೂಹಿಡುವಳಿಗಳ ಪ್ರಮಾಣ ತೋರಿಸುತ್ತಿದೆ.

ಕೋಷ್ಟಕ ೫.೧೧.೪ ಎರಡನೇ ತಲೆಮಾರಿನವರ ಭೂಹಿಡುವಳಿ ಪ್ರಮಾಣ

		ಭೂ ಹಿಡುವಳಿ (ಎಕರೆಗಳಲ್ಲಿ)			ಕೌಟುಂಬಿಕ ಭೂ ಹಿಡುವಳಿ (ಶ್ರೇಣಿಗಳಲ್ಲಿ)					
					೧೫.೧ ಮೇಲ್ಪಟ್ಟ	೧೦.೧-೧೫	೫.೧-೧೦	೨.೫೧-೫	೦.೫-೨.೫	ಭೂ ರಹಿತ
ಕ್ರಸಂ.	ನೆಲೆಗಳು	ಒಣಭೂಮಿ	ನೀರಾವರಿ	ಒಟ್ಟು	ಎ *	ಬಿ *	ಸಿ *	ಡಿ *	ಇ *	ಎಫ್ *
1	ಚನ್ನಗಿರಿ	೧೪೨		೧೪೨	೧	೨	೪	೧೦	೧೦	೩
2	ದಾವಣಗೆರೆ	೧೩೩	೭.೫	೧೪೦.೫	೧	೩	೩	೧೦	೧೩	
3	ಹರಪನಹಳ್ಳಿ	೧೫೭	೨	೧೫೯	೧	೨	೬	೧೨	೯	
4	ಹರಿಹರ	೧೭೮	೮	೧೮೬	೦	೫	೦	೩	೧೮	೪
5	ಹೊನ್ನಾಳಿ	೧೨೩.೫		೧೨೩.೫	೦	೦	೭	೧	೧೭	೫
6	ಜಗಳೂರು	೧೨೯.೫		೧೨೯.೫			೧	೮	೧೮	೩
ಒಟ್ಟು		೮೬೩	೧೭.೫	೮೮೦.೫	೩	೧೨	೨೧	೪೪	೮೫	೧೫

ಎ* = ದೊಡ್ಡ ಭೂಹಿಡುವಳಿದಾರರು (೧೫.೧ ಎಕರೆ ಮೇಲ್ಪಟ್ಟವರು)

ಬಿ* = ಮಧ್ಯಮ ಭೂಹಿಡುವಳಿದಾರರು (೧೦.೧ ಎಕರೆಯಿಂದ ೧೫.೦೦ ಎಕರೆಗೊಳ್ಳಪಟ್ಟವರು)

ಸಿ* = ಅರೆಮಾದ್ಯಮ ಭೂಹಿಡುವಳಿದಾರರು (೫.೧ ಎಕರೆಯಿಂದ ೧೦ ಎಕರೆಗೊಳ್ಳಪಟ್ಟವರು)


ಡಿ* = ಸಣ್ಣ ಭೂಹಿಡುವಳಿದಾರರು (೨.೫೧ ಎಕರೆಯಿಂದ ೫ ಎಕರೆಗೊಳ್ಳಪಟ್ಟವರು)

ಇ* = ಅತಿ ಸಣ್ಣ ಭೂಹಿಡುವಳಿದಾರರು (೦.೫ ಎಕರೆಯಿಂದ ೨.೫ ಎಕರೆಗೊಳ್ಳಪಟ್ಟವರು)

ಎಫ್* = ಭೂರಹಿತ ಕುಟುಂಬಗಳು

ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಎರಡನೇ ತಲೆಮಾರಿನ ಗ್ರಾಮಗಳ ಭೂಹಿಡುವಳಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ಜಿಲ್ಲೆಯ ಬೇಡರ ಸಮುದಾಯದ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಒಣಭೂಮಿಗಳನ್ನು ಕೃಷಿಭೂಮಿಗಳನ್ನಾಗಿ ಕುಟುಂಬಗಳು ಜೀವನನಿರ್ವಹಣೆಯ ಆರ್ಥಿಕತೆಯ ಮೂಲವಾಗಿ ಕಂಡುಕೊಂಡಿರುತ್ತದೆ. ಒಟ್ಟಾರೆ ದಾವಣಗೆರೆ ಜಿಲ್ಲಾವಾರು ೮೬೩ (ಶೇ. ೯೮.೦೧) ಎಕರೆ ಒಣ ಭೂಹಿಡುವಳಿ ಮತ್ತು ೧೭.೫ (ಶೇ. ೧.೯೯) ನೀರಾವರಿ ಭೂಹಿಡುವಳಿಯನ್ನು ಹೊಂದಿದ್ದು, ಶ್ರೇಣಿವಾರು ಶೇ. ಎ* (ದೊಡ್ಡ ಭೂಹಿಡುವಳಿದಾರರು) = ಶೇ. ೧.೬೬ರಷ್ಟು, ಬಿ*(ಮಧ್ಯಮ ಭೂಹಿಡುವಳಿದಾರರು) = ಶೇ. ೧೩.೩೩ರಷ್ಟು, ಸಿ* (ಅರೆಮಾದ್ಯಮ ಭೂಹಿಡುವಳಿದಾರರು) = ಶೇ.

ವೃತ್ತಚಿತ್ರ ೫.೧೧.೪. ಎರಡನೇ ತಲೆಮಾರಿನವರ ಭೂಹಿಡುವಳಿ ಪ್ರಮಾಣ



೨೬.೬೬ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೧೭.೭೮ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೧೩.೩೩ರಷ್ಟಾಗಿದ್ದು, ಎಫ್* (ಭೂರಹಿತ ಕುಟುಂಬಗಳು) = ಶೇ. ೫.೫೫ರಷ್ಟು ಕುಟುಂಬಗಳಿರುವುದು ಕಂಡುಬರುತ್ತದೆ.

ಎರಡನೇ ತಲೆಮಾರಿನ ತಾಲೂಕುವಾರು ಬೇಡರ ಕೌಟುಂಬಿಕ ಭೂ ಹಿಡುವಳಿಗಳನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೩.೩೩ರಷ್ಟು, ಬಿ* = ಶೇ. ೬.೬೬ರಷ್ಟು, ಸಿ* = ಶೇ. ೧೩.೩೩ರಷ್ಟು, ಡಿ* = ಶೇ. ೩೩.೩೩ರಷ್ಟು, ಇ* = ಶೇ. ೩೩.೩೩ರಷ್ಟಾಗಿದ್ದು, ಎಫ್* = ಶೇ. ೧೦ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೨ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೩.೩೩ರಷ್ಟು, ಬಿ* = ಶೇ. ೧೦ರಷ್ಟು, ಸಿ* = ಶೇ. ೧೦ರಷ್ಟು, ಡಿ* = ಶೇ. ೩೩.೩೩ರಷ್ಟು, ಇ* = ಶೇ. ೪೩.೩೩ರಷ್ಟಾಗಿದ್ದು, ಯಾವುದೇ ಭೂರಹಿತ ಕುಟುಂಬಗಳಿಲ್ಲದಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೨ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೩.೩೩ರಷ್ಟು,

ಬಿ* = ಶೇ. ೬.೬೬ರಷ್ಟು, ಸಿ* = ಶೇ. ೨೦ರಷ್ಟು, ಡಿ* = ಶೇ. ೩೦.೬೬ರಷ್ಟು, ಇ* = ಶೇ. ೩೦ರಷ್ಟಾಗಿದ್ದು, ಎಫ್* = ಶೇ. ೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ. (ಅಂಕಿಅಂಶಗಳು: ಪು.೨೫೨ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಬಿ* = ಶೇ. ೧೬.೬೬ರಷ್ಟು, ಡಿ* = ಶೇ. ೧೦ರಷ್ಟು, ಇ* = ಶೇ. ೬೦ರಷ್ಟು, ಎಫ್* = ಶೇ. ೧೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೨ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಸಿ* = ಶೇ. ೨೩.೩೩ರಷ್ಟು, ಡಿ* = ಶೇ. ೩.೩೩ರಷ್ಟು, ಇ* = ಶೇ. ೬೦ರಷ್ಟಾಗಿದ್ದು, ಎಫ್* = ಶೇ. ೧೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೨ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಸಿ* = ಶೇ. ೩.೩೩ರಷ್ಟು, ಡಿ* = ಶೇ. ೨೬.೬೬ರಷ್ಟು, ಇ* = ಶೇ. ೬೦ರಷ್ಟಾಗಿದ್ದು, ಎಫ್* = ಶೇ. ೧೦ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೨ ನೋಡಿ).

ಎರಡನೆ ತಲೆಮಾರಿನ ಬೇಡಬುಡಕಟ್ಟಿನ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಚನ್ನಗಿರಿ, ಹರಿಹರ, ಹೊನ್ನಾಳಿ ಮತ್ತು ಜಗಳೂರು ಸೇರಿದಂತೆ ೧೫ ಭೂರಹಿತ ಕುಟುಂಬಗಳು ಕಂಡುಬರುತ್ತದೆ. ಶೇ. ೯೮.೦೧ರಷ್ಟು ಕುಟುಂಬಗಳು ಮಳೆಯಾಧಾರಿತ ಭೂಮಿಗಳನ್ನು ಹೊಂದಿರುವ ಕುಟುಂಬಗಳಾಗಿ ಹಾಗೂ ದಾವಣಗೆರೆ, ಹರಪನಹಳ್ಳಿ ಮತ್ತು ಹರಿಹರ ಸೇರಿದಂತೆ ಶೇ. ೧.೯೯ರಷ್ಟು ನೀರಾವರಿ ಕೃಷಿಭೂಮಿಗಳನ್ನು ಹೊಂದಿರುವ ಕುಟುಂಬಗಳು ಕಂಡುಬರುತ್ತಿವೆ. ಮುಂಗಾರು ಮತ್ತು ಹಿಂಗಾರು ಮಳೆಯನ್ನು ಆಶ್ರಯಿಸಿ ಬೆಳೆಗಳನ್ನು ಬೆಳೆದುಕೊಳ್ಳುವರು. ಹೆಚ್ಚಿನ ಲಾಭವನ್ನು ಕಾಣದ ಈ ಭೂಮಿಗಳ ಕೃಷಿಯಿಂದ ಇತರೆ ಪಶುಪಾಲನೆಗಳನ್ನು ಹೊಂದಿದ್ದರು. ಇವರ ಬಡತನದ ಸ್ವರೂಪ, ಆರ್ಥಿಕಮಟ್ಟ ಇವರ ಬದುಕನ್ನು ಈ ಭೂಹಿಡುವಳಿಗಳ ಪ್ರಮಾಣ ತೋರಿಸುತ್ತಿದೆ.

ಕೋಷ್ಟಕ ೫.೧೧.೫ ಮೂರನೇ ತಲೆಮಾರಿನವರ ಭೂಹಿಡುವಳಿ ಪ್ರಮಾಣ

					ಕೌಟುಂಬಿಕ ಭೂ ಹಿಡುವಳಿ (ಶ್ರೇಣಿಗಳಲ್ಲಿ)					
		ಭೂ ಹಿಡುವಳಿ (ಎಕರೆಗಳಲ್ಲಿ)			೧೫.೧ ಮೇಲ್ಪಟ್ಟು	೧೦.೧-೧೫	೫.೧-೧೦	೨.೫೧-೫	೦.೫-೨.೫	ಭೂ ರಹಿತ
ಕ್ರ.ಸಂ.	ನೆಲೆಗಳು	ಒಣಭೂಮಿ	ನೀರಾವರಿ	ಒಟ್ಟು	ಎ *	ಬಿ *	ಸಿ *	ಡಿ *	ಇ *	ಎಫ್ *
1	ಚನ್ನಗಿರಿ	೭೭.೫೦	೧೮.೫೦	೯೬.೦೦	೧		೧	೫	೧೯	೪
2	ದಾವಣಗೆರೆ	೧೫.೫೦	೫೭.೦೦	೭೨.೫೦		೧	೧	೪	೧೬	೮
3	ಹರಪನಹಳ್ಳಿ	೭೩.೫೦		೭೩.೫೦				೩	೨೦	೭
4	ಹರಿಹರ	೩.೦೦	೬೪.೦೦	೬೭.೦೦		೨		೨	೧೬	೧೦
5	ಹೊನ್ನಾಳಿ		೫೪.೨೦	೫೪.೨೦			೧	೨	೧೭	೧೦
6	ಜಗಳೂರು	೧೦೩.೯೦	೧೬.೨೦	೧೨೦.೧೦	೧			೩	೧೬	೧೦
ಒಟ್ಟು		೨೭೩.೪೦	೨೦೯.೯೦	೪೮೩.೩೦	೨	೩	೩	೧೯	೧೦೪	೪೯

ಎ* = ದೊಡ್ಡ ಭೂಹಿಡುವಳಿದಾರರು (೧೫.೧ ಎಕರೆ ಮೇಲ್ಪಟ್ಟವರು)

ಬಿ* = ಮಧ್ಯಮ ಭೂಹಿಡುವಳಿದಾರರು (೧೦.೧ ಎಕರೆಯಿಂದ ೧೫.೦೦ ಎಕರೆಗೊಳ್ಳಪಟ್ಟವರು)


ಸಿ* = ಅರೆಮಾದ್ಯಮ ಭೂಹಿಡುವಳಿದಾರರು (೫.೧ ಎಕರೆಯಿಂದ ೧೦ ಎಕರೆಗೊಳ್ಳಪಟ್ಟವರು)

ಡಿ* = ಸಣ್ಣ ಭೂಹಿಡುವಳಿದಾರರು (೨.೫೧ ಎಕರೆಯಿಂದ ೫ ಎಕರೆಗೊಳ್ಳಪಟ್ಟವರು)

ಇ* = ಅತಿ ಸಣ್ಣ ಭೂಹಿಡುವಳಿದಾರರು (೦.೫ ಎಕರೆಯಿಂದ ೨.೫ ಎಕರೆಗೊಳ್ಳಪಟ್ಟವರು)

ಎಫ್* = ಭೂರಹಿತ ಕುಟುಂಬಗಳು

ವೃತ್ತಚಿತ್ರ ೫.೧೧.೫ ಮೂರನೇ ತಲೆಮಾರಿನವರ ಭೂಹಿಡುವಳಿ ಪ್ರಮಾಣ



ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರನೇ ತಲೆಮಾರಿನ ಗ್ರಾಮಗಳ ಭೂಹಿಡುವಳಿಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ಜಿಲ್ಲೆಯ ಬೇಡ ಬುಡಕಟ್ಟು ಸಮುದಾಯದ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಒಣಭೂಮಿ ಮತ್ತು ನೀರಾವರಿ ಭೂಮಿಗಳನ್ನು ಕೃಷಿಭೂಮಿಗಳನ್ನಾಗಿ ಕುಟುಂಬಗಳು ಜೀವನನಿರ್ವಹಣೆಯ ಆರ್ಥಿಕತೆಯ ಮೂಲವಾಗಿ ಕಂಡುಕೊಂಡಿರುತ್ತದೆ. ಒಟ್ಟಾರೆ ದಾವಣಗೆರೆ ಜಿಲ್ಲಾವಾರು ೨೭೩.೪೦ (ಶೇ. ೫೬.೫೭) ಎಕರೆ ಒಣ ಭೂಹಿಡುವಳಿ ಮತ್ತು ೨೦೯.೯೦ (ಶೇ. ೪೩.೪೩) ನೀರಾವರಿ ಭೂಹಿಡುವಳಿಯನ್ನು ಹೊಂದಿದ್ದು, ಶ್ರೇಣಿವಾರು ಶೇ. ಎ* (ದೊಡ್ಡ ಭೂಹಿಡುವಳಿದಾರರು) = ಶೇ. ೧.೧೧ರಷ್ಟು, ಬಿ*(ಮಧ್ಯಮ ಭೂಹಿಡುವಳಿದಾರರು) = ಶೇ. ೧.೬೭ರಷ್ಟು, ಸಿ* (ಅರೆಮಾದ್ಯಮ ಭೂಹಿಡುವಳಿದಾರರು) = ಶೇ. ೧.೬೭ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೧೦.೫೫ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿ ದಾರರು) = ಶೇ. ೫೭.೭೮ರಷ್ಟಾಗಿದ್ದು, ಎಫ್* (ಭೂರಹಿತ ಕುಟುಂಬಗಳು) = ಶೇ. ೨೭.೨೨ರಷ್ಟು ಕುಟುಂಬಗಳಿರುವುದು ಕಂಡುಬರುತ್ತದೆ.

ಮೂರನೇ ತಲೆಮಾರಿನ ತಾಲೂಕುವಾರು ಬೇಡರ ಕೌಟುಂಬಿಕ ಭೂ ಹಿಡುವಳಿಗಳನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೩.೩೩ರಷ್ಟು, ಸಿ* = ಶೇ. ೩.೩೩ರಷ್ಟು, ಡಿ* = ಶೇ. ೨೦ರಷ್ಟು, ಇ* = ಶೇ. ೬೩.೩೩ರಷ್ಟಾಗಿದ್ದು, ಎಫ್* = ಶೇ. ೧೦ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೩ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಬಿ* = ಶೇ. ೩.೩೩ರಷ್ಟು, ಸಿ* = ಶೇ. ೩.೩೩ರಷ್ಟು, ಡಿ* = ಶೇ. ೧೩.೩೩ರಷ್ಟು, ಇ* = ಶೇ. ೫೩.೩೩ರಷ್ಟಾಗಿದ್ದು, ಎಫ್* = ಶೇ. ೨೬.೬೬ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೩ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಡಿ* = ಶೇ. ೧೦ರಷ್ಟು, ಇ* = ಶೇ. ೬೬.೬೬ರಷ್ಟಾಗಿದ್ದು, ಎಫ್* = ಶೇ. ೨೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೩ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಬಿ* = ಶೇ. ೬.೬೬ರಷ್ಟು,

ಡಿ* = ಶೇ. ೬.೬೬ರಷ್ಟು, ಇ* = ಶೇ. ೫೩.೩೩ರಷ್ಟು, ಎಫ್* = ಶೇ. ೩೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೩ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಸಿ* = ಶೇ. ೩.೩೩ರಷ್ಟು, ಡಿ* = ಶೇ. ೬.೬೬ರಷ್ಟು, ಇ* = ಶೇ. ೫೬.೬೬ರಷ್ಟಾಗಿದ್ದು, ಎಫ್* = ಶೇ. ೩೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ(ಅಂಕಿಅಂಶಗಳು: ಪು.೨೫೩ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ೩೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಲಾಗಿ ಎ* = ಶೇ. ೬.೬೬ರಷ್ಟು, ಬಿ* = ಶೇ. ೧೦ರಷ್ಟು, ಸಿ* = ಶೇ. ೧೦ರಷ್ಟು, ಡಿ* = ಶೇ. ೨೦ರಷ್ಟು, ಇ* = ಶೇ. ೨೦ರಷ್ಟಾಗಿದ್ದು, ಎಫ್* = ಶೇ. ೩೩.೩೩ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೩ ನೋಡಿ).

ಮೂರನೇ ತಲೆಮಾರಿನ ಬೇಡಬುಡಕಟ್ಟಿನ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಆರು ತಾಲೂಕಗಳನ್ನೊಳಗೊಂಡು ಸೇರಿದಂತೆ ೪೮ ಭೂರಹಿತ ಕುಟುಂಬಗಳು ಕಂಡುಬರುತ್ತದೆ. ಶೇ. ೫೬.೫೭ ಎಕರೆಗಳಷ್ಟು ಕುಟುಂಬಗಳು ಮಳೆಯಾಧಾರಿತ ಭೂಮಿಗಳನ್ನು ಹೊಂದಿರುವ ಕುಟುಂಬಗಳಾಗಿ ಹಾಗೂ ಹರಪನಹಳ್ಳಿ ಹೊರತುಪಡಿಸಿ ಉಳಿದೆಲ್ಲ ತಾಲೂಕುವಾರು ಸೇರಿದಂತೆ ಶೇ. ೪೩.೪೩ ಎಕರೆಗಳಷ್ಟು ನೀರಾವರಿ ಕೃಷಿಭೂಮಿಗಳನ್ನು ಹೊಂದಿರುವ ಕುಟುಂಬಗಳು ಕಂಡುಬರುತ್ತಿವೆ. ಮುಂಗಾರು ಮತ್ತು ಹಿಂಗಾರು ಮಳೆಯನ್ನು ಆಶ್ರಯಿಸಿ ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಮೊದಲನೇ ಹಾಗೂ ಎರಡನೇ ತಲೆಮಾರಿನ ಭೂಹಿಡುವಳಿಗಳಲ್ಲಿ ಒಣಭೂಮಿಗಳನ್ನು ಹೊಂದಿರುವ ಹೆಚ್ಚು ಕುಟುಂಬಗಳು ಗಮನಿಸದರೆ, ಮೂರನೇ ತಲೆಮಾರು ನೀರಾವರಿ ಮತ್ತು ಒಣಭೂಮಿಗಳ ಗಾತ್ರವು ಸಮಾನಾಂತರವಾಗಿ ಗಳಿಸಿರುವುದು ಒಂದುಕಡೆಯಾದರೆ ಒಟ್ಟು ೧೮೦ ಕುಟುಂಬಗಳಲ್ಲಿ ಶೇ.೨೭.೨೨(೪೮)ರಷ್ಟು ಕುಟುಂಬಗಳು ಭೂರಹಿತ ಕುಟುಂಬಗಳಾಗಿದ್ದು ಇತರೆ ವೃತ್ತಿಗಳಲ್ಲಿ ತೊಡಗಿ ಕೊಂಡಿರುವುದು ಆರ್ಥಿಕ ಭದ್ರತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ. ಭೂಹಿಡುವಳಿಗಳನ್ನು ಹೊಂದಿರುವು ಕುಟುಂಬಗಳು ತಮ್ಮ ಮೊದಲನೇ ಮತ್ತು ಎರಡನೇ ತಲೆಮಾರುಗಳಿಂದ ಬಂದ ಭೂಮಿಯನ್ನು ಸಾಧ್ಯವಾದ ರೀತಿಯಲ್ಲಿ ಉಳಿಸಿಕೊಂಡು ಅದನ್ನೇ ಮುಂದುವರಿಕೆಯಾಗಿಸಿ ಉಳುಮೆಯನ್ನು ಮಾಡುತ್ತಿರುವುದರ ಜೊತೆಗೆ ಆಧುನಿಕತೆಯ ಭರಟೆಯಲ್ಲಿ ಇಂದಿನ ದಿನನಿತ್ಯದ ಬೆಲೆಏರಿಕೆಯಿಂದ ಹಾಗೂ ಉತ್ತಮ ಶಿಕ್ಷಣದ ಕಲಿಕೆಯ ಲಾಭದಿಂದಾಗಿ ಇತರೆ ವೃತ್ತಿಗಳನ್ನು ಅಳವಡಿಸಿಕೊಂಡು ಜೀವನ ನಿರ್ವಹಣೆಯನ್ನು ನಿಭಾಯಿಸುವುದಾಗಿದೆ. ಮೊದಲನೇ

ಮತ್ತು ಎರಡನೇ ತಲೆಮಾರುಗಳು ಭೂಮಿಯ ಉಳುಮೆಯ ಜೊತೆಗೆ ಪಶುಪಾಲನೆಗಳನ್ನು ಹೊಂದಿದ್ದರು. ಆದರೆ, ಮೂರನೇ ತಲೆಮಾರು ಪಶುಸಂಪತ್ತು ತುಂಬಾ ವಿರಳವಾಗಿದೆ.

ಮೊದಲನೇ ತಲೆಮಾರಿನವರಲ್ಲಿ ಭೂಹಿಡುವಳಿಯ ಪ್ರಮಾಣವನ್ನು ಗಮನಿಸಿದಾಗ ಇವರಲ್ಲಿ ಭೂ ಹಿಡುವಳಿ ಹೆಚ್ಚಾಗಿರುವುದು ಕಂಡುಬರುತ್ತದೆ. ಕಾರಣ ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡುಬರುವುದರಿಂದ ಕುಟುಂಬದಲ್ಲಿನ ಸದಸ್ಯರೆಲ್ಲರೂ ಒಟ್ಟಾಗಿ ದುಡಿಯುವಂತಹ ಮನೋಭಾವನೆಯನ್ನು ಹೊಂದಿದವರಾಗಿದ್ದರಿಂದ ಎಲ್ಲರ ಭೂಮಿಯ ಪಾಲು ಒಂದೆಡೆಗಿರುತ್ತಿತ್ತು. ಎಲ್ಲರ ಭೂಮಿಯ ಪಾಲು ಒಂದೆಡೆಯಾಗಿರುತ್ತಿತ್ತು. ಒಟ್ಟಾಗಿ ಕೂಡಿ ದುಡಿಯುತ್ತಿದ್ದರು. ಅಲ್ಲದೇ ಈ ತಲೆಮಾರಿನ ಜನರು ಕೃಷಿಯನ್ನೇ ತಮ್ಮ ಪ್ರಧಾನ ಕಸುಬನ್ನಾಗಿಸಿಕೊಂಡಿದ್ದರು. ಆದ್ದರಿಂದ ಅವರಲ್ಲಿ ಭೂ ಹಿಡುವಳಿಯ ಪ್ರಮಾಣ ಹೆಚ್ಚಾಗಿ ಕಂಡುಬಂದರೆ, ಎರಡನೇ ತಲೆಮಾರಿನ ಹೊತ್ತಿಗಾಗಲೇ ಅವಿಭಕ್ತ ಕುಟುಂಬಗಳು ವಿಘಟನೆಯತ್ತ ಸಾಗಿ ವಿಭಕ್ತ ಕುಟುಂಬಗಲಾಗಿ ಪರಿವರ್ತನೆಯಾದವು. ಇದರಿಂದ ತಾವು ಹೊಂದಿರುವ ಭೂಮಿಯಲ್ಲಿಯೂ ಸಹ ವಿಘಟನೆಯುಂಟಾಗಿ ಭೂಮಿಯಲ್ಲಿ ಹಂಚಿಕೆಯಾಯಿತು. ಇನ್ನು ಮೂರನೇ ತಲೆಮಾರಿನ ಹೊತ್ತಿಗಾಗಲೇ ಭೂಹಿಡುವಳಿಯ ಪ್ರಮಾಣ ತೀರಾ ಕಡಿಮೆಯಾಗಿರುವುದು. ಕಾರಣ ಔದ್ಯೋಗಿಕರಣದ ಪ್ರಭಾವ, ಗುಡಿಕೈಗಾರಿಕೆಗಳ ನಾಶ, ಪಾಶ್ಚಾತ್ಯ ಶಿಕ್ಷಣದ ಪ್ರಭಾವ, ಸಾರಿಗೆ ಸಂಪರ್ಕಗಳ ಬೆಳವಣಿಗೆ, ಮಾದ್ಯಮಗಳ ಪ್ರಭಾವ, ಭಾರತೀಯ ಕಾನೂನು ವ್ಯವಸ್ಥೆ ಹೀಗೆ ಮುಂತಾದ ಪ್ರಭಾವಗಳಿಂದ ಅಲ್ಲದೇ ದುಡಿಯುವ ಭೂಮಿಯಲ್ಲಿ ಎಂ.ಎನ್.ಸಿ.ಗಳಂತಹ ಕಂಪನಿಗಳು ತಲೆ ಎತ್ತುತ್ತಿರುವುದು ಮತ್ತೊಂದು ಕಾರಣ ವಾಗಿರುವುದು. ಅಲದೇ ರೈತನಿಗೆ ಸಕಾಲಕ್ಕೆ ಮಳೆಗಳು ಬಾರದೇ, ಬಂದ ಮಳೆಯನ್ನಾಶ್ರಯಿಸಿ ಬೆಳೆದ ಬೆಳೆಗೆ ತಕ್ಕ ಬೆಲೆ ಸಿಗದಿರುವುದು ಒಂದು ಕಾರಣವಾಗಿದೆ. ಇದರಿಂದ ರೈತನು ತಾನು ವರ್ಷಕ್ಕೆ ಗಳಿಸುವ ಆದಾಯವನ್ನು ತಿಂಗಳಿಗೆ ಗಳಿಸುತ್ತೇನೆಂಬ ಭಾವನೆಯಿಂದ ನಗರಗಳತ್ತ ವಲಸೆ ಹೋಗಿ ಕೈಗಾರಿಕೆಗಳಲ್ಲಿ ಅಥವಾ ಇತರೇ ಆದಾಯ ತರುವಂತಹ ಚಟುವಟಿಕೆಗಳಲ್ಲಿ ತೊಡಗಿರುವುದು ಇಂದು ಅಲ್ಪಸ್ವಲ್ಪ ಪ್ರಮಾಣದಲ್ಲಿ ಪೂರ್ವಿಕರಿಂದ ಬಂದ ಹಂಚಿಕೆಯ ಭೂಮಿಗಳು ಸಹ ಹಲವಾರು ಕುಟುಂಬಗಳಲ್ಲಿ ಈಗಾಗಲೇ ಕೈಬಿಟ್ಟು ಹೋಗಿರುವುದನ್ನು ಹಾಗೆಯೇ ತಲೆಮಾರುಗಳಿಂದ ತಲೆಮಾರುಗಳಿಗೆ ಆಗಿರುವಂತ ಬದಲಾವಣೆಗಳಾಗಿವೆ.

೫.೧೨ ಮೊದಲನೇ ತಲೆಮಾರು ಅವಲಂಬಿಸಿದ ಪಶುಪಾಲನೆ

ಬೇಟೆಗಾರಿಕೆಯಿಂದ ವಿಮುಖರಾದ ಬೇಡಬುಡಕಟ್ಟು ಗುಡ್ಡಗಾಡಿನ ಕುರುಚಲು ಕಾಡುಗಳಲ್ಲಿ ಸುಲಭವಾಗಿ ಜೀವನ ನಿರ್ವಹಣೆ ಮಾಡಲು ಅನುಕೂಲವಾಗುವ ಪಶುಪಾಲನೆಯನ್ನು ಜೀವನಾಧಾರ ವೃತ್ತಿಯಾಗಿ ಆಯ್ಕೆ ಮಾಡಿಕೊಂಡರು. ಬಹುತೇಕ ಬೇಡರು ಪಶುಪಾಲನೆಯನ್ನು ನೆಚ್ಚಿಯೇ ಜೀವನ ನಿರ್ವಹಣೆ ಮಾಡತೊಡಗಿದರು.


ಮೊದಲ ತಲೆಮಾರಿನವರಲ್ಲಿ ಬಹುತೇಕರು ಜೀತಗಾರಿಕೆಯಿಂದಲೇ ಹೊಟ್ಟೆ ಹೊರೆದು ಕೊಳ್ಳುತ್ತಿದ್ದುದಾಗಿ ತಿಳಿದುಬರುತ್ತದೆ. ಜೀತಗಾರಿಕಾ ನಿಷೇಧ ಕಾಯ್ದೆ ಬಂದ ತರುವಾಯ ಜೀತಗಾರಿಕೆಯಿಂದ ಇವರಿಗೆ ಮುಕ್ತಿ ದೊರೆಯಿತು. ಜೀತಗಾರಿಕೆಯಲ್ಲಿ ಬಹುತೇಕ ಬೇಡರು ಶ್ರೀಮಂತರ ದನ, ಕುರಿ ಕಾಯುವುದು, ಅವರ ಭೂಮಿಗಳಲ್ಲಿ ಕೃಷಿ ಕೆಲಸ ನಿರ್ವಹಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರಂತೆ. ಮ್ಯಾಸನಾಯಕರ ಮುಖ್ಯ ವೃತ್ತಿ ಪಶುಪಾಲನೆಯಾಗಿದ್ದು ಅದನ್ನು ಹಳೆ ತಲೆಮಾರಿನ ಜನ ಹೆಣ್ಣು ಗಂಡು ಭೇದವಿಲ್ಲದೆ ಅನುಸರಿಸುತ್ತಿದ್ದು, ಅಲ್ಲದೆ ಮಹಿಳೆಯರು ಸಹ ಪಶುಪಾಲನಾ ವೃತ್ತಿಯಲ್ಲಿ ತೊಡಗಿದ್ದು ಅವರೆಲ್ಲಾ ತಮ್ಮ ಕುಟುಂಬದ ಪುರುಷರಿಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಬೇಡರ ತಲೆಮಾರುಗಳ ಪಶುಪಾಲನೆಯನ್ನು ಹೊಂದಿರುವ ಅಂಕಿಅಂಶಗಳನ್ನು ಈ ಕೆಳಕಂಡಂತೆ ನೋಡಬಹುದು.

ಕೋಷ್ಟಕ ೪.೧೨.೧ ಮೊದಲ ತಲೆಮಾರಿನವರ ಪಶುಸಂಪತ್ತು ಪ್ರಮಾಣ

ಕ್ರಸಂ.	ನೆಲೆಗಳು	ಪಶುಸಂಪತ್ತು (ಸಂಖ್ಯೆಗಳಲ್ಲಿ)						
		ಎತ್ತು	ಆಕಳು, ಕರು	ಎಮ್ಮೆ, ಕೋಣ	ಕುರಿ	ಮೇಕೆ	ಕೋಳಿ	ಒಟ್ಟು
1	ಚನ್ನಗಿರಿ	೮೦	೧೩೭	೩೭	೧೦೮೯	೪೫೬	೩೫೨	೨೧೫೧
2	ದಾವಣಗೆರೆ	೮೪	೯೭	೪೫	೮೬೯	೫೧೧	೧೯೩	೧೭೯೯
3	ಹರಪನಹಳ್ಳಿ	೮೨	೮೦	೫೧	೧೨೨೦	೫೫೫	೨೭೭	೨೨೬೫
4	ಹರಿಹರ	೭೪	೧೦೬	೯೭	೮೭೫	೩೭೦	೨೬೬	೧೭೮೮
5	ಹೊನ್ನಾಳಿ	೯೪	೧೬೧	೮	೯೭೫	೪೩೦	೨೩೨	೧೯೦೦
6	ಜಗಳೂರು	೮೮	೧೩೬	೫೫	೩೦೬೫	೭೩೦	೧೨೩	೪೧೯೭
ಒಟ್ಟು		೫೦೨	೭೧೭	೨೯೩	೮೦೯೩	೩೦೫೨	೧೪೪೩	೧೪೧೦೦

ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೊದಲನೇ ತಲೆಮಾರಿನ ಗ್ರಾಮಗಳ ಪಶುಪಾಲನೆಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ಜಿಲ್ಲೆಯ ಬೇಡರ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯಿಂದ ಕುಟುಂಬಗಳು ಜೀವನನಿರ್ವಹಣೆಯ ಆರ್ಥಿಕ ಭದ್ರತೆಯ ಮೂಲವನ್ನು ಕಂಡುಕೊಂಡಿರುವುದು ಕೋಷ್ಟಕ ಮತ್ತು ವೃತ್ತಚಿತ್ರದಲ್ಲಿ ಗಮನಿಸಬಹುದು.

ವೃತ್ತಚಿತ್ರ ೪.೧೨.೨ ಮೊದಲ ತಲೆಮಾರಿನವರ ಪಶುಸಂಪತ್ತು ಪ್ರಮಾಣ



೫.೧೩ ಎರಡನೇ ತಲೆಮಾರು ಅವಲಂಬಿಸಿದ ಪಶುಪಾಲನೆ


ಎರಡನೇ ತಲೆಮಾರಿಗೆ ಬರುವಷ್ಟರಲ್ಲಿ ಹಳೆ ತಲೆಮಾರಿನ ವೃತ್ತಿಗಳೊಂದಿಗೆ ಹೊಸ ವೃತ್ತಿಗಳೂ ಸೇರ್ಪಡೆಗೊಂಡಿರುವುದನ್ನು ಕಾಣುತ್ತೇವೆ. ಎರಡನೇ ತಲೆಮಾರಿನವರಲ್ಲಿ ಸಾಮಾನ್ಯವಾಗಿ ಕಂಡು ಬರುವ ವೃತ್ತಿಗಳು ಈ ಕೆಳಗಿನಂತಿವೆ:

ಹಳೆ ತಲೆಮಾರಿನ ವೃತ್ತಿಗಳೊಂದಿಗೆ ಹೊಸ ವೃತ್ತಿಗಳೂ ಸೇರ್ಪಡೆಗೊಂಡಿರುವುದನ್ನು ಕಾಣುತ್ತೇವೆ. ಪಶುಪಾಲನೆಯನ್ನು ಕೇವಲ ದನ ಮತ್ತು ಎಮ್ಮೆಗಳಿಗೆ ಸೀಮಿತಗೊಳಿಸಿಕೊಳ್ಳದೆ ಅದನ್ನು ಸಣ್ಣ ಪ್ರಮಾಣದ ಕುರಿ ಸಾಕಾಣಿಕೆ ಹಾಗೂ ಆಡುಗಳ ಸಾಕಾಣಿಕೆಗೆ ವಿಸ್ತರಿಸಿಕೊಂಡಿರುವುದಾಗಿ ತಿಳಿಸಿದರು. ದನಗಳ ದೊಡ್ಡ ಮಂದೆಯನ್ನು ಸಾಕುತ್ತಿದ್ದ ಹಳೆ ತಲೆಮಾರಿನವರಿಗಿಂತ ಭಿನ್ನವಾಗಿ ಇವರು ಪಶುಪಾಲನೆ ಮಾಡುತ್ತಿದ್ದಾರೆ. ದನಗಳನ್ನು ಸಾಕುತ್ತಿರುವರಾದರೂ ಹಳೆ ತಲೆಮಾರಿನವಷ್ಟು ದೊಡ್ಡ ಸಂಖ್ಯೆಯಲ್ಲಿ ದನಗಳನ್ನು ಸಾಕದೆ ಸಾಕುವ ದನಗಳ ಪ್ರಮಾಣವನ್ನು ಮಿತಿಗೊಳಿಸಿಕೊಂಡಿದ್ದಾರೆ. ದನಗಳನ್ನು ಯಾಕೆ ಹೆಚ್ಚಾಗಿ ಸಾಕುತ್ತಿಲ್ಲ ಎನ್ನುವ ಪ್ರಶ್ನೆಗೆ ಅವರು ಮಳೆ ಬೆಳೆ ಸರಿಯಾಗಿಲ್ಲ. ದನಗಳನ್ನು ಮೇಯಿಸುವ ಗೋಮಾಳಗಳು ಇಂದು ಕಣ್ಮರೆಯಾಗಿವೆ. ಕಾಡಿನ ಪ್ರಮಾಣವೂ ಕಡಿಮೆಯಾಗಿದೆ. ಇಂತಹ ಸ್ಥಿತಿಯಲ್ಲಿ ಹಳೆ ತಲೆಮಾರಿನವರಂತೆ ದನಗಳನ್ನು ಸಾಕುವುದು ಕಷ್ಟ ಎನ್ನುವ ಉತ್ತರ ನೀಡುತ್ತಾರೆ. ಇನ್ನು ಕುರಿ, ಮೇಕೆಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು. ಹೀಗಾಗಿ ಅವುಗಳನ್ನು ಮಿತಿಯಾಗಿ ಸಾಕುತ್ತೇವೆ ಎಂದು ತಿಳಿಸುತ್ತಾರೆ.(ನೋಡಿ: ಕೋಷ್ಟಕ–೫.೧೩)

ಕೋಷ್ಟಕ ೪.೧೩.೧ ಎರಡನೇ ತಲೆಮಾರಿನವರ ಪಶುಸಂಪತ್ತು ಪ್ರಮಾಣ

ಕ್ರಸಂ.	ನೆಲೆಗಳು	ಪಶುಸಂಪತ್ತು (ಸಂಖ್ಯೆಗಳಲ್ಲಿ)						
		ಎತ್ತು	ಆಕಳು, ಕರು	ಎಮ್ಮೆ, ಕೋಣ	ಕುರಿ	ಮೇಕೆ	ಕೋಳಿ	ಒಟ್ಟು
1	ಚನ್ನಗಿರಿ	೩೯	೩೯	೭	೩೧೮	೧೩೨	೬೧	೫೯೬
2	ದಾವಣಗೆರೆ	೫೪	೬೭	೧೨	೩೪೧	೧೮೩	೨೫	೬೮೨
3	ಹರಪನಹಳ್ಳಿ	೫೦	೪೭	೨	೨೨೦	೫೮	೫೦	೪೨೭
4	ಹರಿಹರ	೫೪	೨೮		೪೫	೩೫		೧೬೨
5	ಹೊನ್ನಾಳಿ	೫೨	೩೭	೪	೩೨೫	೯೫		೫೧೩
6	ಜಗಳೂರು	೪೯	೩೬	೧೭	೬೮೬	೨೦೪	೧೫	೧೦೦೭
ಒಟ್ಟು		೨೯೮	೨೫೪	೪೨	೧೯೩೫	೭೦೭	೧೫೧	೩೫೮೭

ವೃತ್ತಚಿತ್ರ ೪.೧೩.೨ ಎರಡನೇ ತಲೆಮಾರಿನವರ ಪಶುಸಂಪತ್ತು ಪ್ರಮಾಣ



ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೊದಲನೇ ತಲೆಮಾರಿನ ಗ್ರಾಮಗಳ ಪಶುಸಂಪತ್ತನ್ನ ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ಜಿಲ್ಲೆಯ ಬೇಡ ಬುಡಕಟ್ಟು ಸಮುದಾಯದ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯಿಂದ ಕುಟುಂಬಗಳು ಜೀವನನಿರ್ವಹಣೆಯ ಆರ್ಥಿಕ ಭದ್ರತೆಯ ಮೂಲವನ್ನು ಕಂಡುಕೊಂಡಿರುವುದು ಕೋಷ್ಟಕ ಮತ್ತು ವೃತ್ತಚಿತ್ರದಲ್ಲಿ ಗಮನಿಸಬಹುದು.

೫.೧೪ ಮೂರನೇ ತಲೆಮಾರು ಅವಲಂಬಿಸಿದ ಪಶುಪಾಲನೆ

ಮೂರನೇ ತಲೆಮಾರಿಗೆ ಬರುವಷ್ಟರಲ್ಲಿ ಮೊದಲನೇ ಮತ್ತು ಎರಡನೇ ತಲೆಮಾರಿನ ವೃತ್ತಿಗಳೊಂದಿಗೆ ಅನುಸರಿಸಿಕೊಂಡು ಬಂದಂತಹ ಪಶುಸಂಗೋಪನೆ ಮುಂದುವರಿಯದೆ ಇರುವುದು ಕಾಣಸಿಗುತ್ತದೆ.




ಹಳೆ ತಲೆಮಾರಿನ ವೃತ್ತಿಗಳೊಂದಿಗೆ ಹೊಸ ವೃತ್ತಿಗಳೂ ಸೇರ್ಪಡೆಗೊಂಡಿರುವುದನ್ನು ಕಾಣುತ್ತೇವೆ. ಪಶುಪಾಲನೆಯನ್ನು ಕೇವಲ ದನ ಮತ್ತು ಎಮ್ಮೆಗಳಿಗೆ ಸೀಮಿತಗೊಳಿಸಿಕೊಳ್ಳದೆ ಅದನ್ನು ಸಣ್ಣ ಪ್ರಮಾಣದ ಕುರಿ ಸಾಕಾಣಿಕೆ ಹಾಗೂ ಆಡುಗಳ ಸಾಕಾಣಿಕೆಗೆ ವಿಸ್ತರಿಸಿಕೊಂಡಿರುವುದಾಗಿ ತಿಳಿಸಿದರು. ದನಗಳ ದೊಡ್ಡ ಮಂದೆಯನ್ನು ಸಾಕುತ್ತಿದ್ದ ಮೊದಲನೇ ಮತ್ತು ಎರಡನೇ ತಲೆಮಾರಿನವರು ದನಗಳನ್ನು ಸಾಕುತ್ತಿರುವರಾದರೂ ಹಳೆ ತಲೆಮಾರಿನವಷ್ಟು ದೊಡ್ಡ ಸಂಖ್ಯೆಯಲ್ಲಿ ದನಗಳನ್ನು ಸಾಕದೆ ಸಾಕುವ ದನಗಳ ಪ್ರಮಾಣವನ್ನು ಮಿತಿಗೊಳಿಸಿಕೊಂಡಿದ್ದಾರೆ. ಪಶುಪಾಲನೆ ಯಾಕೆ ಹೆಚ್ಚಾಗಿ ಸಾಕಾಣಿಕೆ ಮಾಡದೇ ಇರುವ ಪ್ರಶ್ನೆಗೆ ಅವರು ಮಳೆ ಬೆಳೆ ಉತ್ತಮವಾಗದೇ ಇರುವುದು ಜೊತೆಗೆ ದನಗಳನ್ನು ಮೇಯಿಸುವ ಗೋಮಾಳಗಳು ಇಂದು ಕಣ್ಮರೆಯಾಗಿವೆ. ಕಾಡಿನ ಪ್ರಮಾಣವೂ ಕಡಿಮೆಯಾಗಿದೆ. ಇಂತಹ ಸ್ಥಿತಿಯಲ್ಲಿ ದನಗಳನ್ನು ಸಾಕುವುದು ಕಷ್ಟ. ಭೂಹಿಡುವಳಿಯನ್ನು ಮತ್ತು ಇದರಿಂದ ಉಳುಮೆ ಮಾಡುವ ಕುಟುಂಬಗಳು ಮಾತ್ರ ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡಿರುವುದು ಗಮನಿಸಬಹುದು. (ನೋಡಿ: ಕೋಷ್ಟಕ–೫.೧೪)

ಕೋಷ್ಟಕ ೪.೧೪.೧ ಮೂರನೇ ತಲೆಮಾರಿನವರ ಪಶುಸಂಪತ್ತು ಪ್ರಮಾಣ

ಕ್ರ.ಸಂ.	ನೆಲೆಗಳು	ಪಶುಸಂಪತ್ತು (ಸಂಖ್ಯೆಗಳಲ್ಲಿ)						
		ಎತ್ತು	ಆಕಳು, ಕರು	ಎಮ್ಮೆ, ಕೋಣ	ಕುರಿ	ಮೇಕೆ	ಕೋಳಿ	ಒಟ್ಟು
1	ಚನ್ನಗಿರಿ	೨	೮	೨	೧			೧೩
2	ದಾವಣಗೆರೆ	೨	೫		೨			೯
3	ಹರಪನಹಳ್ಳಿ	೧೬	೧೪	೪	೩			೩೭
4	ಹರಿಹರ	೮	೪					೧೨
5	ಹೊನ್ನಾಳಿ	೬	೬		೨			೧೪
6	ಜಗಳೂರು	೧೪	೧೬	೪	೧೨೩	೧೦		೧೬೭
ಒಟ್ಟು		೪೮	೫೩	೧೦	೧೩೧	೧೦		೨೫೨

ವೃತ್ತಚಿತ್ರ ೪.೧೪.೨ ಮೂರನೇ ತಲೆಮಾರಿನವರ ಪಶುಸಂಪತ್ತು ಪ್ರಮಾಣ



ದಾವಣಗೆರೆ ಜಿಲ್ಲೆಯ ತಾಲೂಕುವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರನೇ ತಲೆಮಾರಿನ ಗ್ರಾಮಗಳ ಪಶುಸಂಪತ್ತುಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ದಾವಣಗೆರೆ ಜಿಲ್ಲೆಯ ಬೇಡರ ೧೮೦ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯಿಂದ ಕುಟುಂಬಗಳು ಜೀವನ ನಿರ್ವಹಣೆಯ ಆರ್ಥಿಕ ಭದ್ರತೆಯ ಮೂಲವನ್ನು ಕಂಡುಕೊಂಡಿರುವುದು ಕೋಷ್ಟಕ ಮತ್ತು ವೃತ್ತಚಿತ್ರದಲ್ಲಿ ಗಮನಿಸಬಹುದು.

ಮಾನವನಿಗೆ ಬೇಟೆಯ ಹಂತದಿಂದ ಮುಂದುವರೆದ ಹಂತವೇ ಪಶುಪಾಲನಾ ಹಂತ. ಮೊದಲನೇ ತಲೆಮಾರಿನವರಲ್ಲಿ ಪಶುಸಂಪತ್ತನ್ನು ಗಮನಿಸಿದಾಗ ಇವರಲ್ಲಿ ಹೇರಳವಾಗಿ ಪಶುಸಂಪತ್ತಿರುವುದು. ಕಾರಣ ಪಶುಗಳೇ ಇವರಿಗೆ ಆದಾಯ ತರುವಂತಹ ಬಂಡವಾಳದ ಮೂಲಗಳಾಗಿವೆ. ಅದರಲ್ಲೂ ಮುಖ್ಯವಾಗಿ ಭೂಮಿಯನ್ನು ಉಳುಮೆ ಮಾಡಲು ಒಂದೆಡೆ ಎತ್ತುಗಳು ರೈತನ ಜೀವನಾಡಿಯಾಗಿದೆ. ಆಕಳು, ಎಮ್ಮೆಗಳಿಂದ ಹೈನುಗಾರಿಕೆಯ ಉಪಯೋಗದೊಂದಿಗೆ ಜೀವನ ಸಾಗಿಸುತ್ತಿದ್ದಾರೆ, ಕುರಿಗಳು ಮತ್ತು ಮೇಕೆಗಳ ಪಾಲನೆಯಿಂದ ಈ ಕುಟುಂಬಗಳು ಹೆಚ್ಚಿನ ಆರ್ಥಿಕ ಭದ್ರತೆಯ ಭರವಸೆಯನ್ನು ಹೊಂದಿದ್ದವರಾಗಿದ್ದರು. ಇವುಗಳಿಗಾಗಿ ಪ್ರತ್ಯೇಕ ಹಟ್ಟಿ ಅಥವಾ ಕೊಟ್ಟಿಗೆಗಳನ್ನು ನಿರ್ಮಿಸಿ ಅವುಗಳ ಆರೈಕೆ, ಪಾಲನೆಗಳು ಹಾಗೂ ಅವುಗಳಿಂದ ದೊರೆಯುತ್ತಿದ್ದ ಸಾವಯಗೊಬ್ಬರದ ಬಳಕೆಯನ್ನು ತಮ್ಮ ಭೂಮಿಗಳಿ ಉಪಯೋಗಿಸಿ ಕೊಳ್ಳುತ್ತಿದ್ದರು. ಆದರೆ ಎರಡನೇ ತಲೆಮಾರಿನ ಹತ್ತಿರಕ್ಕೆ ಬರುವವೇಳೆಗೆ ಪಶುಸಂಗೋಪನೆ ಸ್ವಲ್ಪಮಟ್ಟಿಗೆ ಕ್ಷೀಣಿಸುತ್ತಾ ಬಂತು. ಕಾರಣ ಕಾಡುಗಳ ನಾಶ, ಅರಣ್ಯ ಸಂರಕ್ಷಣೆಯ ಕಾಯ್ದೆ, ಸರಿಯಾಗಿ ಸಕಾಲಕ್ಕೆ ಮಳೆಬಾರದೆ ಮೇವು ಸಿಗದೆ, ಬರಗಾಲದ ಸೂಚನೆಗಳಿಂದ ಇವುಗಳ ಪಾಲನೆ ಕಡಿಮೆಯಾಯಿತು. ಹೀಗೆ ಮೂರನೇ ತಲೆಮಾರಿನ ಕಾಲಕ್ಕೆ ಪಶುಸಂಗೋಪನೆಯನ್ನು ಗಮನಿಸಿದರೆ ಇವುಗಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಕಾರಣ ಜಾಗತೀಕರಣದ ಪ್ರಭಾವ, ಭೂ ಉಳುಮೆಯಲ್ಲಿ ಬಳಸುವ ಆಧುನಿಕ ಯಂತ್ರೋಪಕರಣಗಳ ಬಳಕೆ, ಸಾವಯವ ಗೊಬ್ಬರದ ಬದಲಾಗಿ ರಾಸಾಯನಿಕ ಗೊಬ್ಬರಗಳ ಬಳಕೆ. ಪ್ರಸ್ತುತ ಸ್ಥಿತಿಯಲ್ಲಿ ಪಶುಸಂಪತ್ತು ಈ ಹಿಂದೆ ಇದ್ದಂತೆ ಹಿಂಡು ಹಿಂಡಾಗಿ ಸಾಕುತ್ತಿದ್ದ ಎತ್ತು, ಅಕಳು, ಎಮ್ಮೆ, ಕುರಿಗಳು, ಮೇಕೆಗಳು ಇಂದು ಎಲ್ಲೋ ಮನೆಯ ಮುಂದೆ ೧-೨ ಕಟ್ಟಿರುವುದನ್ನು ಕಾಣುತ್ತೇವೆ. ಅಲ್ಲದೇ ಹಿಂದೆ ಸಿಗುತ್ತಿದ್ದ ಹೈನುಗಾರಿಕೆ ಸಂಪತ್ತು ಅವನತಿಯತ್ತ ಸಾಗಿ ತನ್ನ ದೇಶೀಯ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಪ್ರಸ್ತುತ ದಿನಮಾನಗಳಲ್ಲಿ ಹಾಲಿಗಾಗಿ ಪರದಾಡುವಂತಹ ಸ್ಥಿತಿಯುಂಟಾಗಿದೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿರುವುದು ಅನಿವಾರ್ಯವಾಗಿ ನಿಂತಿದೆ.

ಮೂರನೇ ತಲೆಮಾರಿಗೆ ಬಂದರೆ ಬಹುತೇಕ ಎರಡನೇ ತಲೆಮಾರಿನವರಿಗಿಂತ ಆರ್ಥಿಕವಾಗಿ ಸಬಲರಾಗಿದ್ದಾರೆ. ತಳವಾರಿಕೆ ಕೇವಲ ಇವರ ಹೆಸರಿನ ಹಿಂದೆ ಇನ್ಸಿಯಲ್ ಆಗಿ ಮಾತ್ರ

ಉಳಿದಿದೆ. ಕೃಷಿಯ ಪ್ರಮಾಣ ಕಡಿಮೆಯಾಗಿದ್ದು, ಎರಡನೇ ತಲೆಮಾರಿನವರಲ್ಲಿ ಆರು ತಾಲೂಕುಗಳ ೧೮ ಗ್ರಾಮಗಳ ನಡುವೆ ೨೫೯ ಜನರು ಕೃಷಿಕರಿದ್ದಾರೆ. ಮೂರನೇ ತಲೆಮಾರಿನಲ್ಲಿ ಇದೇ ಗ್ರಾಮಗಳಲ್ಲಿ ೩೮ ಬೇಡರ ಕೃಷಿಕರು ಕಂಡುಬರುತ್ತಾರೆ. ಅಂದರೆ ಕೇಲವು ಕುಟುಂಬಗಳು ಮಾತ್ರ ತಮ್ಮ ಹಿರಿಯರಿಂದ ಬಂದ ಹಂಚಿಕೆಯ ಭೂಮಿಗಳನ್ನೇ ಸಾಗುವಳಿ ಮಾಡುತ್ತಿದ್ದಾರೆ.

ಈ ಮೂರು ತಲೆಮಾರುಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಭೂ ಹಿಡುವಳಿಗಳ ಪ್ರಮಾಣಗಳಲ್ಲಿ, ಪಶುಸಂಗೋಪನೆಗಳಲ್ಲಿ ಅನೇಕ ರೀತಿಯ ಪಲ್ಲಟಗೊಂಡಂತೆ ವೃತ್ತಿ ಕೌಶಲ್ಯಗಳೂ ಕೂಡ ಬದಲಾಗಿವೆ.

ಆಧಾರಗಳು

1. Srinivas M N; *Social changes in modern India*, Allied Publication Bombay Pp 123, 1996

೨. ಅದೇ, ಪು ೧೨೫, ೧೯೯೬.

೩. ಅದೇ, ಪು ೧೨೮, ೧೯೯೬

೪. ಕೃಷ್ಣಾರಾವ್ ಎಂ ವಿ., ಕೇಶವಭಟ್ಟ ಎಂ., ಕರ್ನಾಟಕ ಇತಿಹಾಸ ದರ್ಶನ, ಪು ೪೯೧, ೧೯೭೦

೫. ಕಿಟೆಲ್ ಅರ್ಥಕೋಶ; ಸಂಪುಟ ೩; ಪು ೧೨೧೯, ೧೯೭೫

೬. ನರೇಂದ್ರ ರೈ ದೇರ್ಲ; ಬೇಟೆ; ಪುಟ ೧೪, ೨೦೦೭.

೭. ಬೈರಪ್ಪ, ಸಮಾಜ ವಿಕಾಸ ಕ್ರಮ; ಪುಟ ೨೨; ೧೯೪೨.

೮. ಅದೇ, ಪುಟ ೨೨; ೧೯೪೨.

೯. ಈಶ್ವರ ರೈ., ಬೇಟೆಯ ಉರುಳು; ಪುಟ ೧೦; ೧೯೮೨

೧೦. ಶರ್ಮಾ ಆರ್ ಎಸ್., ಪ್ರಾಚೀನ ಭಾರತದಲ್ಲಿ ಶೂದ್ರರು; ಪುಟ ೨೯, ೨೦೦೬

೧೧. ಕೃಷ್ಣಮೂರ್ತಿ ಹನೂರ್, ಮ್ಯಾಸ ಬೇಡರು; ಪುಟ ೨೨; ೧೯೮೨

೧೨. ಸಣ್ಣ ಓಬಯ್ಯ ಎಸ್ ಕೆ., ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ; ಪುಟ ೫೭, ೨೦೦೨, ಅಪ್ರಕಟಿತ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ದಿವಾಕರ್ ಆರ್ ಬಿ., ಕುಮಾರ್ ಆರ್ ಬಿ; ಕರ್ನಾಟಕದಲ್ಲಿ ಕುಮಾರರಾಮನ ಹಬ್ಬ ಆಚರಣೆಗಳು; ಪುಟ ೧೪, ೨೦೧೨, ಅಪ್ರಕಟಿತ.

೧೪. ಬೋರಲಿಂಗಯ್ಯ ಹಿ ಚಿ; ಕಾಡು, ಕಾಂಕ್ರೀಟ್ ಮತ್ತು ಜಾನಪದ; ಪುಟ ೧೫; ೧೯೯೫.

೧೫. ಮಂಜುನಾಥ ಬೇವಿನಕಟ್ಟಿ, ತಾರಿಹಳ್ಳಿ ಹನುಮಂತಪ್ಪ (ಸಂ), ವಾಲ್ಮೀಕಿ ಸಂಪದ ಪುಟ ೫; ೨೦೦೬.

೧೬. ಮೊಗಳ್ಳಿ ಗಣೇಶ, ದಲಿತರು ಮತ್ತು ಜಾಗತೀಕರಣ; ಪು ೧೫

೧೭. ಪ್ರಭಾಕರ ಎ ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು; ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೭, ೨೦೦೦.

೧೮. ಅದೇ, ಪುಟ ೧೭, ೨೦೦೦.

೧೯. ಕರ್ನಾಟಕ ಕೃಷಿ ಗಣತಿ ವರದಿ; ೧೩೪. ೨೦೦೧

೨೦. ಅದೇ ಪು ೧೩೫

೨೧. ಅದೇ ಪು ೧೩೬

೨೨. ಅದೇ ಪು ೧೫೪

ಅಧ್ಯಾಯ – ೬

ಶೈಕ್ಷಣಿಕ ಪಲ್ಲಟಗಳು

೬.೧. ಶಾಲೆಯಿಂದ ಹೊರಗುಳಿದ ೭-೧೪ ವಯೋಮಾನದ ಮಕ್ಕಳ ವಿವರ

೬.೨ ಬೇಡರ ಶೈಕ್ಷಣಿಕ ಸ್ಥಿತಿಗತಿ

೬.೨.೧. ಮೊದಲನೇ ತಲೆಮಾರಿನ ಸಾಕ್ಷರಸ್ಥರ ಪ್ರಮಾಣ

೬.೨.೨. ಎರಡನೇ ತಲೆಮಾರಿನ ಸಾಕ್ಷರಸ್ಥರ ಪ್ರಮಾಣ

೬.೨.೩. ಮೂರನೇ ತಲೆಮಾರಿನ ಸಾಕ್ಷರಸ್ಥರ ಪ್ರಮಾಣ

೬.೩. ಬೇಡರ ಗ್ರಾಮವಾರು ಶೈಕ್ಷಣಿಕ ವಿವರ

೬.೩.೧. ಮೊದಲನೇ ತಲೆಮಾರಿನ ಶೈಕ್ಷಣಿಕ ಹಂತಗಳು

೬.೩.೨. ಎರಡನೇ ತಲೆಮಾರಿನ ಶೈಕ್ಷಣಿಕ ಹಂತಗಳು

೬.೩.೩. ಮೂರನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಅಧ್ಯಾಯ ಆರು

ಶೈಕ್ಷಣಿಕ ಪಲ್ಲಟಗಳು

ಶಿಕ್ಷಣವು ಮಾನವನ ಬದುಕನ್ನು ಅರ್ಥಪೂರ್ಣಗೊಳಿಸುವ ಒಂದು ಬಹು ಆಯಾಮಯುಕ್ತ ಮಾದ್ಯಮವಾಗಿದೆ. ಧ್ಯೇಯವಿಲ್ಲದವನ ಬದುಕು ಚುಕ್ಕಾಣಿ ಇಲ್ಲದ ಹಡಗಿನಂತೆ. ಅದರಿಂದ ಮಾನವನಿಗೆ ಒಂದು ಗುರಿಯನ್ನು ಮುಟ್ಟಿಸುವ ಮಾದ್ಯಮವೇ ಶಿಕ್ಷಣವಾಗಿದೆ. ಶಿಕ್ಷಣವನ್ನು ತ್ರಿಮುಖ ಪ್ರಕ್ರಿಯೆಂತಲೂ ಕರೆಯಬಹುದು. ಅಂದರೆ ಶಿಕ್ಷಣ, ವಿದ್ಯಾರ್ಥಿ ಮತ್ತು ಪೋಷಕರ ನಡುವಿನ ಸಂಬಂಧವನ್ನೊಳಗೊಂಡಿರುತ್ತದೆ. ಶಿಕ್ಷಣದ ಬಗ್ಗೆ ಶೈಕ್ಷಣಿಕ ತಜ್ಞರು ತಮ್ಮದೇ ಆದ ವ್ಯಾಖ್ಯಾಗಳನ್ನು ನೀಡಿದ್ದಾರೆ. ಅರಿಸ್ಟಾಟಲ್ ಅವರ ಪ್ರಕಾರ ಶಿಕ್ಷಣವೆಂದರೆ "ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನಿಡುವುದು" ಎಂದು ಕರೆದರೆ, ಟಾಲಸ್ಟಾಯ್ ಅವರ ಪ್ರಕಾರ ಮಾನವನನ್ನು ರೂಪಾಂತರಿಸುವುದು ಎನ್ನುತ್ತಾರೆ. ಈ ಮೇಲಿನ ಅಂಶವನ್ನು ಗಮನಿಸಿದಾಗ ಮಾನವನ ಬದುಕನ್ನು ಸನ್ನದ್ಧಗೊಳಿಸುವ ಸಾಧನವಾಗಿದೆ. ಅಲ್ಲದೇ ಸಮಾಜದ ಗತಿಶೀಲತೆಯನ್ನು ಸೂಚಿಸುವ ದಿಕ್ಸೂಚಿಯಾಗಿದೆ. ಇಂದು ಸಮಾಜದಲ್ಲಿ ಲಭ್ಯವಿರುವ ಶಿಕ್ಷಣವು ಆ ಸಮಾಜದ ಭವಿಷ್ಯವನ್ನು ಅನಾವರಣಗೊಳಿಸುತ್ತದೆ.

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್ ಅವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ

ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯರ ಆತ್ಮಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವರು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು. ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು. ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಬೇಡರಂತಹ ಸಮುದಾಯಗಳು ಮಾತ್ರ ಇಂದು ಶಿಕ್ಷಣದಲ್ಲಿ ಅಲ್ಪ ಮಟ್ಟಿಗೆ ಮುಂದಿವೆ. ಇಂದು ಸಾರ್ವತ್ರಿಕವಾಗಿ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡುವಾಗ ಸಾಮಾನ್ಯವಾಗಿ ಕರ್ನಾಟಕದ ಒಟ್ಟು ಶೈಕ್ಷಣಿಕ ಪ್ರಗತಿ, ಅದರಲ್ಲಿ ಪರಿಶಿಷ್ಟ ಜಾತಿಗಳ ಶೈಕ್ಷಣಿಕ ಪ್ರಗತಿ ಹಾಗೂ ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಪ್ರಗತಿ, ಹಾಗೂ ಇತರರ ಶೈಕ್ಷಣಿಕ ಪ್ರಗತಿ ಈ ಮಾದರಿಯಲ್ಲಿ ನೋಡುವುದು ವಾಡಿಕೆ. ಅಂದರೆ ಇಂದು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಒಟ್ಟು ಶೈಕ್ಷಣಿಕ ಪ್ರಗತಿ ಎಂಬುದು ಕೇವಲ ಕೆಲವೇ ಸಮುದಾಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ಸಮುದಾಯಗಳು ಮಾತ್ರ ಅಲ್ಪ ಮಟ್ಟಿಗಾದರೂ ಪಡೆಯಲು ಸಾಧ್ಯವಾಗಿದೆ. ಆದರೆ ಇದರಲ್ಲಿಯೇ ಅಲ್ಪಸಂಖ್ಯಾತವಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪಡೆಯಲು ಸಾಧ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಯತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶ ದೊರೆಯುವ ಸಮುದಾಯಗಳೊಂದಿಗೆ ಅವಕಾಶ ವಂಚಿತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ ಮೂಲಭೂತ ಸೌಲಭ್ಯಗಳು ದೊರೆಯಬೇಕೆಂಬುದೇ ಇದರ ಆಶಯವಾಗಿದೆ.

ದಲಿತರಲ್ಲಿಯೇ ದಲಿತರೆಂದು ಪರಿಗಣಿತವಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ,

ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅಪರೂಪ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದಿಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಾಬ್ದಾರಿ ಕಳೆಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

ನೀರಾವರಿ ಪ್ರದೇಶವಾಗಿದ್ದರೂ ಶಿಕ್ಷಣದಲ್ಲಿ ಜಿಲ್ಲೆಯಲ್ಲಿಯೇ ಹಿಂದುಳಿದಿರುವ ತಾಲೂಕು ಹರಿಹರವಾಗಿದೆ. ಇಲ್ಲಿ ಶಿಕ್ಷಣಕ್ಕಿಂತ ಹೆಚ್ಚಾಗಿ ಪಾಲಕರಿಗೆ ತಮ್ಮ ನಿತ್ಯ ಜೀವನದ ಬದುಕೇ ಮುಖ್ಯವಾಗುತ್ತದೆ. ನೀರಾವರಿ ಪ್ರದೇಶವಾಗಿರುವುದರಿಂದ ಇಲ್ಲಿ ಕೂಲಿ ಕಾರ್ಮಿಕರು ಸಿಗುವುದು ತುಂಬಾ ಕಷ್ಟ ಸಾಧ್ಯದ ಕೆಲಸ. ಅಕಸ್ಮಾತ್ ಕೂಲಿ ಕಾರ್ಮಿಕರು ದೊರೆತರೂ ಅವರ ಕೂಲಿ ಅತೀ ವಿಪರೀತವಾಗಿರುತ್ತದೆ. ಹೀಗಾಗಿ ಕೂಲಿ ಕಾರ್ಮಿಕರ ಕೊರತೆಯನ್ನು ಸರಿದೂಗಿಸಲು ಮನೆಯ ಮಕ್ಕಳನ್ನೇ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹೆಚ್ಚು. ಎರಡನೆದಾಗಿ ಸರ್ಕಾರಿ ಹುದ್ದೆಯನ್ನು ಗಿಟ್ಟಿಸುವುದಕ್ಕಾಗಿ ವಿಧ್ಯಾಭ್ಯಾಸ ನಡೆಸಬೇಕು ಎಂಬ ಮನೋಧರ್ಮ ಭಾರತೀಯರದು. ಆದರೆ ಕನಿಷ್ಠ ಹತ್ತು ಎಕರೆಗಿಂತ ಮೇಲ್ಪಟ್ಟು ಭೂಮಿಯನ್ನು ಹೊಂದಿದ ರೈತರ ಪ್ರಮಾಣವೇ ಈ ತಾಲೂಕಿನಲ್ಲಿ ಹೆಚ್ಚಾಗಿದೆ. ಅಧಿಕ ಭೂಮಿಯನ್ನು ಹೊಂದಿದ ಮೇಲ್ಜಾತಿಗಳು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಅವಶ್ಯಕವೆಂದು ಭಾವಿಸುವುದೇ ಇಲ್ಲ. ಹೀಗಾಗಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದಕ್ಕಿಂತ ತಮ್ಮ ತಾತ್ಕಾಲಿಕ ಅನಿವಾರ್ಯತೆ ಕಳೆದರೆ ಸಾಕು ಎಂಬ ಭಾವನೆ ಇಲ್ಲಿಯ ಮೇಲ್ಜಾತಿಯ ರೈತರದ್ದಾಗಿದ್ದರೆ, ಕೆಳಜಾತಿಯ ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೆ ಹಚ್ಚಿದರೆ ತಮ್ಮ ಕುಟುಂಬಕ್ಕೆ ಹೆಚ್ಚಿನ ಆದಾಯ ದೊರೆಕುತ್ತದೆ ಎಂಬ ಆಶಾಭಾವನೆಯಿಂದಾಗಿ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ. ಕಳಿಸಿದರೂ ಅದು ತುಂಬಾ ಅಪರೂಪವೆಂದೇ ಹೇಳಬೇಕು. ಅಕಸ್ಮಾತ್ ಮಧ್ಯಾಹ್ನದ ಊಟ, ಉಚಿತ ಪಠ್ಯಪುಸ್ತಕ ಇತ್ಯಾದಿ ಆಮಿಷಗಳನ್ನು ಸರ್ಕಾರ ನೀಡಿದರೂ, ಅದು ಕೇವಲ ತಾತ್ಕಾಲಿಕವೆಂಬ ಭಾವನೆ ಹಿರಿಯರದ್ದು. ಇನ್ನು ಶಾಲೆಯಲ್ಲಿನ ಸ್ಥಿತಿ ಹೀಗಿದೆ. ಸರ್ಕಾರದ ವಿಚಿತ್ರವಾದ ನೀತಿಗಳಿಂದ ಪಾರಾಗಲು ಮತ್ತು ಅಲ್ಪ ಆದಾಯದ ದೃಷ್ಟಿಯಿಂದ ಶಾಲಾ ಶಿಕ್ಷಕರು ಹಾಜರಾಗದ, ಗೈರು ಹಾಜರಾದ ಮಕ್ಕಳನ್ನು ಸಹ ಶಾಲೆಗೆ ಕಡ್ಡಾಯವಾಗಿ ಬರುತ್ತಾರೆಂದು ಸುಳ್ಳು ದಾಖಲೆಗಳನ್ನು ನೀಡುವುದೇ ಹೆಚ್ಚು. ಹೀಗಾಗಿ ತಳ ಸಮುದಾಯದ ಎಷ್ಟೋ ಮಕ್ಕಳು ಸರ್ಕಾರಿ ದಾಖಲೆಗಳ ಪ್ರಕಾರ ಯೋಜನೆಗಳ ಪ್ರಾಯೋಜಿಕತ್ವ ಪಡೆದರೂ ವಾಸ್ತವವಾಗಿ ಆ ಯೋಜನೆಗಳ ಲಾಭದಿಂದ ಅವರು ದೂರವೇ

ಉಳಿದಿರುತ್ತಾರೆ. ಈ ಸತ್ಯ ಪ್ರಾಯಶಃ ಕ್ಷೇತ್ರಕಾರ್ಯಕ್ಕೆ ಹೋಗದೇ ಇದ್ದರೆ ತಿಳಿಯುತ್ತಲೇ ಇರಲಿಲ್ಲ. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಶಾಲೆಗೆ ಹೋಗಬೇಕಾದ ಎಷ್ಟೋ ಮಕ್ಕಳು ಶಾಲೆಯಿಂದ ಹೊರಗುಳಿದಿರುವುದನ್ನು ಕಾಣುವಂತಾಯಿತು. ಇದು ಏಕೆ ಹೀಗೆ ಎಂದು ಪ್ರಶ್ನಿಸಿದರೆ ಬದುಕಿನ ಅನಿವಾರ್ಯತೆಯೆಂದೇ ಪಾಲಕರು ಉತ್ತರ ಹೇಳಿದರು. ಹರಪನಹಳ್ಳಿ, ಜಗಳೂರಿನಂಥ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕುಗಳಲ್ಲಿನ ಚಿತ್ರಣ ಇದಕ್ಕಿಂತಲೂ ತುಂಬಾ ಭಿನ್ನವಾದುದಾಗಿದೆ. ಇಲ್ಲಿ ದಾವಣಗೆರೆ, ಚನ್ನಗಿರಿ, ಹೊನ್ನಾಳಿ, ಹರಿಹರಗಳಲ್ಲಿರುವಂತೆ ನೀರಾವರಿ ಹೊಂದಿದ ಕೃಷಿ ಭೂಮಿ ಇಲ್ಲವೆಂದೇ ಹೇಳಬಹುದು. ಸ್ಥಿತಿವಂತರಾದ ಕೆಲವು ಮೇಲ್ಜಾತಿ ಕುಟುಂಬಗಳು ಮಾತ್ರ ನೀರಾವರಿಗಾಗಿ ತೆರೆದ ಬಾವಿ ಅಥವಾ ಕೊಳವೆ ಬಾವಿಗಳನ್ನು ತೋಡಿಸಿಕೊಂಡು ಕೃಷಿಯಲ್ಲಿ ತೊಡಗಿರುವುದನ್ನು ಕಾಣಬಹುದು. ಆದರೆ ಆ ಬಾವಿಗಳ ನೀರಿನ ಪ್ರಮಾಣ ತುಂಬಾ ಅಲ್ಪವೆಂದೇ ಹೇಳಬಹುದು. ಅದರಲ್ಲೂ ವೈಜ್ಞಾನಿಕ ರೀತಿಯ ಹನಿ ನೀರಾವರಿ ಅಥವಾ ತುಂತುರು ನೀರಾವರಿ ಪದ್ಧತಿಯನ್ನು ಇಲ್ಲಿಯ ರೈತರು ಅಳವಡಿಸಿಕೊಂಡಿರುವುದು ಅಪರೂಪವೆಂದೇ ಹೇಳಬಹುದು. ಈ ತಾಲೂಕುಗಳ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೫೦ರಷ್ಟು ಕುಟುಂಬಗಳು ಮಾತ್ರ ಭೂಮಿ ಹೊಂದಿವೆ. ಇದರಲ್ಲಿ ನೀರಾವರಿ ಅಳವಡಿಸಿಕೊಂಡ ರೈತರ ಪ್ರಮಾಣ ಶೇಕಡಾ ಎರಡರಷ್ಟಿದ್ದರೆ ನೀರಾವರಿ ಅಳವಡಿಸಿಕೊಳ್ಳದ ಮಳೆಯಾಧಾರಿತ ಒಣಬೇಸಾಯವನ್ನೇ ಅನುಸರಿಸುತ್ತಿರುವ ರೈತರ ಪ್ರಮಾಣ ಶೇಕಡಾ ೪೮ರಷ್ಟಿದೆ. ಇನ್ನುಳಿದ ಶೇಕಡಾ ೫೨ರಷ್ಟು ಜನ ಕೂಲಿ ಕಾರ್ಮಿಕರಾಗಿ ಉಳಿದಿರುವುದು ಕ್ಷೇತ್ರಕಾರ್ಯದ ಮೂಲಕ ಅರಿಯಲಾಗಿದೆ. ಹರಪನಹಳ್ಳಿ, ಜಗಳೂರು ತಾಲೂಕುಗಳ ಸ್ಥಿತಿ ಈ ರೀತಿಯದ್ದಾಗಿದ್ದರೆ ದಾವಣಗೆರೆ, ಹರಿಹರ ತಾಲೂಕುಗಳು ಇವುಗಳಿಗಿಂತಲೂ ಭಿನ್ನ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ. ಈ ಎರಡು ತಾಲೂಕುಗಳಲ್ಲಿ ನೀರಾವರಿ ಇದೆಯಾದರೂ ಅಷ್ಟೇ ಅಧಿಕ ಪ್ರಮಾಣದಲ್ಲಿ ಉದ್ದಿಮೆಗಳೂ ತಲೆಯೆತ್ತಿವೆ. ಹರಿಹರದಲ್ಲಿ ಕಬ್ಬಿಣದ ಕಾರ್ಖಾನೆ, ಇತರ ಹಲವಾರು ಕಾರ್ಖಾನೆಗಳು ತಲೆಯತ್ತಿವೆ. ಇವುಗಳಲ್ಲಿ ಉದ್ದಿಮೆದಾರರ ಆಪೇಕ್ಷೆಯಂತೆ ಮುಚ್ಚಿವೆಯಾದರೂ ಅದಕ್ಕಿಂತ ಭಿನ್ನವಾದ ಇಟ್ಟಿಗೆ ಭಟ್ಟಿ ಮುಂತಾದ ಉದ್ದಿಮೆಗಳು ಪ್ರಾರಂಭ ಗೊಂಡಿವೆ. ಹೀಗಾಗಿ ಇಲ್ಲಿಯ ಕೃಷಿ ಭೂಮಿಗಳಲ್ಲಿ ಕೂಲಿ ಸಿಗುವುದು ಕಷ್ಟ. ಇದೇ ಸ್ಥಿತಿ ದಾವಣಗೆರೆ ತಾಲೂಕಿನದೂ ಆಗಿದೆ. ಇಲ್ಲಿ ಶ್ರೀಮಂತರಿಗಿಂತ ಬಡವರ ಪ್ರಮಾಣವೇ ಹೆಚ್ಚಾಗಿದೆ. ಕೇವಲ ಕೂಲಿಯನ್ನು ಅರಸಿಕೊಂಡು ಬಂದ ಜನರು ತಮಗೆ ಕೂಲಿ ಎಷ್ಟು ಸಿಗುತ್ತದೆ, ತಮ್ಮ ಕುಟುಂಬದಲ್ಲಿ ದುಡಿಯುವ ಕೈಗಳು ಎಷ್ಟಿವೆಯೆಂದು ನೋಡುತ್ತಾರಾಗಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎನ್ನುವ ಕಡೆ ಹೆಚ್ಚು ಲಕ್ಷ್ಯ ವಹಿಸುವುದಿಲ್ಲ. ವಾಸ್ತವದ ಸ್ಥಿತಿ ಏನೆಂದರೆ ಈ ತಾಲೂಕಿನಲ್ಲಿ ಬಂಡವಾಳಶಾಹಿಗಳ ಪ್ರಮಾಣ ಅಂದಾಜು ಶೇಕಡಾ ಎರಡರಷ್ಟಿದ್ದರೆ ಕೂಲಿ ಕಾರ್ಮಿಕರ ಪ್ರಮಾಣ ಶೇಕಡಾ ೬೫ರಷ್ಟಿದೆ. ಇನ್ನುಳಿದ ಶೇಕಡಾ ೨೮ರಷ್ಟು ಸಣ್ಣ ಹಿಡುವಳಿದಾರರು

ಕಂಡುಬರುತ್ತಾರೆ. ಇವರಲ್ಲದೆ ಇನ್ನುಳಿದ ಶೇಕಡಾ ಐದರಷ್ಟು ಜನ ಹೊಟ್ಟೆಪಾಡಿಗಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುವವರು ಇದ್ದಾರೆ. ಶೇಕಡಾ ೬೫ರಷ್ಟಿರುವ ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸುತ್ತಾರಾದರೂ ಆ ಮಕ್ಕಳು ಶಾಲೆಗೆ ಸಮರ್ಪಕವಾಗಿ ಹೋಗುವುದಿಲ್ಲ. ಸಾಮಾನ್ಯವಾಗಿ ಶಾಲೆಗೆ ಹೋಗುವ ಕೂಲಿಕಾರ್ಮಿಕರ ಮಕ್ಕಳು ೮–೧೦ ವರ್ಷದವರಾದರೆ ಸಾಕು ಶಾಲೆಯಿಂದ ಹೊರಗುಳಿದುಬಿಡುತ್ತಾರೆ. ಪ್ರಾಯಶಃ ಕೂಲಿಕಾರ್ಮಿಕರು ತಮ್ಮೊಂದಿಗೆ ಕೆಲಸ ನಿರ್ವಹಿಸಲು ತಮ್ಮ ಮಕ್ಕಳನ್ನು ಜೊತೆಗೆ ಸೇರಿಸಿಕೊಂಡು ಬಿಡುತ್ತಾರೆ. ಇನ್ನು ಬಹುತೇಕ ಹುಡುಗಿಯರು ತಮ್ಮ ಮನೆಯ ಸಣ್ಣ ಮಕ್ಕಳನ್ನು ಪಾಲಿಸಲು ಅಥವಾ ಮನೆಕೆಲಸ ನಿರ್ವಹಿಸುವುದಕ್ಕಾಗಿ ಶಾಲೆಯಿಂದ ಹೊರಗುಳಿಯುತ್ತಾರೆ. ಇದು ಕೇವಲ ಹರಿಹರ, ದಾವಣಗೆರೆ ತಾಲೂಕೊಂದರ ಸಮಸ್ಯೆಯಲ್ಲ. ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಈ ರೀತಿಯ ಸಮಸ್ಯೆ ಕಂಡುಬರುತ್ತದೆ. ಹರಿಹರ, ದಾವಣಗೆರೆಗಳಲ್ಲಿ ಉದ್ದಿಮೆಗಳು ಪ್ರಮುಖವಾಗಿ ಕಂಡುಬಂದರೆ ಹೊನ್ನಾಳಿ, ಚನ್ನಗಿರಿ ತಾಲೂಕುಗಳು ಮುಖ್ಯವಾಗಿ ಕೃಷಿಯನ್ನೇ ಪ್ರಮುಖವಾಗಿ ನಂಬಿಕೊಂಡ ತಾಲೂಕುಗಳಾಗಿವೆ. ಈ ತಾಲೂಕುಗಳಲ್ಲಿ ಕೂಲಿ ಕಾರ್ಮಿಕರ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತದೆ. ಈ ತಾಲೂಕುಗಳಿಗೆ ಕೂಲಿಯನ್ನರಸಿಕೊಂಡು ಹರಪನಹಳ್ಳಿ ಜಗಳೂರುಗಳಂತಹ ಬರಡು ತಾಲೂಕಿನ ತಳಸಮುದಾಯಗಳು ವಲಸೆ ಹೋಗುತ್ತವೆ. ಇನ್ನು ಹರಪನಹಳ್ಳಿ, ಜಗಳೂರು ತಾಲೂಕುಗಳು ಬಹುತೇಕ ಮಳೆಯಾಧಾರಿತ ಕೃಷಿಯನ್ನೇ ನೆಚ್ಚಿಕೊಂಡಿರುವ ತಾಲೂಕುಗಳಾಗಿವೆ. ಹರಪನಹಳ್ಳಿ ತಾಲೂಕಿನಲ್ಲಿ ತುಂಗಭದ್ರಾ ಹೊಳೆಯ ದಂಡೆಯ ಭೂಮಿಗಳಲ್ಲಿ ಕೆಲವು ಮಾತ್ರ ಏತ ನೀರಾವರಿ ಇಲ್ಲವೆ ಪಂಪ್‌ಸೆಟ್‌ಗಳಿಂದಾಗಿ ಅಲ್ಪಮಟ್ಟಿಗೆ ನೀರಾವರಿ ಸೌಲಭ್ಯವನ್ನು ಪಡೆದಿವೆ ಯಾದರೂ ತಾಲೂಕಿನ ಒಳಪ್ರದೇಶದಲ್ಲಿರುವ ಬಹುತೇಕ ಭೂಮಿಗಳು ನೀರಾವರಿ ಸೌಲಭ್ಯದಿಂದ ವಂಚಿತಗೊಂಡಿವೆ. ಜಗಳೂರು ತಾಲೂಕಿಗೆ ಕನಿಷ್ಠವಾದ ಈ ಸೌಲಭ್ಯವೂ ಇಲ್ಲವಾಗಿದೆ. ಹರಪನಹಳ್ಳಿ ತಾಲೂಕು ಸಾಕ್ಷರತೆ ಪ್ರಮಾಣದಲ್ಲಿ ಅಷ್ಟು ಹಿಂದುಳಿದಿಲ್ಲ. ಒಟ್ಟಾರೆಯಾಗಿ ನೋಡಿದರೆ ಬಹುತೇಕ ಮೇಲ್ಜಾತಿಗಳು ಶಿಕ್ಷಣದ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡಿವೆಯಾದರೂ, ತಳ ಸಮುದಾಯ ಗಳು ಇಂದಿಗೂ ಶಿಕ್ಷಣದ ಪೂರ್ಣ ಲಾಭ ಪಡೆಯುವಲ್ಲಿ ಸೋತಿವೆಯೆಂದೇ ಹೇಳಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬಹುತೇಕ ಪರಿಶಿಷ್ಟ ಪಂಗಡದ ಪುರುಷ ಮಕ್ಕಳು ಇಂದು ಶೇಕಡಾ ೮೫ರಷ್ಟು ಶಾಲೆಗೆ ಹೋಗುತ್ತಿವೆಯಾದರೂ ಅದು ಉನ್ನತ ಶಿಕ್ಷಣಕ್ಕೆ ಏರಿದಂತೆಲ್ಲಾ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತಾ ಸಾಗುತ್ತದೆ. ಅದರಲ್ಲೂ ಉನ್ನತ ಶಿಕ್ಷಣಕ್ಕೆ ಹೋಗುವ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳ ಪ್ರಮಾಣವಂತೂ ಶೇಕಡಾ ೨ರಷ್ಟು ಇಲ್ಲವೆಂದರೆ ಆಶ್ಚರ್ಯವಾಗುತ್ತದೆ. ಕರ್ನಾಟಕ ಮಾನವಾಭಿವೃದ್ಧಿ ವರದಿ ೨೦೦೫ರ ಸಮೀಕ್ಷೆ ಪ್ರಕಾರ "ಪ್ರಾಥಮಿಕ ಶಿಕ್ಷಣದ ಮೊದಲ ಮೂರರಿಂದ ನಾಲ್ಕು ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ

ಇಲ್ಲವೇ ಹಾಜರಾಗುವುದಿಲ್ಲ. ಇದರಿಂದ ಮುಂದೆ ಮಕ್ಕಳು ಅನಕ್ಷರಸ್ಥರಾಗಿ ಉಳಿದುಬಿಡುತ್ತಾರೆ. ಇದಲ್ಲದೆ ವಿವಿಧ ಹಂತಗಳಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಾಗಿದೆ. ಶಿಕ್ಷಣದ ಮೊದಲ ಊರುಗೋಲೇ ಶಾಲಾ ದಾಖಲಾತಿ. ಇಲ್ಲಿ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ ಇತರ ಸಾಮಾಜಿಕ ಗುಂಪುಗಳ ಸಾಧನೆಯು ಉತ್ತಮವಾಗಿದೆ.'[೧] ಅತ್ಯಧಿಕ ಪರಿಶಿಷ್ಟ ಪಂಗಡಗಳನ್ನು ಹೊಂದಿರುವ ಬಳ್ಳಾರಿ, ರಾಯಚೂರು, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಶೈಕ್ಷಣಿಕ ಸರಾಸರಿ ಮಟ್ಟ ಕೆಳಮಟ್ಟದಲ್ಲಿದೆ. ರಾಯಚೂರು ಜಿಲ್ಲೆಯಲ್ಲಿ ಶೇಕಡಾ ೪೫.೨೧, ಬಳ್ಳಾರಿ ಜಿಲ್ಲೆಯಲ್ಲಿ ಶೇಕಡಾ ೭೬.೪೭ರಷ್ಟಿದೆ. ಇಂಥದೇ ಸ್ಥಿತಿ ಹರಪನಹಳ್ಳಿ, ಜಗಳೂರಿನಲ್ಲಿಯೂ ಕಂಡುಬರುತ್ತದೆ. ಕೇವಲ ದಾಖಲಾತಿ ಪ್ರಮಾಣ ಮಾತ್ರ ಗಮನಿಸಿ ನಾವು ಶಿಕ್ಷಣದ ಸರಾಸರಿಯನ್ನು ಅಂದಾಜಿಸಲು ಸಾಧ್ಯವಾಗುವುದಿಲ್ಲ, ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಪರಿಶಿಷ್ಟ ಪಂಗಡದ ಮಕ್ಕಳು ಅತ್ಯಂತ ಕಡಿಮೆ ಅವಧಿಯನ್ನು ಶಾಲೆಯಲ್ಲಿ ಕಳೆಯುತ್ತಿದ್ದಾರೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ರಾಜ್ಯಮಟ್ಟದಲ್ಲಿ ಸರಾಸರಿ ಶೇಕಡಾ ೧.೫೪ರಷ್ಟಿದ್ದರೆ, ಇದು ಪರಿಶಿಷ್ಟ ಪಂಗಡದ ಮಕ್ಕಳಲ್ಲಿ ಶೇಕಡಾ ೨.೪೨ರಷ್ಟಿದೆ. ಅದರಲ್ಲೂ ಎಲ್ಲಾ ಜಾತಿ ವರ್ಗಗಳಿಗಿಂತಲೂ ಶಾಲೆಯಿಂದ ಹೊರಗುಳಿದ ಬಾಲಕಿಯರಲ್ಲಿ ಪರಿಶಿಷ್ಟ ಪಂಗಡದ ಬಾಲಕಿಯರ ಪ್ರಮಾಣವೇ(ಶೇಕಡಾ ೨.೬೭) ಅಧಿಕವಾಗಿದೆ.'[೨]

೬.೧. ಶಾಲೆಯಿಂದ ಹೊರಗುಳಿದ ೭-೧೪ ವಯೋಮಾನದ ಮಕ್ಕಳ ವಿವರ

ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿತ್ತು. ಅದು ೯-೩೫ ವಯೋಮಾನ ದೊಳಗಿನ ಜನರ ಮಾಹಿತಿಯನ್ನು ಪಡೆದಿದೆ. ಈ ಸಮೀಕ್ಷೆಯು ಹೆಣ್ಣು ಮಕ್ಕಳು ಶಾಲೆಯನ್ನು ಬಿಡಲು ಕೆಲವು ಕಾರಣಗಳನ್ನು ಗುರುತಿಸಿದೆ. ಅವು ಕ್ರಮವಾಗಿ ಹೀಗಿವೆ.

೧. 'ಮನೆಯಲ್ಲಿ ಗೃಹಕೃತ್ಯದ ಕೆಲಸಗಳಲ್ಲಿ ತೊಡಗುವುದು.

೨. ಪಾಲಕರಿಗೆ ಮಕ್ಕಳ ಶಿಕ್ಷಣದ ಹೊರೆಯನ್ನು ಭರಿಸಲು ಸಾಧ್ಯವಾಗದೇ ಇರುವುದು.

೩. ಮಕ್ಕಳ ಪಾಲನೆ ಪೊಷಣೆಗಾಗಿ ಶಾಲೆಯನ್ನು ತೊರೆಯುವುದು.

೪. ಹೊರಗೆ ಕೂಲಿ ಕೆಲಸಗಳಲ್ಲಿ ತೊಡಗುವುದು ಮುಂತಾದವುಗಳಾಗಿವೆ.'[೩]

ಪ್ರೌಢ ಶಿಕ್ಷಣದಲ್ಲಿ ದಾಖಲಾತಿ ಪ್ರಮಾಣವು ಪ್ರಾಥಮಿಕ ಹಂತಕ್ಕಿಂತಲೂ ಕಡಿಮೆಯಾಗಿದೆ. ಹಾಗೆಯೇ ಉನ್ನತ ಶಿಕ್ಷಣ ಹಂತದಲ್ಲಿ ಈ ಪ್ರಮಾಣ ಇನ್ನು ಕುಗ್ಗುತ್ತದೆ. ತಾಂತ್ರಿಕ ಶಿಕ್ಷಣದಲ್ಲಂತೂ (ಡಿಪ್ಲೊಮೊ, ಬಿ.ಇ, ಬಿಟೆಕ್, ವೈದ್ಯಕೀಯ ಇತ್ಯಾದಿ) ಪರಿಶಿಷ್ಟ ಪಂಗಡದ ಮಕ್ಕಳ ಪಾಲು ೨೦೦೦ದಲ್ಲಿ ಶೇಕಡಾ ೦.೧ರಷ್ಟು ಇದ್ದು ೨೦೦೨-೦೩ರ ಹೊತ್ತಿಗೆ ಅದು ಶೇಕಡಾ ೧.೭ರಷ್ಟು ಏರಿಕೆ

ಕಂಡಿದೆ. ಡಿಪ್ಲೊಮೊ ಕೋರ್ಸ್‌ಗಳಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಲಾತಿಯು ಕನಿಷ್ಠ ಶೇಕಡಾ ೦.೭ರಷ್ಟು ಕಂಡುಬಂದಿದೆ.'[೪] ಅಂದರೆ ತಾಂತ್ರಿಕ ಶಿಕ್ಷಣವನ್ನು ಪಡೆಯುವಲ್ಲಿ ಪರಿಶಿಷ್ಟ ಪಂಗಡಗಳು ಸೋತಿವೆ ಎಂದೇ ಇದರರ್ಥ.

ಸರ್ಕಾರದ ಹೊಸ ಹೊಸ ಯೋಜನೆಗಳಾದ ವಿದ್ಯಾರ್ಥಿವೇತನ, ಉಚಿತ ವಸತಿನಿಲಯಗಳ ಸೌಲಭ್ಯ ಇತ್ಯಾದಿಗಳು ಇಂದು ಪರಿಶಿಷ್ಟ ಪಂಗಡದ ಮಕ್ಕಳಿಗೆ ದೊರೆಯುತ್ತಿವೆಯಾದರೂ ಸಹ ಆ ಸಮುದಾಯಗಳು ನಿರೀಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

೬.೨. ಬೇಡರ ಶೈಕ್ಷಣಿಕ ಸ್ಥಿತಿಗತಿ

"ದಾವಣಗೆರೆ ಜಿಲ್ಲೆಯಲ್ಲಿ ಸರಾಸರಿ ಶೈಕ್ಷಣಿಕ ಸ್ಥಿತಿಗತಿ ಶೇಕಡಾ ೬೭.೪ರಷ್ಟಿದೆ. ಇದರಲ್ಲಿ ಪುರುಷರು ಶೇಕಡಾ ೭೬.೪ರಷ್ಟು ಹಾಗೂ ಮಹಿಳೆಯರು ೫೮.೦ರಷ್ಟು ಸಾಕ್ಷರತಾ ಪ್ರಮಾಣವಿದೆ. ಇದರಲ್ಲಿ ನಗರ ಪ್ರದೇಶದ ಸಾಕ್ಷರತಾ ಪ್ರಮಾಣ ಶೇಕಡಾ ೭೮.೧ರಷ್ಟಿದ್ದರೆ ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣ ಶೇಕಡಾ ೬೨.೮ರಷ್ಟು ಇದೆ."[೫] ಇದು ಜಿಲ್ಲೆಯ ಒಟ್ಟಾರೆ ಶಿಕ್ಷಣದ ಸರಾಸರಿ ಪ್ರಮಾಣವಾದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣದ ಚಿತ್ರಣವೇ ಬೇರೆ ಇದೆ.

ಕೋಷ್ಟಕ ೬.೨.೧ ದಾವಣಗೆರೆ ಜಿಲ್ಲೆಯ ತಾಲೂಕುವಾರು, ಲಿಂಗವಾರು ಬೇಡರ ಮೊದಲ ತಲೆಮಾರಿನ ಸಾಕ್ಷರರ್ಹರು

ಕ್ರಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			೦-೫ ವಯೋಮಾನದವರು			ಸಾಕ್ಷರರ್ಹರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೧೮೨	೧೬೨	೩೪೪	೩೫	೮	೪೩	೧೪೭	೧೫೪	೩೦೧
೨	ದಾವಣಗೆರೆ	೧೭೫	೧೬೪	೩೩೯	೩೮	೯	೪೭	೧೩೭	೧೫೫	೨೯೨
೩	ಹರಪನಹಳ್ಳಿ	೧೮೮	೧೬೪	೩೫೨	೩೪	೬	೪೦	೧೫೪	೧೫೮	೩೧೨
೪	ಹರಿಹರ	೧೯೭	೧೬೫	೩೬೨	೩೯	೫	೪೪	೧೫೮	೧೬೦	೩೧೮
೫	ಹೊನ್ನಾಳಿ	೨೦೪	೧೭೫	೩೭೯	೩೧	೨	೩೩	೧೭೩	೧೭೩	೩೪೬
೬	ಜಗಳೂರು	೨೨೧	೧೮೧	೪೦೨	೩೬	೨	೩೮	೧೮೫	೧೭೯	೩೬೪
ಒಟ್ಟು		೧೧೬೭	೧೦೧೧	೨೧೭೮	೨೧೩	೩೨	೨೪೫	೯೫೪	೯೭೯	೧೯೩೩

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರತಿ ತಾಲೂಕಿನ ಮೂರು ಗ್ರಾಮಗಳಂತೆ ದಾವಣಗೆರೆ ಜಿಲ್ಲೆಯಲ್ಲಿ ಬರುವ ಆರು ತಾಲೂಕುಗಳ ೧೮ ಗ್ರಾಮಗಳ ಬೇಡಬುಡಕಟ್ಟಿನ ಮೊದಲನೇ ತಲೆಮಾರಿನ ಸದಸ್ಯರ ಸಂಖ್ಯೆಯು ಒಟ್ಟು ೨೧೭೮ರಷ್ಟಿದೆ. ಇದರಲ್ಲಿ ಒಟ್ಟು ಪುರುಷರು ೧೧೬೭ ಹಾಗೂ ಮಹಿಳೆಯರು ೧೦೧೧ರಷ್ಟಿದ್ದಾರೆ. ಇವರ ಒಟ್ಟಾರೆ ಸಾಕ್ಷರತೆಯ ಪ್ರಮಾಣವನ್ನು ಮೊದಲು ನೋಡೋಣ. ತರುವಾಯ ಎರಡನೇ ಮತ್ತು ಮೂರನೇ ತಲೆಮಾರಿನ ಸಾಕ್ಷರತೆಯ ಮಟ್ಟವನ್ನು ನೋಡಿ ನಂತರ ಪ್ರಸ್ತುತ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡಬಹುದು.

ಕೋಷ್ಟಕ ೬.೨.೧.೨. ಬೇಡರ ಮೊದಲ ತಲೆಮಾರಿನ ಸಾಕ್ಷರಸ್ಥ ಮತ್ತು ಅನಕ್ಷರಸ್ಥರ ಪ್ರಮಾಣ

ಕ್ರಸಂ.	ತಾಲೂಕುಗಳು	ಸಾಕ್ಷರರ್ಹರು			ಸಾಕ್ಷರಸ್ಥರು				ಅನಕ್ಷರಸ್ಥರು			
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಶೇಕಡಾ	ಗಂಡು	ಹೆಣ್ಣು	ಒಟ್ಟು	ಶೇಕಡಾ
೧	ಚನ್ನಗಿರಿ	೧೪೭	೧೫೪	೩೦೧	೨೩	೪	೨೭	೮.೯೭	೧೨೪	೧೫೦	೨೭೪	೯೧.೦೩
೨	ದಾವಣಗೆರೆ	೧೩೭	೧೫೫	೨೯೨	೩೨	೩	೩೫	೧೧.೯೯	೧೦೫	೧೫೨	೨೫೭	೮೮.೦೧
೩	ಹರಪನಹಳ್ಳಿ	೧೫೪	೧೫೮	೩೧೨	೨೧	೪	೨೫	೮.೦೧	೧೩೩	೧೫೪	೨೮೭	೯೧.೯೯
೪	ಹರಿಹರ	೧೫೮	೧೬೦	೩೧೮	೨೪	೨	೨೬	೮.೧೮	೧೩೪	೧೫೮	೨೯೨	೯೧.೮೨
೫	ಹೊನ್ನಾಳಿ	೧೭೩	೧೭೩	೩೪೬	೧೪	೨	೧೬	೪.೬೨	೧೫೯	೧೭೧	೩೩೦	೯೫.೩೮
೬	ಜಗಳೂರು	೧೮೫	೧೭೯	೩೬೪	೨೫		೨೫	೬.೮೭	೧೬೦	೧೭೯	೩೩೯	೯೩.೧೩
ಒಟ್ಟು		೯೫೪	೯೭೯	೧೯೩೩	೧೩೯	೧೫	೧೫೪		೮೧೫	೯೬೪	೧೭೭೯	


ಕೋಷ್ಟಕ ೬.೨.೧.ರ ಸಾಕ್ಷರರ್ಹರು ಅಂಕಿಅಂಶಗಳಲ್ಲಿ ಒಟ್ಟಾರೆ ಮೂರು ತಲೆಮಾರಿನ ಜನಸಂಖ್ಯೆಯಲ್ಲಿ ೦–೬ರ ವಯೋಮಾನದವರನ್ನು ಸಾಕ್ಷರರ್ಹವಲ್ಲದ ಗುಂಪು ಎಂದು ಪರಿಗಣಿಸಲಾಗಿದೆ. ಒಟ್ಟಾರೆ ಕ್ಷೇತ್ರಕಾರ್ಯದ ಆರು ತಾಲೂಕುವಾರು ಅಂಕಿಅಂಶಗಳನ್ನು ಕೋಷ್ಟಕ ೬.೨.೧.೨ರಲ್ಲಿ ಗಮನಿಸಿದಾಗ ಸಾಕ್ಷರರ್ಹರು ಲಿಂಗವಾರು ಪುರುಷರು ಶೇ. ೪೯.೩೫ರಷ್ಟು, ಮಹಿಳೆಯರು ಶೇ. ೫೦.೬೪ರಷ್ಟು ಕಂಡುಬರುತ್ತದೆ. ಆದರೆ, ಸಾಕ್ಷರಸ್ಥರ ಪ್ರಮಾಣವನ್ನು ಗಮನಿಸಿದಾಗ ಶೇ. ೭.೯೭ರಷ್ಟು ಆಗಿದ್ದು, ಅನಕ್ಷರಸ್ಥರ ಪ್ರಮಾಣ ಶೇ. ೯೨.೦೩ರಷ್ಟು ಕಂಡುಬರುತ್ತದೆ. ಲಿಂಗವಾರು ಸಾಕ್ಷರತೆಯಲ್ಲಿ ಗಂಡು ಶೇ. ೧೪.೫೭ರಷ್ಟು, ಹೆಣ್ಣು ಶೇ. ೧.೫೩ರಷ್ಟು ಕಂಡುಬಂದರೆ, ಅನಕ್ಷರತೆಯ ಪ್ರಮಾಣದಲ್ಲಿ ಗಂಡು ಶೇ. ೮೫.೪೩ರಷ್ಟು, ಹೆಣ್ಣು ಶೇ. ೯೮.೪೬ರಷ್ಟಿದೆ.

ಮೊದಲ ತಲೆಮಾರಿನ ತಾಲೂಕುವಾರು ಬೇಡರ ಶೈಕ್ಷಣಿಕ ಸ್ಥಾನಮಾನವನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೮.೯೭ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೫.೬೫, ಹೆಣ್ಣು ೨.೬ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೯೧.೦೬ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೪.೩೫, ಹೆಣ್ಣು ೯೭.೪ರಷ್ಟಿದೆ(ಅಂಕಿಅಂಶಗಳು: ಪು.೨೫೪ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೧೧.೯೯ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೨೩.೩೬, ಹೆಣ್ಣು ೧.೯೪ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೮೮.೦೧ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೭೬.೬೪, ಹೆಣ್ಣು ೯೮.೦೬ರಷ್ಟಿದೆ(ಅಂಕಿಅಂಶಗಳು: ಪು.೨೫೪ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೮.೦೧ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೩.೬೪, ಹೆಣ್ಣು ೨.೫೩ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೯೧.೯೯ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೬.೩೬, ಹೆಣ್ಣು ೯೭.೪೭ರಷ್ಟಿದೆ(ಅಂಕಿಅಂಶಗಳು: ಪು.೨೫೪ ನೋಡಿ).

ಲಂಬಚಿತ್ರ: ೬.೨.೧.೨. ಮೊದಲ ತಲೆಮಾರಿನವರ ಸಾಕ್ಷರಸ್ಥರ ಮತ್ತು ಅನಕ್ಷರಸ್ಥರ ಪ್ರಮಾಣ



ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೮.೧೮ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೫.೧೯, ಹೆಣ್ಣು ೧.೨೫ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೯೧.೮೨ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೪.೮೧, ಹೆಣ್ಣು ೯೮.೭೫ರಷ್ಟಿದೆ.(ಅಂಕಿಅಂಶಗಳು: ಪು.೨೫೪ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೪.೬೨ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮.೦೯, ಹೆಣ್ಣು ೧.೧೬ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೯೫.೩೮ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೯೧.೯೧, ಹೆಣ್ಣು ೯೮.೮೪ರಷ್ಟಿದೆ(ಅಂಕಿಅಂಶಗಳು: ಪು.೨೫೪ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೬.೮೭ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೩.೫೧, ಹೆಣ್ಣು ೦.೦೦ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೯೩.೧೩ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೬.೪೯, ಹೆಣ್ಣು ೧೦೦ರಷ್ಟಿರುವುದು ಕಂಡುಬರುತ್ತದೆ.(ಅಂಕಿಅಂಶಗಳು: ಪು.೨೫೪ ನೋಡಿ).

ಮೇಲಿನ ಒಟ್ಟಾರೆ ತಾಲೂಕುವಾರು ಹಾಗೂ ಗ್ರಾಮವಾರು ಮೊದಲ ತಲೆಮಾರಿನ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿದರೆ ನಿರಾಶೆಯಾಗುತ್ತದೆ. ಆ ಕಾಲದ ತಲೆಮಾರು ಕೇವಲ ಹೊಟ್ಟೆಪಾಡಿಗಾಗಿ ಕೂಲಿನಾಲಿ ಮಾಡಬೇಕು, ಇಲ್ಲವಾದರೆ ಇನ್ನೊಬ್ಬರ ಕೈಕೆಳಗೆ ಜೀತಗಾರರಾಗಿಯೋ ಅಥವಾ ಜೀತಗಾರರಂತೆಯೋ ಜೀವನ ನಿರ್ವಹಿಸಬೇಕಾಗಿತ್ತು. ಸ್ವಂತಕ್ಕೆ ಯಾವುದೇ ರೀತಿಯ ಆಸ್ತಿಪಾಸ್ತಿಯಿಲ್ಲದೆ ಜೀವನ ನಿರ್ವಹಣೆಗೆ ಕಷ್ಟಪಡಬೇಕಾಗಿತ್ತು. ಇಂತಹ ಸಮಯದಲ್ಲಿ ವಿದ್ಯೆ ಕಲಿಯುವುದು ಕಷ್ಟಸಾಧ್ಯದ

ಕೆಲಸವಾಗಿತ್ತು. ಪುರುಷರೇ ವಿದ್ಯೆ ಕಲಿಯಲು ಹಾಗೂ ಪ್ರಾಥಮಿಕ ಹಂತದಿಂದ ಮುಂದಿನ ಶೈಕ್ಷಣಿಕ ವಿದ್ಯಾಭ್ಯಾಸ ಸಾಧ್ಯವಾಗದ ಸ್ಥಿತಿಯಿದ್ದಾಗ ಇನ್ನು ಮಹಿಳೆಯರ ವಿದ್ಯೆಯ ಕುರಿತು ಆಲೋಚಿಸುವುದು ದೂರದ ಮಾತೇ ಸರಿ. ದುಡಿದುಣ್ಣಬೇಕಾದ ಅನಿವಾರ್ಯತೆ, ಕೂಲಿಗಾಗಿ ವಲಸೆ ಹೋಗುವ ಪಾಲಕರ ಅನಿವಾರ್ಯತೆ ಮುಂತಾದ ಕಾರಣಗಳಿಗಾಗಿ ಅನಕ್ಷರತೆ ಉಳಿದಿರುವ ಸಾಧ್ಯತೆ ಹೆಚ್ಚಿದೆ.

ಕೋಷ್ಟಕ ೬.೨.೨ ದಾವಣಗೆರೆ ಜಿಲ್ಲೆಯ ತಾಲೂಕುವಾರು, ಲಿಂಗವಾರು ಬೇಡರ ಎರಡನೇ ತಲೆಮಾರಿನ ಸಾಕ್ಷರರ್ಹರು

ಕ್ರಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			೦-೫ ವಯೋಮಾನದವರು			ಸಾಕ್ಷರರ್ಹರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೯೫	೮೯	೧೮೪	೧೮	೧೨	೩೦	೭೭	೭೭	೧೫೪
೨	ದಾವಣಗೆರೆ	೧೦೯	೧೦೮	೨೧೭	೨೧	೧೩	೩೪	೮೮	೯೫	೧೮೩
೩	ಹರಪನಹಳ್ಳಿ	೧೧೮	೮೪	೨೦೨	೪೧	೧೨	೫೩	೭೭	೭೨	೧೪೯
೪	ಹರಿಹರ	೧೧೨	೧೦೯	೨೨೧	೩೪	೧೪	೪೮	೭೮	೯೫	೧೭೩
೫	ಹೊನ್ನಾಳಿ	೧೨೭	೧೦೪	೨೩೧	೨೮	೬	೩೪	೯೯	೯೮	೧೯೭
೬	ಜಗಳೂರು	೧೩೦	೧೧೫	೨೪೫	೩೨	೨	೩೪	೯೮	೧೧೩	೨೧೧
ಒಟ್ಟು		೬೯೧	೬೦೯	೧೩೦೦	೧೭೪	೫೯	೨೩೩	೫೧೭	೫೫೦	೧೦೬೭


ಕೋಷ್ಟಕ ೬.೨.೨.೧. ಬೇಡರ ಎರಡನೇ ತಲೆಮಾರಿನ ಸಾಕ್ಷರಸ್ಥ ಮತ್ತು ಅನಕ್ಷರಸ್ಥರ ಪ್ರಮಾಣ

ಕ್ರಸಂ.	ತಾಲೂಕುಗಳು	ಸಾಕ್ಷರರ್ಹರು			ಸಾಕ್ಷರಸ್ಥರು				ಅನಕ್ಷರಸ್ಥರು			
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಶೇಕಡಾ	ಗಂಡು	ಹೆಣ್ಣು	ಒಟ್ಟು	ಶೇಕಡಾ
೧	ಚನ್ನಗಿರಿ	೭೭	೭೭	೧೫೪	೫೭	೫೦	೧೦೭	೬೯.೪೮	೨೦	೨೭	೪೭	೩೦.೫೨
೨	ದಾವಣಗೆರೆ	೮೮	೯೫	೧೮೩	೫೮	೫೯	೧೧೭	೬೩.೯೩	೩೦	೩೬	೬೬	೩೬.೦೭
೩	ಹರಪನಹಳ್ಳಿ	೭೭	೭೨	೧೪೯	೪೪	೪೦	೮೪	೫೬.೩೮	೩೩	೩೨	೬೫	೪೩.೬೨
೪	ಹರಿಹರ	೭೮	೯೫	೧೭೩	೫೪	೫೮	೧೧೨	೬೪.೭೪	೨೪	೩೭	೬೧	೩೫.೨೬
೫	ಹೊನ್ನಾಳಿ	೯೯	೯೮	೧೯೭	೭೦	೬೪	೧೩೪	೬೮.೦೨	೨೯	೩೪	೬೩	೩೧.೯೮
೬	ಜಗಳೂರು	೯೮	೧೧೩	೨೧೧	೭೧	೭೦	೧೪೧	೬೬.೮೨	೨೭	೪೩	೭೦	೩೩.೧೮
ಒಟ್ಟು		೫೧೭	೫೫೦	೧೦೬೭	೩೫೪	೩೪೧	೬೯೫		೧೬೩	೨೦೯	೩೭೨	

ಕೋಷ್ಟಕ ೬.೨.೨ರಲ್ಲಿ ಸಾಕ್ಷರರ್ಹರು ಅಂಕಿಅಂಶಗಳಲ್ಲಿ ಒಟ್ಟಾರೆ ಜನಸಂಖ್ಯೆಯಲ್ಲಿ ೦-೬ರ ವಯೋಮಾನದವರನ್ನು ಸಾಕ್ಷರರ್ಹವಲ್ಲದ ಗುಂಪು ಎಂದು ಪರಿಗಣಿಸಲಾಗಿದೆ. ಒಟ್ಟಾರೆ ಕ್ಷೇತ್ರಕಾರ್ಯದ ಆರು ತಾಲೂಕುವಾರು ಅಂಕಿಅಂಶಗಳನ್ನು ಕೋಷ್ಟಕ ೬.೨.೨.೧.ರಲ್ಲಿ ಗಮನಿಸಿದಾಗ ಸಾಕ್ಷರರ್ಹರು ಲಿಂಗವಾರು ಪುರುಷರು ಶೇ. ೪೮.೪೫ರಷ್ಟು, ಮಹಿಳೆಯರು ಶೇ. ೫೧.೫೫ರಷ್ಟಿದ್ದಾರೆ. ಆದರೆ, ಸಾಕ್ಷರಸ್ಥರ ಪ್ರಮಾಣವನ್ನು ಗಮನಿಸಿದಾಗ ಶೇ. ೬೫.೧೩ರಷ್ಟು ಆಗಿದ್ದು, ಅನಕ್ಷರಸ್ಥರ ಪ್ರಮಾಣ ಶೇ. ೩೪.೮೬ರಷ್ಟಿದ್ದಾರೆ. ಲಿಂಗವಾರು ಸಾಕ್ಷರತೆಯಲ್ಲಿ ಗಂಡು ಶೇ. ೬೮.೪೭ರಷ್ಟು, ಹೆಣ್ಣು ಶೇ. ೬೨ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣದಲ್ಲಿ ಗಂಡು ಶೇ. ೩೧.೫೨ರಷ್ಟು, ಹೆಣ್ಣು ಶೇ. ೩೮ರಷ್ಟಿದ್ದಾರೆ.

ಎರಡನೆ ತಲೆಮಾರಿನ ತಾಲೂಕುವಾರು ಬೇಡರ ಶೈಕ್ಷಣಿಕ ಸ್ಥಾನಮಾನವನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೬೯.೪೮ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೭೪.೦೨, ಹೆಣ್ಣು ೬೪.೯೩ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೩೦.೫೨ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೨೫.೯೭, ಹೆಣ್ಣು ೩೫.೦೬ರಷ್ಟಿರುವುದು ಕಂಡುಬರುತ್ತದೆ.(ಅಂಕಿಅಂಶಗಳು:ಪು.೨೫೫, ನೋಡಿ).

ಲಂಬಚಿತ್ರ: ೬.೨.೨.೧ ಎರಡನೆ ತಲೆಮಾರಿನವರ ಸಾಕ್ಷರಸ್ಥರ ಮತ್ತು ಅನಕ್ಷರಸ್ಥರ ಪ್ರಮಾಣ



ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೬೩.೯೩ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೬೫.೯೦, ಹೆಣ್ಣು ೬೨.೧೦ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೩೬.೦೭ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೩೪.೦೯, ಹೆಣ್ಣು ೩೭.೮೯ರಷ್ಟಿದ್ದಾರೆ(ಅಂಕಿಅಂಶಗಳು: ಪು.೨೫೫ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೫೬.೩೮ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೫೭.೧೪, ಹೆಣ್ಣು ೫೫.೫೫ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೪೩.೬೨ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೪೨.೮೬, ಹೆಣ್ಣು ೪೪.೪೪ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೫ ನೋಡಿ).

ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೬೪.೭೪ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೬೯.೨೩, ಹೆಣ್ಣು ೩೦.೭೭ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೩೫.೨೬ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೬೧.೦೫, ಹೆಣ್ಣು ೩೮.೯೪ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೫ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೬೧.೦೨ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ.



೭೦.೭೧, ಹೆಣ್ಣು ೨೯.೨೯ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೩೧.೯೮ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೬೫.೩೦, ಹೆಣ್ಣು ೩೪.೭೦ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೫ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೬೬.೮೨ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೭೨.೪೫, ಹೆಣ್ಣು ೬೧.೯೫ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೩೩.೧೮ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೨೭.೫೫, ಹೆಣ್ಣು ೩೮.೦೫ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೫ ನೋಡಿ).

ಮೇಲಿನ ಒಟ್ಟಾರೆ ತಾಲೂಕುವಾರು ಹಾಗೂ ಗ್ರಾಮವಾರು ಎರಡನೆ ತಲೆಮಾರಿನ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿದರೆ ಮೊದಲ ತಲೆಮಾರಿನ ಶಿಕ್ಷಣವನ್ನು ಅವಲೋಕಿಸಿದರೆ ಸಾಕಷ್ಟು ಬದಲಾವಣೆಯಿಂದ ಶಿಕ್ಷಣದಲ್ಲಿ ಪ್ರಗತಿಯನ್ನು ಹೊಂದಿದ್ದಾರೆ. ಶಿಕ್ಷಣಕ್ಕೆ ನೀಡಿರುವ ಮಹತ್ವ, ಶಿಕ್ಷಣದ ಒಲವು ಹಾಗೂ ಆಧುನಿಕರಣದ ಪ್ರಭಾವಕ್ಕೆ ಒಳಪಟ್ಟಿರುವುದು ಕಾಣಬಹುದು. ಜೊತೆಗೆ ಅವಿಭಕ್ತ ಕುಟುಂಬದಿಂದ ವಿಭಕ್ತ ಕುಟುಂಬಕ್ಕೆ ವರ್ಗಾವಣೆಯಾದಾಗ ಕುಟುಂಬ ನಿರ್ವಹಣೆ ಹಾಗೂ ಕುಟುಂಬ ಜವಾಬ್ದಾರಿಯನ್ನು ಹೆಚ್ಚಾಗುವುದು ಇದರಿಂದ ಕಂಡುಬರುತ್ತದೆ. ಪುರುಷರಷ್ಟೇ ವಿದ್ಯೆ ಕಲಿಯುವುದಲ್ಲದರ ಜೊತೆಗೆ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಒಲವು ತೋರಿಸಿ ಶಿಕ್ಷಣ ಅವಕಾಶ ನೀಡಿರುವುದು ಗಮನಿಸಬಹುದು.

ಕೋಷ್ಟಕ ೬.೨.೩ ದಾವಣಗೆರೆ ಜಿಲ್ಲೆಯ ತಾಲೂಕುವಾರು, ಲಿಂಗವಾರು ಬೇಡರ ಮೂರನೇ ತಲೆಮಾರಿನವರ ಸಾಕ್ಷರರ್ಹರು

ಕ್ರಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			೦–೫ ವಯೋಮಾನದವರು			ಸಾಕ್ಷರರ್ಹರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಚನ್ನಗಿರಿ	೬೧	೫೩	೧೧೪	೧೪	೧೫	೨೯	೪೭	೩೮	೮೫
೨	ದಾವಣಗೆರೆ	೫೭	೫೮	೧೧೫	೧೫	೧೭	೩೨	೪೨	೪೧	೮೩
೩	ಹರಪನಹಳ್ಳಿ	೫೪	೫೮	೧೧೨	೧೬	೧೬	೩೨	೩೮	೪೨	೮೦
೪	ಹರಿಹರ	೬೬	೫೮	೧೨೪	೨೧	೧೩	೩೪	೪೫	೪೫	೯೦
೫	ಹೊನ್ನಾಳಿ	೬೨	೬೨	೧೨೪	೧೯	೧೪	೩೩	೪೩	೪೮	೯೧
೬	ಜಗಳೂರು	೬೭	೫೮	೧೨೫	೧೮	೧೨	೩೦	೪೯	೪೬	೯೫
ಒಟ್ಟು		೩೬೭	೩೪೭	೭೧೪	೧೦೩	೮೭	೧೯೦	೨೬೪	೨೬೦	೫೨೪

ಕೋಷ್ಟಕ ೬.೨.೩.೧. ಮೂರನೇ ತಲೆಮಾರಿನ ಬೇಡರ ಸಾಕ್ಷರಸ್ಥ ಮತ್ತು ಅನಕ್ಷರಸ್ಥರ ಪ್ರಮಾಣ

ಕ್ರ.ಸಂ.	ತಾಲೂಕುಗಳು	ಸಾಕ್ಷರರ್ಹರು			ಸಾಕ್ಷರಸ್ಥರು				ಅನಕ್ಷರಸ್ಥರು			
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಶೇಕಡಾ	ಗಂಡು	ಹೆಣ್ಣು	ಒಟ್ಟು	ಶೇಕಡಾ
೧	ಚನ್ನಗಿರಿ	೪೭	೩೮	೮೫	೪೦	೩೪	೭೪	೮೭.೦೬	೭	೪	೧೧	೧೨.೯೪
೨	ದಾವಣಗೆರೆ	೪೨	೪೧	೮೩	೩೬	೩೧	೬೭	೮೦.೭೨	೬	೧೦	೧೬	೧೯.೨೮
೩	ಹರಪನಹಳ್ಳಿ	೩೮	೪೨	೮೦	೩೫	೩೨	೬೭	೮೩.೭೫	೩	೧೦	೧೩	೧೬.೨೫
೪	ಹರಿಹರ	೪೫	೪೫	೯೦	೩೯	೩೧	೭೦	೭೭.೭೮	೬	೧೪	೨೦	೨೨.೨೨
೫	ಹೊನ್ನಾಳಿ	೪೩	೪೮	೯೧	೩೫	೩೪	೬೯	೭೫.೮೨	೮	೧೪	೨೨	೨೪.೧೮
೬	ಜಗಳೂರು	೪೯	೪೬	೯೫	೪೧	೩೧	೭೨	೭೫.೭೯	೮	೧೫	೨೩	೨೪.೨೧
ಒಟ್ಟು		೨೬೪	೨೬೦	೫೨೪	೨೨೬	೧೯೩	೪೧೯		೩೮	೬೭	೧೦೫	


ಕೋಷ್ಟಕ ೬.೨.೩ರಲ್ಲಿ ಸಾಕ್ಷರರ್ಹರು ಅಂಕಿಅಂಶಗಳಲ್ಲಿ ಒಟ್ಟಾರೆ ಜನಸಂಖ್ಯೆಯಲ್ಲಿ ೦-೬ರ ವಯೋಮಾನದವರನ್ನು ಸಾಕ್ಷರರ್ಹವಲ್ಲದ ಗುಂಪು ಎಂದು ಪರಿಗಣಿಸಲಾಗಿದೆ. ಒಟ್ಟಾರೆ ಕ್ಷೇತ್ರಕಾರ್ಯದ ಆರು ತಾಲೂಕುವಾರು ಅಂಕಿಅಂಶಗಳನ್ನು ಕೋಷ್ಟಕ ೬.೨.೩.೧ರಲ್ಲಿ ಗಮನಿಸಿದಾಗ ಸಾಕ್ಷರರ್ಹರು ಲಿಂಗವಾರು ಪುರುಷರು ಶೇ. ೫೦.೩೮ರಷ್ಟು, ಮಹಿಳೆಯರು ಶೇ. ೪೯.೬೧ರಷ್ಟಿದ್ದಾರೆ. ಆದರೆ, ಸಾಕ್ಷರಸ್ಥರ ಪ್ರಮಾಣವನ್ನು ಗಮನಿಸಿದಾಗ ಶೇ. ೭೯.೯೬ರಷ್ಟು ಆಗಿದ್ದು, ಅನಕ್ಷರಸ್ಥರ ಪ್ರಮಾಣ ಶೇ. ೨೦.೦೪ರಷ್ಟಿದ್ದಾರೆ. ಲಿಂಗವಾರು ಸಾಕ್ಷರತೆಯಲ್ಲಿ ಗಂಡು ಶೇ. ೮೫.೬೧ರಷ್ಟು, ಹೆಣ್ಣು ಶೇ. ೭೪.೨೩ರಷ್ಟು ಕಂಡುಬಂದರೆ, ಅನಕ್ಷರತೆಯ ಪ್ರಮಾಣದಲ್ಲಿ ಗಂಡು ಶೇ. ೧೪.೩೯ರಷ್ಟು, ಹೆಣ್ಣು ಶೇ. ೨೫.೭೭ರಷ್ಟಿದ್ದಾರೆ.

ಮೂರನೆ ತಲೆಮಾರಿನ ತಾಲೂಕುವಾರು ಬೇಡರ ಶೈಕ್ಷಣಿಕ ಸ್ಥಾನಮಾನವನ್ನು ನೋಡಲಾಗಿ ಚನ್ನಗಿರಿ ತಾಲೂಕಿನ ಕಬ್ಬಳ, ಕಾರಿಗನೂರು ಮತ್ತು ನೂಲ್ಲೂರು ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೮೭.೦೬ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೫.೧೦, ಹೆಣ್ಣು ೮೯.೪೭ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೧೨.೯೪ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೪.೯೦, ಹೆಣ್ಣು ೧೦.೫೩ರಷ್ಟಿದ್ದಾರೆ.(ಅಂಕಿಅಂಶಗಳು: ಪು.೨೫೬ ನೋಡಿ).

ದಾವಣಗೆರೆ ತಾಲೂಕಿನ ಬೇತೂರು, ದೊಡ್ಡಬಾತಿ ಮತ್ತು ಹುಣಸಿಕಟ್ಟೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೮೦.೭೨ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೫.೭೧, ಹೆಣ್ಣು ೭೫.೬೧ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೧೯.೨೮ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೪.೨೮, ಹೆಣ್ಣು ೨೪.೩೯ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೬ ನೋಡಿ).

ಹರಪನಹಳ್ಳಿ ತಾಲೂಕಿನ ಕಂಚಿಕೆರೆ, ಕುಮಾರನಹಳ್ಳಿ ಮತ್ತು ಮಾಚಿಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೮೩.೭೫ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೯೨.೧೦, ಹೆಣ್ಣು ೭೬.೧೯ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೧೮.೭೫ರಷ್ಟಿದ್ದಾರೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೭.೮೯, ಹೆಣ್ಣು ೨೩.೮೧ರಷ್ಟಿದ್ದಾರೆ.(ಅಂಕಿಅಂಶಗಳು: ಪು.೨೫೬ ನೋಡಿ).

ಲಂಬಚಿತ್ರ: ೬.೨.೩.೧ ಮೂರನೆ ತಲೆಮಾರಿನವರ ಸಾಕ್ಷರಸ್ಥರ ಮತ್ತು ಅನಕ್ಷರಸ್ಥರ ಪ್ರಮಾಣ



ಹರಿಹರ ತಾಲೂಕಿನ ದೇವರಬೆಳಕೆರೆ, ಕೊಕ್ಕನೂರು ಮತ್ತು ರಾಜನಹಳ್ಳಿ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೭೭.೭೮ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೬.೬೭, ಹೆಣ್ಣು ೬೮.೮೯ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೨೨.೨೨ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೩.೩೩, ಹೆಣ್ಣು ೩೧.೧೧ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೬ ನೋಡಿ).

ಹೊನ್ನಾಳಿ ತಾಲೂಕಿನ ಹನುಮನಹಳ್ಳಿ, ಕೆಂಚಿಕೊಪ್ಪ ಮತ್ತು ಕುಳಗಟ್ಟೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೭೫.೮೨ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೧.೩೯, ಹೆಣ್ಣು ೭೦.೮೩ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೨೪.೧೮ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೮.೬೦, ಹೆಣ್ಣು ೨೯.೧೭ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೬ ನೋಡಿ).

ಜಗಳೂರು ತಾಲೂಕಿನ ಬಸವನಕೋಟೆ, ಮಾಗಡಿ ಮತ್ತು ಸೊಕ್ಕೆ ಮೂರು ಗ್ರಾಮಗಳ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೭೫.೭೯ರಷ್ಟಿದ್ದು, ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೮೧.೪೦, ಹೆಣ್ಣು ೭೯.೧೬ರಷ್ಟಿದ್ದಾರೆ. ಅನಕ್ಷರತೆಯ ಪ್ರಮಾಣ ಶೇ. ೨೪.೨೧ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೧೮.೬೦, ಹೆಣ್ಣು ೨೦.೮೩ರಷ್ಟಿದ್ದಾರೆ.(ಅಂಕಿಅಂಶಗಳು:ಪು.೨೫೬ ನೋಡಿ).

ಮೇಲಿನ ಒಟ್ಟಾರೆ ತಾಲೂಕುವಾರು ಹಾಗೂ ಗ್ರಾಮವಾರು ಮೂರನೆ ತಲೆಮಾರಿನ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿದರೆ ಮೊದಲ ಮತ್ತು ಎರಡನೇ ತಲೆಮಾರಿನ ಶಿಕ್ಷಣವನ್ನು ಅವಲೋಕಿಸಿದಾಗ ಸಾಕಷ್ಟು ಬದಲಾವಣೆಯಿಂದ ಶೈಕ್ಷಣಿಕ ಮಟ್ಟದಲ್ಲಿ ಪ್ರಗತಿಯನ್ನು ಹೊಂದಿರುವುದು ಕಂಡುಬರುತ್ತದೆ. ಶಿಕ್ಷಣಕ್ಕೆ ನೀಡಿರುವ ಮಹತ್ವ, ಸಾಮಾಜಿಕ ವ್ಯವಸ್ಥೆಯಲ್ಲಿ ಇತರೆ ಸಮುದಾಯಗಳೊಂದಿಗೆ ಸಮಾನತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಆಧುನಿಕರಣದ ಪ್ರಭಾವಕ್ಕೆ ಒಳಪಟ್ಟಿರುವುದು ಕಾಣಬಹುದು. ಜೊತೆಗೆ ಅವಿಭಕ್ತ ಕುಟುಂಬದಿಂದ ವಿಭಕ್ತ ಕುಟುಂಬಕ್ಕೆ ವರ್ಗಾವಣೆಯಿಂದಾಗಿ ಕುಟುಂಬ ನಿರ್ವಹಣೆ ಹಾಗೂ ಕುಟುಂಬ ಜವಾಬ್ದಾರಿಯನ್ನು ಹೆಚ್ಚಾಗುವುದು ಹಾಗೂ ಪ್ರತಿಷ್ಠತೆಯ ಸಂಕೇತವಾಗಿ

ಸಾಕ್ಷರತೆಯನ್ನು ಪ್ರಬಲಗೊಳಿಸಿ ಉತ್ತಮ ಶಿಕ್ಷಣದಿಂದ ಉತ್ತಮ ಸರ್ಕಾರಿ ಹಾಗೂ ಖಾಸಗಿ ಕೆಲಸಗಳನ್ನು ಪಡೆಯುವಲ್ಲಿ ಯಶಸ್ಸನ್ನು ಕಂಡಿರುವುದಾಗಿದೆ. ಪುರುಷರಷ್ಟೇ ವಿದ್ಯೆ ಕಲಿಯುವುದಲ್ಲದೇ ಜೊತೆಗೆ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಒಲವು ತೋರಿಸಿ ಶಿಕ್ಷಣ ಕಲಿಯುವತ್ತ ಮುಖಮಾಡಿರುವುದಾಗಿದೆ.

೬.೩. ಬೇಡರ ಗ್ರಾಮವಾರು ಶೈಕ್ಷಣಿಕ ವಿವರ

ಬೇಡ ಸಮುದಾಯದ ಮೊದಲನೇ ಹಿಂದಿನ ಜನರು ಬಹುತೇಕ ಶಿಕ್ಷಣದಿಂದ ವಂಚಿತರಾಗಿದ್ದರೆಂದು ಹೇಳಲಾಗುತ್ತದೆ. ಇದಕ್ಕೆ ಇವರ ಬಡತನ, ಕೂಲಿ ಮಾಡಬೇಕಾದ ಅನಿವಾರ್ಯತೆ ಮುಂತಾದವುಗಳು ಕಾರಣಗಳಾಗಿವೆ. ಆದರೆ ಇತ್ತೀಚೆಗೆ ಸರ್ಕಾರ ಶಿಕ್ಷಣದ ಕುರಿತು ಹಲವಾರು ನೀತಿಗಳನ್ನು ಜಾರಿಗೆ ತಂದಿದೆ. ಕಲಿ-ನಲಿ, ನಲಿ-ಕಲಿ, ಕಡ್ಡಾಯ ಶಿಕ್ಷಣ, ಮರಳಿ ಬಾ ಶಾಲೆಗೆ, ಅಕ್ಷರ ದಾಸೋಹ ಮುಂತಾದ ಯೋಜನೆಗಳನ್ನು ನೋಡಬಹುದು. ಈ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳು ತಳಸಮುದಾಯದ ಮಕ್ಕಳಿಗೆ ವರದಾನವಾಗಿ ಪರಿಣಮಿಸಿವೆ. ಹೀಗಾಗಿ ಇಂದು ಶಾಲೆಗಳಲ್ಲಿ ತಳಸಮುದಾಯದ ಮಕ್ಕಳ ದಾಖಲಾತಿ ಹೇರಳವಾಗಿಯೇ ಆಗುತ್ತದೆ. ಆದರೆ ದಾಖಲಾತಿಯಷ್ಟೇ ಪ್ರಮಾಣದಲ್ಲಿ ಹಾಜರಾತಿಯನ್ನು ಆಪೇಕ್ಷಿಸುವುದು ಕಷ್ಟಸಾಧ್ಯದ ವಿಚಾರವಾಗಿದೆ. ಈ ನಿಟ್ಟಿನಲ್ಲಿ ದಾವಣಗೆರೆ ಜಿಲ್ಲೆಯ ಬೇಡಬುಡಕಟ್ಟಿನ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳ ಮೂಲಕ ಅರಿಯಲು ಪ್ರಯತ್ನಿಸಲಾಗಿದೆ.

ಜಿಲ್ಲೆಯ ಒಟ್ಟು ಆರು ತಾಲೂಕುಗಳ ಬೇಡರ ಮಕ್ಕಳ ಶೇಕಡಾವಾರು ಶೈಕ್ಷಣಿಕ ಮಟ್ಟವನ್ನು ಪರಿಶೀಲಿಸಲಾಗಿದೆ. ಕಿರಿಯ ಪ್ರಾಥಮಿಕ ಹಂತದಲ್ಲಿ ಪುರುಷರಿಗೂ ಮಹಿಳೆಯರಿಗೂ ಅಂತರ ಕಡಿಮೆ ಇದ್ದು ಮೇಲಿನ ತರಗತಿಗಳಿಗೆ ಹೋದಂತೆಲ್ಲಾ ಮಹಿಳೆಯರ ಶೈಕ್ಷಣಿಕ ಪ್ರಗತಿ ಕ್ಷೀಣಿಸುತ್ತಾ ಬಂದಿದೆ. ಅಂದರೆ ತಳಸಮುದಾಯಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡದೆ ಕೇವಲ ಇತರ ಕೆಲಸ ಕಾರ್ಯಗಳಿಗೆ ಗಮನ ಕೊಡಲಾಗುತ್ತಿತ್ತು ಎಂಬುದು ಸತ್ಯ.

ಮೊದಲ ತಲೆಮಾರಿನಿಂದಲೂ ಪ್ರಸ್ತುತ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳನ್ನು ಗಮನಿಸಿದಾಗ ನಾಲ್ಕು ಹಂತಗಳಲ್ಲಿಯೂ ಶೈಕ್ಷಣಿಕವಾಗಿ ಪುರುಷರೇ ಮುಂದಿದ್ದಾರೆ. ಮೀಸಲಾತಿ ದೊರೆತರೂ ಬೇಡರ ಮಹಿಳೆಯರು ಪ್ರಸ್ತುತ ದಿನದವರೆಗೂ ಶೈಕ್ಷಣಿಕವಾಗಿ ಪುರುಷರಿಗೆ ಸಮಾನವಾಗಿ ನಿಲ್ಲಲು ಸಾಧ್ಯವಾಗಿಲ್ಲವೆಂಬುದನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ೧೮ ಗ್ರಾಮಗಳ ನಿದರ್ಶನದಿಂದ ತಿಳಿದುಬರುತ್ತದೆ.

ಕೋಷ್ಟಕ ೬.೩.೧ರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಮೊದಲ ತಲೆಮಾರಿನವರೂ ತಮ್ಮ ಮಧ್ಯ ವಯಸ್ಸಿನಲ್ಲಿ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ತಮ್ಮ ಊರಿನಲ್ಲಿಯ ರಾತ್ರಿ ಶಾಲೆಗಳಲ್ಲಿ ಅಲ್ಪ ಸ್ವಲ್ಪ ಕಲಿತವರಾಗಿದ್ದಾರೆ. ಅವರ ಬಾಲ್ಯದ ಕಾಲದಲ್ಲಿ ಅವರ ಹಳ್ಳಿಗಳಲ್ಲಿ

ಕೋಷ್ಟಕ ೬.೩.೧ ಬೇಡರ ಮೊದಲ ತಲೆಮಾರಿನವರ ಶೈಕ್ಷಣಿಕ ಹಂತಗಳು

ಕ್ರ.ಸಂ.	ತಾಲೂಕು	ಶೈಕ್ಷಣಿಕ ಸ್ಥಾನಮಾನಗಳು																			
		ಪ್ರಾಥಮಿಕ			ಮಾಧ್ಯಮಿಕ			ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಚನ್ನಗಿರಿ	೨೦	೩	೨೩	೩	೧	೪												
೨	ದಾವಣಗೆರೆ	೨೪	೩	೨೮	೮		೮												
೩	ಹರಪನಹಳ್ಳಿ	೧೮	೩	೨೧	೩	೧	೪												
೪	ಹರಿಹರ	೧೯	೨	೨೧	೫		೫												
೫	ಹೊನ್ನಾಳಿ	೧೨	೨	೧೪	೨		೨												
೬	ಜಗಳೂರು	೨೩		೨೩	೨		೨												
	ಒಟ್ಟು	೧೧೬	೧೩	೧೩೦	೨೩	೨	೨೫												

ಪ್ರಾಥಮಿಕ ಮಟ್ಟದ ಶಾಲೆಗಳೂ ಇರಲಿಲ್ಲ. ಮಧ್ಯವಯಸ್ಕರಾದ ನಂತರ ಅನೌಪಚಾರಿಕವಾಗಿ ಸಾಕ್ಷರರಾದವರು ಇವರು. ಅವರಾರೂ ಶಾಲೆಗೆ ಹೋಗಿ ಸಾಕ್ಷರರಾದವರಲ್ಲವೆಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿದೆ.

ಇಲ್ಲಿ ಮೂರು ತಲೆಮಾರುಗಳಲ್ಲಿಯೂ ಒಂದರಿಂದ ೪ನೇ ತರಗತಿಯವರೆಗೆ ಪ್ರಾಥಮಿಕವೆಂದು, ೫ರಿಂದ ೭ನೇ ತರಗತಿವರೆಗೆ ಮಾಧ್ಯಮಿಕವೆಂದು ೮ರಿಂದ ೧೦ನೇ ತರಗತಿವರೆಗೆ ಪ್ರೌಢವೆಂದು, ೧೦ರಿಂದ ೧೨ನೇ ತರಗತಿವರೆಗೆ ಪಿಯುಸಿ ಮಟ್ಟವೆಂದು ಅದರಾಚೆಗೆ ಪದವಿಯನ್ನು, ಇತರೆಯಲ್ಲಿ ತಾಂತ್ರಿಕ ಶಿಕ್ಷಣ, ವೈದ್ಯ ಶಿಕ್ಷಣ ಮತ್ತು ಇತರೆ ಯಾವುದೇ ಕೋರ್ಸಿದ್ದರೂ ಅದನ್ನು ಇತರೇ ವಿಭಾಗದಲ್ಲಿ ನೋಡಲಾಗಿದೆ.

ಚನ್ನಗಿರಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೮೫.೧೮ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೪.೮೧ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ, ಡಿಪ್ಲೊಮಾ, ಪದವಿಪೂರ್ವ, ಪದವಿ, ಸ್ನಾತಕೋತ್ತರ, ಇತರೆ ಯಾವುದೇ ಶಿಕ್ಷಣದಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೭ ನೋಡಿ).

ದಾವಣಗೆರೆ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೭೭.೧೪ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೨೨.೮೫ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ, ಡಿಪ್ಲೊಮಾ, ಪದವಿಪೂರ್ವ, ಪದವಿ, ಸ್ನಾತಕೋತ್ತರ, ಇತರೆ ಯಾವುದೇ ಶಿಕ್ಷಣದಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೭ ನೋಡಿ).

ಹರಪನಹಳ್ಳಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೮೪ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೬ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ, ಡಿಪ್ಲೊಮಾ, ಪದವಿಪೂರ್ವ, ಪದವಿ, ಸ್ನಾತಕೋತ್ತರ, ಇತರೆ ಯಾವುದೇ ಶಿಕ್ಷಣದಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೭ ನೋಡಿ).

ಹರಿಹರ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೮೦.೭೬ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೯.೨೫ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ, ಡಿಪ್ಲೊಮಾ, ಪದವಿಪೂರ್ವ, ಪದವಿ, ಸ್ನಾತಕೋತ್ತರ, ಇತರೆ ಯಾವುದೇ ಶಿಕ್ಷಣದಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೮ ನೋಡಿ).

ಹೊನ್ನಾಳಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೮೭.೫೦ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೨.೫೦ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ, ಡಿಪ್ಲೊಮಾ, ಪದವಿಪೂರ್ವ, ಪದವಿ, ಸ್ನಾತಕೋತ್ತರ, ಇತರೆ ಯಾವುದೇ ಶಿಕ್ಷಣದಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೮ ನೋಡಿ).

ಜಗಳೂರು ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೯೨ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೮ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ, ಡಿಪ್ಲೊಮಾ, ಪದವಿಪೂರ್ವ, ಪದವಿ, ಸ್ನಾತಕೋತ್ತರ, ಇತರೆ ಯಾವುದೇ ಶಿಕ್ಷಣದಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೮ ನೋಡಿ).

೬.೩.೨ ಎರಡನೇ ತಲೆಮಾರಿನವರ ಬೇಡರ ಶೈಕ್ಷಣಿಕ ವಿವರ

ಇಲ್ಲಿ ಒಂದರಿಂದ ೪ನೇ ತರಗತಿಯವರೆಗೆ ಪ್ರಾಥಮಿಕವೆಂದು, ೫ರಿಂದ ೭ನೇ ತರಗತಿವರೆಗೆ ಮಾಧ್ಯಮಿಕವೆಂದು ೮ರಿಂದ ೧೦ನೇ ತರಗತಿವರೆಗೆ ಪ್ರೌಢವೆಂದು, ೧೧ರಿಂದ ೧೨ನೇ ತರಗತಿವರೆಗೆ ಪಿಯುಸಿ ಮಟ್ಟವೆಂದು ಅದರಾಚೆಗೆ ಪದವಿಯನ್ನು, ಇತರೆಯಲ್ಲಿ ತಾಂತ್ರಿಕ ಶಿಕ್ಷಣ, ವೈದ್ಯ ಶಿಕ್ಷಣ ಮತ್ತು ಇತರೆ ಯಾವುದೇ ಕೋರ್ಸಿದ್ದರೂ ಅದನ್ನು ಇತರೇ ವಿಭಾಗದಲ್ಲಿ ನೋಡಲಾಗಿದೆ.(ಕೋಷ್ಟಕ ೬.೩.೨)

ಚನ್ನಗಿರಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೮.೪೪ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೫.೫೮ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೮.೮೩, ಪದವಿಪೂರ್ವ ಶೇ. ೧೨.೩೩, ಪದವಿ ಶೇ. ೧೧.೬೯, ಇತರೆ ಶೇ. ೨.೫೯ ರಷ್ಟಿದ್ದು, ಯಾವುದೇ ಡಿಪ್ಲೊಮಾ, ಸ್ನಾತಕೋತ್ತರ ಶಿಕ್ಷಣದಲ್ಲಿ ಇಲ್ಲದಿರುವುದು ಹಾಗೂ ಶೇ. ೩೦.೫೧ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು:ಪು.೨೫೯ ನೋಡಿ).

ದಾವಣಗೆರೆ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೩.೮೨ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೨೨.೪೦ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೬.೩೯, ಡಿಪ್ಲೊಮಾ ಶೇ. ೨.೭೩, ಪದವಿಪೂರ್ವ ಶೇ. ೭.೧೦, ಪದವಿ ಶೇ. ೮.೨೦, ಇತರೆ ಶೇ. ೩.೨೭ರಷ್ಟಿರುವುದು ಹಾಗೂ ಶೇ. ೩೬.೦೬ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೯ ನೋಡಿ).

ಕೋಷ್ಟಕ ೬.೩.೨ ಬೇಡರ ಎರಡನೇ ತಲೆಮಾರಿನವರ ಶೈಕ್ಷಣಿಕ ಹಂತಗಳು

ಕ್ರ.ಸಂ.	ತಾಲೂಕು	ಶೈಕ್ಷಣಿಕ ಸ್ಥಾನಮಾನಗಳು															
		ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
1	ಚನ್ನಗಿರಿ	೯	೪	೧೨	೧೨	೧೧	೧೮	–	–	೭	೧೨	೧೪	೪	–	–	೪	–
2	ದಾವಣಗೆರೆ	೪	೩	೧೯	೨೨	೧೬	೧೪	೨	೩	೩	೧೦	೧೦	೫	–	–	೪	೨
3	ಹರಪನಹಳ್ಳಿ	೩	೪	೧೫	೧೪	೧೧	೧೪	೨	–	೭	೮	೭	೨	–	–	೩	–
4	ಹರಿಹರ	೨	೩	೧೯	೩೦	೧೩	೫	–	–	೪	೧೩	೧೩	೪	೨	–	೧	೩
5	ಹೊನ್ನಾಳಿ	೨	೩	೧೬	೨೦	೨೧	೧೨	೩	–	೬	೧೭	೧೧	೭	೧	–	೧೦	೫
6	ಜಗಳೂರು	೨	೪	೨೭	೨೪	೧೦	೨೦	೧೧	೨	೧೧	೧೨	೨	೨	–	–	೮	೬
	ಒಟ್ಟು	೨೨	೨೧	೧೦೮	೧೨೨	೮೨	೮೩	೧೮	೫	೩೮	೭೨	೫೭	೨೪	೩		೩೦	೧೬

ಹರಪನಹಳ್ಳಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೪.೬೯ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೯.೪೬ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೫.೪೩, ಡಿಪ್ಲೊಮಾ ಶೇ. ೧.೩೪, ಪದವಿಪೂರ್ವ ಶೇ. ೮.೭೨, ಪದವಿ ಶೇ. ೪.೬೯, ಇತರೆ ಶೇ. ೨.೦೧ರಷ್ಟಿರುವುದು ಹಾಗೂ ಶೇ. ೪೩.೬೭ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೫೯ ನೋಡಿ).

ಹರಿಹರ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೨.೮೯ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೨೮.೩೨ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೦.೪೦, ಪದವಿಪೂರ್ವ ಶೇ. ೯.೮೨, ಪದವಿ ಶೇ. ೯.೮೨, ಸ್ನಾತಕೋತ್ತರ ಶೇ. ೧.೧೫, ಇತರೆ ಶೇ. ೨.೩೧ರಷ್ಟಿರುವುದು ಹಾಗೂ ಶೇ. ೩೫.೨೬ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೬೦ ನೋಡಿ).

ಹೊನ್ನಾಳಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೨.೫೩ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೮.೨೭ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೬.೭೫, ಡಿಪ್ಲೊಮಾ ಶೇ. ೧.೫೨, ಪದವಿಪೂರ್ವ ಶೇ. ೧೧.೬೭, ಪದವಿ ಶೇ. ೯.೧೩, ಸ್ನಾತಕೋತ್ತರ ಶೇ. ೦.೫೦, ಇತರೆ ಶೇ. ೭.೬೧ ರಷ್ಟಿರುವುದು ಹಾಗೂ ಶೇ. ೩೧.೯೮ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೬೦ ನೋಡಿ).

ಜಗಳೂರು ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೨.೮೪ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೨೪.೧೭ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೪.೨೧, ಡಿಪ್ಲೊಮಾ ಶೇ. ೬.೧೬, ಪದವಿಪೂರ್ವ ಶೇ. ೧೦.೯೦, ಪದವಿ ಶೇ. ೧.೮೯, ಇತರೆ ಶೇ. ೬.೬೩ರಷ್ಟಿರುವುದು ಹಾಗೂ ಶೇ. ೩೩.೧೭ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೬೦ ನೋಡಿ).

೬.೩.೩ ಮೂರನೇ ತಲೆಮಾರಿನ ಬೇಡ ಬುಡಕಟ್ಟಿನ ಶೈಕ್ಷಣಿಕ ವಿವರ

ಇಲ್ಲಿ ಒಂದರಿಂದ ೪ನೇ ತರಗತಿಯವರೆಗೆ ಪ್ರಾಥಮಿಕವೆಂದು, ೫ರಿಂದ ೭ನೇ ತರಗತಿವರೆಗೆ ಮಾಧ್ಯಮಿಕವೆಂದು ೮ರಿಂದ ೧೦ನೇ ತರಗತಿವರೆಗೆ ಪ್ರೌಢವೆಂದು, ೧೧ರಿಂದ ೧೨ನೇ ತರಗತಿವರೆಗೆ

ಪಿಯುಸಿ ಮಟ್ಟವೆಂದು ಅದರಾಚೆಗೆ ಪದವಿಯನ್ನು, ಇತರೆಯಲ್ಲಿ ತಾಂತ್ರಿಕ ಶಿಕ್ಷಣ, ವೈದ್ಯ ಶಿಕ್ಷಣ ಮತ್ತು ಇತರೆ ಯಾವುದೇ ಕೋರ್ಸಿದ್ದರೂ ಅದನ್ನು ಇತರೇ ವಿಭಾಗದಲ್ಲಿ ನೋಡಲಾಗಿದೆ.(ಕೋಷ್ಟಕ ೬.೩.೩)

ಚನ್ನಗಿರಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೪.೭೦ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೦.೫೯ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೫.೮೮, ಡಿಪ್ಲೋಮಾ ಶೇ. ೧.೧೭, ಪದವಿಪೂರ್ವ ಶೇ. ೭.೦೫, ಪದವಿ ಶೇ. ೧೮.೮೨, ಸ್ನಾತಕೋತ್ತರ ಶೇ. ೯.೪೧, ಇತರೆ ಶೇ. ೨೯.೪೧ ರಷ್ಟಿದ್ದು ಹಾಗೂ ಶೇ. ೧೨.೯೪ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೬೧ ನೋಡಿ).

ದಾವಣಗೆರೆ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೩.೬೧ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೬.೦೨ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೮.೪೩, ಡಿಪ್ಲೊಮಾ ಶೇ. ೧೩.೨೫, ಪದವಿಪೂರ್ವ ಶೇ. ೬.೦೨, ಪದವಿ ಶೇ. ೧೦.೮೪, ಸ್ನಾತಕೋತ್ತರ ಶೇ. ೩.೬೧, ಇತರೆ ಶೇ. ೨೮.೯೨ರಷ್ಟಿರುವುದು ಹಾಗೂ ಶೇ. ೧೯.೨೮ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು:ಪು.೨೬೧ ನೋಡಿ).

ಹರಪನಹಳ್ಳಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೬.೨೫ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೭.೫ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೦, ಡಿಪ್ಲೊಮಾ ಶೇ. ೩.೭೫, ಪದವಿಪೂರ್ವ ಶೇ. ೧೫, ಪದವಿ ಶೇ. ೧೫, ಸ್ನಾತಕೋತ್ತರ ಶೇ. ೧.೨೫, ಇತರೆ ಶೇ. ೨೨.೫ರಷ್ಟಿರುವುದು ಹಾಗೂ ಶೇ. ೧೮.೭೫ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೬೧ ನೋಡಿ).

ಹರಿಹರ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೦.೦೦ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೮.೮೯ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೧೧.೧೧, ಡಿಪ್ಲೊಮಾ ಶೇ. ೨.೨೨, ಪದವಿಪೂರ್ವ ಶೇ. ೧೩.೩೩, ಪದವಿ ಶೇ. ೧೫.೫೫, ಸ್ನಾತಕೋತ್ತರ ಶೇ. ೦.೦೦, ಇತರೆ ಶೇ. ೨೬.೬೬ರಷ್ಟಿರುವುದು ಹಾಗೂ ಶೇ. ೨೨.೨೨ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೬೨ ನೋಡಿ).

ಕೋಷ್ಟಕ ೬.೩.೩ ಬೇಡರ ಮೂರನೇ ತಲೆಮಾರಿನವರ ಶೈಕ್ಷಣಿಕ ಹಂತಗಳು

ಕ್ರ.ಸಂ.	ತಾಲೂಕು	ಶೈಕ್ಷಣಿಕ ಸ್ಥಾನಮಾನಗಳು															
		ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಯಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಚನ್ನಗಿರಿ	೨	೨	೬	೩	೧	೪	೧		೨	೪	೭	೯	೭	೧	೧೪	೧೧
೨	ದಾವಣಗೆರೆ	೨	೧	೨	೩	೫	೨	೭	೪		೫	೫	೪	೩	–	೧೨	೧೨
೩	ಹರಪನಹಳ್ಳಿ	೨	೩	೩	೩	೨	೬	೩	೨	೨	೧೦	೧೧	೧	೧	–	೧೧	೭
೪	ಹರಿಹರ	–	–	೩	೫	೪	೬	೨	೦	೨	೧೦	೧೨	೨	–	–	೧೬	೮
೫	ಹೊನ್ನಾಳಿ	–	–	೧	–	೧	೮	೧೧	೬	೫	೧೦	೭	೨	೧	–	೯	೮
೬	ಜಗಳೂರು	–	೧	೪	೧೦	೧೨	೮	೮	೨	೭	೫	–	–	–	–	೧೦	೫
	ಒಟ್ಟು	೬	೭	೧೯	೨೪	೨೫	೩೪	೩೨	೧೪	೧೮	೪೪	೪೨	೧೮	೧೨	೧	೭೨	೫೧

ಹೊನ್ನಾಳಿ ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೦.೦೦ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧.೧೦ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೯.೮೯, ಡಿಪ್ಲೊಮಾ ಶೇ. ೧೮.೬೮, ಪದವಿಪೂರ್ವ ಶೇ. ೧೬.೪೮, ಪದವಿ ಶೇ. ೯.೮೯, ಸ್ನಾತಕೋತ್ತರ ಶೇ. ೧.೦೯, ಇತರೆ ಶೇ. ೧೮.೬೮ ರಷ್ಟಿರುವುದು ಹಾಗೂ ಶೇ. ೨೬.೩೭ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.(ಅಂಕಿಅಂಶಗಳು: ಪು.೨೬೨ ನೋಡಿ).

ಜಗಳೂರು ತಾಲೂಕಿನ ಮೂರು ಗ್ರಾಮಗಳನ್ನೊಳಗೊಂಡಂತೆ ಸಾಕ್ಷರಸ್ಥರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೧.೦೫ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೪.೭೪ರಷ್ಟು ಕಾಣಸಿಗುತ್ತದೆ. ಇನ್ನೂಳಿದ ಹಂತಗಳಾದ ಪ್ರೌಢ ಶೇ. ೨೧.೦೫, ಡಿಪ್ಲೊಮಾ ಶೇ. ೧೦.೫೨, ಪದವಿಪೂರ್ವ ಶೇ. ೧೨.೬೩, ಇತರೆ ಶೇ. ೧೫.೭೮ರಷ್ಟಿರುವುದು ಹಾಗೂ ಶೇ. ೨೫.೨೬ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ. (ಅಂಕಿಅಂಶಗಳು: ಪು.೨೬೨ ನೋಡಿ).

ಒಟ್ಟಾರೆಯಾಗಿ ಮೂರು ತಲೆಮಾರುಗಳನ್ನು ಅವಲೋಕಿಸಿದರೆ ತಲೆಮಾರಿನಿಂದ ತಲೆಮಾರಿಗೆ ಯಾವ ರೀತಿಯಲ್ಲಿ ಶೈಕ್ಷಣಿಕ ಪಲ್ಲಟಗಳಾಗಿವೆ ಎಂಬುದು ತಿಳಿಯುತ್ತದೆ. ಮೊದಲ ತಲೆಮಾರಿನವರ ಕಾಲದಲ್ಲಿ ಅವರ ಗ್ರಾಮಗಳಲ್ಲಿ ಶಾಲೆಗಳೇ ಇರಲಿಲ್ಲವಂತೆ. ಕೇವಲ ಐಗಳ ಶಾಲೆ ಎಂದು ಕರೆಯುವ ಅನೌಪಚಾರಿಕ ಶಾಲೆಯೊಂದಿದ್ದು ಸ್ಥಳೀಯ ಮೇಲ್ಜಾತಿಯ ವ್ಯಕ್ತಿ ಆ ಶಾಲೆಯನ್ನು ಗ್ರಾಮದ ದೇವಾಲಯದಲ್ಲಿ ನಡೆಸುತ್ತಿದ್ದರಂತೆ. ಸ್ಥಳೀಯವಾಗಿ ಮೇಲ್ಜಾತಿಯವರಿಗೆ ಮಾತ್ರ ಆ ಶಾಲೆಯಲ್ಲಿ ಕಲಿಯುವ ಅವಕಾಶವಿದ್ದು ಕೆಳಜಾತಿಗಳು ಶಾಲೆಯ ಮುಖ ನೋಡುವ ಸ್ಥಿತಿ ಇರಲಿಲ್ಲವಂತೆ. ಹೀಗಾಗಿ ತಾವಾರೂ ಅಕ್ಷರಸ್ಥರಾಗಲು ಸಾಧ್ಯವಾಗಲಿಲ್ಲವೆಂದು ಕ್ಷೇತ್ರಕಾರ್ಯದಲ್ಲಿ ವಕ್ತೃವೊಬ್ಬರು ತಿಳಿಸಿದರು. ಪುರುಷರ ಸ್ಥಿತಿಯೇ ಹೀಗಿದ್ದಾಗ ಮಹಿಳೆಯರು ಶಾಲೆಯ ಮುಖ ನೋಡಲು ಹೇಗೆ ಸಾಧ್ಯ? ಅದರಲ್ಲೂ ಮಹಿಳೆಯರಿಗೆ ಬಾಲ್ಯವಿವಾಹ ಮಾಡುತ್ತಿದ್ದರಿಂದ ಶಾಲೆ ಅವರಿಗೆ ಕನಸಿನ ಮಾತಾಗಿತ್ತು. ಪುರುಷರು ತಮ್ಮ ಮಧ್ಯ ವಯಸ್ಸಿನಲ್ಲಿ ವಯಸ್ಕರಿಗಾಗಿ ನಡೆಸುವ ರಾತ್ರಿ ಶಾಲೆ ಇಲ್ಲವೇ ತಮ್ಮ ಮೊಮ್ಮಕ್ಕಳಿಂದ ಸಹಿ ಮಾಡುವುದು, ಅಲ್ಪ ಸ್ವಲ್ಪ ಓದುವುದನ್ನು ಕಲಿತಿದ್ದಾರೆಯೇ ಹೊರತು ಶಾಲೆಯ ಮುಖವನ್ನು ಕಂಡವರಲ್ಲ.

ಎರಡನೇ ತಲೆಮಾರು ೬ನೇ ವಯಸ್ಸಿಗೆ ತಲುಪುವಷ್ಟರಲ್ಲಿ ಗ್ರಾಮದಲ್ಲಿ ಇಲ್ಲವೇ ಗ್ರಾಮಕ್ಕೆ ಹತ್ತಿರದ ಊರುಗಳಲ್ಲಿ ಪ್ರಾಥಮಿಕ ಶಾಲೆಗಳು ತಲೆಯೆತ್ತಿದ್ದವು. ಹೀಗಾಗಿ ಅಲ್ಪಮಟ್ಟಿಗಾದರೂ ಅವರು ಓದಲು ಸಾಧ್ಯವಾಯಿತು. ಆದರೆ ಮೂರನೇ ತಲೆಮಾರು ತಲುಪಿದ ಶೈಕ್ಷಣಿಕ ಗುರಿಯನ್ನು

ಅವರು ತಲುಪಲಾಗಿಲ್ಲ. ಎರಡನೇ ತಲೆಮಾರು ಪಡೆದ ಶೈಕ್ಷಣಿಕ ಮಟ್ಟದ ಪ್ರಮಾಣವನ್ನು ಆ ತಲೆಮಾರಿನ ಪುರುಷ ಹಾಗೂ ಮಹಿಳಾ ಸಂಖ್ಯೆಗೆ ಹೋಲಿಸಿ ನೋಡಲಾಗಿ.

ಮೊದಲ ತಲೆಮಾರಿನವರು ಕೇವಲ ಅನೌಪಚಾರಿಕವಾಗಿ ಸಹಿ ಮಾಡುವ ಮಟ್ಟಿಗೆ ಸಾಕ್ಷರರಾದರೆ ಎರಡನೇ ತಲೆಮಾರಿನವರು ಶಾಲೆಯ ಮೆಟ್ಟಿಲನ್ನು ತುಳಿಯುವಂತಾಗಿದೆ. ಇದರಲ್ಲಿ ಮಹಿಳೆಯರ ಪ್ರಮಾಣ ಕಡಿಮೆಯಿದ್ದರೂ ಅವರು ಪ್ರಾಥಮಿಕ ಹಂತದಿಂದ ಪ್ರೌಢಶಿಕ್ಷಣದವರೆಗೆ ಅಲ್ಪಮಟ್ಟಿಗಾದರೂ ಸಾಗಲು ಸಾಧ್ಯವಾಗಿದೆ. ಮೂರನೇ ತಲೆಮಾರಿನಲ್ಲಿ ಸ್ನಾತಕೋತ್ತರ ಮಟ್ಟದವರೆಗೆ ಬೇಡರು ಸಾಗಲು ಸಾಧ್ಯವಾಗಿದೆ.

ಒಟ್ಟಾರೆ ಮೂರು ತಲೆಮಾರುಗಳನ್ನು ಗಮನಿಸಿದಾಗ ಹಂತ ಹಂತವಾಗಿ ಶೈಕ್ಷಣಿಕವಾಗಿ ಬೇಡರ ಪ್ರಗತಿ ಹೊಂದುತ್ತಿದೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಈ ತಲೆಮಾರಿನಲ್ಲಿ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ವಿದ್ಯಾವಂತರು ಕಂಡುಬರುತ್ತಾರೆ. ಹೀಗಾಗಿ ಇವರು ಶಿಕ್ಷಣ, ಉದ್ಯೋಗಗಳಲ್ಲಿ ಮೀಸಲಾತಿಯಡಿ ಉದ್ಯೋಗ, ಶಿಕ್ಷಣ ಮತ್ತು ಇತರ ಸೌಕರ್ಯಗಳನ್ನು ಪಡೆಯಲು ಸಾಧ್ಯವಾಯಿತು. ಈ ರೀತಿ ಸರ್ಕಾರಿ ನೌಕರರಾಗಿರುವವರು ಒಟ್ಟು ೧೮೫ ಜನ ಕಂಡುಬರುತ್ತಾರೆ. ಸರ್ಕಾರಿ ನೌಕರರಲ್ಲಿ ಬಹುಪಾಲು ಜನ ತಮ್ಮ ಗ್ರಾಮಗಳಲ್ಲಿದ್ದೇ ಕೆಲಸಗಳಿಗೆ ಹೋಗಿಬರುತ್ತಿರುವವರಾದರು ಕೆಲವರು ಓಡಾಡಲು ಅನನುಕೂಲ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿ ಕಾರಣಗಳಿಗಾಗಿ ನಗರ ಪ್ರದೇಶಗಳಿಗೆ ಅಥವಾ ತಾವು ಕೆಲಸ ಮಾಡುವ ಕಡೆ ಮನೆಗಳನ್ನು ಮಾಡಿಕೊಂಡಿರುವವರಾದರೂ ತಮ್ಮ ಮೂಲ ಗ್ರಾಮದ ಜೊತೆಗೆ ನಂಟನ್ನು ಕಳಚಿಕೊಂಡಿಲ್ಲ. ವಾರದ ರಜಾಕಾಲ ಇತ್ಯಾದಿ ಬಿಡುವಿನ ಸಮಯದಲ್ಲಿ ಹಳ್ಳಿಯಲ್ಲಿಯೇ ಇರುತ್ತಾರೆ.

ಒಟ್ಟಾರೆಯಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ ಮೊದಲನೇ ತಲೆಮಾರಿನವರಲ್ಲಿ ಅನೌಪಚಾರಿಕವಾಗಿ ಸಹಿ ಮಾಡುವಷ್ಟರ ಮಟ್ಟಿಗೆ ಸಾಕ್ಷರರಾದರೆ. ಎರಡನೇ ತಲೆಮಾರಿನವರು ಶಾಲೆಯ ಮೆಟ್ಟಿಲನ್ನು ತುಳಿಯುವಂತರಾದರು. ಇನ್ನು ಮೂರನೇ ತಲೆಮಾರಿನವರ ಹೊತ್ತಿಗೆ ವಿವಿಧ ರೀತಿಯ ಆಯಾಮಾಗಳಲ್ಲಿ ಸರ್ಕಾರವು ನೀಡುವ ಯೋಜನೆಗಳ ಲಾಭ ಪಡೆದು ಶಿಕ್ಷಣ ಪಡೆಯುವಲ್ಲಿ ಮತ್ತು ಇತರೆ ಪ್ರಬಲ ಸಮುದಾಯಗಳ ಪೈಪೋಟಿ ಹಾಗೂ ಜಾಗತೀಕರಣದ ಪ್ರಭಾವದೊಂದಿಗೆ ಬದುಕನ್ನು ಪರಿವರ್ತನೆ ಹೊಂದಲು ನೀಡಿರುವ ಅವಕಾಶವನ್ನು ಉಪಯುಕ್ತತೆಯಿಂದ ಹಾಗೂ ಮಾನವ ಜೀವನದ ಬದಲಾವಣೆಗಳಲ್ಲಿ ಶಿಕ್ಷಣವೂ ಒಂದು ಅವಿಭಾಜ್ಯ ಅಂಗದಂತೆ ಅಳವಡಿಸಿಕೊಂಡು. ತಾವು ಮತ್ತು ತಮ್ಮ ಮುಂದಿನ ಪೀಳಿಗೆಗೆ ನೀಡುತ್ತಿರುವ ಪ್ರಸ್ತುತ ಶಿಕ್ಷಣವೇ ಒಂದು ಮಾದರಿಯಾಗಿ ಇಂದು ಬೇಡರಲ್ಲಿ ನಿಂತಿವೆ.

ಆಧಾರಗಳು

೧ ಮಾನವಾಭಿವೃದ್ಧಿ ವರದಿ, ಪು ೨೩೪, ೨೦೦೫

೨ ಭುವನಹಳ್ಳಿ ನಾಗರಾಜ, ಕರ್ನಾಟಕ ವಿಕಾಸ ಪತ್ರಿಕೆ, ಪು ೮-೧೪, ಜನವರಿ, ೨೦೦೦

೩ ಹಿರೇಮಠ ಎಸ್ ಜಿ., ಭಾರತದಲ್ಲಿ ಗ್ರಾಮೀಣಾಭಿವೃದ್ಧಿ, ಪು. ೧೫೬, ೧೯೯೮

೪ ಮಾನವಾಭಿವೃದ್ಧಿ ವರದಿ, ಪು. ೨೬೦-೬೧, ೨೦೦೫

೫ ಭುವನಹಳ್ಳಿ ನಾಗರಾಜ, ಕರ್ನಾಟಕ ವಿಕಾಸ ಪತ್ರಿಕೆ, ಪು. ೧೫, ೨೦೦೩

೬ ಮಾದರಿ ಸಮೀಕ್ಷೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ೨೦೦೪

ಅಧ್ಯಾಯ – ೭

ರಾಜಕೀಯ ಪಲ್ಲಟಗಳು

ಅಧ್ಯಾಯ ಏಳು

ರಾಜಕೀಯ ಪಲ್ಲಟಗಳು

ಪ್ರಾಚೀನ ಇತಿಹಾಸದಲ್ಲಿ ಬೇಡರಿಗೂ ಮತ್ತು ರಾಜಕೀಯಕ್ಕೂ ಅನನ್ಯವಾದ ಸಂಬಂಧ ವಿರುವುದು ತಿಳಿದುಬರುತ್ತದೆ. ಅಶೋಕನ ಕಾಲಕ್ಕಾಗಲೇ ಬೇಡರನ್ನು ಗುರುತಿಸುವಷ್ಟು ಪ್ರಬಲ ಕೋಮುವಾಗಿ ರೂಪುಗೊಂಡಿದ್ದುದನ್ನು ಕಾಣಬಹುದು. ಅಶೋಕನ ಶಾಸನಗಳಲ್ಲಿ ಪುರಿಂದ, ಪುಳಿಂದ ಮುಂತಾದ ಉಲ್ಲೇಖಗಳಿರುವುದು ಕಂಡುಬರುತ್ತದೆ. ಪುಳಿಂದವೆಂದು ಬೇಡರನ್ನೇ ಕರೆಯುತ್ತಿದ್ದರು.[೧]

ಶಾತವಾಹನರ ಕಾಲಕ್ಕಾಗಲೇ ಬೇಡರು ಅಧಿಕಾರವರ್ಗವಾಗಿರುವುದು ಕಂಡುಬರುತ್ತದೆ.[೨] ಕೇರಳದ ಚೇರರು ಮೂಲತಃ ಬೇಡ ಸಮುದಾಯಕ್ಕೆ ಸೇರಿದವರು ಎಂದು ಸುಬ್ರಮಣಿಯನ್ ಅಭಿಪ್ರಾಯಪಡುತ್ತಾರೆ. ಬುಕಾನನ್ ಕದಂಬರು ಬೇಡರಿರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಗಂಗರ ಕಾಲಕ್ಕೆ ಬೇಡರು ರಾಜಕೀಯದಲ್ಲಿ ಹೆಸರುಗಳಿಸಿತ್ತು.[೩] ಬಾದಾಮಿಯ ಚಾಲಕ್ಯರ ಪುಲಕೇಶಿಯ ಸೈನ್ಯದಲ್ಲಿ ಬೇಡರು ಪ್ರಮುಖವಾಗಿ ಕಂಡುಬರುತ್ತಿದ್ದರೆಂದು ಆ ಕಾಲಕ್ಕೆ ಚಾಲುಕ್ಯರ ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗಳು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ.[೪]

ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲಕ್ಕೆ ಕರ್ನಾಟಕದ ಸೈನ್ಯವೆಂದರೆ ಬೇಡರ ಸೈನ್ಯವೆಂದೇ ಹೆಸರಾಗಿತ್ತು.[೫]

ಬೇಡರು ತಾವು ನೆಲೆಸಿದ ಪ್ರದೇಶಗಳಲ್ಲಿ ತಮ್ಮದೇ ಆದ ಗಣರಾಜ್ಯಗಳನ್ನು, ಗ್ರಾಮರಾಜ್ಯಗಳನ್ನು ಸ್ಥಾಪಿಸಿಕೊಂಡರು. ಇಂತಹ ರಾಜ್ಯಗಳಿಗೆ ಬೇಡವಟ್ಟುಗಳು ಎಂಬ ಹೆಸರಿತ್ತು'[೬] ಹೊಯ್ಸಳನ ಸೈನ್ಯದಲ್ಲಿ ನಾಡಾಳು ಪಡೆಯು ಮುಖ್ಯವಾಗಿತ್ತು. ಈ ಪಡೆಯು ಬೇಡರು, ಕಳ್ಳರು ಮೊದಲಾದ ಗಿರಿಕಂದರ ವಾಸಿಗಳಿಂದ ಕೂಡಿತ್ತು'[೭]

ವಿಜಯನಗರ ಸ್ಥಾಪನೆಗೂ ಮುನ್ನ ತೆಲುಗು ಸೀಮೆಯಲ್ಲಿ ಬೇಡರ ಸಂಸ್ಥಾನಗಳಿದ್ದವು.'[೮] ಮುಮ್ಮಡಿ ಸಿಂಗನು ಕುಮ್ಮಟದುರ್ಗದ ಮೊದಲ ಪಾಳೇಗಾರ ಎಂಬುದನ್ನು ಕ್ರಿ ಶ ೧೨೮೦ರಿಂದ ೧೨೮೭ರವರೆಗಿನ ಆ ಪ್ರದೇಶದ ಶಾಸನಗಳು ತಿಳಿಸುತ್ತವೆ. ಮುಮ್ಮಡಿ ಸಿಂಗೇಯ ಮೂಲತಃ ಬೇಡರವನು.'[೯]

'ಕನಕಗಿರಿಯನ್ನು ಆಳಿದ ಗುಜ್ಜಲ ವಂಶಸ್ಥರೂ ಬೇಡರೇ ಆಗಿದ್ದರು'.[೧೦] ಕುಮ್ಮಟದುರ್ಗ ಪತನದ ನಂತರ ವಿಜಯನಗರದ ಆಶ್ರಯಕ್ಕೆ ಬೇಡರು ಬಂದರು. ಬೇಡರ ಸಹಕಾರದಿಂದಾಗಿಯೇ ವಿಜಯನಗರ ಕಟ್ಟಲು ಸಾಧ್ಯವಾಯಿತು. 'ಬೇಡರು ವಿಜಯನಗರದ ಆಯಕಟ್ಟಿನ ಸ್ಥಳಗಳಲ್ಲಿ ಪಾಳೇಗಾರಿಕೆ ಕಟ್ಟಿಕೊಂಡು ವಿಜಯನಗರದ ರಕ್ಷಣೆಗೆ ಸಹಾಯ ಮಾಡಿದರು'.[೧೧] 'ವಿಜಯನಗರದ ಅರಸರು ಬೇಡರಿಗೆ ತಕ್ಕ ಸ್ಥಾನಮಾನಗಳನ್ನು ನೀಡಿ ರಾಜಕೀಯವಾಗಿ ಬೆಳೆಯಲು ಕಾರಣರಾದರು. ಇವರ ಮುಖ್ಯವೃತ್ತಿ ಯುದ್ಧ ಮಾಡುವುದಾಗಿತ್ತು'.[೧೨] ವಿಜಯನಗರ ಸೈನ್ಯದ ಬಹುಭಾಗವು ಬೇಡರ ಕಾಲಾಳು ಪಡೆಯಿಂದ ಕೂಡಿತ್ತು'.[೧೩] 'ಬೇಡನಾಯಕರ ಬೇಡವಟ್ಟುಗಳು ಕಾಲಕ್ರಮೇಣ ಪಾಳೇಪಟ್ಟುಗಳಾಗಿ ಪರಿವರ್ತನೆಯಾದವು. ಈ ರೀತಿ ಮೊದಲಿಗೆ ಪಾಳೇಪಟ್ಟಾದುದು ಆನೆಗೊಂದಿ ಯಾಗಿದೆ'.[೧೪]

'ವಿಜಯನಗರ ಕಾಲದಲ್ಲಿ ಬಹಳಷ್ಟು ಪಾಳೇಗಾರರು ಹುಟ್ಟಿಕೊಂಡರು'[೧೫] ಈ ರೀತಿ ಪಾಳೆಪಟ್ಟುಗಳನ್ನು ಹೊಂದಿದ ಬೇಡರು ವಿಜಯನಗರ ಪತನಾನಂತರ ಸ್ವತಂತ್ರ ಪಾಳೇಗಾರರಾಗಿ ರೂಪುಗೊಂಡರು. ಈ ರೀತಿ ಸ್ವತಂತ್ರ ಪಾಳೇಗಾರರಾದವರಲ್ಲಿ ಕನಕಗಿರಿ ಪಾಳೇಗಾರರು, ಚಿತ್ರದುರ್ಗದ ಪಾಳೇಗಾರರು, ಉಚ್ಚಂಗಿದುರ್ಗದ ಪಾಳೇಗಾರರು, ಹರಪನಹಳ್ಳಿಯ ಪಾಳೇಗಾರರು, ಚಿತ್ರದುರ್ಗದ ಪಾಳೇಗಾರರು, ಹರಪನಹಳ್ಳಿಯ ಪಾಳೇಗಾರರು ಮುಂತಾದ ಹಲವಾರು ಪಾಳೇಗಾರರನ್ನು ಹೆಸರಿಸಬಹುದು. ಹೈದರ ಹಾಗೂ ಟಿಪ್ಪುವಿನ ಕಾಲಕ್ಕೆ ದುರ್ಬಲವಾಗುತ್ತಾ ಸಾಗಿದ ಪಾಳೇಗಾರರು ನಂತರ ಬ್ರಿಟಿಶರ ಕಾಲಕ್ಕೆ ಇನ್ನಷ್ಟು ಅವನತಿ ಹೊಂದುವಂತಾಯಿತು. ಈ ಕುರಿತು ಬುಕಾನನ್‌ರು ಹೀಗೆ ತಿಳಿಸುತ್ತಾರೆ. At present as they receive no pay, they are obliged to apply more closely to agriculture; for in that way they always employed their leisure; and there is no prospect of their becoming a quiet and industrious people, although they still retain their arms and an anxious desire for plunder'[೧೬] ಪಾಳೇಗಾರರಾಗಿ ರಾಜಾರೋಷವಾಗಿ ಬದುಕಿದ್ದ ಕುಟುಂಬಗಳನ್ನು ಬ್ರಿಟಿಶರು ತಮ್ಮ

ಸೇವಕವರ್ಗವನ್ನಾಗಿ ಮಾಡಿಕೊಂಡರು. ಈ ರೀತಿ ರಾಜಕೀಯವಾಗಿ ಅವನತಿಯತ್ತ ಸಾಗಿದ ಬೇಡರು ತರುವಾಯ ಸಾಮಾನ್ಯ ಜನರಂತೆ ರಾಜಕೀಯದಿಂದ ದೂರವಾಗಿಯೇ ಬದುಕ ಬೇಕಾಯಿತು.

ಸ್ವತಂತ್ರ ಭಾರತದ ಸಂವಿಧಾನದಲ್ಲಿ ಮೀಸಲಾತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಹೀಗಾಗಿ ಮೀಸಲಾತಿಯಡಿ ಬೇಡರು ಮರಳಿ ರಾಜಕೀಯ ಪ್ರವೇಶ ಮಾಡುವಂತಾಯಿತು. ರಾಜಕೀಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಪ್ರಮಾಣ ಕೇವಲ ಶೇಕಡ ೩ರಷ್ಟು ಇದ್ದಿತು. ಹೀಗಾಗಿ ಎರಡು ವಿಧಾನಸಭಾ ಕ್ಷೇತ್ರಗಳು ಮಾತ್ರ ಪರಿಶಿಷ್ಟರಿಗೆ ಮೀಸಲಾಗಿದ್ದವು. ಕರ್ನಾಟಕದಲ್ಲಿ ೫೦ ಅನುಸೂಚಿತ ಬುಡಕಟ್ಟುಗಳಲ್ಲಿ ಅದರ ಲಾಭವನ್ನು ಸಮರ್ಪಕವಾಗಿ ಪಡೆದವರು ಬೇಡರು. ಇತ್ತೀಚೆಗೆ ರಾಜಕೀಯ ಸೌಲಭ್ಯವನ್ನು ಬೇಡರು ಇನ್ನೂ ಚೆನ್ನಾಗಿಯೇ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ರಾಜಕೀಯದಲ್ಲಿ ಮಹಿಳೆಯರಿಗೆ ಶೇಕಡ ೩೫ರಷ್ಟು ಮೀಸಲಾತಿ ಕಲ್ಪಿಸಿರುವುದರಿಂದ ಬೇಡ ಮಹಿಳೆಯರೂ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿದೆ. ಚಿತ್ರದುರ್ಗದ ಬೇಡರ ಎ ಭೀಮಪ್ಪ ಎನ್ನುವವರು ೧೯೫೭ರಲ್ಲಿ ಜಗಳೂರು ಮತ್ತು ಚಿತ್ರದುರ್ಗದ ಜಂಟಿ ಕ್ಷೇತ್ರದಿಂದ ಚುನಾಯಿತರಾಗಿ ವಿಧಾನಸಭೆಯನ್ನು ಪ್ರವೇಶಿಸಿದರು. ಇವರು ಸ್ವಲ್ಪ ಕಾಲ ಆ ಸಮಯದಲ್ಲಿ ಸಹಕಾರಿ ಸಚಿವರೂ ಆಗಿದ್ದರು. ಚಿತ್ರದುರ್ಗ ಜಿಲ್ಲೆಯ ಘಟ್ಟಿ ಹೊಸಹಳ್ಳಿಯ ಸಿ ಮಲೆಸಿದ್ದಪ್ಪ ಎನ್ನುವವರು ೧೯೫೨, ೧೯೫೭, ೧೯೬೭ರಲ್ಲಿ ಶಾಸನಸಭೆಗೆ ಸ್ಪರ್ಧಿಸಿ ಸೋಲನ್ನು ಕಂಡರು. ತರುವಾಯ ೧೯೬೯–೭೧ರ ಕಾಲಘಟ್ಟದಲ್ಲಿ ಹೊಳಲ್ಕೆರೆ ತಾಲೂಕು ಬೋರ್ಡ್ ಅಧ್ಯಕ್ಷರಾಗಿದ್ದರು. ೧೯೭೮ರಿಂದ ೧೯೮೫ರವರೆಗೆ ಕರ್ನಾಟಕದ ರಾಜಕೀಯದಲ್ಲಿ ಗುರುತಿಸಿಕೊಂಡ ಬೇಡ ಸಮುದಾಯದರ ಸಂಖ್ಯೆ ಈ ಕೆಳಗಿನಂತಿದೆ'.[೧೭]

ಕೋಷ್ಟಕ ೭.೧. ವಿಧಾನಸಭೆ, ವಿಧಾನ ಪರಿಷತ್, ಲೋಕ ಸಭೆಗಳಿಗೆ ಆಯ್ಕೆಯಾದವರ ಸಂಖ್ಯೆ (೧೯೭೮–೮೪)

ವರ್ಷ	ಎಂಎಲ್‌ಎ	ಎಂಎಲ್‌ಸಿ	ಎಂಪಿ
೧೯೭೮	೪	೨	೧ (೧೯೭೭)
೧೯೮೩	೧	–	೧ (೧೯೮೦)
೧೯೮೪	೫	೨	–

ಕೃಪೆ: ದುರುಗಪ್ಪ, ವಿಜಯನಗರೋತ್ತರಕಾಲೀನ ಬೇಡ ಜನಾಂಗ, ಪು ೧೯೪

ರಾಜಕೀಯವಾಗಿ ಬೇಡರ ಹಿಡಿತದಲ್ಲಿರುವ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದುದು ರಾಯಚೂರು ಜಿಲ್ಲೆ. ಸಾಮಾನ್ಯ ಅಭ್ಯರ್ಥಿಗಳಾಗಿ ಲೋಕಸಭೆಯನ್ನು ಈ ಜಿಲ್ಲೆಯ ಮೂಲಕ ಪ್ರವೇಶಿಸಿದವರು ರಾಜಾ ಅಂಬಣ್ಣ ನಾಯಕ(೧೯೮೯), ಎ ವೆಂಕಟೇಶ ನಾಯಕ (೧೯೯೧), ಮೀಸಲಾತಿ ಪಡೆದ

ತರುವಾಯ ಈ ಸಂಖ್ಯೆ ಅಧಿಕವಾಗಿದೆ. ಕುಲದೀಪ್ ಸಿಂಗ್ ಆಯೋಗದ ಶಿಫಾರಸ್ಸಿನಂತೆ ೨೦೦೭ರಲ್ಲಿ ಕ್ಷೇತ್ರಗಳ ಮರುವಿಂಗಡಣೆಯಾದ ತರುವಾಯ ಪರಿಶಿಷ್ಟ ಪಂಗಡದ ೧೫ ವಿಧಾನ ಸಭೆ ಮತ್ತು ೨ ಲೋಕ ಸಭೆ ಸ್ಥಾನಗಳನ್ನು ಬೇಡರು ಎರಡೂ ಅವಧಿಯಲ್ಲಿ ತಮ್ಮದನ್ನಾಗಿಸಿಕೊಂಡಿದ್ದಾರೆ.

೧೯೯೭ರಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದ ಮೀಸಲಾತಿಯಡಿ ಆಯ್ಕೆಯಾದ ಬೇಡರ ಸದಸ್ಯರ ವಿವರ ಈ ಕೆಳಗಿನಂತಿದೆ

ಕ್ರಸಂ.	ವಿವರಗಳು	ಬೇಡಬುಡಕಟ್ಟಿನ ಸದಸ್ಯರ ಸಂಖ್ಯೆ
೧	ಜಿಲ್ಲಾ ಪಂಚಾಯ್ತಿ ಸದಸ್ಯರು	೪೭
೨	ತಾಲೂಕು ಪಂಚಾಯ್ತಿ ಸದಸ್ಯರು	೧೯೬
೩	ಗ್ರಾಮ ಪಂಚಾಯ್ತಿ ಸದಸ್ಯರು	೭೫೮೫
	ಒಟ್ಟು	**೭೮೨೮**
೪	ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು	೧
೬	ತಾಲೂಕು ಪಂಚಾಯ್ತಿ ಅಧ್ಯಕ್ಷರು	೯
೭	ಗ್ರಾಮ ಪಂಚಾಯ್ತಿ ಅಧ್ಯಕ್ಷರು	೨೯೭
	ಒಟ್ಟು	**೩೦೭**

ಅಧಿಕಾರದ ಆಸೆ ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇ ಇರುತ್ತದೆ. ಆದರೆ ಅವಕಾಶಗಳು ಕೂಡಿ ಬರಬೇಕಷ್ಟೆ. ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುತೇಕವಾಗಿ ಅಧಿಕಾರವನ್ನು ಪಡೆಯುವುದೆಂದರೆ ಜಾತಿ ಹಾಗೂ ಹಣದಲ್ಲಿ ಪ್ರಬಲವಾಗಿರ ಬೇಕೆಂಬ ಮನೋಭಾವವಿದೆ. ಇದು ಬಹುತೇಕ ಸತ್ಯವೂ ಕೂಡ. ಪ್ರಜಾಪ್ರಭುತ್ವದ ದೊಡ್ಡ ಲೋಪದೋಷವೆಂದರೆ ಇದೇ ಆಗಿದೆ. ಅದರಲ್ಲೂ ಭಾರತದಂತಹ ಜಾತಿವ್ಯವಸ್ಥೆಯಿಂದ ಕೂಡಿದ ದೇಶದಲ್ಲಿ ಬಂಡವಾಳಶಾಹಿಗಳಷ್ಟೇ ಪ್ರಬಲವಾದುದು ಜಾತಿವ್ಯವಸ್ಥೆಯಾಗಿದೆ. ಜಾತಿ ಮತ್ತು ಹಣ ಈ ಎರಡೇ ಕೊನೆಗೆ ಅಧಿಕಾರ ಪಾಲುಗಾರಿಕೆಯ ನಿರ್ಣಾಯಕ ಶಕ್ತಿಗಳಾಗುತ್ತವೆ. ಹೀಗಾಗಿ ಈ ದೇಶದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಮತ್ತು ಮೇಲ್ಜಾತಿಗಳು ತಮ್ಮನ್ನು ಮೀರಿಸುವವರು ಯಾರೂ ಇಲ್ಲ ಎನ್ನುವಂತೆ ಮೆರೆದಾಡುತ್ತವೆ. ಪ್ರಾಯಶಃ ಸಂವಿಧಾನದಲ್ಲಿ ತಳವರ್ಗಗಳಿಗಾಗಿ ಮೀಸಲಾತಿ ಕಲ್ಪಸದೇ ಹೋಗಿದ್ದಲ್ಲಿ ತಳಸಮುದಾಯಗಳಿಗೆ ಇಂದಿಗೂ ಅಧಿಕಾರವೆಂಬುದು ಕೇವಲ ಮರೀಚಿಕೆಯಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚು. ಲೋಹಿಯಾರಂಥವರು ಈ ಕಾರಣಕ್ಕಾಗಿಯೇ ಅಲ್ಪಸಂಖ್ಯಾತ

ಜಾತಿಗಳಿಗೂ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಬೇಕೆಂದು ತಿಳಿಸುತ್ತಾರೆ.[೭] ತಳಸಮುದಾಯಗಳಿಗೆ ಅಧಿಕಾರದ ಗದ್ದುಗೆ ಹಿಡಿಯಲು ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮೀಸಲಾತಿ ಪರಿಣಾಮಕಾರಿ ವ್ಯವಸ್ಥೆಯಾಗಿದೆ.

ಕರ್ನಾಟಕದ ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಯ ಕೇಂದ್ರಸ್ಥಾನವಾಗಿ ದಾವಣಗೆರೆಯನ್ನು ಗುರುತಿಸಲಾಗುತ್ತಿತ್ತು. ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಕರೆಯಲಾಗುತ್ತಿದ್ದ ದಾವಣಗೆರೆ ಹತ್ತಿ ಗಿರಣಿಗಳಿಂದ ತುಂಬಿದ ಕಾಲವೊಂದಿತ್ತು. ಅಲ್ಲಿ ಕಾರ್ಮಿಕ ಶಕ್ತಿಗೆ ದೊಡ್ಡ ಬಲವೇ ಇತ್ತು. ಆದರೆ ಆ ಸಂದರ್ಭ ದಾವಣಗೆರೆ ಜಿಲ್ಲೆಯಾಗಿ ಮಾರ್ಪಟ್ಟ ಕಾಲದಲ್ಲಿ ಇಲ್ಲವಾಗಿದೆ. ಈ ಜಿಲ್ಲೆಯಲ್ಲಿ ಕೇವಲ ಹಣ ಮತ್ತು ಜಾತಿಗಳೇ ರಾಜಕಾರಣವನ್ನು ನಿಯಂತ್ರಿಸುವ ಶಕ್ತಿಗಳಾಗಿ ಮಾರ್ಪಟ್ಟಿವೆ. ದಾವಣಗೆರೆ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವ ಲಿಂಗಾಯತ, ಕುರುಬ ಮುಂತಾದ ಪ್ರಬಲ ಸಮುದಾಯಗಳು ರಾಜಕೀಯ ಪಕ್ಷದ ಬೆನ್ನಿಗೆ ನಿಂತು ಪ್ರತಿನಿಧಿಸುತ್ತವೆ.

ದಾವಣಗೆರೆ ಜಿಲ್ಲೆಯಲ್ಲಿ ಬೇಡ ಸಮುದಾಯದ ಹೊರತಾಗಿ ಡುಂಗ್ರಿ ಗರಾಸಿಯ, ಹಕ್ಕಿಪಿಕ್ಕಿ, ಮೇದ, ರಾಜಗೊಂಡ ಬುಡಕಟ್ಟುಗಳು ಇದ್ದರೂ ಅವು ತೀರಾ ಅಲ್ಪಸಂಖ್ಯಾತ ಪರಿಶಿಷ್ಟ ಪಂಗಡ ಸಮುದಾಯಗಳಾಗಿವೆ. ಹೀಗಾಗಿ ಈ ಸಮುದಾಯಗಳು ಇಂದಿಗೂ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿಲ್ಲ.

ಬಹುತೇಕ ಪರಿಶಿಷ್ಟ ಪಂಗಡದ ಮೀಸಲಾತಿ ಸ್ಥಾನಗಳಿಗೆ, ಅದರಲ್ಲೂ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಆಯ್ಕೆಯಾಗುವವರು ಕೇವಲ ಬೇಡರೆಂಬ ವಾದವೂ ಇದೆ. ಅದರಲ್ಲೂ ದಾವಣಗೆರೆ ಹಾಗೂ ಜಗಳೂರು ತಾಲೂಕುಗಳಲ್ಲಿ ಬೇಡರ ಪ್ರಮಾಣ ಹೆಚ್ಚಾಗಿದೆ. ಈ ತಾಲೂಕುಗಳಲ್ಲಿ ಬೇಡರನ್ನು ಯಾರು ಓಲೈಸುತ್ತಾರೋ ಅವರಿಗೆ ಗೆಲುವು ನಿಶ್ಚಿತ ಎಂದೇ ತಿಳಿಯಲಾಗಿದೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಬೇಡರ ಹೊರತಾಗಿ ಇನ್ನುಳಿದ ೪೯ ಪರಿಶಿಷ್ಟ ಪಂಗಡದ ಸಮುದಾಯಗಳು ಅಲ್ಪಸಂಖ್ಯಾತ ಸಮುದಾಯಗಳಾಗಿವೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂವಿಧಾನಬದ್ಧವಾಗಿ ಯಾವ ಯಾವ ಸವಲತ್ತುಗಳನ್ನು ಸರ್ಕಾರ ನೀಡುತ್ತದೆ ಎಂಬುದರ ಕುರಿತಾಗಿ ಅರಿಯಲಾರದಷ್ಟು ಮುಗ್ಧ ಸಮುದಾಯಗಳು ಅವಾಗಿವೆ. ಇಲ್ಲಿ ಚುನಾವಣೆಗೆ ನಿಲ್ಲುವ ವ್ಯಕ್ತಿ ತನ್ನ ಕೋಮಿಗೆ ಸೇರಿದವರ ಜನಸಂಖ್ಯೆ ಆ ಕ್ಷೇತ್ರದಲ್ಲಿ ಎಷ್ಟು ಎಂದು ಸ್ಪಷ್ಟವಾಗಿ ಸೂಚಿಸಬೇಕು. ಆ ವ್ಯಕ್ತಿಯನ್ನು ಚುನಾವಣೆಗೆ ಅಭ್ಯರ್ಥಿಯಾಗಿಸಲು ಆ ಒಂದು ಅಂಶವನ್ನು ಪ್ರತಿಯೊಂದು ಪಕ್ಷಗಳು ಪರಿಗಣಿಸುತ್ತವೆ.

ಒಬ್ಬ ವ್ಯಕ್ತಿ ಚುನಾವಣೆಗೆ ನಿಲ್ಲಲು ಗಮನಿಸುವ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

೧. ಅಭ್ಯರ್ಥಿ ಯಾವ ಜಾತಿ/ಕೋಮಿಗೆ ಸೇರಿದ್ದಾನೆ. ಅವನು ನಿಲ್ಲುವ ಕ್ಷೇತ್ರದಲ್ಲಿ ಮತ ನೀಡುವವರಲ್ಲಿ ಅಭ್ಯರ್ಥಿಯ ಜಾತಿ/ಕೋಮಿಗೆ ಸೇರಿದ ಒಟ್ಟು ಜನಸಂಖ್ಯೆ ಎಷ್ಟಿದೆ.

೨. ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವವನು ಆರ್ಥಿಕವಾಗಿ ಎಷ್ಟು ಸಬಲತೆಯನ್ನು ಹೊಂದಿದ್ದಾನೆ. ಚುನಾವಣೆಯಲ್ಲಿ ಆತ ಹಣ ಎಷ್ಟು ವೆಚ್ಚ ಮಾಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ ಹಾಗೂ ಆ ವ್ಯಕ್ತಿ ಪಕ್ಷದ ಕೆಲಸಗಳಿಗೆ ವೈಯಕ್ತಿಕವಾಗಿ ಎಷ್ಟು ಹಣ ನೀಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ.

ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಆ ಚುನಾವಣೆಗೆ ಸ್ಪರ್ಧಿಸಲು ನೈತಿಕವಾಗಿ ಎಷ್ಟು ಯೋಗ್ಯ ಎಂದು ನೋಡುವುದಿಲ್ಲ.

ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಜನಸಾಮಾನ್ಯರಿಗೆ ನ್ಯಾಯ ಒದಗಿಸಬಲ್ಲಷ್ಟು ಹೊಣೆಗಾರಿಕೆ ಹೊಂದಿರುವನೆ ಮತ್ತು ನೈತಿಕ ಯೋಗ್ಯತೆ ಇರುವವನೆ ಎಂಬುದನ್ನು ಗಮನಿಸುವುದಿಲ್ಲ.

ಚುನಾವಣಾ ಅಭ್ಯರ್ಥಿ ಶಿಕ್ಷಣ ಪಡೆದವನೆ ಅಥವಾ ಇಲ್ಲವೆ, ಶಿಕ್ಷಣ ಪಡೆದಿದ್ದರೆ ಅವನು ಯಾವ ಹಂತದವರೆಗೆ ಶಿಕ್ಷಣ ಪಡೆದಿದ್ದಾನೆ ಮುಂತಾಗಿ ಯಾವುದನ್ನೂ ಗಮನಿಸುವುದಿಲ್ಲ.

ಇಂದು ಚುನಾವಣಾ ಸ್ವರೂಪವೇ ಬದಲಾಗುತ್ತಿದೆ. ಜಾತಿ ನೋಡಿ, ಚುನಾವಣೆಗೆ ನಿಂತ ಅಭ್ಯರ್ಥಿಯ ಸಾಮರ್ಥ್ಯ ನೋಡಿ ಮತದಾರ ಮತ ಹಾಕುವುದನ್ನು ಮರತೇ ಬಿಟ್ಟಿದ್ದಾನೇನೋ ಎನ್ನುವಷ್ಟು ಅಧ್ವಾನದ ಫಲಿತಾಂಶಗಳು ಚುನಾವಣಾ ವಿಚಾರದಲ್ಲಿ ಹೊರಬೀಳುತ್ತಿವೆ. ಬಹುತೇಕವಾಗಿ ಈ ದೇಶದಲ್ಲಿ ನಡೆಯುವ ಎಲ್ಲಾ ಸ್ವರೂಪದ ಚುನಾವಣೆಗಳು ಚುನಾವಣಾ ನೀತಿಯನ್ನು ಮುರಿದೇ ಚುನಾವಣೆ ನಡೆಸುತ್ತವೆ ಎಂಬುದನ್ನು ಗಮನಿಸಬಹುದಾಗಿದೆ. ಹಣ, ಹೆಂಡ, ಸೀರೆ, ಇತ್ಯಾದಿ ಚಿಕ್ಕ ಪುಟ್ಟ ಆಸೆಗಳನ್ನು ಮತದಾರನಲ್ಲಿ ತುಂಬಿ ಚುನಾವಣೆಯಲ್ಲಿ ಗೆಲ್ಲುವವರ ಪ್ರಮಾಣವೇ ಹೆಚ್ಚು. ಅದಕ್ಕೆ ಸ್ಥಳೀಯವಾಗಿ ನಡೆಯುವ ಚುನಾವಣೆಗಳೂ ಹೊರತಲ್ಲ.

ದಾವಣಗೆರೆ ಜಿಲ್ಲೆಯ ಒಟ್ಟು ಆರು ತಾಲೂಕುಗಳ ಬೇಡರ ಮೂರು ತಲೆಮಾರುಗಳಲ್ಲಾದ ರಾಜಕೀಯ ಸ್ಥಿತಿಗತಿಗಳು ಹಾಗೂ ಉಂಟಾದ ಪಲ್ಲಟಗಳ ಕುರಿತು ಈ ಕೆಳಗೆ ವಿವರಿಸಲಾಗಿದೆ.

ಜಿಲ್ಲೆಯ ಆರು ತಾಲೂಕುಗಳ ನಡುವೆ ತಾಲೂಕಿಗೆ ಮೂರು ಗ್ರಾಮಗಳಂತೆ ೧೮ ಗ್ರಾಮಗಳ ಬೇಡರ ಸ್ಥಿತಿಗತಿಗಳನ್ನು ಗಮನಿಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಈ ೬ ತಾಲೂಕುಗಳಲ್ಲಿ ಚನ್ನಗಿರಿ, ಹೊನ್ನಾಳಿ ತಾಲೂಕಿನಲ್ಲಿ ಬೇಡರ ಜನಸಂಖ್ಯೆ ಕಡಿಮೆ ಇದೆ. ಅದಕ್ಕಿಂತಲೂ ಸ್ವಲ್ಪ ಹೆಚ್ಚು ಕಂಡುಬರುವುದು ದಾವಣಗೆರೆ ಹಾಗೂ ಹರಿಹರ ತಾಲೂಕುಗಳಲ್ಲಿ. ಹರಪನಹಳ್ಳಿ ಹಾಗೂ

ಜಗಳೂರು ತಾಲೂಕುಗಳಲ್ಲಿ ಬೇಡರು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದಾರೆ. ಆರ್ಥಿಕವಾಗಿ ಚನ್ನಗಿರಿ, ಹೊನ್ನಾಳಿ ತಾಲೂಕಿನ ಬೇಡ ಜನ ಸ್ವಲ್ಪ ಸುಸ್ಥಿತಿಯಲ್ಲಿರುವಂತೆ ಕಂಡುಬರುತ್ತಾರೆ. ಆದರೆ ರಾಜಕೀಯವಾಗಿ ಈ ಸಮುದಾಯದ ಆ ತಾಲೂಕುಗಳಲ್ಲಿ ದುರ್ಬಲವಾಗಿದೆ. ಹರಿಹರ, ದಾವಣಗೆರೆಯಲ್ಲಿಯ ಬೇಡ ಜನ ಹೊನ್ನಾಳಿ, ಚನ್ನಗಿರಿಯವರಿಗಿಂತ ಆರ್ಥಿಕವಾಗಿ ಸ್ವಲ್ಪ ದುರ್ಬಲರೆನ್ನಬಹುದು. ಹಾಗೆಯೇ ಅವರ ಸಂಖ್ಯಾಬಲವೂ ಅಷ್ಟಕ್ಕಷ್ಟೆ. ಹರಪನಹಳ್ಳಿ ಹಾಗೂ ಜಗಳೂರಿನಲ್ಲಿ ಬೇಡರು ಹೆಚ್ಚಿನ ಜನಸಂಖ್ಯೆಯನ್ನೇನೋ ಹೊಂದಿದೆ. ಆದರೆ ಆರ್ಥಿಕವಾಗಿ ಈ ತಾಲೂಕುಗಳ ಬೇಡರ ಜನ ದುರ್ಬಲರೆಂದೇ ಹೇಳಬಹುದು. ಇಂದಿನ ರಾಜಕೀಯದಲ್ಲಿ ಕೇವಲ ಸಂಖ್ಯಾಬಲವೊಂದೇ ಏನೇನೂ ಮಾಡಲಾರದು. ಆರ್ಥಿಕವಾಗಿಯೂ ಅಭ್ಯರ್ಥಿ ಸದೃಢನಾಗಿರಬೇಕು. ಹಾಗಿದ್ದಾಗ ಮಾತ್ರ ರಾಜಕೀಯವಾಗಿ ಆ ವ್ಯಕ್ತಿಗೆ ಸ್ವಲ್ಪಮಟ್ಟಿಗೆ ಭದ್ರತೆ ಸಿಗುವುದು ಸಾಧ್ಯವೇನೊ. ಇಲ್ಲದಿದ್ದರೆ ಅದು ಕಷ್ಟಸಾಧ್ಯದ ಕಾರ್ಯವಾಗುತ್ತದೆ.

ದಾವಣಗೆರೆ ಜಿಲ್ಲೆಯಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ೧೮ ಗ್ರಾಮಗಳನ್ನು ಸಮೀಕ್ಷಿಸಿದಾಗ ಕಂಡುಬಂದ ಅಂಶಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ೧೮ ಗ್ರಾಮಗಳನ್ನು ಗಮನಿಸಿದಾಗ ಈ ೧೮ ಗ್ರಾಮಗಳ ಮೂರು ತಲೆಮಾರುಗಳಲ್ಲಿ ರಾಜಕೀಯ ಪ್ರಜ್ಞೆ ಯಾವ ರೀತಿಯಿದೆ, ಇವರಲ್ಲಿ ರಾಜಕೀಯ ಪ್ರವೇಶಿಸಿದವರು ಯಾರು ಎಂಬುದನ್ನು ನೋಡಿದಾಗ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ.

ಮೊದಲ ತಲೆಮಾರಿನ ಅಥವಾ ಮೊದಲ ತಲೆಮಾರಿಗೆ ಹತ್ತಿರದ ವಯೋಮಾನದವರು ಮತ್ತು ಎರಡನೇ ತಲೆಮಾರಿನವರು ರಾಜಕೀಯದ ಕುರಿತು ಅಂತಹ ಆಸಕ್ತಿಯನ್ನು ವ್ಯಕ್ತಪಡಿಸಲಾರರು. ಮೊದಲ ತಲೆಮಾರಿನವರಿಗೆ ತಮಗೆ ವೃದ್ಧಾಪ್ಯ ವೇತನ ಮುಂತಾದ ಸವಲತ್ತುಗಳನ್ನು ಇಂದಿರಾ ಗಾಂಧಿ ಸರ್ಕಾರ ನೀಡಿತು ಎಂಬ ಭಾವನೆ ಇದೆ. ಹೀಗಾಗಿ ಅವರ ನಿಷ್ಠೆ ಬಹುತೇಕ ಕಾಂಗ್ರೆಸ್ ಪರವಾಗಿಯೇ ಇದೆ.

ಎರಡನೇ ತಲೆಮಾರಿನವರು ಸಹ ಉಳುವವನಿಗೇ ಭೂಮಿಯ ಒಡೆತನ ಎಂದು ತಿಳಿಸಿದ ಕಾಂಗ್ರೆಸ್ ಪರ ನಿಲುವಿದ್ದಿತು. ಆದರೆ ಕರ್ನಾಟಕದಲ್ಲಿ ಜಾತಿ ರಾಜಕಾರಣದಿಂದಾಗಿ ಎರಡು ಮತ್ತು ಮೂರನೇ ತಲೆಮಾರಿನವರು ರಾಜ್ಯದ ರಾಜಕೀಯ ಪ್ರತಿನಿಧಿಯೆಂದು ಭಾವಿಸುವ ತಮ್ಮ ಜಾತಿಯ ವ್ಯಕ್ತಿಯಿಂದಾಗಿ ಬಿಜೆಪಿ ಪರ ನಿಲುವು ತಳೆದಿದ್ದರು. ಪ್ರಸ್ತುತ ರಾಜ್ಯದ ರಾಜಕೀಯದಲ್ಲಾದ ಏರುಪೇರಿನಿಂದಾಗಿ ಯಾವ ಪಕ್ಷವನ್ನು ಬೆಂಬಲಿಸಬೇಕು ಎನ್ನುವ ವಿಚಾರದಲ್ಲಿ ಗೊಂದಲಗಳಿವೆ. ಬಹುತೇಕ ರಾಜಕೀಯವಾದ ಇವರ ಆಲೋಚನಾ ಕ್ರಮ ತಮ್ಮ ಸಮುದಾಯದ ಮಠಾಧೀಶರನ್ನು ಅವಲಂಬಿಸಿದೆ ಎಂದೇ ವಕ್ತೃಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಈ ೧೮ ಗ್ರಾಮದ ಯಾವೊಬ್ಬ ಬೇಡರ ಅಭ್ಯರ್ಥಿಯು ಇಲ್ಲಿಯವರೆಗೆ ರಾಜ್ಯದ ವಿಧಾನಸೌಧದ ಮೆಟ್ಟಿಲನ್ನು ಏರಲು ಸಾಧ್ಯವಾಗಿಲ್ಲ. ಈ ಸಮುದಾಯದ ಮೊದಲ ಮತ್ತು ಎರಡನೇ ತಲೆಮಾರಿನ ಬಹುತೇಕ ಜನ ರಾಜ್ಯದ ರಾಜಧಾನಿಯನ್ನು ಸಹ ನೋಡಿಲ್ಲ. ಮೀಸಲಾತಿ ಸೌಲಭ್ಯ ಪಡೆದ ಕಾರಣಕ್ಕೆ ಇಂದು ಇವರು ಗ್ರಾಮಪಂಚಾಯಿತಿ ಮಟ್ಟದಲ್ಲಾದರೂ ಸ್ಪರ್ಧಿಸಲು ಸಾಧ್ಯವಾಗಿದೆ. ಇವರು ಹೆಚ್ಚೆಂದರೆ ಗ್ರಾಮಪಂಚಾಯಿತಿಗಳಿಗೆ ಸ್ಪರ್ಧಿಸಿ ಸೋತಿದ್ದಾರೆ ಇಲ್ಲವೇ ಗೆಲುವನ್ನು ಸಂಪಾದಿಸಿಕೊಂಡು ಗ್ರಾಮಪಂಚಾಯಿತಿ ಸದಸ್ಯರಾಗಿ ಇಂದು ಕಾರ್ಯ ನಿರ್ವಹಿಸುತ್ತಿದ್ದಾರೆ. ಅದರಾಚೆಗೆ ಇವರು ತಾಲೂಕು ಪಂಚಾಯಿತಿ ಮಟ್ಟಕ್ಕೂ ತಲುಪಲು ಸಾಧ್ಯವಾಗಿಲ್ಲ. ಎರಡನೆದಾಗಿ ಈ ಗ್ರಾಮಗಳ ಬೇಡರ ಮೂರನೇ ತಲೆಮಾರಿನ ಕೆಲವರು ತಾವು ರಾಜಕೀಯವಾಗಿ ತುಂಬಾ ಪ್ರಭಾವಶಾಲಿಗಳು ಎನ್ನುವಂತೆ ತೋರಿಸಿಕೊಳ್ಳುವರಾದರೂ ಜಿಲ್ಲೆಯ ಪಕ್ಷಗಳ ಕಛೇರಿಗಳಲ್ಲಿ ಇವರ ಸ್ಥಾನ ತುಂಬಾ ಕೊನೆಯದು ಎಂಬುದನ್ನು ಸ್ಥಳೀಯ ಜನ ತಿಳಿಸುತ್ತಾರೆ.

ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಯಾವುದೇ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷಗಳು ಪ್ರವೇಶಿಸುವಂತಿಲ್ಲ. ಹೀಗಾಗಿ ಚುನಾವಣಾ ಆಯೋಗ ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಯಾವುದೇ ಪಕ್ಷದ ಚಿಹ್ನೆಯನ್ನು ಗುರುತಾಗಿ ನೀಡುವುದಿಲ್ಲ. ಅವರಿಗೆ ಚುನಾವಣಾ ಆಯೋಗ ನಿರ್ಧಾರ ಮಾಡಿದ ಯಾವುದಾದರೂ ಒಂದು ಚಿಹ್ನೆಯನ್ನು ನೀಡಲಾಗುತ್ತದೆ ಅಷ್ಟೇ. ಆದರೆ ಗ್ರಾಮ ಮಟ್ಟದಲ್ಲಿ ಚುನಾವಣೆಗೆ ನಿಂತವರು ಮತಯಂತ್ರಗಳು ಎಂದರಿತ ಪಕ್ಷಗಳು ಅವರನ್ನು ಓಲೈಸಲು ಪ್ರಯತ್ನಿಸುತ್ತವೆ ಹಾಗೂ ಆ ಜನರಿಗೆ ಸಾರಾಯಿ, ಹಣ ಇತ್ಯಾದಿಗಳನ್ನು ನೀಡಿ ತಮ್ಮ ಪ್ರೀತಿಯನ್ನು ಗಳಿಸಿಕೊಳ್ಳುತ್ತವೆ. ಸಾಂವಿಧಾನಿಕವಾಗಿ ಪಕ್ಷಾತೀತವಾಗಿ ಜರುಗಬೇಕಾದ ಗ್ರಾಮ ಪಂಚಾಯಿತಿ ಚುನಾವಣೆಗಳು ಇಂದು ಪಕ್ಷ ರಾಜಕೀಯವಾಗಿ ಮಾರ್ಪಟ್ಟಿವೆ.

ಈ ರೀತಿಯ ಚುನಾವಣೆಗಳನ್ನು ಎದುರಿಸಿ ಗೆಲುವು ಕಂಡ ಮೂರು ತಲೆಮಾರಿನವರ ವಿವರಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ.

ಇಂದಿನವರೆಗೂ ತಾಲೂಕು, ಜಿಲ್ಲಾ, ರಾಜ್ಯ ಮಟ್ಟದಲ್ಲಿ ಇವರು ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿಲ್ಲ.

ಸ್ಥಳೀಯ ಮಟ್ಟದಲ್ಲಿ ಕಳೆದ ಚುನಾವಣೆಯಲ್ಲಿ ರಾಜಕೀಯ ಪ್ರವೇಶ ಮಾಡಿದ ವ್ಯಕ್ತಿಗಳ ವಿವರಗಳು ಈ ಕೆಳಗಿನಂತಿವೆ.

ಸೋಲುಗಳನ್ನು ಅನುಭವಿಸಿದವರನ್ನು ಈ ಗ್ರಾಮಗಳಲ್ಲಿ ಕಾಣಲಾಯಿತು. ಸೋತು ಹಿಮ್ಮೆಟ್ಟಿದ ಅಭ್ಯರ್ಥಿಗಳು ಯಥಾ ರೀತಿ ತಮ್ಮ ಕೆಲಸ ಕಾರ್ಯಗಳಲ್ಲಿ ನಿರತವಾಗಿ ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಮರೆತಿದ್ದರೆ ಗೆಲುವನ್ನು ಸಾಧಿಸಿ ಗ್ರಾಮ ಪಂಚಾಯಿತಿಯ ವಿವಿಧ ಹುದ್ದೆಗಳನ್ನು ಅಲಂಕರಿಸಿದವರು ತಾವು ಏನೋ ಸಾಧನೆ ಮಾಡಿದವರ ಹುಮ್ಮಸ್ಸಿನಲ್ಲಿದ್ದಾರೆ. ಈ ರೀತಿ ಸೋಲು ಗೆಲುವುಗಳೆರಡನ್ನೂ ಹೊಂದಿದ ಜನರನ್ನು ಸಂದರ್ಶಿಸಲಾಗಿ ಕಂಡುಬಂದ ಅಂಶಗಳು ಹೀಗಿವೆ.

ಕೋಷ್ಟಕ ೭.೨. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ಪರ್ಧಿಸಿ ಗೆದ್ದವರು (೨೦೦೧)

ಕ್ರಸಂ	ತಾಲೂಕು	ಮೊದಲ ತಲೆಮಾರು		ಎರಡನೇ ತಲೆಮಾರು		ಮೂರನೇ ತಲೆಮಾರು		ಒಟ್ಟು	
		ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
೧	ಚನ್ನಗಿರಿ	೧	–	–	–	೧	–	೨	೧
೨	ದಾವಣಗೆರೆ	–	೧	೧	೧	೨	೧	೪	೨
೩	ಹರಪನಹಳ್ಳಿ	–	೦೧	೨	೧	೨	೧	೪	೩
೪	ಹರಿಹರ	–	–	೨	೧	೨	–	೪	೧
೫	ಹೊನ್ನಾಳಿ	–	–	೧	೧	೨	–	೩	೧
೬	ಜಗಳೂರು	–	–	೧	–	೨	೧	೨	೨
	ಒಟ್ಟು	೧	೨	೭	೪	೧೧	೩	೧೯	೧೦

ದಾವಣಗೆರೆ ಜಿಲ್ಲೆಯ ೬ ತಾಲೂಕುಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಒಟ್ಟು ೧೮ ಗ್ರಾಮಗಳಲ್ಲಿ ಮೀಸಲಾತಿಯಡಿ ಸ್ಪರ್ಧಿಸಿ ವಿಜೇತರಾದವರು ಒಟ್ಟು ೨೯ ಜನ ಸದಸ್ಯರಾಗಿದ್ದಾರೆ. ಈ ೨೯ ಜನರಲ್ಲಿ ೧೯ ಜನ ಪುರುಷರು ಹಾಗೂ ೧೦ ಜನ ಮಹಿಳೆಯರಾಗಿದ್ದಾರೆ. ಇವರಲ್ಲಿ ಮೊದಲ ತಲೆಮಾರಿನವರು ಕೇವಲ ಒಬ್ಬ ಪುರುಷ ಹಾಗೂ ಇಬ್ಬರು ಮಹಿಳೆಯರಾಗಿದ್ದಾರೆ. ಎರಡನೇ ತಲೆಮಾರಿನಲ್ಲಿ ೭ ಜನ ಪುರುಷರು ಹಾಗೂ ೪ ಜನ ಮಹಿಳೆಯರು ಕಂಡುಬರುತ್ತಾರೆ. ಮೂರನೇ ತಲೆಮಾರಿನಲ್ಲಿ ೧೧ ಜನ ಪುರುಷರು ಹಾಗೂ ೩ ಜನ ಮಹಿಳೆಯರು ಕಂಡುಬರುತ್ತಾರೆ.

ಇದರಲ್ಲಿ ಮುಖ್ಯವಾಗಿ ಮೊದಲ ತಲೆಮಾರಿನವರಿಗೆ ರಾಜಕೀಯ ಹಂಬಲವಿಲ್ಲ ಮತ್ತು ಅವರಾರೂ ಅಕ್ಷರಸ್ಥರಲ್ಲ. ತಮ್ಮ ಮಕ್ಕಳ ಒತ್ತಾಯ, ಹಂಬಲಗಳಿಂದಾಗಿ ರಾಜಕೀಯ ಪ್ರವೇಶ ಮಾಡಿದವರು ಇವರು. ಈ ತಲೆಮಾರಿನ ಪುರುಷ ಹಾಗೂ ಮಹಿಳೆಯರಾರೂ ಗ್ರಾಮಪಂಚಾಯಿತಿ ಆಡಳಿತದಲ್ಲಿ ತಲೆಹಾಕುವವರಲ್ಲ. ಬಹುತೇಕ ಇವರು ಗ್ರಾಮಪಂಚಾಯಿತಿಯ ಸಾಮಾನ್ಯ ಸಭೆಗಳಿಗಾಗಲಿ, ಗ್ರಾಮ ಸಭೆ, ವಾರ್ಡ್ ಸಭೆ, ಇತರ ಯಾವ ಸಭೆಗಳಿಗೂ ನಿಯಮಿತವಾಗಿ ಹಾಜರಾಗುವವರಲ್ಲ. ಇವರ ಪರವಾಗಿ ಇವರ ಮಕ್ಕಳೇ ಗ್ರಾಮಪಂಚಾಯಿತಿಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಪ್ರಾಯಶಃ ಮೀಸಲಾತಿಯಿಂದಾಗಿ ಅವಕಾಶ ದೊರೆತಿದೆಯಂಬ ಕಾರಣಕ್ಕೆ ಇವರು ಸ್ಪರ್ಧಿಸಿ ವಿಜೇತರಾದವರು.

ಎರಡನೇ ತಲೆಮಾರಿನವರು ಸ್ವತಃ ರಾಜಕೀಯವನ್ನು ಪ್ರವೇಶಿಸಲು ಆಪೇಕ್ಷೆ ಪಡದವರಾದರೂ ಅವರು ಮೊದಲ ತಲೆಮಾರಿನವರಷ್ಟು ಅಮಾಯಕರಲ್ಲ ಮತ್ತು ಅವರಷ್ಟು ಅನಕ್ಷರಸ್ಥರಲ್ಲ. ಮೀಸಲಾತಿ ಸೌಲಭ್ಯಗಳನ್ನು ಹೇಗೆ ಪಡೆಯಬೇಕೆನ್ನುವ ಅರಿವು ಸ್ವಲ್ಪಮಟ್ಟಿಗಾದರೂ ಇವರಿಗಿದೆ. ಮೊದಲ ತಲೆಮಾರಿನವರಲ್ಲಿ ಗ್ರಾಮಪಂಚಾಯಿತಿಗೆ ಆಯ್ಕೆಯಾದವರು ಒಬ್ಬ ಪುರುಷ ಹಾಗೂ ಇಬ್ಬರು ಮಹಿಳೆಯರಿದ್ದರೆ ಎರಡನೇ ತಲೆಮಾರಿನಲ್ಲಿ ಏಳು ಜನ ಪುರುಷರು ಹಾಗೂ ನಾಲ್ಕು ಜನ ಮಹಿಳೆಯರು ಇರುವುದು ಕಂಡುಬರುತ್ತದೆ. ಅದೇ ಮೂರನೇ ತಲೆಮಾರಿನವರಲ್ಲಿ ಪುರುಷರು ಹನ್ನೊಂದು ಜನರಿದ್ದು ಮಹಿಳೆಯರು ಮೂರು ಜನರಿದ್ದಾರೆ. ಮೊದಲ ತಲೆಮಾರಿನಲ್ಲಿ ಮಹಿಳೆಯರು ಇಬ್ಬರು ಮಾತ್ರವಿದ್ದರೆ ಎರಡನೇ ತಲೆಮಾರಿನಲ್ಲಿ ಅದು ನಾಲ್ಕರಷ್ಟು ಹೆಚ್ಚಾಗಿದೆ. ಮೂರನೇ ತಲೆಮಾರಿಗೆ ಬರುವಷ್ಟರಲ್ಲಿ ಮಹಿಳೆಯರ ಪ್ರಮಾಣ ಮೂರಕ್ಕೆ ಇಳಿಕೆಯಾಗಿದೆ. ಆದರೆ ಪುರುಷರ ಪ್ರಮಾಣವು ತಲೆಮಾರಿನಿಂದ ತಲೆಮಾರಿಗೆ ಹೆಚ್ಚುತ್ತಲೇ ಸಾಗಿದೆ. ಅಂದರೆ ಬೇಡರ ಮಹಿಳೆಯರ ರಾಜಕೀಯ ಪ್ರವೇಶ ಪುರುಷರಷ್ಟು ಹೆಚ್ಚಿಗಿಲ್ಲ ಮತ್ತು ಆ ಪ್ರಮಾಣವು ಹಿಮ್ಮುಖವಾಗಿ ಸಾಗುತ್ತಿರುವುದು ಕಂಡುಬರುತ್ತದೆ.

ಮೂರನೇ ತಲೆಮಾರಿನವರಲ್ಲಿ ರಾಜಕೀಯ ಆಕಾಂಕ್ಷೆ ಮೊದಲ ಎರಡು ತಲೆಮಾರಿಗಿಂತಲೂ ಹೆಚ್ಚಾಗಿದೆ. ಈ ತಲೆಮಾರಿನವರಿಗೆ ಜಾತಿ ರಾಜಕಾರಣದಲ್ಲಿ ಹೆಚ್ಚು ವಿಶ್ವಾಸ ಇರುವಂತೆ ಕಂಡುಬರುತ್ತದೆ. ಅದರಲ್ಲೂ ತಮ್ಮ ಜಾತಿಯ ರಾಜ್ಯ ರಾಜಕಾರಣಿಗಳ ಮೇಲೆ ಇನ್ನಿಲ್ಲದಷ್ಟು ವಿಶ್ವಾಸ ಇವರಿಗಿದೆ. ಈ ತಲೆಮಾರಿನ ಜನ ಅವಕಾಶವಾದದಲ್ಲಿಯೇ ಹೆಚ್ಚು ವಿಶ್ವಾಸವಿಟ್ಟವರು. ಮೊದಲ ಎರಡು ತಲೆಮಾರಿನವರ ರಾಜಕೀಯ ಪ್ರವೇಶದಲ್ಲಿ ಬಹುತೇಕ ಮೇಲ್ಜಾತಿಗಳ ಹುನ್ನಾರ ನೇರವಾಗಿಯೋ ಪರೋಕ್ಷವಾಗಿಯೋ ಕೆಲಸ ಮಾಡಿದರೆ ಮೂರನೇ ತಲೆಮಾರಿನವರ ರಾಜಕೀಯ ಪ್ರವೇಶದಲ್ಲಿ ಬಹುತೇಕ ಸ್ವಜಾತಿ ರಾಜಕಾರಣಿಗಳ ಬೆಂಬಲವೇ ಮುಖ್ಯ ಕೆಲಸ ಮಾಡಿದೆ. ಬಂಡವಾಳಶಾಹಿ ರಾಜಕಾರಣಿಗಳ ಹಣದ ವ್ಯಾಮೋಹ ಇವರ ರಾಜಕೀಯದಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಸ್ವತಃ ವಕ್ತೃಗಳೇ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ಚುನಾವಣೆಗೆ ನಿಂತ ಎಲ್ಲರೂ ಮೀಸಲಾತಿ ಕಾರಣಕ್ಕೆ ಚುನಾವಣೆಗೆ ನಿಂತವರು ಹಾಗೂ ಈ ಸದಸ್ಯರಲ್ಲಿ ಬಹುತೇಕರು ಇನ್ನೊಬ್ಬರ ಪ್ರಚೋದನೆಯಿಂದ ಸದಸ್ಯರಾದವರು. ಅದರಲ್ಲೂ ಮೂರು ತಲೆಮಾರಿನ ಮಹಿಳಾ ಸದಸ್ಯರು ನಾಮಕಾರ್ಥವಾಗಿ ಚುನಾವಣೆಗೆ ನಿಂತು ನಾಮಕಾರ್ಥವಾಗಿ ಸದಸ್ಯರಾದವರು. ಇವರ ಪರವಾಗಿ ಇವರ ಮನೆ ಗಂಡಸರೇ ಅಧಿಕಾರದ ಲಾಭ ಪಡೆಯುತ್ತಿದ್ದಾರೆ ಎನ್ನುವ ಮಾತುಗಳು ಕ್ಷೇತ್ರಕಾರ್ಯದಲ್ಲಿ ಕೇಳಿಬಂದವು. ಕೇವಲ ಪರಿಶಿಷ್ಟ ಪಂಗಡ ಮಹಿಳಾ ಮೀಸಲಾತಿ ಪಡೆಯಬಹುದೆಂಬ ಕಾರಣಕ್ಕಾಗಿ ಆ ಅವಕಾಶವನ್ನು ಬಳಸಿಕೊಳ್ಳಲು ಆ ಹೆಣ್ಣುಮಕ್ಕಳ ಕುಟುಂಬದ ಪುರುಷರು ಅವರನ್ನು ಚುನಾವಣೆಗೆ ಕರೆತಂದರು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುಟುಂಬದ ಪುರುಷರು ರಾಜಕೀಯ ಜೀವನಕ್ಕೆ ತಮ್ಮ ಮಹಿಳೆಯರನ್ನು ಕರೆತಂದರೆಂಬುದಕ್ಕಿಂತ ಆ ಮಹಿಳೆಯರ ಹೆಸರಿನಲ್ಲಿ ಪುರುಷರು ರಾಜಕೀಯ ಪ್ರವೇಶ ಮಾಡಿದರು. ಬೇಡರ ಸದಸ್ಯರ ರಾಜಕೀಯ ಪ್ರವೇಶದ ಹಿಂದೆ ಮೇಲ್ಜಾತಿಗಳು ಮತ್ತು ಬಂಡವಾಳಶಾಹಿಗಳ ಒತ್ತಡವೂ ಇದೆ ಎಂಬುದನ್ನು ಮರೆಯುವಂತಿಲ್ಲ. ಮೀಸಲಾತಿಯ ಲಾಭವನ್ನು ಪಡೆದು ಈ ಸದಸ್ಯರು ರಾಜಕೀಯ ಪ್ರವೇಶ ಮಾಡಿದ್ದಾರೆನ್ನಿಸಬಹುದಾದರೂ ಪರೋಕ್ಷವಾಗಿ ಇಲ್ಲಿ ಅವಕಾಶ ಮತ್ತು ಅಧಿಕಾರದ ಲಾಭ ಪಡೆಯುವವರು ಮೇಲ್ಜಾತಿಗಳು ಹಾಗೂ ಜಾತಿವಾದಿ ಬಂಡವಾಳಶಾಹಿಗಳೇ ಆಗಿರುತ್ತಾರೆ. ಮೀಸಲಾತಿ ಸವಲತ್ತನ್ನು ಪಡೆದು ಸದಸ್ಯರಾದ ಇವರು ಕೇವಲ ನೆಪಮಾತ್ರದ ಸದಸ್ಯರಾಗಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಬಹುತೇಕ ಮೂರು ತಲೆಮಾರಿನ ಸದಸ್ಯರು ಇದೇ ಮಾದರಿಯವರಾಗಿದ್ದುದು ಕಂಡುಬಂದಿತು.

ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾಗಿರುವ ಬೇಡರ ಸದಸ್ಯರಲ್ಲಿ ಎಲ್ಲರೂ ಮೊದಲ ಬಾರಿಗೆ ರಾಜಕೀಯ ಪ್ರವೇಶ ಮಾಡಿದವರಾಗಿದ್ದಾರೆ.

ನೀವೇಕೆ ರಾಜಕೀಯ ಪ್ರವೇಶ ಮಾಡಲು ಆಪೇಕ್ಷಿಸಿದಿರಿ ಎಂಬ ಪ್ರಶ್ನೆಗೆ ಅವರಲ್ಲಿ ಬಹುಪಾಲು ಜನ ಪುರುಷರು 'ಮೀಸಲಾತಿ ಇದ್ದುದರಿಂದ ಚುನಾವಣೆಗೆ ನಿಂತೆವು' ಎಂಬ ಉತ್ತರವನ್ನು ನೀಡಿದರೆ ಮಹಿಳೆಯರು ನಮ್ಮ ಮನೆಯ ಗಂಡಸರು ಹೇಳಿದ್ದರಿಂದ ಚುನಾವಣೆಗೆ ನಿಂತೆವು ಎಂದು ತಿಳಿಸಿದರು.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಚುನಾವಣೆಯಲ್ಲಿ ವಿಜೇತರಾದ ಬೇಡರ ಸದಸ್ಯರಷ್ಟೇ ಪ್ರಮಾಣದಲ್ಲಿ ಅವರ ವಿರುದ್ಧ ನಿಂತು ಪರಾಭವಗೊಂಡ ಸದಸ್ಯರೂ ಸಹ ಬೇಡರೇ ಆಗಿದ್ದಾರೆ. ಈ ರೀತಿ ಪರಾಭವಗೊಂಡ ಮೊದಲ ಮತ್ತು ಎರಡನೇ ತಲೆಮಾರಿನ ಸದಸ್ಯರು ಬಹುತೇಕ ಪ್ರಬಲ ಕೋಮಿನವರ ಬೆಂಬಲವಿಲ್ಲದೇ ಚುನಾವಣೆಗೆ ನಿಂತವರಾಗಿದ್ದರು ಹಾಗೂ ಆರ್ಥಿಕವಾಗಿ ಅಷ್ಟೇನೂ ಪ್ರಬಲರಲ್ಲದವರಾಗಿದ್ದರು. ಆದರೆ ಮೂರನೇ ತಲೆಮಾರಿನವರ ಸೋಲಿಗೆ ಬಹುತೇಕ ಇದಕ್ಕೆ ವ್ಯತಿರಿಕ್ತವಾದ ಕಾರಣಗಳು ಕಂಡುಬರುತ್ತವೆ. ಇಲ್ಲಿ ಇವರ ಸೋಲಿಗೆ ಮುಖ್ಯಕಾರಣ ಆ ಸಮುದಾಯದ ರಾಜ್ಯ ರಾಜಕಾರಣಿಗಳ ವಿಶ್ವಾಸ ಗಳಿಸಿಕೊಳ್ಳುವಲ್ಲಿ ಈ ಅಭ್ಯರ್ಥಿಗಳಿಗೆ ಸಾಧ್ಯವಾಗದೇ ಇರುವುದೇ ಮೂಲಕಾರಣವೆಂದರೆ ತಪ್ಪಾಗಲಾರದು. ಮುಖ್ಯವಾಗಿ ಮೂರನೇ ತಲೆಮಾರಿನವರ ಕಾಲಕ್ಕಾಗಲೆ ಸ್ವಜಾತಿ ರಾಜಕಾರಣ ಪ್ರವೇಶ ಹೊಂದಿದೆ ಮತ್ತು ರಾಜ್ಯ ರಾಜಕಾರಣವೆಂಬುದು ಗ್ರಾಮಪಂಚಾಯಿತಿಗಳ ರಾಜಕೀಯಕ್ಕೂ ಪ್ರವೇಶಿಸುವಷ್ಟು ವಿಸ್ತಾರವಾಗಿ ಮತ್ತು ವಿಕಾರವಾಗಿ ವ್ಯಾಪಿಸಿದೆ.

ಸಂವಿಧಾನದ ವಿಧಿಗಳನ್ವಯ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯಾವುದೇ ಪಕ್ಷದ ಅಡಿಯಲ್ಲಿ ಚುನಾವಣೆಗಳು ನಡೆಯಬಾರದೆಂದಿದೆ. ಆ ಪ್ರಕಾರ ಯಾವುದೇ ಪಕ್ಷದ ಚಿಹ್ನೆಯನ್ನು ಗ್ರಾಮ ಪಂಚಾಯಿತಿ ಮಟ್ಟದ ಚುನಾವಣೆಗೆ ನೀಡುವುದಿಲ್ಲ. ಚುನಾವಾಣಾಧಿಕಾರಿ ಪ್ರಾದೇಶಿಕ, ರಾಜ್ಯ, ರಾಷ್ಟ್ರ ಮಟ್ಟದ ರಾಜಕೀಯ ಪಕ್ಷಗಳ ಚಿಹ್ನೆಗಳ ಹೊರತಾದ ಚಿಹ್ನೆಗಳನ್ನು ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಆಯ್ಕೆ ಮಾಡಿ ಕೊಡುತ್ತಾನೆ. ಇದರ ಉದ್ದೇಶ ಗ್ರಾಮ ಮಟ್ಟದಲ್ಲಿ ರಾಜಕೀಯ ಪಕ್ಷಗಳ ಹೆಸರಿನಲ್ಲಿ ಘರ್ಷಣೆಗಳಾಗಬಾರದು ಎಂಬುದೇ ಆಗಿದೆ. ಆದರೆ ಬಹುತೇಕವಾಗಿ ಇಂದು ಗ್ರಾಮ ಪಂಚಾಯಿತಿ ಚುನಾವಣೆಗಳು ರಾಜಕೀಯ ಪಕ್ಷಗಳ ಹಿನ್ನೆಲೆಯಲ್ಲಿಯೇ ನಡೆಯುತ್ತವೆ. ಇದಕ್ಕೆ ರಾಜ್ಯ ಮಟ್ಟದ ರಾಜಕಾರಣಿಗಳ ಕುಮ್ಮಕ್ಕೂ ಇರುತ್ತದೆ ಎನಿಸುತ್ತದೆ. ಯಾವುದೇ ಪಕ್ಷದ ಅಭ್ಯರ್ಥಿಯಾಗಿರದ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಕೆಲವರು ತಾವು ಬಿ.ಜೆ.ಪಿ ಪಕ್ಷದವರೆಂದೂ ಇನ್ನೂ ಕೆಲವರು ಕಾಂಗ್ರೆಸ್ ಪಕ್ಷದವರೆಂದೂ ಇನ್ನು ಕೆಲವರು ಜೆ.ಡಿ.ಎಸ್. ಇತ್ಯಾದಿ ಪಕ್ಷಗಳ ಹೆಸರಿನ ಅಡಿಯಲ್ಲಿ ಪ್ರಚಾರ ಕಾರ್ಯ ನಡೆಸುತ್ತಾರಂತೆ.

ಆಡಳಿತ ವಿಕೇಂದ್ರೀಕರಣ ನೀತಿಯಿಂದಾಗಿ ಬಹುತೇಕ ಆಡಳಿತದ ಕೇಂದ್ರವಾಗಿ ಗ್ರಾಮ ಪಂಚಾಯಿತಿಗಳು ಕಾರ್ಯ ನಿರ್ವಹಿಸುತ್ತವೆ. ಗ್ರಾಮಗಳ ಅಭಿವೃದ್ಧಿ ಇತ್ಯಾದಿಗಳಿಗಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಅನುದಾನಗಳು ಬರುತ್ತವೆ. ಆದರೆ ಬಹುಪಾಲು ಬೇಡರಂತಹ ಅನಕ್ಷರಸ್ಥ ಅಥವಾ ಅತೀ ಕಡಿಮೆ ಓದಿದ ಸದಸ್ಯರಿಗೆ ಆ ಅನುದಾನ ಯೋಜನೆಗಳು ಯಾವುವು ಇವೆ, ಯಾವ ಅನುದಾನ ಯೋಜನೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಮುಂತಾದ ಯಾವ ವಿಚಾರದ ತಿಳುವಳಿಕೆ ಇಲ್ಲ. ಇದು ಕೇವಲ ಗ್ರಾಮ ಪಂಚಾಯಿತಿಯ ಬೇಡರ ಸದಸ್ಯರ ಬಹು ದೊಡ್ಡ ಸಮಸ್ಯೆ ಎಂದೇ ಹೇಳಬಹುದು.

ಆಧಾರಗಳು

೧ ಶ್ರೀಕಂಠಶಾಸ್ತ್ರಿ, ಭಾರತೀಯ ಸಂಸ್ಕೃತಿ, ಪು. ೧೯, ೧೯೫೭.

೨ ನಾಗೇಗೌಡ ಎಚ್ ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪು-೧, ಪು. ೧೦೨, ೧೯೬೬.

೩ ಲಕ್ಷಣ್ ತೆಲಗಾವಿ, ಘಟ್ಟಿ ಹೊಸಹಳ್ಳಿ ಗಟ್ಟಿಗ, ಪು. ೩೬. ೨೦೦೫

೪ ಕಪಟರಾಳ್ ಕೃಷ್ಣರಾವ್, ಸುರಪುರ ಸಂಸ್ಥಾನ ಇತಿಹಾಸ, ಪು. ೨೨೪, ೧೯೭೭.

೫ ವೀಣಾ ಎಂ ಪಿ., ಮನೆ ಸಮಾಜ ಸಂಸ್ಕೃತಿ, ಪು. ೧೩, ೨೦೦೦.

೬ ಲಕ್ಷಣ್ ತೆಲಗಾವಿ, ಘಟ್ಟಿ ಹೊಸಹಳ್ಳಿ ಗಟ್ಟಿಗ, ಪು. ೩೬

೭ ಕರ್ನಾಟಕದ ಇತಿಹಾಸ ದರ್ಶನ, ಪು. ೯೧೯.

೮ ವೆಂಕಟರಂಗೋ ಕಟ್ಟಿ, ಗ್ಯಾಸೆಟಿಯರ್, ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರಗಳ ಸಹಿತ ಪು. ೧೯೯, ೧೮೯೩.

೯ ಲಕ್ಷ್ಮಣ್ ತೆಲಗಾವಿ ಮತ್ತು ಎಂ ವಿ ಶ್ರೀನಿವಾಸ್ (ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು, ಪು. ೫೭೫, ೧೯೯೫.

೧೦ ಶಿವಣ್ಣ ಕೆ ಎಸ್., ವಿಜಯನಗರ ಕಾಲದ ಸಮಾಜ ಬಿ ಷೇಕ್ ಆಲಿ (ಸಂ), ಕರ್ನಾಟಕ ಚರಿತ್ರೆ, ಸಂಪು-೩, ಪು. ೨೪೬, ೧೯೯೭.

೧೧ ವೀರೇಂದ್ರ ಸಿಂಹ ಹರ್ತಿಕೋಟೆ, ನಾಯಕ ಜನಾಂಗದ ಪರಂಪರೆ, (ಸಂ) ವೀರೇಂದ್ರ ಸಿಂಹ ಹರ್ತಿಕೋಟೆ, ವಾಲ್ಮೀಕಿ ಕಿರಣ, ಪು. ೨೯, ೧೯೯೮.

೧೨ ವೀರನಾಯಕ ಎಚ್ ವಿ., ಕ್ಷಾತ್ರಾಂಶ ಪ್ರಬೋಧ, ಪು. ೮, ೧೯೮೭.

೧೩ ಮೀರಾಸಾಬಿಹಳ್ಳಿ ಶಿವಣ್ಣ, ನಾಯಕ ಜನಾಂಗ ಒಂದು ನೋಟ (ಸಂ), ಹರ್ತಿಕೋಟೆ ವೀರೇಂದ್ರ ಸಿಂಹ, ವಾಲ್ಮೀಕಿ ಜ್ಯೋತಿ, ಪು. ೬೧, ೧೯೮೯.

೧೪ ಲಕ್ಷ್ಮಣ್ ತೆಲಗಾವಿ, ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ಪು. ೩೮ ೧೯೯೯.

೧೫ ರಿಪೋರ್ಟ್ ಆಫ್ ದ ಸೆಕೆಂಡ್ ಬ್ಯಾಕವರ್ಡ್ ಕ್ಲಾಸ್ ಕಮಿಷನ್, ಸಂಪುಟ-೩, ಪು. ೩೯, ೧೯೮೬.

೧೬ ಬುಕನಾನ್, ದ ಜರ್ನಿ ಫ್ರಂ ಮದ್ರಾಸ್ ಥ್ರೋ ದ ಕಂಟ್ರೀಸ್ ಆಫ್ ಮೈಸೂರ್, ಕೆನರ ಅಂಡ್ ಮಲಬಾರ್, ಪು. ೧೨೩, ೧೯೭೮

೧೭ ದುರುಗಪ್ಪ, ವಿಜಯನಗರೋತ್ತರ ಕಾಲೀನ ಬೇಡ ಜನಾಂಗ, ಪು. ೧೩೪, ೨೦೧೦

ಅಧ್ಯಾಯ – ೮

ಸಮಾರೋಪ

೮.೧. ಅಧ್ಯಯನದ ಫಲಿತಗಳು

೮.೨. ಅಧ್ಯಯನದ ಮುಂದಿನ ಸಾಧ್ಯತೆಗಳು

ಅಧ್ಯಾಯ ಎಂಟು

ಸಮಾರೋಪ

ದಾವಣಗೆರೆ ಜಿಲ್ಲೆಯ ಬೇಡರ ವೃತ್ತಿ ಪಲ್ಲಟಗಳನ್ನು ಅರಿಯುವ ಪ್ರಯತ್ನವನ್ನು ಪ್ರಸ್ತುತ ಈ ಅಧ್ಯಯನದಲ್ಲಿ ಮಾಡಲಾಗಿದೆ. ಒಂದು ಕಡೆ ವ್ಯವಸ್ಥೆಯ ಮೇಲೆ ಮೇಲ್ಜಾತಿಗಳು ಹೊಂದಿರುವ ಹಿಡಿತ, ಮತ್ತೊಂದು ಕಡೆ ಜಾಗತೀಕರಣ ಹಿಡಿತದಲ್ಲಿ ಸಿಲುಕಿರುವ ವ್ಯವಸ್ಥೆಯಲ್ಲಿ ಬೇಡರಂತಹ ಸಮುದಾಯಗಳು ತನಗೆ ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ತನ್ನ ಮೂಲ ಅಸ್ತಿತ್ವವನ್ನು ಕಡೆದುಕೊಂಡು ಹೊಸ ದಿಕ್ಕಿನತ್ತ ಪಯಣಿಸಬೇಕಾದಂತಹ ಅನಿವಾರ್ಯತೆ ಸೃಷ್ಟಿಯಾಗಿದೆ. ಇಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ಮೂಲತಃ ಬುಡಕಟ್ಟು ಸಮುದಾಯವೊಂದು ಅನಿವಾರ್ಯವಾಗಿ ಹಲವು ಪಲ್ಲಟಗಳಿಗೆ ಒಳಗಾಗಬೇಕಾದ ಸ್ಥಿತಿ ಉಂಟಾಗಿದೆ. ಈ ಬದಲಾವಣೆ ಬೇಡರಿಗೆ ಹೊರತಾಗಿ ಉಳಿದಿಲ್ಲ. ಇಂತಹ ಪಲ್ಲಟಗಳಿಂದಾಗಿ ಬೇಡರ ಮೇಲೆ ಯಾವ ರೀತಿಯ ಪರಿಣಾಮಗಳಾಗಿವೆ, ಆ ಪರಿಣಾಮಗಳಿಂದ ಇವರಿಗೆ ಉಂಟಾದ ಅನುಕೂಲ ಅಥವಾ ಅನನುಕೂಲಗಳಾವುವು ಎಂಬುದನ್ನು ಇಡೀ ಅಧ್ಯಯನದುದ್ದಕ್ಕೂ ಗಮನಿಸಿ ಸಾದರಪಡಿಸಲಾಗಿದೆ. ಕರ್ನಾಟಕದಾದ್ಯಂತ ವ್ಯಾಪಿಸಿರುವ ಬಹುಸಂಖ್ಯಾತ ಬೇಡರನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯದ ಕೆಲಸವೆಂಬ ಕಾರಣಕ್ಕೆ ದಾವಣಗೆರೆ ಜಿಲ್ಲೆಯನ್ನು ಅದರಲ್ಲೂ ಜಿಲ್ಲೆಯ ಆರು ತಾಲೂಕುಗಳಲ್ಲಿಯ ಬೇಡರು ನೆಲೆಸಿರುವ ಗ್ರಾಮಗಳನ್ನು ಅಂದರೆ ಪ್ರತಿ ತಾಲೂಕಿಗೆ ಮೂರು ಗ್ರಾಮಗಳಂತೆ ಒಟ್ಟು ಹದಿನೆಂಟು ಗ್ರಾಮಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಹದಿನೆಂಟು ಗ್ರಾಮಗಳಲ್ಲಿ

ನೆಲೆಸಿದ ಬೇಡರ ವಯಸ್ಕರನ್ನು ಮೂರು ಗುಂಪುಗಳಾಗಿಸಿ ೬೦ ವರ್ಷ ಮೇಲ್ಪಟ್ಟವರನ್ನು ಮೊದಲ ತಲೆಮಾರೆಂದು ೪೦ರಿಂದ ೬೦ ವರ್ಷದೊಳಗಿನವರನ್ನು ಎರಡನೇ ತಲೆಮಾರೆಂದು, ೧೮ ವರ್ಷ ಮೇಲ್ಪಟ್ಟ ೪೦ ವರ್ಷದೊಳಗಿನವರನ್ನು ಮೂರನೇ ತಲೆಮಾರೆಂದು ಪರಿಗಣಿಸಿ ಆ ಮೂರು ತಲೆಮಾರುಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಉಂಟಾದ ವೃತ್ತಿ ಪಲ್ಲಟಗಳು ಹಾಗೂ ಅದಕ್ಕೆ ಪೂರಕವಾಗಿರುವ ಅಂಶಗಳನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಸಿಸಲಾಗಿದೆ.

ಸಾಮಾಜಿಕ ಜೀವನದಲ್ಲಿ ಹಳೆಯ ತಲೆಮಾರಿಗೂ ಎರಡನೇ ತಲೆಮಾರಿಗೂ ಮತ್ತು ಮೂರನೇ ತಲೆಮಾರುಗಳ ಮಧ್ಯೆ ಹಂತ ಹಂತವಾಗಿ ನಿಧಾನವಾಗಿ ಬದಲಾವಣೆಗಳಾಗಿವೆ. ಬೇಡರ ವಸತಿಗಳು ಮೊದಲಿಗೆ ಹಟ್ಟಿ ರೂಪದಲ್ಲಿದ್ದು ನಂತರ ಅವು ಗ್ರಾಮ ರೂಪವನ್ನು ಪಡೆಯುತ್ತಾ ಸಾಗಿವೆ. ಅದೇ ರೀತಿ ಮನೆಯ ಆಕಾರವೂ ಸಹ ಗುಡಿಸಲಿದ್ದುದು ಕಟ್ಟಡಗಳಾಗಿ ಪರಿವರ್ತನೆಗೊಂಡಿವೆ. ಮದುವೆ, ಹುಟ್ಟು, ಸಾವು ಇತ್ಯಾದಿ ಜೀವನಾವರ್ತನ ಆಚರಣೆಗಳಲ್ಲಿ ಅಂತಹ ಬದಲಾವಣೆಗಳಾಗಿಲ್ಲವೆಂದು ಮೇಲ್ನೋಟಕ್ಕೆ ತೋರುವುದಾದರೂ ಅವು ಹಂತ ಹಂತವಾಗಿ ಮೇಲ್ಜಾತಿಗಳ ಪ್ರಭಾವಕ್ಕೆ ಒಳಗಾಗುತ್ತಿರುವುದು ಗೋಚರಿಸುತ್ತದೆ. ಜೊತೆಗೆ ಆಚರಣೆಗಳೆಲ್ಲಾ ಸಂಕ್ಷಿಪ್ತಗೊಳ್ಳುತ್ತ ಸಾಗುತ್ತಿವೆ. ಸಾಂಸ್ಕೃತಿಕವಾಗಿ ಇವರ ಹಬ್ಬ ಆಚರಣೆ ದೇವರುಗಳಲ್ಲೂ ನಾನಾ ಬದಲಾವಣೆಯಾಗಿರುವುದು ಸ್ಪಷ್ಟ. ಮೂಲತಃ ಬೇಡರ ದೈವಗಳು ಪೆಟ್ಟಿಗೆ ದೈವಗಳು, ಗುಡ್ಲುಗಳಲ್ಲಿ ಆ ದೈವಗಳಿಗೆ ಸ್ಥಾನ ಕಲ್ಪಿಸಲಾಗಿತ್ತು. ಆದರೆ ಮೂರನೇ ತಲೆಮಾರಿನಷ್ಟೊತ್ತಿಗೆ ದೈವಗಳ ನೆಲೆಗಳ ಗುಡ್ಲುಗಳು ಇಂದು ಮಾಯವಾಗಿ ಕಟ್ಟಡಗಳ ರೂಪವನ್ನು ಪಡೆದಿವೆ. ಅಂದರೆ ಇವರು ತಮ್ಮ ಅಲೆಮಾರಿತನವನ್ನು ತೊರೆದು ನೆಲಸಿಗ ಸಂಸ್ಕೃತಿಗೆ ಪರಿವರ್ತನೆಯಾಗಿದ್ದಾರೆಂಬುದು ತಿಳಿದುಬರುತ್ತದೆ. ಮದುವೆಗಳು ಹಳೆ ತಲೆಮಾರುಗಳಲ್ಲಿ ಬೆಡಗುಗಳ ಆಧಾರದ ಮೇಲೆ ನಡೆಯುತ್ತಿದ್ದವು. ಆದರೆ ಇತ್ತೀಚಿನ ತಲೆಮಾರುಗಳಲ್ಲಿ ಬೆಡಗುಗಳು ಕಾಣೆಯಾಗುತ್ತಿವೆ. ಊರಬೇಡ ಮ್ಯಾಸಬೇಡರ ನಡುವೆ ವೈವಾಹಿಕ ಸಂಬಂಧಗಳು ಏರ್ಪಡುತ್ತಿವೆ. ಇಂತಹ ಹತ್ತಾರು ಪಲ್ಲಟಗಳು ತಲೆಮಾರಿನಿಂದ ತಲೆಮಾರಿಗೆ ಉಂಟಾಗುತ್ತಿವೆ.

ಆರ್ಥಿಕವಾಗಿಯೂ ಬೇಡರಲ್ಲಿ ತಲೆಮಾರಿನಿಂದ ತಲೆಮಾರಿಗೆ ಹಲವು ಪಲ್ಲಟಗಳಾಗಿವೆ. ಇವರ ಮೂಲವೃತ್ತಿ ಬೇಟೆಗಾರಿಕೆಯಾಗಿತ್ತು. ಬೇಟೆಗಾರಿಕೆಯಿಂದಲೇ ತಮಗೆ ಬೇಡ ಪದ ಅಂಟಿಕೊಂಡಿದೆ ಎಂದು ಹಳೆ ತಲೆಮಾರಿನ ಜನ ತಿಳಿಸುತ್ತಾರೆ. ಆದರೆ ಬೇಟೆಗಾರಿಕೆ ಹೋಗಿ ಮೊದಲ ತಲೆಮಾರಿನವರು ಬಹುತೇಕ ಪಶುಪಾಲಕರಾಗಿ ರೂಪುಗೊಂಡಿದ್ದರು. ಪಶುಪಾಲನೆಯೇ ಮುಖ್ಯ ವೃತ್ತಿಯಾಗಿಸಿಕೊಂಡಿದ್ದ ಬೇಡರು ಕೃಷಿ ಕೂಲಿಯೋ, ಜೀತಗಾರರಾಗಿಯೋ ಪರಿವರ್ತನೆಗೊಂಡರು. ಎರಡನೇ ತಲೆಮಾರಿಗೆಲ್ಲ ಆ ಕಾಲದ ಸರ್ಕಾರದ ಕಾನೂನುಗಳಿಂದ ಜೀತಗಾರಿಕೆ ಇಲ್ಲವಾಯಿತು. ಜೊತೆಗೆ ಭೂಕಾಯ್ದೆಯಿಂದಾಗಿ ಗೇಣಿದಾರರು, ಕೃಷಿಕೂಲಿಗಳು ಸ್ವಂತಕ್ಕೆ ಸ್ವಲ್ಪ ಭೂಮಿಯನ್ನು ಹೊಂದಿ ಭೂ

ಒಡೆಯರೆನಿಸಿಕೊಳ್ಳುವಂತಾಯಿತು. ಮೂರನೇ ತಲೆಮಾರಿಗಾಗಲೇ ಇವರ ಬಹುಪಾಲು ಜನ ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿ ಕೆಲಸಗಾರರಾಗಿ ಸೇರಿ ಆರ್ಥಿಕ ಭದ್ರತೆ ಕಾಣುವಂತಾಯಿತು. ಹೀಗೆ ವೃತ್ತಿಗಳಲ್ಲಾದ ಪಲ್ಲಟಗಳು ಕಾಲದಿಂದ ಕಾಲಕ್ಕೆ ಇವರ ಜೀವನಶೈಲಿಯನ್ನೂ ಬದಲಿಸುವಂತಾಯಿತು.

ಬೇಡರಲ್ಲಿ ಶಿಕ್ಷಣ ಕ್ಷೇತ್ರದಲ್ಲಿಯೂ ಹಲವು ಪಲ್ಲಟಗಳು ಕಂಡಿದೆ. ಸ್ವಾತಂತ್ರ್ಯ ನಂತರ ಕರ್ನಾಟಕದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಜಾಗೃತಗೊಂಡ ಮೊಟ್ಟ ಮೊದಲ ತಳಸಮುದಾಯ ಇದಾಗಿದೆ. ನಗರ ಪ್ರದೇಶದಲ್ಲಿ ನೆಲೆಸಿದ ಬೇಡರ ಪ್ರಜ್ಞಾವಂತರು ತಮ್ಮ ಸಮುದಾಯದ ಏಳಿಗೆಗಾಗಿ ೩೦–೪೦ರ ದಶಕದಲ್ಲಿಯೇ ಶಿಕ್ಷಣ ಸಂಸ್ಥೆಗಳನ್ನು, ತಮ್ಮ ಸಮುದಾಯದ ಮಕ್ಕಳಿಗಾಗಿ ವಸತಿ ನಿಲಯಗಳನ್ನು ಧಾರವಾಡ, ಚಿತ್ರದುರ್ಗ, ಬೆಂಗಳೂರು ಮುಂತಾದ ಕಡೆ ಪ್ರಾರಂಭಿಸಿದ್ದನ್ನು ಗಮನಿಸಬಹುದು. ಆದರೆ ಈ ಸೌಲಭ್ಯ ಗ್ರಾಮೀಣ ಮಟ್ಟದ ಬೇಡರಿಗೆ ದೊರೆಯದೇ ಹೋಗಿದ್ದು ದುರದೃಷ್ಟವೆಂದೇ ಹೇಳಬೇಕು. ಹಳೆ ತಲೆಮಾರಿನ ಅಥವಾ ಮೊದಲ ತಲೆಮಾರಿನ ಬೇಡರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅವರಲ್ಲಿ ಕೆಲವರನ್ನು ಸಾಕ್ಷರರ ಸಾಲಿನಲ್ಲಿ ನಿಲ್ಲಿಸಬಹುದಾದರೂ ಅವರಾರೂ ಸಾಂಪ್ರದಾಯಿಕವಾಗಿ ಶಾಲೆಯ ಮೆಟ್ಟಿಲನ್ನು ತುಳಿದವರಲ್ಲ. ತಮ್ಮ ಮನೆಯ ಮಕ್ಕಳು, ಮೊಮ್ಮಕ್ಕಳ ಸಹಾಯದಿಂದ ಸಹಿ ಮಾಡುವ ಮಟ್ಟಿಗೆ ಪ್ರವೀಣರಾದವರು ಅವರು. ಆದರೆ ಎರಡನೇ ತಲೆಮಾರಿಗೆ ಬರುವಷ್ಟರಲ್ಲಿ ಬೇಡರು ಸ್ನಾತಕೋತ್ತರ ಶಿಕ್ಷಣ ಮಟ್ಟಕ್ಕೆ ತಲುಪದಿದ್ದರೂ ಕನಿಷ್ಠ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಯನ್ನು ಪ್ರವೇಶಿಸುವಂತಾಯಿತು. ಮೂರನೇ ತಲೆಮಾರಿಗೆ ಬರುವಷ್ಟರಲ್ಲಿ ಈ ಹಂತ ಮುಂದಕ್ಕೆ ಹೋಗಿ ಬಹುತೇಕ ಜನ ಪದವಿ, ಸ್ನಾತಕೋತ್ತರ ಪದವಿ, ತಾಂತ್ರಿಕ ಶಿಕ್ಷಣ ಪಡೆದು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುವಂತಾಗಿದೆ. ಈ ನಿಟ್ಟಿನಲ್ಲಿ ಇವರು ಪ್ರಗತಿ ಹೊಂದಲು ಮೀಸಲಾತಿಯು ವರದಾನವಾಗಿ ಪರಿಣಮಿಸಿತು. ಇವತ್ತು ಕರ್ನಾಟಕದಲ್ಲಿ ಅನುಸೂಚಿತ ಬುಡಕಟ್ಟುಗಳಲ್ಲಿ ೫೦ ಬುಡಕಟ್ಟುಗಳಿದ್ದರೂ ಅವುಗಳಲ್ಲಿ ಎಲ್ಲಾ ರಂಗದಲ್ಲಿ ಅವಕಾಶಗಳನ್ನು ಪಡೆಯುವಲ್ಲಿ ಮುಂಚೂಣಿಯಲ್ಲಿರುವವರೇ ಬೇಡರು. ಈ ನಿಟ್ಟಿನಲ್ಲಿ ಇತರ ಬುಡಕಟ್ಟುಗಳು ನೂರು ವರ್ಷಗಳಷ್ಟು ಹಿಂದಿವೆಯಂದೇ ಹೇಳಬಹುದು.

ರಾಜಕೀಯ ಕ್ಷೇತ್ರವನ್ನು ಗಮನಿಸಿದರೂ ಸಹ ಆ ಕ್ಷೇತ್ರದಲ್ಲಿ ತಲೆಮಾರಿನಿಂದ ತಲೆಮಾರಿಗೆ ಹತ್ತು ಹಲವು ಪಲ್ಲಟಗಳಾಗಿರುವುದನ್ನು ಗಮನಿಸಲಾಗಿದೆ. ಕರ್ನಾಟಕದಲ್ಲಿ ಮೀಸಲಾತಿ ಸೌಲಭ್ಯ ಸಿಗದ ಪೂರ್ವದಲ್ಲಿಯೇ ಈ ಸಮುದಾಯದ ಬೆರಳೆಣಿಕೆಯಷ್ಟಾದರೂ ಜನ ವಿಧಾನಸೌಧದ, ಲೋಕಸಭೆಗಳ ಮೆಟ್ಟಿಲೇರಿದ್ದಾರೆ. ಹಾಗೆಯೇ ವಿಧಾನ ಪರಿಷತ್ತು, ಲೋಕಸಭೆ ಪ್ರವೇಶವೂ ಇವರಿಂದ ಸಾಧ್ಯವಾಗಿದೆ. ಆದರೆ ದುರ್ದೈವವೆಂದರೆ ಗ್ರಾಮೀಣ ಪ್ರದೇಶದ ಬೇಡರಿಗೆ ರಾಜಕೀಯ ಪ್ರಜ್ಞೆ ಇರಲಿಲ್ಲವೆಂದೇ ಹೇಳಬಹುದು.

೧೯೭೨ರ ನಂತರ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕರ್ನಾಟಕದ ರಾಜಕೀಯವನ್ನು ಪ್ರತಿನಿಧಿಸುವ ಬೇಡರ ಸಂಖ್ಯೆಯೂ ಹೆಚ್ಚಾಯಿತು. ಪ್ರಸ್ತುತ ರಾಜ್ಯದ ವಿಧಾನಸಭಾ ಕ್ಷೇತ್ರದಲ್ಲಿ ಹದಿನೇಳು ಜನ ಬೇಡ ಜನಪ್ರತಿನಿಧಿಗಳು ಸದಸ್ಯರಾಗಿದ್ದಾರೆ. ವಿಧಾನ ಪರಿಷತ್ತಿನಲ್ಲಿಯೂ ಹಾಗೂ ಲೋಕಸಭೆಯಲ್ಲಿಯೂ ಇವರು ಕಂಡುಬರುತ್ತಿದ್ದಾರೆ. ಅಂದರೆ ಈ ಬುಡಕಟ್ಟು ಮೀಸಲಾತಿಯ ನಂತರ ಸಿಕ್ಕ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವಷ್ಟು ಪ್ರಜ್ಞಾವಂತವಾಗಿ ರೂಪುಗೊಂಡಿದೆ. ಹಾಗೆಯೇ ಗ್ರಾಮೀಣ ಮಟ್ಟದಲ್ಲಿಯೂ ಮೊದಲ ತಲೆಮಾರಿನವರು, ಎರಡನೇ ತಲೆಮಾರಿನವರು, ಮೂರನೇ ತಲೆಮಾರಿನವರು ಮೀಸಲಾತಿ ಸೌಲಭ್ಯ ಪಡೆದ ತರುವಾಯವೇ ರಾಜಕೀಯ ಪ್ರವೇಶಿಸಲು ಸಾಧ್ಯವಾಯಿತು. ಆದರೆ ಮೊದಲ ತಲೆಮಾರಿನವರು ರಾಜಕೀಯದ ಕುರಿತು ಹೊಂದಿದ ಧೋರಣೆಗೂ, ಎರಡನೇ ತಲೆಮಾರಿನವರು ರಾಜಕೀಯದ ಕುರಿತು ಹೊಂದಿದ ಧೋರಣೆಗೂ, ಹಲವಾರು ವ್ಯತ್ಯಾಸಗಳು ಕಂಡುಬರುತ್ತವೆ. ಮೊದಲ ಮತ್ತು ಎರಡನೇ ತಲೆಮಾರಿನವರು ಕೇವಲ ಮೇಲ್ಜಾತಿಗಳ ತಾಳಕ್ಕೆ ತಕ್ಕಂತೆ ಕುಣಿಯುವವರಾಗಿದ್ದರು. ಆದರೆ ಮೂರನೇ ತಲೆಮಾರಿನವರು ಸ್ವಜಾತಿ ರಾಜಕಾರಣಿಗಳ ಹಿತಾಸಕ್ತಿಗೆ ತಕ್ಕಂತೆ ಸ್ಪಂದಿಸುವವರಾಗಿದ್ದಾರೆ ಮತ್ತು ಅವರ ಅನುಯಾಯಿಗಳಾಗಿಯೇ ಇಂದು ಗ್ರಾಮೀಣ ಮಟ್ಟದಲ್ಲಿ ರಾಜಕೀಯ ಪ್ರವೇಶಿಸಿದ್ದಾರೆ. ಇತರ ಬುಡಕಟ್ಟುಗಳಿಗೆ ಹೋಲಿಸಿದರೆ ಸಾಧಿಸಿದ್ದು ದೊಡ್ಡದಾಗಿದೆ ಎನಿಸಬಹುದು. ಆದರೆ ಮೇಲ್ಜಾತಿಗಳಿಗೆ ಹೋಲಿಸಿದರೆ ಸಾಧಿಸಬೇಕಾಗಿರುವುದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿದೆ ಎನಿಸುತ್ತದೆ.

ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಬೇಡರಲ್ಲಿ ಯಾವ ರೀತಿಯ ಪಲ್ಲಟಗಳಾಗಿವೆ. ಈ ರೀತಿಯ ಪಲ್ಲಟಗಳಿಗೆ ಇರಬಹುದಾದ ಕಾರಣಗಳಾವುವು ಎಂಬುದನ್ನು ವಿಶ್ಲೇಷಿಸುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಬೇಡರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳನ್ನು ಅರಿಯುವುದರೊಂದಿಗೆ ತಲೆಮಾರಿನಿಂದ ತಲೆಮಾರಿಗೆ ಉಂಟಾದ ಪಲ್ಲಟಗಳನ್ನು ಅರಿಯಲು ಸಾಧ್ಯವಾಗಿದೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಂಡುಬಂದ ಉದಾರೀಕರಣ, ನಗರೀಕರಣ, ಜಾಗತೀಕರಣ ದಂತಹ ಚಿಂತನೆಗಳಿಂದ ಭಾರತೀಯರ ಸಾಮಾಜಿಕ ಬದುಕಿನಲ್ಲಿ ಹಲವಾರು ಬದಲಾವಣೆಗಳಾಗಿವೆ ಯೆಂಬುದೇನೋ ಸರಿ, ಆದರೆ ಈ ನೀತಿಗಳು ಹಾಗೂ ಚಿಂತನೆಗಳು ಪರಿಶಿಷ್ಟ ಪಂಗಡಗಳನ್ನು ಬದಲಿಸುವ ಬದಲಾಗಿ ಅವುಗಳನ್ನು ಮತ್ತಷ್ಟು ತಳಕ್ಕೆ ನೂಕಿವೆ. ಹೀಗಾಗಿ ಇಂದು ಭಾರತದ ಬಹುತೇಕ ಪರಿಶಿಷ್ಟ ಪಂಗಡಗಳು ಮತ್ತು ತಳ ಸಮುದಾಯಗಳು ಹಾಗೂ ಅಲ್ಪಸಂಖ್ಯಾತ ಕುಶಲಕರ್ಮಿ ಸಮುದಾಯಗಳು ಹೆಚ್ಚೆಚ್ಚು ಶೋಷಣೆಗೆ ಒಳಗಾಗುತ್ತಲೇ ಸಾಗಿವೆ. ಇಂತಹ

ತಳಸಮುದಾಯಗಳಲ್ಲಿ ಹುಟ್ಟಿದ ಏಕೈಕ ಕಾರಣಕ್ಕಾಗಿ ಈ ಜನರು ಶೋಷಣೆಗೆ ಒಳಗಾಗಬೇಕಾಗಿ ಬಂದಿರುವುದು ವಿಷಾದನೀಯ ವಿಚಾರವಾಗಿದೆ. ಸಾಂವಿಧಾನಿಕವಾಗಿ ತಳಸಮುದಾಯಗಳಿಗೆ ಮೀಸಲಾತಿಯನ್ನು ನೀಡಲಾಗಿದೆಯಾದರೂ ಅದು ಕೇವಲ ತೋರುಗಾಣಿಕೆಯ ಮೀಸಲಾತಿಯಂತೆ ತೋರುತ್ತದೆ. ಮೀಸಲಾತಿ ಪಡೆದ ಪರಿಶಿಷ್ಟ ಸಮುದಾಯಗಳ ಸದಸ್ಯರು ಸ್ವಜಾತಿಯ ಬಂಡವಾಳಶಾಹಿ ಹಾಗೂ ಮೇಲ್ವರ್ಗಗಳಡಿಯಲ್ಲಿ ಸಿಕ್ಕು ನಲುಗುವಂತಾಗಿದೆ. ಎಲ್ಲಾ ರಂಗಗಳಲ್ಲಿಯೂ ಪಾಲ್ಗೊಳ್ಳುವಿಕೆಯ ಮೂಲಕ ಆತ್ಮಸ್ಥೈರ್ಯವನ್ನು ಪಡೆಯಬೇಕಾಗಿದ್ದ ತಳಸಮುದಾಯದ ಜನರು ಅಧೀರತೆ, ಶೋಷಣೆಗಳಿಂದಾಗಿ ಕೀಳರಿಮೆ ಅನುಭವಿಸುವಂತಾಗಿದೆ. ಬಂಡವಾಳಶಾಹಿ ಮತ್ತು ಮೇಲ್ಜಾತಿಗಳ ಹಿಡಿತದಲ್ಲಿರುವ ವ್ಯವಸ್ಥೆಯಲ್ಲಿ ತಳಸಮುದಾಯದ ಜನರಿಗೆ ಅಸ್ತಿತ್ವವೇ ಇಲ್ಲವಾಗಿದೆ. ಈ ಬುಡಕಟ್ಟಿನಲ್ಲಿ ತಲೆಮಾರಿನಿಂದ ತಲೆಮಾರಿಗೆ ಏನೆಲ್ಲಾ ಪಲ್ಲಟಗಳಾದರೂ ಸಹ ಸಾಮಾಜಿಕ ವಲಯದಲ್ಲಿ ಅತ್ಯಂತ ದುರ್ಬಲರಾದ ಪರಿಶಿಷ್ಟ ಪಂಗಡದ ಜನರು ತನ್ನ ವ್ಯವಸ್ಥೆಯಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆಯೆಂಬುದು ಅಷ್ಟೇ ಸತ್ಯ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ರಂಗದಲ್ಲಿ ಈ ಬುಡಕಟ್ಟು ಹೊಂದಿದ ಪಲ್ಲಟಗಳನ್ನು ಈ ಅಧ್ಯಯನವು ನೀಡಲು ಪ್ರಯತ್ನಿಸಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಅನುಬಂಧದಲ್ಲಿ ಕೋಷ್ಟಕಗಳು, ವಕ್ತೃ ವಿವರ, ನಕ್ಷೆಗಳು ಮತ್ತು ಛಾಯಾಚಿತ್ರಗಳು, ಪರಾಮರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ.

೮.೧. ಅಧ್ಯಯನದ ಫಲಿತಗಳು

ಪ್ರಸ್ತುತ ಈ ಅಧ್ಯಯನದ ಮೂಲಕ ಕಂಡುಕೊಂಡ ಫಲಿತಗಳನ್ನು ಇಲ್ಲಿ ನೀಡಲಾಗಿದೆ.

* ಬೇಡರಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಪಲ್ಲಟಗಳುಂಟಾಗಿವೆ.
* ಬೇಡರ ಪುರುಷ ಸದಸ್ಯರಿಗಿಂತ ಹೆಚ್ಚು ಶೋಷಣೆಗೆ ಒಳಗಾಗಿರುವರು ಮಹಿಳೆಯರು. ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಮಹಿಳೆಯನ್ನು ನಿಯಂತ್ರಿಸುವ ಶಕ್ತಿ ಪುರುಷ ವರ್ಗವಾಗಿದೆ ಹೀಗಾಗಿ ಈ ಎಲ್ಲಾ ರಂಗಗಳಲ್ಲಿಯೂ ಪುರುಷರಿಗಿಂತ ಮಹಿಳೆಯರು ಹಿಂದುಳಿದಿದ್ದಾರೆ.
* ಬೇಡರು ಬುಡಕಟ್ಟು ವ್ಯವಸ್ಥೆಯಿಂದ ದೂರ ಸರಿದು ಜಾತಿಯಾಗಿ ಪರಿವರ್ತಿತರಾಗಿದ್ದಾರೆ ಮತ್ತೂ ಆಗುತ್ತಲಿದ್ದಾರೆ.
* ಬೇಡರ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಪಲ್ಲಟಗೊಳ್ಳಲು ಆಧುನಿಕತೆ, ಜಾಗತೀಕರಣಗಳ ಒತ್ತಡಗಳು ಕಾರಣವಾಗಿರುವಂತೆಯೇ ಪರಿಶಿಷ್ಟ ಪಂಗಡದ ಮೀಸಲಾತಿಯೂ ಕಾರಣವಾಗಿದೆ.

* ಬೇಡರು ಮೇಲ್ಜಾತಿಗಳ ಪ್ರಭಾವಕ್ಕೆ ಸಿಲುಕಿ ತನ್ನಲ್ಲಿಯೂ ಬದಲಾವಣೆ ಕಂಡುಕೊಳ್ಳಲು ಪ್ರಯತ್ನಿಸುತ್ತಿದೆ.

ಬುಡಕಟ್ಟಿನ ವಕ್ತೃಗಳನ್ನು ಸಂದರ್ಶಿಸಿ ಮಾಹಿತಿಗಳನ್ನು ಕೂಡಿಹಾಕಿ ಅವುಗಳನ್ನು ವಿಶ್ಲೇಷಣೆಗೊಳ ಪಡಿಸಿದಾಗ ಮೇಲಿನ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

೮.೨. ಅಧ್ಯಯನದ ಮುಂದಿನ ಸಾಧ್ಯತೆಗಳು

* ಕಾಲಾವಧಿಯ ಮಿತಿಯಿಂದಾಗಿ ಎಲ್ಲಾ ಬುಡಕಟ್ಟುಗಳ ವೃತ್ತಿಪಲ್ಲಟಗಳ ಕುರಿತು ಅಮೂಲಾಗ್ರ ವಾಗಿ ಅವಲೋಕನ ಮಾಡಲು ಅನುವಾಗಿಲ್ಲ. ಕೇವಲ ಬೇಡರ ವೃತ್ತಿಪಲ್ಲಟಗಳನ್ನು ಮಾತ್ರ ಇಲ್ಲಿ ಅಧ್ಯಯನ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಬುಡಕಟ್ಟುಗಳ ಕುರಿತು ಸಮಗ್ರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಬಹುದಾಗಿದೆ.

* ಬೇಡರ ವೃತ್ತಿಪಲ್ಲಟಗಳನ್ನು ಮಾತ್ರ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಇದರಾಚೆಗೆ ಇತರ ಬುಡಕಟ್ಟು ಜನರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಪಲ್ಲಟಗಳ ಅಧ್ಯಯನ ಮಾಡಬಹುದಾಗಿದೆ.

* ಪ್ರಸ್ತುತ ಅಧ್ಯಯನ ವ್ಯಾಪ್ತಿಯು ದಾವಣಗೆರೆ ಜಿಲ್ಲೆಗೆ ಮಾತ್ರ ಸೀಮಿತಗೊಂಡಿದೆ.

ಒಟ್ಟಾರೆಯಾಗಿ ದಾವಣಗೆರೆ ಜಿಲ್ಲೆಯ ಬೇಡರ ಪಲ್ಲಟಗಳ ಕುರಿತು ಅಧ್ಯಯನ ಮಾಡಲಾಗಿ ಕಂಡುಬಂದ ಫಲಿತಗಳು ಮತ್ತು ಮುಂದೆ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಿತಿ ಹಾಗೂ ಕಾಲಮಿತಿಗಳಿಂದಾಗಿ ಪ್ರಸ್ತುತ ಅಧ್ಯಯನವನ್ನು ದಾವಣಗೆರೆ ಜಿಲ್ಲೆಯ ಆರು ತಾಲೂಕುಗಳ ಪ್ರತಿ ತಾಲೂಕಿಗೆ ಮೂರು ಗ್ರಾಮಗಳಂತೆ ಆರು ತಾಲೂಕಗಳ ಹದಿನೆಂಟು ಗ್ರಾಮಗಳನ್ನು ಮಾತ್ರ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ. ಈ ಅಧ್ಯಯನವು ಬೇಡರ ಜನರ ವೃತ್ತಿ ಪಲ್ಲಟಗಳನ್ನು ಮಾತ್ರ ಅರಿಯುವ ಒಂದು ಪ್ರಯತ್ನವಾಗಿದೆ. ಈ ಅಧ್ಯಯನವು ಮುಂದೆ ಬೇಡರ ಅಥವಾ ಇತರ ಬುಡಕಟ್ಟುಗಳ ಕುರಿತು ಅಧ್ಯಯನ ಮಾಡುವವರಿಗೆ ಒಂದು ಮೆಟ್ಟಿಲಾದೀತೆಂದು ಭಾವಿಸಲಾಗಿದೆ. ಈ ಅಧ್ಯಯನಗಳಲ್ಲಿಯ ಮಿತಿಗಳನ್ನು ಮುಂದಿನ ಅಧ್ಯಯನಕಾರರಿಗೆ ಬಿಡಲಾಗಿದೆ.

ಅನುಬಂಧಗಳು

* ಪರಾಮರ್ಶನ ಗ್ರಂಥಗಳು
* ವಕ್ತೃ ವಿವರ
* ಪ್ರಶ್ನಾವಳಿ ಮಾದರಿ
* ಸಮೀಕ್ಷೆ ಮಾಡಿದ ನೆಲೆಗಳ ನಕ್ಷೆ
* ಅಂಕಿ-ಅಂಶಗಳ ಪಟ್ಟಿ
* ಛಾಯಾಚಿತ್ರಗಳು

ಪರಾಮಾರ್ಶನ ಗ್ರಂಥಗಳು

ಅಂಗಡಿ ಎಸ್ ಎಸ್., ೨೦೦೮, ಕರ್ನಾಟಕ ಬುಡಕಟ್ಟು ಭಾಷೆ; ಸೃಷ್ಠಿ ಪಬ್ಲಿಕೇಷನ್ಸ್, ಬೆಂಗಳೂರು

ಅಂಗಡಿ, ಎಸ್ ಎಸ್., ೨೦೦೦, *ಸಂಕೀರ್ಣ ವೃತ್ತಿ ಪದಕೋಶ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಂಜನಪ್ಪ ಬಿ ಎಚ್., ೨೦೦೬, ಮಹಿಳೆ ಮತ್ತು ದುಡಿಮೆ; ಸೃಷ್ಠಿ ಪಬ್ಲಿಕೇಷನ್ಸ್, ಬೆಂಗಳೂರು

ಅಶೋಕಕುಮಾರ ಯು ಬಿ., ೨೦೦೧, ಕೃಷಿ ಕೂಲಿಕಾರರ ಬದುಕು ಬವಣೆ; ಚೇತನ ಬುಕ್ ಹೌಸ್, ಬೆಂಗಳೂರು

ಅಮರೇಶ ಯಾತಗಲ್, ೨೦೦೮, ವಾಲ್ಮೀಕಿ ಸಮುದಾಯ ಮತ್ತು ಚರಿತ್ರೆ; ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಅಹೋಬಲ ನಾಯಕ, ೨೦೦೦, *ಬೇಡನಾಯಕರ ಮೂಲ ಮತ್ತು ಪ್ರಾಚೀನತೆ* (ಅಪ್ರಕಟಿತ ಹಸ್ತಪ್ರತಿ,) ಚಿತ್ರದುರ್ಗ,.

ಈಶ್ವರಪ್ಪ, ಎಂ ಜಿ., ೧೯೮೨, *ಮ್ಯಾಸಬೇಡರು*, ಐ ಬಿ ಎಚ್ ಪ್ರಕಾಶನ, ಬೆಂಗಳೂರು

....., ೧೯೯೫, *ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು,.

ಕರ್ನಾಟಕ ಗ್ಯಾಸೆಟಿಯರ್ ೧೯೭೫, ಕರ್ನಾಟಕ ಸರ್ಕಾರ, ಬೆಂಗಳೂರು

ಕರಿಶೆಟ್ಟಿ ರುದ್ರಪ್ಪ., ೧೯೯೫, *ಮ್ಯಾಸನಾಯಕರ ಒಂದು ಜನಾಂಗೀಯ ಅಧ್ಯಯನ*, ಕನ್ನಡ ಸಾಹಿತ್ಯ ಪತಿಷತ್ತು, ಬೆಂಗಳೂರು:

ಕಲಬುರ್ಗಿ ಎಂ ಎಂ., ೧೯೯೪, ಕರ್ನಾಟಕದ ಕೈಫಯತ್ತುಗಳು; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುಮಾರ್ ಆರ್ ಬಿ., ೨೦೦೪, ಮುದ್ದೆಕಂಬಾರ; ಸಹನಾ ಪ್ರಕಾಶನ, ಮೈಸೂರು

ಕೃಷ್ಣರಾವ್ ಕಪಟರಾಳ, ೧೯೭೭, ಸುರಪುರ ಸಂಸ್ಥಾನ ಇತಿಹಾಸ; ಮಂಜುನಾಥ ರಾಜಾಜಿನಗರ, ಬೆಂಗಳೂರು

ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕೋಟ್ರಯ್ಯ, ಸಿ ಟಿ ಎಂ., ೨೦೦೧, *ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗಿರಿಜಾ ಟಿ., ೧೯೯೧, *ಚಿತ್ರದುರ್ಗ ಜಿಲ್ಲಾ ದರ್ಶನ*; ರೇಖಾ ಪ್ರಕಾಶನ, ದಾವಣಗೆರೆ

ಗಿರಿಜಾ ಟಿ., ೨೦೦೧, ದಾವಣಗೆರೆ– ಇದು ನಮ್ಮ ಜಿಲ್ಲೆ; ನಿಹಾರಿಕಾ ಪ್ರಕಾಶನ ದಾವಣಗೆರೆ

ಗಿರಿಜಾ ಟಿ., ೧೯೯೮, ದಾವಣಗೆರೆ ಜಿಲ್ಲಾ ದರ್ಶಿನಿ; ನಿಹಾರಿಕಾ ಪ್ರಕಾಶನ, ದಾವಣಗೆರೆ

ಗೋಪಾಲಕೃಷ್ಣಯ್ಯ, ಕೆ ಎಲ್., ೨೦೦೩, *ಇತಿಹಾಸ ರಾಜಕೀಯ*; ನವ ಕರ್ನಾಟಕ ಪ್ರಕಾಶನ, ಬೆಂಗಳೂರು:

ಚಂದ್ರಶೇಖರ, ಬಿ ಎಸ್., ೨೦೦೧, *ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು;* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರು ಕಾಳೇನಹಳ್ಳಿ, ೧೯೯೩, ಸೋಲಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಚೆನ್ನಣ್ಣ ವಾಲಿಕಾರ, ೨೦೦೦, ಕರ್ನಾಟಕ ದೇವದಾಸಿಯರ ಸಮಾಜೋ ಧಾರ್ಮಿಕ ಆರ್ಥಿಕ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ; ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗಾ

ಜಗದೀಶ ಕೆ ಕೆ., ೨೦೦೯, ಡುಂಗ್ರಿ ಗರಾಸಿಯಾ ಸಮುದಾಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು,

ಡಂಗ ಡಿ ಬಿ., ೧೯೮೮, ಜನಾಂಗ ಪರಿಚಯ; ಪೆರಿಯರ್ ಪ್ರಕಾಶನ, ಧಾರವಾಡ

ತಪಸ್ವೀಕುಮಾರ, ನಂ., ೨೦೦೧, *ಸಂಸ್ಕೃತಿ ವಿಕಾಸ*; ಚೇತನ ಬುಕ್‌ಹೌಸ್, ಬೆಂಗಳೂರು

ದುರುಗಪ್ಪ ಎಂ ಕೆ., ೨೦೧೦, ವಿಜಯನಗರೋತ್ತರಕಾಲೀನ ಬೇಡ ಜನಾಂಗ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ದೇವೇಂದ್ರಕುಮಾರ ಹಕಾರಿ ಮತ್ತು ಸಂದ್ಯಾರೆಡ್ಡಿ ಕೆ ಆರ್ (ಸಂ), ೨೦೦೦ ಗ್ರಾಮೀಣ ಪಶುಸಾಕಾಣಿಕೆ; ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

ದೇವೇಂದ್ರಕುಮಾರ ಹಕಾರಿ ಮತ್ತು ಸಂದ್ಯಾರೆಡ್ಡಿ ಕೆ ಆರ್ (ಸಂ), ೨೦೦೦ ಗ್ರಾಮೀಣ ವೃತ್ತಿಗಳು: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ದೈವಜ್ಞ, ಗಂಗಾಧರ., ೨೦೦೦, *ಬುಡಕಟ್ಟು ಸಮಾಜ ಹುಟ್ಟು–ಸಾವಿನ ನಡುವೆ;* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಂಜುಂಡಸ್ವಾಮಿ ಎ ಎಸ್., ೧೯೮೬, ಕರ್ನಾಟಕದ ಪಾಳೆಯಗಾರರು ಮತ್ತು ಒಡೆಯರ ಇತಿಹಾಸ; ಸಮಾಜ ಪುಸ್ತಕಾಲಯ, ಧಾರವಾಡ

ನರೇಂದ್ರ ರೈ ದೇರ್ಲ, ೨೦೦೭, ಬೇಟೆ; ಕನಸು ಪ್ರಕಾಶನ, ಮಾಡಾವು, ದ.ಕ ಜಿಲ್ಲೆ

ನಾರಾಯಣ ಕಿಕ್ಕೇರಿ, ೨೦೧೦, ಜೇನು ನುಡಿ ಕನ್ನಡ ಇಂಗ್ಲೀಷ್ ಡಿಕ್ಷನರಿ, ಸಿ ಐ ಐ ಎಲ್, ಮೈಸೂರು

ನಾರಾಯಣ ಕೆ ವಿ., ೨೦೧೧, ಭಾಷೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿರುಪಮಾ., ೨೦೦೨, *ಸಂಶೋಧನಾ ವಿಧಾನಗಳು*; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಪ್ರಭಾಕರ ಎ ಎಸ್., ೨೦೦೬, ಆದಿವಾಸಿ ಆಖ್ಯಾನ; ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

ಪ್ರಭಾಕರ ಎ ಎಸ್., ೨೦೦೬, ಬುಡಕಟ್ಟು ಅಭಿವೃದ್ಧಿ ಮಿಮಾಂಸೆ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಭಾಕರ ಎ ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಭಾಕರ ಎ ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪುಟ್ಟಣ್ಣಯ್ಯ ಎಂ ಎಸ್., ೧೯೨೩, ಪಾಳೆಯಗಾರರು ಐದು ಉಪನ್ಯಾಸಗಳು, ಬೆಂಗಳೂರು

ಬೋರಲಿಂಗಯ್ಯ ಹಿ ಚಿ., ೧೯೯೫, ಗಿರಿಜನ ನಾಡಿಗೆ ಪಯಣ; ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು

ಬೋರಲಿಂಗಯ್ಯ ಹಿ ಚಿ., ೧೯೯೬, ಕರ್ನಾಟಕ ಜನಪದ ಕಲೆಗಳ ಕೋಶ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೋರಲಿಂಗಯ್ಯ ಹಿ ಚಿ., ೧೯೯೫, ಕಾಡು ಕಾಂಕ್ರೀಟ್ ಮತ್ತು ಜಾನಪದ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೋರಲಿಂಗಯ್ಯ ಹಿ ಚಿ., ೨೦೦೦, ಬುಡಕಟ್ಟು ದೈವಾರಾಧನೆ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೋರಲಿಂಗಯ್ಯ ಹಿ ಚಿ., ೨೦೦೭, ಕರ್ನಾಟಕ ಅಭಿವೃದ್ಧಿ ಪಥ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೋರಲಿಂಗಯ್ಯ ಹಿ ಚಿ., ೧೯೯೩, ಸಿದ್ದಿಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಭಟ್ಟ ಜಿ ಎಸ್., ೧೯೯೩, ಹಸಲರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮಂಜುನಾಥ ಬೇವಿನಕಟ್ಟಿ ಮತ್ತು ತಾರಿಹಳ್ಳಿ ಹನುಮಂತಪ್ಪ (ಸಂ) ೨೦೦೭ ವಾಲ್ಮೀಕಿ ಸಂಪದ; ವಾಲ್ಮೀಕಿ ಮಹಾಸಂಸ್ಥಾನ, ರಾಜನಹಳ್ಳಿ, ಹರಿಹರ ತಾಲೂಕು

ಮಂಜುನಾಥ ಬೇವಿನಕಟ್ಟಿ (ಸಂ) ೨೦೦೯, ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಂಜುನಾಥ ಬೇವಿನಕಟ್ಟಿ (ಸಂ) ೨೦೦೭, ವ್ಯಾಧ ಚರಿತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಧು ಗುಂಡ್ಲುಪೇಟೆ ೨೦೦೨, ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ; ಅಕ್ಷತ ಪ್ರಕಾಶನ, ಮೈಸೂರು

ಮರಳುಸಿದ್ದಯ್ಯ ಎಚ್ ಎಂ., ೧೯೯೧, ಸಮುದಾಯ ಸಂಘಟನೆ, ಬೆಂಗಳೂರು

ಮರುಳಸಿದ್ದಯ್ಯ, ಎಚ್ ಎಮ್., ೨೦೦೧, *ಸಮಾಜ ಕಾರ್ಯ*; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮಹದೇವಯ್ಯ ಪಿ., ೨೦೦೫, ದಲಿತರು ಮತ್ತು ಪರ್ಯಾಯ ರಾಜಕಾರಣ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೀರಾಸಬಿಹಳ್ಳಿ, ಶಿವಣ್ಣ., ೨೦೦೩, *ಮ್ಯಾಸಮಂಡಲ*; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಮೇತ್ರಿ ಕೆ ಎಂ., ೨೦೦೮, ಬುಡಕಟ್ಟು ಕುಲಕಸುಬುಗಳು; ಕನ್ನಡ ವಿಶ್ವವಿದ್ಯಾಲಯ, ಹಂಪಿ

.... ಮರುಗು ಭಾಷೆ; ೨೦೧೧, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೊಗಳ್ಳಿ ಗಣೇಶ್., ೧೯೯೯, *ದಲಿತರು ಮತ್ತು ಜಾಗತೀಕರಣ*; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಯೋಗೀಶ್ವರಪ್ಪ ಡಿ ಎನ್., ೧೯೯೯, ಹಾಗಲವಾಡಿ ನಾಯಕರು; ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಮೇಶ ಸ ಚಿ., ೨೦೦೧, ಬೇಟೆ: ಸಾಂಸ್ಕೃತಿಕ ಪದಕೋಶ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಜಣ್ಣ ಆರ್., ೧೯೮೨, ನಾಯಕ ಜನಾಂಗದ ಇತಿಹಾಸ; ಚಳ್ಳಕೆರೆ

ರಾಜಶೇಖರ್ ಎಸ್., ೧೯೭೮, ಸಾಮಾಜಿಕ ಸಂಶೋಧನೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು

ರಾಜಪ್ಪ ದಳವಾಯಿ, ೧೯೯೩, ಹಕ್ಕಿಪಿಕ್ಕಿ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾಮಚಂದ್ರಪ್ಪ ಬರಗೂರು, ೨೦೦೧, ಸಂಸ್ಕೃತಿ–ಶ್ರಮ ಮತ್ತು ಸೃಜನಶೀಲತೆ; ಜನಸ್ನೇಹ ಪ್ರಕಾಶನ, ಬೆಂಗಳೂರು

ನಾಯಕ ಎನ್ ಆರ್., ೧೯೯೩, ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾಮಚಂದ್ರ ಜೋಷಿ, ೨೦೦೫, ಭಾರತೀಯ ಸಮಾಜ ರಚನೆ ಮತ್ತು ಪರಿವರ್ತನೆ; ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ ಗುಲ್ಬರ್ಗಾ

ಲಕ್ಕಪ್ಪ ಗೌಡ ಎಚ್ ಜೆ., (ಪ್ರ ಸಂ) ೧೯೯೮, ಕರ್ನಾಟಕ ಬುಡಕಟ್ಟುಗಳು ಸಂ ೧,೨; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಲಕ್ಷ್ಮಣ್ ತೆಲಗಾವಿ, ೨೦೧೦, ಎಪ್ಪತ್ತೇಳು ಪಾಳೆಯಗಾರರು; ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಲಕ್ಷ್ಮಣ್ ತೆಲಗಾವಿ, (ಸಂ) ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ; ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಲಕ್ಷ್ಮಣ್ ತೆಲಗಾವಿ, ೨೦೦೯, ಚಿತ್ರದುರ್ಗ ನಾಯಕ ಅರಸರು ರಾಜಕೀಯ ಚಿತ್ರ; ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಲಕ್ಷ್ಮಣ್ ತೆಲಗಾವಿ, ೧೯೯೯, ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿ, ವರ್ಗಗಳ ಚಳುವಳಿ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಕೆ., ೧೯೭೮, ಐತಿಹಾಸಿಕ ಚಿತ್ರದುರ್ಗ; ಚಿತ್ರದುರ್ಗ

ಲಕ್ಷ್ಮೀಪತಿ ಕೋಲಾರ, ೧೯೯೩, ಮಾಸ್ತಿಕರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ವೀರನಾಯಕ ಎಚ್ ವಿ., ೧೯೮೨, ಕ್ಷಾತ್ರಾಂಶ ಪ್ರಭೋಧ ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ವೀರೇಂದ್ರಸಿಂಹ ಹರ್ತಿಕೋಟೆ, ತೇಜಸ್ವಿ ಕಟ್ಟಿಮನಿ (ಸಂ) ೨೦೦೨, ಘಟ್ಟಿಹೊಸಹಳ್ಳಿ ಗಟ್ಟಿಗ; ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ವೀರೇಂದ್ರಸಿಂಹ ಹರ್ತಿಕೋಟೆ, ಅಮರೇಶ ಯಾತಗಲ್ (ಸಂ) ೨೦೦೮, ವಾಲ್ಮೀಕಿ ಮಂದಾರ; ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, ಚಿನ್ನಹಗರಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ

ವಿರೂಪಾಕ್ಷಿ ಪೂಜಾರಹಳ್ಳಿ, (ಸಂ) ೨೦೦೬, ವಾಲ್ಮೀಕಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, ಬೇಟೆ ಮತ್ತು ಬೇಡರು, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, ಕರ್ನಾಟಕದಲ್ಲಿ ತಳವಾರಿಕೆ; ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, ಕಾಮಗೇತಿ ವಂಶಜರ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೆಂಕಟರಾಯ ಪುಣಿಂಚತ್ತಾಯ, ೧೯೯೩, ಮೊಗವೀರರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಶಂಕರರಾವ್ ಚ ನ., ೨೦೦೫, ಭಾರತೀಯ ಸಮಾಜ (ಸಂರಚನೆ ಮತ್ತು ಪರಿವರ್ತನೆ); ಜೈಭಾರತ ಪ್ರಕಾಶನ, ಬೆಂಗಳೂರು

ಶಂಕರನಾರಾಯಣ ತೀ ನಂ., ಕಾಡುಗೊಲ್ಲರ ನಂಬಿಕೆಗಳು ಮತ್ತು ಆಚರಣೆಗಳು; ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶಂಕರನಾರಾಯಣ ತೀ ನಂ., ೧೯೮೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು; ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶಾಸ್ತ್ರಿ ಕೆ ಜಿ, ಪಾಟೇಲ್ ಎಸ್ ಪಿ., ೧೯೭೬, ಕರ್ನಾಟಕದ ಸಾಂಸ್ಕೃತಿಕ ಪರಂಪರೆ; ಸಮಾಜ ಪುಸ್ತಕಾಲಯ, ಧಾರವಾಡ

ಶ್ರೀಕಂಠಶಾಸ್ತ್ರಿ ಎಸ್., ೧೯೬೯, ಭಾರತೀಯ ಸಂಸ್ಕೃತಿ; ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಶ್ರೀನಿವಾಸನಾಯಕ ಬಿ ಎಸ್., ೧೯೮೪, ಚಿತ್ರದುರ್ಗದ ಕಾಮಗೇತಿ ಅರಸರು; ಸರ್ಜರಾಮಸ್ವಾಮಿ ನಾಯಕರು, ಚಿಕ್ಕಮಗಳೂರು

ಸದಾಶಿವಪ್ಪ ಕುಂ ಭಾ., ೧೯೯೭, ಹರಪನಹಳ್ಳಿ ಪಾಳೆಯಗಾರರು; ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

ಸರ್ದೇಸಾಯಿ, ೨೦೦೩, *ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ*; ನವ ಕರ್ನಾಟಕ ಪ್ರಕಾಶನ, ಬೆಂಗಳೂರು

ಸುಚಿತಾನಂದ ಮಲ್ಕಾಪುರೆ, ೨೦೦೧, ಬೀದರ್ ಜಿಲ್ಲೆಯ ಬೇಡಬುಡಕಟ್ಟು: ಒಂದು ಅರ್ಥಶಾಸ್ತ್ರೀಯ ಅಧ್ಯಯನ (ಅಪ್ರಕಟಿತ ಪಿಎಚ್ ಡಿ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸೂರ್ಯನಾಥ, ಯು. ಕಾಮತ್, (ಸಂ) ೧೯೮೪, *ಕರ್ನಾಟಕ ರಾಜ್ಯ ಗೆಜೆಟಿಯರ್;* (ಭಾಗ–೧,) ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು

.... (ಸಂ) ೧೯೮೫, *ಕರ್ನಾಟಕ ರಾಜ್ಯ ಗೆಜೆಟಿಯರ್;* (ಭಾಗ–೨,) ೧೯೮೫. ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು

ಸೈಯ್ಯದ್ ಜಮೀರುಲ್ಲಾ ಷರೀಫ್, ೧೯೯೩, ಗೊಂಡರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಹರೀಶ್ ಪಿ ಎನ್., ೧೯೯೩, ಎರವರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

English

Alchin F R., 1963, Neolithic cattle keepers of south India- A Study of Deccan, Cambridge press, Cambridge

Ananthakrishna Iyer, L K., 1998, *The Mysore Tribes and Castes;* Mittal Publications, New Delhi

Hassan, S S., 1989, *The Castes and Tribes of H E H Nizam's Dominions*; Asian Educational Services, New Delhi.

Banden Powell B H., (Reprint) 1990, The Land system of British India; Low price publications, Delhi

Bose N K., 1967, Culture and Society in India; Asia publishing house, bombay

Buchanan F A., 1807, A Journey from Madras trough the countries of Mysore, nara and Malbar; Asian publication New Delhi

Dikshit G S., 1964, The Local government in Medieval Karnataka, Karnataka University, Dharawad

Dube S C., 1990, Indian society; National book trust, Delhi

Frazer J H., 1978, The Golden bough; Newyork

Gururajachar S., 1974, Some aspects and social life in Karnataka(1000-1300AD)Mysore University press, Mysore

Hayavadanarao, 1988, Indian caste system- A study; Asian publications, New Delhi

Hassan, Syed Sirjul, 1989, The Caste and Tribes of H E S, The Nizamas Dominions, New Delhi

Huffon J K., 1977, Caste in India (Its Nature, function and origin) Oxford university press, Oxford

Iyer L K A., 1988, (Re print) The Mysore Tribes and Castes, Mittal publications, New Delhi

Jyotsna Kamath, 1980, Social life in medieval Karntaka; Dharwad

Karmakar D P., 1974, A Cultural history of Karnataka; Karnataka Vidhyavardhaka sangha, Dharwad

Kuppuswamy G R., 1975, Economic conditions in Karnataka, Karnataka university, Dharwad

Laxman T K., 1966, Cottage and small industries in Mysore, Mysore

Mujumdar B K., 1960, The Military system of Ancient India; F K I M pvt ltd, Calcutta

Mohanty P K., 2002, Development of primitive Tribal India; Concept publishing company, New Delhi

Nanjundaiah, 2005, Karnataka human development report; Karnataka Bangalore

Rice B L., 1903, Epigraphy carnatic; Bangalore

Sachindra narayan, 2002, The Dynamics of tribal development- Issues and challenges; Gyan publication, New Delhi

Sherring M A., 1974, Hindu Tribes and castes; Mittal publications, New Delhi

Singh K S., 1994, The Scheduled tribes; Oxford press Madras

Singh B N., Manas chatarjee (ed) Tribes in India; vol I, RBSA publishers, Jaipur

Sushma sahay Prasad, 1988, Tribal women labourers; Gain publishing house, New Delhi

Thurston Edger, 1906, Ethnographic notes in southern India; Government press, Madras

Thurston Edger, 1909, The caste and tribes of southern India; Asian publications, Delhi

The Encyclopaedic District Gazetteers of India Vol-1, Karnataka State, Bangalore

Tripathy S N., 2006, Dynamics of Tribal migration; Sonali publications New Delhi

Urnahar, Ambika chandani 1995, Sociology of rural development; Rawat publications New Delhi

Yadappanavar A V., 1991, Tribal education in India; Discovery publications, New Delhi

ವಕ್ತೃಮಾಹಿತಿ ವಿವರ

ಹನುಮಕ್ಕ ಕೆ.ಎಚ್., (೫೩), ಶಿಕ್ಷಕಿ, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೪.೧೦

ನಾಗೇಂದ್ರಪ್ಪ ಎನ್., (೭೧), ನಿವೃತ್ತ ಶಿಕ್ಷಕ, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೪.೧೦

ಲೋಕರಾಜ ನಾಯಕ ಕೆ.ಎಚ್., (೫೫), ವ್ಯವಸಾಯ, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೪.೧೦

ಹನುಂತಪ್ಪ ಕೆ., (೪೯), ಗುತ್ತಿಗೆದಾರರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೪.೧೦

ತಿಮ್ಮಣ್ಣ ಎಚ್., (೪೨), ಶಿಕ್ಷಕರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೩.೪.೧೦

ನಂಜಪ್ಪ ನಾಯಕ, (೪೦), ಶಿಕ್ಷಕರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೩.೪.೧೦

ಚಂದ್ರನಾಯಕ ಕೆ.ಎಲ್., (೩೬), ಮೆಕಾನಿಕ್, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೪.೪.೧೦

ಹನುಮಂತಪ್ಪ ಟಿ., (೩೯), ಗ್ರಾ.ಪಂ. ಉಪಾಧ್ಯಕ್ಷರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೪.೪.೧೦

ಸಿದ್ದಮ್ಮ ಕೆ., (೪೪), ಗ್ರಾ.ಪಂ. ಮಾಜಿ ಉಪಾಧ್ಯಕ್ಷರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೪.೪.೧೦

ಪಂಪಾಪತಿ ಎನ್.ಜಿ., (೪೧), ಶಿಕ್ಷಕರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೪.೪.೧೦

ನಿಜಲಿಂಗಪ್ಪ ಎನ್., (೪೩), ಶಿಕ್ಷಕರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೪.೧೦

ಚೌಡಮ್ಮ ಕೆ., (೪೨), ಗ್ರಾ.ಪಂ. ಮಾಜಿ ಸದಸ್ಯರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೪.೧೦

ಮುದುಕವಲಾರ ಅಂಜಿನಪ್ಪ, (೩೭), ವ್ಯವಸಾಯ, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೦.೪.೧೦.

ಮೂಗಣ್ಣ ಆರ್., (೬೧), ವ್ಯವಸಾಯ, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೦.೪.೧೦

ಉಚ್ಚವ್ವನಹಳ್ಳಿ ಮಂಜುನಾಥ, (೬೦), ರೈತ ಸಂಘದ ಅಧ್ಯಕ್ಷರು, ಸೊಕ್ಕೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೦.೪.೧೦

ಅಗಸನಹಳ್ಳಿ ಬೊಮ್ಮಪ್ಪ, (೩೯), ತರಗಾರ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೬.೬.೧೦

ಮಲಸಿದ್ದಪ್ಪನವರ ಬೀಮಪ್ಪ, (೩೫), ಕೂಲಿ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೬.೬.೧೦

ಬಿಳಿಚೋಡು ಅಳ್ಳೆಪ್ಪ, (೩೭), ವ್ಯವಸಾಯ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೮.೬.೧೦

ಬಿಳಿಚೋಡು ಬೀಮಪ್ಪ, (೬೯), ವ್ಯವಸಾಯ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೮.೬.೧೦

ಅಗಸನಹಳ್ಳಿ ಬೀಮಪ್ಪ, (೫೦), ವ್ಯವಸಾಯ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೦.೬.೧೦

ಕಸರಹಳ್ಳಿ ರಂಗಜ್ಜಿನವರ, (೪೯), ಕೂಲಿ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೦.೬.೧೦

ಪೂಜಾರ ಜಯಪ್ಪ, (೪೩), ಪೂಜಾರಿಕೆ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೨.೬.೧೦

ದನಕಾವರ ಕರಿಬಸಪ್ಪ, (೫೭), ಕೂಲಿ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೨.೬.೧೦

ಕಿತ್ತೂರು ಹನುಮಂತಪ್ಪ, (೪೦), ಪಶುಪಾಲನೆ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೨.೬.೧೦

ಮಾಗಡಿ ಶೇಖರಪ್ಪ, (೩೭), ವ್ಯವಸಾಯ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೨.೬.೧೦

ತಳವಾರ ಕೆಂಚಪ್ಪ, (೪೫), ತಳವಾರಿಕೆ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೫.೬.೧೦

ರಾಟೇರ ಹಿರಿಯಜ್ಜಿ, (೮೬), ಯಜಮಾನಿ ಗೃಹಿಣಿ, ಬಸವನಕೋಟೆ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೫.೬.೧೦

ಕಾಳೇರ ಚೌಡಪ್ಪ, (೪೫), ಪಶುಪಾಲನೆ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨.೮.೧೨

ಕುರಿ ಬೀಮಪ್ಪ, (೫೬), ಪಶುಪಾಲನೆ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨.೮.೧೨

ಆಲದಹಳ್ಳಿ ಓಬಪ್ಪ, (೪೮), ವ್ಯವಸಾಯ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨.೮.೧೨

ಕುಂಡಿರಂಗಜ್ಜರ ಪಾಲಪ್ಪ, (೪೩), ವ್ಯವಸಾಯ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೮.೧೨

ಬೊಸಪ್ಪ ಹನುಮಂತಪ್ಪ, (೫೧), ಕೂಲಿ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೮.೧೨

ಕಸಲಾರ ಹಾಲಪ್ಪ, (೪೪), ಕೂಲಿ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೮.೧೨

ತಿಂದವ್ವರ ನಾಗರಾಜ, (೩೭), ಪಶುಪಾಲನೆ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೮.೧೨

ಕೊಸಲಾರ ಅಶೋಕ, (೩೭), ವ್ಯಾಪಾರ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೮.೧೨

ಕಮ್ಮಾರ ಹನುಮಂತಪ್ಪ, (೫೭), ವ್ಯವಸಾಯ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೭.೮.೧೨

ಬನ್ನಿಹಟ್ಟಿ ಮೂಕಪ್ಪ, (೬೩), ಕೂಲಿ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೯.೮.೧೨

ಕೆಂಗಪ್ಪರ ಹನುಮಂತಪ್ಪ, (೪೫), ಕೂಲಿ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೯.೮.೧೨

ಗೌಡರ ಶೇಖರಣ್ಣ, (೬೯), ಯಜಮಾನ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೯.೮.೧೨

ಕಡ್ಡಿಮುಡಿ ಲೋಕಣ್ಣ, (೬೭), ಕೂಲಿ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೧.೮.೧೨

ಮೊಟಕೇರಿ ಬೀಮಣ್ಣ, (೫೪), ಕೂಲಿ, ಮಾಗಡಿ, ಜಗಳೂರು ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧೧.೮.೧೨

ತಳವಾರ ಬಸಪ್ಪ (೪೮), ವ್ಯವಸಾಯ, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೦.೯.೧೦

ಈರಪ್ಪ ಟಿ. (೩೬), ಕೂಲಿ, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೦.೯.೧೦

ತಳವಾರ ರಂಗಪ್ಪ (೩೯), ಕೂಲಿ, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೪.೯.೧೦

ತಳವಾರ ತೇಜಪ್ಪ, (೪೧), ವ್ಯವಸಾಯ, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೫.೯.೧೦

ನಾಗರಾಜ (೪೪), ಬೇಲ್ದಾರಿಕೆ, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೫.೯.೧೦

ಪರುಸಪ್ಪ (೪೧), ಡ್ರೈವರ್, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೭.೯.೧೦

ಮಂಜುನಾಥ (೪೨), ಇಂಜಿನಿಯರ್, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೮.೯.೧೦

ನಾಗಮ್ಮ (೨೯), ಶಿಕ್ಷಕಿ, ಕಾರಿಗನೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೮.೯.೧೦

ಚಂದ್ರಪ್ಪ (೩೭), ವ್ಯವಸಾಯ, ಕಬ್ಬಿ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೨.೧೦.೧೦

ಬಸರಾಜಪ್ಪ ಹಾಲೀವಾನ್ (೪೧), ವ್ಯವಸಾಯ, ಕಬ್ಬಿ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೨.೧೦.೧೦

ರಂಗಪ್ಪ (೪೭), ವ್ಯವಸಾಯ, ಕಬ್ಬಿ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೨.೧೦.೧೦

ಶೇಖರಪ್ಪ (೫೨), ವ್ಯವಸಾಯ, ಕಬ್ಬಿ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೨.೧೦.೧೦

ಓಂಕಾರಪ್ಪ (೪೨), ವ್ಯವಸಾಯ, ಕಬ್ಬಿ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೩.೧೦.೧೦

ರಾಜಪ್ಪ (೫೮), ವ್ಯವಸಾಯ, ಕಬ್ಬಿ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೭.೧೦.೧೦

ಬಸವರಾಜಪ್ಪ ಎಚ್. (೪೭), ಗ್ರಾ.ಸದಸ್ಯರು, ಕಬ್ಬಿ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨೭.೧೦.೧೦

ಮೇಚಪ್ಪನವರ ತಿಪ್ಪೇಶಪ್ಪ (೪೧), ವ್ಯವಸಾಯ, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೧೧.೧೦

ಹನುಮಂತಪ್ಪ (೪೪), ಗಾರೆಕೆಲಸ, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೧೧.೧೦

ಚಂದ್ರಪ್ಪ (೫೮), ಪೂಜಾರಿ, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೧೧.೧೦

ಬಸಪ್ಪ (೫೦), ಟೈಲರ್, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೧.೧೧.೧೦

ಜಯಪ್ಪ (೬೧), ಡ್ರೈವರ್, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೨.೧೧.೧೦

ಕಾಮಣ್ಣ (೫೩), ಕೂಲಿ, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೫.೧೧.೧೦

ಹನುಮಂತಪ್ಪ (೫೭), ಕೂಲಿ, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೫.೧೧.೧೦

ಮಾಯಕೊಂಡದ ಹನುಮಂತಪ್ಪ (೪೬), ವ್ಯವಸಾಯ, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೮.೧೧.೧೦

ಬೊಮ್ಮಣ್ಣ (೭೨), ವ್ಯಾಪಾರ, ನಲ್ಲೂರು, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ. ಸಂದರ್ಶನ ದಿನಾಂಕ ೮.೧೧.೧೦

ಬಾಳೆದೆಲಿಯ ರಂಗಸ್ವಾಮಿ (೪೫), ವ್ಯವಸಾಯ, ಕುಳಗಟ್ಟೆ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೩.೮.೧೧

ಕೆಂಗಣ್ಣನವರ ರಂಗಸ್ವಾಮಿ (೬೦), ವ್ಯವಸಾಯ, ಕುಳಗಟ್ಟೆ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೩.೮.೧೧

ನುಗ್ಗೀಹಳ್ಳಿ ರಂಗಸ್ವಾಮಿ (೬೫), ಕೂಲಿ, ಕುಳಗಟ್ಟೆ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೩.೮.೧೧

ಮಲ್ಲಕ್ಕನವರ ಮಲ್ಲಪ್ಪ (೫೩), ಕೃಷಿಕೂಲಿ, ಕುಳಗಟ್ಟೆ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೬.೮.೧೧

ಬೂತನಗೇರಿ ರಾಮಪ್ಪ (೮೩), ವಿಶ್ರಾಂತ ಗೃಹಸ್ಥ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೬.೮.೧೧

ಮಲ್ಲೂರ ಲಕ್ಷ್ಮಮ್ಮ (೩೮), ಗೃಹಿಣಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೬.೮.೧೧

ಕುಡಿ ತಿಪ್ಪಣ್ಣನವರ ಹನುಮಪ್ಪ (೫೪), ಕೂಲಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೬.೮.೧೧

ಕೆ. ರಾಜಪ್ಪ (೪೫), ವ್ಯಾಪಾರಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೯.೮.೧೧

ಬಿ. ನಾಗಪ್ಪ (೪೫), ವ್ಯಾಪಾರಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೯.೮.೧೧

ಮಂಜುನಾಥ (೩೩), ವಿದ್ಯಾರ್ಥಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೯.೮.೧೧

ಅಳ್ಳೆಳ್ಳಪ್ಪ (೩೯), ಕೂಲಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೧೨.೮.೧೧

ತಿಂದಪ್ಪ (೮೧), ವಿಶ್ರಾಂತ ಗೃಹಸ್ಥ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೧೨.೮.೧೧

ಬಸವರಾಜಪ್ಪ (೬೨), ಕೂಲಿ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೨.೧.೧೨

ಮಂಜಪ್ಪ (೩೯), ಕೂಲಿ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೨.೧.೧೨

ಎನ್. ಲಕ್ಷ್ಮಪ್ಪ (೬೩), ಕೂಲಿ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೩.೧.೧೨

ಆರ್. ಅಶೋಕ (೨೯), ಕೂಲಿ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೩.೧.೧೨

ಪರಮೇಶಪ್ಪ (೪೮), ಟೈಲರಿಂಗ್, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೫.೧.೧೨

ರೇವಣ್ಣಪ್ಪ (೩೫), ಕೂಲಿ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೫.೧.೧೨

ಉಮಾದೇವಿ (೩೨), ಗೃಹಿಣಿ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೮.೧.೧೨

ಮೆಲ್ಲಜ್ಜಿ (೭೮), ವಿಶ್ರಾಂತಿ ಗೃಹಸ್ಥೆ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೮.೧.೧೨

ಬಸಪ್ಪ ತಳವಾರ (೬೯), ಕೂಲಿ, ಕಂಚಿಕೊಪ್ಪ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೮.೧.೧೨

ಬಸವರಾಜಪ್ಪ (೫೨), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ಮಂಜಪ್ಪ (೪೪), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ಎನ್. ಲಕ್ಷ್ಮಪ್ಪ (೩೯), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ಆರ್. ಆಶೋಕ (೫೭), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ಪರಮೇಶಪ್ಪ (೪೧), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ಕರಿಯಮ್ಮ (೩೫), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ರೇವಣ್ಣಪ್ಪ (೬೧), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ರಿಂದಮ್ಮ (೪೭), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ಅಂಜಿನಪ್ಪ (೫೪), ಕೂಲಿ, ಹನುಮನಹಳ್ಳಿ, ಹೊನ್ನಾಳಿ ತಾ. ದಾವಣಗೆರೆ ಜಿಲ್ಲೆ, ಸಂದರ್ಶನ ದಿನಾಂಕ ೦೦೦

ಗುಳೇದಾರ ಮೀನಾಕ್ಷಮ್ಮ (೩೫), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೧೯.೪.೧೧

ತೆಲಿಗಿ ಹನುಮಂತಮ್ಮ (೪೨), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೧೯.೪.೧೧

ಕೋಳಿ ನಾಗರಾಜ್ (೨೯), ಆಟೋ ಡ್ರೈವರ್, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೧೯.೪.೧೧

ಜಿ.ಸಣ್ಣದಾಸಪ್ಪ (೫೫), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೪.೧೧

ಅನುಸೂಯಮ್ಮ (೩೯), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೪.೧೧

ಶಿವಪ್ಪ (೪೭), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೪.೧೧

ಜಿ. ನಾಗಪ್ಪ (೫೭), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೪.೧೧

ತಳವಾರ ಸತ್ಯವ್ವ (೩೩), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೪.೧೧

ರಂಗಪ್ಪ ಟಿ. (೬೫), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೪.೧೧

ಹನುಂತಪ್ಪ ಆರ್. (೭೭), ವ್ಯವಸಾಯ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೮.೪.೧೧

ಹನುಮಕ್ಕ ಎನ್. (೬೧), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೮.೪.೧೧

ಮುರಿಗೆಪ್ಪ ಎಂ. (೪೫), ಕೂಲಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೮.೪.೧೧

ರಮೇಶ್ ಎಸ್. (೨೭), ವ್ಯವಸಾಯ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೮.೪.೧೧

ಪ್ರಕಾಶ್ ಎಸ್. (೨೯), ವಿದ್ಯಾರ್ಥಿ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೩೦.೪.೧೧

ಕಡಬಗೆರೆ ಕೆಂಚಪ್ಪ (೩೭), ವ್ಯವಸಾಯ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೩೦.೪.೧೧

ದುರುಗಪ್ಪ ಜಿ. (೫೧), ವ್ಯಾಪಾರ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೩೦.೪.೧೧

ದ್ಯಾಮವ್ವ ಕೆ. (೬೩), ವ್ಯಾಪಾರ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೩೦.೪.೧೧

ತಳವಾರ ಪರಶುರಾಮ (೩೧), ವ್ಯವಸಾಯ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೩೧.೪.೧೧

ತಳವಾರ ಹನುಮಂತಪ್ಪ (೮೬), ವಿಶ್ರಾಂತ ಗೃಹಸ್ಥ, ಬೇತೂರು, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೩೧.೪.೧೧

ಬಂಗೇರ ಕಮಲಮ್ಮ (೪೨), ಗೃಹಿಣಿ, ದೊಡ್ಡಬಾತಿ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೧೯.೫.೧೧

ಬಂಗೇರ ಕರಿಸಿದ್ದಪ್ಪ (೪೯), ಕೂಲಿ, ದೊಡ್ಡಬಾತಿ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೦.೫.೧೧

ಕಬ್ಬಳ್ಳಿ ರೇವಣಸಿದ್ದಪ್ಪ (೫೫), ವ್ಯವಸಾಯ, ದೊಡ್ಡಬಾತಿ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೫.೧೧

ಮಂಜುನಾಥ ಬಿ.ಎಸ್. (೪೧), ವ್ಯವಸಾಯ, ದೊಡ್ಡಬಾತಿ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೧.೫.೧೧

ಶಾಂತಮ್ಮ (೩೫), ಕೂಲಿ, ದೊಡ್ಡಬಾತಿ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೪.೫.೧೧

ಪ್ರಕಾಶ್ ಬಿ.ಕೆ. (೩೫), ಗ್ರಾ.ಪಂ. ಅಧ್ಯಕ್ಷರು, ದೊಡ್ಡಬಾತಿ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೫.೫.೧೧

ಉಮೇಶ್ ಟಿ.ಎನ್. (೭೭), ಭೂ ಒಡೆಯ, ದೊಡ್ಡಬಾತಿ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೫.೫.೧೧

ರತ್ನಮ್ಮ ತಳವಾರ (೪೦), ಕೂಲಿ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೦.೫.೧೧

ಕೊಟ್ರೇಶಪ್ಪ ಎಂ. (೫೧), ವ್ಯವಸಾಯ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೦.೫.೧೧

ಯಂಕಣ್ಣ ಎಸ್.ಎಲ್. (೩೭), ವ್ಯವಸಾಯ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೨.೫.೧೧

ದುರಗಪ್ಪ ಬಡ್ಲಿಂಗಪ್ಪ (೬೧), ಕೂಲಿ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೨.೫.೧೧

ಹಾಲಪ್ಪ ತಳವಾರ (೪೮), ಕೂಲಿ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೨.೫.೧೧

ಹನುಮವ್ವ ಎನ್. (೫೬), ಕೂಲಿ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೨.೫.೧೧

ಲಕ್ಕೊಳ್ಳಿ ಚಂದ್ರಪ್ಪ (೩೮), ವ್ಯಾಪಾರ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೭.೫.೧೧

ಗಾಟಿನಾರ ಮಂಜಣ್ಣ (೩೧), ಪಶುಪಾಲನೆ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೯.೫.೧೧

ಸಂಗಪ್ಪ ಕಡಬಗೆರೆ (೬೫), ವಿಶ್ರಾಂತ ವೃದ್ಧಾಪ, ಹುಣಸಿಕಟ್ಟೆ, ದಾವಣಗೆರೆ ತಾ.ಜಿಲ್ಲೆ. ಸಂದರ್ಶನ ದಿನಾಂಕ ೨೯.೫.೧೧

ಕರ್ನಾಟಕ

ದಾವಣಗೆರೆ ಜಿಲ್ಲಾ ಪೂರ್ವ ಕರ್ನಾಟಕ (೧೯೯೭ ಪೂರ್ವ)



ಕರ್ನಾಟಕ
ದಾವಣಗೆರೆ ಜಿಲ್ಲೆಯ ಸಮೀಕ್ಷಾ ನೆಲೆಗಳು



ದಾವಣಗೆರೆ ಜಿಲ್ಲೆಯ
ಬೇಡರ ಸಮುದಾಯಗಳ ಸಮೀಕ್ಷೆ ನೆಲೆ



ಕ್ಷೇತ್ರಕಾರ್ಯದ ಪ್ರಶ್ನಾವಳಿ ಮಾದರಿ

ಬುಡುಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ

ಬೇಡರ ವೃತ್ತಿ ಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ (ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ)

೧. ಸಾಮಾನ್ಯ ಮಾಹಿತಿ

ಎ. ಸಮೀಕ್ಷೆಯ ದಿನಾಂಕ
ಬಿ. ಬಳಿಪಂಗಡ
ಸಿ. ಬೆಡಗು
ಡಿ. ಮಾತೃಭಾಷೆ
ಇ. ಮನೆದೇವರು

ಈ. ಕುಲಚಿಹ್ನೆ
ಎಫ್. ಮನೆತನದ ಹೆಸರು
ಜಿ. ಗ್ರಾಮ / ಪಟ್ಟಣ / ನಗರ
ಎಚ್. ವಾರ್ಡ್
ಐ. ಪಂಚಾಯತಿ
ಜೆ. ತಾಲೂಕು

ಕೆ. ಜಿಲ್ಲೆ
ಎಲ್. ಭೂಹಿಡುವಳಿ (ಎಕರೆಗಳಲ್ಲಿ)
೧. ಒಣ :
೨. ನೀರಾವರಿ :

೧೧. **ವೈಯಕ್ತಿಕ ಮಾಹಿತಿ**

ಕ್ರ.ಸಂ.	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ತೆರ/ವರದಕ್ಷಿಣೆ (ರೂಗಳಲ್ಲಿ)		ಕಸುಬು	ಕುಟುಂಬ ಯೋಜನೆ
							ವಧುದಕ್ಷಿಣೆ	ವರದಕ್ಷಿಣೆ		
೧										
೨										
೩										
೪										
೫										
೬										
೭										
೮										
೯										
೧೦										

ಓ. ಪಶುಸಂಪತ್ತು (ಸಂಖ್ಯೆಗಳಲ್ಲಿ)
೧. ಎತ್ತು, ಹೋರಿ :
೨. ಆಕಳು, ಕರು :
೩. ಎಮ್ಮೆ, ಕೋಣ :
೪. ಕುರಿ :
೫. ಮೇಕೆ :
೬. ಕೋಳಿ :

ಪಿ. ಮನೆ ವಿವರ
೧. ಗುಡಿಸಲು
೨. ಟಿನ್‌ಮನೆ
೩. ದಾಬಾ ಮಾಳಿಗೆ
೪. ಆರ್.ಸಿ.ಸಿ.
೫. ಹೆಂಚಿನ ಮನೆ
೬. ಆಶ್ರಯ ಮನೆ
೭. ಬಾಡಿಗೆಮನೆ

ಕ್ಯೂ ಇತರೆ ಸೌಲಭ್ಯಗಳು
೧. ಪಡಿತರ ಚೀಟಿ
೨. ಗ್ಯಾಸ್
೩. ನಲ್ಲಿ
೪. ಶೌಚಾಲಯ
೫. ಸ್ನಾನಗೃಹ
೬. ಸೈಕಲ್
೭. ರೇಡಿಯೋ
೮. ಟೇಪ್ ರಿಕಾರ್ಡರ್
೯. ಟಿ.ವಿ.
೧೦. ದೂರವಾಣಿ

ಮಾರ್ಗದರ್ಶಕರು
ಡಾ. ಕೆ.ಎಂ. ಮೇತ್ರಿ
ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ

ಸಂಶೋಧಕರು
ಅಮೃತ ಟಿ.
ಬುಡಕಟ್ಟು ಅಧ್ಯಯನ ವಿಭಾಗ

ಮಾಹಿತಿ ದಾಖಲೆದಾರರ ಸಹಿ ಮತ್ತು ವಿಳಾಸ

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ

ಬೇಡ ವೃತ್ತಿಪಲ್ಲಟಗಳು : ಒಂದು ಸಾಮಾಜಿಕ ವಿಶ್ಲೇಷಣಾತ್ಮಕ ಅಧ್ಯಯನ

ವ್ಯಕ್ತಿ ಸಂದರ್ಶನದ ಪ್ರಶ್ನಾವಳಿ

ಅ. ಕೌಟುಂಬಿಕ

೧. ನಿಮ್ಮ ಕುಟುಂಬವನ್ನು ಯಾರು ಮುನ್ನಡೆಸುತ್ತಾರೆ? ಮುಖ್ಯ ತೀರ್ಮಾನಗಳನ್ನು ಕುಟುಂಬದ ಎಲ್ಲ ಸದಸ್ಯರು ಸೇರಿ ತೆಗೆದುಕೊಳ್ಳುವಿರಾ? ಅಥವಾ ಕುಟುಂಬದ ಮುಖ್ಯಸ್ಥರೇ ತೆಗೆದುಕೊಳ್ಳುತ್ತಾರೆಯೇ?

೨. ಈ ಹಿಂದೆ ಕುಟುಂಬದ ಮುಖ್ಯ ತೀರ್ಮಾನಗಳನ್ನು ಯಾರು ತೆಗೆದುಕೊಳ್ಳುತ್ತಿದ್ದರು?

೩. ತೀರ್ಮಾನಗಳನ್ನು ತೆಗೆದುಕೊಳ್ಳುವ ವ್ಯಕ್ತಿ ಬದಲಾಗಿದ್ದರೆ ಅದಕ್ಕಿರುವ ಕಾರಣಗಳೇನು?

೪. ನಿಮ್ಮ ಕುಟುಂಬದ ಒಟ್ಟಾರೆಯ ಸ್ಥಿತಿ ಈ ಹಿಂದಿಗಿಂತ ಬದಲಾಗಿದೆ ಎಂದು ನಿಮಗೆ ಅನ್ನಿಸುತ್ತಿದೆಯೇ?
ಹೌದು / ಇಲ್ಲ

೫. ಬದಲಾಗಿದ್ದರೆ ಅದಕ್ಕೆ ಯಾವ ಕಾರಣಗಳನ್ನು ಕೊಡಬಯಸುತ್ತೀರಿ?

೬. ಕೂಡು ಕುಟುಂಬಗಳು ಇವೆಯೇ?

೭ ಈಗ ಕುಟುಂಬಗಳು ಬದುಕುತ್ತಿರುವ ಸ್ವರೂಪ ಬದಲಾಗಿದೆ ಎಂದೆನ್ನಿಸುವುದೇ ಅದಕ್ಕೆ ಏನು ಕಾರಣಗಳು?

೮. ನಿಮ್ಮ ಕುಟುಂಬದಲ್ಲಿ ಹೆಣ್ಣು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳುವಳೇ?
ಹೌದು / ಇಲ್ಲ ಕಾರಣಗಳೇನು?

೯. ನಿಮ್ಮ ಸಮುದಾಯದ ಕುಟುಂಬಗಳ ಸ್ವರೂಪ ಬದಲಾಗುತ್ತಿದ್ದೆಯೇ ಅದಕ್ಕೆ ಕಾರಣಗಳೇನು?

೧೦. ವಿಧವಾ ವಿವಾಹ ಇದೆಯಾ ಹೌದು / ಇಲ್ಲ

೧೧. ಬಹುಪತ್ನಿತ್ವ ಇದೆಯಾ ಹೌದು / ಇಲ್ಲ

ಆ. ಸಾಮಾಜಿಕ

೧. ನಿಮ್ಮ ಸುತ್ತ ಬದುಕುತ್ತಿರುವ ಇತರ ಸಮುದಾಯ ನಿಮ್ಮನ್ನು ಯಾವ ಬಗೆಯಲ್ಲಿ ನಡೆಸಿಕೊಳ್ಳುತ್ತಿವೆ?

೨. ನಿಮ್ಮ ಸುತ್ತ ಬದುಕುತ್ತಿರುವ ಇತರೆ ಸಮುದಾಯಗಳಿಗಿಂತ ನಿಮ್ಮ ಸಮುದಾಯ ಹಿಂದುಳಿದಿದೆ ಎಂದು ತಾವು ಭಾವಿಸುವಿರಾ?

೩. ಹಿಂದುಳಿದಿದ್ದರೆ ಅದಕ್ಕೆ ಯಾವ ಯಾವ ಕಾರಣಗಳನ್ನು ನೀಡಬಯಸುವಿರಿ?

೪. ನಿಮ್ಮ ಸಮುದಾಯವನ್ನು ಇತರೆ ಮೇಲ್ಜಾತಿಯವರು ಕೆಳಜಾತಿ ಅಸ್ಪೃಶ್ಯರು ಅಪರಾಧಿ ಸಮುದಾಯವೆಂದು ನೋಡುತ್ತಿವೆಯೇ? ಹಾಗೆ ನೋಡಲು ಕಾರಣವೇನು?

೫. ಅವರು ನಿಮ್ಮ ಸಮುದಾಯವನ್ನು ಹೀನಾಯವಾಗಿ ನೋಡುತ್ತಿದ್ದರೆ ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೬. ಓಗೆ ನಿಮ್ಮನ್ನು ಹೀನಾಯವಾಗಿ ನೋಡುವುದು ಹಿಂದಿಗಿಂತ ಜಾಸ್ತಿ ಆಗುತ್ತಿದೆಯೋ ಅಥವಾ ಕಡಿಮೆ ಆಗಿದೆಯೇ?

೭. ಕಡಿಮೆ ಅಥವಾ ಹೆಚ್ಚಾಗುತ್ತಿರುವುದಕ್ಕೆ ಕಾರಣಗಳೇನು?

೮. ಇತ್ತೀಚೆಗೆ ನಿಮ್ಮ ಸಮುದಾಯದವರ ಮೇಲೆ ಯಾವುದಾದರೊಂದು ಕಾರಣಕ್ಕೆ ಮೇಲ್ಜಾತಿಯವರು ಹಲ್ಲೆ ಮಾಡಿದ ಉದಾಹರಣೆಗಳಿವೆಯೇ ಕಾರಣಗಳೇನು? ಆಗ ನಿಮ್ಮ ನೆರವಿಗೆ ಬಂದವರಾರು? (ಪೋಲೀಸ್/ ದಸಂಸಂ/ ಇತರೆ ಸಂಘಟನೆಗಳು)

೯. ಮೊದಲಿಗಿಂತ ಈಗ ನಿಮ್ಮ ಸಮುದಾಯದವರು ಒಗ್ಗಟ್ಟಾಗಿರಬೇಕು, ದೌರ್ಜನ್ಯಗಳನ್ನು ಎದುರಿಸಬೇಕು ಎನ್ನಿಸುತ್ತಿದೆಯೇ?

೧೦. ಜಾತಿ ಸಂಘಟನೆ ಇದೆಯಾ ಅದರಿಂದ ಸಮುದಾಯ ಬಲಗೊಳ್ಳುತ್ತದೆ ಎಂದು ಅನ್ನಿಸುತ್ತಿದೆಯಾ?

೧೧. ಮೊದಲಿಗಿಂತ ಈಗ ಬೇಡರು ಮುಂದುವರೆದಿದ್ದಾರೆ ಎಂದೆನ್ನಿಸುವುದೇಲ

೧೨. ಮುಂದುವರೆದಿದ್ದರೆ ಅಥವಾ ಹಿಂದುಳಿದಿದ್ದರೆ ಅದಕ್ಕೆ ಯಾವ ಕಾರಣಗಳನ್ನು ಕೊಡಬಯಸುತ್ತೀರಿ?

೧೩. ಬೇಡರಲ್ಲಿ ಒಳಪಂಗಡಗಳಿವೆ ಇವರ ಮಧ್ಯೆ ವೈವಾಹಿಕ ಸಂಬಂಧಗಳು ಏರ್ಪಡುತ್ತಿವೆಯಾ?

೧೪. ಅಂತರ್ ಜಾತಿಯ ವಿವಾಹಗಳು ನಿಮ್ಮಲ್ಲಿ ನಡೆಯುತ್ತಿವೆಯಾ? ಹೌದು / ಇಲ್ಲ

೧೫. ಹಿಂದಿನ ವಿವಾಹ ಕ್ರಮತಳಿಗೂ ಮತ್ತು ಈಗಿನ ವಿವಾಹ ಕ್ರಮಗಳಿಗೂ ಇರುವ ಬದಲಾವಣೆಗಳು ನಿಮಗೆ ಸಮಂಜಸ ಎನಿಸುತ್ತಿವೆಯಾ?

೩. ಆರ್ಥಿಕ

೧. ನಿಮ್ಮ ಮನೆಯಲ್ಲಿನ ಸದಸ್ಯರು ಈಗ ಯಾವ ಯಾವ ದುಡಿಮೆಗಳಲ್ಲಿ ತೊಡಗಿಕೊಂಡಿದ್ದಾರೆ?

೨. ಹೆಚ್ಚು ಆದಾಯ ಬರುವ ಯಾವ ದುಡಿಮೆಗಳಲ್ಲಿ ನಿಮ್ಮ ಕುಟುಂಬದವರು ತೊಡಗಿಕೊಂಡಿದ್ದಾರೆ?

೩. ಈ ಹಿಂದೆ ನಿಮ್ಮ ತಂದೆ, ನೀವು ಮತ್ತು ನಿಮ್ಮ ತಾತ ಯಾವ ಯಾವ ದುಡಿಮೆಗಳಲ್ಲಿ ತೊಡಗಿಕೊಂಡಿದ್ದೀರಿ?

೪. ನಿಮ್ಮ ಕುಲ ಕಸುಬು ಯಾವುದು?

೫. ಇಂದಿಗೂ ನಿಮ್ಮ ಕುಲಕಸಬು ಇದೆಯಾ?
ಹೌದು / ಇಲ್ಲ ಕಾರಣಗಳಾವವು?

೬. ಕುಲ ಕಸಬನ್ನು ಬಿಟ್ಟು ಬೇರೆ ದುಡಿಮೆಯಲ್ಲಿ ತೊಡಗಿಕೊಳ್ಳಬೇಕೆಂದು ಅನ್ನಿಸಿದಾಗ ನೀವು ನಿರೀಕ್ಷಿಸಿದ ನೆರವು ಸಿಕ್ಕಿತೇ? ಹೌದು / ಇಲ್ಲ

೭. ಸರ್ಕಾರ ತಮ್ಮನ್ನು ಅಭಿವೃದ್ಧಿ ಪಡಿಸಲು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅವು ಗೊತ್ತಿವೆಯ?

೮. ಸರ್ಕಾರದ ಯೋಜನೆಗಳು ನಿಮ್ಮನ್ನು ಅಭಿವೃದ್ಧಿ ಪಡಿಸುತ್ತವೆ ಎಂದು ನಿಮ್ಮಗನ್ನಿಸುತ್ತಿದೆಯೇ?
ಹೌದು / ಇಲ್ಲ ಕಾರಣಗಳಾವವು?

೯. ನಿಮಗೆ ಕೃಷಿ ಭೂಮಿ ಇದೆಯೇ?

೧೦. ನಿಮಗೆ ಕೃಷಿ ಭೂಮಿ ಇದ್ದರೆ ಅದನ್ನು ತಾವು ಹೇಗೆ ಪಡೆದುಕೊಂಡಿರಿ?

೧೧. ಕೃಷಿ ಇಂದು ನಿಮ್ಮ ಕುಟುಂಬವನ್ನು ಸಾಕಬಲ್ಲದು ಎಂದೆನ್ನಿಸುತ್ತಿದೆಯೇ?
ಹೌದು / ಇಲ್ಲ ಕಾರಣಗಳಾವವು?

೧೨. ಇಂದು ನಿಮ್ಮ ಬೇಡರು ಯಾವ ಬಗೆಯ ದುಡಿಮೆಗಳಲ್ಲಿ ತೊಡಗಿಕೊಂಡಿದ್ದಾರೆ?

೧೩. ಸ್ಥಳೀಯ ಭೂಮಾಲೀಕರು ಶ್ರೀಮಂತರು ಮೇಲ್ಜಾತಿಯವರು ಸರ್ಕಾರ ಸಾಲ ಕೊಟ್ಟು ನಿಮ್ಮ ಜಮೀನು ಮನೆ ಮತ್ತು ಇತರೆ ಆಸ್ತಿಗಳನ್ನು ವಶಪಡಿಸಿಕೊಂಡಿದ್ದಿದೆಯೇ?

೧೪. ಹಿಂದೆಗಿಂತಲೂ ಈಗ ಹೆಚ್ಚು ಹೆಚ್ಚು ದುಡಿಮೆಯ ಅವಕಾಶಗಳು ಇವೆ ಎಂದೆನ್ನಿಸುವುದೇ?

೧೫. ಯಾವ ದುಡಿಮೆ ನಿಮಗೆ ಹೆಚ್ಚು ಇಷ್ಟವಾಗುತ್ತದೆ ಏಕೆ?

೧೬. ಹೊಸ ಹೊಸ ದುಡಿಮೆಯ ವಿಧಾನಗಳನ್ನು ಅವಲಂಬಿಸಿ ತಮ್ಮ ಸಮುದಾಯ ಬದಲಾಗುತ್ತಿದೆ ಎಂದು ಅನ್ನಿಸುತ್ತಿದೆಯೇ?

ಹೌದು / ಇಲ್ಲ ಕಾರಣಗಳೇನು?

ಈ. ಶಿಕ್ಷಣ

೧. ನಿಮ್ಮ ಊರಿನಲ್ಲಿ ಹಿಂದೆ ಶಾಲೆ ಇತ್ತಾ? ಆಗ ಯಾವ ಮಾದರಿಯ ಶಿಕ್ಷಣವಿತ್ತು?

೨. ನಿಮ್ಮ ಮಕ್ಕಳನ್ನು ಕಳುಹಿಸಲಾಗುತ್ತಿದೆಯೇ?

ಹೌದು / ಇಲ್ಲ ಕಾರಣಗಳಾವವು?

೩. ಶಿಕ್ಷಣ ಪಡೆದರೆ ನಿಮಮು ಸಮುದಾಯ ಬದಲಾಗುತ್ತದೆ ಎಂದು ಭಾವಿಸುವಿರಾ?

ಹೌದು / ಇಲ್ಲ ಕಾರಣಗಳಾವವು?

೪. ನೌಕರಿ ಪಡೆದು ಪಟ್ಟಣದಲ್ಲಿರುವ ನಿಮ್ಮವರು ನಿಮ್ಮ ಹಳ್ಳಿಗೆ, ನಿಮ್ಮ ಸಮುದಾಯಕ್ಕೆ ಯಾವ ಬಗೆಯಲ್ಲಾದರೂ ನೆರವಿಗೆ ಬಂದಿದ್ದರೇ?

ಹೌದು / ಇಲ್ಲ ಕಾರಣಗಳೇನು?

೫. ಹೀಗೆ ನೌಕರಿ ಪಡೆದು ಪಟ್ಟಣದಲ್ಲಿರುವ ನಿಮ್ಮವರು ಮುಂದುವರಿದಿದ್ದಾರೆ ಎಂದೆನ್ನಿಸುವುದೇ?

೬. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರುವಿರಾ?

ಹೌದು / ಇಲ್ಲ ಕಾರಣಗಳೇನು?

೭ ನಿಮ್ಮ ಹಳ್ಳಿಯ ಪರಿಸರದಲ್ಲಿ ಶಾಲೆಗಳಿವೆಯೇ ಆಶ್ರಮ ಶಾಲೆ ಇತರೆ ಶಾಲೆಗಳು?

೮. ಅಲ್ಲಿಯ ಶಿಕ್ಷಕರು ನಿಮ್ಮ ಮಕ್ಕಳಿಗೆ ಪರಿಣಾಮಕಾರಿಯಾಗಿ ಶಿಕ್ಷಣ ಕಲಿಸುತ್ತಿರುವವರೇ?

ಹೌದು / ಇಲ್ಲ ಕಾರಣಗಳೇನು?

೯. ನಿಮ್ಮ ಮಕ್ಕಳನ್ನು ಎಲ್ಲಿಯವರೆಗೂ ಓದಿಸಲು ಬಯಸುತ್ತೀರಿ?

೧೦. ನಿಮ್ಮ ಮಕ್ಕಳು ಓದಿ ಮುಂದೆ ಏನಾಗಲೂ ಬಯಸುತ್ತೀರಿ?

೧೧. ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ನೀಡುತ್ತೀರುವ ಸೌಲಭ್ಯಗಳ ಬಗ್ಗೆ ನಿಮಗೆ ಎಷ್ಟು ಗೊತ್ತು?

೧೨. ಮೀಸಲಾತಿಯ ಮೂಲ ನೌಕರಿ ಸಿಗಬಹುದೆಂದು ಭಾವಿಸಿದ್ದೀರಾ?

೧೩. ಮೀಸಲಾತಿ ಹಿಂದುಳಿದ ಸಮುದಾಯಗಳನ್ನು ಸಬಲೀಕರಿಸಬಲ್ಲದು ಎಂದು ಭಾವಿಸಿದ್ದೀರಾ?

ಉ. ಸಾಂಸ್ಕೃತಿಕ

೧. ಈ ಹಿಂದೆ ಸಮುದಾಯ ಯಾವ ಯಾವ ಹಬ್ಬ, ಹರಿದಿನಗಳನ್ನು ಆಚರಿಸುತ್ತಿತ್ತು?

೨. ಈ ಆಚರಣೆಗಳು ಕಾಲ ಕಾಲಕ್ಕೆ ಬದಲಾಗುತ್ತಾ ಬಂದಿವೆಯೇ?

ಹೌದು / ಇಲ್ಲ, ಹೇಗೆ ಬದಲಾಗಿವೆ ಬದಲಾಗಿಲ್ಲ?

೩. ಸಮುದಾಯದ ಆಚರಣೆಗಳು ಇಂದಿಗೂ ಪ್ರಸ್ತು ಅಂತ ಅನ್ನಿಸುತ್ತಿವೆಯೇ?

ಹೌದು / ಇಲ್ಲ ಕಾರಣಗಳೇನು?

೪. ಪ್ರಮುಖವಾಗಿ ಯಾವ ಆಚರಣೆಗಳು ನಿಮ್ಮ ಸಮುದಾಯದಲ್ಲಿ ಬದಲಾಗಿವೆ?

೫. ಯಾವ ಯಾವ ಹೊಸ ಆಚರಣೆಗಳು ಹೊಸದಾಗಿ ನಿಮ್ಮಿಂದ ಆಚರಿಸಲ್ಪಡುತ್ತಿವೆ ಕಾರಣಗಳೇನು?

೬. ನಿಮ್ಮ ಸಮುದಾಯದ ನಂಬಿಕೆ, ಸಂಪ್ರದಾಯಗಳು ಇವತ್ತಿಗೂ ಪ್ರಸ್ತುತ ಎಂದು ಅನ್ನಿಸುತ್ತಿದೆಯಾ?

ಹೌದು / ಇಲ್ಲ ಕಾರಣಗಳೇನು?

೭ ನಿಮ್ಮ ಸಮುದಾಯದ ನಂಬಿಕೆ ಸಂಪ್ರದಾಯಗಳು ಮೂಲಸ್ಥಿತಿಯಲ್ಲಿ ಉಳಿದಿವೆಯೋ ಅಥವಾ ಬದಲಾಗಿವೆಯೋ?

೮. ಹೀಗಾಗುವುದಕ್ಕೆ ಕಾರಣಗಳೇನು?

೯. ಈಗಿನ ಯುವಕರಲ್ಲಿ ನಿಮ್ಮ ಸಮುದಾಯದ ನಂಬಿಕೆ ಸಂಪ್ರದಾಯಗಳ ಕುರಿತು ಯಾವ ಭಾವನೆಗಳಿವೆ?

೧೦. ಇದಕ್ಕೆ ಕಾರಣಗಳೇನಿರಬಹುದು?

೧೧. ನಿಮ್ಮ ಸಮುದಾಯದಲ್ಲಿ ಈಗ ಮದುವೆಗಳು ಹೇಗೆ ನಡೆಯುತ್ತವೆ ಹಿಂದೆ ಹೇಗೆ ನಡೆಯುತ್ತಿದ್ದವು?

೧೨. ನಿಮ್ಮಲ್ಲಿಯ ಪಾರಂಪರಿಕ ಆಹಾರ ಪದ್ಧತಿ, ವೇಷಭೂಷಣ, ವೈದ್ಯ ಪದ್ಧತಿ ಹಾಡು ಕುಣಿತಗಳು ಉಳಿದಿವೆಯೇ?

೧೩. ಯಾಕೆ ಇವು ಉಳಿದಿವೆ ಮತ್ತು ಉಳಿದಿಲ್ಲ?

೧೪. ನಿಮ್ಮ ಸಂಸ್ಕೃತಿ, ಜೀವನ ವಿಧಾನ ತಾನಾಗಿಯೇ ಬದಲಾಯಿತೇ ಅಥವಾ ಹೊರಗಿನ ಪ್ರಭಾವಗಳಿಂದಾಗಿ ಬದಲಾಯಿತೇ?

೧೫. ನಿಮ್ಮ ಮೂಲದೇವರು ಯಾವುದು ಮನೆ ದೇವರು ಯಾವುದು?

೧೬. ಈಗ ಯಾವ ಯಾವ ಬೇರೆ ದೇವರುಗಳನ್ನು ಪೂಜಿಸುತ್ತಿದ್ದೀರಿ ಏತಕ್ಕಾಗಿ ಪೂಜಿಸುತ್ತೀರಿ?

೧೭. ನಿಮ್ಮದೇ ದೇವರುಗಳಿಗೆ ಗುಡಿಗಳನ್ನು ನಿರ್ಮಿಸಲಾಗಿದೆಯೇ?

೧೮. ಯಾವಾಗ ನಿರ್ಮಿಸಲಾಯಿತು. ಏಕೆ ನಿರ್ಮಿಸಲಾಗಿಲ್ಲ?

೧೯. ದೇವರನ್ನು ಕುರಿತು ನಂಬಿಕೆಗಳು ಹಿಂದಿನಂತೆ ಈಗಲೂ ಬಲವಾಗಿವೆ ಎನ್ನಿಸುತ್ತಿದೆಯೇಲ

ಹೌದು / ಇಲ್ಲ ಕಾರಣಗಳಾವವು?

೨೦. ನಿಮ್ಮ ಸಮುದಾಯದಲ್ಲಿ ಯಾರಾದರೂ ಮತಾಂತರವಾಗಿದ್ದಾರೆಯೇ?

ಹೌದು / ಇಲ್ಲ ಕಾರಣಗಳಾವವು?

ಊ. ರಾಜಕೀಯ

೧. ನಿಮ್ಮ ಊರಿನ ಮತದಾನದ ಪಟ್ಟಿಯಲ್ಲಿ ನಿಮ್ಮ ಹೆಸರು ಇದೆಯೇ?

ಹೌದು / ಇಲ್ಲ ಕಾರಣಗಳೇನು?

೨. ತಾವು ಪ್ರತಿ ಚುನಾವಣೆಯಲ್ಲಿ ಮತ ಚಲಾಯಿಸುವಿರಾ?

ಹೌದು / ಇಲ್ಲ ಕಾರಣಗಳೇನು?

೩. ಹಿಂದಿನಿಂದಲೂ ಯಾವ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದೀರಿ?

೪. ಯಾಕೆ ಆ ಪಕ್ಷವನ್ನು ಬೆಂಬಲಿಸಿದಿರಿ?

೫. ಈಗ ಯಾವ ಪಕ್ಷವನ್ನು ಬೆಂಬಲಿಸುತ್ತಿದ್ದೀರಿ?

೬. ಯಾಕೆ ಈ ಪಕ್ಷವನ್ನು ಬೆಂಬಲಿಸುತ್ತಿದ್ದೀರಿ?

೭. ನಿಮ್ಮ ಸಮುದಾಯಕ್ಕೆ ರಾಜಕೀಯ ಮೀಸಲಾತಿ ದೊರಕಿದೆಯೇ?

೮. ಯಾವ ಹಂತದಲ್ಲಿ (ಗ್ರಾಮ / ತಾಲೂಕು / ಜಿಲ್ಲಾ ಪಂಚಾಯಿತಿ) ಸಿಕ್ಕಿದೆ?

೯. ಹೀಗೆ ಸಿಕ್ಕಿದ ಮೀಸಲಾತಿಯಿಂದ ಸಮುದಾಯಕ್ಕೆ ಒಳಿತಾಗಿದೆಯೇ?

ಹೌದು / ಇಲ್ಲ ಕಾರಣಗಳೇನು?

೧೦. ನೀವು ಯಾವುದಾದರೂ ಚುನುವಣೆಗೆ ಸ್ಪರ್ಧಿಸಿದ್ದಿರಾ?

ಹೌದು / ಇಲ್ಲ ಕಾರಣಗಳೇನು?

೧೧. ಯಾವ ರಾಜಕೀಯ ಪಕ್ಷ ನಿಮ್ಮ ಸಮುದಾಯದ ಹಿತ ಬಯಸುತ್ತಿದೆ ಎಂದು ಭಾವಿಸುತ್ತೀರಿ ಹೇಗೆ?

೧೨. ತಾವು ಯಾವ ಯಾವ ಸಂಘಟನೆಗಳಲ್ಲಿ ಪಾಲ್ಗೊಂಡು ಚಳುವಳಿಗಳಲ್ಲಿ ತೊಡಗಿದ್ದೀರಿ?

೧೩. ಯಾಕೆ ಸಂಘಟನೆಯಲ್ಲಿ ತೊಡಗಿಕೊಂಡಿರಿ ಇದರಿಂದ ತಮಗೆ ಮತ್ತು ಸಮುದಾಯಕ್ಕೆ ಆದ ಲಾಭಗಳೇನು?

೧೪. ಸಂವಿಧಾನಬದ್ಧ ಮೀಸಲಾತಿಯಿಂದ ಶೋಷಿತ ಸಮುದಾಯಗಳು ಅಭಿವೃದ್ಧಿ ಆಗುತ್ತದೆ ಎಂದು ಭಾವಿಸುವಿರಾ? ಹೇಗೆ?

೧೫. ಸರ್ಕಾರದ ಯಾವ ಇಲಾಖೆ ನಿಮ್ಮ ಸಮುದಾಯಕ್ಕೆ ಪೂರಕವಾಗಿದೆ ಮತ್ತು ಯಾವ ಇಲಾಖೆ ಮಾರಕವಾಗಿದೆ? ಏಕೆ?

೧೬. ಈ ಕಾಲದ ಟಿವಿ, ಸಿನೀಮಾ ಮುಂತಾದ ಸಂಗತಿಗಳು ನಿಮ್ಮ ಸಮುದಾಯದ ಮೇಲೆ ಪ್ರಭಾವ ಬೀರಿವೆ ಎಂದೆನ್ನಿಸುವುದೇ?

೧೭. ಸಮುದಾಯಕ್ಕೆ ಅದರದ್ದೇ ಆದ ನ್ಯಾಯ ವ್ಯವಸ್ಥೆ, ಕಟ್ಟೆಮನೆ, ಕುಲ ಪಂಚಾಯ್ತಿ ವ್ಯವಸ್ಥೆ ಇದೆಯೇ?

೧೮. ಈ ಹಿಂದೆ ಈ ವ್ಯವಸ್ಥೆ ಇತ್ತೇ?

೧೯. ಈ ಕುಲಪಂಚಾಯ್ತಿ ಸ್ವರೂಪ ಬದಲಾಗಿದೆಯೇ? ಬದಲಾಗಿದ್ದರೆ ಹೇಗೆ ಮತ್ತು ಏಕೆ ಬದಲಾಗಿದೆ?

೨೦. ಈಗ ಕುಲದ ನ್ಯಾಯ ಪಂಚಾಯಿತಿಯನ್ನು ಯಾರು ನಿರ್ವಹಿಸುತ್ತಾರೆ?

೨೧. ಕುಲ ಪಂಚಾಯಿತಿಯನ್ನು ಸಮುದಾಯದ ಎಲ್ಲರೂ ಗೌರವಿಸುವರೇ?

೨೨. ಈಗ ಸಮುದಾಯದ ವ್ಯಾಜ್ಯಗಳು ಕುಲ ಪಂಚಾಯಿತಿಯನ್ನು ಮೀರಿ ಕೋರ್ಟು ಕಛೇರಿಗಳಿಗೆ ಹೋಗಿವೆಯೇ? ಕಾರಣಗಳೇನು?

೨೩. ನಿಮ್ಮ ಸಮುದಾಯದ ಹಿಂದೆ ಇದ್ದ ಸ್ಥಿತಿಯಲ್ಲಿಯೇ ಇದೆಯೇ ಅಥವಾ ಬದಲಾಗಿದೆ ಎಂದೆನ್ನಿಸುತ್ತಿದೆಯೇ?

೨೪. ಕಾರಣಗಳೇನು?

ಮಾಹಿತಿದಾರರ ಹೆಸರು:

ಖಾಯಂ ವಿಳಾಸ :

ಸ್ಥಳ :

ದಿನಾಂಕ :

ಅಂಕಿಅಂಶಗಳು : ೪.೪.೨. ಮೊದಲನೇ ತಲೆಮಾರಿನ ಗ್ರಾಮವಾರು ಮನೆಗಳ ಸ್ವರೂಪ

ಕ್ರ.ಸಂ.	ತಾಲೂಕುಗಳು	ಮನೆ ಮಾದರಿ						
		ಗುಡಿಸಲು	ಟಿನ್	ದಾಬಾಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಆಶ್ರಯ	ಬಾಡಿಗೆ
೧	ಕಬ್ಬ	೫	೧	೨		೨		
೨	ಕಾರಿಗನೂರು	೪		೫		೧		
೩	ನಲ್ಲೂರು	೩		೪		೩		
	ಚನ್ನಗಿರಿ	೧೨	೧	೧೧		೬		
೪	ಬೇತೂರು	೪		೪		೨		
೫	ದೊಡ್ಡಬಾತಿ	೪		೩		೩		
೬	ಹುಣಸಿಕಟ್ಟೆ	೩		೧		೬		
	ದಾವಣಗೆರೆ	೧೧		೮		೧೧		
೭	ಕಂಚಿಕೆರೆ	೧		೮		೧		
೮	ಕುಮಾರನಹಳ್ಳಿ	೫		೫				
೯	ಮಾಚಿಹಳ್ಳಿ	೨		೮				
	ಹರಪನಹಳ್ಳಿ	೮		೨೧		೧		
೧೦	ದೇವರಬೆಳಕೆರೆ	೨		೭		೧		
೧೧	ಕೊಕ್ಕನೂರು	೨		೮				
೧೨	ರಾಜನಹಳ್ಳಿ	೨		೮				
	ಹರಿಹರ	೬		೨೩		೧		
೧೩	ಹನುಮನಹಳ್ಳಿ	೪		೬				
೧೪	ಕೆಂಚಿಕೊಪ್ಪ	೩		೫		೨		
೧೫	ಕುಳಗಟ್ಟೆ	೪		೩		೩		
	ಹೊನ್ನಾಳಿ	೧೧		೧೪		೫		
೧೬	ಬಸವನಕೋಟೆ	೪		೬				
೧೭	ಮಾಗಡಿ	೨		೮				
೧೮	ಸೊಕ್ಕೆ	೩		೬		೧		
	ಜಗಳೂರು	೯		೨೦		೧		
ಒಟ್ಟು		೫೭	೧	೯೭		೨೫		

ಅಂಕಿಅಂಶಗಳು : ೪.೪.೩. ಎರಡನೇ ತಲೆಮಾರಿನ ಗ್ರಾಮವಾರು ಮನೆಗಳ ಸ್ವರೂಪ

ಕ್ರ.ಸಂ.	ತಾಲೂಕುಗಳು	ಮನೆ ಮಾದರಿ						
		ಗುಡಿಸಲು	ಟಿನ್	ದಾಬಾಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಆಶ್ರಯ	ಬಾಡಿಗೆ
೧	ಕಬ್ಬ		೩			೬		೧
೨	ಕಾರಿಗನೂರು		೯			೧		
೩	ನಲ್ಲೂರು		೩	೩	೧	೩		
	ಚನ್ನಗಿರಿ		೧೫	೩	೧	೧೦		೧
೪	ಬೇತೂರು		೮			೨		
೫	ದೋಡ್ಡಬಾತಿ		೮			೨		
೬	ಹುಣಸಿಕಟ್ಟೆ		೯				೧	
	ದಾವಣಗೆರೆ		೨೫			೪	೧	
೭	ಕಂಚಿಕೆರೆ		೫		೧	೪		
೮	ಕುಮಾರನಹಳ್ಳಿ		೨			೩	೫	
೯	ಮಾಚಿಹಳ್ಳಿ		೪	೧		೪	೧	
	ಹರಪ್ಪನಹಳ್ಳಿ		೧೧	೧	೧	೧೧	೬	
೧೦	ದೇವರಬೆಳಕೆರೆ		೬	೧		೩		
೧೧	ಕೊಕ್ಕನೂರು		೬			೨	೨	
೧೨	ರಾಜನಹಳ್ಳಿ		೬			೨	೨	
	ಹರಿಹರ		೧೮	೧		೭	೪	
೧೩	ಹನುಮನಹಳ್ಳಿ		೯			೧	೦	
೧೪	ಕೆಂಚಿಕೊಪ್ಪ		೫			೫	೦	
೧೫	ಕುಳಗಟ್ಟೆ		೩			೬	೧	
	ಹೊನ್ನಾಳಿ		೧೭			೧೨	೧	
೧೬	ಬಸವನಕೋಟೆ		೭	೧		೨		
೧೭	ಮಾಗಡಿ		೮			೧	೧	
೧೮	ಸೊಕ್ಕೆ		೫			೪	೧	
	ಜಗಳೂರು		೨೦	೧		೭	೨	
	ಒಟ್ಟು		೧೦೬	೬	೨	೫೧	೧೪	೧

ಅಂಕಿಅಂಶಗಳು : ೪.೪.೪. ಮೂರನೇ ತಲೆಮಾರಿನ ಗ್ರಾಮವಾರು ಮನೆಗಳ ಸ್ವರೂಪ

ಕ್ರ.ಸಂ.	ತಾಲೂಕುಗಳು	ಮನೆ ಮಾದರಿ						
		ಗುಡಿಸಲು	ಟಿನ್	ದಾಬಾಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಆಶ್ರಯ	ಬಾಡಿಗೆ
೧	ಕಬ್ಬ				೮			೨
೨	ಕಾರಿಗನೂರು				೬	೨		೨
೩	ನಲ್ಲೂರು				೬	೨		೨
	ಚನ್ನಗಿರಿ				**೨೦**	**೪**		**೬**
೪	ಬೇತೂರು				೬	೧		೩
೫	ದೊಡ್ಡಬಾತಿ				೬	೧		೩
೬	ಹುಣಸಿಕಟ್ಟೆ				೮		೨	
	ದಾವಣಗೆರೆ				**೨೦**	**೨**	**೩**	**೬**
೭	ಕಂಚಿಕೆರೆ		೧		೬	೧		೨
೮	ಕುಮಾರನಹಳ್ಳಿ				೩	೫	೨	
೯	ಮಾಚಿಹಳ್ಳಿ		೩		೨	೨	೨	೧
	ಹರಪನಹಳ್ಳಿ		**೪**		**೧೧**	**೮**	**೪**	**೩**
೧೦	ದೇವರಬೆಳಕೆರೆ				೫	೧	೩	೧
೧೧	ಕೊಕ್ಕನೂರು		೧		೬	೦	೨	೧
೧೨	ರಾಜನಹಳ್ಳಿ		೧		೬	೧	೧	೧
	ಹರಿಹರ		**೨**		**೧೭**	**೨**	**೬**	**೩**
೧೩	ಹನುಮನಹಳ್ಳಿ				೫	೨	೧	೨
೧೪	ಕೆಂಚಿಕೊಪ್ಪ				೮		೧	೧
೧೫	ಕುಳಗಟ್ಟೆ				೫	೨	೧	೨
	ಹೊನ್ನಾಳಿ				**೧೮**	**೪**	**೩**	**೫**
೧೬	ಬಸವನಕೋಟೆ				೩	೪	೨	೧
೧೭	ಮಾಗಡಿ				೩	೩	೪	
೧೮	ಸೊಕ್ಕೆ				೨	೫	೧	೨
	ಜಗಳೂರು				**೮**	**೧೨**	**೭**	**೩**
	ಒಟ್ಟು		**೬**		**೯೪**	**೩೨**	**೨೨**	**೨೬**

ಅಂಕಿಅಂಶಗಳು : ೫.೭.೨. ಮೊದಲನೇ ತಲೆಮಾರಿನ ಗ್ರಾಮವಾರು ಕಾಯಕರ್ಹರು, ಕಾಯಕಸ್ಥರು ಮತು ಅವಲಂಬಿತರ ಪ್ರಮಾಣ

ಕ್ರಸಂ.	ಗ್ರಾಮಗಳು	ಕಾಯಕರ್ಹದವರು			ಕಾಯಕಸ್ಥರು			ಅವಲಂಬಿತರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕಬ್ಬ	೩೫	೩೭	೭೨	೪೩	೪೦	೮೩	೮	೩	೧೧
೨	ಕಾರಿಗನೂರು	೩೬	೩೩	೬೯	೪೪	೪೦	೮೪	೮	೭	೧೫
೩	ನಲ್ಲೂರು	೩೪	೩೧	೬೫	೪೭	೩೮	೮೫	೧೩	೭	೨೦
	ಚನ್ನಗಿರಿ	೧೦೫	೧೦೧	೨೦೬	೧೩೪	೧೧೮	೨೫೨	**೨೯**	**೧೭**	**೪೬**
೪	ಬೇತೂರು	೨೭	೩೧	೫೮	೪೦	೩೬	೭೬	೧೩	೫	೧೮
೫	ದೋಡ್ಡಬಾತಿ	೩೩	೩೪	೬೭	೪೨	೪೬	೮೮	೯	೧೨	೨೧
೬	ಹುಣಸಿಕಟ್ಟೆ	೩೧	೩೬	೬೭	೪೧	೫೨	೯೩	೧೦	೧೬	೨೬
	ದಾವಣಗೆರೆ	೯೧	೧೦೧	೧೯೨	೧೨೩	೧೩೪	೨೫೭	**೩೨**	**೩೩**	**೬೫**
೭	ಕಂಚಿಕೆರೆ	೩೧	೩೩	೬೪	೪೨	೪೦	೮೨	೧೧	೭	೧೮
೮	ಕುಮಾರನಹಳ್ಳಿ	೩೮	೩೫	೭೩	೪೮	೪೮	೯೬	೧೦	೧೩	೨೩
೯	ಮಾಚಿಹಳ್ಳಿ	೪೦	೪೧	೮೧	೪೬	೫೪	೧೦೦	೬	೧೩	೧೯
	ಹರಪನಹಳ್ಳಿ	೧೦೯	೧೦೯	೨೧೮	೧೩೬	೧೪೨	೨೭೮	**೨೭**	**೩೩**	**೬೦**
೧೦	ದೇವರಬೆಳಕೆರೆ	೩೪	೩೫	೬೯	೪೪	೪೭	೯೧	೧೦	೧೨	೨೨
೧೧	ಕೊಕ್ಕನೂರು	೩೦	೩೫	೬೫	೪೩	೪೭	೯೦	೧೩	೧೨	೨೫
೧೨	ರಾಜನಹಳ್ಳಿ	೪೩	೩೬	೭೯	೫೯	೪೮	೧೦೭	೧೬	೧೨	೨೮
	ಹರಿಹರ	೧೦೭	೧೦೬	೨೧೩	೧೪೬	೧೪೨	೨೮೮	**೩೯**	**೩೬**	**೭೫**
೧೩	ಹನುಮನಹಳ್ಳಿ	೪೦	೩೮	೭೮	೫೧	೫೨	೧೦೩	೧೧	೧೪	೨೫
೧೪	ಕೆಂಚಿಕೊಪ್ಪ	೪೦	೪೦	೮೦	೫೩	೪೯	೧೦೨	೧೩	೯	೨೨
೧೫	ಕುಳಗಟ್ಟೆ	೩೭	೪೪	೮೧	೫೩	೫೧	೧೦೪	೧೬	೭	೨೩
	ಹೊನ್ನಾಳಿ	೧೧೭	೧೨೨	೨೩೯	೧೫೭	೧೫೨	೩೦೯	**೪೦**	**೩೦**	**೭೦**
೧೬	ಬಸವನಕೋಟೆ	೪೬	೪೪	೯೦	೬೩	೫೪	೧೧೭	೧೭	೧೦	೨೭
೧೭	ಮಾಗಡಿ	೪೩	೪೧	೮೪	೬೦	೬೪	೧೨೪	೧೭	೨೩	೪೦
೧೮	ಸೊಕ್ಕೆ	೩೭	೩೯	೭೬	೫೩	೫೧	೧೦೪	೧೬	೧೨	೨೮
	ಜಗಳೂರು	೧೨೬	೧೨೪	೨೫೦	೧೭೬	೧೬೯	೩೪೫	**೫೦**	**೪೫**	**೯೫**
	ಒಟ್ಟು	**೬೫೫**	**೬೬೩**	**೧೩೧೮**	**೮೭೨**	**೮೫೭**	**೧೭೨೯**	**೨೧೭**	**೧೯೪**	**೪೧೧**

ಅಂಕಿಅಂಶಗಳು : ೫.೭.೪. ಎರಡನೇ ತಲೆಮಾರಿನ ಗ್ರಾಮವಾರು ಕಾಯಕರ್ಹರು, ಕಾಯಕಸ್ಥರು ಮತ್ತು ಅವಲಂಬಿತರ ಪ್ರಮಾಣ

ಕ್ರ.ಸಂ.	ಗ್ರಾಮಗಳು	ಕಾಯಕರ್ಹದವರು			ಕಾಯಕಸ್ಥರು			ನಿರುದ್ಯೋಗ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕಬ್ಬ	೨೧	೧೯	೪೦	೨೦	೧೫	೩೫	೧	೪	೫
೨	ಕಾರಿಗನೂರು	೨೫	೨೫	೫೦	೨೨	೧೮	೪೦	೩	೭	೧೦
೩	ನಲ್ಲೂರು	೨೫	೧೯	೪೪	೨೫	೧೯	೪೯	೦	೦	೦
	ಚನ್ನಗಿರಿ	**೭೧**	**೬೩**	**೧೩೪**	**೬೭**	**೫೭**	**೧೨೪**	**೪**	**೬**	**೧೦**
೪	ಬೇತೂರು	೨೩	೨೮	೫೧	೨೨	೨೧	೪೩	೧	೭	೮
೫	ದೊಡ್ಡಬಾತಿ	೨೯	೨೯	೫೮	೨೮	೨೯	೫೭	೧	೦	೧
೬	ಹುಣಸಿಕಟ್ಟೆ	೩೦	೨೫	೫೫	೨೫	೨೦	೪೫	೫	೫	೧೦
	ದಾವಣಗೆರೆ	**೮೨**	**೮೨**	**೧೬೪**	**೭೫**	**೭೦**	**೧೪೫**	**೭**	**೧೨**	**೧೯**
೭	ಕಂಚಿಕೆರೆ	೨೩	೨೨	೪೫	೨೦	೧೯	೩೯	೩	೩	೬
೮	ಕುಮಾರನಹಳ್ಳಿ	೨೫	೨೦	೪೫	೨೪	೨೦	೪೪	೧	೦	೧
೯	ಮಾಚಿಹಳ್ಳಿ	೨೭	೨೯	೫೬	೨೭	೨೬	೫೪	೦	೩	೩
	ಹರಪನಹಳ್ಳಿ	**೭೫**	**೭೧**	**೧೪೬**	**೭೨**	**೬೫**	**೧೩೭**	**೩**	**೬**	**೯**
೧೦	ದೇವರಬೆಳಕೆರೆ	೨೫	೨೭	೫೨	೨೫	೨೫	೫೧	೦	೨	೨
೧೧	ಕೊಕ್ಕನೂರು	೨೫	೩೦	೫೫	೨೫	೩೦	೫೫	೦	೦	೦
೧೨	ರಾಜನಹಳ್ಳಿ	೨೫	೩೦	೫೫	೨೫	೩೦	೫೫	೦	೦	೦
	ಹರಿಹರ	**೭೫**	**೮೭**	**೧೬೨**	**೭೬**	**೮೫**	**೧೬೧**	**೦**	**೨**	**೨**
೧೩	ಹನುಮನಹಳ್ಳಿ	೨೭	೨೮	೫೫	೨೪	೨೩	೪೭	೩	೫	೮
೧೪	ಕೆಂಚಿಕೊಪ್ಪ	೩೪	೩೩	೬೭	೩೧	೨೯	೬೦	೩	೪	೭
೧೫	ಕುಳಗಟ್ಟೆ	೩೨	೩೨	೬೪	೩೨	೩೨	೬೪	೦	೦	೦
	ಹೊನ್ನಾಳಿ	**೯೩**	**೯೩**	**೧೮೬**	**೮೭**	**೮೪**	**೧೭೧**	**೬**	**೯**	**೧೫**
೧೬	ಬಸವನಕೋಟೆ	೩೩	೩೩	೬೬	೩೪	೩೫	೬೯	೧	೨	೩
೧೭	ಮಾಗಡಿ	೩೧	೩೭	೬೮	೩೦	೩೪	೬೪	೧	೩	೪
೧೮	ಸೊಕ್ಕೆ	೩೨	೩೫	೬೭	೩೩	೩೫	೬೦	೧	೦	೧
	ಜಗಳೂರು	೯೬	೧೦೫	೨೦೧	೯೩	೧೦೦	೧೯೩	೩	೫	೮
	ಒಟ್ಟು	೪೯೨	೫೦೧	೯೯೩	೪೭೦	೪೬೧	೯೩೧	೨೩	೪೦	೬೩

ಅಂಕಿಅಂಶಗಳು : ೫.೭.೬. ಮೂರನೇ ತಲೆಮಾರಿನ ಗ್ರಾಮವಾರು ಕಾಯಕರ್ಹರು, ಕಾಯಕಸ್ಥರು ಮತು ಅವಲಂಬಿತರ ಪ್ರಮಾಣ

ಕ್ರ.ಸಂ.	ಗ್ರಾಮಗಳು	ಕಾಯಕರ್ಹದವರು			ಕಾಯಕಸ್ಥರು			ನಿರುದ್ಯೋಗ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕಬ್ಬ	೧೫	೧೧	೨೬	೧೩	೩	೧೬	೨	೮	೧೦
೨	ಕಾರಿಗನೂರು	೧೩	೧೨	೨೫	೧೩	೪	೧೬	೦	೮	೮
೩	ನಲ್ಲೂರು	೧೨	೧೨	೨೪	೧೨	೭	೨೦	೦	೫	೫
	ಚನ್ನಗಿರಿ	**೪೦**	**೩೫**	**೭೫**	**೩೮**	**೧೪**	**೫೨**	**೨**	**೨೧**	**೨೩**
೪	ಬೇತೂರು	೧೨	೧೨	೨೪	೧೨	೧೨	೨೪	೦	೦	೦
೫	ದೋಡ್ಡಬಾತಿ	೧೦	೧೧	೨೧	೧೦	೧೧	೨೧	೦	೦	೦
೬	ಹುಣಸಿಕಟ್ಟೆ	೧೧	೧೪	೨೫	೧೧	೧೨	೨೩	೦	೨	೨
	ದಾವಣಗೆರೆ	**೩೩**	**೩೭**	**೭೦**	**೩೩**	**೩೫**	**೬೮**	**೦**	**೨**	**೨**
೭	ಕಂಚಿಕೆರೆ	೧೦	೧೧	೨೧	೧೦	೧೧	೨೧	೦	೦	೦
೮	ಕುಮಾರನಹಳ್ಳಿ	೮	೧೪	೨೨	೮	೧೧	೧೯	೦	೩	೩
೯	ಮಾಚಿಹಳ್ಳಿ	೧೨	೧೨	೨೪	೧೨	೧೨	೨೪	೦	೦	೦
	ಹರಪನಹಳ್ಳಿ	**೩೦**	**೩೭**	**೬೭**	**೩೦**	**೩೪**	**೬೪**	**೦**	**೩**	**೩**
೧೦	ದೇವರಬೆಳಕೆರೆ	೯	೧೧	೨೦	೯	೮	೧೭	೦	೩	೩
೧೧	ಕೊಕ್ಕನೂರು	೧೨	೧೩	೨೫	೧೨	೧೧	೨೩	೦	೨	೨
೧೨	ರಾಜನಹಳ್ಳಿ	೧೫	೧೫	೩೦	೧೫	೧೫	೩೦	೦	೦	೦
	ಹರಿಹರ	**೩೬**	**೩೯**	**೭೫**	**೩೭**	**೩೪**	**೭೧**	**೦**	**೫**	**೫**
೧೩	ಹನುಮನಹಳ್ಳಿ	೧೫	೧೪	೨೯	೧೫	೧೩	೩೨	೦	೧	೧
೧೪	ಕೆಂಚಿಕೊಪ್ಪ	೧೨	೧೫	೨೭	೧೨	೧೪	೨೮	೦	೧	೧
೧೫	ಕುಳಗಟ್ಟೆ	೧೦	೧೪	೨೪	೧೦	೧೩	೨೫	೦	೧	೧
	ಹೊನ್ನಾಳಿ	**೩೭**	**೪೩**	**೮೦**	**೪೫**	**೪೦**	**೮೫**	**೦**	**೩**	**೩**
೧೬	ಬಸವನಕೋಟೆ	೧೪	೧೫	೨೯	೧೪	೧೫	೨೯	೦	೦	೦
೧೭	ಮಾಗಡಿ	೧೬	೧೫	೩೧	೧೬	೧೫	೩೧	೦	೦	೦
೧೮	ಸೊಕ್ಕೆ	೧೧	೧೨	೨೩	೧೧	೧೨	೨೩	೦	೦	೦
	ಜಗಳೂರು	**೪೧**	**೪೨**	**೮೩**	**೪೧**	**೪೨**	**೮೩**	೦	೦	೦
	ಒಟ್ಟು	೨೧೭	೨೩೩	೪೫೦	೨೨೪	೧೯೯	೪೨೩	೨	೩೪	೩೬

ಅಂಕಿಅಂಶಗಳು : ಶಿ.ಲ.ಗ. ಚನ್ನಗಿರಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಕಸುಬುಗಳು																
	ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಬ್ಬ	೨	೧೦		೧		೧೯	೬	೧೧	೨				೩೨				
ಕಾರಿಗನೂರು	೨	೭	೫	೧		೨೩	೫	೧೧					೩೦				
ನಲ್ಲೂರು	೨	೮		೧		೩೦	೨	೩		೩			೩೬				
ಒಟ್ಟು	೬	೨೫	೫	೩		೭೨	೧೩	೨೫	೨	೩			೯೮				

ಅಂಕಿಅಂಶಗಳು : ಶಿ.ಲ.ಗ. ದಾವಣಗೆರೆ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಕಸುಬುಗಳು																
	ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬೇತೂರು	೫	೭	೬	೨	೧	೧೫	೫	೯	೯				೧೬			೧	
ದೊಡ್ಡಬಾತಿ	೫	೯	೫	೨	೨	೧೯	೭	೪	೩	೧			೩೧				
ಹುಣಸಿಕಟ್ಟೆ		೧೦	೯			೧೯	೧೪	೧೨	೭				೨೨				
ಒಟ್ಟು	೧೦	೨೬	೨೦	೪	೩	೫೩	೨೬	೨೫	೧೯	೧			೬೯			೧	

ಅಂಕಿಅಂಶಗಳು : ಶಿ.ಲ.ಗ. ಹರಪನಹಳ್ಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಕಸುಬುಗಳು																
	ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಂಚಿಕೆರೆ	೫	೮	೪			೧೫	೮	೧೪	೮				೨೦				
ಕುಮಾರನಹಳ್ಳಿ	೭	೧೪	೯	೧		೧೬	೭	೯	೮				೨೪			೧	
ಮಾಚಿಹಳ್ಳಿ	೭	೯	೧೦	೨	೧	೨೬	೧೩						೩೧			೧	
ಒಟ್ಟು	೧೯	೩೧	೨೩	೩	೧	೫೭	೨೮	೨೩	೧೬				೭೫			೨	

ಅಂಕಿಅಂಶಗಳು : ಜಿ.ಲ.ಗ.ಹರಿಹರ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಕಸುಬುಗಳು																
	ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ದೇವರಬೆಳಕೆರೆ	೫	೫	೫			೨೦	೧೧	೧೩	೧೩			೧	೧೮				
ಕೊಕ್ಕನೂರು	೭	೯	೮			೧೪	೧೨	೧೧	೯	೨	೪		೧೪				
ರಾಜನಹಳ್ಳಿ	೧೦	೯	೭	೧		೨೩	೧೨	೧೬	೧೨				೧೭				
ಒಟ್ಟು	೨೨	೨೩	೨೦	೧		೫೭	೩೫	೪೦	೩೪	೨	೪	೧	೪೯				

ಅಂಕಿಅಂಶಗಳು : ಜಿ.ಲ.ಗ. ಹೊನ್ನಾಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಕಸುಬುಗಳು																
	ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಹನುಮನಹಳ್ಳಿ	೫	೭	೫			೧೯	೧೭	೧೬	೧೫			೨	೧೪	೨	೧		
ಕೆಂಚಿಕೊಪ್ಪ	೮	೬	೫	೨		೨೭	೨೦	೯	೯				೧೫			೧	
ಕುಳಗಟ್ಟೆ	೯	೧೩	೧೦			೧೬	೧೪	೮	೯	೪	೪	೩	೧೪				
ಒಟ್ಟು	೨೨	೨೬	೨೦	೨		೬೨	೫೧	೩೩	೩೩	೪	೪	೫	೪೩	೨	೧		

ಅಂಕಿಅಂಶಗಳು : ಜಿ.ಲ.ಗ. ಜಗಳೂರು ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಕಸುಬುಗಳು																
	ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬಸವನಕೋಟೆ	೯	೧೦	೯	೪	೨	೩೦	೨೫	೫	೨			೩	೧೮				
ಮಾಗಡಿ	೮	೧೮	೧೮			೧೯	೧೩	೧೪	೧೨			೧	೨೧				
ಸೊಕ್ಕೆ	೭	೧೯	೧೭			೧೮	೧೨	೭	೮			೨	೧೪				
ಒಟ್ಟು	೨೪	೪೭	೪೪	೪	೨	೬೭	೫೦	೨೬	೨೨			೬	೫೩				

ಅಂಕಿ ಅಂಶಗಳು : ೫.೯.೧. ಚನ್ನಗಿರಿ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಬೇಟೆ	ಪಶುಪಾಲನೆ		ತಳವಾರಿಕೆ		ಕಸುಬುಗಳು																	
						ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ ನೌಕರ		ಖಾಸಗಿ ನೌಕರರು		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಬ್ಬ		೨				೬	೧	೫		೩			೧೪	೩		೧					
ಕಾರಿಗನೂರು		೨	೧			೯	೧	೯	೨				೧೪	೧				೧			
ನಲ್ಲೂರು		೩				೧೪	೨	೧					೨೨	೬						೧	
		೭	೧			೨೯	೪	೧೫	೨	೩			೫೦	೧೦		೧		೧		೧	

ಅಂಕಿ ಅಂಶಗಳು : ೫.೯.೧. ದಾವಣಗೆರೆ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಬೇಟೆ	ಪಶುಪಾಲನೆ		ತಳವಾರಿಕೆ		ಕಸುಬುಗಳು																	
						ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ ನೌಕರ		ಖಾಸಗಿ ನೌಕರರು		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬೇತೂರು	೧	೫	೧	೧		೮	೧	೪	೬	೧			೧೨	೨		೧	೧				
ದೋಡ್ಡಬಾತಿ	೨	೨	೨			೧೦	೪	೩		೧	೧		೧೯	೫		೩	೩	೧			
ಹುಣಸಿಕಟ್ಟೆ		೪	೧			೧೬	೧	೧		೧			೧೮	೨				೧			
	೩	೧೧	೪	೧		೩೪	೬	೮	೬	೩	೧		೪೯	೯		೪	೪	೨			

ಅಂಕಿ ಅಂಶಗಳು : ೫.೯.೧. ಹರಪನಹಳ್ಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಬೇಟೆ	ಪಶುಪಾಲನೆ		ತಳವಾರಿಕೆ		ಕಸುಬುಗಳು																	
						ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ ನೌಕರ		ಖಾಸಗಿ ನೌಕರರು		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಂಚಿಕೆರೆ		೪	೨			೭	೨	೭	೫			೧	೯	೧							೧
ಕುಮಾರನಹಳ್ಳಿ		೪	೨			೯	೨	೧		೨	೧	೧	೧೩	೧		೪	೨	೧		೧	
ಮಾಚಿಹಳ್ಳಿ		೪	೨			೧೭	೩	೨	೨			೨	೧೮			೧	೧	೨			
		೧೨	೬			೩೩	೭	೧೦	೭	೨	೧	೪	೪೦	೨		೫	೩	೩		೧	೧

ಅಂಕಿ ಅಂಶಗಳು : ೫.೯.೧. ಹರಿಹರ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಬೇಟೆ	ಪಶುಪಾಲನೆ		ತಳವಾರಿಕೆ		ಕಸುಬುಗಳು															
						ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ ನೌಕರ		ಖಾಸಗಿ ನೌಕರರು		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ದೇವರಬೆಳಕೆರೆ	೧	೨	೧			೧೨	೫	೭	೬			೧	೧೨	೨		೧	೧				
ಕೊಕ್ಕನೂರು		೨	೧			೧೧	೭	೨	೨	೩		೩	೧೯	೧		೩	೧				
ರಾಜನಹಳ್ಳಿ		೨	೧			೧೧	೭	೨	೨	೩		೩	೧೯	೧		೩	೧				
	೧	೬	೩			೩೪	೧೯	೧೧	೧೦	೬		೭	೫೦	೪		೭	೩				

ಅಂಕಿ ಅಂಶಗಳು : ೫.೯.೧. ಹೊನ್ನಾಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಬೇಟೆ	ಪಶುಪಾಲನೆ		ತಳವಾರಿಕೆ		ಕಸುಬುಗಳು															
						ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ ನೌಕರ		ಖಾಸಗಿ ನೌಕರರು		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಹನುಮನಹಳ್ಳಿ		೫				೮	೫	೩	೩	೧	೨	೨	೧೧	೧		೩	೨	೧			
ಕೆಂಚಿಕೊಪ್ಪ	೧	೧	೧			೧೬	೧೦	೧	೧	೧	೧	೫	೧೪	೧		೫	೨	೦			
ಕುಳಗಟ್ಟೆ	೧	೫	೩			೯	೪	೩	೨	೨	೧	೪	೨೧	೨		೫	೧	೧			
	೨	೧೧	೪			೩೩	೧೯	೭	೬	೪	೪	೧೧	೪೬	೪		೧೩	೫	೨			

ಅಂಕಿ ಅಂಶಗಳು : ೫.೯.೧. ಜಗಳೂರು ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಗ್ರಾಮಗಳು	ಬೇಟೆ	ಪಶುಪಾಲನೆ		ತಳವಾರಿಕೆ		ಕಸುಬುಗಳು															
						ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ ನೌಕರ		ಖಾಸಗಿ ನೌಕರರು		ಇತರೆ	
	ಗಂಡು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬಸವನಕೋಟೆ		೬	೫			೧೨	೬	೪	೪	೨		೩	೧೯	೨		೪	೧			೧	
ಮಾಗಡಿ		೮	೬			೧೦	೬	೪	೪			೩	೧೫	೨		೨	೩	೧			
ಸೊಕ್ಕೆ	೩	೩	೨			೭	೨	೪	೫			೨	೧೯	೫		೩	೨	೨			೧
	೩	೧೭	೧೩			೨೯	೧೪	೧೨	೧೩	೨		೮	೫೩	೯		೯	೬	೩		೧	೧

ಅಂಕಿಅಂಶಗಳು : ೫.೧೦.೧. ಚನ್ನಗಿರಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																				
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಕಬ್ಬ						೨										೯	೨	೨	೧		
೨	ಕಾರಿಗನೂರು						೨								೧		೭	೪	೨			
೩	ನಲ್ಲೂರು						೩				೨			೭	೧		೭					
	ಚನ್ನಗಿರಿ						೭				೨			೭	೨		೨೩	೬	೪	೧		

ಅಂಕಿಅಂಶಗಳು : ೫.೧೦.೧. ದಾವಣಗೆರೆ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																				
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೪	ಬೇತೂರು						೧				೧	೧	೧	೮	೨		೭	೩				
೫	ದೊಡ್ಡಬಾತಿ										೧			೭	೨		೬	೫	೨	೧		೧
೬	ಹುಣಸಿಕಟ್ಟೆ						೨							೫			೫	೩	೩	೧		
	ದಾವಣಗೆರೆ						೩				೨	೧	೧	೨೦	೪		೧೮	೧೧	೫	೨		೧

ಅಂಕಿಅಂಶಗಳು : ೫.೧೦.೧. ಹರಪನಹಳ್ಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																				
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೭	ಕಂಚಿಕೆರೆ						೧	೧	೧	೧	೧		೧	೫			೫	೫	೧			
೮	ಕುಮಾರನಹಳ್ಳಿ						೨							೯	೪		೪	೧				
೯	ಮಾಚಿಹಳ್ಳಿ						೨		೧		೧		೨	೧೦	೧		೨	೨	೨			
	ಹರಪನಹಳ್ಳಿ						೫	೧	೨	೧	೨		೩	೨೪	೫		೧೧	೮	೩			

ಅಂಕಿಅಂಶಗಳು : ೫.೧೦.೧. ಹರಿಹರ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																			
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧೦	ದೇವರಬೆಳಕೆರೆ						೧		೨	೧	೧			೪	೧		೩	೨	೩			
೧೧	ಕೊಕ್ಕನೂರು										೧			೮	೧		೪	೧	೬	೧		
೧೨	ರಾಜನಹಳ್ಳಿ						೪						೧	೧೫			೩	೨	೩		೨	
	ಹರಿಹರ						೫		೨	೧	೨		೧	೨೭	೨		೧೦	೫	೧೨	೧	೨	

ಅಂಕಿಅಂಶಗಳು : ೫.೧೦.೧. ಹೊನ್ನಾಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																			
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧೩	ಹನುಮನಹಳ್ಳಿ		೧				೧				೨		೧	೧೨	೭		೫	೧				
೧೪	ಕೆಂಚಿಕೊಪ್ಪ						೨	೧			೧		೨	೧೨			೪	೧	೨			
೧೫	ಕುಳಗಟ್ಟೆ						೨							೧೦		೧	೫	೨	೨			
	ಹೊನ್ನಾಳಿ		೧				೫	೧			೩		೩	೩೪	೭	೧	೧೪	೪	೪			

ಅಂಕಿಅಂಶಗಳು : ೫.೧೦.೧. ಜಗಳೂರು ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರು ಅವಲಂಬಿಸಿಕೊಂಡ ವೃತ್ತಿಗಳ ವಿವರ

ಕ್ರ.ಸಂ.	ನೆಲೆಗಳು	ಕಸುಬುಗಳು																			
		ಬೇಟೆ	ಪಶುಪಾಲನೆ		ತಳವಾರಿಕೆ		ಕೃಷಿ		ಕೃಷಿಕೂಲಿ		ದಿನಗೂಲಿ		ಮನೆಕೆಲಸ		ವ್ಯಾಪಾರ		ಸರ್ಕಾರಿ		ಖಾಸಗಿ		ಇತರೆ	
			ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧೬	ಬಸವನಕೋಟೆ						೧						೩	೧೩	೧		೪	೨	೩			
೧೭	ಮಾಗಡಿ		೧				೫	೨						೧೧	೫	೧	೨	೧	೩			
೧೮	ಸೊಕ್ಕೆ						೩		೧		೧		೧	೧೨	೧		೨		೨			
	ಜಗಳೂರು		೧				೯	೨	೧		೧		೪	೩೬	೭	೧	೮	೩	೮			

ಅಂಕಿಅಂಶಗಳು : ೫.೧೧.೩. ಮೊದಲನೇ ತಲೆಮಾರಿನ ಗ್ರಾಮವಾರು ಭೂಹಿಡುವಳಿ ಪ್ರಮಾಣ

ಕ್ರ.ಸಂ.	ನೆಲೆಗಳು	ಭೂ ಹಿಡುವಳಿ (ಎಕರೆಗಳಲ್ಲಿ)			ಭೂ ಹಿಡುವಳಿ (ಶ್ರೇಣಿಗಳಲ್ಲಿ)					ಭೂ ರಹಿತ
					೧೫.೧–೨೫ ಮೇಲ್ಪಟ್ಟು	೧೦.೧–೧೫	೫.೧–೧೦	೨.೫೧–೫	೦.೫–೨.೫	
		ಒಣಭೂಮಿ	ನೀರಾವರಿ	ಒಟ್ಟು	ಎ	ಬಿ	ಸಿ	ಡಿ	ಇ	ಎಫ್
೧	ಕಬ್ಬ	೭೮		೭೮	೧		೭		೨	
೨	ಕಾರಿಗನೂರು	೧೦೨		೧೦೨	೨	೩	೨		೩	
೩	ನಲ್ಲೂರು	೧೯೭		೧೯೭	೩	೧	೨	೩	೧	
	ಚನ್ನಗಿರಿ	೩೭೭		೩೭೭	೬	೪	೧೧	೩	೬	
೪	ಬೇತೂರು	೫೬		೫೬		೧	೪	೨	೩	
೫	ದೋಡ್ಡಬಾತಿ	೧೨೯		೧೨೯	೩	೧	೪	೨		
೬	ಹುಣಸಿಕಟ್ಟೆ	೧೧೦.೫		೧೧೦.೫	೨		೩	೪	೧	
	ದಾವಣಗೆರೆ	೨೯೫.೫		೨೯೫.೫	೫	೨	೧೧	೮	೪	
೭	ಕಂಚಿಕೆರೆ	೮೦		೮೦	೨		೪	೨	೩	
೮	ಕುಮಾರನಹಳ್ಳಿ	೧೦೮		೧೦೮	೧	೧	೩	೫	೧	
೯	ಮಾಚಿಹಳ್ಳಿ	೧೫೪		೧೫೪	೫	೩	೧	೨		
	ಹರಪನಹಳ್ಳಿ	೩೪೨		೩೪೨	೮	೪	೮	೯	೪	
೧೦	ದೇವರಬೆಳಕೆರೆ	೧೦೧		೧೦೧	೨	೧	೫	೨		
೧೧	ಕೊಕ್ಕನೂರು	೬೮		೬೮	೨	೧	೧		೩	೩
೧೨	ರಾಜನಹಳ್ಳಿ	೧೫೯.೫		೧೫೯.೫	೨		೩	೨	೨	೧
	ಹರಿಹರ	೩೨೮.೫		೩೨೮.೫	೬	೨	೯	೪	೫	೪
೧೩	ಹನುಮನಹಳ್ಳಿ	೯೪		೯೪	೨	೧	೩	೨	೨	೧
೧೪	ಕೆಂಚಿಕೊಪ್ಪ	೨೬೪		೨೬೪	೬	೨			೧	೧
೧೫	ಕುಳಗಟ್ಟೆ	೬೯		೬೯		೪	೧	೨	೧	೨
	ಹೊನ್ನಾಳಿ	೪೨೭		೪೨೭	೮	೭	೪	೪	೪	೪
೧೬	ಬಸವನಕೋಟೆ	೧೮೪		೧೮೪	೩	೩	೧	೩		
೧೭	ಮಾಗಡಿ	೧೫೦		೧೫೦	೨	೨	೪	೧	೧	
೧೮	ಸೊಕ್ಕೆ	೧೪೫		೧೪೫	೫		೧	೨		೨
	ಜಗಳೂರು	೪೭೯		೪೭೯	೧೦	೫	೬	೬	೧	೨

ಅಂಕಿಅಂಶಗಳು : ೫.೧೧.೪. ಎರಡನೇ ತಲೆಮಾರಿನ ಗ್ರಾಮವಾರು ಭೂಹಿಡುವಳಿ ಪ್ರಮಾಣ

		ಭೂ ಹಿಡುವಳಿ (ಎಕರೆಗಳಲ್ಲಿ)			ಭೂ ಹಿಡುವಳಿ (ಶ್ರೇಣಿಗಳಲ್ಲಿ)					ಭೂ ರಹಿತ
					೧೫.೧-೨೫ರ ಮೇಲ್ಪಟ್ಟು	೧೦.೧-೧೫	೫.೧-೧೦	೨.೫೧-೫	೦.೫-೨.೫	
ಕ್ರ.ಸಂ.	ನೆಲೆಗಳು	ಒಣಭೂಮಿ	ನೀರಾವರಿ	ಒಟ್ಟು	ಎ	ಬಿ	ಸಿ	ಡಿ	ಇ	ಎಫ್
೧	ಕಬ್ಬ	೪೧.೫		೪೧.೫		೧	೧	೫	೩	
೨	ಕಾರಿಗನೂರು	೩೨		೩೨			೨	೩	೩	೨
೩	ನಲ್ಲೂರು	೬೮.೫		೬೮.೫	೧	೧	೧	೨	೪	೧
	ಚನ್ನಗಿರಿ	೧೪೨		೧೪೨	೧	೨	೪	೧೦	೧೦	೩
೪	ಬೇತೂರು	೧೯	೪.೫	೨೩.೫				೪	೬	
೫	ದೊಡ್ಡಬಾತಿ	೬೦	೩	೬೩	೧	೧	೨	೨	೪	
೬	ಹುಣಸಿಕಟ್ಟೆ	೫೪		೫೪		೨	೧	೪	೩	
	ದಾವಣಗೆರೆ	೧೩೩	೭.೫	೧೪೦.೫	೧	೩	೩	೧೦	೧೩	
೭	ಕಂಚಿಕೆರೆ	೩೩.೫		೩೩.೫			೧	೪	೫	
೮	ಕುಮಾರನಹಳ್ಳಿ	೫೯.೫	೨	೬೧.೫	೧		೩	೨	೩	
೯	ಮಾಚಿಹಳ್ಳಿ	೬೪		೬೪		೨	೨	೫	೧	
	ಹರಪನಹಳ್ಳಿ	೧೫೭	೨	೧೫೯	೧	೨	೬	೧೧	೯	
೧೦	ದೇವರಬೆಳಕೆರೆ	೩೮	೧	೩೯		೧	೦	೩	೬	
೧೧	ಕೊಕ್ಕನೂರು	೭೦	೩.೫	೭೩.೫		೨			೬	೨
೧೨	ರಾಜನಹಳ್ಳಿ	೭೦	೩.೫	೭೩.೫		೨			೬	೨
	ಹರಿಹರ	೧೭೮	೮	೧೮೬		೫	೦	೩	೧೮	೪
೧೩	ಹನುಮನಹಳ್ಳಿ	೩೪.೫		೩೪.೫			೧		೮	
೧೪	ಕೆಂಚಿಕೊಪ್ಪ	೬೪.೫		೬೪.೫			೫	೧	೩	೧
೧೫	ಕುಳಗಟ್ಟೆ	೨೪.೫		೨೪.೫			೧		೭	೨
	ಹೊನ್ನಾಳಿ	೧೨೩.೫		೧೨೩.೫			೭	೧	೧೮	೩
೧೬	ಬಸವನಕೋಟೆ	೩೭		೩೭				೨	೮	
೧೭	ಮಾಗಡಿ	೫೯		೫೯			೧	೩	೫	೧
೧೮	ಸೊಕ್ಕೆ	೩೩.೫		೩೩.೫				೩	೫	೨
	ಜಗಳೂರು	೧೨೯.೫		೧೨೯.೫			೧	೮	೧೮	೩

ಅಂಕಿಅಂಶಗಳು : ೫.೧೧.೫. ಮೂರನೇ ತಲೆಮಾರಿನ ಗ್ರಾಮವಾರು ಭೂಹಿಡುವಳಿ ಪ್ರಮಾಣ

ಕ್ರ.ಸಂ.	ಗ್ರಾಮಗಳು	ಭೂ ಹಿಡುವಳಿ (ಎಕರೆಗಳಲ್ಲಿ)			ಭೂ ಹಿಡುವಳಿ (ಶ್ರೇಣಿಗಳಲ್ಲಿ)					ಭೂ ರಹಿತ
					೧೫.೧–೨೫ ಮೇಲ್ಪಟ್ಟು	೧೦.೧–೧೫	೫.೧–೧೦	೨.೫–೫	೦.೫–೨.೫	
		ಒಣಭೂಮಿ	ನೀರಾವರಿ	ಒಟ್ಟು	ಎ	ಬಿ	ಸಿ	ಡಿ	ಇ	ಎಫ್
1	ಕಬ್ಬ	೨೦.೫	೪	೨೪.೫			೧	೨	೭	
2	ಕಾರಿಗನೂರು	೧೮.೫	೧	೧೯.೫				೨	೬	೨
3	ನಲ್ಲೂರು	೩೮.೫	೧೩.೫	೫೨	೧			೨	೬	೧
	ಚನ್ನಗಿರಿ	**೭೭.೫**	**೧೮.೫**	**೯೬**	**೧**		**೧**	**೬**	**೧೯**	**೩**
4	ಬೇತೂರು		೧೭	೧೭					೬	೪
5	ದೊಡ್ಡಬಾತಿ	೪	೨೫.೫	೨೯.೫		೧		೩	೩	೩
6	ಹೆಬ್ಬಾಳ್	೧೧.೫	೧೪.೫	೨೬			೧	೧	೭	೧
	ದಾವಣಗೆರೆ	**೧೫.೫**	**೫೭**	**೭೨.೫**		**೧**	**೧**	**೪**	**೧೬**	**೮**
7	ಕಂಚಿಕೆರೆ	೧೪.೫		೧೪.೫					೫	೫
8	ಕುಮಾರನಹಳ್ಳಿ	೨೮		೨೮				೩	೬	೧
9	ಮಾಚಿಹಳ್ಳಿ	೩೧		೩೧					೯	೧
	ಹರಪನಹಳ್ಳಿ	**೭೩.೫**		**೭೩.೫**				**೩**	**೨೦**	**೭**
10	ದೇವರಬೆಳಕೆರೆ	೩	೧೮	೨೧				೧	೮	೧
11	ಕೊಕ್ಕನೂರು	೦	೯	೯	೦	೦	೦	೧	೩	೬
12	ರಾಜನಹಳ್ಳಿ		೩೭	೩೭		೨			೫	೩
	ಹರಿಹರ	**೩**	**೬೪**	**೬೭**	**೦**	**೨**	**೦**	**೨**	**೧೬**	**೧೦**
13	ಹನುಮನಹಳ್ಳಿ		೧೩.೭	೧೩.೭				೧	೪	೫
14	ಕೆಂಚಿಕೊಪ್ಪ		೩೦	೩೦			೧		೭	೨
15	ಕುಳಗಟ್ಟೆ		೧೦.೫	೧೦.೫				೧	೬	೩
	ಹೊನ್ನಾಳಿ		**೫೪.೨**	**೫೪.೨**			**೧**	**೨**	**೧೭**	**೧೦**
16	ಬಸವನಕೋಟೆ	೧೫.೭	೧.೫	೧೭.೨				೧	೫	೪
17	ಮಾಗಡಿ	೨೬.೭	೧೦.೨	೮೬.೯	೧			೨	೪	೩
18	ಸೊಕ್ಕೆ	೧೧.೫	೪.೫	೧೬					೭	೩
	ಜಗಳೂರು	**೧೦೩.೯**	**೧೬.೨**	**೧೨೦**	**೨೪೦.೨**	**೩**	**೩**	**೬**	**೧೬**	**೧೦**

ಅಂಕಿಅಂಶಗಳು : ೬.೨.೧.೨. ಮೊದಲನೇ ತಲೆಮಾರಿನ ಗ್ರಾಮವಾರು ಸಾಕ್ಷರಸ್ಥರ ಮತ್ತು ಅನಕ್ಷರಸ್ಥರ ಪ್ರಮಾಣ

ಕ್ರಸಂ.	ಗ್ರಾಮಗಳು	ಸಾಕ್ಷರರ್ಹರು			ಸಾಕ್ಷರಸ್ಥರು			ಅನಕ್ಷರಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕಬ್ಬ	೪೯	೪೭	೯೬	೧೦	೨	೧೨	೩೯	೪೫	೮೪
೨	ಕಾರಿಗನೂರು	೪೮	೫೪	೧೦೨	೬	೧	೭	೪೨	೫೩	೯೫
೩	ನಲ್ಲೂರು	೫೦	೫೩	೧೦೩	೭	೧	೮	೪೩	೫೨	೯೫
	ಚನ್ನಗಿರಿ	೧೪೭	೧೫೪	೩೦೧	೨೩	೪	೨೭	೧೨೪	೧೫೦	೨೭೪
೪	ಬೇತೂರು	೪೪	೪೫	೮೯	೧೧		೧೧	೩೩	೪೫	೭೮
೫	ದೊಡ್ಡಬಾತಿ	೪೬	೫೨	೯೮	೧೪	೨	೧೬	೩೨	೫೦	೮೨
೬	ಹುಣಸಿಕಟ್ಟೆ	೪೭	೫೮	೧೦೫	೭	೧	೮	೪೦	೫೭	೯೭
	ದಾವಣಗೆರೆ	೧೩೭	೧೫೫	೨೯೨	೩೨	೩	೩೫	೧೦೫	೧೫೨	೨೫೭
೭	ಕಂಚಿಕೆರೆ	೪೮	೪೮	೯೬	೯	೧	೧೦	೩೯	೪೭	೮೬
೮	ಕುಮಾರನಹಳ್ಳಿ	೫೩	೫೫	೧೦೮	೮	೩	೧೧	೪೫	೫೨	೯೭
೯	ಮಾಚಿಹಳ್ಳಿ	೫೩	೫೫	೧೦೮	೪		೪	೪೯	೫೫	೧೦೪
	ಹರಪನಹಳ್ಳಿ	೧೫೪	೧೫೮	೩೧೨	೨೧	೪	೨೫	೧೩೩	೧೫೪	೨೮೭
೧೦	ದೇವರಬೆಳಕೆರೆ	೫೧	೫೩	೧೦೪	೬	೨	೮	೪೫	೫೧	೯೬
೧೧	ಕೊಕ್ಕನೂರು	೪೪	೪೯	೯೩	೮		೮	೩೬	೪೯	೮೫
೧೨	ರಾಜನಹಳ್ಳಿ	೬೩	೫೮	೧೨೧	೧೦		೧೦	೫೩	೫೮	೧೧೧
	ಹರಿಹರ	೧೫೮	೧೬೦	೩೧೮	೨೪	೨	೨೬	೧೩೪	೧೫೮	೨೯೨
೧೩	ಹನುಮನಹಳ್ಳಿ	೫೯	೫೭	೧೧೬	೪	೧	೫	೫೫	೫೬	೧೧೧
೧೪	ಕೆಂಚಿಕೊಪ್ಪ	೫೯	೫೭	೧೧೬	೪	೧	೫	೫೫	೫೬	೧೧೧
೧೫	ಕುಳಗಟ್ಟೆ	೫೫	೫೯	೧೧೪	೬		೬	೪೯	೫೯	೧೦೮
	ಹೊನ್ನಾಳಿ	೧೭೩	೧೭೩	೩೪೬	೧೪	೨	೧೬	೧೫೯	೧೭೧	೩೩೦
೧೬	ಬಸವನಕೋಟೆ	೬೩	೬೨	೧೨೫	೩		೩	೬೦	೬೨	೧೨೨
೧೭	ಮಾಗಡಿ	೬೪	೬೦	೧೨೪	೧೧		೧೧	೫೩	೬೦	೧೧೩
೧೮	ಸೊಕ್ಕೆ	೫೮	೫೭	೧೧೫	೧೧		೧೧	೪೭	೫೭	೧೦೪
	ಜಗಳೂರು	೧೮೫	೧೭೯	೩೬೪	೨೫		೨೫	೧೬೦	೧೭೯	೩೩೯
ಒಟ್ಟು		೯೫೪	೯೭೯	೧೯೩೩	೧೩೯	೧೫	೧೫೪	೮೧೫	೯೬೪	೧೭೭೯

ಅಂಕಿಅಂಶಗಳು : ೬.೨.೨.೧. ಎರಡನೇ ತಲೆಮಾರಿನ ಗ್ರಾಮವಾರು ಸಾಕ್ಷರಸ್ಥರ ಮತ್ತು ಅನಕ್ಷರಸ್ಥರ ಪ್ರಮಾಣ

ಕ್ರ.ಸಂ.	ಗ್ರಾಮಗಳು	ಸಾಕ್ಷರರ್ಹರು			ಸಾಕ್ಷರಸ್ಥರು			ಅನಕ್ಷರಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕಬ್ಬ	೨೪	೨೧	೪೫	೨೦	೧೬	೩೬	೪	೫	೯
೨	ಕಾರಿಗನೂರು	೨೬	೨೫	೫೧	೧೮	೧೬	೩೪	೮	೯	೧೭
೩	ನಲ್ಲೂರು	೨೭	೩೧	೫೮	೧೯	೧೮	೩೭	೮	೧೩	೨೧
	ಚನ್ನಗಿರಿ	**೭೭**	**೭೭**	**೧೫೪**	**೫೭**	**೫೦**	**೧೦೭**	**೨೦**	**೨೭**	**೪೭**
೪	ಬೇತೂರು	೨೪	೩೧	೫೫	೧೪	೧೯	೩೨	೧೦	೧೨	೨೩
೫	ದೊಡ್ಡಬಾತಿ	೩೨	೩೫	೬೭	೨೩	೨೩	೪೬	೯	೧೨	೨೧
೬	ಹುಣಸಿಕಟ್ಟೆ	೩೨	೨೯	೬೧	೨೧	೧೭	೩೮	೧೧	೧೨	೨೩
	ದಾವಣಗೆರೆ	**೮೮**	**೯೫**	**೧೮೩**	**೫೮**	**೫೯**	**೧೧೬**	**೩೦**	**೩೬**	**೬೭**
೭	ಕಂಚಿಕೆರೆ	೨೩	೨೨	೪೫	೧೫	೧೨	೨೭	೮	೧೦	೧೮
೮	ಕುಮಾರನಹಳ್ಳಿ	೨೫	೨೦	೪೫	೧೪	೧೧	೨೫	೧೧	೯	೨೦
೯	ಮಾಚಿಹಳ್ಳಿ	೨೯	೩೦	೫೯	೧೯	೧೯	೩೮	೧೦	೧೧	೨೧
	ಹರಪನಹಳ್ಳಿ	**೭೭**	**೭೨**	**೧೪೯**	**೪೮**	**೪೨**	**೯೦**	**೨೯**	**೩೦**	**೫೯**
೧೦	ದೇವರಬೆಳಕೆರೆ	೨೬	೩೧	೫೭	೧೮	೧೬	೩೪	೮	೧೫	೨೩
೧೧	ಕೊಕ್ಕನೂರು	೨೬	೩೨	೫೮	೧೮	೨೧	೩೮	೮	೧೧	೨೦
೧೨	ರಾಜನಹಳ್ಳಿ	೨೬	೩೨	೫೮	೧೮	೨೧	೩೮	೮	೧೧	೨೦
	ಹರಿಹರ	**೭೮**	**೯೫**	**೧೭೩**	**೫೪**	**೫೮**	**೧೧೦**	**೨೪**	**೩೭**	**೬೩**
೧೩	ಹನುಮನಹಳ್ಳಿ	೩೦	೨೮	೫೮	೨೩	೧೮	೩೯	೭	೧೦	೧೯
೧೪	ಕೆಂಚಿಕೊಪ್ಪ	೩೪	೩೪	೬೮	೨೨	೨೨	೪೪	೧೨	೧೨	೨೪
೧೫	ಕುಳಗಟ್ಟೆ	೩೫	೩೬	೭೧	೨೫	೨೪	೪೯	೧೦	೧೨	೨೨
	ಹೊನ್ನಾಳಿ	**೯೯**	**೯೮**	**೧೯೭**	**೭೦**	**೬೪**	**೧೩೨**	**೨೯**	**೩೪**	**೬೫**
೧೬	ಬಸವನಕೋಟೆ	೩೫	೪೧	೭೬	೨೬	೨೬	೫೨	೯	೧೫	೨೪
೧೭	ಮಾಗಡಿ	೩೧	೩೭	೬೮	೨೨	೨೨	೪೪	೯	೧೫	೨೪
೧೮	ಸೊಕ್ಕೆ	೩೨	೩೫	೬೭	೨೩	೨೨	೪೬	೯	೧೩	೨೧
	ಜಗಳೂರು	**೯೮**	**೧೧೩**	**೨೧೧**	**೭೧**	**೭೦**	**೧೪೨**	**೨೭**	**೪೩**	**೬೯**
	ಒಟ್ಟು	೫೧೭	೫೫೦	೧೦೬೭	೩೫೮	೩೪೩	೬೯೭	೧೫೯	೨೦೭	೩೭೦

ಅಂಕಿಅಂಶಗಳು : ೬.೨.೩.೧. ಮೂರನೇ ತಲೆಮಾರಿನ ಗ್ರಾಮವಾರು ಸಾಕ್ಷರಸ್ಥರ ಮತ್ತು ಅನಕ್ಷರಸ್ಥರ ಪ್ರಮಾಣ

ಕ್ರ.ಸಂ.	ಗ್ರಾಮಗಳು	ಸಾಕ್ಷರರ್ಹರು			ಸಾಕ್ಷರಸ್ಥರು			ಅನಕ್ಷರಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕಬ್ಬ	೧೮	೧೩	೩೧	೧೩	೧೨	೨೫	೫	೧	೬
೨	ಕಾರಿಗನೂರು	೧೫	೧೨	೨೭	೧೫	೧೦	೨೫	೦	೨	೨
೩	ನಲ್ಲೂರು	೧೪	೧೩	೨೭	೧೨	೧೨	೨೪	೨	೧	೩
	ಚನ್ನಗಿರಿ	**೪೭**	**೩೮**	**೮೫**	**೪೦**	**೩೪**	**೭೪**	**೭**	**೪**	**೧೧**
೪	ಬೇತೂರು	೧೪	೧೩	೨೭	೧೨	೧೦	೨೨	೨	೩	೫
೫	ದೊಡ್ಡಬಾತಿ	೧೪	೧೩	೨೭	೧೩	೧೧	೨೪	೧	೨	೩
೬	ಹುಣಸಿಕಟ್ಟೆ	೧೪	೧೫	೨೯	೧೧	೧೦	೨೧	೩	೫	೮
	ದಾವಣಗೆರೆ	**೪೨**	**೪೧**	**೮೩**	**೩೬**	**೩೧**	**೬೭**	**೬**	**೧೦**	**೧೬**
೭	ಕಂಚಿಕೆರೆ	೧೩	೧೩	೨೬	೧೧	೧೧	೨೨	೨	೨	೪
೮	ಕುಮಾರನಹಳ್ಳಿ	೧೧	೧೫	೨೬	೧೧	೧೧	೨೪	೦	೪	೪
೯	ಮಾಚಿಹಳ್ಳಿ	೧೪	೧೪	೨೮	೧೧	೧೦	೨೧	೩	೪	೭
	ಹರಪನಹಳ್ಳಿ	**೩೮**	**೪೨**	**೮೦**	**೩೫**	**೩೨**	**೬೭**	**೫**	**೧೦**	**೧೫**
೧೦	ದೇವರಬೆಳಕೆರೆ	೧೨	೧೨	೨೪	೧೦	೧೦	೨೦	೨	೨	೪
೧೧	ಕೊಕ್ಕನೂರು	೧೬	೧೫	೩೧	೧೪	೧೦	೨೪	೨	೫	೭
೧೨	ರಾಜನಹಳ್ಳಿ	೧೭	೧೮	೩೫	೧೫	೧೧	೨೬	೨	೭	೯
	ಹರಿಹರ	**೪೫**	**೪೫**	**೯೦**	**೩೯**	**೩೧**	**೭೦**	**೬**	**೧೪**	**೨೦**
೧೩	ಹನುಮನಹಳ್ಳಿ	೧೭	೧೬	೩೩	೧೨	೧೨	೨೪	೫	೪	೯
೧೪	ಕೆಂಚಿಕೊಪ್ಪ	೧೪	೧೭	೩೧	೧೧	೧೨	೨೩	೩	೫	೮
೧೫	ಕುಳಗಟ್ಟೆ	೧೨	೧೫	೨೭	೧೨	೧೦	೨೨	೦	೫	೫
	ಹೊನ್ನಾಳಿ	**೪೩**	**೪೮**	**೯೧**	**೩೫**	**೩೪**	**೬೯**	**೮**	**೧೪**	**೨೨**
೧೬	ಬಸವನಕೋಟೆ	೧೭	೧೬	೩೩	೧೫	೧೨	೨೭	೨	೪	೬
೧೭	ಮಾಗಡಿ	೧೯	೧೭	೩೬	೧೫	೯	೨೪	೪	೮	೧೨
೧೮	ಸೊಕ್ಕೆ	೧೩	೧೩	೨೬	೧೧	೧೦	೨೧	೨	೩	೫
	ಜಗಳೂರು	**೪೯**	**೪೬**	**೯೫**	**೪೧**	**೩೧**	**೭೨**	**೮**	**೧೫**	**೨೩**
	ಒಟ್ಟು	**೨೬೪**	**೨೬೦**	**೫೨೪**	**೨೨೬**	**೧೯೩**	**೪೧೯**	**೪೦**	**೬೭**	**೧೦೭**

ಅಂಕಿ ಅಂಶಗಳು : ೬.೩.೧. ಚನ್ನಗಿರಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಬ್ಬು	೧೦	೧		೧												
ಕಾರಿಗನೂರು	೫	೧	೧													
ನಲ್ಲೂರು	೫	೧	೨													
ಒಟ್ಟು	೨೦	೩	೩	೧												

ಅಂಕಿ ಅಂಶಗಳು : ೬.೩.೧. ದಾವಣಗೆರೆ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬೇತೂರು	೮		೩													
ದೊಡ್ಡಬಾತಿ	೧೨	೨	೨													
ಹೆಬ್ಬಾಳ್	೪	೧	೩													
ಒಟ್ಟು	೨೪	೩	೮													

ಅಂಕಿ ಅಂಶಗಳು : ೬.೩.೧. ಹರಪನಹಳ್ಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಂಚಿಕೆರೆ	೭		೨	೧												
ಕುಮಾರನಹಳ್ಳಿ	೮	೩														
ಮಾಚಿಹಳ್ಳಿ	೩		೧													
ಒಟ್ಟು	೧೮	೩	೩	೧												

ಅಂಕಿ ಅಂಶಗಳು : ೬.೩.೧. ಹರಿಹರ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ದೇವರಬೆಳಕೆರೆ	೫	೨	೧													
ಕೊಕ್ಕನೂರು	೭		೧													
ರಾಜನಹಳ್ಳಿ	೭		೩													
ಒಟ್ಟು	೧೯	೨	೫													

ಅಂಕಿ ಅಂಶಗಳು : ೬.೩.೧. ಹೊನ್ನಾಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಹನುಮನಹಳ್ಳಿ	೩	೧	೧													
ಕೆಂಚಿಕೊಪ್ಪ	೩	೧	೧													
ಕುಳಗಟ್ಟೆ	೬															
ಒಟ್ಟು	೧೨	೨	೨													

ಅಂಕಿ ಅಂಶಗಳು : ೬.೩.೧. ಜಗಳೂರು ತಾಲೂಕಿನ ಗ್ರಾಮವಾರು, ಲಿಂಗವಾರು ಮೊದಲನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬಸವನಕೋಟೆ	೨		೧													
ಮಾಗಡಿ	೧೧															
ಸೊಕ್ಕೆ	೧೦		೧													
ಒಟ್ಟು	೨೩		೨													

ಅಂಕಿ ಅಂಶಗಳು : ೬.೩.೨. ಚನ್ನಗಿರಿ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಶೈಕ್ಷಣಿಕ ಹಂತಗಳು

ಕ್ರ.ಸಂ.	ಗ್ರಾಮಗಳು	ಶಿಕ್ಷಣ															
		ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧	ಕಬ್ಬ	೪	೧	೪	೪	೨	೪			೨	೬	೬	೧			೨	
೨	ಕಾರಿಗನೂರು	೨	೧	೩	೨	೪	೮			೨	೩	೬	೨			೧	
೩	ನಲ್ಲೂರು	೩	೨	೫	೬	೫	೬			೩	೩	೨	೧			೧	
	ಚನ್ನಗಿರಿ	೯	೪	೧೨	೧೨	೧೧	೧೮			೭	೧೨	೧೪	೪			೪	

ಅಂಕಿ ಅಂಶಗಳು : ೬.೩.೨. ದಾವಣಗೆರೆ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಶೈಕ್ಷಣಿಕ ಹಂತಗಳು

ಕ್ರ.ಸಂ.	ಗ್ರಾಮಗಳು	ಪ್ರಾಥಮಿಕ ಗಂಡು	ಪ್ರಾಥಮಿಕ ಹೆಣ್ಣು	ಮಾಧ್ಯಮಿಕ ಗಂಡು	ಮಾಧ್ಯಮಿಕ ಹೆಣ್ಣು	ಪ್ರೌಢ ಗಂಡು	ಪ್ರೌಢ ಹೆಣ್ಣು	ಡಿಪ್ಲೊಮಾ ಗಂಡು	ಡಿಪ್ಲೊಮಾ ಹೆಣ್ಣು	ಪದವಿಪೂರ್ವ ಗಂಡು	ಪದವಿಪೂರ್ವ ಹೆಣ್ಣು	ಪದವಿ ಗಂಡು	ಪದವಿ ಹೆಣ್ಣು	ಸ್ನಾತಕೋತ್ತರ ಗಂಡು	ಸ್ನಾತಕೋತ್ತರ ಹೆಣ್ಣು	ಇತರೆ ಗಂಡು	ಇತರೆ ಹೆಣ್ಣು
೪	ಬೇತೂರು	೧	೧	೪	೭	೪	೩			೧	೫	೨	೨			೨	೧
೫	ದೋಡ್ಡಬಾತಿ	೩	೧	೭	೮	೫	೪	೧	೩		೪	೫	೩			೨	
೬	ಹುಣಸಿಕಟ್ಟೆ		೧	೮	೭	೭	೭	೧		೨	೧	೩					೧
	ದಾವಣಗೆರೆ	೪	೩	೧೯	೨೨	೧೬	೧೪	೨	೩	೩	೧೦	೧೦	೫			೪	೨

ಅಂಕಿ ಅಂಶಗಳು : ೬.೩.೨. ಹರಪನಹಳ್ಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಶೈಕ್ಷಣಿಕ ಹಂತಗಳು

ಕ್ರ.ಸಂ.	ಗ್ರಾಮಗಳು	ಪ್ರಾಥಮಿಕ ಗಂಡು	ಪ್ರಾಥಮಿಕ ಹೆಣ್ಣು	ಮಾಧ್ಯಮಿಕ ಗಂಡು	ಮಾಧ್ಯಮಿಕ ಹೆಣ್ಣು	ಪ್ರೌಢ ಗಂಡು	ಪ್ರೌಢ ಹೆಣ್ಣು	ಡಿಪ್ಲೊಮಾ ಗಂಡು	ಡಿಪ್ಲೊಮಾ ಹೆಣ್ಣು	ಪದವಿಪೂರ್ವ ಗಂಡು	ಪದವಿಪೂರ್ವ ಹೆಣ್ಣು	ಪದವಿ ಗಂಡು	ಪದವಿ ಹೆಣ್ಣು	ಸ್ನಾತಕೋತ್ತರ ಗಂಡು	ಸ್ನಾತಕೋತ್ತರ ಹೆಣ್ಣು	ಇತರೆ ಗಂಡು	ಇತರೆ ಹೆಣ್ಣು
೭	ಕಂಚಿಕೆರೆ	೧	೧	೩	೫	೫	೨			೨	೪	೨				೨	
೮	ಕುಮಾರನಹಳ್ಳಿ	೧	೧	೫	೩	೧	೬			೪	೧	೩					
೯	ಮಾಚಿಹಳ್ಳಿ	೧	೨	೭	೬	೫	೬	೨		೧	೩	೨	೨			೧	
	ಹರಪನಹಳ್ಳಿ	೩	೪	೧೫	೧೪	೧೧	೧೪	೨		೭	೮	೭	೨			೩	

ಅಂಕಿ ಅಂಶಗಳು : ೬.೩.೨. ಹರಿಹರ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಶೈಕ್ಷಣಿಕ ಹಂತಗಳು

೧೦	ದೇವರಬೆಳಕೆರೆ	೨	೧	೭	೧೦	೫	೩	೦	೦	೨	೧	೧	೦			೧	೧
೧೧	ಕೊಕ್ಕನೂರು	೦	೧	೬	೧೦	೪	೧	೦	೦	೧	೬	೬	೨	೧			೧
೧೨	ರಾಜನಹಳ್ಳಿ	೦	೧	೬	೧೦	೪	೧	೦	೦	೧	೬	೬	೨	೧			೧
	ಹರಿಹರ	೨	೩	೧೯	೩೦	೧೩	೫	೦	೦	೪	೧೩	೧೩	೪	೨		೧	೩

ಅಂಕಿ ಅಂಶಗಳು : ೬.೩.೨. ಹೊನ್ನಾಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಶೈಕ್ಷಣಿಕ ಹಂತಗಳು

೧೩	ಹನುಮನಹಳ್ಳಿ	೨	೦	೩	೭	೧೨	೨	೧	೦	೦	೮	೪	೧			೧	೦
೧೪	ಕೆಂಚಿಕೊಪ್ಪ	೦	೧	೮	೭	೩	೬	೧	೦	೨	೪	೪	೨			೪	೨
೧೫	ಕುಳಗಟ್ಟೆ	೦	೨	೫	೬	೬	೪	೧	೦	೪	೫	೩	೪	೧		೫	೩
	ಹೊನ್ನಾಳಿ	೨	೩	೧೬	೨೦	೨೧	೧೨	೩	೦	೬	೧೭	೧೧	೭	೧		೧೦	೫

ಅಂಕಿ ಅಂಶಗಳು : ೬.೩.೨. ಜಗಳೂರು ತಾಲೂಕಿನ ಗ್ರಾಮವಾರು, ಲಿಂಗವಾರು ಎರಡನೇ ತಲೆಮಾರು ಶೈಕ್ಷಣಿಕ ಹಂತಗಳು

೧೬	ಬಸವನಕೋಟೆ		೧	೧೦	೧೧	೩	೭	೫	೧	೬	೫					೨	೧
೧೭	ಮಾಗಡಿ	೧		೯	೭	೪	೭	೧		೩	೩	೧	೧			೩	೪
೧೮	ಸೊಕ್ಕೆ	೧	೩	೮	೬	೩	೬	೫	೧	೨	೪	೧	೧			೩	೧
	ಜಗಳೂರು	೨	೪	೨೭	೨೪	೧೦	೨೦	೧೧	೨	೧೧	೧೨	೨	೨			೮	೬
	ಒಟ್ಟು	೨೨	೨೧	೧೦೮	೧೨೨	೮೨	೮೩	೧೮	೫	೩೮	೭೨	೫೭	೨೪	೩	೦	೩೦	೧೬

ಅಂಕಿ ಅಂಶಗಳು : ೬.೩.೩. ಚನ್ನಗಿರಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಬ್ಬ		೧	೧	೧		೧	೧		೧		೨	೪	೨	೧	೬	೪
ಕಾರಿಗನೂರು	೨		೨	೧	೧	೧				೧	೩	೧	೩		೪	೬
ನಲ್ಲೂರು		೧	೩	೧		೨			೧	೩	೨	೪	೨		೪	೧
ಒಟ್ಟು	೨	೨	೬	೩	೧	೪	೧		೨	೪	೭	೯	೭	೧	೧೪	೧೧

ಅಂಕಿ ಅಂಶಗಳು : ೬.೩.೩ ದಾವಣಗೆರೆ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬೇತೂರು	೧	೧	೧				೬	೪		೨					೪	೩
ದೊಡ್ಡಬಾತಿ			೧	೨	೪	೨				೧	೩	೧	೨		೩	೫
ಹೆಬ್ಬಾಳ್	೧			೧	೧		೧			೨	೨	೩	೧		೫	೪
ಒಟ್ಟು	೨	೧	೨	೩	೫	೨	೭	೪		೫	೫	೪	೩		೧೨	೧೨

ಅಂಕಿ ಅಂಶಗಳು : ೬.೩.೩ ಹರಪನಹಳ್ಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಕಂಚಿಕೆರೆ	೧	೨	೧							೪	೪	೧			೫	೪
ಕುಮಾರನಹಳ್ಳಿ			೧	೨	೧	೪	೩	೨	೧	೨	೩		೧		೩	೧
ಮಾಚಿಹಳ್ಳಿ	೧	೧	೧	೧	೧	೨			೧	೪	೪				೩	೨
ಒಟ್ಟು	೨	೩	೩	೩	೨	೬	೩	೨	೨	೧೦	೧೧	೧	೧		೧೧	೭

ಅಂಕಿ ಅಂಶಗಳು : ೬.೩.೩ ಹರಿಹರ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಡು	ಹೆಣ್ಣು	ಗಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ದೇವರಬೆಳಕೆರೆ			೨	೨	೧	೨	೨			೧	೨	೨			೩	೩
ಕೊಕ್ಕನೂರು			೧	೧	೧	೧				೬	೬				೬	೨
ರಾಜನಹಳ್ಳಿ				೨	೨	೩			೨	೩	೪				೭	೩
ಒಟ್ಟು			೩	೫	೪	೬	೨		೨	೧೦	೧೨	೨			೧೬	೮

ಅಂಕಿ ಅಂಶಗಳು : ೬.೩.೩ ಹೊನ್ನಾಳಿ ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಹನುಮನಹಳ್ಳಿ					೧	೪	೪	೩	೩	೨	೨				೨	೩
ಕೆಂಚಿಕೊಪ್ಪ						೨	೬	೩		೪	೧				೪	೩
ಕುಳಗಟ್ಟೆ			೧			೨	೧		೨	೪	೪	೨	೧		೩	೨
ಒಟ್ಟು			೧		೧	೮	೧೧	೬	೫	೧೦	೭	೨	೧		೯	೮

ಅಂಕಿ ಅಂಶಗಳು : ೬.೩.೩ ಜಗಳೂರು ತಾಲೂಕಿನ ಗ್ರಾಮವಾರು, ಲಿಂಗವಾರು ಮೂರನೇ ತಲೆಮಾರಿನ ಶೈಕ್ಷಣಿಕ ಹಂತಗಳು

ಗ್ರಾಮಗಳು	ಶಿಕ್ಷಣದ ಹಂತಗಳು															
	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ		ಡಿಪ್ಲೊಮಾ		ಪದವಿಪೂರ್ವ		ಪದವಿ		ಸ್ನಾತಕೋತ್ತರ		ಇತರೆ	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಡು	ಹೆಣ್ಣು	ಗಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬಸವನಕೋಟೆ		೧	೧	೩	೨	೧	೩	೧	೩	೨					೬	೪
ಮಾಗಡಿ			೩	೪	೬	೪	೩	೧	೨						೧	
ಸೊಕ್ಕೆ				೩	೪	೩	೨		೨	೩					೩	೧
ಒಟ್ಟು		೧	೪	೧೦	೧೨	೮	೮	೨	೭	೫					೧೦	೫

ಛಾಯಾಚಿತ್ರಗಳು



2.3.1 ದಾವಣಗೆರೆ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಹತ್ತಿ



2.3.2 ದಾವಣಗೆರ ಜಿಲ್ಲೆಯ ವಾಣಿಜ್ಯ ಬೆಳೆ ಮೆಕ್ಕೆ ಜೋಳ



2.3.3 ವಾಣಿಜ್ಯ ಬೆಳೆ ಸೂರ್ಯಕಾಂತಿ



3.1.1 ವಾಲ್ಮೀಕಿ ಜಯಂತಿಯಲ್ಲಿ ಪಾಲ್ಗೊಂಡ ಬೇಡರ ಖಾಸಾಪಡೆ ದೃಶ್ಯ



4.1.1 ಬೇಡರು ವಾಸಿಸುತ್ತಿದ್ದ ಗುಡಿಸಲು ಮನೆ



4.1.2 ಬೇಡರು ವಾಸಿಸುತ್ತಿದ್ದ ದಾಬಾಮಾಳಗೆಮನೆ



4.2.1 ಬೇಡರ ಕೆಂಪು ಹಂಚಿನ ಮನೆ



4.2.2 ಬೇಡರ ಟಿನ್ ಮನೆ



4.3.1 ಬೇಡರ ಆರ್‌ಸಿಸಿ ಮನೆ



4.3.2 ಬೇಡರ ಆರ್‌ಸಿಸಿ ಮನೆ



4.3.3 ಆಧುನೀಕರಣದ ರಸೆಯನ್ನು ಹೊಂದಿರುವ ಬೇಡರ ಕಾಲೊನಿ ಹುಣಸಿಕಟ್ಟೆ ಗ್ರಾಮ




4.3.4 ಧಾರ್ಮಿಕ ಬಿಕ್ಷಾಟನೆ ಮಾಡುತ್ತಿರುವ ವ್ಯಾಸಬೇಡರ ಮಹಿಳೆ



4.3.5 ಬೇಡರ ಕುಲಚಿನ್ಹೆ ಕತ್ತಿ ಮತ್ತು ಗುರಾಣಿ (ಶೌರ್ಯದ ಸಂಕೇತ)




4.3.6 ವಾಲ್ಮೀಕಿ ಗುರುಪೀಠ ರಾಜನಹಳ್ಳಿ



4.3.7 ವಾಲ್ಮೀಕಿ ಗುರುಪೀಠದ ಮೊದಲನೆ ಪೀಠಾಧಿಪತಿ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮಿಗಳ ಸಮಾದಿ ರಾಜನಹಳ್ಳಿ



4.3.8 ಬೇಡರ ಮೊದಲನೆ ತಲೆಮಾರಿನ ವೃದ್ಧ ಮಹಿಳೆಯೊಂದಿಗೆ ಬೇಡರ ಸಾಂಪ್ರದಾಯಿಕ ಆಚರಣೆಗಳ ಬಗ್ಗೆ ಮಾಹಿತಿ ಪಡೆಯುತ್ತಿರುವ ಸಂಶೋಧ



5.1.1 ಬೇಡರ ಬೇಟೆಯ ಪರಿಕಲ್ಪನೆ



5.1.2 ಬೇಡರ ಬೇಟೆಯ ಪರಿಕಲ್ಪನೆ



5.1.3 ಬೇಡರ ಬೇಟೆಯ ಪರಿಕರಗಳು



5.1.4 ಬೇಡರ ಬೇಟೆಯ ಪರಿಕರಗಳು



5.1.5 ಬೇಡರ ಬೇಟೆಯ ಪರಿಕರಗಳು



5.1.6 ಬೇಡರ ಪಶುಪಾಲನೆ (ಕುರಿ ಮತ್ತು ಮೇಕೆ)



5.1.7 ಬೇಡರ ಪಶುಪಾಲನೆ
(ಎಮ್ಮೆ, ಕೋಣ, ಆಕಳು ಮತ್ತು ಕರು)



5.1.8 ಬೇಡರ ಪಶುಪಾಲನೆಯ ಕುರಿಹಟ್ಟಿ



5.1.9 ಬೇಡರ ೮೦ರ ವಯೋಮಾನದ ಹಿರಿಯರ ಜೊತೆ ವೃತ್ತಿಗಳ ಬಗ್ಗೆ ಮಾಹಿತಿ ಪಡೆಯುತ್ತಿರುವ ಸಂಶೋದಕಿ.



5.1.10 ಬೇಡರು ಬಳಸುತ್ತಿದ್ದ ಚಕ್ಕಡಿಬಂಡಿ



5.1.11 ಹೊಲ ಉಳುಮೆ ಮಾಡಲು ಬಳಸುತ್ತಿದ್ದ ಕುಂಟಿ



5.1.12 ಬಿತ್ತನೆಗೆ ಬಳಸುತ್ತಿದ್ದ ಷಡ್ಡಿಗಳು



5.1.13 76ರ ವಯೋಮಾನದ(ಕಾಯಕ ಅರ್ಹರಲ್ಲದ) ಯಜಮಾನ ಮನೆಕೆಲಸದಲ್ಲಿ ಬಾಗಿಯಾಗಿರುವುದು



5.2.1 ಬೇಡರ ಬೇಟೆಯ ಸಂದರ್ಭ


5.2.2 ಹೊಲ ಉಳುಮೆ ಮಾಡುತ್ತಿರುವುದು


5.2.3 ಟೈಯರು ಬಂಡಿ ಮತ್ತು ನೇಗಿಲು


5.3.1 ಹೊಲಉಳುಮೆ ಮಾಡಲು ಬಳಸುತ್ತಿರುವ ಆಧುನಿಕ ಯಂತ್ರೋಪಕರಣ, ಟ್ರಾಕ್ಟರ್ ಮತ್ತು ಕಲ್ಟಿವೇಟರ್


5.3.2 ಆಧುನಿಕ ಬೆಳೆ ಭತ್ತ


5.3.3 ಬೇಡರ ಯಜಮಾನ ಬಡಗಿತನ ಮಾಡುತ್ತಿರುವುದು


5.3.4 ಬೇಡರ ಯಜಮಾನ ಕಮ್ಮಾರಿಕೆ ಮಾಡುತ್ತಿರುವುದು



5.3.5 ವ್ಯಾಪರ ವೃತ್ತಿ ಮಾಡುತ್ತಿರುವ ಬೇಡರ ಮಹಿಳೆ



5.3.6 ಟೈಲರ್ ವೃತ್ತಿ ಮಾಡುತ್ತಿರುವ ಬೇಡರ ಮಹಿಳೆ



3.7 ಟೈಲರ್ ವೃತ್ತಿ ಮಾಡುತ್ತಿರುವ ಬೇಡರ ಪುರುಷ




5.3.8 ಧಾನ್ಯಗಳನ್ನು ರಾಶಿಮಾಡುವ ಆಧುನಿಕ ಯಂತ್ರ ರಾಶಿಮಿಷನ್



5.3.9 ಭತ್ತ ಕೊಯ್ಯುವ ಆಧುನಿಕ ಯಂತ್ರ



5.3.10 ಆಟೋಚಾಲಕನಾಗಿ ಕೆಲಸ ನಿರ್ವಹಿಸುತ್ತಿರುವ ಬೇಡರ ವ್ಯಕ್ತಿ



5.3.11 ಕಂಪ್ಯೂಟರ್ ಆಪರೇಟರ್ ಕಾರ್ಯ ನಿರ್ವಹಿಸುತ್ತಿರುವ ಬೇಡರ ಯುವಕ



6.2.1 ಶಾಲೆಗೆ ಹೋಗುತ್ತಿರುವ ಬೇಡ ಬುಡಕಟ್ಟಿನ ಮಕ್ಕಳು



6.3.1 ಇಂಗ್ಲೀಷ್ ಮಾಧ್ಯಮ ಶಾಲೆಯಲ್ಲಿ ಕಲಿಯುತ್ತಿರುವುದು



6.3.2 ವಾಲ್ಮೀಕಿ ವಸತಿಯುತ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ರಾಜನಹಳ್ಳಿ



6..3.3 ಶ್ರೀ ಮಹರ್ಷಿ ವಾಲ್ಮೀಕಿ ಡಿ.ಇಡಿಕಾಲೇಜ ರಾಜನಹಳ್ಳಿ

